CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಭ್ಯೋ ನಮಃ

ಶ್ರೀಮತ್ ಅಭಿನವ ವಿದ್ಯಾತೀರ್ಥ ವಿಜಯಂ

ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧಿಪತಿ
ಶ್ರೀ ಜಗದ್ಗುರು
ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಚರಿತ್ರೆ

ತಮಿಳು ಮೂಲ ಗ್ರಂಥಕರ್ತರು :
ಕೆ. ವಿ. ಸುಬ್ಬರತ್ನಂ
ಅಡ್ವೊಕೇಟ್, ಈರೋಡು.
(ಕಾರ್ಯದರ್ಶಿ, ಅಖಿಲಭಾರತ ಶಂಕರಸೇವಾ ಸಮಿತಿ)

ಅನುವಾದಕರು :
ಎಲ್. ಗುಂಡಪ್ಪ, ಎಂ.ಎ.
(ನಿವೃತ್ತ ಕನ್ನಡ ಅಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯ;
ಮಾಜಿ ಸಂಪಾದಕ, ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು)

ಪ್ರಕಾಶಕರು :
ಅಖಿಲ ಭಾರತ ಶಂಕರ ಸೇವಾ ಸಮಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

SRIMAT ABHINAVA VIDYATEERTHA VIJAYAM

Life Sketch of the present preceptor of Sri Sringeri Sharada Peetham

Originally Written in Tamil by:

Sri K. V SUBBARATHNAM, Advocate, Erode.
Secretary, All India Shankara Seva Samithi

Kannada Translation by:

Sri L. GUNDAPPA, M.A.
Retd. Lecturer in Kannada, University of Mysore
Ex-Editor Kannada Dictionary, Kannada Sahitya Parishat.

All rights reserved

Price: Rs. 6/-

Published by

ALL INDIA SHANKARA SEVA SAMITHI
ERODE, Tamilnad.

Printed at: Navaneetha Mudrana, Visveswarapuram,
BANGALORE-560004

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ಇದು ಶೃಂಗೇರೀ ಶ್ರೀ ಶಾರದಾಪೀಠವನ್ನಲಂಕರಿಸಿರುವ ಶ್ರೀ ಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥಸ್ವಾಮಿಗಳ ಜೀವನ ಚರಿತ್ರೆ; ತಮಿಳಿನಿಂದ ಕನ್ನಡಿಸಿದ್ದು.

ಈರೋಡಿನ ಅಡ್ವೊಕೇಟ್ ಶ್ರೀ ಕೆ. ವಿ. ಸುಬ್ಬರತ್ನಂ ಅವರು ಹಲವು ಮೂಲಗಳಿಂದ ವಿವರಗಳನ್ನು ಸಂಗ್ರಹಿಸಿ ೧೯೭೫ನೆಯ ವರ್ಷ ಪುಸ್ತಕರೂಪವಾಗಿ ಪ್ರಕಟಿಸಿದರು. ಕನ್ನಡನಾಡಿನ ಶಿಷ್ಯಕೋಟಿಗೂ, ಭಕ್ತವೃಂದಕ್ಕೂ ಶ್ರೀ ಗುರುಮಹಿಮೆ ಅರಿವಾಗಿ ಶ್ರೇಯಸ್ಸಾಧನೆಗೆ ಮಾರ್ಗವಾಗಲೆಂಬ ಉದ್ದೇಶದಿಂದ ಈ ಕನ್ನಡ ಭಾಷಾಂತರವನ್ನು ಸಿದ್ಧಗೊಳಿಸಿದೆ.

ಭಾಷಾಂತರ ಸಿದ್ಧವಾಗಿ ಮುದ್ರಣ ಮುಗಿಯುತ್ತ ಬರುತ್ತಿರುವಷ್ಟರಲ್ಲಿ ಶ್ರೀ ಜಗದ್ಗುರುಗಳು ಆರನೆಯ ವಿಜಯಯಾತ್ರೆಯನ್ನು ಕೈಗೊಂಡು ಕಾಶಿಯನ್ನು ತಲುಪಿದ್ದರು. ಉತ್ತರ ಯಾತ್ರೆಯನ್ನು ಮುಗಿಸಿಕೊಂಡು ಹಿಂದಿರುಗಿದ ಬಳಿಕ ಸ್ವಲ್ಪ ಸಮಯದಲ್ಲೇ ಶ್ರೀ ಮಹಾಸನ್ನಿಧಾನದ ೬೧ನೆಯ ವರ್ಷ ವರ್ಧಂತೀ ಮಹೋತ್ಸವವನ್ನು ವಿಜೃಂಭಣೆಯಿಂದ ನಡಸಲು ಏರ್ಪಾಡು ನಡೆಯುತ್ತಿತ್ತು.

ವರ್ಧಂತೀ ಸಮಯದಲ್ಲೇ ಈ ಕನ್ನಡ ಪುಸ್ತಕವನ್ನು ಹೊರತರಬೇಕೆಂಬ ಉದ್ದೇಶವಿತ್ತು. ಆದರೆ, ಅನಿರೀಕ್ಷಿತವಾದ ಅಡಚಣೆಗಳೊದಗಿ ಮುದ್ರಣ ತಡವಾಯಿತು. ಆಗ, ತಡವಾದರೂ ಸಮಗ್ರವಾಗಿರಲೆಂದು ನಿಶ್ಚಯಿಸಿ, ವರ್ಧಂತೀ ಮಹೋತ್ಸವವನ್ನೂ ಒಳಗೊಂಡಂತೆ ಆರನೆಯ ವಿಜಯ ಯಾತ್ರೆಯನ್ನು ಪೂರ್ತಿಯಾಗಿ ಸೇರಿಸಬೇಕೆಂದು ಸಂಕಲ್ಪಿಸಲಾಯಿತು. ಜೊತೆಗೆ, ತಮಿಳು ಗ್ರಂಥದಲ್ಲಿ ಸೇರಿಸಬೇಕಾಗಿದ್ದು ಬಿಟ್ಟುಹೋಗಿದ್ದ ಬೇರೆ ವಿಷಯವೂ ಇತ್ತು, ಅವನ್ನೆಲ್ಲಾ ಒಳಗೊಂಡು, ಈವರೆಗಿನ ಸಮಗ್ರ ಚರಿತ್ರೆ ಈ ಪುಸ್ತಕದಲ್ಲಿ ಪ್ರಕಟವಾಗುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೨ನೇಯ ಅಧ್ಯಾಯದಲ್ಲಿ ಕೊಟ್ಟಿರುವ ಆರನೆಯ ವಿಜಯ ಯಾತ್ರೆಯ ವಿಷಯ ಅಪೂರ್ಣವಾಗಿದೆ. ೧೫೩ನೇ ಪುಟದಲ್ಲಿ ಶ್ರೀ ಮಹಾಸನ್ನಿಧಾನಂಗಳು ಕಲ್ಕತ್ತಾ ನಗರವನ್ನು ತಲುಪಿದ ವರೆಗಿನ ವಿಷಯವಿದೆ. ಅಲ್ಲಿಂದ ಮುಂದಿನ ಚರಿತ್ರೆಯನ್ನು ವರ್ಧಂತೀ ಮಹೋತ್ಸವವು ಮುಗಿದು ಶ್ರೀಮತ್ ಸನ್ನಿಧಾನಂಗಳವರು ಶೃಂಗೇರಿಗೆ ಬಂದು ತಲುಪುವವರೆಗಿನ ಚರಿತ್ರೆಯನ್ನು ಈ ಪುಸ್ತಕದ ಕಡೆಯಲ್ಲಿ ಆರನೆಯ ಅನುಬಂಧವಾಗಿ ಕೊಟ್ಟಿದೆ. ಓದುಗರು ಗಮನಿಸಬೇಕಾಗಿ ಕೋರಿಕೆ.

ತಮಿಳು ಮೂಲದಲ್ಲಿಲ್ಲದ ಹೆಚ್ಚಿನ ವಿಷಯಗಳನ್ನು 'ಶಂಕರಕೃಪಾ' ಪ್ರಕಟನೆಗಳಿಂದಲೂ ಪ್ರತ್ಯಕ್ಷದರ್ಶಿಗಳು ಕಳಿಸಿದ ಬರಹಗಳಿಂದಲೂ ಸಂಗ್ರಹಿಸಿದೆ.

ಶ್ರೀ ಮಹಾಸನ್ನಿಧಾನದಲ್ಲಿ ನನ್ನ ಹೆಸರನ್ನು ಸೂಚಿಸಿದ್ದಲ್ಲದೆ ಈ ಪುಸ್ತಕದ ಹಸ್ತಪ್ರತಿಯನ್ನು ಪೂರ್ತಿ ಓದಿನೋಡಿ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿ ಕೊಟ್ಟು ಉಪಕರಿಸಿದ ಸನ್ಮಾನ್ಯರಾದ ಶ್ರೀ ಎಸ್. ಜಿ. ನರಸಿಂಹಯ್ಯನವರಿಗೆ ನನ್ನ ಅನಂತ ವಂದನೆಗಳು.

ದೇಶದಲ್ಲಿ ಹಲವು ಮಂದಿ ಸಮರ್ಥ ವಿದ್ವಾಂಸರುಗಳಿದ್ದರೂ ಈ ಭಾಷಾಂತರ ಸೇವಾಕಾರ್ಯಕ್ಕೆ ನನ್ನನ್ನೇ ಆಯ್ದುಕೊಂಡು ನೇಮಿಸಿದ ಗುರುಕೃಪೆ ಅಸದೃಶವಾದದ್ದು. ಇದು ದೊರೆತದ್ದು ನನ್ನ ಪೂರ್ವಪುಣ್ಯವೆಂದು ಭಾವಿಸುತ್ತೇನೆ.

ಶ್ರೀ ಗುರ್ವನುಗ್ರಹ ನಮ್ಮನ್ನು ರಕ್ಷಿಸುತ್ತಿರಲಿ.

ಚ[redacted]ಶೇಖರಭಾರತೀ ಗುರುವರ್ಯ ಕರಸಂಜಾತರಂ
ಚಂದ್ರಮೌಳೀಶ್ವರ ಸಮರ್ಚನಲಬ್ಧ ಪೂರ್ಣಪ್ರಜ್ಞರಂ ।
ಸಾಂದ್ರಕರುಣಾಪಾಂಗ ಸುಸ್ಮಿತಶೋಭಿಮುಖಪಂಕೇಜರಂ
ಚಂದ್ರಮೌಳಿ ಸ್ವರೂಪರಂ ನೆನೆನೆನೆವೆ ವಿದ್ಯಾತೀರ್ಥರಂ. ॥

ಎಲ್. ಗುಂಡಪ್ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿ ಷ ಯ ಸೂ ಚಿ

ಪ್ರಸ್ತಾವನೆ —ಶ್ರೀ ಎ. ಆರ್. ಸೋಮನಾಥ ಅಯ್ಯರ್	(ಉ)
ವಂದನಾರ್ಪಣೆ—ಶ್ರೀ ಎರ್. ಜಿ. ನರಸಿಂಹಯ್ಯ	(ಏ)
ಮುನ್ನುಡಿ	i
ಪೀಠಿಕೆ	xv
ಶ್ರೀ ಗುರುಧ್ಯಾನ ಶ್ಲೋಕಗಳು	xxiii
ಶ್ರೀ ವಿದ್ಯಾತೀರ್ಥ ಪಂಚಕ	xxvi
ಶ್ರೀ ಗುರುಪರಂಪರಾ ಸ್ತೋತ್ರ	xxix
ಶ್ರೀ ಜಗದ್ಗುರು ಮಂಗಲಾಷ್ಟಕ.	xxxiv

ಅಧ್ಯಾಯ

೧.	ಜೀವನ್ಮುಕ್ತರ ಮಹಿಮೆ	೧–೧೦
೨.	ಶೃಂಗೇರೀ ಪೀಠಾಧಿಪತಿಗಳು	೧೧–೨೭
೩.	ಶಿಷ್ಯನನ್ನು ಕಂಡದ್ದು	೨೮–೩೩
೪.	ಶ್ರೀಮತ್ ಅಭಿನವ ವಿದ್ಯಾತೀರ್ಥ ಸ್ವಾಮಿಗಳು	೩೪–೮೦
೫.	ಆಚಾರ್ಯರ ವಿಶಿಷ್ಟ ಮಹಿಮೆ	೮೧–೮೬
೬.	ಶ್ರೀ ಮಹಾಗಣಪತಿ ಮೂರ್ತಿ	೮೭–೯೦
೭.	ವಿಜಯ ಯಾತ್ರೆಗಳು	೯೧–೧೧೨
೮.	ಡಿಳ್ಳಿ ವಿಜಯ	[illegible]–೧೨೨
೯.	ಮೂರನೆಯ ವಿಜಯ ಯಾತ್ರೆ	೧೨೩–೧೨೭
೧೦.	ಸುರೇಶ್ವರರ ಅಧಿಷ್ಠಾನದ ಕುಂಭಾಭಿಷೇಕ	೧೨೮–೧೩೧
೧೧.	ನಾಲ್ಕನೆಯ ವಿಜಯ ಯಾತ್ರೆ	೧೩೨–೧೫೭
೧೨.	ಐದನೆಯ ಮತ್ತು ಆರನೆಯ ವಿಜಯ ಯಾತ್ರೆಗಳ	೧೨೮–೧೮೩
೧೩.	ಶ್ರೀ ಭಾರತೀತೀರ್ಥ ಸ್ವಾಮಿಗಳು	೧೫೪–೧೬೦
೧೪.	ಉಪಸಂಹಾರ	೧೬೧–೧೬೪

ಅನುಬಂಧಗಳು : 1 – 72

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಬಂಧಗಳು :

೧.	ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು	3–6
೨.	ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು	6-8
೩.	ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು	8–13
೪.	ಅದ್ವಿತೀಯ ಚಿತ್ತಸ್ಥೈರ್ಯ	14–24
೫.	ಭಕ್ತರುಗಳ ಸ್ವಂತ ಅನುಭವಗಳು	25–50
೬.	ಆರನೆಯ ವಿಜಯ ಯಾತ್ರೆಯ ಕಡೆಯ ಭಾಗ	51–72

೧

Sri Vidyabharathi Book Centre, Sringeri

CC-O. In Public Domain. Digitized by eGangotri

India International Centre

40, Lodi Estate, New Delhi - 110003

ಪ್ರಸ್ತಾವನೆ

ನವದೆಹಲಿ, 2-1-1979

ವೇದಗಳು ಅನಂತ. ಅವುಗಳನ್ನೆಲ್ಲ ಎಷ್ಟು ಸಾಂಗವಾಗಿ, ಸಮಗ್ರವಾಗಿ ಅಧ್ಯಯನ ಮಾಡಿದ್ದರೂ, ಪ್ರಾಚೀನ ಪುರಾಣೇತಿಹಾಸಗಳ ವ್ಯಾಸಂಗ ಮಾಡದೆ ಇರುವ ಪಂಡಿತರನ್ನು ಕಂಡಾಗ ವೇದಮಾತೆ ಭಯಪಡುವಳಂತೆ! ವೇದಾರ್ಥಗಳನ್ನು ತಿಳಿಯುವುದು ಎಷ್ಟು ಕಷ್ಟವೋ ಅದನ್ನು ತಿಳಿದಿರುವವರೂ ಅಷ್ಟೇ ವಿರಳ. ವೇದೋಕ್ತ ಧರ್ಮಾಧರ್ಮಗಳನ್ನೂ, ಧರ್ಮಸೂಕ್ಷ್ಮಗಳನ್ನೂ ಗ್ರಹಿಸುವುದು ಸಾಮಾನ್ಯರಿಂದಾಗದು. ಈ ಕಾರಣದಿಂದ ವೇದಪಾರಂಗತರೆನಿಸಿದವರು ಧರ್ಮಾಧರ್ಮಾದಿ ವಿಚಾರಗಳನ್ನು (ವೇದಾರ್ಥವು ತಿಳಿಯದಿದ್ದರೆ) ತಪ್ಪುತಪ್ಪಾಗಿ ಪ್ರಚಾರ ಮಾಡುವರೋ, ಸತ್ಯಕ್ಕೆ ಅಪೋಹ ಬಂದೀತೋ ಎಂಬುದೇ ಈ ಭಯಕ್ಕೆ ಕಾರಣ. ಆದುದರಿಂದ, ಧರ್ಮಾಚರಣೆಯ ವಿಧಾನಗಳನ್ನು ಸುಸಂಸ್ಕಾರಿಗಳಿಗೆ ಅರ್ಥವಾಗುವಂತೆ ಬೋಧಿಸುವುದಕ್ಕಾಗಿ, ಪುಣ್ಯಚರಿತರ ಜೀವಿತೆಗಳನ್ನೂ, ಜೀವನ ಕ್ರಮಗಳನ್ನೂ, ವಿವಿಧ ಕ್ಲಿಷ್ಟ ಸನ್ನಿವೇಶಗಳಲ್ಲಿ ಅವರು ಅನುಸರಿಸಿದ ಮಾರ್ಗಗಳನ್ನೂ ಆಮೂಲಾಗ್ರವಾಗಿ ಚಿತ್ರಿಸುವ ಪುರಾಣಗಳನ್ನೂ, ಇತಿಹಾಸಗಳನ್ನೂ, ರಚಿಸಿ ಮಹರ್ಷಿಗಳು ಲೋಕವನ್ನು ಅನುಗ್ರಹಿಸಿರುತ್ತಾರೆ. ಪುರಾಣಗಳ ಕಾಲಕ್ಕೂ ಈ ಕಲಿಯುಗಕ್ಕೂ ಅಜಗಜಾಂತರವಿರುವುದರಿಂದ ಆ ಪುಣ್ಯಚರಿತರ ಮಾರ್ಗವನ್ನೇ ಅನುಸರಿಸುವಷ್ಟು ಶ್ರದ್ಧೆ, ದಾರ್ಢ್ಯ, ಇಂದಿನವರಿಗೆ ಇಲ್ಲವೆಂಬುದಾಗಿ ಜನತೆ ಆಗಾಗ್ಗೆ ಪರಿತಪಿಸುವುದರಲ್ಲಿ ಆಶ್ಚರ್ಯವಿಲ್ಲ. ಜನತೆಯ ಬಹುಭಾಗವು ಆಸ್ತಿಕ್ಯದಿಂದ ಕೂಡಿದೆ. ಒಂದರ್ಥದಲ್ಲಿ, ಭಾರತೀಯರಲ್ಲಿ ನಾಸ್ತಿಕ್ಯವೆಂಬುದೇ ಇಲ್ಲವೆನ್ನಬಹುದು. ಆದರೂ, ಆಧುನಿಕ ಸ್ಥಿತಿಗತಿಗಳಲ್ಲಿ, ಪ್ರಸ್ತುತ ವಾತಾವರಣದಲ್ಲಿ, ಆಸ್ತಿಕರಿಗೆ ಆದರ್ಶವಾವುದು, ಧ್ಯೇಯವೇನು, ಸಾಧನಾಮಾರ್ಗ ಯಾವುದು,

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ಸಾಧಿಸುವ ಹಾಗೂ ಸಾಧಿಸುತ್ತಿರುವ ಮಾನವಶ್ರೇಷ್ಠರು ಎಲ್ಲಿರುವರು, ಎಂಬೀಮೊದಲಾದ ಪ್ರಶ್ನಾವಳಿ ಅಲ್ಲಲ್ಲಿ ಕೇಳಿಬರುವುದುಂಟು. ಆ ಪ್ರಶ್ನೆಗಳಿಗೆಲ್ಲ ಸಮಂಜಸವಾದ ಉತ್ತರಗಳನ್ನು ಕೊಡಬಲ್ಲ, ಮಾನವನ ಜನ್ಮ ಸಾಫಲ್ಯಕ್ಕೆ ಮಾರ್ಗವನ್ನು ತೋರಬಲ್ಲ, ಎಂತಹ ಸಂಶಯಾತ್ಮರನ್ನೂ ಆಸ್ತಿಕರನ್ನಾಗಿ ಮಾಡಬಲ್ಲ, – ಏಕೆ? ವಾಸ್ತವವಾಗಿ ಪರಿವರ್ತಿಸಿ ಉದ್ಧಾರ ಮಾಡಿರತಕ್ಕ,— ಮಹಾಪುರುಷರೊಬ್ಬರ ಪುಣ್ಯಚರಿತೆಯೇ “ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ವಿಜಯಮ್” ಎಂಬ ಈ ತಿಳಿಗನ್ನಡ ಗ್ರಂಥಕುಸುಮ.

ಶ್ರೀಮದಾದಿಶಂಕರ ಭಗವತ್ಪೂಜ್ಯಪಾದರ ಕಾಲದಿಂದೀಚೆಗೆ ಆರ್ಯಾವರ್ತದಾದ್ಯಂತವೂ ಸಂಚರಿಸಿ ಸಾಧುಸಂತರ ಪರಿತ್ರಾಣ, ದುರ್ಜೇಯದುಷ್ಟಶಿಕ್ಷಣ, ಅಸಂಖ್ಯೇಯ ಶಿಷ್ಯಪರಿಪಾಲನ, ಲೋಕಕಲ್ಯಾಣ ಕಾರ್ಯಪರಂಪರೆಯ ಸಾಧನ, ಸತ್ಪ್ರಜಾ ನಿವಹದ ಸಮುದ್ಧರಣ, ಇತ್ಯಾದಿ ಕೃತಿರಾಶಿಯನ್ನೆಸಗಿರುವ ಈ ಮಹಾಸಮರ್ಥರ ಗುಣಕಥನವನ್ನುಳ್ಳ ಗ್ರಂಥಗಳನ್ನು ಈಗಾಗಲೆ ಬಹು ಮಂದಿ ಕವಿಗಳೂ, ಸಾಹಿತಿಗಳೂ ರಚಿಸಿರುವಲ್ಲಿ, ಈಗ ಮತ್ತೊಂದು ಗ್ರಂಥದ ಆವಶ್ಯಕತೆಯಾದರೂ ಏನು, ಎಂಬ ಪ್ರಶ್ನೆಯನ್ನು ಯಾರಾದರೂ ಎತ್ತಬಹುದು. ಅದಕ್ಕೆ ಉತ್ತರವಿಷ್ಟೆ: ಭಗವಂತನ ಸ್ತೋತ್ರಗಳು ಈಗಾಗಲೇ ಅಸಂಖ್ಯಾತವಾಗಿರುವಲ್ಲಿ ಈಚಿನ ಭಕ್ತರು ಹೊಸ ಹೊಸ ಸ್ತುತಿಗಳನ್ನೇಕೆ ರಚಿಸಬೇಕೆಂದು ಕೇಳಲಾದೀತೆ? ಹಾಗೆಯೇ, ಭಗವದಂಶಸಂಭೂತರಾದ ಮಹಾಪುರುಷರ ವಿಷಯವಾದ ಗ್ರಂಥರಚನೆಗೆ ಸಂಖ್ಯಾಪರಿಮಿತಿಯುಂಟೆ, ಅವಧಿಯುಂಟೆ? ಅಲ್ಲದೆ, ಗುರುವರ್ಯರ ಸ್ಮರಣೆ, ಸ್ತುತಿ, ಗುಣಕಥನಾದಿಗಳು ಎಷ್ಟೇ [illegible], ಇನ್ನೂ ಸಾಲದೆಂದೇ ಹೇಳಬೇಕು. ಏಕೆಂದರೆ, ಆ ಮಹಾಮಹಿಮರು ಅನಂತಕಲ್ಯಾಣಗುಣಗಳ ಗಣಿ; ಅವರ ಮಹಿಮೆಯನ್ನು ಎಷ್ಟು ಕೊಂಡಾಡಿದರೂ ಅದು ಅಪೂರ್ಣವೆಂದೇ ತೋರುವುದು. ಅದನ್ನು ಆಮೂಲಾಗ್ರವಾಗಿ ಚಿತ್ರಿಸುವ ಕಾರ್ಯ ಯಾರಿಂದಲೂ ಆಗದು. ನನ್ನ ಸ್ವಂತ ತಿಳಿವಳಿಕೆಯ, ಹಾಗೂ ಅನುಭವದ ಆಧಾರದ ಮೇಲೆ ಇಷ್ಟನ್ನು ಮಾತ್ರ ಹೇಳಬಹುದು: “ವಿದ್ಯಾತೀರ್ಥ”ರೆಂಬ ನಾಲ್ಕು ಮಧುರಾಕ್ಷರಗಳ ಪಠಣ ಮಾತ್ರದಿಂದಲೇ ಪಾತಕರ ಪಾಪವಿಮೋಚನೆಯಾಗುವುದು; ಅವರ ದಿವ್ಯ ಸುಂದರ ವಿಗ್ರಹದ ಧ್ಯಾನದಿಂದ ಪುಣ್ಯಪ್ರಾಪ್ತಿಯಾಗುವುದು; ಅವರ ಸಾಕ್ಷಾತ್

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶನದಿಂದ ಎಲ್ಲ ವಿಧ ಮನಃಕ್ಲೇಶಗಳೂ ಸಂಶಯಗಳೂ ಮಾಯವಾಗಿ ಮನಃಪ್ರಸಾದವೂ, ಶಾಂತಿಸಮಾಧಾನಗಳೂ ಉತ್ಪನ್ನವಾಗುವುವು. ಅವರ ಅಮೃತಹಸ್ತದಿಂದ ತೀರ್ಥಪ್ರಸಾದಗಳನ್ನು ಪಡೆದರೆ ಸಕಲಾಭೀಷ್ಟಸಿದ್ಧಿಯಾಗುವುದು. ಅವರ ಸೇವಾತತ್ಪರ ಅಂತೇವಾಸಿಗಳ ಜನ್ಮಸಾಫಲ್ಯವು ಮೀಸಲೆಂದು ನಂಬಬಹುದು. ಅವರ ಪ್ರವಾಸಗಳ ಬಗ್ಗೆ ಸರ್ವಸಾಮಾನ್ಯ ಅನುಭವವೇನೆಂದರೆ, ಯಾವ ರಾಜ್ಯದಲ್ಲಿ ಅವರ ಪಾದಸ್ಪರ್ಶವೋ ಅಲ್ಲಿ ಅತಿವೃಷ್ಟಿ–ಅನಾವೃಷ್ಟಿ ಮೊದಲಾದ ಬಾಧೆಗಳು ಪರಿಹಾರವಾಗಿ ತುಷ್ಟಿ–ಪುಷ್ಟಿಗಳ ಸಮೃದ್ಧಿ ಏರ್ಪಡುವುದು. ಒಟ್ಟಿನಲ್ಲಿ, ಎಷ್ಟು ಕಾಲ ಸೂರ್ಯಚಂದ್ರರು ಬೆಳಗುತ್ತಿರುವರೋ, ಅಷ್ಟು ಕಾಲವೂ ಈ ಗುರುಸಾರ್ವಭೌಮರ ದಿವ್ಯಚರಿತೆಯು ರಾರಾಜಿಸುತ್ತಿರುವುದು; ಶೃಂಗೇರಿ ಪೀಠದ ಕೀರ್ತಿಸ್ತಂಭವು ಸುಭದ್ರವಾಗಿ ಎದ್ದು ಕಾಣುತ್ತಿರುವುದು.

ಜಗದ್ಗುರು ಮಹಾಸ್ವಾಮಿಗಳವರ ಅಡಿದಾವರೆಗಳಲ್ಲಿ ತಮ್ಮ ಭಕ್ತಿ ಕುಸುಮಾಂಜಲಿಯಾಗಿ ಈ ಗ್ರಂಥವನ್ನು ಸಮರ್ಪಿಸುವ ದ್ವಿಭಾಷಾಪರಿಣತರಾದ ಶ್ರೀಮಾನ್ ಎಲ್. ಗುಂಡಪ್ಪನವರು ಧನ್ಯರು. ಇವರಿಗೆ ಓದುಗರ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಗ್ರಂಥದ ಮೂಲಕೃತಿ ಮೊದಲು ಪ್ರಕಟವಾದುದು ತಮಿಳಿನಲ್ಲಿ; ಅದೂ ಮೂರು ವರ್ಷಗಳ ಹಿಂದೆ. ಕರ್ಣಾಟಕ ರಾಜ್ಯದಲ್ಲಿ ಕಂಗೊಳಿಸುತ್ತಿರುವ ಲೋಕವಿಖ್ಯಾತ ಶ್ರೀ ಶೃಂಗೇರಿ ಶ್ರೀ ಶಾರದಾಪೀಠವನ್ನಲಂಕರಿಸುತ್ತಿರುವ ಜಗದ್ಗುರುಗಳವರ ವಿಷಯಕವಾದ ಈ ಗ್ರಂಥವು ಕನ್ನಡನಾಡಿಗೆ ಇಷ್ಟು ಕಾಲ ಲಭ್ಯವಾಗದಿದ್ದುದು ಕನ್ನಡಿಗರ ದೌರ್ಭಾಗ್ಯ: ಈಗಲಾದರೂ ಲಭ್ಯವಾದುದು ಅವರ ಪುಣ್ಯ. ತಮಿಳು ಗ್ರಂಥವನ್ನು ರಚಿಸಿದವರು ಈರೋಡಿನ ಹಿರಿಯ ನ್ಯಾಯವಾದಿಗಳೂ "ಅಖಿಲ ಭಾರತ ಶ್ರೀ ಶಂಕರ ಸೇವಾ ಸಮಿತಿ"ಯ ಕಾರ್ಯದರ್ಶಿಗಳೂ ಆದ ಶ್ರೀಮಾನ್ ಕೆ. ವಿ. ಸುಬ್ಬರತ್ನಂ ಅವರು. ಅದರ ಪೀಠಿಕೆಯಲ್ಲಿ ಅವರೇ ಬರೆದಿರುವಂತೆ, ಗ್ರಂಥವಸ್ತುವಿನ ಮುಖ್ಯ ಭಾಗಗಳನ್ನು ಒದಗಿಸಿಕೊಟ್ಟವರು ಬೆಂಗಳೂರು ನಿವಾಸಿಗಳಾದ 'ವೇದಸೇವಾಭೂಷಣ', 'ಗುರುಸೇವಾಗ್ರೇಸರ', ಬಹುಸಂಸ್ಥಾಪ್ರಬೋಧಕ' ಶ್ರೀಮಾನ್ ಎಸ್. ಜಿ. ನರಸಿಂಹಯ್ಯನವರು. ಇವರು ಪರಮಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri
ಮಹಾಸ್ವಾಮಿಗಳವರ ಕಾಲದಲ್ಲಿ ಆಪ್ತಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ ಪುಣ್ಯಾತ್ಮರು. ಶ್ರೀ ಶಾರದಾಪೀಠವನ್ನಲಂಕರಿಸುತ್ತಿರುವ ಮಹಾಸ್ವಾಮಿಗಳವರ ಬಗ್ಗೆ ಗಮನಾರ್ಹ ಘಟನೆಗಳ ಮತ್ತು ಸಂಗತಿಗಳ, – ಮುಖ್ಯವಾಗಿ, ಬಾಲ್ಯದಲ್ಲೇ ಕಂಡುಬಂದ ಅನನ್ಯಸದೃಶವೂ ಅರ್ಥಗರ್ಭಿತವೂ ಆದ ವಿಚಾರಗಳ ವಿವರಣೆಗೆ ಆವಶ್ಯಕವಾದ ಸ್ವಂತ ಅನುಭವ, ಪರಿಚಯ ಮುಂತಾದ ಅರ್ಹತೆಗಳನ್ನುಳ್ಳವರು. ಕನ್ನಡ ಗ್ರಂಥರಚನಾ ವಿಚಾರದಲ್ಲೂ ಇವರ ಪಾತ್ರ ಗಮನಾರ್ಹವಾದದು. ಈ ಸನ್ಮಿತ್ರರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

ಗ್ರಂಥಾನುವಾದಕರು ತಮ್ಮ ಅರಿಕೆಯಲ್ಲಿ ತಿಳಿಸಿರುವಂತೆ ಅನುಬಂಧಗಳು ಮುದ್ರಿತವಾದ ಮೇಲೆ ಗುರುಗಳ ಕಾರ್ಯಕ್ರಮಗಳ ಕಥನವನ್ನು ಮುಂದುವರಿಸಬೇಕಾಯಿತಾದ ಕಾರಣ, ಕೊನೆಕೊನೆಯಲ್ಲಿ ವಿಷಯನಿವೇದನ ಕ್ರಮದಲ್ಲಿ ಸ್ವಲ್ಪ ಹಿಂದುಮುಂದಾಗಿದೆ. ಇದರಿಂದ ಓದುಗರಿಗೆ ಸ್ವಲ್ಪ ಅನನುಕೂಲವಾಗಬಹುದು. ಆದರೆ ಅದೇನೂ ಅಕ್ಷಮ್ಯ ವಿಷಯವಲ್ಲ: ಪುನರ್ಮುದ್ರಣ ಕಾಲದಲ್ಲಿ ಸುಲಭವಾಗಿ ಸರಿಪಡಿಸಬಹುದು.

ಈ ಪುಸ್ತಕವನ್ನು ಎಲ್ಲ ಕನ್ನಡಿಗರೂ ಆವಶ್ಯವಾಗಿ ಓದಬೇಕೆಂಬುದೇ ನನ್ನ ಅಭಿಮತ. ಏಕೆಂದರೆ,

"ಧರ್ಮೇ ತತ್ಪರತಾ ಮುಖೇ ಮಧುರತಾ ದಾನೇ ಸಮುತ್ಸಾಹಿತಾ ।
ಮಿತ್ರೇ ಅವಂಚಕತಾ ಗುರೌ ವಿನಯತಾ ಚಿತ್ತೇಽತಿ ಗಂಭೀರತಾ ॥
ಆಚಾರೇ ಶುಚಿತಾ ಗುಣೇ ರಸಿಕತಾ ಶಾಸ್ತ್ರೇಷು ವಿಜ್ಞಾನಿತಾ ।
ರೂಪೇ ಸುಂದರತಾ ಹರೇ ಭಜನಿತಾ ಸತ್ಸ್ವೇವ ಸಂದೃಶ್ಯತೇ ॥"

"ಶ್ರೀಗುರೋಃ ಪಾದುಕಾ ಮೂರ್ಧ್ನಿ ಶ್ರೀದೇವೀ ಹೃದಿ ಸಂಸ್ಥಿತಾ ।
ಶ್ರೀವಿದ್ಯಾ ಯಸ್ಯ ಜಿಹ್ವಾಗ್ರೇ ಸಸಾಕ್ಷಾತ್ಪರಮಶ್ಶಿವಃ ॥"

ಎ. ಆರ್. ಸೋಮನಾಥ ಅಯ್ಯರ್,
(ವಿಶ್ರಾಂತ) ಶ್ರೇಷ್ಠ ನ್ಯಾಯಾಧೀಶ.
ಕರ್ನಾಟಕ ಹೈಕೋರ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

|| ಶ್ರೀಃ ||

ವಂದನಾರ್ಪಣೆ

"ಶ್ರೀಮದಭಿನವ ವಿದ್ಯಾತೀರ್ಥ ವಿಜಯ"ವೆಂಬ ಈ ಗ್ರಂಥ ಬಹು ಮಂದಿ ಗುರುಭಕ್ತರ ಪ್ರೇಮಪೂರಿತ ಸಹಕಾರದ ಫಲ. ಇದರಲ್ಲಿರುವ ಹಲವಾರು ಗಹನಾಂಶಗಳು ಭಕ್ತಕೋಟಿಗೆ ತಿಳಿಯಬೇಕೆಂಬ ಉದ್ದೇಶದಿಂದ ಇಂತಹ ಒಂದು ಪುಸ್ತಕವನ್ನು ರಚಿಸಲು ಆವಶ್ಯಕ ಅನುಮತಿಯನ್ನು ನೀಡಲಾಗಲೆಂದು ಗುರು ಸಾಮ್ರಾಟರಲ್ಲಿ ಮೊದಲು ಪ್ರಸ್ತಾಪಿಸಿದಾಗ, ಹಿಂದೆ ಬೇರೊಂದು ಸಂದರ್ಭದಲ್ಲಿ ಪರಮಗುರುಗಳು ಅಪ್ಪಣೆಕೊಡಿಸಿದ್ದ ಮಾತೇ ಈ ಮಹಾಸನ್ನಿಧಾನದಿಂದಲೂ ಅಪ್ಪಣೆಯಾಯಿತು. ಏನೆಂದರೆ : "ನನ್ನ ಬಗ್ಗೆ ಹೊರಬಿದ್ದಿರುವ ಹಲವಾರು ಪುಸ್ತಕಗಳು ಸಾಲದೇ ? ನಿಮಗೆ ಇಷ್ಟೊಂದು ಉತ್ಸಾಹವಿರುವುದರಿಂದ, ನಮ್ಮ ಗುರುನಾಥನ ಗುಣಕಥನವನ್ನೊಳಗೊಂಡ ಗ್ರಂಥವನ್ನು ಬರೆಯಿರಿ." ಹೀಗಾಗಿ ಆ ಪ್ರಯತ್ನ ನೆರವೇರದಾಯಿತು. ಬೆಂಗಳೂರು ಕುಮಾರಾಪಾರ್ಕ್ ಬಡಾವಣೆಯಲ್ಲಿರುವ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಗುರುವರ್ಯರು ದಯಮಾಡಿಸಿದ್ದ ಒಂದು ದಿನ, ಅದಾವುದೋ ಒಂದು ಶುಭ ಮುಹೂರ್ತದಲ್ಲಿ, ಅದೇ ವಿಜ್ಞಾಪನೆಯನ್ನೇ ನಿವೇದಿಸಿದಾಗ, ಅನುಮತಿಯು ದೊರಕಿ ನಮ್ಮ ಉತ್ಸಾಹ ದ್ವಿಗುಣವಾಯಿತು. ಅಖಿಲ ಭಾರತ ಶಂಕರ ಸೇವಾ ಸಮಿತಿಯ ಪ್ರೇರಕರೂ, ಕಾರ್ಯದರ್ಶಿಗಳೂ ಆದ ಪರಮ ಭಕ್ತ (ಈರೋಡಿನ) ಹಿರಿಯ ನ್ಯಾಯವಾದಿ ಶ್ರೀಮಾನ್ ಕೆ. ವಿ. ಸುಬ್ಬರತ್ನಂ ಅವರು ತಮಿಳು ಭಾಷೆಯಲ್ಲಿ ಗ್ರಂಥರಚನೆಗೆ ಕೈಹಾಕಬಹುದೆಂದೂ, ಗುರುಮಹಾರಾಜರ ಬಾಲ್ಯದ ಪ್ರಸ್ತಾಪವೇ ಮೊದಲಾದ ಕೆಲವು ವಿಚಾರಗಳಿಗೆ ಸಂಬಂಧಿಸಿದ ಮುಖ್ಯ ವಿವರಗಳನ್ನು ಈ ಗುರುಚರಣ ಸೇವಕನು ಒದಗಿಸಿಕೊಡಬಹುದೆಂದೂ ಅನುಗ್ರಹವಾಯಿತು. ಇದಕ್ಕಾಗಿ ನಾನು ಮಹಾಸನ್ನಿಧಾನದ ಅಡಿದಾವರೆಗಳಿಗೆ ಚಿರ ಋಣಿಯಾಗಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಾನ್ ಸುಬ್ಬರತ್ನಂ ಅವರ ತಮಿಳು ಗ್ರಂಥವೇ ಈ ಪುಸ್ತಕದ ಮೂಲ. ಈ ಕಾರಣದಿಂದ ಆ ಗ್ರಂಥಕರ್ತರಿಗೆ ಭಕ್ತವಲಯಗಳ, ಹಾಗೂ ನನ್ನ ಅನಂತಾನಂತ ವಂದನೆಗಳು. ಆ ಗ್ರಂಥವನ್ನು ಮಹಾಸ್ವಾಮಿಗಳವರ ದಿವ್ಯ ಸಮುಖದಲ್ಲಿ ಆಗ ರಾಜ್ಯಪಾಲರಾಗಿದ್ದ ಸನ್ಮಾನ್ಯ ಶ್ರೀ ಉಮಾಶಂಕರ ದೀಕ್ಷಿತರು ಬಿಡುಗಡೆ ಮಾಡಿದರು. ಆ ಮೂಲಗ್ರಂಥವನ್ನು ಪ್ರಕಾಶಪಡಿಸಿದ ಈರೋಡಿನ ಅಖಿಲ ಭಾರತ ಶಂಕರ ಸೇವಾ ಸಮಿತಿಯೇ ಈ ಕನ್ನಡ ಗ್ರಂಥವನ್ನೂ ಪ್ರಕಾಶಿಸುತ್ತಿದೆ. ಈ ಸಂಸ್ಥೆಗೆ ಕನ್ನಡಿಗರೂ, ಕನ್ನಡನಾಡೂ ಚಿರಋಣಿಗಳು.

ಕನ್ನಡ ನಾಡಿನ ಹಾಗೂ ಮಾನವ ಕೋಟಿಯ ಕಲ್ಪವೃಕ್ಷ, ವಿಶ್ವವಿಖ್ಯಾತ ಶ್ರೀ ಶಾರದಾ ಪೀಠ. ಅದನ್ನಲಂಕರಿಸುತ್ತಿರುವ ಅನನ್ಯಸದೃಶ ಗುರುಚಕ್ರವರ್ತಿ ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು. ಇಂತಹ ಮಹನೀಯರ ಚರಿತ್ರೆ ಕನ್ನಡಿಗರಿಗೆ ಲಭ್ಯವಾಗಲೇಬೇಕಾದ ಕಾರಣ, ಆ ತಮಿಳು ಪುಸ್ತಕವನ್ನು ಕನ್ನಡಿಸಬೇಕೆಂಬ ಯೋಚನೆ ಮೊದಲಿನಿಂದಲೂ ಇದ್ದಿತಾದರೂ, ನಮ್ಮ ಪ್ರಯತ್ನಕ್ಕೆ ಮೀರಿದ ಕಾರಣಗಳಿಂದ ಆ ಯೋಚನೆ ಕಾರ್ಯರೂಪಕ್ಕೆ ಬಂದಿರಲಿಲ್ಲ. ಗುರುದೇವತಾನುಗ್ರಹದಿಂದ ಆ ಕನಸು ಈಗ ನನಸಾಗಿ ಎಲ್ಲರೂ ಸಂತೋಷಭರಿತರಾಗಿದ್ದೇವೆ. ಭಾಷಾಂತರದ ಹೊರೆಯನ್ನು ಹೊರಲು ಯಾರು ಪೂರ್ಣ ಸಮರ್ಥರೆಂಬ ಮಾತು ಬಂದಾಗ, ಬಹುಭಾಷಾಪರಿಣತರೂ, ಸುಪ್ರಸಿದ್ಧ ಗ್ರಂಥಕರ್ತರೂ ಆಗಿರುವ ಶ್ರೀಮಾನ್ ಎಲ್. ಗುಂಡಪ್ಪನವರೇ ಸರಿ ಎಂಬುದಾಗಿ ವ್ಯವಸ್ಥೆಯಾಯಿತು. ಈ ಹಿರಿಯ ಸಾಹಿತಿಗಳು ಮೂಲವನ್ನು ಭಾಷಾಂತರಿಸಿದ್ದೇ ಅಲ್ಲದೆ, ಆ ಗ್ರಂಥವು ಹೊರಬಂದ ಸಮಯದಿಂದೀಚೆಗೆ ಗುರುಮಹಾರಾಜರು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ ಅಖಿಲ ಭಾರತ ವಿಜಯಯಾತ್ರಾ ಪರಂಪರೆಯೇ ಮೊದಲಾದ ಬೇರೆ ಮುಖ್ಯ ಸಂಗತಿಗಳ ಅಧಿಕೃತ ವರದಿಗಳನ್ನೂ, ಇನ್ನೂ ಇತರ ಸ್ಮರಣೀಯ ವಿಚಾರಗಳನ್ನೂ ಸೇರಿಸಿ, ಮುದ್ರಿತ ಕರಡು ಪ್ರತಿಯನ್ನೂ ತಿದ್ದಿ, ಹಾಗೂ ಅನಿವಾರ್ಯವಾದ ತಪ್ಪುಗಳ ತಿದ್ದೋಲೆಯನ್ನೂ ಒದಗಿಸಿ ಮಹೋಪಕಾರ ಮಾಡಿದ್ದಾರೆ. ಇದೆಲ್ಲಕ್ಕಾಗಿ ಅವರಿಗೆ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ.

ಶ್ರೀ ಶ್ರೀ ಶ್ರೀ ಮಹಾಸ್ವಾಮಿಗಳವರ ಬಾಲ್ಯದಲ್ಲೇ ಆಗಿಂದಾಗ್ಗೆ ಹೊರಹೊಮ್ಮುತ್ತಿದ್ದ ಅಪೂರ್ವ, ಅಚಿಂತ್ಯ ಮಹಿಮೆಗಳನ್ನು ಕಂಡು ವಿಸ್ಮಿತನಾಗುತ್ತಿದ್ದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೂ, ನನ್ನ ಸ್ಮೃತಿಪಥದಲ್ಲಿ ಹಲಕೆಲವು ಘಟನೆಗಳು ಇಲ್ಲದಾಗಿರಬಹುದೆಂಬ ಅರಿವಿನಿಂದ, ನಿಕಟ ಬಂಧುವರ್ಗದವರನ್ನೂ ಮತ್ತು ಆ ಕಾಲದಲ್ಲಿ ನೆರೆಹೊರೆಯಾಗಿದ್ದವರ ಪೈಕಿ ಜೀವಂತವಾಗಿರುವವರನ್ನೂ, ಅವರವರು ಇದ್ದ ಸ್ಥಳಗಳಲ್ಲೇ ಸಂಧಿಸಿ, ಬಿಟ್ಟುಹೋಗಿದ್ದ ವಿಚಾರಗಳನ್ನು ಈ ಗ್ರಂಥದಲ್ಲಿ ಸೇರಿಸಿದ ಸಂತೃಪ್ತಿ ಅಪಾರವಾಗಿದೆ. ಈ ಹೆಚ್ಚುವರಿ ಅಂಶಗಳನ್ನು ನೆನಪಿಗೆ ತಂದ ಸೋದರ-ಸೋದರಿಯರಿಗೆಲ್ಲ ನನ್ನ ಅನಂತಾನಂತ ವಂದನೆಗಳು.

ಗ್ರಂಥದಲ್ಲಿರುವ ಮುಖ್ಯ ಸನ್ನಿವೇಶಗಳಿಗೆ ಸಂಬಂಧಿಸಿದ ಚಿತ್ರಗಳನ್ನೆಲ್ಲ ಸೇರಿಸಬೇಕೆಂದಿದ್ದ ಪ್ರಯತ್ನ ಸಫಲವಾಗಲಿಲ್ಲ. ಈ ನ್ಯೂನತೆಗಾಗಿ ಓದುಗರ ಕ್ಷಮೆಯನ್ನು ಸಂಕೋಚದಿಂದ ಬೇಡಲಾಗದೆ.

ಇದೇ ಮೊದಲಾದ ಎಲ್ಲ ನ್ಯೂನತೆಗಳನ್ನೂ ಪರಿಹರಿಸುವಂತೆ, ರಾಜ್ಯದ ಮಾಜಿ ಶ್ರೇಷ್ಠ ನ್ಯಾಯಾಧೀಶರೂ, ಭಕ್ತಶ್ರೇಣಿಯ ನಾಯಕಮಣಿಯೂ ಆದ ಮಹಾಮಾನ್ಯ ಶ್ರೀಯುತ ಎ. ಆರ್. ಸೋಮನಾಥ ಅಯ್ಯರವರು ಅತ್ಯಮೋಘವಾದ "ಪ್ರಸ್ತಾವನೆ"ಯನ್ನು ಬರೆದು ಈ ಕನ್ನಡ ಗ್ರಂಥದ ಬಣ್ಣ ತೂಕಗಳನ್ನು ನೂರ್ಮಡಿಗೊಳಿಸಿದ್ದಾರೆ. ಇವರ ಪ್ರಚೋದಕ ವಾಣಿಯನ್ನಾಲಿಸಿ ಎಲ್ಲ ಕನ್ನಡ ಅಭಿಮಾನಿಗಳೂ ಈ ಗ್ರಂಥದ ಪ್ರತಿಗಳನ್ನು ತರಿಸಿಕೊಂಡು, ಪರಾಮರ್ಶಿಸಿ, ಗ್ರಾಹ್ಯಾಂಶಗಳನ್ನು ಗ್ರಹಿಸಿ, ಗುರುಮಹಿಮಾ ವಿಚಾರವಾಗಿ ಇತೋಪ್ಯತಿಷಯವಾಗಿ ಚಿಂತನ ಮಾಡುತ್ತಾ ಶಾಶ್ವತ ಶ್ರೇಯೋಭಾಜನರಾಗಬೇಕೆಂಬುದಾಗಿ ಪ್ರಾರ್ಥಿಸುತ್ತೇನೆ.

ತಮ್ಮ ಅನೇಕ ಕಾರ್ಯಗಳ ನಡುವೆ ಈ ಗ್ರಂಥವನ್ನು ಮುದ್ರಿಸಿಕೊಟ್ಟ ಬೆಂಗಳೂರು ವಿಶ್ವೇಶ್ವರಪುರದಲ್ಲಿರುವ "ನವನೀತ ಮುದ್ರಣಾಲಯ" [redacted] ಮಾಲೀಕರಾದ ಶ್ರೀಮಾನ್ ತಿರುಮಲೆ ಶ್ರೀರಂಗಾಚಾರ್ಯರನ್ನು ಮನಸಾರ ವಂದಿಸಬೇಕಾಗಿದೆ.

ಶ್ರೀಗುರುಸಾರ್ವಭೌಮ ದ್ವಯ ಚರಣಾನುಗೃಹೀತ,

ಎಸ್. ಜಿ. ನರಸಿಂಹಯ್ಯ

ಮಲ್ಲೇಶ್ವರ, ಬೆಂಗಳೂರು
ದಿನಾಂಕ, 20-1-1379

•

Sri Vidyabharathi Book Centre, Sringeri

CC-O. In Public Domain. Digitized by eGangotri

ತಿದ್ದೋಲೆ

ಪುಟ-ಸಾಲು	ತಪ್ಪು	ಸರಿ
iv-೧.	ಮಂತ್ರವ್ಯೋ	ಮಂತವ್ಯೋ
xxx-ಪದ್ಯ ೧೫	ಇನೋತ್ತಮ	ಜ್ಞಾನೋತ್ತಮ
xxxii-೩೨ನೆಯ ಪದ್ಯ, ಮುಂದಿನ ಪುಟದಲ್ಲಿ ತಪ್ಪಾಗಿ ಅಚ್ಚಾಗಿದೆ -ಇಲ್ಲಿಗೆ ಅನ್ವಯಿಸಿಕೊಳ್ಳಬೇಕು.		
ಪದ್ಯ ೩೭	ಕಾರ್ಯೋऽಷ್ಟವ್ಯತೋऽಪವಂ	ಕಾರ್ಯೋऽಪ್ಯವ್ಯತೋऽಪವಂ
ಪದ್ಯ ೪೦	ಪರಮಾತಂಗ	ಮಾರಮಾತಂಗ
xxxiii ಪದ್ಯ ೪೨	ಇದು ೩೨ನೆ ಪದ್ಯ; ಹಿಂದಿನ ಪುಟಕ್ಕೆ ಸೇರಬೇಕು	
೯-೧೪	ಬ್ರಹ್ಮಸ್ವರೂಗ	ಬ್ರಹ್ಮಸರೂಪ
೧೯-೨೪	ತ್ವನನ್ಯಂ	ತ್ವದನ್ಯಂ
೧೯-೨೬	ಕೃತಾರ್ಥೇऽಸ್ಮಿ ತಸ್ಮಾಸ್	ಕೃತಾರ್ಥೋऽಸ್ಮಿ ತಸ್ಮಾತ್
೫೩-೪	ಕಲಾನ್ಯತೀತಾನಿ	ಕುಲಾನ್ಯತೀತಾನಿ
೧೫೦-೧೩	೧೯೭೭	೧೯೭೬
೧೫೨-೧೧	೧೪ನೆಯ	೨೪ನೆಯ
೧೫೩-೩	ಜ್ಞಾನವಾಹಿಯ	ಜ್ಞಾನವಾಪಿಯ
೧೬೩-೨೨	ಪೆಯ್ರ್ಯವ್	ಪೆಯ್ಯುವ್
,, -೨೩	ಪಿಯನ್	ಐಯನ್
23-೧೯	ವರ್ಷಂತಿ	ವರ್ಷತಿ
51-೨	(೧೪೩ನೆಯ	(೧೫೩ನೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮಿಳು ಮೂಲ ಗ್ರಂಥಕ್ಕೆ

ಮುನ್ನುಡಿ

ಲೋಕದಲ್ಲಿ ಮನುಷ್ಯರಾಗಿ ಹುಟ್ಟಿದವರು ತಮ್ಮ ಜೀವನದಲ್ಲಿ ಕೆಲ ಕೆಲವು ಒಳ್ಳೆಯದನ್ನೂ ಕೆಟ್ಟದನ್ನೂ ಅನುಭವಿಸುತ್ತಿರುತ್ತಾರೆ. ಅದಕ್ಕೆ ಅವರವರ ಪ್ರಯತ್ನ ಮತ್ತು ಅವರು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಕರ್ಮ ಪಾಪಕರ್ಮಗಳೇ ಕಾರಣ—ಎಂಬುದು ಶಾಸ್ತ್ರಕ್ಕೂ ಅನುಭವಕ್ಕೂ ಅನುಗುಣ ವಾದ ಸತ್ಯ.

ಯಾವುದು ಪಾಪಕಾರ್ಯ, ಯಾವುದು ಪುಣ್ಯಕಾರ್ಯ ಎಂಬುದನ್ನು ನಮಗೆ ತಿಳಿಸಿಕೊಡುವುದು ಶಾಸ್ತ್ರವೇ. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು—ಎಂಬುದನ್ನು ನಿರ್ಧರಿಸಿ ಹೇಳುವುದೂ ಶಾಸ್ತ್ರವೇ. ಶಾಸ್ತ್ರವಿಧಿಗೆ ವಿರುದ್ಧವಾಗಿ ನಡದರೆ ಪಾಪವುಂಟಾಗುತ್ತದೆ.

ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಂ ಇಹಾರ್ಹಸಿ ॥

(ಆದ್ದರಿಂದ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು—ಎಂಬುದನ್ನು ನಿರ್ಧರಿಸಿ ಗೊತ್ತುಪಡಿಸುವುದರಲ್ಲಿ, ನಿನಗೆ ಶಾಸ್ತ್ರವೇ ಪ್ರಮಾಣ. ಶಾಸ್ತ್ರವಿಧಿಯಲ್ಲಿ ಹೇಳಿರುವುದನ್ನು ತಿಳಿದುಕೊಂಡು ಇಲ್ಲಿ ನೀನು ಕರ್ಮ ಮಾಡತಕ್ಕದ್ದು.)

ಇದರಿಂದ, ಶಾಸ್ತ್ರದಲ್ಲಿನ ಕ್ರಮಪ್ರಕಾರವಾಗಿಯೇ ನಾವು ನಡೆಯಬೇಕು—ಎಂಬುದು ನಮಗೆ ಗೊತ್ತಾಗುತ್ತದೆ. ಅದಕ್ಕಾಗಿ ಶಾಸ್ತ್ರಗಳನ್ನು ಸಂದೇಹಾದಿ ದೋಷಗಳಿಲ್ಲದಂತೆ ಚೆನ್ನಾಗಿ ಕಲಿತುಕೊಳ್ಳಬೇಕಾಗಿ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೇ ಸಮಯದಲ್ಲಿ ಶಾಸ್ತ್ರಗಳನ್ನು ಕಲಿಯುವುದನ್ನು ಮಾತ್ರವೇ ಕೊನೆಯ ಗುರಿಯಾಗಿಟ್ಟುಕೊಳ್ಳಕೂಡದು. ಶಾಸ್ತ್ರಜ್ಞಾನದ ಜೊತೆಯಲ್ಲೇ ತತ್ತ್ವಜ್ಞಾನವನ್ನೂ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಬರಿಯ ಶಾಸ್ತ್ರಜ್ಞಾನದಿಂದ ಫಲವಿಲ್ಲ—ಎಂಬುದು ಶ್ರೀ ಶಂಕರಭಗವತ್ಪಾದರ ಅಭಿಪ್ರಾಯ.

ಅವಿಜ್ಞಾತೇ ಪರೇ ತತ್ತ್ವೇ ಶಾಸ್ತ್ರಾಧೀತಿಸ್ತು ನಿಷ್ಫಲಾ ।
ವಿಜ್ಞಾತೇಽಪಿ ಪರೇ ತತ್ತ್ವೇ ಶಾಸ್ತ್ರಾಧೀತಿಸ್ತು ನಿಷ್ಫಲಾ ॥

(ಪರತತ್ತ್ವವನ್ನರಿಯದಿದ್ದರೆ ಶಾಸ್ತ್ರವೋದುವುದು ನಿಷ್ಫಲ
ಪರತತ್ತ್ವವನ್ನರಿತ ಮೇಲೂ ಶಾಸ್ತ್ರವೋದುವುದು ನಿಷ್ಫಲ.)

ಜೀವಾತ್ಮ, ಪರಮಾತ್ಮ, ಜಗತ್ತು—ಇವುಗಳಿಗೆ ಸಂಬಂಧಿಸಿದ ನಿಜವಾದ ಸ್ವರೂಪವನ್ನು ಅರಿಯುವುದೇ ತತ್ತ್ವಜ್ಞಾನ. ಇದು ಸ್ವಲ್ಪಮಟ್ಟಿಗೆ ಶಾಸ್ತ್ರಗಳಿಂದ ಉಂಟಾಗುವುದಾದರೂ, ಇವಕ್ಕೆ ಸಂಬಂಧಿಸಿದ ಅನುಭವ ಆಚಾರ್ಯನ ಅನುಗ್ರಹದಿಂದಲೇ ಪೂರ್ಣವಾಗುತ್ತದೆ.

"ಬ್ರಹ್ಮ ಸತ್ಯಂ, ಜಗನ್ಮಿಥ್ಯಾ" ಎಂಬುದು ಉಪನಿಷದ್ವಾಕ್ಯ. ಬ್ರಹ್ಮವೊಂದೇ ನಿಜವಾದದ್ದು; ಲೋಕವಾಗಿ ಕಾಣಿಸಿಕೊಳ್ಳುವ ಉಳಿದದ್ದೆಲ್ಲಾ ನಿಜವಲ್ಲ, ಸುಳ್ಳು. ಇದನ್ನು ರಜ್ಜು ಸರ್ಪ ಭ್ರಾಂತಿಗೆ ಹೋಲಿಸಿ ಶಾಸ್ತ್ರಗಳು ವಿವರಿಸುತ್ತವೆ.

ನಿಜಸ್ಥಿತಿಯಲ್ಲಿ ಬ್ರಹ್ಮವಾಗಿಯೇ ಇರುವ ಆತ್ಮನು ಮಾಯೆಯಿಂದಲೂ ಅವಿದ್ಯೆಯಿಂದಲೂ ಮರೆಮಾಡಲ್ಪಟ್ಟು, ತಾನು ಒಂದು "ಪ್ರತ್ಯೇಕ ಜೀವ" ಎಂದು ನೆನೆಯುತ್ತಾನೆ. ಈ ಭಾವನೆಯೂ ಅದಕ್ಕೆ ತಕ್ಕ ಕಾರ್ಯವೂ ಇರುವ ವರೆಗೂ ಜನನಮರಣಗಳು ತಪ್ಪುವುದಿಲ್ಲ. ಜೀವನು ದೇಹದೊಡನೆ ಕೂಡಿರುವುದೇ ಜನನ; ಆ ದೇಹವನ್ನು ಬಿಟ್ಟಗಲುವುದೇ ಮರಣ. ಜೀವಭಾವನೆಯಿರುವ ವರೆಗೂ ಜನನಮರಣಗಳು ಒಂದಾದಮೇಲೊಂದರಂತೆ ಮತ್ತೆ ಮತ್ತೆ ಬರುತ್ತಲೇ ಇರುತ್ತವೆ. ಇದನ್ನೇ ಶಂಕರಭಗವತ್ಪಾದರು "ಮೋಹಮುದ್ಗರ"ದಲ್ಲಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನರಪಿ ಜನನಂ ಪುನರಪಿ ಮರಣಂ ।
ಪುನರಪಿ ಜನನೀ ಜಠರೇ ಶಯನಂ ॥

(ಮತ್ತೆಯೂ ಜನನ, ಮತ್ತೆಯೂ ಮರಣ,
ಮತ್ತೆಯೂ ತಾಯ ಹೊಟ್ಟೆಯಲಿ ಶಯನ.)

ಎಂದು ತಿಳಿಯಪಡಿಸಿದ್ದಾರೆ. ಈ ರೀತಿಯ ಹುಟ್ಟುಸಾವುಗಳ ಸುಳಿಯಿಂದ ಬಿಡಿಸಿಕೊಳ್ಳಬೇಕೆಂಬ ಬಯಕೆಯೂ ಕಟ್ಟಾಸೆಯೂ ಉಳ್ಳ ಒಬ್ಬ ಮನುಷ್ಯನು, ಆಚಾರ್ಯನ ಬಳಿ ಹೋಗಿ ಜ್ಞಾನೋಪದೇಶ ಪಡೆದುಕೊಳ್ಳಬೇಕು. ಆ ಜ್ಞಾನ,

"ಪ್ರಜ್ಞಾನಂ ಬ್ರಹ್ಮ; ತತ್ ತ್ವಮಸಿ;
ಅಯಮಾತ್ಮಾ ಬ್ರಹ್ಮ; ಅಹಂ ಬ್ರಹ್ಮಾಸ್ಮಿ"

ಎಂಬ ಉಪನಿಷದ್ವಾಕ್ಯಗಳನ್ನು ಅರ್ಥಸಮೇತವಾಗಿ ಗುರುವಿನಿಂದ ಉಪದೇಶವಾಗಿ ಪಡೆದುಕೊಂಡು, ಅದರ ಅರ್ಥವನ್ನು ಅನುಸಂಧಾನ ಮಾಡುವುದರಿಂದ ಮಾತ್ರ ಉಂಟಾಗುತ್ತದೆ. ಹೀಗೆಂದು ಶಾಸ್ತ್ರಗಳು ಹೇಳುತ್ತವೆ. "ಆಚಾರ್ಯವಾನ್ ಪುರುಷೋ ವೇದ" ಎಂಬ ಉಪನಿಷದ್ವಾಕ್ಯ ಇದನ್ನೇ ಹೇಳುತ್ತದೆ. ಅದರ ಜೊತೆಗೆ, ಆಚಾರ್ಯನನ್ನು ಯಾವ ರೀತಿ ಸಮೀಪಿಸಿ ಯಾವ ವಿಧದಲ್ಲಿ ಜ್ಞಾನವನ್ನು ಪಡೆಯಬೇಕು—ಎಂಬುದನ್ನೂ ವೇದವೂ ಸ್ಮೃತಿಗಳೂ ವಿವರಿಸುತ್ತವೆ.

"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ
ಶ್ರೋತ್ರಿಯಂ ಬ್ರಹ್ಮನಿಷ್ಠಂ"

(ತತ್ತ್ವಜ್ಞಾನವನ್ನು ಪಡೆಯುವುದಕ್ಕಾಗಿ ಶಿಷ್ಯನು ಸಮಿತ್ತನ್ನು ಕೈಯಲ್ಲಿ ಹಿಡಿದುಕೊಂಡು, ವೇದಶಾಸ್ತ್ರಗಳನ್ನರಿತವನೂ, ಬ್ರಹ್ಮ ಸ್ಥಿತಿಯಲ್ಲಿರುವವನೂ ಆದ ಗುರುವಿನ ಹತ್ತಿರ ಹೋಗಬೇಕು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವಿನ ಹತ್ತಿರ ಹೋದ ಬೇಕ,

"ಶ್ರೋತವ್ಯೋ ಮಂತ್ರವ್ಯೋ ನಿದಿಧ್ಯಾಸಿತವ್ಯಃ"

(ಗುರುವಿನ ಮೂಲಕ ಬ್ರಹ್ಮತತ್ತ್ವವನ್ನು ಕೇಳಬೇಕು. ಅದನ್ನೇ ಮನಸ್ಸಿನಲ್ಲಿ ನೆನೆಯಬೇಕು; ನೆನೆದದ್ದನ್ನೇ ಮತ್ತೆ ಮತ್ತೆ ಧ್ಯಾನಮಾಡುತ್ತಲೇ ಇರಬೇಕು.)

ಕೃಷ್ಣ ಭಗವಂತನೂ ಈ ರೀತಿ ಹೇಳುತ್ತಾನೆ :

"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಃ ತತ್ತ್ವದರ್ಶಿನಃ॥"

(ಆಚಾರ್ಯರನ್ನು ಸಾಷ್ಟಾಂಗವಾಗಿ ನಮಸ್ಕರಿಸಿ, ತಕ್ಕ ಸಮಯದಲ್ಲಿ ಆಡಿಗಡಿಗೆ ಪ್ರಶ್ನೆಗಳನ್ನು ಕೇಳುತ್ತ, ಅವರಿಗೆ ಸೇವೆ ಮಾಡುತ್ತ ಜ್ಞಾನೋಪ ವನ್ನು ಪಡೆಯಬೇಕು. ಈ ರೀತಿ ನಡೆದಲ್ಲಿ, ತತ್ತ್ವಜ್ಞಾನವನ್ನು ಪಡೆದ ಮಹಾತ್ಮರು ನಿನಗೆ ಜ್ಞಾನೋಪದೇಶ ಮಾಡುತ್ತಾರೆ).

ಈ ರೀತಿಯ ಗುರುಶಿಷ್ಯಭಾವವನ್ನು ಸ್ಪಷ್ಟವಾಗಿ ವಿವರಿಸುವುದರಲ್ಲಿ ಆದಿಶಂಕರರ ಸೇವೆ ಪ್ರಥಮ ಶ್ರೇಣಿಯದಾಗಿದೆ. ಎಂಟು ಶ್ಲೋಕಗಳಿಂದ ಕೂಡಿದ **"ಗುರ್ವಷ್ಟಕಮ್"** ಎಂಬ ಸ್ತೋತ್ರವನ್ನು ಇವರು ರಚಿಸಿದ್ದಾರೆ. ಐಶ್ವರ್ಯ, ಭೋಗ, ಹೆಂಡತಿ, ಮಕ್ಕಳು, ಕೀರ್ತಿ, ಪದವಿ, ವೇದಜ್ಞಾನ, ಶಾಸ್ತ್ರಜ್ಞಾನ—ಎಲ್ಲಾ ಒಟ್ಟಿಗೆ ಸೇರಿದ್ದರೂ ಕೂಡ ಆಚಾರ್ಯನ ಪಾದಗಳಲ್ಲಿ ಮನಸ್ಸು ಹೋಗದೆ ಇದ್ದರೆ, ಏನೊಂದೂ ಫಲವಿಲ್ಲ—ಎಂಬ ಅರ್ಥವುಳ್ಳ ಅವರ ಎಂಟು ಶ್ಲೋಕಗಳು ಗುರುವಿನ ಮಹಿಮೆಯನ್ನು ಸೊಗಸಾಗಿ ಎತ್ತಿ ಹೇಳುತ್ತವೆ.

"ಷಡಂಗಾದಿ ವೇದೋ ಮುಖೇ ಶಾಸ್ತ್ರವಿದ್ಯಾ
ಕವಿತ್ವಾದಿ ಗದ್ಯಂ ಸುಪದ್ಯಂ ಕರೋತಿ ।
ಮನಶ್ಚೇನ್ನ ಲಗ್ನಂ ಗುರೋರಂಘ್ರಿ ಪದ್ಮೇ
ತತಃ ಕಿಂ, ತತಃ ಕಿಂ, ತತಃ ಕಿಂ, ತತಃ ಕಿಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಆರು ಅಂಗಗಳೇ ಮೊದಲಾದವು, ವೇದಗಳು, ಶಾಸ್ತ್ರವಿದ್ಯೆಗಳು —ಎಲ್ಲವೂ ಬಾಯಲ್ಲೇ ನೆಲಸಿದೆ. ಕವಿತ್ವ ಮಾಡುತ್ತಾನೆ. ಒಳ್ಳೊಳ್ಳೆಯ ಗದ್ಯಪದ್ಯ ಗಳನ್ನು ರಚಿಸುತ್ತಾನೆ. ಇಷ್ಟಾದರೂ ಮನಸ್ಸು ಗುರುವಿನ ಪಾದಪದ್ಮದಲ್ಲಿ ನೆಲಸಲಿಲ್ಲವಾದರೆ, ಅದರಿಂದೇ ? ಆದರಿಂದೇನು ? ಅದರಿಂದೇನು ? ಅದ ರಿಂದೇನು ?)

"ಉಪದೇಶ ಸಾಹಸ್ರಿ"ಯೆಂಬ ಗ್ರಂಥದಲ್ಲಿಯೂ ಗುರುಶಿಷ್ಯಲಕ್ಷಣ ಗಳನ್ನು ಚೆನ್ನಾಗಿ ತಿಳಿಯುವಂತೆ ತಿಳಿಯಾಗಿ ಹೇಳುತ್ತಾರೆ. ಆದಿಶಂಕರರು ಗುರು ಶಿಷ್ಯನಿಗೆ ಉಪದೇಶ ಮಾಡಬೇಕಾದ ಕ್ರಮವನ್ನು ವಿವರಿಸುವ ಶಂಕರರ "ಉಪದೇಶಪಂಚಕಮ್" ಎಂಬ ಹೆಸರಿನ ಐದು ಶ್ಲೋಕಗಳು ಐದು ರತ್ನ ಗಳಾಗಿ ಪ್ರಕಾಶಿಸುತ್ತಿವೆ. ಮುಂದಿನ ಕಾಲದ ಆಚಾರ್ಯ ಸಂತತಿಗೆ ಇದೊಂದು ಬೊಕ್ಕಸವಾಗಿದೆ. ಅವರು ತಮ್ಮ ಶಿಷ್ಯರುಗಳಿಗೆ ಉಪದೇಶಿಸಬೇಕಾದ ವಿಷಯ ಗಳನ್ನು ಸಂಗ್ರಹವಾಗಿ ತಿಳಿಸುವುದಕ್ಕಾಗಿ ರಚಿತವಾಗಿದೆ.

"ಕರ್ಮವನ್ನು ಮಾಡಬೇಕು. ಆದರೆ ಫಲವನ್ನು ಬಯಸಿ ಮಾಡ ಕೂಡದು. ಶಾಸ್ತ್ರ ವಿಚಾರ ಮಾಡು. ಆದರೆ, ಫಲವಿಲ್ಲದ ಶಾಸ್ತ್ರ ವಿಚಾರದಲ್ಲಿ ಇಳಿಯಬೇಡ. ಉಂಛವೃತ್ತಿಯಿಂದ ಆಹಾರವನ್ನು ಸ್ವೀಕರಿಸು. ಅದನ್ನೂ ಔಷಧಿಯ ಹಾಗೆ ಸ್ವಲ್ಪ ಸ್ವಲ್ಪವಾಗಿಯೇ ತೆಗೆದುಕೊ"—ಎಂದು ಯಾವು ದಕ್ಕೂ ಒಂದು ಮಿತಿಯನ್ನು ಹೇಳಿ, ಮುಂದಿನ ಕಾಲದ ಶಿಷ್ಯಸಂತತಿಗೆ ತಾವೇ ಲೋಕಾಚಾರ್ಯರಾಗಿಯೂ ಇದ್ದು ಸರ್ವರಿಗೂ ಅನ್ವಯುವಾಗುವಂತೆ ಒಟ್ಟಾಗಿ ಉಪದೇಶ ಮಾಡಿದ್ದಾರೆ ಆದಿಶಂಕರರು.

"ಸದ್ವಿದ್ವಾನುಪಸೃಪ್ಯತಾಂ ಪ್ರತಿದಿನಂ ತತ್ಪಾದುಕಾ ಸೇವ್ಯತಾಂ
ಬ್ರಹ್ಮೈಕಾಕ್ಷರಮರ್ಥ್ಯತಾಂ ಶ್ರುತಿಶಿರೋವಾಕ್ಯಂ ಸಮಾಕರ್ಣ್ಯತಾಂ ॥"

(ಬ್ರಹ್ಮಜ್ಞಾನಿಯ ಹತ್ತಿರ ಹೋಗಿ, ಅವರ ಪಾದುಕೆಗಳಿಗೆ ನಮಸ್ಕಾರ ಮಾಡಿ, ಪರಬ್ರಹ್ಮವನ್ನು ಪಡೆಯುವ ಮಾರ್ಗವನ್ನು ಕೇಳಿ ತಿಳಿದುಕೊಂಡು, ಆವರಿಂದ ಮಹಾವಾಕ್ಯವನ್ನು ಉಪದೇಶವಾಗಿ ಪಡೆಯಬೇಕು.)

•

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ, ಉಪದೇಶ ಪಂಚಕದ ಮೂರನೆಯ ಶ್ಲೋಕದಲ್ಲಿ ಆಚಾರ್ಯೋಪದೇಶವಾಗಿ ಪಡೆಯುವ ಬ್ರಹ್ಮವಿದ್ಯೆಯೇ ಮುಕ್ತಿ ನೀಡಬಲ್ಲದು—ಎಂದು ಹೇಳಿ, ಆಚಾರ್ಯೋಪದೇಶವು ಅತ್ಯಂತಾವಶ್ಯಕವೆಂಬುದನ್ನು ಶಿಷ್ಯರಾದ ನಮಗೆ ಉಪದೇಶಿಸಿ ಅನುಗ್ರಹಿಸಿದ್ದಾರೆ.

ಎಲ್ಲವನ್ನೂ ಬಲ್ಲವರಾದ ಶಂಕರರೂ ಒಬ್ಬ ಗುರುವನ್ನು ಹುಡುಕಿಕೊಂಡು ಹೋದರು. ಸಾಕ್ಷಾತ್ ಪರವಸ್ತುವೇ ಆದ ಶ್ರೀಕೃಷ್ಣನೂ ಸಾಂದೀಪಿನಿ ಮುನಿಗಳನ್ನು ಆಚಾರ್ಯರಾಗಿ ಮಾಡಿಕೊಂಡು ವಿದ್ಯೆ ಕಲಿತನು. ಏಕಲವ್ಯನು ಆಚಾರ್ಯಭಕ್ತಿಯಿಂದಲೇ ಬಿಲ್ವಿದ್ಯೆಯಲ್ಲಿ ಸಾಮರ್ಥ್ಯ ಪಡೆದನು—ಎಂದಮೇಲೆ, 'ಗುರುವಿನ ಮೂಲಕವಾಗಿಯೇ ಸಕಲ ವಿದ್ಯೆಗಳನ್ನೂ ಕಲಿಯಬೇಕು; ಅದೇ ಮುಕ್ತಿಯನ್ನು ನೀಡಬಲ್ಲದು'—ಎಂಬ ಸತ್ಯವನ್ನು ಕಥೆಯ ಮೂಲಕವಾಗಿಯೂ ಹಿಂದಿನವರ ಚರಿತ್ರೆಯ ಮೂಲಕವಾಗಿಯೂ ಸಕಲ ಶಾಸ್ತ್ರ ಇತಿಹಾಸಗಳೂ ನಮಗೆ ತಿಳಿಯಪಡಿಸುತ್ತವೆ.

ತಾವೇ ನೇರವಾಗಿ ಶಾಸ್ತ್ರಗಳನ್ನು ಅಭ್ಯಾಸಮಾಡಿ ಪರತತ್ತ್ವವನ್ನು ಅರಿಯುವುದು ಬಹು ಕಠಿನ. ಕಠಿನವಾದ ಒಂದೊಂದು ಶಾಸ್ತ್ರವೂ ಬೇರೆ ಬೇರೆ ಮಾರ್ಗದಲ್ಲಿ ನಮ್ಮನ್ನು ಎಳೆದುಕೊಂಡು ಹೋಗಿ ಗೊಂದಲದಲ್ಲಿ ಮುಳುಗಿಸಿಬಿಡುತ್ತದೆ. ಅದರಿಂದ, ಯಾವುದನ್ನೂ ಹೀಗೇ ಸರಿಯೆಂದು ತಿಳಿದುಕೊಳ್ಳಲಾರದ ನೆಲೆಯನ್ನು ತಲುಪಿ ಸಂಕಟಪಡುತ್ತೇವೆ. ಸ್ವಂತ ಪ್ರಯತ್ನಗಳೆಲ್ಲವನ್ನೂ ಬಿಟ್ಟುಬಿಟ್ಟು ಗುರು ಉಪದೇಶಿಸಿದ ಮಾರ್ಗದಲ್ಲಿ ಮುಂದುವರಿದು ಪರವಸ್ತುವನ್ನು ಸೇರಿ ಸದ್ಗತಿ ಪಡೆಯಬೇಕು. ಕಠಿನವಾದ ಶಾಸ್ತ್ರಗಳನ್ನು ಕಲಿಯುವುದರಲ್ಲಿ ವ್ಯರ್ಥವಾಗಿ ತೊಡಗಬಾರದು.

"ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನಕಾರಣಮ್ ।
ಉಪದೇಶಾತ್ ಹರಿಂ ಬುಧ್ವಾ ವಿರಮೇತ್ ಸರ್ವಕರ್ಮಸು ॥"

(ಶಾಸ್ತ್ರಜ್ಞಾನವು ಬಹು ಕ್ಲೇಶಕರವಾದದ್ದು; ಬುದ್ಧಿ ಹಲವು ಕಡೆ ಹರಿಯುವಂತೆ ಮಾಡಲು ಕಾರಣವಾಗುತ್ತದೆ. ಗುರೂಪದೇಶದಿಂದ ಹರಿಯನ್ನರಿತುಕೊಂಡು, ಸರ್ವಕರ್ಮಗಳನ್ನೂ ಬಿಟ್ಟುಬಿಡಬೇಕು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆಂದು ಹೇಳಿ ದೊಡ್ಡವರೂ ಮೇಲೆ ಹೇಳಿದ ಮಾತನ್ನೆ ಸಮರ್ಥಿಸಿದ್ದಾರೆ. ಶ್ರುತಿ, ಸ್ಮೃತಿ ವಾಕ್ಯಗಳಿಂದ ಮೋಕ್ಷಸಾಧನವಾದ ಜ್ಞಾನವನ್ನು ಮೊದಲು ಆಚಾರ್ಯರಿಂದ ಪಡೆದುಕೊಳ್ಳಬೇಕು--ಎಂಬುದು ಸ್ಪಷ್ಟವಾಯಿತು.

ಈ ಆಚಾರ್ಯರುಗಳು ಏತಕ್ಕೆ ? ಭಗವಂತನ ಅನುಗ್ರಹವೂ ಶಾಸ್ತ್ರಗಳ ಸಹಾಯವೂ ಮಾತ್ರವೇ ಇದ್ದರೆ ಸಾಲದೋ ?— ಎಂಬ ಪ್ರಶ್ನೆಗೆ ಉತ್ತರವಾಗಿ ಹೇಳುವುದು, "ಆಚಾರ್ಯರೂ ಭಗವಂತನ ಅವತಾರವೇ" ಎಂದು. ಈ ವಿಷಯವನ್ನು ,

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥"

(ಗುರುವೇ ಬ್ರಹ್ಮ; ಗುರುವೇ ವಿಷ್ಣು; ಗುರುವೇ ದೇವ ಮಹೇಶ್ವರ; ಗುರುವೇ ಪ್ರತ್ಯಕ್ಷ ಪರಬ್ರಹ್ಮ . ಅಂಥ ಗುರುವಿಗೆ ನಮಸ್ಕಾರ.)

ಎಂಬಂಥ ವಾಕ್ಯಗಳು ಪ್ರತಿಪಾದಿಸುತ್ತವೆ.

ಅಜ್ಞಾನದಲ್ಲಿ ಮುಳುಗಿರುವ ಜೀವರುಗಳನ್ನು ದಡಹತ್ತಿಸುವುದಕ್ಕಾಗಿ ಪರಬ್ರಹ್ಮವೇ ಜ್ಞಾನಗುರುವಾಗಿ ಅವತಾರ ಮಾಡುತ್ತದೆಯೆಂಬುದು ವೈದಿಕ ಸಂಪ್ರದಾಯ. ಇದಕ್ಕನುಸಾರವಾಗಿ ಅನಾದಿ ಕಾಲದಿಂದಲೂ ಪರಮೇಶ್ವರನೇ ಮೊದಲಾಗಿ ಜ್ಞಾನಾಚಾರ್ಯ ಪರಂಪರೆ ಲೋಕದಲ್ಲಿ ಉದಿಸಿ ಎಡೆಬಿಡದೆ ನಿರಂತರವಾಗಿ ಹರಿದು ಬರುತ್ತಿದೆ. ಆ ಪರಂಪರೆಯಲ್ಲಿ ಪರಮೇಶ್ವರನಿಗೆ ಎರಡನೆಯವರಾಗಿ ಬಂದ ಪರಮಾಚಾರ್ಯರು ಶ್ರೀ ಶಂಕರ ಭಗವತ್ಪಾದರು.

ಇವರು ದೈವಿಕ ಜನ್ಮವನ್ನು ಪಡೆದವರು. ಆಧ್ಯಾತ್ಮಿಕ ಅಭಿವೃದ್ಧಿಗೆ ಅಡಿಪಾಯ ಹಾಕಿದವರು. ಪರರ ತರ್ಕವಾದಗಳನ್ನು ಮುರಿದೊಗೆಯುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾ ತಾರ್ಕಿಕರು. ಉಪನಿಷತ್ಸಿದ್ಧಾಂತವಾದ ಅದ್ವೈತವನ್ನು ಲೋಕದಲ್ಲಿ ನೆಲೆನಿಲ್ಲಿಸಿದ ಮಹಾಜ್ಞಾನಿ.

ಲೋಕಾಚಾರ್ಯರಾದ ಶ್ರೀ ಆದಿಶಂಕರರು, 'ಗುರುಶಿಷ್ಯ ಪರಂಪರೆಯು ಲೋಕದಲ್ಲಿ ಅಳಿದು ಹೋಗದೆ ನಿರಂತರವಾಗಿ ಬೆಳೆಯುತ್ತಿರಬೇಕು; ಅದರಿಂದ ಭವಿಷ್ಯತ್ಕಾಲದ ಸಂತತಿಗಳು ತತ್ತ್ವಜ್ಞಾನವನ್ನು ಪಡೆದು ಸದ್ಗತಿ ಪಡೆಯಬೇಕು'—ಎಂಬ ವಿಶಾಲ ಭಾವನೆಯಿಂದ ನಾಲ್ಕು ಪೀಠಗಳನ್ನು ಸ್ಥಾಪನೆ ಮಾಡಿದರು. ಅವುಗಳಲ್ಲಿ ಅಗ್ರಗಣ್ಯವಾಗಿ ಬೆಳಗುವುದು ಶೃಂಗೇರಿಯ ಶ್ರೀ ಶಾರದಾಪೀಠ. ಶ್ರೀ ಶಂಕರರು ಶ್ರೀ ಶಾರದಾದೇವಿಯನ್ನು ತಮ್ಮ ಶ್ರೀಕರದಿಂದಲೇ ಶೃಂಗೇರಿಯಲ್ಲಿ ಸ್ಥಾಪನೆ ಮಾಡಿದರೆಂದರೆ ಅದಕ್ಕಿಂತ ಈ ಮಠಕ್ಕೆ ಯಾವ ಹೆಚ್ಚುಗಾರಿಕೆ ಬೇಕಾಗಿದೆ? ಅದರ ಜೊತೆಗೆ, ಶ್ರೀ ಸುರೇಶ್ವರಾಚಾರ್ಯರನ್ನು ಮೊದಲನೆಯ ಪೀಠಾಧಿಪತಿಯಾಗಿಯೂ, ತಮ್ಮ ತಪೋಬಲದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ ಮಹಾ ಜ್ಞಾನಿಗಳಾದ ಶ್ರೀ ವಿದ್ಯಾರಣ್ಯರನ್ನು ಅನಂತರ ಕಾಲದಲ್ಲಿನ ಪೀಠಾಧಿಪತಿಯಾಗಿಯೂ ಪಡೆದಿರುವ ಈ ಶ್ರೀ ಶಾರದಾ ಪೀಠವು ಎಲ್ಲಾ ರೀತಿಯಿಂದಲೂ ಮಹಿಮೆ ಹೊಂದಿರುವುದು—ಎಂಬುದಕ್ಕೆ ಇದೂ ಒಂದು ಸಾಕ್ಷಿಯಾಗಿದೆ.

ಸರ್ವಜ್ಞ ಪೀಠವೆಂದು ಕೀರ್ತಿ ಹೊಂದಿದ ಈ ಪೀಠವನ್ನು ಶ್ರೀ ಸುರೇಶ್ವರಾಚಾರ್ಯರು ಮೊದಲುಗೊಂಡು ಇಂದಿನವರೆಗೂ ಅಲಂಕರಿಸುತ್ತ ಬಂದ ಎಲ್ಲಾ ಆಚಾರ್ಯರುಗಳೂ ಪೀಠದ ಹೆಸರಿಗೆ ತಕ್ಕಂತೆ ಸರ್ವಜ್ಞರಾಗಿಯೂ, ಹುಟ್ಟಿನಲ್ಲಿಯೇ ಜೀವನ್ಮುಕ್ತ ಸ್ಥಿತಿಯನ್ನು ಪಡೆದವರಾಗಿಯೂ, ಜ್ಞಾನವೈರಾಗ್ಯಶೀಲರಾಗಿಯೂ, ಎಲ್ಲಾ ಆಚಾರ್ಯ ಲಕ್ಷಣಗಳಿಂದ ಕೂಡಿದವರಾಗಿಯೂ, ತಪೋಬಲ ಹೊಂದಿದವರಾಗಿಯೂ ಪ್ರಕಾಶಿಸುತ್ತ ಬರುತ್ತಿದ್ದಾರೆ.

ತಮ್ಮ ತಪೋಬಲದಿಂದ ಕಾಲಟಿ ಕ್ಷೇತ್ರದಲ್ಲಿ ಆದಿಶಂಕರರ ಅವತಾರ ಸ್ಥಳವನ್ನು ಕಂಡುಹಿಡಿದು ಅಲ್ಲಿ ಅವರಿಗೊಂದು ಆಲಯವನ್ನೂ ನಿರ್ಮಿಸಿದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳನ್ನೂ (೩೩), ಅಂತರ್ಮುಖವಾಗಿ ಯಾವಾಗಲೂ ಯೋಗ ನೆಲೆಯಲ್ಲಿದ್ದುಕೊಂಡೇ ತಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಪಾಕಟಾಕ್ಷದಿಂದ ಎಲ್ಲರನ್ನೂ ಉಜ್ಜೀವಿಸುತ್ತ ಬಂದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳನ್ನೂ (೩೪) ಪೀಠಾಧಿಪತಿಗಳಾಗಿ ಪಡೆದ ಈ ಪುನೀತವಾದ ಮಠವು ಎಲ್ಲಾ ವಿಧದಲ್ಲಿಯೂ ಶ್ರೇಷ್ಠವಾದದ್ದೆಂಬುದನ್ನು ಎಲ್ಲರೂ ಬಲ್ಲರು.

ಈಗ ಶೃಂಗೇರಿಯಲ್ಲಿ ೩೫ನೆಯ ಪೀಠಾಧಿಪತಿಗಳಾಗಿ ಬೆಳಗುತ್ತಿರುವ ಶ್ರೀಮತ್ ಅಭಿನವ ವಿದ್ಯಾತೀರ್ಥಸ್ವಾಮಿಗಳ ಚರಿತ್ರೆಯನ್ನು ವಿವರವಾಗಿ ಹೇಳುತ್ತದೆ ಈ ಗ್ರಂಥ. ಇದು ೧೪ ಅಧ್ಯಾಯಗಳುಳ್ಳದ್ದು. ೩೨ನೆಯ ಪಟ್ಟ (ಶ್ರೀ ನೃಸಿಂಹಭಾರತೀ ಸ್ವಾಮಿಗಳು), ೩೩ನೆಯ ಪಟ್ಟ (ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳು), ೩೪ನೆಯ ಪಟ್ಟ (ಶ್ರೀ ಚಂದ್ರ ಶೇಖರ ಭಾರತೀ ಸ್ವಾಮಿಗಳು)—ಈ ಪೂರ್ವಾಚಾರ್ಯರುಗಳ ಚರಿತ್ರೆಯನ್ನೂ, ಅವರು ನಡಸಿದ ಅದ್ಭುತ ಸಾಧನೆಗಳನ್ನೂ ತಪೋನೆಲೆಯಲ್ಲಿದ್ದುಕೊಂಡೇ ಶಿಷ್ಯರನ್ನು ಅನುಗ್ರಹಿಸಿದ ಬಗೆಯನ್ನು ಸಂಗ್ರಹವಾಗಿ ಹೇಳಿದ್ದಾರೆ ಗ್ರಂಥ ಕರ್ತರು ಮೊದಲ ಭಾಗದಲ್ಲಿ.

ಶ್ರೀ ಮದಭಿನವ ವಿದ್ಯಾತೀರ್ಥ ಸ್ವಾಮಿಗಳ ಬಾಲ್ಯ ಚರಿತ್ರೆ, ತಮ್ಮ ಗುರುಗಳಿಗೆ ೨೩ ವರ್ಷಕಾಲ ಮಾಡುತ್ತ ಬಂದ ಸೇವೆ, ಇವರು ಮಾಡಿದ ಐದು* ಯಾತ್ರೆಗಳ ವಿವರಗಳು, ಈ ಆಚಾರ್ಯರ ಅನುಗ್ರಹದಿಂದ ಭಕ್ತರುಗಳು ಪಡೆದ ಸಕಲ ವಿಧ ಮೇಲ್ಮೆಗಳು—ಇವೆಲ್ಲ ಈ ಗ್ರಂಥದ ಎರಡನೆಯ ಭಾಗದಲ್ಲಿ ಎಡೆಪಡೆದಿವೆ.

ಮೂರನೆಯ ಭಾಗದಲ್ಲಿ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಬೆಂಗಳೂರಿನಲ್ಲಿ ೧೯೧೭ರಲ್ಲಿ ಅವತರಿಸಿ ಬಾಲ್ಯದಲ್ಲಿಯೇ ಯಾವುದರಲ್ಲೂ ತನ್ನದೆಂಬ ಆಸಕ್ತಿಯಿಲ್ಲದೆ, ದೈವ ಚಿಂತನೆಯಿಂದಲೂ ಆಸ್ತಿಕ್ಯ ಬುದ್ಧಿಯಿಂದಲೂ ತಮ್ಮ ಒಡನಾಡಿಗಳೊಡನೆ ಆತ್ಮವಿಚಾರ ಮಾಡುವುದರಲ್ಲಿಯೇ ಅಕ್ಕರೆಯುಳ್ಳವರಾಗಿಯೂ, ದಯೆ, ತಾಳ್ಮೆ ಮೊದಲಾದ ಸದ್ಗುಣಗಳಿಂದ ಕೂಡಿದವರಾಗಿಯೂ ಪ್ರಕಾಶಿಸುತ್ತಿದ್ದರು — ಎಂಬುದನ್ನು ಸ್ವಾಮಿಗಳ ಬಾಲ್ಯಕಾಲದ ಕೆಲವು ಸಂಗತಿಗಳ ಮೂಲಕ ಸ್ಪಷ್ಟಪಡಿಸುತ್ತಾರೆ ಗ್ರಂಥಕರ್ತರು.

---

* ಆರನೆಯ ಯಾತ್ರೆಯೂ ಈ ಮುದ್ರಣದಲ್ಲಿ ಸೇರಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri
ಬಹುಮಟ್ಟಿಗೆ, ಮುಂದೆ ಜ್ಞಾನಿಗಳಾಗುವವರ ನಡವಳಿಕೆ ಬಾಲ್ಯದಲ್ಲಿಯೇ ರೂಪುಗೊಳ್ಳುವುದೆಂಬುದನ್ನು ನಾವು ಹಲವಾರು ಮಹಾತ್ಮರ ವಿಷಯದಲ್ಲಿ ಪ್ರತ್ಯಕ್ಷವಾಗಿ ಕಂಡಿರುವೆವಲ್ಲವೆ!

ಜೊತೆಯ ಹುಡುಗರೊಡನೆ ಆಟವಾಡುವ ಕಾಲದಲ್ಲಿ ಪಿಶಾಚಿಯಿದ್ದ ಕೊಳಕ್ಕೆ ಧೈರ್ಯವಾಗಿ ಹೋಗಿ ರಾಮನಾಮದಿಂದ ಅದು ಅಲ್ಲಿಂದ ಹೊರಟು ಹೋಗುವಂತೆ ಮಾಡಿದ್ದು; ಸುಳ್ಳು ಹೇಳಿದ ಹುಡುಗನನ್ನು ಹೊಡೆದು ತಿದ್ದಿದ್ದು; ಹಲವು ಸಾಹಸ ಕಾರ್ಯಗಳನ್ನು ಮಾಡಿಯೂ, ಏಟು ತಿಂದೂ, ಅಹಿಂಸೆಯಲ್ಲಿಯೂ ಸತ್ಯದಲ್ಲಿಯೂ ತಮಗಿರುವ ಗಾಢಾನುರಾಗವನ್ನು ಬೆಳಗಿದ್ದು; ಗಣಪತಿ ವಿಗ್ರಹವನ್ನು ಯಾವಾಗಲೂ ಆರಾಧಿಸುತ್ತಿದ್ದದ್ದು; 'ನೀನು ದೊಡ್ಡವನಾದ ಮೇಲೆ ಏನು ಮಾಡುತ್ತೀಯ?' ಎಂದು ಒಬ್ಬ ಹುಡುಗ ಕೇಳಿದ್ದಕ್ಕೆ, 'ನಾನು ದೇವರನ್ನು ನೋಡುವುದಕ್ಕೆ ಪ್ರಯತ್ನ ಮಾಡುತ್ತೇನೆ' ಎಂದು ಬಾಲ್ಯದಲ್ಲಿಯೇ ಉತ್ತರ ಹೇಳಿದ್ದು; ಹಿಡಿ ತುಂಬ ಹಸಿರು ಮೆಣಸಿನಕಾಯಿ ತಿಂದು ತಮ್ಮ ಶಪಥವನ್ನು ನೆರವೇರಿಸಿದ್ದು; ಶ್ರೀ ನರಸಿಂಹಶಾಸ್ತ್ರಿಯೆಂಬ ಹೆಸರಿನಿಂದ ಬಾಲ್ಯದಲ್ಲಿ ಕರಸಿಕೊಳ್ಳುತ್ತಿದ್ದ ಇವರ ಇಂಥವೇ ಹಲವು ಬಾಲ್ಯ ಸಂಗತಿಗಳು ಇಲ್ಲಿ ಮುಖ್ಯವಾಗಿ ನೆನಪಿಡತಕ್ಕವು.

ಇದನ್ನು ಓದುವಾಗ, ಆ ಕಾಲದಲ್ಲಿ ನಾವೂ ಆ ಹುಡುಗರ ಜೊತೆ ಒಬ್ಬರಾಗಿದ್ದು ಆ ಮಹಾತ್ಮನೊಡನೆ ಕಲೆತು ಬಾಳುವ ಭಾಗ್ಯವನ್ನು ಪಡೆಯಲಿಲ್ಲವಲ್ಲಾ ಎಂದು ಒಂದು ಕಡೆ ಸಂಕಟವೂ, ಆ ರೀತಿಯಿದ್ದ ಮಹಾತ್ಮನನ್ನು ಈಗ ನಾವು ಕಣ್ಣಾರ ಕಂಡು ಸಂತೋಷಪಡುತ್ತಿದ್ದೇವಲ್ಲಾ ಎಂದು ಮತ್ತೊಂದು ಕಡೆ ಆನಂದವೂ, ನಮಗೆ ಒಂದಾದ ಮೇಲೊಂದರಂತೆ ಮತ್ತೆ ಮತ್ತೆ ಬರುತ್ತಿರುತ್ತವೆ. ಸುಮಾರು ೩೮ ವರ್ಷಗಳಿಗೆ ಹಿಂದೆ ಅಂದು ನಡೆದ ಸಂಗತಿಗಳನ್ನು ಶಬ್ದ ಚಿತ್ರವಾಗಿ ರಚಿಸಿ ನಮ್ಮ ಕಣ್ಮುಂದೆ ತಂದು ನಿಲ್ಲಿಸುತ್ತಾರೆ ಈ ಗ್ರಂಥಕರ್ತರು.

ಈ ಮಹಾತ್ಮರು ಆಶ್ರಮಸ್ವೀಕಾರ ಮಾಡಿದ ಮೇಲೆ ತಮ್ಮ ಆಚಾರ್ಯರಿಗೆ ಸೇವೆ ಮಾಡುತ್ತಲೇ ಮಠದ ನಿರ್ವಾಹವನ್ನೂ ಕ್ರಮಪ್ರಕಾರವಾಗಿ ನಡಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು, ಸದ್ಗ್ರಂಥ ಕಾಲಕ್ಷೇಪದ ಮೂಲಕ ತಮ್ಮ ಕರ್ತವ್ಯಗಳನ್ನು ನಡಸುತ್ತ ಬಂದರು. ೨೩ ವರ್ಷ ಕಾಲ ಇವರ ಆಚಾರ್ಯರು ಇವರನ್ನು ಪ್ರೀತಿಯಿಂದ ಅನುಗ್ರಹಿಸಿದ ರೀತಿ, ಆಚಾರ್ಯರ ಕೃಪೆಯಿಂದ ಇವರು ಎಲ್ಲಾ ಬಲ್ಮೆಗಳನ್ನೂ ಪಡೆದುಕೊಂಡ ಬಗೆ ಶಿಷ್ಯರಿಗೆ ಜ್ಞಾನೋಪದೇಶ ಮಾಡುತ್ತ ಬಂದ ರೀತಿ — ಇಂತಹ ವಿಷಯಗಳನ್ನು ಹಲವು ಬಗೆಗಳಲ್ಲಿ ಚಿತ್ರಿಸುತ್ತಾರೆ ಈ ಗ್ರಂಥಕಾರರು ನಾಲ್ಕನೆಯ ಭಾಗದಲ್ಲಿ.

ಆಗ ಒಂದು ದಿನ ಉತ್ತರ ಪ್ರದೇಶದ ಪಂಡಿತರೊಬ್ಬರು ತಮಗಿದ್ದ ಒಂದು ಸಂದೇಹವನ್ನು ಪರಿಹರಿಸಿಕೊಳ್ಳಬೇಕೆಂದು ಮಹಾಸನ್ನಿಧಾನದ ಹತ್ತಿರ ಹೋದಾಗ, ಗುರುಕಟಾಕ್ಷದಿಂದ ಶಾಸ್ತ್ರಸಾಮರ್ಥ್ಯವನ್ನು ಪಡೆದ ಕಿರಿಯ ಸನ್ನಿಧಾನವು ಗುರುವಿನ ಆಜ್ಞೆಯ ಪ್ರಕಾರ ಆ ತರ್ಕ ಪಂಡಿತರ ಸಂದೇಹಗಳನ್ನು ಹಲವಾರು ಯುಕ್ತಿಗಳನ್ನು ಎತ್ತಿ ಹೇಳಿ ಪರಿಹಾರ ಮಾಡಿದ್ದು, ಮೊದಲಾದ ಘಟ್ಟಗಳನ್ನು ಓದುವಾಗ ನಮಗೆ ನಿಜವಾಗಿಯೂ ಮೈ ರೋಮಾಂಚಗೊಳ್ಳುತ್ತದೆ.

೧೯೩೧ ರಿಂದ ೧೯೫೪ರ ವರೆಗಿನ ಶೃಂಗೇರಿಗೇ ಗ್ರಂಥಕರ್ತರು ನಮ್ಮನ್ನು ಮಾನಸಿಕವಾಗಿ ಕರೆದುಕೊಂಡು ಹೋಗುತ್ತಾರೆ—ಎಂದೇ ನಮಗೆ ತೋರುತ್ತದೆ.

ಸಂಕ್ಷೇಪವಾಗಿ ಹೇಳುವುದಾದರೆ, ಅಂದು ನಡೆದ ಸಂಗತಿಗಳನ್ನು ಇಂದು ನಮ್ಮ ಕಣ್ಣ ಮುಂದೆಯೇ ನೇರವಾಗಿ ಕಾಣುವ ರೀತಿಯಲ್ಲಿ ಒಂದೊಂದು ದೃಶ್ಯವಾಗಿ ಜೋಡಿಸಿ ತೋರಿಸಿರುತ್ತಾರೋ ಈ ಗ್ರಂಥಕಾರರು ಎಂದು ತೋರುತ್ತದೆ.

೧೯೫೬ ರಿಂದ ೧೯೭೩ರ ವರೆಗೆ ಸನ್ನಿಧಾನವು ಆಸೇತು ಹಿಮಾಚಲ ಪರ್ಯಂತವೂ ಐದು ಸಲ ಪುಣ್ಯಕರವಾದ ವಿಜಯ ಯಾತ್ರೆ ಮಾಡಿ, ಹಲವು ಉಪದೇಶಗಳನ್ನು ಅನುಗ್ರಹಿಸಿ, ಅದ್ಭುತ ಸಂಗತಿಗಳನ್ನು ನಡಸಿ ಲೋಕೋಪಕಾರ ಮಾಡಿದ್ದನ್ನು ವಿವರಿಸುತ್ತದೆ ಐದನೆಯ ಭಾಗ.

•

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಸನ್ನಿಧಾನವು ಹಲವು ಭಕ್ತರ ಕನಸಿನಲ್ಲಿ ಕಾಣಿಸಿಕೊಂಡು ಅವರ ಸಂಕಟಗಳನ್ನೂ, ರೋಗಗಳನ್ನೂ, ದಾರಿದ್ರ್ಯವನ್ನೂ ಹೋಗಲಾಡಿಸಿ ಇಹದಲ್ಲಿ ಅವರಿಗೆ ಹಲವು ಮೇಲ್ಮೆಯನ್ನುಂಟುಮಾಡಿದ ಚರಿತ್ರೆಯನ್ನು 'ಅನುಬಂಧ' ಎಂಬ ಹೆಸರಿನಿಂದ ಕಡೆಯ ಭಾಗವಾಗಿ ಸೇರಿಸಲಾಗಿದೆ. ಹೀಗೆ ಎಷ್ಟೋ ಸಂಗತಿಗಳು ಅಸಂಖ್ಯವಾಗಿವೆ.

ಈ ರೀತಿಯಾದ ಎಣಿಸಲಾರದಷ್ಟು ಸಂಗತಿಗಳ ಜೊತೆಗೆ ನನ್ನ ಸ್ವಂತ ಅನುಭವದಲ್ಲಿ ಕಂಡುಬಂದ ಅನೇಕ ಸಂಗತಿಗಳನ್ನೂ ಹೇಳುವುದಕ್ಕೆ ಇಲ್ಲಿ ಎಡೆಯಿಲ್ಲ. ಆದರೂ ಶ್ರೀ ಮಹಾಸನ್ನಿಧಾನದ ಸಂಗಡ ಒಂದು ಸಲವಾದರೂ ಪಳಗಿರುವ ಯಾವ ಶಿಷ್ಯನೇ ಆದರೂ ಅವರ ದಯೆ, ಅವರೊಡನೆಯೇ ನಿಷ್ಕೃಷ್ಟವಾದ, ನಿರ್ದುಷ್ಟವಾದ ಕಟ್ಟುಪಾಡು, ಯಾವ ದೋಷವನ್ನೇ ಆದರೂ ಸಂಪೂರ್ಣವಾಗಿ ಮರೆತುಬಿಡುವ ಒಂದು ಸ್ಥಿತಿ, ಬರುವ ಶಿಷ್ಯರನ್ನು ವಾತ್ಸಲ್ಯದಿಂದ ಹತ್ತಿರ ಬರುವಂತೆ ಅವಕಾಶ ಕೊಟ್ಟು ಅವರುಗಳಿಗೆ ಮಾಡುವ ಉಪದೇಶಗಳು—ಇವೆಲ್ಲವನ್ನೂ ಗ್ರಂಥದ ಹಲವು ಅಧ್ಯಾಯಗಳಲ್ಲಿ ನಾವು ತಿಳಿದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಗ್ರಂಥಕಾರರು.

ವಾಲ್ಮೀಕಿ ಭಗವಾನರು ಪರಬ್ರಹ್ಮ ಸ್ವರೂಪಿಯಾದ ಶ್ರೀರಾಮನನ್ನು

"ಕಥಂ ಚಿತ್ ಉಪಕಾರೇಣ ಕೃತೇನೇಕೇನ ತುಷ್ಯತಿ ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ ॥

(ಅಕಸ್ಮಾತ್ತಾಗಿ ಯಾವುದಾದರೊಂದು ಉಪಕಾರ ಮಾಡಿದರೆ ಅಷ್ಟರಿಂದಲೇ ತೃಪ್ತಿ ಹೊಂದುತ್ತಾನೆ. ನೂರಾರು ಅಪಕಾರಗಳನ್ನು ಮಾಡಿದರೂ, ಅವರನ್ನು ತನ್ನಂತೆಯೇ ಭಾವಿಸಿಕೊಂಡು ಆ ಅಪಕಾರಗಳನ್ನು ನೆನೆಯುವುದೂ ಇಲ್ಲ.)

ಎಂದು ವರ್ಣಿಸಿರುವುದನ್ನು ನಮ್ಮ ಶ್ರೀ ಮಹಾಸನ್ನಿಧಾನಲ್ಲಿ ನೇರವಾಗಿ ಕಾಣಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಚಲವಾದ ಆಚಾರ್ಯ ಭಕ್ತಿಯು ಪರದಲ್ಲಿ ಮೋಕ್ಷವನ್ನೂ ಇಹದಲ್ಲಿ ಮೇಲ್ಮೆಗಳನ್ನೂ ನೀಡಬಲ್ಲದು — ಎಂಬ ಶಾಸ್ತ್ರಸತ್ಯವನ್ನು ಇದರಿಂದ ಅರಿತುಕೊಳ್ಳಬಹುದು. ಆಸ್ತಿಕರೆಲ್ಲರೂ ಈ ಗ್ರಂಥವನ್ನು ಓದಿ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಂಡು, ಅವರಲ್ಲಿ ಭಕ್ತಿಯಿಟ್ಟು ಆ ಮೂಲಕ ಸಮಸ್ತರೂ ಸದ್ಗತಿಯನ್ನು ಪಡೆಯುವುದಕ್ಕೆ ಈ ಗ್ರಂಥವು ಸಹಾಯವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಮುಂದಿನ ಪೀಳಿಗೆಯವರಿಗೆ ಇದೊಂದು ತತ್ತ್ವಗ್ರಂಥವಾಗಿಯೂ ಭಕ್ತಿಗ್ರಂಥವಾಗಿಯೂ ಶಾಸ್ತ್ರಗ್ರಂಥವಾಗಿಯೂ ಬೆಳಗಿ ಮಾರ್ಗದರ್ಶಕವಾಗುವುದೆಂದು ಧೈರ್ಯವಾಗಿ ಹೇಳಬಹುದು.

ಈ ಶ್ರೇಷ್ಠ ಗ್ರಂಥಕ್ಕೆ ಮುನ್ನುಡಿ ಬರೆಯುವ ಭಾಗ್ಯವನ್ನು ನೀಡಿದ ಈ ಗ್ರಂಥಕರ್ತರಿಗೆ ನನ್ನ ಕೃತಜ್ಞತೆಯನ್ನು ತಿಳಿಸಿ ನನ್ನ ಮಾತನ್ನು ವಿರಮಿಸುತ್ತೇನೆ.

"ನವಸುಜಾ" ವೈ. ವೈದ್ಯ ಸುಬ್ರಮಣ್ಯನ್

ಚೆನ್ನೈ ೪-೧೦-೧೯೭೫

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪೀಠಿಕೆ

ನನ್ನ ಐದನೆಯ ವಯಸ್ಸಿನಲ್ಲಿ ನನ್ನ ಮಾತಾಮಹರ ಗ್ರಾಮವಾದ ಮುಶಿರಿ ತಾಲ್ಲೂಕಿನ ತೊಟ್ಟಿಯದಲ್ಲಿ ಶೃಂಗೇರಿಯ ೩೩ನೆಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ನರಸಿಂಹಭಾರತೀ ಸ್ವಾಮಿಗಳನ್ನು ದರ್ಶಿಸುವ ಭಾಗ್ಯವನ್ನು ಪಡೆದೆ. ಆ ಬಳಿಕ ೧೯೨೪ರಲ್ಲಿ (ನನ್ನ ೨೧ನೆಯ ವಯಸ್ಸಿನಲ್ಲಿ) ನಾನು ಲಾ ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ೩೪ನೆಯ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳನ್ನು ಈರೋಡು ಮುಕ್ಕಾಮಿನಲ್ಲಿ ನವರಾತ್ರಿಯ ಸಮಯದಲ್ಲಿ ದರ್ಶನ ಮಾಡುವ ಸಂದರ್ಭ ದೊರೆಯಿತು. ಅದಾದ ಮೇಲೆ, ಆ ಮಹಾತ್ಮರನ್ನು ಬೆಂಗಳೂರಿನಲ್ಲಿಯೂ ಸಂಧಿಸಿದೆ. ಆದರೆ, ಅವರೊಡನೆ ನಿಕಟ ಸಂಬಂಧ ಪಡೆಯುವ ಭಾಗ್ಯ ದೊರೆಯಲಿಲ್ಲ.

೧೯೫೧ರಲ್ಲಿ ಶೃಂಗೇರಿಗೆ ದರ್ಶನಕ್ಕೆಂದು ನಾನು ಹೋಗಿದ್ದಾಗ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಅಂತರ್ಮುಖಿಗಳಾಗಿರುವ ಸ್ಥಿತಿಯಲ್ಲಿ ಅವರನ್ನು ದರ್ಶಿಸಿ ಅವರ ವಿಶೇಷ ಅನುಗ್ರಹವನ್ನು ಪಡೆದೆ. ಅದುಮೊದಲು ಆ ಮಹಾತ್ಮರು ಸಿದ್ಧಿ ಹೊಂದುವ ವರೆಗೂ ವರ್ಷವರ್ಷವೂ ಒಂದು ಸಲ ಅಥವಾ ಎರಡು ಸಲ ಶೃಂಗೇರಿಗೆ ಹೋಗಿ, ಅವರ ದರ್ಶನವೂ ಸಾಧಾರಣ ಮಾತಿನಲ್ಲಿಯೇ ಅಡಗಿರುವ ವೇದಾಂತೋಪದೇಶಗಳೂ ನನಗೆ ದೊರೆತವು. ಅವರು ಅಂತರ್ಮುಖದಲ್ಲಿರುವ ನೆಲೆಯಲ್ಲಿ ನಾನು ಪಡೆದ ದರ್ಶನವನ್ನೂ ಅದರ ವಿಶೇಷ ಲಾಭವನ್ನೂ ಮರೆಯಲು ಸಾಧ್ಯವೇ ಇಲ್ಲ.

ಆ ಸಮಯಗಳಲ್ಲಿ ಶೃಂಗೇರಿಯಲ್ಲಿ ಈಗ ಪೀಠವನ್ನಲಂಕರಿಸಿರುವ ಮಹಾಸನ್ನಿಧಾನದ ಬಳಿ ನಿಕಟವಾಗಿ ಪಳಗುವ ಸೌಭಾಗ್ಯ ಆ ಮಹಾತ್ಮರ ಕರುಣೆಯಿಂದ ನನಗೆ ಸಿಕ್ಕಿತು. ವರ್ಷವರ್ಷವೂ ಹಲವು ಸಲ ಶೃಂಗೇರಿಗೆ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಕಾಗಿ ಹೋದ ಸಮಯದಲ್ಲಿ ಈ ಬಳಕೆ ದೃಢವಾಯಿತು. ೧೯೫೫ರಲ್ಲಿ ಶ್ರೀ ಶಂಕರ ಸೇವಾ ಸಮಿತಿಯನ್ನು ರಚಿಸುವುದಕ್ಕೆ ಅನುಗ್ರಹ ನೀಡಿ, ಅದಕ್ಕೆ ನನ್ನನ್ನು ಕಾರ್ಯದರ್ಶಿಯಾಗಿ ನೇಮಿಸಲು ಶ್ರೀ ಗುರುಗಳು ಕರುಣಾಪೂರ್ಣ ವಾಗಿ ಆಜ್ಞೆ ಮಾಡಿದರು. ನನಗೆ ಆ ಕಾರ್ಯಕ್ಕೆ ಅವಶ್ಯವಾದ ಯೋಗ್ಯತೆ ಯಿಲ್ಲ—ಎಂದು ನನಗೆ ಗೊತ್ತಿದ್ದರೂ ಗುರುಗಳ ಅಪ್ಪಣೆಯನ್ನು ಮೀರಲಾರದೆ 'ಅವರ ಕಟಾಕ್ಷದಿಂದ ಎಲ್ಲಾ ನಡೆಯುತ್ತದೆ' ಎಂಬ ನಂಬಿಕೆಯಿಂದ ಒಪ್ಪಿ ಕೊಂಡು, ನನ್ನ ವಿಶೇಷ ಮನ್ನಣೆಗೆ ಪಾತ್ರರಾದ ಶ್ರೀಮಾನ್ ಆರ್. ಕೃಷ್ಣ ಸ್ವಾಮಿ ಅಯ್ಯರ್, (ಆ ಮುಂದೆ ಶ್ರೀ ಜ್ಞಾನಾನಂದ ಸ್ವಾಮಿಗಳು), ಶ್ರೀ ಕೆ. ಆರ್. ವೆಂಕಟರಾಮಯ್ಯರ್, (ಶ್ರೀ ಶಂಕರಕೃಪಾ, ಸಂಪಾದಕರು), ಮೊದ ಲಾದ ವಿದ್ವಾಂಸರು ಆಯಾ ಕಾಲಗಳಲ್ಲಿ ಕೊಟ್ಟ ಬುದ್ಧಿವಾದಗಳ ನೆರವಿನಿಂದ ಸಮಿತಿಯ ಕಾರ್ಯಗಳನ್ನು ನಡಸಿಕೊಂಡು ಬಂದಿದ್ದೇನೆ.

ಶ್ರೀ ಶಂಕರ ಸೇವಾ ಸಮಿತಿಯ ಉದ್ದೇಶಗಳಲ್ಲಿ ಶ್ರೀ ಆದಿಶಂಕರರ ಗ್ರಂಥ ಗಳನ್ನೂ ಉಪದೇಶಗಳನ್ನೂ ಎಲ್ಲ ಕಡೆಯೂ ಹರಡುವುದರ ಜೊತೆಗೆ, ಶೃಂಗೇರಿ ಯಲ್ಲಿ ಶ್ರೀ ಶಾರದಾಪೀಠದಲ್ಲಿ ಮಂಡಿಸಿದ ಗುರುಪರಂಪರೆಯ ಮೇಲ್ಮೆಯನ್ನು ಜನಗಳಿಗೆ ಎತ್ತಿ ತೋರಿಸುವುದೂ ಮುಖ್ಯವಾದದ್ದಾಗಿದೆ. ಈ ಉದ್ದೇಶದಿಂದ ಹಿಂದಿನ ಪೀಠಾಧಿಪತಿಗಳ ಚರಿತ್ರೆಯನ್ನೊಳಗೊಂಡ ಪ್ರಕಟಣೆಗಳನ್ನು ಓದು ವಾಗ, ಈಗ ಶೃಂಗೇರಿಯಲ್ಲಿ ೩೫ನೆಯ ಪೀಠಾಧಿಪತಿಗಳಾಗಿರುವ ಮಹಾಸನ್ನಿ ಧಾನದ ಜೀವನ ಚರಿತ್ರೆಯನ್ನು ಎತ್ತಿ ತೋರಿಸಬೇಕೆಂಬ ಆಸೆ ನನಗುಂಟಾ ಯಿತು. ಈ ಮಹಾತ್ಮರ ಜೀವನದಲ್ಲಿ ನನಗೆ ತಿಳಿದುಬಂದ ಕೆಲವು ವಿಷಯ ಗಳನ್ನು ನನ್ನ ಉಪನ್ಯಾಸಗಳಲ್ಲಿ ಹೇಳಿದೆ. ಸಾರ್ವಜನಿಕರಿಗೆ ಅವುಗಳಲ್ಲಿ ಭಕ್ತಿಯೂ ಆಸಕ್ತಿಯೂ ಉಂಟಾದದ್ದು ಕಂಡುಬಂತು. ಅದನ್ನು ಪುಸ್ತಕ ರೂಪವಾಗಿ ರಚಿಸಲು ಮನಸ್ಸಾಯಿತು. ಆದರೆ, ಆ ಪೀಠಾಧಿಪತಿಗಳ ಅನು ಮತಿಯಿಲ್ಲದೆ ಪ್ರಕಟಿಸಲು ನಿರ್ಧರಿಸಲಾಗಲಿಲ್ಲ.

'ಶೃಂಗೇರೀ ಗುರುವಂಶಸಾರ ಸಂಗ್ರಹ' ಎಂಬ ಪುಸ್ತಕವನ್ನು ನಾನು ರಚಿಸಿ ಅದು ಹೊರಬಂದಾಗ ಈ ಮಹಾತ್ಮರ ಜೀವನ ಚರಿತ್ರೆಯನ್ನು ಅದರಲ್ಲಿ ಸೇರಿಸಲು ಆಸೆ ಮುಂದೂಡಿತು. ಆದರೆ, ಮಹಾಸನ್ನಿಧಾನ ಅನುಮತಿ ಕೊಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಲ್ಲ. ಆವೇಳೆ ಕೆಲವು ಸಮಯಗಳಲ್ಲಿ ಮತ್ತೆಯೂ ಬೇಡಿಕೊಂಡಾಗ, “ನನ್ನನ್ನು ಕುರಿತು ಬರೆಯಬೇಡ, ಮಾತಾಡಲೂ ಬೇಡ. ನಮ್ಮ ಗುರುನಾಥರನ್ನು ಕುರಿತು ಹೇಳು, ಬರೆ” ಎಂದು ಅಪ್ಪಣೆ ದೊರೆಯಿತು. ಬಹಳ ಭಯದಿಂದ, “ಅವರನ್ನು ಕುರಿತು ಹಲವು ವಿದ್ವಾಂಸರು ಬರೆದುಬಿಟ್ಟಿದ್ದಾರೆ. ಸನ್ನಿಧಾನಕ್ಕೆ ಗುರುವಿನಲ್ಲಿರುವ ಭಕ್ತಿಯ ಹಾಗೆಯೇ ಅದೇ ಗುರುವಿನಲ್ಲಿ ನನಗೂ ಇರುವ ಸ್ವಲ್ಪ ಗುರುಭಕ್ತಿಯನ್ನು ಆಧಾರವಾಗಿಟ್ಟುಕೊಂಡು ನನ್ನ ಗುರುವಿನ ಚರಿತ್ರೆಯನ್ನು ಬರೆಯಲು ನನಗೆ ಅನುಮತಿ ಕೊಡಲಾಗದೇ?” ಎಂದು ವಿನಯದಿಂದ ಕೇಳಿಕೊಂಡೆ, ಅಂಗಲಾಚಿದೆ. ಆಗ ಇಬ್ಬರು ಸ್ನೇಹಿತರು ನನಗೆ ಸಹಾಯ ಮಾಡಿದರು. ಅವರು ನನ್ನ ಸ್ನೇಹಿತರೂ ಶೃಂಗೇರೀ ಪೀಠಕ್ಕೆ ಪರಂಪರೆಯಾಗಿ ಸೇವೆ ಮಾಡುವ ಕುಟುಂಬದವರೂ ಆದ ಶಿವಮೊಗ್ಗದ ಶ್ರೀ ಸುಂದರರಾಮಯ್ಯರೊಬ್ಬರು. ಶೃಂಗೇರೀ ಪೀಠದಲ್ಲಿ ವಿರಾಜಿಸಿದ ಹಳೆಯ ಪೀಠಾಧಿಪತಿಗಳಲ್ಲಿ ವಿಶೇಷ ಭಕ್ತಿಯಿಟ್ಟು ಅವರ ವಿಶೇಷ ಅನುಗ್ರಹಕ್ಕೆ ಪಾತ್ರರಾಗಿ, ಶೃಂಗೇರೀ ಪೀಠಾಧಿಪತಿಗಳ ಬಳಿ ಅಂತರಂಗ ಕಾರ್ಯದರ್ಶಿಯಾಗಿ ಕೆಲಸ ಮಾಡಿ ವಯಸ್ಸಾಗಿ ಮುಪ್ಪು ಬಂದವರೂ, ಈಗಲೂ ಶ್ರೀ ಶಿವಗಂಗಾ ಶೃಂಗೇರೀ ಮಠದಲ್ಲಿ ಅಂತರಂಗ ಕಾರ್ಯದರ್ಶಿಯಾಗಿ ಬೆಳಗುತ್ತಿರುವವರೂ, ವಯಸ್ಸಿನಲ್ಲಿಯೂ ಅನುಭವದಲ್ಲಿಯೂ ನನಗಿಂತ ವೃದ್ಧರೂ, ನನ್ನ ಗೌರವಕ್ಕೆ ಪಾತ್ರರಾದ ನನ್ನ ಆಪ್ತ ಸ್ನೇಹಿತರೂ ಆದ ಬೆಂಗಳೂರಿನಲ್ಲಿರುವ ಶ್ರೀ ಎಸ್. ಜಿ. ನರಸಿಂಹಯ್ಯನವರು ಇನ್ನೊಬ್ಬರು. ಆಗ ನನ್ನ ಗುರುಭಕ್ತಿಯನ್ನು ವೃದ್ಧಿಗೊಳಿಸಬೇಕೆಂದೆಣಿಸಿ, ಶ್ರೀ ಮಹಾಸನ್ನಿಧಾನವು ಒಂದು ರೀತಿಯಲ್ಲಿ ಅನುಮತಿ ಕೊಟ್ಟರು. ಅದನ್ನು ಆಧಾರವಾಗಿಟ್ಟುಕೊಂಡು ಈ ಚರಿತ್ರೆಗೆ ಅವಶ್ಯವಾದ ವಿಷಯಗಳನ್ನು ಶೇಖರಿಸಲು ಆರಂಭಿಸಿದೆನು.

ಶ್ರೀ ಮಹಾಸನ್ನಿಧಾನದ ಪೂರ್ವಾಶ್ರಮದ ತಂದೆಯಾದ ಶ್ರೀ ಕೈಪು ರಾಮಾಶಾಸ್ತ್ರಿಗಳು ಈ ಪುಸ್ತಕದಲ್ಲಿ ಅಡಕವಾಗಿರುವ ಬಾಲ್ಯಚರಿತ್ರ ವಿಷಯಗಳನ್ನು ನನಗೆ ಕೆಲವು ಸಂದರ್ಭಗಳಲ್ಲಿ ನೇರವಾಗಿ ಹೇಳಿದ್ದಾರೆ. ಇದು ನನ್ನ ಭಾಗ್ಯವೇ ಸರಿ ಎಂದು ನನ್ನ ಭಾವನೆ. ಶ್ರೀಮಾನ್ ಎಸ್. ಜಿ. ನರಸಿಂಹಯ್ಯನವರಿಂದ ಶ್ರೀ ಮಹಾಸನ್ನಿಧಾನದ ಬಾಲ್ಯಕಾಲದ ವಿವರಗಳನ್ನು ಕೇಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿದುಕೊಂಡೆ. ಅವರಿಗೆ ಇವೆಲ್ಲ ಪ್ರತ್ಯಕ್ಷವಾಗಿ ತಿಳಿದ ಸಂಗತಿಗಳೇ. ಅದರ ಜೊತೆಗೆ, ಅವರು ಈ ಕೆಳಗೆ ಹೇಳಿರುವ ಹಿರಿಯರಿಂದಲೂ ವಿವರಗಳನ್ನು ಸಂಗ್ರಹಿಸಿಕೊಂಡು ನನಗೆ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಶ್ರೀ ಎಸ್. ಜಿ. ನರಸಿಂಹಯ್ಯನವರಲ್ಲದೆ ಅವರ ಮೂಲಕ ನನಗೆ ವಿವರಗಳನ್ನು ಕೊಟ್ಟವರುಗಳಲ್ಲಿ ಕೆಲವರ ಹೆಸರುಗಳನ್ನು ಇಲ್ಲಿ ಗುರುತಿಸಿದ್ದೇನೆ:

೧. ಶ್ರೀಮತಿ ಸೀತಾಲಕ್ಷ್ಮಮ್ಮ
(ಮಹಾಸನ್ನಿಧಾನದ ಪೂರ್ವಾಶ್ರಮದ ಸಹೋದರಿ)

೨. ಶ್ರೀಮತಿಯವರ ಪತಿ ಶ್ರೀ ನರಸಿಂಹಶಾಸ್ತ್ರಿಗಳು.

೩. ಶ್ರೀ ಸೂರ್ಯನಾರಾಯಣರಾವ್, ಎಂಜಿನಿಯರ್
(ಶ್ರೀ ಮಹಾಸನ್ನಿಧಾನದ ಪೂರ್ವಾಶ್ರಮದ ಸೋದರಮಾವ)

೪. ಶ್ರೀ ಸಿ. ಆರ್. ಶ್ರೀನಿವಾಸ, } (ಶ್ರೀ ಮಹಾಸನ್ನಿಧಾನದ
೫. ಶ್ರೀ ಸಿ. ಆರ್. ಗಣೇಶ. } ಪೂರ್ವಾಶ್ರಮದ ಬಂಧುಗಳು)

೬. ಶ್ರೀ ಎಚ್. ಶ್ರೀನಿವಾಸಶಾಸ್ತ್ರಿ
(ವಿಶ್ರಾಂತಿ ಹೊಂದಿದ ಪ್ರೌಢಶಾಲಾ ಮುಖ್ಯೋಪಾಧ್ಯಾಯರು)

೭. ಶ್ರೀಮತಿ ಲಕ್ಷ್ಮಮ್ಮ (ಶ್ರೀ ಬಿ. ವೆಂಕಟನಾರಾಯಣ್ ಅವರ ಪತ್ನಿ)

೮. ನಂಜನಗೂಡು ಭಾಗೀರಥೀ ಅಮ್ಮನವರ ಕುಮಾರಿತಿ ಕಿಟ್ಟಮ್ಮ
(ಶ್ರೀ ಮಹಾಸನ್ನಿಧಾನದ ಪೂರ್ವಾಶ್ರಮದ ಚಿಕ್ಕಮ್ಮನ ಮಗಳು).

೯. ಶ್ರೀ ಬಿ. ವಿ. ರಾಮಕೃಷ್ಣ (ವೈಶ್ಯಬ್ಯಾಂಕ್ ಮ್ಯಾನೇಜರ್)

೧೦. ಶ್ರೀಮತಿ ಪುಟ್ಟಾರಮ್ಮ
(ಶ್ರೀ ವಾಜಪೇಯಂ ಗೋವಿಂದಯ್ಯನವರ ಪತ್ನಿ)

Sri Vidyabharathi Book Centre, Sringeri

CC-O. In Public Domain. Digitized by eGangotri

೧೧. ಶ್ರೀಮತಿ ಅನ್ನಪೂರ್ಣಮ್ಮ (ಪಂಡಿತ ಶ್ರೀ ನರಸಿಂಹಶಾಸ್ತ್ರಿಗಳ ಪತ್ನಿ)

೧೨. ಶ್ರೀ ಜಿ. ವೆಂಕಟಾಚಲಶರ್ಮ
(ಪ್ರೌಢಶಾಲೆಯ ನಿವೃತ್ತ ತೆಲುಗು ಉಪಾಧ್ಯಾಯರು)

೧೩. ಶ್ರೀ ಬ್ರಹ್ಮಾನಂದಸ್ವಾಮಿಗಳವರ ಮೊಮ್ಮಗ ಶ್ರೀ ಎಸ್. ಶಂಕರ ನಾರಾಯಣರಾವ್.

೧೪. ಮೈಸೂರು ನ್ಯಾಷನಲ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿದ್ದು ವಿಶ್ರಾಂತಿ ಹೊಂದಿರುವ ಶ್ರೀ ಎ. ಶೇಷಪ್ಪ.

೧೫. ಅರಳೇಪೇಟೆ "ಆಯಿಂಟಿ" ಸುಬ್ಬಾಭಟ್ಟರ ಮೊಮ್ಮಗ ಶ್ರೀ ಕೈಪು ಗಣಪತಿಶಾಸ್ತ್ರಿ.

೧೬. ಮಹಾಸನ್ನಿಧಾನದ ಪೂರ್ವಾಶ್ರಮದ ಮಾತಾಮಹರ ಕುಟುಂಬದ ಮಿತ್ರರಾದ ಮತ್ತು ಶಂಕರಪುರದಲ್ಲಿರುವ (ನಿವೃತ್ತ ಸಬ್ ರಿಜಿಸ್ಟ್ರಾರ್) ಶ್ರೀ ಕೆ. ಜಿ. ರಾಮಸ್ವಾಮಯ್ಯ.

ಇವರೆಲ್ಲರಿಗೂ ನಮಸ್ಕಾರ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಇವರ ಸಹಾಯ ಸಹಕಾರಗಳಿಲ್ಲದಿದ್ದರೆ ಈ ಪುಸ್ತಕವನ್ನು ಬರೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಶೃಂಗೇರೀ ಪೀಠಾಧಿಪತಿಗಳೆಲ್ಲರ ಜೀವನ ಚರಿತ್ರೆಗಳನ್ನೂ ಒಟ್ಟಾಗಿ ಪರಿಶೀಲಿಸಿದಾಗ, ಇದು ಒಂದು ಜೀವನ್ಮುಕ್ತ ಪರಂಪರೆಯೆಂಬುದು ಚೆನ್ನಾಗಿ ತಿಳಿಯಬರುತ್ತದೆ. ಪೀಠಕ್ಕೆ ಬಂದ ಬಳಿಕ ಇದನ್ನು ಚೆನ್ನಾಗಿ ಕಾಣುತ್ತೇವೆ. ಆದರೆ 'ಜೀವನ್ಮುಕ್ತಿ' ಎಂಬ ಸ್ಥಿತಿ ಓದಿನಿಂದಲೋ ಅಥವಾ ಸಾಮಾನ್ಯ ಉಪದೇಶಗಳಿಂದಲೋ ಏರ್ಪಡುವುದಿಲ್ಲ. ಒಂದು ಜನ್ಮದಲ್ಲಿ ವಿಶೇಷವಾದ ವೇದಾಂತಜ್ಞಾನವನ್ನು ಪಡೆದು, ಅದು ಪಕ್ವವಾಗಿ ಅಪರೋಕ್ಷಾನುಭೂತಿ ಏರ್ಪಟ್ಟು, ನಿರ್ವಿಕಲ್ಪ ಸಮಾಧಿ ಸ್ಥಿತಿಯನ್ನು ಪಡೆಯುವುದಕ್ಕೆ ಮುಂಚೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಪ್ರಾರಬ್ಧ ಶರೀರವು ಬಿದ್ದು ಬಿಡುವುದೇ ಆದರೆ, ಆ ಜ್ಞಾನ ವ್ಯರ್ಥವಾಗಿ ಹೋಗುವುದಿಲ್ಲ. ಅದರ ಫಲವಾಗಿ ಮುಂದಿನ ಜನ್ಮವು ಶುದ್ಧವಾದ ಕುಟುಂಬದಲ್ಲಿ ಉಂಟಾಗಿ, ಬಾಲ್ಯಾರಭ್ಯ, ವೈರಾಗ್ಯ, ವಿವೇಕ ಮೊದಲಾದ ಆತ್ಮಗುಣಗಳನ್ನು ಪಡೆದು, ಲೋಕದಲ್ಲಿನ ಆಸಕ್ತಿಯಿಲ್ಲದಂತೆ ಜೀವನದಲ್ಲಿದ್ದುಕೊಂಡು ಆಮೇಲೆ ಜೀವನ್ಮುಕ್ತಿ ಸ್ಥಿತಿಯನ್ನು ಪಡೆಯುತ್ತಾರೆ—ಎಂದು ದೊಡ್ಡವರು ಹೇಳುವುದನ್ನು ಕೇಳಿದ್ದೇವೆ. ಅದೇ ರೀತಿ ಶ್ರೀ ಮಹಾಸನ್ನಿಧಾನದ ಬಾಲ್ಯಾವಸ್ಥೆಯಲ್ಲೂ ಆ ಉತ್ತಮ ಗುಣಗಳು ಕಂಡುಬಂದದ್ದನ್ನು ಪುಸ್ತಕದಲ್ಲಿ ಅಲ್ಲಲ್ಲಿ ಗುರುತಿಸಿದ್ದೇನೆ. ಆ ರೀತಿಯ ಜೀವನ್ಮುಕ್ತರು ಲೋಕದಲ್ಲಿ ವಾಸಮಾಡುವುದಕ್ಕೆ ಮನಸ್ಸಿಲ್ಲದೆ ಕಾಡುಗಳಲ್ಲಿ ಏಕಾಂತವಾದ ಸ್ಥಳಗಳಲ್ಲಿ ಇದ್ದುಕೊಂಡು ಹಣ್ಣುಕಾಯಿಗಳನ್ನು ತಿಂದುಕೊಂಡು ಪ್ರಾರಬ್ಧವಾದ ಶರೀರ ಬಿದ್ದುಹೋಗುವವರೆಗೂ ಅದನ್ನು ಲಕ್ಷ್ಯ ಮಾಡದೆ ಆತ್ಮಜ್ಞಾನದಲ್ಲಿ ನಿರತರಾಗಿರುತ್ತಾರೆ. ನಮ್ಮ ಭಾಗ್ಯವಶದಿಂದ ಇವರು ಶೃಂಗೇರೀ ಪೀಠದಲ್ಲಿ ಆರೂಢರಾಗಿ ಆಸಕ್ತಿರಹಿತ ಸ್ಥಿತಿಯಲ್ಲಿ ಮಠದ ನಿರ್ವಾಹವನ್ನು ಗಮನಿಸುತ್ತ, ಶಿಷ್ಯರ ಮೇಲ್ಮೆಗಾಗಿ ಅವರಿಗೆ ಹಲವು ಮಾರ್ಗಗಳಲ್ಲಿ ಉಪದೇಶಗಳನ್ನು ಮಾಡುತ್ತ, '**ಶ್ರೀಯಂ ಸಾಮ್ಯಂ ವಿಧತ್ತೇ**' ಎಂದು ಭಗವತ್ಪಾದರು ಶತಶ್ಲೋಕಿಯಲ್ಲಿನ ಮೊದಲ ಶ್ಲೋಕದಲ್ಲಿ ಹೇಳಿದ ಪ್ರಕಾರ ನಮ್ಮೆಲ್ಲರ ಉನ್ನತ ಪದವಿಯಾದ ಆತ್ಮಸಾಕ್ಷಾತ್ಕಾರಕ್ಕೆ ಕರೆದುಕೊಂಡು ಹೋಗಲು ಕರುಣೆದೋರಿ ಅನುಗ್ರಹಿಸುತ್ತಿದ್ದಾರೆ. ಇವರ ಉಪದೇಶಗಳು ಹಲವು ರೂಪಗಳಲ್ಲಿ ಪ್ರಕಟವಾಗುತ್ತವೆ. ಉಪನ್ಯಾಸಗಳು ಸಾಧಾರಣವಾದ ದಿನಚರಿ ಮಾತುಗಳು, ಶಾಸ್ತ್ರಸಂಬಂಧವಾದ ವಿವರಣೆಗಳು, — ಹೀಗೆ ನಾನಾ ರೂಪದಲ್ಲಿ ದೊರೆಯುತ್ತವೆ. ಇವರ ಜೀವನವೇ ಒಂದು ಶಾಸ್ತ್ರವಾಗುತ್ತದೆ. ಹಲವರು ಶಿಷ್ಯರು ಈ ಅನುಭವವನ್ನು ಪಡೆದಿದ್ದಾರೆ—ಎಂಬುದನ್ನು ಗುರುತಿಸುವುದಕ್ಕಾಗಿ ಪುಸ್ತಕದಲ್ಲಿ ಅಂಥ ಅನುಭವಗಳಲ್ಲಿ ಕೆಲವನ್ನು ಸೇರಿಸಲಾಗಿದೆ. ಪುಸ್ತಕ ದೊಡ್ಡದಾಗಿಬಿಡುವುದಲ್ಲಾ ಎಂದು ಭಯಪಟ್ಟು, ಹೆಚ್ಚಿನ ಅನುಭವಗಳನ್ನು ಇದರಲ್ಲಿ ಸೇರಿಸಲಿಲ್ಲ. ತಮಗೆ ಅನುಭವವಾದ ವಿಷಯಗಳನ್ನು ಕಳಿಸಿಕೊಟ್ಟ ಹಿತೈಷಿಗಳಿಗೆ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಈ ಪುಸ್ತಕವನ್ನು ಬರೆಯುವುದಕ್ಕೆ ನನಗೆ ಸಾಕಾದಷ್ಟು ಲೇಖನ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮರ್ಥ್ಯವೂ ಆಳವಾದ ಅಧ್ಯಯನಾನುಭವಗಳೂ ಇಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತು. ನನ್ನಲ್ಲಿರುವ ಸ್ವಲ್ಪವೇ ಸ್ವಲ್ಪವಾದ ಗುರುಭಕ್ತಿ ಇದನ್ನು ಬರೆಯುವಂತೆ ಪ್ರೇರಿಸಿತು. ಶಕ್ತಿವಂತರಾದ ವಿದ್ವಾಂಸರು ಇದನ್ನು ಇನ್ನೂ ಸೊಗಸಾಗಿ ರಚಿಸುವುದಕ್ಕೆ ಮುಂದೆ ಬರಬೇಕೆಂದು ಬೇಡುತ್ತೇನೆ. ನನ್ನದೊಂದು ಚಿಕ್ಕ ಕರ್ತವ್ಯವೆಂದು ಈ ಪುಸ್ತಕವನ್ನು ಬರೆದಿದ್ದೇನೆ. ಕುಂದು ಕೊರತೆಗಳನ್ನು ಮನ್ನಿಸಬೇಕೆಂದು ವಾಚಕರನ್ನು ಬೇಡಿಕೊಳ್ಳುತ್ತೇನೆ.

ಈ ಪುಸ್ತಕದ ವಿಷಯಗಳನ್ನು ಬರೆದು ೧೯೭೪ನೆಯ ಜುಲೈಗೆ ಮೊದಲೇ ಅಚ್ಚುಕೂಟಕ್ಕೆ ಕಳಿಸಿ, ಅದರ ಪ್ರಕಾರ ಅಚ್ಚಾಗಿತ್ತು. ಮೊದಲಿನ ೧–೧೧೮ ಪುಟಗಳಲ್ಲಿ "ಮಹಾಸನ್ನಿಧಾನ", "ದೊಡ್ಡಸನ್ನಿಧಾನ" ಎಂದು ಬರುವ ಕಡೆಗಳಲ್ಲಿ 'ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು' ಎಂದೂ, 'ಚಿಕ್ಕಸನ್ನಿಧಾನ' ಎಂದು ಬರುವ ಕಡೆಗಳಲ್ಲಿ, 'ಶ್ರೀಮತ್ ಅಭಿನವ ವಿದ್ಯಾತೀರ್ಥ ಸ್ವಾಮಿಗಳು' ಎಂದೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ ೧೯೭೪ನೆಯ ನವಂಬರಿನಲ್ಲಿ ನಮ್ಮ ಜಗದ್ಗುರುಗಳು ಶಿಷ್ಯಸ್ವೀಕಾರ ಮಾಡಿಕೊಂಡರು. ಅನಂತರ ನಡೆದ ಸಂಗತಿಗಳನ್ನೂ ಸ್ನೇಹಿತರ ಕೋರಿಕೆಯ ಪ್ರಕಾರ ಇದರಲ್ಲಿ ಸೇರಿಸಿಕೊಂಡಿದೆ. ಈಗಿನ ಈ ಸ್ಥಿತಿಯಲ್ಲಿ, 'ಮಹಾಸನ್ನಿಧಾನ' ಎಂದರೆ, 'ಶ್ರೀಮತ್ ಅಭಿನವ ವಿದ್ಯಾತೀರ್ಥ ಸ್ವಾಮಿಗಳು' ಎಂದೂ, 'ಸನ್ನಿಧಾನ, ಚಿಕ್ಕಸನ್ನಿಧಾನ' ಎಂದರೆ, 'ಶ್ರೀ ಭಾರತೀತೀರ್ಥ ಸ್ವಾಮಿಗಳು' ಎಂದೂ ತಿಳಿಯಬೇಕು. ಓದುವವರಿಗೆ ಸಂದೇಹವುಂಟಾಗದಿರಲೆಂದು ಇದನ್ನು ಸೂಚಿಸುತ್ತಿದ್ದೇನೆ.

ನನ್ನನ್ನು ಅನುಗ್ರಹಿಸುತ್ತ ಬರುತ್ತಿರುವ ಶೃಂಗೇರಿಯ ೩೫ನೆಯ ಪೀಠಾಧಿಪತಿಗಳಾದ ಮಹಾಸನ್ನಿಧಾನದ ದಿವ್ಯ ಪಾದಾರವಿಂದಗಳಲ್ಲಿ ಕೈಂಕರ್ಯರೂಪವಾದ ಈ ಕಿರಿಯ ಕಾಣಿಕೆಯನ್ನು ಭಕ್ತಿ ವಿನಯ ಪೂರ್ವಕವಾದ ಸಾಷ್ಟಾಂಗ ಪ್ರಣಾಮಗಳೊಡನೆ ಸಮರ್ಪಿಸುತ್ತೇನೆ. ತಮಗಿರುವ ಅನೇಕ ಕಾರ್ಯಗಳ ಮಧ್ಯದಲ್ಲೂ ನನ್ನ ಕೋರಿಕೆಗೆ ಒಪ್ಪಿ, ಇದಕ್ಕೆ ಮುನ್ನುಡಿ ಬರೆದು ಕೊಟ್ಟಿರುವ ನನ್ನ ಆಪ್ತ ಮಿತ್ರರು, ಗುರುಭಕ್ತಶಿರೋಮಣಿ, ಧರ್ಮಾತ್ಮ, ಶ್ರೀ ವಿ. ವೈದ್ಯ ಸುಬ್ರಮಣ್ಯ ಅಯ್ಯರ್ ಅವರಿಗೆ ನನ್ನ ಮನಃಪೂರ್ವಕವಾದ ಕೃತಜ್ಞತೆಯನ್ನು ತಿಳಿಯಪಡಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪುಸ್ತಕ (ಮೂಲ ತಮಿಳು ಗ್ರಂಥ)ವನ್ನು ಅಚ್ಚುಮಾಡುವುದಕ್ಕೆ ಧನಸಹಾಯ ಮಾಡಿದ ನನ್ನ ಸ್ನೇಹಿತರು ಗೋಪಿಶೆಟ್ಟಿಪಾಳ್ಯದ ವಕೀಲರು ಶ್ರೀ ಜೆ. ಸುಬ್ರಮಣ್ಯಯ್ಯರ್, ಸೇಲಂ ವಕೀಲ್ ಶ್ರೀ ಸ್ವಾಮಿನಾಥೈಯ್ಯರ್— ಇವರುಗಳಿಗೂ ನನ್ನ ಕೃತಜ್ಞತೆ.

ತಮಗಿರುವ ಹಲವಾರು ಮುದ್ರಣ ಕಾರ್ಯಗಳ ನಡುವೆ ಇದಕ್ಕೂ ಅವಕಾಶ ಮಾಡಿಕೊಟ್ಟು ಒಳ್ಳೆಯ ರೀತಿಯಲ್ಲಿ ಈ (ತಮಿಳು) ಪುಸ್ತಕವನ್ನು ಅಚ್ಚುಮಾಡಿಕೊಟ್ಟ ಶ್ರೀ ರಂಗಮ್ ವಾಣಿವಿಲಾಸ್ ಅಚ್ಚುಕೂಟದವರಿಗೂ ನನ್ನ ಮನಃಪೂರ್ವಕವಾದ ಕೃತಜ್ಞತೆ ಸಲ್ಲಬೇಕು.

ಈ ಪುಸ್ತಕವನ್ನು ಓದುವವರಲ್ಲಿ ಶೃಂಗೇರೀ ಪೀಠದಲ್ಲಿ ಗುರುಭಕ್ತಿ ಬೆಳೆಯಬೇಕು—ಎಂಬುದೇ ನನ್ನ ಉದ್ದೇಶ.

ಈರೋಡು
೨೬-೧೦-೧೯೭೫

ಕೆ. ವಿ. ಸುಬ್ಬರತ್ನಮ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಭ್ಯೋ ನಮಃ

ಶುದ್ಧಸ್ಫಟಿಕಸಂಕಾಶಂ ಶುದ್ಧವಿದ್ಯಾಪ್ರದಾಯಕಮ್ ।
ಶುದ್ಧಂ ಪೂರ್ಣಚಿದಾನಂದಂ ಸದಾಶಿವಮಹಂ ಭಜೇ ॥

[ಶುದ್ಧ ಸ್ಫಟಿಕದಂತಿರುವ ಶುದ್ಧವಿದ್ಯೆಯ ನೀಡುವ ॥
ಶುದ್ಧನೂ ಪೂರ್ಣನೂ ಚಿದಾನಂದನೂ ಆದ
ಸದಾಶಿವನ ನಾನಾಶ್ರಯಿಸುವೆ ॥]

ನಾರಾಯಣಂ ಪದ್ಮಭುವಂ ವಸಿಷ್ಠಂ
ಶಕ್ತಿಂ ಚ ತತ್ಪುತ್ರ ಪರಾಶರಂ ಚ ।
ವ್ಯಾಸಂ ಶುಕಂ ಗೌಡಪದಂ ಮಹಾನ್ತಂ
ಗೋವಿನ್ದಯೋಗೀನ್ದ್ರಮಥಾಸ್ಯ ಶಿಷ್ಯಮ್ ॥

ಶ್ರೀ ಶಂಕರಾಚಾರ್ಯಮಥಾಸ್ಯ ಪದ್ಮ
ಪಾದಂ ಚ ಹಸ್ತಾಮಲಕಂ ಚ ಶಿಷ್ಯಮ್ ।
ತಂ ತೋಟಕಂ ವಾರ್ತಿಕಕಾರಮನ್ಯಾನ್
ಅಸ್ಮದ್ಗುರೂನ್ ಸಂತತಮಾನತೋಽಸ್ಮಿ ॥

[ನಾರಾಯಣ, ಪದ್ಮದಲಿ ಜನಿಸಿದವ, ವಸಿಷ್ಠ,
ಶಕ್ತಿ, ಮತ್ತವರ ಮಗ ಪರಾಶರ,
ವ್ಯಾಸ, ಶುಕ, ಗೌಡಪಾದ ಮಹಾತ್ಮ,
ಅವರ ಶಿಷ್ಯ ಗೋವಿಂದಯೋಗೀಂದ್ರ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಾಚಾರ್ಯ, ಮತ್ತವರ ಶಿಷ್ಯರ್—
ಪದ್ಮಪಾದ, ಹಸ್ತಾಮಲಕ, ತೋಟಕ—
ವಾರ್ತಿಕಕಾರ, ಮತ್ತೆ ಬೇರೆಯವರು,
ಈಯೆಲ್ಲ ನಮ್ಮ ಗುರುಗಳನ್ನು
ಯಾವಾಗಲೂ ಮಣಿದು ವಂದಿಸುವೆನು.]

ಸದಾಶಿವಸಮಾರಮ್ಭಾಂ ಶಂಕರಾಚಾರ್ಯಮಧ್ಯಮಾಮ್ ।
ಅಸ್ಮದಾಚಾರ್ಯಪರ್ಯನ್ತಾಂ ವನ್ದೇ ಗುರುಪರಮ್ಪರಾಮ್ ॥

[ಸದಾಶಿವನಿಂದ ಮೊದಲುಗೊಂಡು
ಶಂಕರಾಚಾರ್ಯರನು ನಡುವಿನಲಿ ತಳೆದು ।
ನಮ್ಮ ಆಚಾರ್ಯರಾ ವರೆಗು ಹರಡಿರುವ
ಗುರುಪರಂಪರೆಯ ವಂದಿಸುವೆನು]

ಶ್ರೀ ಸಚ್ಚಿದಾನನ್ದ ಶಿವಾಭಿನವ್ಯ
ನೃಸಿಂಹ ಭಾರತ್ಯಭಿಧಾನ್ ಯತೀನ್ದ್ರಾನ್ ।
ವಿದ್ಯಾನಿಧೀನ್ ಮನ್ತ್ರನಿಧೀನ್ ಸದಾತ್ಮ
ನಿಷ್ಠಾನ್ ಭಜೇ ಮಾನವ ಶಂಭುರೂಪಾನ್ ॥

[ವಿದ್ಯಾನಿಧಿಗಳೆಂದು, ಮಂತ್ರನಿಧಿಗಳೆಂದು,
ಸದಾ ಆತ್ಮನಿಷ್ಠರೆಂದು,
ಮಾನವರೂಪಿನ ಶಂಭುವೆಂದೂ ಬೆಳಗಿದವರಾದ
ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿ ಎಂಬ
ಹೆಸರಿಂದ ಹೆಸರ್ಗೊಂಡ ಯತಿವರ್ಯರಂ ಭಜಿಸುತಿರುವೆ]

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾತ್ಮಧ್ಯಾನನಿರತಂ ವಿಷಯೇಭ್ಯಃ ಪರಾಙ್ಮುಖಮ್ ।
ನೌಮಿ ಶಾಸ್ತ್ರೇಷು ನಿಷ್ಣಾತಂ ಚನ್ದ್ರಶೇಖರಭಾರತೀಮ್ ॥

[ಸದಾ ಆತ್ಮಧ್ಯಾನದಲಿ ಮುಳುಗಿದವರು,
ವಿಷಯಗಳಿಂದ ವಿಮುಖರಾದವರು,
ಶಾಸ್ತ್ರಗಳಲಿ ನಿಷ್ಣಾತರಾದವರು,
ಚಂದ್ರಶೇಖರಭಾರತಿಗಳು—
ಅವರ ನಾ ವಂದಿಸುವೆನು]

ವಿದ್ಯಾತೀರ್ಥಂಚಾಭಿನವಂ ವನ್ದೇಽಹಂ ಜಗತಾಂ ಗುರುಮ್ ।
ಶೃಂಗೇರೀ ಶಾರದಾಪೀಠ ರಾಜಮಾನಂ ಕೃಪಾರ್ಣವಮ್ ॥

[ಶೃಂಗೇರಿಯ ಶಾರದಾಪೀಠದಲ್ಲಿ ನೆಲಸಿ
ಜಗದ್ಗುರುವಾಗಿ ರಾರಾಜಿಸುತ್ತಿರುವ,
ಕೃಪಾರ್ಣವರಾದ ಅಭಿನವ ವಿದ್ಯಾತೀರ್ಥರಂ
ವಂದಿಸುವೆ ನಾನು]

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿದ್ಯಾತೀರ್ಥ ಪಞ್ಚಕಮ್

ಶಾರದಾಪೀಠನಿಲಯಂ ಶರದೇನ್ದು ಸಮಾನನಮ್ ।
ಶಿಷ್ಯಾನುಗ್ರಹಣೈಕಾನ್ತ ಪ್ರವಣಸ್ವಾನ್ತ ಸಂಯುತಮ್ ॥ ೧ ॥

[ಶಾರದಾಪೀಠದಲ್ಲಿ ನೆಲಸಿರುವರು,
ಶರದಚಂದ್ರನ ತೆರದ ಮುಖವುಳ್ಳರು,
ಶಿಷ್ಯರಿಗನುಗ್ರಹವ ನೀಡುವುದರಲೇ
ಸರ್ವದಾ ತೊಡಗಿರುವ ಮನವುಳ್ಳರು]

ಜೀವನ್ಮುಕ್ತ ಮಹಾಯೋಗಿ ಚನ್ದ್ರಶೇಖರ ಸದ್ಗುರೋಃ ।
ಕೃಪಾಕಟಾಕ್ಷ ಪಾತೇನ ಪರಿಪೂತಾನ್ತರಙ್ಗಕಮ್ ॥ ೨ ॥

[ಜೀವಿಸಿರುವಾಗಲೇ ಮುಕ್ತರೆನಿಸಿದ ಮಹಾ
ಯೋಗಿ ಶ್ರೀ ಚಂದ್ರಶೇಖರ ಗುರುಗಳ ।
ಕರುಣಾಕಟಾಕ್ಷ ಮೇಲ್ಸುಳಿದ ಸೌಭಾಗ್ಯದಿಂ
ಪರಮ ಪರಿಶುದ್ಧಾಂತರಂಗರಾದವರು]

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾತಪೋಮೂರ್ತಿರೂಪಂ ವಿದ್ಯಾವಿನಯಭೂಷಣಮ್ ।
ಶಾರದಾಪೀಠವಿಲಸದ್ವ್ಯಾಖ್ಯಾಸಿಂಹಾಸನೋಜ್ಜ್ವಲಮ್ ॥ ೩ ॥

[ವಿದ್ಯೆತಪಗಳು ರೂಪುಧರಿಸಿದಂತಿರುವವರು,
ವಿದ್ಯೆ ವಿನಯಗಳಲಂಕಾರವಾದವರು,
ಶಾರದಾಪೀಠವೆಂದೆಲ್ಲೆಡೆಯು ಹೆಸರಾಂತ
ವ್ಯಾಖ್ಯಾನ ಸಿಂಹಾಸನದಲಿ ಬೆಳಗುವರು]

ಭಕ್ತಾಭೀಪ್ಸಿತ ಸಂದೋಹದಾನಕಲ್ಪತರೂತ್ತಮಮ್ ।
ಶಾನ್ತಿದಾನ್ತ್ಯಾದಿ ಸುಗುಣ ಸಂಪದೇಕ ನಿಕೇತನಮ್ ॥ ೪ ॥

[ಭಕ್ತಜನಗಳ ಬಯಕೆಗಳ ಗುಂಪುಗುಂಪುಗಳನ್
ಈಡೇರಿಸುವ ಕಲ್ಪವೃಕ್ಷವಾಗಿಹರು ।
ಶಾಂತಿದಾಂತಿಗಳು ಮುಂತಾದ ಗುಣಗಣವೆಂಬ
ಸಂಪತ್ತಿಗೊಂದೆ ನೆಲೆವನೆಯೆನಿಸಿದವರು]

ಸದಾ ಸಂತೋಷಭರಿತ ಚೇತಸಂ ಕರುಣಾನಿಧಿಮ್ ।
ಮನ್ದಹಾಸ ಮುಖಾಂಭೋಜಂ ವಿದ್ಯಾತೀರ್ಥಮುಪಾಸ್ಮಹೇ ॥ ೫ ॥

[ಸರ್ವದಾ ಸಂತೋಷ ತುಂಬಿರುವ ಮನದವರು,
ಕರುಣವೇ ನಿಧಿಯಾಗಿ ನೆಲಸಿರುವರು,
ನಸುನಗೆಯು ಸುಳಿವ ಮೊಗದಾವರೆಯ ತಳೆದವರು,
ಇಂತಪ್ಪ ವಿದ್ಯಾತೀರ್ಥರನು ಭಜಿಸುತಿಹೆನು]

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾರದಾಪೀಠಿಕಾರೂಢ ವಿದ್ಯಾತೀರ್ಥಜಗದ್ಗುರೋಃ ।
ಪಞ್ಚಕಂ ಪಠತಾಂ ನಿತ್ಯಂ ಸಿದ್ಧಾಃ ಸ್ಯುಃ ಸರ್ವಸಂಪದಃ ॥ ೬ ॥

[ಶಾರದಾಪೀಠದಲ್ಲಿ ಮಂಡಿಸಿರುವ
ವಿದ್ಯಾತೀರ್ಥ ಜಗದ್ಗುರುಗಳ
ಸ್ತೋತ್ರಪದ್ಯಗಳೈದನಿವನು
ನಿತ್ಯವೂ ಪಠಿಸುತಿರುವವರಿಗೆ
ಸರ್ವಸಂಪತ್ತುಗಳೂ ಕೈಗೂಡಿಬಹವು]

ಭಾಷ್ಯಸ್ವಾಮಿವರೇಣೇದಂ ಶ್ರೀ ವಿದ್ಯಾತೀರ್ಥಪಞ್ಚಕಮ್ ।
ದುರೈರಾಜ ಪ್ರಾರ್ಥನಾತೋ ರಚಿತಂ ಮಙ್ಗಲಪ್ರದಮ್ ॥ ೭ ॥

[ದೊರೆರಾಜ ಪ್ರಾರ್ಥಿಸಿದ ಕೇಳಿಕೆಗೆ ಒಪ್ಪಿ
ಭಾಷ್ಯಸ್ವಾಮಿಯೆಂಬನಿಂದ
ರಚಿತವಾಯಿತು ಮಂಗಳವ ನೀಡುತಿರುವ
ಶ್ರೀ ವಿದ್ಯಾತೀರ್ಥ ಪಂಚಕವಿದು]

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಪರಂಪರಾ ಸ್ತೋತ್ರ

ಶುದ್ಧಸ್ಫಟಿಕ ಸಂಕಾಶಂ ಶುದ್ಧವಿದ್ಯಾ ಪ್ರದಾಯಕಂ ।
ಶುದ್ಧಂ ಪೂರ್ಣಚಿದಾನಂದಂ ಸದಾಶಿವಮಹಂಭಜೇ ॥ ೧ ॥

ಸಿವಾತೀತಮನಾದ್ಯಂತಂ ನಾಮೋಚ್ಚಾರಣ ಭೇಷಜಂ ।
ಕಾಮಿತಾ ಶೇಷ ಫಲದಂ ಶ್ರೀಮದ್ವಿಷ್ಣುಮಹಂ ಶ್ರಯೇ ॥ ೨ ॥

ಯೋಗಿಹೃತ್ಪದ್ಮ ನಿಲಯಂ ನತಜೀವಹಿತೇ ರತಂ ।
ಶ್ರುತೀನಾಂ ಜನ್ಮಭೂಮಿಂತ್ವಾಂ ಚತುರ್ಮುಖಮಹಂ ಭಜೇ ॥ ೩ ॥

ಪ್ರಸಮಾಹಿತಮತ್ಯಂತಂ ಪ್ರಥಿಮಾಮಿತ ತೇಜಸಂ ।
ವಶೀಕೃತಪರಾನಂದಂ ವಶಿಷ್ಟಂ ಗುರುಮಾಶ್ರಯೇ ॥ ೪ ॥

ಶುಕ್ತೌ ರೌಪ್ಯಮಿವಾಭಾತಿ ಯದ್ರೂಪಂ ಮಯಿ ಕಲ್ಪಿತಂ ।
ಶಕ್ತ್ಯಾ ಪರಿಹೃತಂ ಯೇನ ಶಕ್ತಿಂ ತಂ ಗುರುಮಾಶ್ರಯೇ ॥ ೫ ॥

ಕರುಣಾತೀತ ಚಿದ್ರೂಪಂ ಪರಿಪೂರ್ಣ ಪರಾಯಣಂ ।
ಪರಮಾನಂದಸಂತುಷ್ಟಂ ಪರಾಶರಮಹಂ ಭಜೇ ॥ ೬ ॥

ವೇದವ್ಯಾಸಂ ಸ್ವಾತ್ಮರೂಪಂ ಸತ್ಯಸಂಧಂ ಪರಾಯಣಂ ।
ಶಾಂತಂ ಜಿತೇಂದ್ರಿಯಕ್ರೋಧಂ ಸಶಿಷ್ಯಂ ಪ್ರಣಮಾಮ್ಯಹಂ ॥ ೭ ॥

ತ್ರಿಕಾಲಾತೀತ ಚಿನ್ಮಾತ್ರ ಪ್ರಶಾಂತ ಸ್ವಾಂತ ಸಂಯುತಂ ।
ವಿಕಾರಾದ್ಯೈರಸಂಸ್ಪೃಷ್ಟಂ ಶುಕಂ ಗುರುಮಹಂ ಶ್ರಯೇ ॥ ೮ ॥

ಗೂಢಾ ಮಾಯಾ ಯಸ್ಯ ವಾಕ್ಯೈಃ ವ್ರೀಡಿತಾ ವಿಲಯಂಗತಾ ।
ಕ್ರೀಡಂತಂ ವಿದ್ಯಯಾ ಸಾರ್ಧಂ ಗೌಡಪಾದಂ ತಮಾಶ್ರಯೇ ॥ ೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವೇಶಭೇದರಹಿತಂ ಸಾವಿಕಂ ಭವವಾರಿಧೇಃ ।
ಭಾವಾ ಭಾವ ವಿದೂರಸ್ಥಂ ಗೋವಿಂದಂ ಗುರುಮಾಶ್ರಯೇ ॥ ೧೦ ॥

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।
ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥ ೧೧ ॥

ವಿಶ್ವಂ ಮಾಯಯಾಮುಯುಕ್ತ್ಯೈನ ರೂಪಿತಂ ಯತ್ಪ್ರಬೋಧತಃ ।
ವಿಶ್ವಂ ಚ ಯತ್ಸ್ವರೂಪಂ ತಂ ವಾರ್ತಿಕಾಚಾರ್ಯಮಾಶ್ರಯೇ ॥ ೧೨ ॥

ಅನಾದ್ಯವಿದ್ಯಾಮುತ್ಸಾರ್ಯ ಪ್ರಜ್ಞಾನಘನ ರೂಪತಾಂ ।
ಯೋ ಬೋಧಯತಿ ಸಚ್ಛಿಷ್ಯಾನ್ತಂ ಬೋಧಘನಮಾಶ್ರಯೇ ॥ ೧೩ ॥

ಸಿತಾಘನಾದಿ ದೃಷ್ಟಾಂತೈಃ ಯತ್ಸ್ವರೂಪಂ ಶ್ರುತಿರ್ಜಗೌ ।
ಪ್ರಜ್ಞಾನಘನ ಏವೇತಿ ತಂ ಜ್ಞಾನಘನಮಾಶ್ರಯೇ ॥ ೧೪ ॥

ಜ್ಞಾನಾನಾಮುತ್ತಮಂ ಜ್ಞಾನಂ ಜ್ಞಾನಿನಾಮುತ್ತಮೋಯತಃ ।
ಇನ್ನೋತ್ತಮ ಇತಿ ಖ್ಯಾತಂ ಗುರುಂ ತಮಹಮಾಶ್ರಯೇ ॥ ೧೫ ॥

ಜ್ಞಾನನಿಶ್ರೇಣಿಮಾಲಂಬ್ಯ ಬ್ರಹ್ಮಾಖ್ಯಂ ಗಿರಿಮುನ್ನತಂ ।
ಆರುಹ್ಯಕೃತಕೃತ್ಯೋ ಯಃ ತಂ ಜ್ಞಾನಗಿರಿಮಾಶ್ರಯೇ ॥ ೧೬ ॥

ದುರ್ವಾದಿ ದುಷ್ಟಮಾತಂಗ ವಿದಾರಣ ಪಟೀಯಸೇ ।
ನಮಃ ಶ್ರೀ ಸಿಂಹಗಿರಯೇ ಗುರುವೇ ದಿವ್ಯಚಕ್ಷುಷೇ ॥ ೧೭ ॥

ಈಪ್ಸಿತಾರ್ಥಪ್ರದೋ ನಿತ್ಯಂ ಪ್ರಣತಾನಾಂ ಚ ದೇಹಿನಾಂ ।
ಯತಿರೀಶ್ವರತೀರ್ಥಾಖ್ಯಃ ತಂ ನಮಾಮಿ ಗುರುಂ ಶಿವಂ ॥ ೧೮ ॥

ಶ್ರುತಿಮಸ್ತಕಕೂಟಸ್ಥಂ ಅಜ್ಞಾನದ್ವಿಪ ಭೇದಿನಂ ।
ಶ್ರೀ ಮಂತ್ರರಾಜ ಮೂರ್ತಿಂ ತಂ ನೃಸಿಂಹಂ ಗುರುಮಾಶ್ರಯೇ ॥ ೧೯ ॥

ಅವಿದ್ಯಾಛನ್ನ ಪಾಪಾನಾಂ ನೃಣಾಂ ವಿದ್ಯೋಪದೇಶತಃ ।
ಪ್ರಕಾಶಯತಿ ಯಸ್ತತ್ತ್ವಂ ತಂ ವಿದ್ಯಾತೀರ್ಥಮಾಶ್ರಯೇ ॥ ೨೦ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಜ್ಞಾನಾಂ ಜಾಹ್ನವೀತೀರ್ಥಂ ವಿದ್ಯಾತೀರ್ಥಂ ವಿವೇಕಿನಾಂ |
ಸರ್ವೇಷಾಂ ಸುಖದಂ ತೀರ್ಥಂ ಭಾರತೀತೀರ್ಥಮಾಶ್ರಯೇ || ೨೧ ||

ಅವಿದ್ಯಾರಣ್ಯಕಾಂತಾರೇ ಭ್ರಮತಾಂ ಪ್ರಾಣಿನಾಂ ಸದಾ |
ವಿದ್ಯಾಮಾರ್ಗೋಪದೇಷ್ಟಾರಂ ವಿದ್ಯಾರಣ್ಯಗುರುಂ ಶ್ರಯೇ || ೨೨ ||

ವಿದ್ಯಾವಿದ್ಯಾವಿವೇಕೇನ ಸಾರಸಂಸಾರ ವಾರಿಧೇಃ |
ಪ್ರಾಪಯತ್ಯನಿಶಂ ಭಕ್ತಾನ್ ತಂ ವಿದ್ಯಾರಣ್ಯಮಾಶ್ರಯೇ || ೨೩ ||

ಅವಿದ್ಯಾರಣ್ಯ ಸಂಕ್ಲೇಶ ಕೃಶಾನು ಭೃಶತಾಪಿತಃ |
ಸಂಶ್ರಯೇ ಸತತಂ ಭೂತ್ಯೈ ಚಂದ್ರಶೇಖರ ಚಂದ್ರಿಕಾಂ || ೨೪ ||

ಅವಿದ್ಯಾಖ್ಯದ್ವಿಷದ್ವೈಧೀಭಾವೇ ದಕ್ಷಂ ಸಮಾಶ್ರಯೇ |
ನೃಸಿಂಹಭಾರತೀಶಾಖ್ಯ ಹರಿಂ ಶ್ರುತಿಗುಹಾಶ್ರಯಂ || ೨೫ ||

ಪುರುಷೋತ್ತಮತಾಂ ಯಾಂತಿ ಯಮಾಶ್ರಿತ್ಯ ಜನಾಶ್ರಯೇ |
ಕ್ಷರಾಕ್ಷರಮತೀತಂ ತಂ ಪುರುಷೋತ್ತಮ ಯೋಗಿನಂ || ೨೬ ||

ಕಿಂಕರೀಕೃತ ಭೂಪಾಲಂ ಪಂಕೇರುಹ ಸಮಾನನಂ |
ತಂ ಕಾರುಣ್ಯಪಯೋರಾಶಿಂ ಶಂಕರಾಖ್ಯಂ ಗುರುಂ ಶ್ರಯೇ || ೨೭ ||

ಚಂದ್ರಿಕಾಧವಳೋದಾರ ಸಾಂದ್ರಕೀರ್ತಿ ಜಟಾಧರಂ |
ಇಂದ್ರಿಯೈರ್ದುರ್ಜಯಂ ನೌಮಿ ಚಂದ್ರಶೇಖರಭಾರತೀಂ || ೨೮ ||

ಪ್ರಸಿದ್ಧ ವಿದ್ಯಾನಿಲಯಂ ಲಸಮಾನಗುಣೋತ್ಕಟಂ |
ಬಿಸಜಾಕ್ಷಾರ್ಚಕಂ ಭಕ್ತ್ಯಾ ನೃಸಿಂಹಂ ತೀರ್ಥಮಾಶ್ರಯೇ || ೨೯ ||

ಪುರುಹೂತಾದಿದೇವೌಘ ಪೌರುಷೇಯ ಗುಣೋತ್ಕಟಂ |
ಪುರುಷಾರ್ಥಪ್ರದಂ ನೌಮಿ ಪುರುಶೋತ್ತಮ ಯೋಗಿನಂ || ೩೦ ||

ಕಾಮದ್ವಿರದ ಪಂಚಾಸ್ಯರಾಮಣೀಯಕ ಮಂದಿರಂ |
ಸೋಮೋಪಮಾನನಂ ಶ್ರೀಮದ್ರಾಮಚಂದ್ರಂ ಗುರುಂ ಭಜೇ || ೩೧ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾರಾಸಾರ ವಿವೇಕಜ್ಞಂ ಮಾರಕಾನನಕುಂಜರಂ ।
ಶೂರಂ ದಾನೇ ಚ ನಿರತಂ ನಾರಸಿಂಹಯತಿಂ ಭಜೇ ॥ ೩೩ ॥

ನೃಸಿಂಹತಾಂ ಪ್ರಯಾಂತ್ಯಾಶು ಯಮಾಶ್ರಿತ್ಯ ಜನಾ ಭುವಿ ।
ನೃಸಿಂಹಭಾರತೀಂ ವಂದೇ ದ್ವಿಗುಣೋಪಪದಂ ಸದಾ ॥ ೩೪ ॥

ತಂ ಸರ್ವಭೂತಾಭಯದಂ ವಿಭವೈರನ್ವಿತಂ ಪರಂ ।
ನಾರಸಿಂಹಂ ಗುರುಂ ಚಾಪಿ ನವಂ ಜ್ಞಾನಾರ್ಣವಂ ಭಜೇ ॥ ೩೫ ॥

ಸತ್ಯಸ್ವರೂಪಂ ಸದ್ಜ್ಞಾನನಿಷ್ಠಂ ಸಾಕ್ಷಾಚ್ಛಿವಂ ಪರಂ ।
ಸದಾ ದಾನರತಂ ದಾಂತಂ ಸಚ್ಚಿದಾನಂದಮಾಶ್ರಯೇ ॥ ೩೬ ॥

ಮಹಾಮೇರುಸಮಂ ಧೈರ್ಯೇ ಮಾಧುರ್ಯೇಽಸ್ಪಮೃತೋಪಮಂ ।
ಊಹಾಪೋಹಾರ್ಥನಿಷ್ಣಾತಂ ನಾರಸಿಂಹಂ ಗುರುಂ ಭಜೇ ॥ ೩೭ ॥

ಸಚ್ಚಿತ್ತಾಂಬುಜಮಿತ್ರಾಯ ಸಚ್ಚರಿತ್ರಯುಜೇ ನಮಃ ।
ಸಚ್ಚಿದಾನಂದಭಾರತ್ಯೈ ಸಚ್ಚಿದಾನಂದಮೂರ್ತಯೇ ॥ ೩೮ ॥

ಸಚ್ಚಿದಾನಂದ ಭಾರತ್ಯೈ ನಮ್ಯಾಯಾಸ್ತು ನಮೋಽನಿಶಂ ।
ಭವ್ಯಾತ್ಮಜ್ಞಾನ ನಿರ್ಧೂತಾ ವಿದ್ಯಾ ಕಾರ್ಯೋಪಲಬ್ಧಯೇ ॥ ೩೯ ॥

ಪರಮಾತಂಗಪಂಚಾಸ್ಯಂ ಮದಸರ್ಪದ್ವಿಜರ್ಷಭಂ ।
ನೃಸಿಂಹ ಭಾರತೀಂ ವಂದೇ ಜಿತಾಕ್ಷತುರಗಂ ಸದಾ ॥ ೪೦ ॥

ತತ್ತ್ವಮಸ್ಯಾದಿ ವೇದಾಂತ ವಾಕ್ಯಾರ್ಥ ಜ್ಞಾನವಾರಿಧೇಃ ।
ಪೂರ್ಣಚಂದ್ರಮಸಂ ವಂದೇ ಸಚ್ಚಿದಾನಂದಯೋಗಿನಂ ॥ ೪೧ ॥

ಅಭಿನವಪದಪೂರ್ವಾನ್ ಸಚ್ಚಿದಾನಂದ ಸಂಜ್ಞಾನ್
ನಿಗಮಶಿಖರವೇದ್ಯಾನ್ ಸರ್ವಕಲ್ಯಾಣ ರೂಪಾನ್ ।
ತ್ರಿಭುವನಜನ ವಂದ್ಯಾನ್ ಸರ್ವಲೋಕೈಕ ಹೃದ್ಯಾನ್
ಹೃದಯಕಮಲಮಧ್ಯೇ ಭಾವಯಾಮ್ಯಂಬುಜಾಸ್ಯಾನ್ ॥ ೪೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರಸಿಂಘುಲಸತ್ಕೀರ್ತಿಂ ಸ್ಮರಸಿಂಧು ಘಟೋದ್ಭವಂ ।
ನರಸಿಂಹಾರ್ಚಕಂ ಶ್ರೀಮನ್ನಾರಸಿಂಹಯತಿಂ ಭಜೇ ॥ ೩೨ ॥

ಪ್ರಹ್ಲಾದವರದೋ ದೇವೋ ಯೋ ನೃಸಿಂಹಃ ಪರೋ ಹರಿಃ ।
ನೃಸಿಂಹೋಪಾಸಕಂ ನಿತ್ಯಂ ತಂ ನೃಸಿಂಹಗುರುಂ ಭಜೇ ॥ ೪೩ ॥

ಶ್ರೀಸಚ್ಚಿದಾನಂದ ಶಿವಾಭಿನವ್ಯ
ನೃಸಿಂಹಭಾರತ್ಯಭಿಧಾನ್ ಯತೀಂದ್ರಾನ್ ।
ಮದೀಯ ಜನ್ಮಾಂತರ ಪುಣ್ಯಲಭ್ಯಾನ್
ಅಸ್ಮದ್ಗುರೂನ್ ಸಂತತಮಾನತೋಽಸ್ಮಿ ॥ ೪೪ ॥

ಯೋಗಿಜ್ಞಾನಿವರೇಣ್ಯ ಶ್ರೀ ಚಂದ್ರಶೇಖರಭಾರತೀಂ ।
ಜೀವಾತ್ಮೈಕ್ಯಾನುಸಂಧಾನಚತುರಂ ಗುರುಮಾಶ್ರಯೇ ॥ ೪೫ ॥

ವಿದ್ಯಾನಿಧಿಸ್ತ್ವಭಿನವೋ ವಿದ್ಯಾತೀರ್ಥಾಭಿದೋ ಮಹಾನ್
ಅವಿದ್ಯಾದ್ವಿಪಪಂಚಾಸ್ಯೋ ಜಯತ್ಯದ್ಯ ಜಗದ್ಗುರುಃ ॥ ೪೬ ॥

ಜಗದ್ಗುರೋರಭಿನವ ವಿದ್ಯಾತೀರ್ಥ ಮಹಾಗುರೋಃ ।
ಕರಾನುಗ್ರಹ ಸಂಜಾತಃ ಭಾರತೀ ತೀರ್ಥನಾಮಭಾಕ್
ಅನ್ವರ್ಥನಾಮಾ ಯತಿರಾಟ್ ಚಾದ್ಯ ಭಾತಿ ಜಗದ್ಗುರುಃ ॥ ೪೭ ॥

ಇತಿ ಗುರುಪರಂಪರಾ ಸ್ತೋತ್ರಂ ಸಂಪೂರ್ಣಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಜಗದ್ಗುರು ಮಂಗಳಾಷ್ಟಕಂ

ಮಂಗಲಂ ಪೂಜ್ಯಪಾದಾಯ ಮಹನೀಯಗುಣಾತ್ಮನೇ ।
ವಿದ್ಯಾತೀರ್ಥಸ್ವರೂಪಾಯ ಗುರುರಾಜಾಯ ಮಂಗಲಂ ॥ ೧ ॥

ಸದಾಶಿವಸ್ವರೂಪಾಯ ದಿವ್ಯಜ್ಞಾನಪ್ರದಾಯಿನೇ ।
ದಕ್ಷಿಣಾಮೂರ್ತಿರೂಪಾಯ ಯತಿರಾಜಾಯ ಮಂಗಲಂ ॥ ೨ ॥

ಭಸ್ಮೋದ್ಧೂಲಿತಗಾತ್ರಾಯ ತುಂಗಾತೀರ ನಿವಾಸಿನೇ ।
ರುದ್ರಾಕ್ಷಮಾಲಾ ಭೂಷಾಯ ಯೋಗಿರಾಜಾಯ ಮಂಗಲಂ ॥ ೩ ॥

ಸಚ್ಚಿದಾನಂದರೂಪಾಯ ಹಾಸಪೂರ್ವಾಭಿ ಭಾಷಿಣೇ ।
ಹಂಸಮಂತ್ರಾರ್ಥತತ್ತ್ವಾಯ ಹಂಸಸೇವ್ಯಾಯ ಮಂಗಲಂ ॥ ೪ ॥

ವಿದ್ಯಾಶಂಕರ ರೂಪಾಯ ಭಕ್ತಾನುಗ್ರಹಕಾರಿಣೇ ।
ಕಾಲಟೀಶಾವತಾರಾಯ ಕೃಪಾಪೂರ್ಣಾಯ ಮಂಗಲಂ ॥ ೫ ॥

ಶಂಕರಾಚಾರ್ಯರೂಪಾಯ ಪರಬ್ರಹ್ಮಸ್ವರೂಪಿಣೇ ।
ಪರಿವ್ರಾಜಕರೂಪಾಯ ಪರಮಹಂಸಾಯ ಮಂಗಲಂ ॥ ೬ ॥

ಮಾಯಾಮಾನುಷರೂಪಾಯ ಮಂಜುಕಾಷಾಯಧಾರಿಣೇ ।
ಶೃಂಗಾದ್ರಿಪುರವಾಸಾಯ ದಂಡಹಸ್ತಾಯ ಮಂಗಲಂ ॥ ೭ ॥

ಲೋಕಪೂಜ್ಯಾಭಿಪೂಜ್ಯಾಯ ವಿಶಾಲಾಮಲ ಚೇತಸೇ ।
ಶಾರದಾಮೂರ್ತಯೇ ತುಭ್ಯಂ ದೇಶಿಕೇಂದ್ರಾಯ ಮಂಗಲಂ ॥ ೮ ॥

ಮಂಗಲಾಷ್ಟಕಮೇತದ್ವೈ ಗುರೋರ್ಯಃ ಕೀರ್ತಯೇದ್ದಿನೇ ।
ಆಯುರಾರೋಗ್ಯಮೈಶ್ವರ್ಯಂ ಲಭತೇ ನಾತ್ರ ಸಂಶಯಃ ॥ ೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಶಾರದಾಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮತ್ ಅಭಿನವ ವಿದ್ಯಾತೀರ್ಥ ವಿಜಯ

ಅಧ್ಯಾಯ ೧

ಜೀವನ್ಮುಕ್ತರ ಮಹಿಮೆ

ನ ಚ ಪ್ರಸಾದಃ ಸತ್ಪುರುಷೇಷು ಮೋಘೋ
ನಚಾಪ್ಯರ್ಥೋ ನಶ್ಯತಿ ನಾಪಿ ಮಾನಃ ।
ಯಸ್ಮಾದೇತಂ ನಿಯತಂ ಸತ್ಸು ನಿತ್ಯಂ
ತಸ್ಮಾತ್ ಸನ್ತೋ ರಕ್ಷಿತಾರೋ ಭವನ್ತಿ ॥

(ಮಹಾಭಾರತ, ವನಪರ್ವ ೨೯೭-೫೦)

ಮಹಾತ್ಮರ ಹೃದಯದಲ್ಲಿ ಉದ್ಭವಿಸುವ ಅನುಗ್ರಹ ವ್ಯರ್ಥವಾಗುವುದಿಲ್ಲ; ದ್ರವ್ಯ ನಾಶ ವುಂಟಾಗುವುದಿಲ್ಲ; ಅವರಿಂದ ಯಾವ ಗೌರವವೂ ಬಾಧಿಸಲ್ಪಡುವುದಿಲ್ಲ. ಕರುಣೆ, ಕಾರ್ಯಸಿದ್ಧಿ, ಗೌರವ - ಈ ಮೂರೂ ಅವರುಗಳಿಂದ ಕಾಪಾಡಲ್ಪಟ್ಟವೇ ಆದ್ದರಿಂದ ಲೋಕವನ್ನು ಕಾಪಾಡುವುದು ಮಹಾತ್ಮರುಗಳೇ. ಮುಂಡಕೋಪನಿಷತ್ತಿನ ವಾಕ್ಯ "ಆತ್ಮಜ್ಞಂಹ್ಯರ್ಚಯೇತ್ ಭೂತಿಕಾಮಃ" ಏಳಿಗೆಯನ್ನು ಬಯಸುವವನು ಆತ್ಮಜ್ಞನನ್ನು ಅರ್ಚಿಸಬೇಕು) ಎಂಬುದು.

ಮಂಗಳಗಳನ್ನು ಪಡೆಯಬಯಸುವವರು ಸತ್ಯವಾದ ಸಂಕಲ್ಪಗಳ ಫಲವಾದ ಆತ್ಮಜ್ಞಾನದಿಂದ ಅಂತಃಕರಣ ಶುದ್ಧಿಯನ್ನು ಪಡೆದ ಮಹಾತ್ಮರುಗಳಿಗೆ ಪಾದಪ್ರಕ್ಷಾಳನ, ನಮಸ್ಕಾರ, ಮೊದಲಾದ ಶುಶ್ರೂಷೆಗಳನ್ನು ಮಾಡಿ ಮೇಲ್ಮೆಯನ್ನು ಪಡೆಯಬೇಕು—ಎಂಬುದು ಈ ವಾಕ್ಯದ ಅರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನ್ಮುಕ್ತರ ಲಕ್ಷಣ ಅವರ ಜನನ ಕಾಲದಿಂದಲೇ ಕಾಣಬರುವುದು. ಒಬ್ಬ ಮನುಷ್ಯನು ಹುಟ್ಟಿದ ಮೇಲೆ ಓದಿ ವಿಷಯಗಳನ್ನರಿತು 'ಲೋಕ ಅನಿತ್ಯ' ಎಂದು ತಿಳಿದ ಮೇಲೆ, ಜ್ಞಾನಿಯಾಗಿ ಜೀವನ್ಮುಕ್ತನಾಗುತ್ತಾನೆ — ಎಂದು ಭಾವಿಸುವುದು ಸರಿಯಲ್ಲ. ಹಲವು ಜನ್ಮಗಳಲ್ಲಿ ಆಚರಿಸಲ್ಪಟ್ಟ ಸತ್ಕರ್ಮದ ಫಲವಾಗಿ ಚಿತ್ತಶುದ್ಧಿಯೂ, ತರುವಾಯ ಜ್ಞಾನಶುದ್ಧಿಯೂ ಲಭ್ಯವಾಗುವುವು. ಆ ಜ್ಞಾನವು ಪಕ್ವವಾಗುವ ಮುಂಚೆಯೇ ಆಯುಷ್ಕಾಲ ಮುಗಿದು ಹೋದದ್ದೇ ಆದರೆ ಆ ಸತ್ಕರ್ಮದ ಫಲವನ್ನು ಅವನು ಕಳೆದುಕೊಳ್ಳುವುದಿಲ್ಲ. ಅದನ್ನು ಪಡೆದೇ ಪಡೆಯುತ್ತಾನೆಯೆಂದು ನಮ್ಮ ಶಾಸ್ತ್ರಗಳಲ್ಲಿ ಹೇಳಿದೆ. ಇದೇ ಭಗವದ್ಗೀತೆಯಲ್ಲಿ,

> ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ
> ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ||
>
> (೬ – ೪೧,೪೨)

ಎಂದು ಹೇಳಿರುವುದು.

> (ಯೋಗಭ್ರಷ್ಟನಾದವನು ಶುಚಿಗಳೂ, ಶ್ರೀಮಂತರೂ ಆದವರ ಮನೆಯಲ್ಲಿ ಹುಟ್ಟುತ್ತಾನೆ ಅಥವಾ ಧೀಮಂತರಾದ ಯೋಗಿಗಳ ಕುಲದಲ್ಲಿ ಹುಟ್ಟುತ್ತಾನೆ.)

ಹಾಗೆಂದರೆ ಜ್ಞಾನವನ್ನು ಪಡೆದು ಆ ಜನ್ಮದಲ್ಲಿಯೇ ಜೀವನ್ಮುಕ್ತನಾಗುವುದರೊಳಗೆ, ಎಂದರೆ ಮರುಹುಟ್ಟಿಲ್ಲದ ಸ್ಥಿತಿಯನ್ನು ಪಡೆಯುವುದರೊಳಗೇ ಶರೀರವನ್ನು ಕಳೆದುಕೊಂಡವನು, ಯೋಗಭ್ರಷ್ಟನಾಗಿ ಮತ್ತೊಂದು ಜನ್ಮವನ್ನು ಎತ್ತುತ್ತಾನೆ. ಅದು ಎರಡು ಬಗೆಯಾಗಿದೆ. ಒಳ್ಳೆಯ ಆಚಾರಗಳುಳ್ಳ ಹಣಗಾರರ ಕುಟುಂಬದಲ್ಲಿ ಹುಟ್ಟಬಹುದು; ಇಲ್ಲದಿದ್ದರೆ ಕರ್ಮಯೋಗ ಮೊದಲಾದ ಶಾಸ್ತ್ರೀಯವಾದ ಕ್ರಮದಲ್ಲಿ ಅನುಷ್ಠಾನ ಮಾಡುತ್ತಾ ಬರುವ ಬುದ್ಧಿವಂತರಾದ (ಬಡ) ಕುಟುಂಬಗಳಲ್ಲಿ ಹುಟ್ಟಬಹುದು. ಮೊದಲ ಬಗೆಗೆ ಜನಕ ಮಹಾರಾಜನನ್ನೂ, ಎರಡನೆಯ ಬಗೆಗೆ ಕುಚೇಲ ಸ್ವಾಮಿಯನ್ನೂ ಉದಾಹರಣೆ [illegible] ಹುಟ್ಟುವವರಲ್ಲಿ ಉತ್ತಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣಗಳು ಬಾಲ್ಯದಲ್ಲಿಯೇ ಸ್ಪಷ್ಟವಾಗಿ ಕಾಣಬರುತ್ತವೆ. ಹಾಗೆಂದರೆ, ಅವರು ಬಾಲ್ಯ ಮೊದಲುಗೊಂಡೇ ಲೌಕಿಕ ವಿಷಯಗಳಲ್ಲಿ ಆಸಕ್ತಿ ಇಲ್ಲದವರಾಗಿ, ಯಾವಾಗಲೂ ಈಶ್ವರ ಭಕ್ತಿಯಿಂದ ಕೂಡಿರುತ್ತಾರೆ; ಜೀವನದಲ್ಲಿ ಅಧಿಕವಾಗಿ ಮನಸ್ಸು ನೆಡುವುದಿಲ್ಲ; ಬಹು ಹರಿತವಾದ ಬುದ್ಧಿಶಕ್ತಿಯುಳ್ಳವರು; ಅಧಿಕ ಆಸೆಯಿಲ್ಲದೆ, ಪ್ರಾಮಾಣಿಕ ಬುದ್ಧಿಯಿಂದ ಋಜುಮಾರ್ಗದಲ್ಲಿ ನಡೆಯುತ್ತಾ ಕಾಲಕಳೆಯುತ್ತಾರೆ. ಇವರು ಬದುಕಿ ಬಾಳಿದ ಚರಿತ್ರೆಯನ್ನು ನೋಡಿದರೆ ಈ ವಿಷಯು ಚೆನ್ನಾಗಿ ವ್ಯಕ್ತವಾಗುತ್ತದೆ.

ತಮಿಳು ನಾಡಿನ ಮತ ಧರ್ಮ ಸಂಪನ್ನರುಗಳ ಹಾಡುಗಳನ್ನು ನೋಡಿದರೆ ಜೀವನ್ಮುಕ್ತನ ಪೂರ್ವಾನುಭವಗಳ ಮಹಿಮೆ ಪ್ರಕಾಶವಾಗಿ ತೋರುತ್ತದೆ.

ಪರಮ ಶಿವನಿಂದ 'ಅಮ್ಮಾ' ಎಂದು ಕರಸಿಕೊಂಡ 'ಕಾರೈಕ್ಕಾಲ್ ಅಮ್ಮೈ' ಯವರ 'ಅರ್ಬುದತ್ತಿರುವನ್ದಾದಿ' (ಅರ್ಭುತ ಸಿರಿ ಅಂತಾದಿ) ಯಲ್ಲಿನ ಮೊದಲ ಪದ್ಯ,

" ಪಿಱನ್ದು ಮೊೞಿ ಪಯಿನ್ರು ಪಿನ್ ಎಲ್ಲಾಮ್ ಕಾದಲ್
ಶಿಱನ್ದು ನಿನ್ ಶೇವಡಿಯೇ ಶೇರ್‌ನ್ದೇನ್ - ನಿಱನ್ತಿಗೞುಮ್
ಮೈ ಇಞ್ಞಾನ್ರು ಕಣ್ಡತ್ತು ವಾನೋರ್ ಪೆರುಮಾನೇ
ಎಞ್ಞಾನ್ರು ತೀರ್ಪದು ಇಡರ್ ? "

(ಹುಟ್ಟಿ ನುಡಿಗಲಿತು ಆ ಬಳಿಕವೆಲ್ಲಾ ಒಲವು
ಮಿಗಿಲಾಗಿ ನಿನ್ನ ಚೆನ್ನಡಿಗಳನೆ ಸೇರ್ದೆನ್ – ಕಳೆಯೆಸೆವ
ಕಪ್ಪೊರೆದ ಕಂಠದನೆ, ಬಾನವರ ದೇವನೇ,
ಯಾವ ದಿನ ತೀರುವುದೋ ಎಡರು ?)

ಇದರಲ್ಲಿ ಭೂಮಿಯ ಮೇಲೆ ಹುಟ್ಟಿದ ಮೇಲೆ, ಓದಿ ವಿಷಯಗಳನ್ನು ಕಲಿತು ಅರಿತುಕೊಂಡ ಬಳಿಕ ಭಕ್ತಿಯುಂಟಾಗಿ, ಆ ಕಾರಣದಿಂದ ಈಶ್ವರಾನುಗ್ರಹ ದೊರೆತು, ಆ ಮೂಲಕ ಜ್ಞಾನೋದಯವಾದ ಸ್ಥಿತಿ ತೋರಿಸಲಾಗಿದೆ. ಲೋಕದಲ್ಲಿ ಸ್ವಲ್ಪವುಟ್ಟಿಗೆ ಓದಿ ತಿಳಿದಮೇಲೆ ಈಶ್ವರಾನುಗ್ರಹ ದೊರೆತ ಸ್ಥಿತಿ ಇದು.

Sri Vidyabharathi Book Centre, Sringeri

CC-0. In Public Domain. Digitized by eGangotri

ಇತ್ತೀಚಿನ ಕಾಲದಲ್ಲಿ ಹುಟ್ಟಿಬಂದ ವಳ್ಳಲ್ (ಉದಾರಿ ಪ್ರಭು) ಜ್ಯೋತಿ ರಾಮಲಿಂಗ ಸ್ವಾಮಿಗಳು ತಮ್ಮ ಸ್ಥಿತಿಯನ್ನು ಕುರಿತು ಪದ್ಯಮಾಲಿಕೆಯನ್ನು ಹೇಳುವಾಗ, 'ಎಳವೆಯಲ್ಲೇ, ಯಾವವಿಧವಾದ ಓದೂ ಇಲ್ಲದ ಸ್ಥಿತಿಯಲ್ಲಿಯೇ ತಮ್ಮನ್ನು ಭಗವಂತನು ಸ್ವೀಕರಿಸಿ ಆಳ್ಗೊಂಡನು (ದಾಸನಾಗಿ ಮಾಡಿಕೊಂಡನು)' ಎನ್ನುತ್ತಾರೆ. ಪ್ರಭುಗಳು ಮುರುಗನನ್ನು ಕಂಡರು. 'ಹೇಗೆ ಕಂಡರು?' ಎಂಬುದು ಅವರ ಈ ಮಾತಿನಿಂದ ವ್ಯಕ್ತವಾಯಿತು :

"ಅಱಿಯಾದ ಪರುವತ್ತೇ ಎನ್ನೈ ವಲಿನ್ದಱೈತ್ತೇ
ಆಡಲ್ ಶೆಯ್ಯುಮ್ ತಿರುವಡಿಕ್ಕೇ ಪಾಡಲ್ ಶೆಯಪ್ಪಣಿತ್ತಾರ್
ಮೆನ್ಮಾಲೈ ಶಿರುವರೋಡುಮ್ ವಿಳೈಯಾಡಿ ತ್ತಿರಿಯುಮ್
ಮಿಗಚ್ಚಿಱಿಯ ಪರುವತ್ತೇ ವಿಯನ್ದು ನಿನ್ನೈ ನಮದು
ಪೊಮ್ಮಾನ್ ಎನ್ರಡಿ ಕುಱಿತ್ತು ಪ್ಪಾಡುಮ್ ಪಡ್ಯೆ ಪುರಿನ್ದ
ಪೆರುಮಾನೇ, ನಾನ್ ಶೆಯ್ದ ಪೆರುನ್ದವಮೆಪ್ಪಯನೇ"

[ಅರಿಯದ ಆ ಅವಸ್ಥೆಯಲೇ ನನ್ನನು ಬಲಾತ್ಕರಿಸಿ ಕರೆದು,
ನರ್ತನ ನಡಸುವ ಸಿರಿಯಡಿಗಳಿಗೆ ಹಾಡು ಹಾಡಲಾಜ್ಞಾಪಿಸಿದರ್.
ಮಾಲೆಯಾಸೆಯ ಮಕ್ಕಳೊಡನೆ ಆಟವಾಡಿ ತಿರುಗುತಿರುವ
ಬಹಳ ಕಿರಿಯ ವಯಸಿನಲ್ಲಿ ಬೆರಗುಗೊಂಡು ನಿನ್ನ ನಮ್ಮ
ದೇವರೆಂದು ಅಡಿಯ ಕುರಿತು ಹಾಡುವ ಪರಿ ತಿಳಿಸಿಕೊಟ್ಟ
ಪರಮನೇ, ನಾ ಮಾಡಿದ ಮಹಾತಪಸ್ಸೆಂಥ ಫಲದದೋ !]

'ಯಾವುದೂ ಅರಿಯದ ಅವಸ್ಥೆ', 'ಬಹಳ ಕಿರಿಯ ವಯಸ್ಸು', 'ಬಲಾತ್ಕರಿಸಿ ಕರೆದು', ಎಂಬ ಪದಗಳಿಂದ, ತನ್ನನ್ನು ವಿದ್ಯಾಭ್ಯಾಸ ಇಲ್ಲದೆಯೇ ಈಶ್ವರನು ಆಳ್ಮಾಡಿಕೊಂಡನು ಎಂದು ಅಭಿಪ್ರಾಯವಾಗುತ್ತದೆ. ಇದು ಪೂರ್ವ ಜನ್ಮದ ಸತ್ಕರ್ಮದಿಂದುಂಟಾದ ಸುಕೃತವನ್ನು ಸೂಚಿಸುತ್ತದೆ. ಪ್ರಭುಗಳು ಓದದೆಯೇ ಅರಿತುಕೊಂಡ ಅನುಗ್ರಹ ಹೊಂದಿದ ಕವಿಗಳು.

ದೈವಸ್ವರೂಪರಾದ ತಿರುಜ್ಞಾನಸಂಬಂಧರು 'ಅಪ್ಪರೇ' ಎಂದು ಕರೆದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಿಮೆ ಹೊಂದಿದ ತಿರುನಾವುಕ್ಕರಸು ಸ್ವಾಮಿಗಳ ಅನುಭವ ಇನ್ನೂ ತೀವ್ರವಾದದ್ದು :

"ಕರುವಾಯ್ ಕ್ಕಿಡನ್ದು ನಿನ್ ಕಟಲೇ ಕಾಣುಮ್ ಕರುತ್ತುಡೈಯೇನ್
ಉರುವಾಯ್ ತ್ತೆರಿನ್ದು ಉನ್‌ದನ್ ನಾಮಮ್ ಪಯಿನ್ರೇನ್–ಉನದು
ತಿರುವಾಯ್ ಪೊರಿಯ ಶಿವಾಯ ನಮ ಎನ್ರು ನೀಱು ಅಣಿನ್ದೇನ್
ತರುವಾಯ್ ಶಿವಗತಿ ನೀ ಪಾದಿರಿ ಪ್ಪುಲಿಯೂರ್ ಅರನೇ"

[ಗರ್ಭವಾಗಿ ಕೆಡೆದು ನಿನ್ನಡಿಯನೇ ಕಾಣುವ ಭಾವವುಳ್ಳವನಾದೆ.
ರೂಪಗೊಂಡು ಮಾರ್ಪಟ್ಟು ನಿನ್ನ ನಾಮವನೆ ನೆನೆದೆ, ಕಲಿತೆ. – ನಿನ್ನ
ಸಿರಿಬಾಯಿ ತಣಿವಂತೆ 'ಶಿವಾಯ ನಮ' ಎಂದು ಭಸ್ಮ ಪೂಸಿದೆನು.
ನೀಡುವೈ ಶಿವಗತಿಯ, ನೀನು ಪಾದಿರಿ ಪ್ಪುಲಿಯೂರ ಹರನೇ!]

ತಾಯಿಯ ಹೊಟ್ಟೆಯಲ್ಲಿ ಗರ್ಭದಲ್ಲಿ ಇರುವಾಗಲೇ ಈಶ್ವರನ ಅನುಗ್ರಹವನ್ನು ಪಡೆದೆ - ಎಂಬ ಅನುಭವ ಇದು. ಹುಟ್ಟುವುದಕ್ಕೆ ಮೊದಲೇ ಪೂರ್ವಜನ್ಮಸುಕೃತದಿಂದ ಈಶ್ವರನ ಅನುಗ್ರಹ ಈ ಗರ್ಭದಲ್ಲಿನ ಶಿಶುವಿನ ಮೇಲೆ ಉಂಟಾಯಿತು ಎಂದು ತಿಳಿಯಬರುತ್ತದೆ.

ಅಪ್ಪರ ಅನುಭವವನ್ನು ವಿಮರ್ಶಿಸಿ ನೋಡುವ ಸಂದರ್ಭದಲ್ಲಿ, ಒಂದು ವೇಳೆ ಎಂಟು, ಒಂಬತ್ತು ತಿಂಗಳಿನ ಗರ್ಭದಲ್ಲಿ ಕಾಣುವ ಶಿಶುವಾಗಿದ್ದ ಕಾಲದಲ್ಲಿ ಈ ಕರುಣೆ ಒಳಗೆ ಪ್ರವೇಶ ಮಾಡಿತು— ಎಂದು ಭಾವಿಸಲೂ ಅವಕಾಶ ಉಂಟು.

ಇದಕ್ಕಿಂತಲೂ ತೀವ್ರವಾದ ತಮ್ಮ ಸ್ಥಿತಿಯನ್ನು 'ಮಾಣಿಕ್ಯವಾಚಕ' ಸ್ವಾಮಿಗಳು ತಮ್ಮ ಹಾಡಿನಲ್ಲಿ ಬೆಳಗಿಸುತ್ತಾರೆ :

"ಉರುತ್ತೆರಿಯಾ ಕ್ಕಾಲತ್ತೇ ಎನ್ ಉಳ್ ಪುಗುನ್ದು ಉಳಮ್ ಮನ್ನಿ
ಕರುತ್ತಿರುತ್ತಿ ಊನ್ಬುಕ್ಕು ಕರುಣೈಯಿನಾಲ್ ಆಣ್ಡುಕೊಣ್ಡ
ತಿರುತ್ತುರುತ್ತಿ ಮೇಯಾನೈ ತಿತ್ತಿಕ್ಕುಮ್ ಶಿವಪದತ್ತೈ
ಅರುತ್ತಿಯಿನಾಲ್ ನಾಯ್ ಅಡಿಯೇನ್ ಅಣಿಕೊಳ್ ತಿಲ್ಲೈ ಕ್ಕಣ್ಡೇನ್"

Sri Vidyabharathi Book Centre, Sringeri

CC-O. In Public Domain. Digitized by eGangotri

[ರೂಪು ತಿಳಿಯದ ಕಾಲದಲ್ಲೆ ನನ್ನೊಳಹೊಕ್ಕು ಮನದಲ್ಲಿ ನೆಲೆಸಿ
ಭಾವವನು ತಿದ್ದಿ ಮೈಹೊಕ್ಕು ಕರುಣೆಯಿಂದೆನ್ನನಾಳ್ಗೊಂಡ
ತಿರುತ್ತುರುತ್ತಿಯಲ್ಲಿ ನೆಲೆಗೊಂಡವನ ಸುಖವೀವ ಶಿವಪದನ
ನರ್ತಿಯಿಂದಾನು ನಾಯಂಥವನು, ಚೆನ್ನೆಸೆವ ತಿಲ್ಲೆಯಲಿ ಕಂಡೆ]

('ಉರುತ್ತೆರಿಯಾ ಕಾಲತ್ತೇ = ರೂಪು ತಿಳಿಯದ ಕಾಲದಲ್ಲೇ' ಎಂಬುದಕ್ಕೆ "ಒಡೆಯನಾದ ನಿನ್ನ ರೂಪವನ್ನು ನಾನು ಅರಿಯದಿದ್ದ ಕಾಲದಲ್ಲಿಯೇ" ಎಂದೂ 'ಊನ್ಪುಕ್ಕು = ಮೈಹೊಕ್ಕು' ಎಂಬುದಕ್ಕೆ "ದೇಹ ಧರಿಸಿಕೊಂಡು ಬಂದು" ಎಂದೂ ಕೆಲವರು ಅರ್ಥ ಮಾಡುತ್ತಾರೆ. 'ತಾಯಗರ್ಭದಲ್ಲಿ ಇನ್ನೂ ಸರಿಯಾಗಿ ರೂಪುದಾಳದಿರುವಾಗಲೇ' ಎಂದು ಮೊದಲನೆಯದಕ್ಕೂ, 'ನನ್ನ ಮೈಯಲ್ಲಿ ಪ್ರವೇಶಮಾಡಿ ಅಲ್ಲಿಯೇ ನೆಲೆಸಿ' ಎಂದು ಎರಡನೆಯದಕ್ಕೂ ಅರ್ಥ ಮಾಡುವುದು ಹೆಚ್ಚು ಸಮಂಜಸವಾಗುತ್ತದೆ. ತಿರುತ್ತುರುತ್ತಿ = ಚೋಳ ದೇಶದಲ್ಲಿರುವ ಒಂದು ಶಿವಕ್ಷೇತ್ರ. ತಿಲ್ಲೆ = ಚಿದಂಬರ.)

ಗರ್ಭದಲ್ಲಿರುವ ಮಾಂಸಪಿಂಡ 'ಶಿಶು' ಎಂಬ ರೂಪವೇ ಆಗದಿರುವ ಕಾಲ (ಎಂದರೆ, ನಾಲ್ಕು ಅಥವಾ ಐದು ತಿಂಗಳ ಗರ್ಭಕ್ಕೆ ಮುಂಚೆಯೇ) ಇದು ಗಂಡೋ ಹೆಣ್ಣೋ ಎಂಬ ಗುರುತೂ ತಿಳಿಯದ ಕಾಲ. ಈ ಸ್ಥಿತಿಯಲ್ಲಿ ಈಶ್ವರನ ಕರುಣೆ ಇದರಲ್ಲಿ ಪ್ರವೇಶ ಮಾಡಿತು ಎಂದರೆ, ತಾಯಿ ಗರ್ಭ ಧರಿಸುವ ಮೊದಲ ದಿನದಲ್ಲಿಯೇ ಮುಂದೆ ಹುಟ್ಟಲಿರುವ ಶಿಶುವಿನ ಪೂರ್ವಪುಣ್ಯವು, ಅದರಲ್ಲಿ ಯಾರೂ ಅರಿಯದಂತೆ, ಈಶ್ವರ ಮಾಯೆಯಿಂದ ಪ್ರವೇಶಿಸಿತು ಎಂದು ತಿಳಿಯ ಬರುತ್ತದೆ

ಈ ರೀತಿಯಾಗಿ ಹೊಗಳಿದ ಶಿವಜ್ಞಾನಿಗಳು ಹಿಂದಿನ ಕಾಲದಲ್ಲಿ ಎಷ್ಟೊಂದು ವಿಶೇಷ ಶಕ್ತಿಯೊಡನೆಯೂ, ಮಹತ್ತಾದ ಜ್ಞಾನದೊಡನೆಯೂ ಬೆಳಗುತ್ತಿದ್ದರು ಎಂದು ನಾವು ಅರಿಯಬಹುದು. ಇವರು ದೀರ್ಘದರ್ಶಿಗಳು. ತ್ರಿಕಾಲ ಜ್ಞಾನಿಗಳು ಬೇರೆಯವರ ಜನ್ಮ ಲಕ್ಷಣಗಳನ್ನು ಮಾತ್ರವಲ್ಲದೆ ಇವರು ತಮ್ಮ ಜನ್ಮದ ಮಹಿಮೆಯನ್ನೂ, ತಮ್ಮ ಹಿಂದಿನ ಜನ್ಮದ ಪುಣ್ಯ ಪಾಪಗಳನ್ನೂ ಚೆನ್ನಾಗಿ ತಿಳಿಯುವ ಶಕ್ತಿ ಪಡೆದಿರುವವರು. ಸಮಾಧಿ ನಿಷ್ಠೆಯಲ್ಲಿ ಯೋಗಿಗಳಿಗೆ ತ್ರಿಕಾಲ ಜ್ಞಾನ ಉಂಟಾಗುವುದೆಂಬುದು ಹಿರಿಯರ ವಾಕ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ, ಹುಟ್ಟುವಾಗಲೇ ಜೀವನ್ಮುಕ್ತರುಗಳಾಗಿ ಕೆಲವರು ಸೃಷ್ಟಿಸಲ್ಪಡುವರು ಎಂದು ನಾವು ಹಿಂದೆ ಹೇಳಿದ ಅಭಿಪ್ರಾಯ ಈ ಶೈವ ಸಮಯ ಸಂಪನ್ನರುಗಳ ವಾಕ್ಕಿನಿಂದ ಆಧಾರ ಹೊಂದಿದಂತಾಯಿತು.

ಆಗಲಾಗಿ, ಜೀವನ್ಮುಕ್ತರ ಚರಿತ್ರೆಯು ಲೋಕಕ್ಕೆ ಒಂದು ಮಾರ್ಗದರ್ಶಿಯಾದ ಶಾಸ್ತ್ರವಾಗುತ್ತದೆ. ಪುಸ್ತಕವನ್ನೋದಿ ಧರ್ಮಮಾರ್ಗವನ್ನು ತಿಳಿದುಕೊಳ್ಳುವುದು ಒಂದು ದಾರಿ. ಆದರೆ ಇದು ಕಠಿನ. ಆಗಾಗ ಹಲವು ಸಂದೇಹಗಳು ಕಾಣಿಸಿಕೊಳ್ಳುವುವು. ಅವುಗಳನ್ನು ಪರಿಹರಿಸುವುದಕ್ಕೆ ತಕ್ಕ ವಿವರಣೆ ಕೊಡುವುದಕ್ಕೆ ಒಬ್ಬ ಗುರು ಜೊತೆಯಲ್ಲೇ ಇರಬೇಕು. ಅವರು ಸಿಕ್ಕದೆ ಇದ್ದರೆ ಸಂದೇಹ ಪರಿಹಾರವಾಗುವುದಿಲ್ಲ. ಒಬ್ಬ ಜೀವನ್ಮುಕ್ತನ ಬಾಲ್ಯ ಮೊದಲುಗೊಂಡು ಇರುವ ಜೀವನಚರಿತ್ರೆಯನ್ನು ಓದಿದರೆ, ಅವರು ಒಂದೊಂದು ಸಂದರ್ಭದಲ್ಲೂ, ಒಬ್ಬೊಬ್ಬ ಮನುಷ್ಯನ ಬಳಿಯೂ ಹೇಗೆ ಹೇಗೆ ನಡೆದುಕೊಂಡು ಬಂದರು ಎಂದು ನೋಡುವಾಗ ಶಾಸ್ತ್ರದಲ್ಲಿ ಹೇಳಿರುವ ಧರ್ಮಗಳು ಬೇರೆ ವಿವರಣೆಗಳಿಲ್ಲದೆಯೇ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಆದರಿಂದ ಜೀವನ್ಮುಕ್ತರುಗಳ ಚರಿತ್ರೆಯೇ ಒಂದು ಕಾರ್ಯಾಂಶದಿಂದ ಕೂಡಿದ ಧರ್ಮಶಾಸ್ತ್ರ ಎನ್ನಬಹುದು. ಆದ್ದರಿಂದ ನಾವು ಹಲವರು ಜೀವನ್ಮುಕ್ತರುಗಳ ಚರಿತ್ರೆಯನ್ನು ಅವಶ್ಯವಾಗಿ ಓದಬೇಕು, ಅವರಲ್ಲಿ ಒಬ್ಬೊಬ್ಬರೂ ಜ್ಞಾನವನ್ನು ಪಡೆಯುವುದಕ್ಕೆ ಒಂದೊಂದು ಮಾರ್ಗವನ್ನು ಕೈಕೊಂಡವರಾಗಿರುತ್ತಾರೆ. ಅವೆಲ್ಲಾ ನಮ್ಮ ಜೀವನಕ್ಕೆ ಉದಾಹರಣೆಯಾಗಬಲ್ಲವು. ಆ ಮಾರ್ಗದಲ್ಲಿ ನಾವು ತೊಡಗಿ, ಜಿತೇಂದ್ರಿಯರಾಗಿ ಇದ್ದ ಪಕ್ಷದಲ್ಲಿ ನಮ್ಮ ನಡತೆ, ನಮ್ಮ ಕಾರ್ಯ, ನಮ್ಮ ಬಯಕೆಗಳು ಎಲ್ಲವೂ ಸಾಧುವಾಗಿ ಆಗಿಬಿಡುತ್ತವೆ. ಆಗ ನಮ್ಮ ಮನಸ್ಸು ಪರಿಶುದ್ಧಿ ಹೊಂದಿ, ಅದರಲ್ಲಿ ತಲೆದೋರುವ ಆಲೋಚನೆಗಳೆಲ್ಲಾ ಯಾವ ವಿಧವಾದ ತಪ್ಪೂ ಇಲ್ಲದೆ, ಸಾಧುವಾಗಿಯೇ ಇರುತ್ತವೆ. ಇದನ್ನು ತಾನೆ ಕವಿ ಕಾಳಿದಾಸನು ಶಾಕುಂತಲ ನಾಟಕದಲ್ಲಿ,

ಸತಾಂ ಹಿ ಸಂದೇಹಪದೇಷು ವಸ್ತುಷು
ಪ್ರಮಾಣಮನ್ತಃಕರಣ ಪ್ರವೃತ್ತಯಃ।

Sri Vidyabharathi Book Centre, Sringeri

CC-O. In Public Domain. Digitized by eGangotri

(ಸಜ್ಜನರ್ಗೆ ಸಂದೇಹವುಂಟಾದ ವಿಷಯಗಳಲಿ
ಅವರ ಹೃದಯದೊಲವೇ ಪ್ರಮಾಣವಾಗುವುದು)

ಎಂದು ಹೇಳಿದ್ದು. ಸಂದೇಹವುಂಟಾಗುವಾಗ ಸಾಧುಗಳಿಗೆ (ಜಿತೇಂದ್ರಿಯ ರುಗಳಿಗೆ) ಅವರ ಮನಸ್ಸಿನಲ್ಲಿ ತಲೆದೋರುವ ಅಭಿಪ್ರಾಯವೇ ಪ್ರಮಾಣ ವಾಗುವುದು ಎಂದು ಇದರ ಅರ್ಥ. ಯಾವ ವಿಷಯದಲ್ಲೇ ಆದರೂ ಹೇಗೆ ಮಾಡುವುದು ಎಂದು ಸಾಧುವಿಗೆ ಸಂದೇಹವುಂಟಾದರೆ, ಅವನ ಮನಸ್ಸಿನಲ್ಲಿ ತೋರುವ ತೀರ್ಮಾನಗಳೇ ಅವುಗಳಿಗೆ ಪ್ರಮಾಣವಾಗುವುದು. ಶಾಸ್ತ್ರಗಳನ್ನು ಹುಡುಕಬೇಕಾಗಿಲ್ಲ, ಏಕೆಂದರೆ, ಆವನ ಮನಸ್ಸು ಜಿತೇಂದ್ರಿಯನದು; ಸಾಧು ವಾದದ್ದು; ಧರ್ಮವನ್ನು ತಪ್ಪದೆ ಸೇರಿಕೊಂಡಿರುವ ಮಾರ್ಗದಲ್ಲಿಯೇ ನಡೆಯು ತ್ತಿರುತ್ತದೆ. ಆದ್ದರಿಂದ ಅದು ತಪ್ಪಾದ ಆಲೋಚನೆಗಳಿಗೆ ಎಡೆಗೊಡುವುದಿಲ್ಲ— ಎಂಬುದೇ ತಾತ್ಪರ್ಯ.

ಈ ರೀತಿ ಲೋಕದಲ್ಲಿ ಒಬ್ಬೊಬ್ಬನೂ ಸಾಧುವಾಗಿ, ಅವನ ಮನಸ್ಸೂ ಸಾಧುವಿನ ಮನಸ್ಸು ಎಂಬ ರೀತಿಯಲ್ಲಿ ಏರ್ಪಡಬೇಕಾದಲ್ಲಿ, ಸಾಧುಗಳೊಡನೆ, ಜಿತೇಂದ್ರಿಯರುಗಳೊಡನೆ, ಜೀವನ್ಮುಕ್ತರುಗಳೊಡನೆ ಸಹವಾಸವಿಟ್ಟುಕೊಂಡು ಪಳಗಿ ಅವರ ನಡತೆಯನ್ನು ಗಮನಿಸಿ, ತಾನು ಹಾಗೆಯೇ ನಡೆಯುವುದಕ್ಕೆ ಅಭ್ಯಾಸ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯ.

ಕುಲಂ ಪವಿತ್ರಂ ಜನನೀ ಕೃತಾರ್ಥಾ
ವಿಶ್ವಂಭರಾ ಪುಣ್ಯವತೀ ಚ ತೇನ।
ಅಪಾರ ಸಚ್ಚಿತ್ಸುಖಸಾಗರೇಽಸ್ಮಿನ್
ಲೀನಂ ಪರೇ ಬ್ರಹ್ಮಣಿ ಯಸ್ಯ ಚೇತಃ॥

ಯಾವನ ಮನಸ್ಸು ಸಚ್ಚಿದಾನಂದ ಸುಖ ಸಮುದ್ರವಾದ ಪರಬ್ರಹ್ಮ ನಿಷ್ಠೆಯಲ್ಲಿ ತೊಡಗಿರುವುದೋ ಅವನಿಂದ ಅವನ ಕುಲ ಪರಿಶುದ್ಧಿ ಪಡೆಯು ತ್ತದೆ. ಅವನ ತಾಯಿ ಮಾಡಬೇಕಾದ್ದನ್ನು ಮಾಡಿದವಳಾಗುತ್ತಾಳೆ. ಅವನಿಂದ ಈ ಭೂಮಿಯು ಪುಣ್ಯವತಿಯಾಗುತ್ತದೆ ಎಂದು ಅರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈರೀತಿಯಾಗಿರುವ ಜೀವನ್ಮುಕ್ತರು ಹುಟ್ಟುವುದು ಕೋಟಿಯಲ್ಲಿ ಒಬ್ಬರೇ. ಅವರುಗಳನ್ನು ನಾವು ದರ್ಶಿಸಿದ ಮಾತ್ರದಿಂದಲೇ ಅವರುಗಳ ಕಟಾಕ್ಷ ನಮ್ಮ ಮೇಲೆ ಬಿದ್ದು ನಾವು ಪರಿಶುದ್ಧರಾಗುತ್ತೇವೆ. "ದರ್ಶನಾದೇವ ಸಾಧವಃ" (ದರ್ಶನದಿಂದಲೇ ಸಾಧುಗಳು) ಎಂದು ಹೇಳಲ್ಪಡುವುದು. ನಮ್ಮ ಮನಸ್ಸಿನಲ್ಲಿ ಅವರ ಜ್ಞಾನವೂ ಶಾಂತಿಯೂ ಉಂಟಾಗಿಬಿಡುವುದು. ಮುಂಡಕೋಪನಿಷತ್ತಿನಲ್ಲಿ

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ।
ಶ್ರೋತ್ರಿಯಂ ಬ್ರಹ್ಮನಿಷ್ಠಮ್ (೧-೨-೧೨)

[ಅದನ್ನು ತಿಳಿದುಕೊಳ್ಳುವುದಕ್ಕಾಗಿ ಅವನ ಕೈಯಲ್ಲಿ ಸಮಿತ್ತನ್ನು ಹಿಡಿದುಕೊಂಡು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೇ ಹೋಗಬೇಕು]

ಎಂದು ಹೇಳಲಾಗಿದೆ.

ಜೀವಬ್ರಹ್ಮರ ಐಕ್ಯವನ್ನು ಬೋಧಿಸುವ ಮಹಾವಾಕ್ಯಗಳನ್ನು ಚೆನ್ನಾಗಿ ಕಲಿತು ಬ್ರಹ್ಮಸ್ವರೂಪವನ್ನು ನೇರವಾಗಿ ಅರಿಯಬೇಕಾದರೆ ಶಾಸ್ತ್ರಜ್ಞನಾಗಿಯೂ ಅನುಷ್ಠಾನಪರನಾಗಿಯೂ, ಬ್ರಹ್ಮನಿಷ್ಠನಾಗಿಯೂ, ಇರುವ ಒಬ್ಬ ಗುರುವನ್ನು ನಮ್ರತೆಯಿಂದ ನಮಸ್ಕಾರಪೂರ್ವಕವಾಗಿ ಹೋಗಿ ಸೇರಬೇಕು — ಎಂದು ಇದರ ಅರ್ಥ.

ಆದಿಶಂಕರ ಭಗವತ್ಪಾದರು ಇಂಡಿಯದ ನಾಲ್ಕು ದಿಕ್ಕುಗಳಲ್ಲಿ, ಶೃಂಗೇರಿ, ದ್ವಾರಕೆ, ಬದರಿ, ಪುರಿ – ಎಂಬ ನಾಲ್ಕು ಪುಣ್ಯಸ್ಥಳಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದಾಗ, ಮೇಲೆ ಹೇಳಿದ ಉಪನಿಷದ್ವಾಕ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು, "ಶಾಸ್ತ್ರಜ್ಞನು ಎಲ್ಲಿಯಾದರೂ ಸಿಕ್ಕಬಹುದು, ಆದರೆ ಬ್ರಹ್ಮನಿಷ್ಠನು ಸಿಕ್ಕುವುದು ದುರ್ಲಭ, ಹಾಗೆ ಸಿಕ್ಕದೆ ಹೋದರೆ, ಉಪನಿಷತ್ತಿನ ಅರ್ಥವನ್ನು ತಿಳಿಸಬಲ್ಲ ಗುರುವೇ ಇಲ್ಲದಂತೆ ಆದೀತು, ಹಾಗೆ ಆಗಬಾರದು" ಎಂದು ನೆನೆದರೆಂದು ತೋರುತ್ತದೆ. ಹಾಗೆ ನೆನೆದೇ, ಆದಿ ಪೀಠವಾದ ಶೃಂಗೇರೀ ಪೀಠದಲ್ಲಿ ನೆಲಸುವ ಒಬ್ಬೊಬ್ಬ ಪೀಠಾಧಿಪತಿಯೂ ಬ್ರಹ್ಮನಿಷ್ಠನಾಗಿಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

(ಜೀವನ್ಮುಕ್ತನಾಗಿಯೇ) ಇರತಕ್ಕದ್ದೆಂದು ಸತ್ಯಸಂಕಲ್ಪ ಮಾಡಿದರೆಂದು ತೋರುತ್ತದೆ.

ಶ್ರೀ ಸುರೇಶ್ವರಾಚಾರ್ಯರಿಂದ ಮೊದಲಾಗಿ ಇಲ್ಲಿಯವರೆಗೂ ಪೀಠವನ್ನಲಂಕರಿಸಿದ ೩೫ ಮಂದಿ ಗುರುವರ್ಯರುಗಳೆಲ್ಲರೂ ಜೀವನ್ಮುಕ್ತರುಗಳೇ. ಇವರುಜ್ಞಾನನಿಷ್ಠೆಯಲ್ಲಿ ಮೇಲ್ಮಟ್ಟದ ಸ್ಥಾನದಲ್ಲಿ ಇದ್ದವರಾದರೂ ಲೋಕ ಉಜ್ಜೀವಿಸುವುದಕ್ಕಾಗಿ, ಕರ್ಮವನ್ನು ಬಿಡದೆ, ಲೋಕ ಕಲ್ಯಾಣಕ್ಕಾಗಿ ಪೂಜಾದಿಗಳನ್ನು ಮಾಡುತ್ತ, ಉಳಿದವರು ವೇದೋಕ್ತ ಸತ್ಕರ್ಮಗಳಲ್ಲಿ ತೊಡಗುವಂತೆ ಮಾಡುತ್ತಾ ಬಂದಿದ್ದಾರೆ. ಇವರ ಬಿರುದಾವಳಿಯಲ್ಲಿ "ವೈದಿಕಮಾರ್ಗ ಪ್ರವರ್ತಕ" ಎಂಬುದು ಇಲ್ಲಿ ಎತ್ತಿ ಹೇಳತಕ್ಕದ್ದಾಗಿದೆ. ಅದು ಮಾತ್ರವೇ ಅಲ್ಲ, ಈ ಪೀಠಕ್ಕೆ ಬಂದ ಒಬ್ಬೊಬ್ಬ ಗುರುವೂ ಹಣಗಾರರಲ್ಲದ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ತಮ್ಮ ಬಾಲ್ಯದಿಂದಲೂ ಯೋಗಭ್ರಷ್ಟರ ಲಕ್ಷಣಗಳಿಂದ ಕೂಡಿದವರಾಗಿಯೇ ಇದ್ದಾರೆ. ಯೋಗಭ್ರಷ್ಟರ ಮರು ಅವತಾರದ ಸಂದರ್ಭದಲ್ಲಿ ಹೇಳಿದ ಎರಡನೆಯ ಬಗೆಯಲ್ಲಿ ಬಂದವರು. ಇವರು ಬಾಲ್ಯದಲ್ಲಿ ಸುಖಗಳನ್ನು ಚೆನ್ನಾಗಿ ಅನುಭವಿಸಿ ಸನ್ಯಾಸವನ್ನು ಪಡೆದಮೇಲೆ ಅವುಗಳನ್ನು ಬಿಟ್ಟು ವೈರಾಗ್ಯ ಹೊಂದಿದವರಲ್ಲ. ಬಾಲ್ಯದ ಮೊದಲಿನಿಂದಲೇ ಇವರು ಲೋಕದಲ್ಲಿ ಮನಸ್ಸನ್ನು ಹರಿಯಬಿಡದೆ ಇದ್ದವರು. ಹಲವು ಜನ್ಮಗಳಲ್ಲಿ ಜ್ಞಾನಸಾಧನೆಮಾಡಿ, ಅದರ ಫಲವಾಗಿ ಈ ಜನ್ಮದಲ್ಲಿ ಹುಟ್ಟುವಾಗಲೇ ಪರಿಪೂರ್ಣ ಸ್ಥಿತಿಯಲ್ಲಿ ನೆಲಸಿದವರು. ಅದರ ಲಕ್ಷಣಗಳನ್ನು ಇವರ ಜೀವನದಲ್ಲಿ ಬಾಲ್ಯದಲ್ಲಿಯೇ ಕಾಣಬಹುದು. ಶೃಂಗೇರೀ ಪೀಠಾಧಿಪತಿಗಳಲ್ಲಿ ಪ್ರತಿಯೊಬ್ಬರ ಚರಿತ್ರೆಯನ್ನು ನೋಡಿದರೂ ಈ ಅಂಶವು ಚೆನ್ನಾಗಿ ವ್ಯಕ್ತವಾಗುತ್ತದೆ. ಕೆಲವು ಉದಾಹರಣೆಗಳನ್ನು ಮಾತ್ರವೇ ಈ ಕೆಳಗೆ ಕಾಣಬಹುದು. ಶ್ರೀ ಸುರೇಶ್ವರರನ್ನು ಬಿಟ್ಟರೆ ಉಳಿದ ಶೃಂಗೇರೀ ಪೀಠಾಧಿಪತಿಗಳೆಲ್ಲರೂ ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸವನ್ನು ತೆಗೆದುಕೊಂಡವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೨

ಶ್ರೀ ಶೃಂಗೇರೀ ಪೀಠಾಧಿಪತಿಗಳು

ಶೃಂಗೇರಿಯ ಮೊದಲನೆಯ ಪೀಠಾಧಿಪತಿಗಳಾದ ಶ್ರೀ ಸುರೇಶ್ವರಾಚಾರ್ಯರ ಚರಿತ್ರೆಯನ್ನು ಎಲ್ಲರೂ ಬಲ್ಲರು. ಮಾಧವೀಯ ಶಂಕರ ವಿಜಯದಲ್ಲಿ ಹೇಳಿರುವಂತೆ, ಇವರು ಬ್ರಹ್ಮನ ಅಂಶಾವತಾರ. ಇವರಿಗೆ ಪತ್ನಿಯಾದ 'ಉಭಯ ಭಾರತಿ' ಎಂಬ ಹೆಸರಿನಿಂದ ಹುಟ್ಟಿಬಂದವಳು ಬ್ರಹ್ಮಪತ್ನಿಯಾದ ಶ್ರೀ ಸರಸ್ವತೀದೇವಿ. ಶ್ರೀ ಪರಮ ಶಿವನು ಆದಿ ಶಂಕರರಾಗಿ ಅವತಾರ ಮಾಡುವುದಕ್ಕೆ ಅನುಕೂಲವಾಗಿ ಈ ಇಬ್ಬರೂ ಲೋಕದಲ್ಲಿ ಅವತಾರ ಮಾಡಬೇಕೆಂಬ ಆಜ್ಞೆಯ ಪ್ರಕಾರ ಇವರು ಜನ್ಮ ತಾಳಿದರು.

ಬ್ರಹ್ಮನ ಅವತಾರವಾದ ಮಂಡನಮಿಶ್ರರು ಸಾಮಾನ್ಯ ಗೃಹಸ್ಥರು, ಆಸ್ತಿಕರು, ಶಾಸ್ತ್ರಜ್ಞರು, ಅನುಷ್ಠಾನಪರರು. ಅಹಂಕಾರ ಮಮಕಾರಗಳಿಲ್ಲದೆ ಜೀವನವನ್ನು ನಡಸುತ್ತ ಬಂದವರು. ಭಗವತ್ಪಾದರನ್ನು ದರ್ಶಿಸುವ ವರೆಗೂ ಇವರು ಪೂರ್ವಮೀಮಾಂಸಾ ಮತವನ್ನು ಆಶ್ರಯಿಸಿದ್ದವರು, "ಕರ್ಮದಿಂದಲೆ ಮೋಕ್ಷವನ್ನು ಪಡೆಯಬಹುದು, ಜ್ಞಾನ ಅವಶ್ಯಕವಿಲ್ಲ" ಎಂಬ ನೆಲೆಯಲ್ಲಿ ನಿಂತಿದ್ದವರು. ಆದಿ ಆಚಾರ್ಯರಿಂದ ಸಂನ್ಯಾಸ ಪಡೆದ ಬಳಿಕ ಇವರು ಬರೆದಿರುವ ಗ್ರಂಥಗಳಲ್ಲಿ ಶ್ರೇಷ್ಠವೆನಿಸಿನವುಗಳಾದ 'ನೈಷ್ಕರ್ಮ್ಯ ಸಿದ್ಧಿ', 'ತೈತ್ತಿರೀಯೋಪನಿಷದ್ಭಾಷ್ಯ ವಾರ್ತಿಕ', 'ಬೃಹದಾರಣ್ಯಕೋಪನಿಷದ್ಭಾಷ್ಯ ವಾರ್ತಿಕ'– ಇವುಗಳನ್ನು ಓದಿದರೆ ಇವರ ಜ್ಞಾನದ ಮಹೋನ್ನತ ಮಟ್ಟವು ಚೆನ್ನಾಗಿ ತಿಳಿದುಬರುತ್ತದೆ.

ಇವರಾದಮೇಲೆ ಬಂದ ಪೀಠಾಧಿಪತಿಗಳಲ್ಲಿ ೧೦ನೆಯವರಾದ ಶ್ರೀ ವಿದ್ಯಾಶಂಕರರು ಲಂಬಿಕಾ ಯೋಗದಲ್ಲಿ* ತಪಸ್ಸಿನಲ್ಲಿದ್ದುಕೊಂಡು ತಮ್ಮನ್ನು ಚತುರ್ಮೂರ್ತಿ ವಿದ್ಯೇಶ್ವರ ಶಿವಲಿಂಗವಾಗಿ ಮಾರ್ಪಡಿಸಿಕೊಳ್ಳಬೇಕೆಂದು ತೀರ್ಮಾನ

---

* ಮೇಲೆ ಹೇಳಿದ 'ಲಂಬಿಕಾಯೋಗ' ಎಂಬುದರ ವಿಷಯವಾಗಿ ಸ್ವಲ್ಪ ವಿವರಿಸುತ್ತೇವೆ: ಕೇಸರೀ ಮುದ್ರೆಯಿಂದ ನಾಲಗೆಯನ್ನು ಒಳಕ್ಕೆಮಡಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದರು. ೧೨ ವರ್ಷಕಾಲ ತಪಸ್ಸಿನಲ್ಲಿದ್ದರೆ, ಹಾಗೆಯೇ ತಮ್ಮ ಶರೀರವು ಮಾರ್ಪಡುವುದು ಎಂದು ಹೇಳಿ, ಗುಹೆಯಲ್ಲಿ ಪ್ರವೇಶಿಸಿ, ತಪಸ್ಸು ಮಾಡಿದರು. ಶಿಷ್ಯರುಗಳು ಕಳವಳಪಟ್ಟುಕೊಂಡು ಮೂರು ವರ್ಷಗಳಲ್ಲಿ ಗುಹೆಯ ಬಾಗಿಲನ್ನು ತೆರೆಯಲಾಗಿ, ಅವರ ಶರೀರ ಕಾಣಬರಲಿಲ್ಲ; ಅಲ್ಲಿ ಶಿವಲಿಂಗ ರೂಪ ಮಾತ್ರ ಕಾಣ ಬಂತು. ಅಲ್ಲಿ ಆಗಿನ ಪೀಠಾಧಿಪತಿಗಳಾದ ಶ್ರೀ ಭಾರತೀ ಕೃಷ್ಣ ತೀರ್ಥರ ಅಪ್ಪಣೆಯ ಪ್ರಕಾರ ಗುಹೆಯನ್ನು ಮುಚ್ಚಿ ಅದರ ಮೇಲೆ ಒಂದು ಶಿವಲಿಂಗವನ್ನು ಸ್ಥಾಪಿಸಿ ದರು. ಈ ಶಿವಲಿಂಗ ಅಲ್ಲಿಯೇ ಈಗಲೂ ಪೂಜಿಸಲ್ಪಡುತ್ತಿದೆ.

ಶ್ರೀ ಭಾರತೀ ಕೃಷ್ಣ ತೀರ್ಥರು ತಮ್ಮ ಗುರುಗಳಾದ ಶ್ರೀ ವಿದ್ಯಾಶಂಕರರ ಅಧಿಷ್ಠಾನದಲ್ಲಿ ಸ್ಥಾಪಿಸಲ್ಪಟ್ಟಿದ್ದ ಶಿವಲಿಂಗವನ್ನು ಪ್ರಧಾನವಾಗಿ ಇಟ್ಟುಕೊಂಡು ಅದರ ಸುತ್ತ ಈಗಲೂ ಕಾಣಬರುವ ಶ್ರೀ ಚಕ್ರ ರೂಪದಲ್ಲಿರುವ ದೇವಾಲಯವನ್ನು ಹಲವರು ಶಿಲ್ಪಿಗಳ ಮೂಲಕ ಸುಂದರವಾಗಿ ಕಟ್ಟಿಸಿದರು. ಅದರ ಮುಖಮಂಟಪ ದಲ್ಲಿ ೧೨ ರಾಶಿಗಳಿಗೆ ತಕ್ಕಂತೆ ೧೨ ಕಲ್ಕಂಬಗಳಿವೆ. ಆ ಮಂಟಪದಲ್ಲಿ ವಿಮಾನದ ಒಳಭಾಗದಲ್ಲಿ ಹಲವಾರು ದೋಷಗಳನ್ನು ನಿವೃತ್ತಿಗೊಳಿಸಬಲ್ಲ ಶಿಲ್ಪಗಳನ್ನು

ಎಳೆದುಕೊಂಡು ಮೇಲು ಗಂಟಲಿನಲ್ಲಿ ತೂಗುಬಿದ್ದಿರುವ ಕಿರುನಾಲಿಗೆ ಯೊಡನೆ ಸೇರಿಸಿ, ಶ್ವಾಸವನ್ನು ಕಟ್ಟುಪಡಿಸುವುದು. ಈ ರೀತಿ ಎಷ್ಟು ಕಾಲ ಬೇಕಾದರೂ ಇರಬಹುದು, ಮರಣವುಂಟಾಗುವುದಿಲ್ಲ. ಆಗ ಶರೀರ ದಲ್ಲಿ ಹೊಸ ಭಾವನೆ ತಲೆದೋರಿ ಆ ಶರೀರವನ್ನು ಯಾವ ರೂಪದಲ್ಲಿ ಬೇಕಾದರೂ ಮಾರ್ಪಡಿಸಿಕೊಳ್ಳುವಂತೆ ಮಾಡಬಹುದು. ಈ ಸ್ಥಿತಿಯಲ್ಲಿ ಇರುವವರು ಲೋಕದಲ್ಲಿರುವ ಬೇರೆಯವರಿಗೆ ವಿಶೇಷ ಅನುಗ್ರಹ ಮಾಡು ವುದು ಸಾಧ್ಯ. ಹಲವು ಶತವರ್ಷಗಳವರೆಗೆ ಈ ಸ್ಥಿತಿಯಲ್ಲಿ ಇರಬಹುದು. ಶ್ರೀ ವಿದ್ಯಾಶಂಕರರಂಥ ಮಹಾತ್ಮರುಗಳು ತಮ್ಮ ತಪೋಬಲದಿಂದ ತಮ್ಮ ಆತ್ಮಶಕ್ತಿ ಯಾವಾಗ ಬೇಕಾದರೂ ಬೇರೆಯವರಿಗೆ ಹರಡುವಂತೆ ಮಾಡ ಬಹುದು. ಶ್ರೀ ವಿದ್ಯಾಶಂಕರರು ಭಾವಿಸಿಕೊಂಡ ಚತುರ್ಮೂರ್ತಿ ವಿದ್ಯೇ ಶ್ವರ ರೂಪವನ್ನು ಈಗಲೂ ಶೃಂಗೇರಿಗೆ ಎದುರಿನಲ್ಲಿರುವ ಸಿಂಹಗಿರಿಯಲ್ಲಿ ಕಾಣಬಹುದು. ಇದು ಶ್ರೀ ವಿದ್ಯಾಶಂಕರರಿಂದ ತಯಾರಿಸಲ್ಪಟ್ಟದ್ದು. ಶ್ರೀ ವಿದ್ಯಾಶಂಕರರು ಸಿಂಹಗಿರಿಯಲ್ಲಿ ಬಹಳ ಕಾಲ ತಮ್ಮ ಶಿಷ್ಯರೊಡನೆ ಇದ್ದು ಬಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣಬಹುದು. ಈ ದೇವಾಲಯವನ್ನು ಇಂದಿಗೂ ಒಳ್ಳೆಯ ರೀತಿಯಲ್ಲಿ ಪರಿಪಾಲನ ಮಾಡಿಕೊಂಡು ಬರಲಾಗಿದೆ; ಪೂಜೆಗಳೂ ಚೆನ್ನಾಗಿ ನಡೆಯುತ್ತಿವೆ. ಪ್ರತಿಯೊಬ್ಬರೂ ಅವಶ್ಯವಾಗಿ ದರ್ಶನ ಮಾಡಬೇಕಾದ ಆಲಯ ಇದು.

ಶ್ರೀ ವಿದ್ಯಾಶಂಕರರು ಲಂಬಿಕಾಯೋಗದಲ್ಲಿ ಅದೇ ಸ್ಥಳದಲ್ಲಿ ಈಗಲೂ ಇರುವರೆಂಬ ಪೂರ್ಣ ನಂಬಿಕೆಯಿಂದ ಇಲ್ಲಿನ ಪೂಜೆ ನಡೆದುಬರುತ್ತಿದೆ. ಶೃಂಗೇರೀ ಶ್ರೀ ಜಗದ್ಗುರುಗಳ ಬಿರುದಾವಳಿಯಲ್ಲಿ, "ಶ್ರೀವಿದ್ಯಾಶಂಕರ ಪಾದಪದ್ಮಾರಾಧಕ" (ಶ್ರೀ ವಿದ್ಯಾಶಂಕರರ ಪಾದಪದ್ಮಗಳನ್ನು ಆರಾಧಿಸುವವರು) ಎಂದು ಇರುವುದನ್ನು ಕಾಣಬಹುದು. ಈಗಲೂ ಶೃಂಗೇರಿಯಲ್ಲಿ ಶ್ರೀ ವಿದ್ಯಾ ಶಂಕರರ ಅಧಿಕಾರ ಮುದ್ರೆಯೇ ಉಪಯೋಗದಲ್ಲಿದೆ. ಎಂದರೆ ಅವರು ಜೀವಸಮಾಧಿಯಲ್ಲಿ ಇಂದಿಗೂ ಇರುವುದಾಗಿ ಅರ್ಥ.

ಶೃಂಗೇರೀ ಪೀಠದಲ್ಲಿ ೧೨ನೆಯ ಪೀಠಾಧಿಪತಿಗಳಾಗಿ ಬಂದ ಶ್ರೀ ವಿದ್ಯಾರಣ್ಯರ ವಿಷಯವು ಎಲ್ಲರಿಗೂ ತಿಳಿದಿದೆ. ಆದಿಶಂಕರರ ಹಾಗೆಯೇ ಇವರೂ ಹಲವು ವೇದಾಂತ ಗ್ರಂಥಗಳನ್ನು ರಚಿಸಿದರು. ತಮ್ಮ ತಪಶ್ಶಕ್ತಿಯಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಧರ್ಮದ ರಕ್ಷಣೆಗಾಗಿಯೂ, ಅಭಿವೃದ್ಧಿಗಾಗಿಯೂ ಶಿಷ್ಯರಾದ ರಾಜರುಗಳ ಸಹಕಾರ ಸಹಾಯಗಳನ್ನು ಸಂಪಾದಿಸಿದರು ಈ ಗುರುಗಳ ಗ್ರಂಥಗಳನ್ನು ನೋಡಿದರೆ ಇವರು ಉತ್ತಮ ಜೀವನ್ಮುಕ್ತರೆಂಬುದೂ ಮಾನವರಿಗೆ ಜೀವನದಲ್ಲಿ ಮಾರ್ಗದರ್ಶಿಯಾಗುವುದಕ್ಕಾಗಿಯೇ ಇವರು ಮಠಾಧಿಪತಿಯಾಗಿ ಬಂದರೆಂಬುದೂ ವ್ಯಕ್ತವಾಗುತ್ತದೆ. ಮುಸ್ಲಿಮರ ಆಳ್ವಿಕೆಯಿಂದ ಸನಾತನ ಧರ್ಮವು ಕೆಡದಂತೆ ಇರುವುದಕ್ಕಾಗಿ ಹಲವು ಕಾರ್ಯಗಳನ್ನು ಕೈಗೊಂಡಾಗಲೂ ಇವರ ಮನಃಸ್ಥಿತಿಗೆ ಸ್ವಲ್ಪವೂ ಕುಂದುಂಟಾಗಲಿಲ್ಲ. ಇವರ ತಪೋಬಲವೇ ಇವರ ಕಾರ್ಯಗಳಿಗೆ ಜಯ ತಂದುಕೊಟ್ಟಿತು

ಶ್ರೀ ಆದಿ ಶಂಕರ ಭಗವತ್ಪಾದರು ಅನುಗ್ರಹಿಸಿದ ' ಸ್ವಾತ್ಮಪ್ರಕಾಶಿಕ 'ದಲ್ಲಿ

ಕಾಯಃ ಕರೋತು ಕರ್ಮಾಣಿ ವೃಥಾ ವಾಗುಚ್ಯತಾಮಿಹ|
ರಾಜ್ಯಂ ಧ್ಯಾಯತು ವಾ ಬುದ್ಧಿಃ ಪೂರ್ಣಸ್ಯ ಮಮ ಕಾ ಕ್ಷತಿಃ||

[ಮೈ ಮಾಡಿಲಿ ಕರ್ಮಗಳನು. ವ್ಯರ್ಥ ಮಾತಾಡುತಿರಲಿಲ್ಲಿ
ರಾಜ್ಯವ ನೆನೆಯುತಿರಲಿ ಬುದ್ಧಿ, ಪೂರ್ಣನಾದ ನನಗೆಲ್ಲಿ ಕುಂದು !]

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳಿದ ರೀತಿಯಲ್ಲಿ, 'ಶರೀರದಿಂದಲೂ, ಮನಸ್ಸಿನಿಂದಲೂ ಯಾವಕಾರ್ಯವನ್ನೇ ಆದರೂ ಮಾಡುತ್ತಿದ್ದಾಗಲೂ, ರಾಜ್ಯಭಾರವನ್ನು ವಹಿಸಿಕೊಂಡಾಗಲೂ ಅದು ಜೀವನ್ಮುಕ್ತನ ಪೂರ್ಣಸ್ಥಿತಿಗೆ ಭಂಗವುಟುಮಾಡುವುದಿಲ್ಲ' — ಎಂದು ಅಭಿಪ್ರಾಯ. ಇದನ್ನು ಪೀಠಾಧಿಪತಿಗಳ ಜೀವನದಲ್ಲಿ ಮುಖ್ಯವಾಗಿ ಕಾಣಬಹುದು.

ಶೃಂಗೇರಿಯಲ್ಲಿ ಈಗ ಕಾಣಬರುವ ಶ್ರೀ ಶಾರದಾಂಬೆಯ ವಿಗ್ರಹವನ್ನು ಆದಿ ಶಂಕರರಿಂದ ರಚಿಸಲ್ಪಟ್ಟ ಶ್ರೀಚಕ್ರದ ಮೇಲೆ ಪ್ರತಿಷ್ಠೆ ಮಾಡಲಾಗಿದೆ. ಈ ಪ್ರತಿಷ್ಠೆಯೂ ಶ್ರೀ ವಿದ್ಯಾರಣ್ಯರ ಕಾಲದಲ್ಲಿಯೇ ನಡೆಯಿತೆಂಬುದನ್ನು ಎತ್ತಿಹೇಳತಕ್ಕದ್ದಾಗಿದೆ.

ಇವರಾದ ಮೇಲೆ ಬಂದ ಪೀಠಾಧಿಪತಿಗಳೂ ತಪಸ್ಸು ಮಾಡಿ, ಆತ್ಮಸಾಕ್ಷಾತ್ಕಾರ ಮಾರ್ಗಗಳಲ್ಲಿ ಇದ್ದುಕೊಂಡು, ಲೋಕವನ್ನು ಕಾಪಾಡಬೇಕಾದ್ದಕ್ಕಾಗಿ ಹಲವು ಯಾತ್ರೆಗಳನ್ನು ಮಾಡಿ, ಅಲ್ಲಲ್ಲಿ ಸನಾತನ ಧರ್ಮವನ್ನು ಬೋಧಿಸುತ್ತಾ ನಿಷ್ಕಾಮ್ಯ ಕರ್ಮ ಮಾರ್ಗದಲ್ಲಿ ಇದ್ದುಕೊಂಡು ಆತ್ಮ ಜ್ಞಾನವನ್ನು ಪಡೆಯುವ ಮಾರ್ಗವನ್ನು ಎಲ್ಲರಿಗೂ ಮನನಾಟುವಂತೆ ತಿಳಿಯಪಡಿಸಿದರು. ತಮ್ಮ ತಪಸ್ಸಿಗೆ ಕೊರತೆಯುಂಟಾಗದಿರುವುದಕ್ಕಾಗಿಯೂ ಶಿಷ್ಯರುಗಳಿಗೆ ಉಪದೇಶ ಮಾಡುವುದು, ಅವರುಗಳನ್ನು ಸನ್ಮಾರ್ಗಕ್ಕೆ ತಿರುಗಿಸುವುದು ಮೊದಲಾದ ಕಾರ್ಯಗಳು ಕುಂದದಂತಿರುವುದಕ್ಕಾಗಿಯೂ ಶೃಂಗೇರೀ ಪೀಠಾಧಿಪತಿಗಳು ಹಲವು ಸ್ಥಳಗಳಲ್ಲಿ ಹಲವು ಶಾಖಾಮಠಗಳನ್ನು ಸ್ಥಾಪಿಸಿದರು.

ಶೃಂಗೇರೀ ಪೀಠಾಧಿಪತಿಗಳ ತಪೋಮಹಿಮೆಯನ್ನು ಅರಿತ ಮೈಸೂರಿನ ಟಿಪ್ಪೂ ಸುಲ್ತಾನರು ಲೋಕಕ್ಷೇಮಕ್ಕಾಗಿ ಅವರ ಅನುಗ್ರಹವನ್ನು ಪ್ರಾರ್ಥಿಸಿ ಹಲವು ಸಲ ಫಲವನ್ನು ಪಡೆದಿದ್ದಾರೆ. ಈ ವಿಷಯ ಚರಿತ್ರೆಯಲ್ಲಿ ವಿಶದವಾಗಿದೆ.

ಈ ಸರ್ವಜ್ಞ ಪೀಠದಲ್ಲಿ ೩೦ನೆಯ ಪೀಠಾಧಿಪತಿಗಳಾಗಿ ಬಂದ ಶ್ರೀ ನರಸಿಂಹ ಭಾರತೀ ಸ್ವಾಮಿಗಳ ಮಹಿಮೆಯನ್ನು ಸ್ವಲ್ಪ ಗಮನಿಸೋಣ ಇವರು ಶೃಂಗೇರಿಯಲ್ಲಿ ಬಡ ಕುಟುಂಬದಲ್ಲಿ ಜನಿಸಿದವರು. ಚಿಕ್ಕ ವಯಸ್ಸಿನಲ್ಲಿಯೇ ಸುಖವನ್ನು ಅರಸದೆ ಇದ್ದವರು. ೨೦ ವರ್ಷ ಮುಗಿಯುವ ಮೊದಲೇ ಕಾಲ್ನಡೆಯಿಂದ ಕಾಶಿಗೆ ಹೋದರು. ಎಲ್ಲಾ ಶಾಸ್ತ್ರಗಳನ್ನೂ ಅಲ್ಲಿ ಕಲಿತರು. ಹಸಿವು, ನಿದ್ದೆ ಎಂಬ ಎರಡು ರೋಗಗಳನ್ನು ಶಮಿಸಿದರು. ಇವರು ೧೮ನೇ ವಯಸ್ಸು ಮೊದಲುಗೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನ್ನಭಿಕ್ಷೆಯನ್ನು ಬಿಟ್ಟು ಬರೀ ಹಾಗಲಕಾಯನ್ನು ಒಂದೇ ಹೊತ್ತು ಭಿಕ್ಷೆಯಾಗಿ ತೆಗೆದುಕೊಳ್ಳುತ್ತಿದ್ದರು. ಯಾವಾಗಲೂ ಶೃಂಗೇರಿಯಲ್ಲಿ ಗುಹೆಯಂಥ ಒಂದು ಸ್ಥಳದಲ್ಲಿ ಇದ್ದುಕೊಂಡು ತಪಸ್ಸು ಮಾಡುತ್ತಿದ್ದರು. ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಶಿಷ್ಯರುಗಳ ಕ್ಷೇಮಕ್ಕಾಗಿ ಮಾಡುತ್ತಿದ್ದರು. ಆಗ ಅಲ್ಲಿ ಸೇರಿದ ಮಿಕ್ಕ ಶಿಷ್ಯರುಗಳು ಕೊಟ್ಟ ಹಾಗಲಕಾಯನ್ನೇ ಭಿಕ್ಷೆಯಾಗಿ ತೆಗೆದುಕೊಳ್ಳುತ್ತಿದ್ದರು. ಮತ್ತೆ ತಮ್ಮ ಏಕಾಂತ ಸ್ಥಳಕ್ಕೆ ಹೋಗಿ ತಪಸ್ಸಿನಲ್ಲಿ ತೊಡಗುತ್ತಿದ್ದರು.

ಆದರೂ, ಮಠದ ನಿರ್ವಾಹವೂ, ಶಿಷ್ಯಾನುಗ್ರಹ ರೂಪವಾದ ಕಾರ್ಯಗಳೂ ಅಚ್ಚುಕಟ್ಟಾಗಿ ನೆರವೇರುತ್ತಿದ್ದವು. ಇವರು ಹಲವು ಭಾಷೆಗಳನ್ನು ಕಲಿತವರಾದ್ದರಿಂದ ಇಡೀ ಇಂಡಿಯಾ ದೇಶದ ಎಲ್ಲಾ ಕಡೆಗಳಿಂದಲೂ ಬರುತ್ತಿದ್ದ ಶಿಷ್ಯರುಗಳಿಗೆ ಅನುಗ್ರಹವನ್ನೂ, ಉಪದೇಶವನ್ನೂ ಮಾಡಿದ ಸಂದರ್ಭಗಳು ಅನೇಕವಾಗಿದ್ದವು. ಇವರು ಶಾಂತರು, ತಪಶ್ಶಕ್ತಿ ತುಂಬಿದವರು. ಉಗ್ರವಾದ ತಪಸ್ಸಿನ ಮೇಲ್ಮೆಯಿಂದ ಇವರನ್ನು "ಉಗ್ರ ನರಸಿಂಹಭಾರತೀಸ್ವಾಮಿಗಳು"ಎಂದು ಕರೆಯುತ್ತಿದ್ದರು. ಶಿಷ್ಯಾನುಗ್ರಹಕ್ಕಾಗಿ ಇಂಡಿಯಾ ಪೂರ್ತಿಯಾಗಿ ಹಲವು ಸಲ ಯಾತ್ರೆ ಮಾಡಿದರೂ, ತಮ್ಮ ತಪಸ್ಸಿಗೆ ಕೊರತೆ ಬರದಂತೆ ಅದನ್ನು ಅಧಿಕಪಡಿಸುತ್ತಲೇ ಬಂದರು. ಈ ಉನ್ನತ ನೆಲೆಯಲ್ಲಿ ಇರುವಾಗ ಇವರಿಗೆ ಹಲವು ಸಿದ್ಧಿಗಳು ದೊರೆತವು. ಅವುಗಳಿಂದ ಇವರ ಜೀವನ್ಮುಕ್ತ ಸ್ಥಿತಿ ಸ್ವಲ್ಪವೂ ಬಾಧಿತವಾಗಲಿಲ್ಲ. ಆ ಸಿದ್ಧಿಗಳು ಶಿಷ್ಯರುಗಳಿಗೆ ಹಲವು ವಿಧವಾದ ಶ್ರೇಯಸ್ಸನ್ನುಂಟುಮಾಡಿದವು.

ಶೃಂಗೇರೀ ಪೀಠಾಧಿಪತಿಗಳ ವಿಶೇಷ ಮಹಿಮೆ ಇಂತಹುದು. ತಪೋಬಲದಿಂದ ಹಲವು ಸಿದ್ಧಿಗಳು ಒಬ್ಬ ಮಹಾಪುರುಷನಿಗೆ ಸಾಧಾರಣವಾಗಿ ದೊರೆಯುತ್ತವೆ. ಆದರೆ ಅವುಗಳಲ್ಲಿ ಅವನು ಆಸಕ್ತನಾದರೆ ಅವನ ಆತ್ಮಜ್ಞಾನ ನಿಷ್ಠೆಗೆ ಭಂಗ ಬರುತ್ತದೆ. ಆದ್ದರಿಂದಲೇ ಈ ಪೀಠಾಧಿಪತಿಗಳು ತಮಗೆ ಹಲವು ಶಕ್ತಿಗಳು ಕೈಗೂಡಿ ಬಂದರೂ ಅವನ್ನು ಒಂದು ವಸ್ತುವಾಗಿ ಭಾವಿಸದೆ, ಅದನ್ನು (ಚಮತ್ಕಾರದ ಯಕ್ಷಿಣಿವಿದ್ಯೆ ತೋರಿಸುವವನ ಹಾಗೆ) ಉಪಯೋಗಿಸಿಕೊಂಡು ಕಾರ್ಯ ಮಾಡುವುದಿಲ್ಲ. ಗುರುವಿನಲ್ಲಿ ಈ ಶಕ್ತಿ ಇರುವುದೆಂಬುದು ತಮಗೆ ತಿಳಿದಿದೆಯೆಂದು ಶಿಷ್ಯರು ಹೇಳಿದರೂ, 'ಅದು ಅಮ್ಮನವರ ಅನುಗ್ರಹ' ಎಂದು ಹೇಳುತ್ತಾರೆಯೇ ಹೊರತು ಆ ಶಕ್ತಿಯನ್ನು ತಮ್ಮದಾಗಿ ಅಂಗೀಕರಿಸುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರೀ ಮಠಕ್ಕೆ ಸೇರಿದ ಆಡಂಬರದ ಅಲಂಕಾರಗಳು ತಮಗೆ ಬೇಡ ವೆಂದು ಮೊದಮೊದಲಿನ ಗುರುಗಳು ಹೇಳಿದರು. ಆದರೆ ಮೈಸೂರು ಮಹಾ ರಾಜರು ಪೀಠದ ಮಹಿಮೆಯೆನ್ನು ಸಾಮಾನ್ಯ ಲೋಕ ಅರಿತುಕೊಳ್ಳಬೇಕಾಗಿರು ವುದರಿಂದ ಈ ರಾಜರ್ಷಿ ಚಿಹ್ನೆಗಳನ್ನು ಗುರುಗಳು ಅಂಗೀಕರಿಸಬೇಕು – ಎಂದು ಒತ್ತಾಯಪೂರ್ವಕವಾಗಿ ಪ್ರಾರ್ಥಿಸಿದರಲ್ಲದೆ, ದೇವಿಯ ಪೂಜೆಗಾಗಿ ಅವಶ್ಯವಾದ ಚಿನ್ನ ಬೆಳ್ಳಿ ಪಾತ್ರೆಗಳನ್ನೂ ಕಾಣಿಕೆಯಾಗಿ ಸಮರ್ಪಿಸಿದರು. ಲೋಕದ ಜನ ರಿಗಾಗಿ ಅವುಗಳನ್ನು ಗುರುಗಳು ಅಂಗೀಕರಿಸಿದರೇ ಹೊರತು ಅವರಿಗೆ ಆ ಒಡವೆ ವಸ್ತುಗಳಲ್ಲಿ ಸ್ವಲ್ಪವೂ ಅಭಿಮಾನ ಹುಟ್ಟಲಿಲ್ಲ. ಶ್ರೀ ಶಾರದಾಂಬೆಗೆ ಮೈಸೂರು ಮಹಾರಾಜರುಗಳು ಕೊಟ್ಟ ಬಹು ಬೆಲೆಯ ಆಭರಣಗಳು ಈಗಲೂ ಇವೆ.

ತಮಗೆ ೬೦ ವರ್ಷ ವಯಸ್ಸಾಗುವ ಸಮಯದಲ್ಲಿ ತಮ್ಮ ತಪಸ್ಸಿಗೆ ವಿಘ್ನ ಬಾರದಂತೆ ಮುಂದೆಯೂ ಶ್ರೀಮಠದ ಕಾರ್ಯಗಳು ನಡೆಯಬೇಕೆಂದೆಣಿಸಿ ಗುರುಗಳು ಮೈಸೂರಿನಲ್ಲಿದ್ದ ಶಿವಸ್ವಾಮಿ ಯೆಂಬಾತನನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಅವರೇ ಮುಂದಿನ ಪೀಠಾಧಿಪತಿಯಾಗಿರುವಂತೆ ನಿಯಮಿಸಿದರು.

ಶ್ರೀ ನರಸಿಂಹಭಾರತೀ ಎಂಬ ಈ ಜಗದ್ಗುರುವಿನ ತಪೋಮಹಿಮೆಯನ್ನು ಮೈಸೂರು ಸಂಸ್ಥಾನದ ಕಮಿಷನರಾಗಿದ್ದ ಕರ್ನಲ್ ಬೌರಿಂಗ್ ಎಂಬುವರು ಒಮ್ಮೆ (೧೮೫೮) ಪ್ರತ್ಯಕ್ಷವಾಗಿ ಕಂಡರು. ಇವರ ಮಹಿಮೆಯ ಬಗ್ಗೆ ಮೊದಲೇ ಕೇಳಿದ್ದ ಕಮಿಷನರು, ಅದನ್ನು ಪರಿಶೋಧಿಸಬೇಕೆಂದು ಯೋಚಿಸಿ, ರಾತ್ರಿ ಒಂದು ಗಂಟೆ ಸಮಯದಲ್ಲಿ ಬೆಂಗಳೂರು ಮೊಕ್ಕಾಮಿನಲ್ಲಿ ಶ್ರೀಮಠಕ್ಕೆ ಬಂದರು. ಗುರುಗಳು ಆಗ ಪೂಜೆಯಲ್ಲಿ ನಿರತರಾಗಿರುವುದಾಗಿ ಪರಿವಾರದವರು ಹೇಳಿದರು. ತಾವು ನೋಡಬೇಕೆಂದು ಕಮಿಷನರು ಹೇಳಿದರು. ಸ್ವಾಮಿಗಳು ಪೂಜೆಮಾಡು ತ್ತಿದ್ದ ಸ್ಥಳವನ್ನು ಮರೆಮಾಡಿದ್ದ ತೆರೆ ಸರಿಯಿತು. ಈ ಲೋಕವನ್ನೇ ಮರೆತು ಏಕಾಗ್ರ ಸ್ಥಿತಿಯಲ್ಲಿ ಹೂಗಳಿಂದ ಶ್ರೀ ಚಂದ್ರಮೌಳೀಶ್ವರನನ್ನು ಪೂಜಿಸುತ್ತಿದ್ದ ಪೀಠಾಧಿಪತಿಗಳನ್ನು ಕಮಿಷನರು ಕಂಡರು; ಅತ್ಯಂತ ಭಕ್ತಿಯಿಂದಲೂ, ಮರ್ಯಾದೆಯಿಂದಲೂ ಗುರುಗಳನ್ನು ವಂದಿಸಿ, ಹಿಂದಿರುಗಿ, ತಾವು ನೇರವಾಗಿ ನೋಡಿದ್ದನ್ನು ಪತ್ರದಲ್ಲಿ ಬರೆದು, ತಮ್ಮ ನಮಸ್ಕಾರಗಳನ್ನು ಸದ್ಗುರುವಿಗೆ ತಿಳಿಯಪಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸ್ವಾಮಿಗಳ ತಪೋಬಲವನ್ನು ಎರಡು ಸಂದರ್ಭಗಳಲ್ಲಿ ಮಹಾಜನರು ಕಂಡರು. ಒಮ್ಮೆ ರಾಮೇಶ್ವರ ಯಾತ್ರೆಯ ಕಾಲದಲ್ಲಿ, ಶ್ರೀ ಸ್ವಾಮಿಗಳು, ರಾಮೇಶ್ವರದಲ್ಲಿ ಶ್ರೀ ರಾಮನಾಥಸ್ವಾಮಿ ದೇವಾಲಯದಲ್ಲಿರುವ ಕೋಟಿ ತೀರ್ಥದಲ್ಲಿ ಸ್ನಾನಮಾಡಬೇಕೆಂದು ಹೇಳಿ, ತಮ್ಮ ಶಿಷ್ಯನನ್ನು ಕಳಿಸಿ, ಬಾವಿಯಿಂದ ನೀರು ತೆಗೆದುಕೊಂಡು ಬರುವಂತೆ ಹೇಳಿದರು. ದೇವಾಲಯಕ್ಕೆ ಸಂಬಂಧಪಟ್ಟ ಭಟ್ಟರುಗಳು ಆ ಬಾವಿಯಲ್ಲಿ ತಾವು ಹೊರತು ಬೇರೆ ಯಾರೊಬ್ಬರೂ ನೀರನ್ನು ತೆಗೆದು ಕೊಡಕೂಡದು ಎಂದರು. "ಹಾಗಾದರೆ, ಅದು ನಮಗೆ ಅವಶ್ಯವಿಲ್ಲ" ಎಂದು ಸ್ವಾಮಿಗಳು ಹೇಳಿ, ಅದರ ಪಕ್ಕದಲ್ಲಿರುವ ಸರ್ವತೀರ್ಥದಲ್ಲಿ ಸ್ನಾನಮಾಡಿ, "ಇಲ್ಲಿ ಸ್ನಾನಮಾಡಿದರೆ ಸಾಕು. ಇನ್ನು ಮೇಲೆ ಯಾರೂ ಯಾತ್ರೆಯ ಪೂರ್ಣತೆಗಾಗಿ ಕೋಟಿತೀರ್ಥದಲ್ಲಿ ಸ್ನಾನಮಾಡ ಬೇಕಾದ ಅವಶ್ಯವಿಲ್ಲ" ಎಂದರು. ಆ ಮೊದಲ ಕೆಲವು ವರ್ಷಗಳ ವರೆಗೆ ಯಾರೂ ಕೋಟಿ ತೀರ್ಥದಲ್ಲಿ ಸ್ನಾನ ಮಾಡದಯೇ ತಮ್ಮ ಯಾತ್ರೆಯನ್ನು ಮುಗಿಸುತ್ತಾ ಬಂದರು. ಅ ಕೋಟಿ ತೀರ್ಥ ಬಾವಿಯಲ್ಲಿ ಕ್ರಿಮಿಗಳು ಹುಟ್ಟಿಬಿಟ್ಟವು. ಈ ಮೇಲೆ, ಮುಂದಿನ ಯಾತ್ರೆಯ ಕಾಲದಲ್ಲಿ ಮಧುರೆಗೆ ಬಿಜಯ ಮಾಡಿದ ಶ್ರೀ ಸ್ವಾಮಿಗಳನ್ನು ರಾಮೇಶ್ವರದ ದೇವಸ್ಥಾನದ ಭಟ್ಟರುಗಳು ಬಂದು ದರ್ಶನಮಾಡಿ ನಮಸ್ಕರಿಸಿ, ತಮ್ಮ ಅಪಚಾರವನ್ನು ಕ್ಷಮಿಸ ಬೇಕೆಂದು ಕೇಳಿಕೊಳ್ಳಲಾಗಿ, ಸ್ವಾಮಿಗಳು ಮತ್ತೊಮ್ಮೆ ರಾಮೇಶ್ವರಕ್ಕೆ ಹೋಗಿ, ಆ ಕೋಟಿ ತೀರ್ಥ ಬಾವಿಯ ನೀರನ್ನೆಲ್ಲಾ ಪೂರ್ತಿಯಾಗಿ ಎತ್ತಿ ಹಾಕಿಸಿ ತಮ್ಮ ಕಮಂಡಲದಿಂದ ನೀರನ್ನು ಬಾವಿಯೊಳಕ್ಕೆ ಪ್ರೋಕ್ಷಣೆ ಮಾಡಿದರು. ನೀರು ಮೊದಲಿನಂತೆಯೇ ಶುದ್ಧವಾಯಿತು. ಅಂದಿನಿಂದೀಚೆಗೆ ಯಾತ್ರಿಕರು ಆ ಕೋಟಿ ತೀರ್ಥವನ್ನು ಉಪಯೋಗಿಸುತ್ತಿದ್ದಾರೆ.

ಮತ್ತೊಮ್ಮೆ ಯಾತ್ರೆಯ ಮಾರ್ಗದಲ್ಲಿ ಶ್ರೀ ಸ್ವಾಮಿಗಳು ಮಧುರೆಗೆ ದಯಮಾಡಿಸಿದರು. ಆಗ ಅವರ ಶಿಷ್ಯರಾಗಿದ್ದ, ಅನಂತರ ಪೀಠಾಧಿಪತಿಗಳಾದ ನರಸಿಂಹಭಾರತಿಗಳೂ ಅವರ ಜೊತೆಯಲ್ಲಿದ್ದರು. ಚಿಕ್ಕಸ್ವಾಮಿಗಳು ಮಧುರೆ ಮೀನಾಕ್ಷಿ ಅಮ್ಮನವರನ್ನು ತಾವೇ ಪೂಜೆಮಾಡಬೇಕೆಂದು ಆಸೆಪಟ್ಟರು. ದೇವಸ್ಥಾನದ ಅರ್ಚಕರುಗಳು ಇದಕ್ಕೆ ಸ್ವಲ್ಪ ಅಳುಕಿದರು. ಇದು ಹಿರಿಯ ಸ್ವಾಮಿಗಳಿಗೆ ತಿಳಿಯಬಂತು. ಹಿರಿಯ ಸ್ವಾಮಿಗಳು ಶ್ರೀ ಮೀನಾಕ್ಷಿ ಅಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನವರ ಆಲಯಕ್ಕೆ ಹೋಗಿ, ಎರಡು ತೆಂಗಿನಕಾಯಿಗಳಲ್ಲಿ ಶ್ರೀ ಮೀನಾಕ್ಷಿ ಅಮ್ಮನವರ ಶಕ್ತಿಯನ್ನು ಆಕರ್ಷಣೆ ಮಾಡಿಕೊಂಡು, ಆ ತೆಂಗಿನಕಾಯಿಗಳನ್ನು ದೇವಾಲಯಕ್ಕೆ ಮುಂದುಗಡೆ ಇರುವ ಶ್ರೀ ಶೃಂಗೇರಿ ಮಠದಲ್ಲಿ ಇಟ್ಟುಬಿಟ್ಟು, "ಶ್ರೀ ಮೀನಾಕ್ಷೀದೇವಿ ಆ ದೇವಾಲಯದಲ್ಲಿ ಅಲ್ಲ, ಈ ತೆಂಗಿನಕಾಯಿಗಳಲ್ಲಿ ಇರುತ್ತಾಳೆ, ಇಲ್ಲಿಯೇ ದರ್ಶನಮಾಡಿ" ಎಂದರು. ಅದರಂತೆಯೇ ಜನಗಳು ನಡೆದುಕೊಂಡರು. ದೇವಸ್ಥಾನದ ಅರ್ಚಕರುಗಳಿಗೆ ಹಲವು ಕಷ್ಟಗಳು ಬರ ತೊಡಗಿದವು. ಸೋತುಹೋದ ಅರ್ಚಕರು ಬೇರೊಂದು ಮೊಕ್ಕಾಮಿನಲ್ಲಿ ಶ್ರೀ ಸ್ವಾಮಿಗಳ ಬಳಿ ಹೋಗಿ, ತಾವು ಮಾಡಿದ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಳ್ಳಲು, ಶ್ರೀ ಸ್ವಾಮಿಗಳ ಮನಸ್ಸು ಕರಗಿ ಅವರಿಗಾಗಿ ಮತ್ತೊಮ್ಮೆ ಮಧುರೆಗೆ ಹೋಗಿ, ತೆಂಗಿನಕಾಯಿಗಳಲ್ಲಿ ಆಕರ್ಷಿತವಾಗಿದ್ದ ಶ್ರೀ ಮೀನಾಕ್ಷಿ ಅಮ್ಮನವರ ಕಲೆಯನ್ನು ಮತ್ತೆ ದೇವಸ್ಥಾನದಲ್ಲಿ ಮೂರ್ತಿಯಲ್ಲಿಯೇ ಸೇರಿಸಿ, "ಇನ್ನು ದೇವಸ್ಥಾನದಲ್ಲೇ ಮೀನಾಕ್ಷಿಯನ್ನು ಕಾಣಬಹುದು" ಎಂದರು. ಮಧುರೆಯಲ್ಲಿರುವ ಶೃಂಗೇರಿ ಮಠದಲ್ಲಿ ಆ ಎರಡು ತೆಂಗಿನಕಾಯಿಗಳನ್ನು ಶ್ರೀ ಸ್ವಾಮಿಗಳು ಎಲ್ಲಿ ಇಟ್ಟಿದ್ದು ಪೂಜೆ ಮಾಡಿದರೋ ಅದೇ ಸ್ಥಳದಲ್ಲಿ ದೊಡ್ಡ ಶಿವಲಿಂಗವೊಂದು ಪ್ರತಿಷ್ಠಿಸಲ್ಪಟ್ಟಿತು. ಅದಕ್ಕೆ ಈಗಲೂ ಪೂಜೆ ನಡೆಯುತ್ತಿದೆ. ಅದನ್ನು ಈಗಲೂ ಎಲ್ಲರೂ ಕಾಣಬಹುದು.

ಶೃಂಗೇರಿ ಪೀಠಾಧಿಪತಿಗಳ ತಪೋಮಹಿಮೆಯನ್ನು ವಿವರಿಸುವುದಕ್ಕಾಗಿ ಈ ಎರಡು ಸಂಗತಿಗಳನ್ನು ಇಲ್ಲಿ ಹೇಳಲಾಯಿತು. ಇಂಥವೇ ಇನ್ನೂ ಹಲವು ಸಂಗತಿಗಳಿವೆ. ಅವುಗಳ ವಿವರಣೆಗೆ ಇಲ್ಲಿ ಅವಕಾಶವಿಲ್ಲ.

ಮೇಲೆ ಹೇಳಿದ ಶಿವಸ್ವಾಮಿಯೆಂಬ ಶಿಷ್ಯರೇ ಆ ತರುವಾಯ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿ ಎಂಬ ಯೋಗಪಟ್ಟದೊಡನೆ ಶ್ರೀ ಶಾರದಾ ಪೀಠವನ್ನು ೩೩ನೆಯ ಪೀಠಾಧಿಪತಿಯಾಗಿ ಅಲಂಕರಿಸಿದರು. ಇವರು ಮೈಸೂರಿನಲ್ಲಿ ಹುಟ್ಟಿದವರು. ಇವರಿಗೆ ಸನ್ಯಾಸ ಕೊಟ್ಟಾಗ, ಶಿವಸ್ವಾಮಿ ಎಂಬ ಹೆಸರಿದ್ದ ಇವರಿಗೆ ೯ ವರ್ಷ ವಯಸ್ಸು. ತಾಯಿ ತಂದೆ ಗಳಿಲ್ಲ. ತಮ್ಮ ಅಣ್ಣಂದಿರಾದ ಮೈಸೂರು ಆಸ್ಥಾನ ವಿದ್ವಾನ್ ಶ್ರೀ ಲಕ್ಷ್ಮೀ ನರಸಿಂಹ ಶಾಸ್ತ್ರಿಗಳ ಪೋಷಣೆಯಲ್ಲಿದ್ದರು. ಇವರ ಕುಟುಂಬವೂ ಸಾಮಾನ್ಯ ವಾದ ಕುಟುಂಬವೇ, ಹಣಗಾರ ಕುಟುಂಬವಲ್ಲ. ಇವರ ತಾಯಿ ಶ್ರೀ ಲಕ್ಷ್ಮೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮ್ಮ ಎಂಬವರು; ತಂದೆ ಕುಣಿಗಲ್ ರಾಮಶಾಸ್ತ್ರಿಗಳು. ಅವರು ಸಕಲ ಶಾಸ್ತ್ರಗಳನ್ನೂ ಕಲಿತವರು, ಆಚಾರ ಸಂಪನ್ನರು, ಮೈಸೂರು ಮಹಾರಾಜರ ಆಸ್ಥಾನದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು. ಅವರ ಎರಡನೆಯ ಮಗನೇ ಶಿವಸ್ವಾಮಿ. ಅವರು ಶಾಸ್ತ್ರಗಳಲ್ಲಿ ನಂಬಿಕೆಯಿಟ್ಟು, ಗಂಡು ಸಂತಾನ ಹುಟ್ಟ ಬೇಕೆಂದು ಪುಂಸವನಮಾಡಿದ್ದರ ಫಲವಾಗಿ ಕ್ರಿಸ್ತಶಕ ೧೮೫೮ರಲ್ಲಿ ಹುಟ್ಟಿದರು. ವೇದವಾಕ್ಯದ ಸತ್ಯವನ್ನು ಇಲ್ಲಿ ಶ್ರೀ ರಾಮಶಾಸ್ತ್ರಿಗಳು ನಿರೂಪಿಸಿದರು. ಈ ರೀತಿ ಹುಟ್ಟಿದ ಶಿವಸ್ವಾಮಿಗೆ ೯ನೆಯ ವಯಸ್ಸಿನಲ್ಲಿ ಸನ್ಯಾಸವನ್ನು ಕೊಡಲಾಯಿತು. ಆವತ್ತು ರಾತ್ರೆ ತಮ್ಮ ಗುರುಗಳ ಪಕ್ಕದಲ್ಲಿ ಕಾಷಾಯವಸ್ತ್ರ ಧರಿಸಿ ಬಾಲ ಸಂನ್ಯಾಸಿ ಮಲಗಿಕೊಂಡಿದ್ದರು. ನಿದ್ರೆಯಲ್ಲಿ ಹೊರಳುತ್ತಿರುವಾಗ "ಸರ್ವೋಽಹಮ್, ಸರ್ವೋಽಹಮ್'' ಎಂದು ಹೇಳುತ್ತಿದ್ದರು, ಈ ಬಾಲ ಸನ್ಯಾಸಿ. ಸಕಲ ಶಾಸ್ತ್ರಗಳನ್ನೂ ಓದಿ, ಮಹಾತ್ಮರುಗಳಿಂದ ಉಪದೇಶ ಪಡೆದು, ಅನುಭೂತಿಯುಂಟಾಗಿ, ಅದರಿಂದ ತೋರಬೇಕಾದ ಸ್ಥಿತಿ ಈ ''ಸರ್ವೋಽಹಮ್'' ಎಂಬುದು. ಯಾವ ಬಗೆಯ ಪೂರ್ವಾಭ್ಯಾಸವಾಗಲಿ ವೇದಾಂತ ವಿಚಾರವಾಗಲಿ ಇಲ್ಲದಯೇ, ಸಂನ್ಯಾಸ ಪಡೆದ ಮೊದಲ ದಿನವೇ, ಒಳಗೇ ಒಸರುತ್ತಿದ್ದ ಈ ಅನುಭವ ನಿದ್ರೆಯಲ್ಲಿ ಹೊರಬಂತು ಎಂದು ಕಾಣುವಾಗ ಇವರು ಹುಟ್ಟುವಾಗಲೇ ಜೀವನ್ಮುಕ್ತರಾಗಿ ಹುಟ್ಟಿದರು ಎಂಬುದ ರಲ್ಲಿ ಸಂದೇಹವಿಲ್ಲ. ಶ್ರೀ ಶಂಕರರು, ಶ್ರೀ ವಾಮದೇವರು, ಇವರನ್ನು ಹೋಲುವವರ ಸಾಲಿಗೆ ಇದು.

ಬಾಲಕನಾದ ಶಿವಸ್ವಾಮಿಯನ್ನು ಅವರ ಅಣ್ಣಂದಿರು ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಕರೆದುಕೊಂಡು ಬಂದು ಶ್ರೀ ಸ್ವಾಮಿಗಳ ಮುಂದೆ ನಿಲ್ಲಿಸಿದರು. "ನಿನಗೆ ಏನು ಬೇಕು ?'' ಎಂದು ಬಾಲಕನನ್ನು ಶ್ರೀ ಸ್ವಾಮಿಗಳು ಕೇಳಿದರು. ಬಾಲಕನಾದ ಶಿವಸ್ವಾಮಿ ಹೀಗೆ ಹೇಳಿದರು :

ಅಯಂ ದಾನಕಾಲಸ್ತ್ವಹಂ ದಾನಪಾತ್ರಂ
ಭವಾನೇವ ದಾತಾ ತ್ವದನ್ಯಂ ನ ಜಾನೇ ।
ಭವದ್ಭಕ್ತಿಮೇವ ಸ್ಥಿರಾಂ ದೇಹಿ ಮಹ್ಯಂ
ಕೃಪಾಶೀಲ ಶಂಭೋ ಕೃತಾರ್ಥೋಽಸ್ಮಿ ತಸ್ಮಾತ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

[ಇದು ದಾನಕ್ಕೆ ಕಾಲ ; ನಾನು ದಾನಕ್ಕೆ ಪಾತ್ರ.
ನೀನೇ ನೀಡುವವ ; ನೀನಲ್ಲದುಳಿದವರ ಕೇಳೆ ನಾನು |
ನಿನ್ನಲ್ಲಿ ಸ್ಥಿರವಾದ ಭಕ್ತಿಯನೆ ನೀಡೆನಗೆ.
ಕೃಪಾಶೀಲ, ಶಂಭೂ, ಕೃತಾರ್ಥನಾಗುವೆನು ಅದರಿಂದಲೇ]

ಇದು ಶ್ರೀ ಆದಿ ಶಂಕರರು ರಚಿಸಿರುವ ಶಿವಭುಜಂಗದಲ್ಲಿ ೧೧ನೆಯ ಶ್ಲೋಕ. ಶ್ರೀ ಶಿವಸ್ವಾಮಿ ಹುಟ್ಟಿದ ದಿನವನ್ನು ಕೇಳಲಾಗಿ, ಶ್ರೀ ನರಸಿಂಹ ಭಾರತೀ ಸ್ವಾಮಿಗಳ ಮನಸ್ಸಿನಲ್ಲಿ, ತಮ್ಮ ಅನಂತರ ಪೀಠದಲ್ಲಿರುವುದಕ್ಕೆ ಒಬ್ಬ ಒಳ್ಳೆಯ ಶಿಷ್ಯನನ್ನು ಹುಡುಕಿ ಆಯ್ದು ಕೊಳ್ಳಬೇಕು – ಎಂಬ ಸಂಕಲ್ಪವು ಅದೇ ದಿನವೇ ಉಂಟಾಗಿತ್ತು ಎಂಬುದು ಗುರುಗಳ ನೆನಪಿಗೆ ಬಂತು. ಶೃಂಗೇರಿ ಪೀಠಕ್ಕೆ ತಕ್ಕವರಾದ ಹೊಸ ಸಂನ್ಯಾಸಿಗಳನ್ನು ಶ್ರೀ ಶಾರದಾದೇವಿಯೇ ಗೊತ್ತು ಮಾಡಿ ಪೀಠಾಧಿಪತಿಗಳ ಮನಸಿನಲ್ಲೂ ಅದನ್ನು ಮೂಡಿಸುತ್ತಾಳೆ ಎಂದು, ಈ ಪೀಠದ ಅನುಭವವುಳ್ಳವರು ಹೇಳುವ ಮಾತು ನಿಜವೆಂಬುದು ಹಲವು ಸಂದರ್ಭಗಳಿಂದ ತಿಳಿಯ ಬರುತ್ತದೆ.

ಸಂನ್ಯಾಸ ಪಡೆದ ೧೨ ವರ್ಷದಲ್ಲಿ ಇವರಿಗೆ ೨೧ ವರ್ಷ ವಯಸ್ಸಾಗಿರುವಾಗಲೇ ವನಕ್ಕೆ ಹೋಗಿ ತಪಸ್ಸುಮಾಡಬೇಕೆಂದು ಮನಸ್ಸುಮಾಡಿದರು. ಇದನ್ನು ಹಿರಿಯ ಸ್ವಾಮಿಗಳಿಗೆ ತಿಳಿಯಪಡಿಸಲಾಯಿತು. ಅವರು ಚಿಕ್ಕ ಸ್ವಾಮಿಗಳನ್ನು ಕರೆದು, "ಈ ಪೀಠವನ್ನು ನಿರ್ವಹಿಸುವ ನಿನ್ನ ಕೆಲಸ ಹೆಚ್ಚಿನದಾಗಿದೆ. ಈಗ ವನಕ್ಕೆ ಹೋಗುವುದು ತಕ್ಕದ್ದಲ್ಲ. ವಿಶೇಷ ಮಹಿಮೆ ನಿನಗೆ ಉಂಟಾಗಲಿದೆ. ಎರಡನೆಯ ಸದಾಶಿವ ಬ್ರಹ್ಮರ ಹಾಗೆ ನೀನು ಬೆಳಗುತ್ತೀಯೆ. ಆದ್ದರಿಂದ ನೀನು ವನಕ್ಕೆ ಹೋಗುವ ಆಲೋಚನೆಯನ್ನು ಬಿಟ್ಟು, ಶ್ರೀಮಠದ ಕಾರ್ಯಗಳನ್ನು ನೋಡಿಕೊಳ್ಳುವುದು ಒಳ್ಳೆಯದು" ಎಂದರು. ಗುರುವಿನ ಆಜ್ಞೆಗೆ ತಲೆಬಾಗಿ ಅದನ್ನು ಒಪ್ಪಿಕೊಂಡರು. ಆದರೂ ಇವರ ಮನಸ್ಸು ತಪಸ್ಸಿನಲ್ಲೇ ನಿರತವಾಗಿರುತ್ತಿತ್ತು. ಆ ಬಳಿಕ ಶೃಂಗೇರಿಯಲ್ಲಿಯೇ ತಮ್ಮ ತಪಸ್ಸಿಗೆ ತಕ್ಕ ಸ್ಥಳವೊಂದನ್ನು ಏರ್ಪಡಿಸಿಕೊಳ್ಳಬೇಕೆಂದೆಣಿಸಿ, ಶೃಂಗೇರಿಯಲ್ಲಿ ತುಂಗಾನದಿಗೆ ಆಚೆ ದಕ್ಷಿಣ ದಡದಲ್ಲಿ ಈಗಲೂ ಶ್ರೀ ನರಸಿಂಹ ವನವೆಂದು ಹೆಸರುಗೊಂಡಿರುವ ವನದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಧ್ಯದಲ್ಲಿರುವ ಸ್ಥಳವನ್ನು ತಮ್ಮ ಆಶ್ರಮವಾಗಿ ಮಾಡಿಕೊಂಡು, ಅಲ್ಲಿಯೇ ಇರುತ್ತ ಬಂದರು – ಎಂಬುದು ಎಲ್ಲರಿಗೂ ತಿಳಿದಿದೆ.

ಇವರು ಪೀಠಾಧಿಪತ್ಯವನ್ನು ವಹಿಸಿಕೊಂಡಿದ್ದ ಕಾಲದಲ್ಲಿಯೇ, ಶ್ರೀ ಆದಿಶಂಕರರು ಹುಟ್ಟಿದ ಸ್ಥಳವಾದ ಕೇರಳದಲ್ಲಿರುವ ಕಾಲಟಿ ಗ್ರಾಮದಲ್ಲಿ ಶ್ರೀ ಶಂಕರರ ತಾಯಿ ಆರ್ಯಾಂಬೆಗೆ ದೇಹಸಂಸ್ಕಾರ ಮಾಡಿದ ಸ್ಥಳವನ್ನು ತಮ್ಮ ತಪೋಮಹಿಮೆಯಿಂದ ನಿರ್ಧಾರಮಾಡಿ, ಅಲ್ಲಿ ಶ್ರೀ ಶಾರದಾಂಬೆ ಮತ್ತು ಆದಿಶಂಕರರ ಮೂರ್ತಿಗಳನ್ನು ಸ್ಥಾಪಿಸಿದರು. ಇವರು ಆದಿಶಂಕರರ ಅಪರಾವತಾರ ಎಂದು ಎಲ್ಲರೂ ಭಾವಿಸುತ್ತಾರೆ. ತಿರುಚ್ಚಿ ಜಿಲ್ಲೆಯ ಶ್ರೀರಂಗದಲ್ಲಿ 'ಶ್ರೀ ವಾಣೀವಿಲಾಸ ಪ್ರೆಸ್ಸ'ನ್ನು ಏರ್ಪಡಿಸಿದ, 'ಗುರುಭಕ್ತ ಶಿಖಾಮಣಿ, ಶಾಸ್ತ್ರಪ್ರಸಾರ ಭೂಷಣ, ಶ್ರೀ ಟಿ. ಕೆ. ಬಾಲಸುಬ್ರಹ್ಮಣ್ಯ ಅಯ್ಯರು, ಆದಿಶಂಕರರ ಗ್ರಂಥಗಳ ಮಾತೃಕೆಗಳನ್ನು ಹಲವು ಸ್ಥಳಗಳಿಂದ ತರಿಸಿಕೊಂಡು, ಅವನ್ನು ಈ ಆಚಾರ್ಯರ ಸನ್ನಿಧಿಯಲ್ಲಿ ಸಮರ್ಪಿಸಿದ್ದೂ, ಅವರು ಪರಿಶೀಲನೆಮಾಡಿ ಯಾವುದು ಸರಿಯಾದ ಪಾಠವೆಂದು ತೀರ್ಮಾನಿಸಿ ಕೊಟ್ಟರೋ ಆ ಪ್ರಕಾರವಾಗಿಯೇ ಅವನ್ನು "ಶಂಕರ ಗ್ರಂಥಾವಳಿ"ಯ ೨೦ ಪುಸ್ತಕಗಳಾಗಿ ಅಚ್ಚುಮಾಡಿದ್ದೂ ಈ ಗುರುವರ್ಯರ ಅನುಗ್ರಹದಿಂದಲೇ. ಶಂಕರರು ತಾವು ರಚಿಸಿದ ಗ್ರಂಥಗಳನ್ನು ಮತ್ತೆ ಲೋಕಕ್ಕೆ ಎತ್ತಿಕೊಟ್ಟು ಅವನ್ನು ಶಾಶ್ವತವಾದ ನೆಲೆಯಲ್ಲಿ ನಿಲ್ಲಿಸುವುದಕ್ಕಾಗಿ ತಾವೇ ಈ ೩೩ ನೆಯ ಪೀಠಾಧಿಪತಿಯಾಗಿ ಅವತರಿಸಿದರೋ ಎಂದು ತೋರುತ್ತದೆ.

ಶ್ರೀ ಆದಿಶಂಕರರು ಹಲವು ದುರ್ಮತಗಳನ್ನು ಖಂಡಿಸಿ ವೈದಿಕಮತವನ್ನು ಸ್ಥಾಪಿಸಿದರು. ಕಂಚಿಯಲ್ಲಿ ಶ್ರೀ ಕಾಮಾಕ್ಷೀದೇವಿಯ ಮುಂದೆ ಶ್ರೀ ಚಕ್ರವನ್ನು ಸ್ಥಾಪಿಸಿ ದೇವಿಯ ಉಗ್ರಸ್ಥಿತಿಯನ್ನು ಶಾಂತಗೊಳಿಸಿದರು. ಅಲ್ಲದೆ, ತಿರುಚ್ಚಿ ಜಿಲ್ಲೆಯ 'ತಿರು ಆನೈಕ್ಕಾ' ಎಂಬಲ್ಲಿ ಶ್ರೀ ಅಖಿಲಾಂಡೇಶ್ವರಿಯ ಉಗ್ರ ಸ್ಥಿತಿಯನ್ನು ಶಾಂತಗೊಳಿಸುವುದಕ್ಕೆ ಅಮ್ಮನವರ ಎರಡು ಕಿವಿಗಳಿಗೆ ಎರಡು ತಾಟಂಕಗಳನ್ನು ಕೊಡಿಸಿ, ಅಮ್ಮನವರ ಎದುರಿನಲ್ಲಿ ವಿನಾಯಕನನ್ನೂ ಪ್ರತಿಷ್ಠಿಸಿದರು. ಅದೇ ಪ್ರಕಾರವಾಗಿ ಈ ಸ್ವಾಮಿಗಳೂ ಹಲವು ಸ್ಥಳಗಳಲ್ಲಿ ವಾಮಾಚಾರಮಾರ್ಗ ಮತ್ತು ತಾಂತ್ರಿಕ ಮಾರ್ಗಗಳಲ್ಲಿ ನಡೆಯುತ್ತಿದ್ದ ದೇವೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜಾಕ್ರಮಗಳನ್ನು ಮಾರ್ಪಡಿಸಿ, ವೈದಿಕಮಾರ್ಗವನ್ನು ನೆಲೆಗೊಳಿಸಿದರು. ಜೀವನ್ಮುಕ್ತನು ಆತ್ಮಾನುಸಂಧಾನದಲ್ಲಿರುತ್ತಲೇ ಲೋಕದಲ್ಲಿ ವ್ಯವಹರಿಸುತ್ತ, ಜನಗಳಿಗೆ ಉಪದೇಶ ಮಾಡುತ್ತ, ಅವರನ್ನು ತನ್ನಂತೆಯೇ ಆಗಿಸುವುದಕ್ಕೆ ಪ್ರಯತ್ನಮಾಡುವುದು ಸಾಧ್ಯವೆಂಬುದನ್ನು ನಿದರ್ಶನವಾಗಿ ತೋರಿಸಿದ ಶೃಂಗೇರೀ ಪೀಠಾಧಿಪತಿಗಳಲ್ಲಿ ಮುಖ್ಯವಾದವರು ಈ ಸ್ವಾಮಿಗಳು ಎಂಬುದು ಇಲ್ಲಿ ಗಮನಿಸತಕ್ಕದ್ದು.

ಶೃಂಗೇರೀ ವಾಸಿಯಾದ ನರಸಿಂಹಶಾಸ್ತ್ರಿಯೆಂಬ ಹುಡುಗನನ್ನು ತಮ್ಮ ಅನಂತರ ಪೀಠಾಧಿಕಾರಿಯಾಗಿರಬೇಕಾದವನೆಂದು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳೇ ಆಯ್ದುಕೊಂಡು, ಅವನಿಗೆ ಶೃಂಗೇರೀ ಮಠದ ಪಾಠಶಾಲೆಯಲ್ಲಿ ಶಾಸ್ತ್ರಪಾಠ ಕಲಿಸಿಕೊಡುವಂತೆ ಅಪ್ಪಣೆ ಮಾಡಿದರು. ಈ ಕಿರಿಯನು ಸರ್ವಜ್ಞನಾಗಬೇಕೆಂದು ಶ್ರೀ ಶಾರದಾಂಬೆಯ ಬಳಿ,

"ಸರ್ವಜ್ಞಂ ಶ್ರೀ ನೃಸಿಂಹಂ ಕುರು ಶಿವದಯಿತೇ ತತ್ಪರಂ
ಮದ್ವಿನಮ್ರಂ"

[ಶಿವನಿಗೆ ಪ್ರಿಯಳಾಗಿರುವವಳೇ, ನನ್ನಲ್ಲಿ ವಿನಯವಂತನಾಗಿರುವ ಶ್ರೀ ನೃಸಿಂಹನನ್ನು ಬಹುಬೇಗನೆ ಸರ್ವಜ್ಞನಾಗುವಂತೆ ಮಾಡು]

ಎಂದು ಮುಂತಾಗಿ ಗುರುಗಳು ನಾಲ್ಕು ಶ್ಲೋಕಗಳಿಂದ ಪ್ರಾರ್ಥಿಸಿದರು. ಹೀಗೆ ಪ್ರಾರ್ಥಿಸಿದವರು ಸರ್ವಜ್ಞಮೂರ್ತಿಯಾದವರೂ ಶ್ರೀ ಆದಿಶಂಕರರ ಅಪರಾವತಾರವೂ ಆದ ಮಹಾತ್ಮರು. ಯಾರನ್ನು ಪ್ರಾರ್ಥಿಸಿದರೋ ಅವಳು ಆದಿಶಂಕರರಿಂದಲೇ ಸ್ಥಾಪಿಸಲ್ಪಟ್ಟ ಶ್ರೀ ಚಕ್ರ ಸ್ವರೂಪಿಣಿ. ಹೀಗಿರುವುದರಿಂದ ಆ ಪ್ರಾರ್ಥನೆಯ ಫಲ ಸಿಕ್ಕದೆ ಹೋಗುತ್ತದೆಯೆ? ಇದೂ ನಮ್ಮ ಭಾಗ್ಯವೇ. ಈ ನಾಲ್ಕು ಶ್ಲೋಕಗಳನ್ನು 'ಭಕ್ತಿಸುಧಾ ತರಂಗಿಣೀ' ಎಂಬ ಗ್ರಂಥದಲ್ಲಿ ಕಾಣಬಹುದು. (ಶ್ರೀರಂಗಂ ಶ್ರೀ ವಾಣೀವಿಲಾಸ ಪ್ರೆಸ್ಸಿನ ಪ್ರಕಾಶನ).

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಹೇಳಿದ ಶ್ರೀ ನರಸಿಂಹಶಾಸ್ತ್ರಿಗಳು ಶೃಂಗೇರಿಯಲ್ಲಿ ೩೪ನೆಯ ಪೀಠಾಧಿಪತಿಯಾಗಿ, 'ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳು' ಎಂಬ ಯೋಗಪಟ್ಟದೊಡನೆ ಬೆಳಗಿದರು. ಇವರು ಹುಟ್ಟಿದ ಸ್ಥಳ ಶೃಂಗೇರಿಗ್ರಾಮ. ಇವರ ಪಿತಾಮಹರು ದೊಡ್ಡ ವಿದ್ವಾಂಸರು. ಸಂನ್ಯಾಸ ತೆಗೆದುಕೊಂಡು ಹಿಮಾಲಯ ಪರ್ವತಕ್ಕೆ ತಪಸ್ಸಿಗೆ ಹೋಗಿ ಬಿಟ್ಟರು. ಅವರ ಕುಮಾರರು ಗೋಪಾಲಶಾಸ್ತ್ರಿಗಳೂ ಒಳ್ಳೆಯ ವಿದ್ವಾಂಸರು. ಸ್ವಲ್ಪ ಸಂಪತ್ತುಳ್ಳ ಕುಟುಂಬವೇ. ಗೋಪಾಲಶಾಸ್ತ್ರಿಗಳ ಹೆಂಡತಿ ಶ್ರೀಮತಿ ಲಕ್ಷಮ್ಮನವರು. ಇವರಿಗೆ ೧೪ ಮಕ್ಕಳು ಹುಟ್ಟಿದವು, ೧೩ ಸತ್ತುಹೋದವು. ಶ್ರೀ ನರಸಿಂಹಶಾಸ್ತ್ರಿಗಳು ಮಾತ್ರವೇ ಉಳಿದರು. ಶ್ರೀ ಮಠಕ್ಕಾಗಿಯೇ ಬದುಕಿ ಉಳಿದರೆಂದು ತೋರುತ್ತದೆ. ಪಾಠಶಾಲೆಯಲ್ಲಿ ಓದುತ್ತಿರುವಾಗಲೇ ಅಸಾಧಾರಣವಾಗಿದ್ದ ಇವರ ಜ್ಞಾನದ ಮಟ್ಟವು ಗುರುಗಳ ಗಮನವನ್ನು ಸೆಳೆಯಿತು. ಆಗ ಅವರು ಈ ಕಿರಿಯನನ್ನು ಶೃಂಗೇರೀ ಮಠದ ವೇದಪಾಠಶಾಲೆಯಲ್ಲಿ ಸೇರಿಸುವಂತೆ ಅಪ್ಪಣೆ ಮಾಡಿದರು. ಆ ಮೇಲೆ ಬೆಂಗಳೂರಿನಲ್ಲಿ ಶೃಂಗೇರೀ ಮಠದಲ್ಲಿರುವ ಪ್ರೌಢವಿದ್ಯಾ ಪಾಠ ಶಾಲೆಯಲ್ಲಿ ಶಾಸ್ತ್ರಗಳನ್ನು ಕಲಿಯುವಂತೆ ಏರ್ಪಾಡು ಮಾಡಿದರು. ಪಾಠ ಶಾಲೆಯಲ್ಲಿ ಓದುತ್ತಿರುವಾಗಲೇ ಇವರಿಗೆ ಗುರುಭಕ್ತಿಯು ವಿಶೇಷವಾಗಿತ್ತು. ಒಂದು ಸಲ ಶ್ರೀಸ್ವಾಮಿಗಳು ಶೃಂಗೇರಿಯಿಂದ ಪ್ರವಾಸ ಹೊರಡುವ ಮೊದಲು ಎಲ್ಲರಿಗೂ ಕೊಟ್ಟಂತೆಯೇ ಇವರಿಗೂ ಮಂತ್ರಾಕ್ಷತೆಯನ್ನು ಕೊಟ್ಟರು. ಉಳಿದವರು ಅದನ್ನು ಆಗಲೇ ಉಪಯೋಗಿಸಿಕೊಂಡರು. ಶ್ರೀ ನರಸಿಂಹ ಶಾಸ್ತ್ರಿಗಳು ಮಾತ್ರ ಅದನ್ನು ಒಂದು ಕಾಗದದಲ್ಲಿ ಮಡಿಸಿ ಗುರುವಿನ ಪಟದ ಕೆಳಗೆ ಇಟ್ಟು, ಅದರಲ್ಲಿ ಗುರುಸ್ವರೂಪವನ್ನು ಆವಾಹನೆಮಾಡಿ ಪ್ರತಿದಿನವೂ ಧ್ಯಾನಮಾಡುತ್ತಿದ್ದರು. ಪ್ರವಾಸವನ್ನು ಮುಗಿಸಿ ಹಿಂದಿರುಗಿದ ಗುರುಗಳು ಇದನ್ನು ಕೇಳಿ ಬಹಳ ಸಂತೋಷದಿಂದ ಇವರಿಗೆ ಆಶೀರ್ವಾದ ಮಾಡಿದರು.

ಶ್ರೀ ನರಸಿಂಹಶಾಸ್ತ್ರಿ ಪಾಠಶಾಲೆಯಲ್ಲಿ ಓದುವಾಗಲೇ ಲೋಕವಸ್ತುಗಳಲ್ಲಿ ಆಸಕ್ತಿಯಿಲ್ಲದವರಾಗಿ ಕಾಣುತ್ತಿದ್ದರು. ಯಾವಾಗಲೂ ಧ್ಯಾನಾಸಕ್ತ ರಾಗಿಯೇ ಇರುತ್ತಿದ್ದರು. ಇವರು ಪಾಠಶಾಲೆಯಲ್ಲಿ ಓದುತ್ತಿದ್ದ ಕಾಲದಲ್ಲಿ ಒಂದುದಿನ ಯಾರೋ ಒಬ್ಬನು ಬೀದಿಯಲ್ಲಿ 'ಕನ್ನಡಿಗೂಡು ಪೆಟ್ಟಿಗೆ' ಯನ್ನಿಟ್ಟುಕೊಂಡು ಅದರೊಳಗೆ ರಾಮೇಶ್ವರ ಮೊದಲಾದ ದೃಶ್ಯಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಡುಗರಿಗೆ ತೋರಿಸುತ್ತಿದ್ದನು. ಇದಕ್ಕಾಗಿ ಒಬ್ಬೊಬ್ಬ ಹುಡುಗನಿಂದಲೂ ತಲಾ ಮೂರುಕಾಸಿನಂತೆ ತೆಗೆದುಕೊಳ್ಳುತ್ತಿದ್ದನು. ಇದನ್ನು ನೋಡುವುದಕ್ಕೆ ನರಸಿಂಹಶಾಸ್ತ್ರಿ ಆಸೆಪಟ್ಟನಾದರೂ ೩ ಕಾಸು ಅವನ ಹತ್ತಿರ ಇರಲಿಲ್ಲ. ಆದ್ದರಿಂದ ಅವನು ಪೆಟ್ಟಿಗೆಯೊಳಗಿನ ಆ ಚಿತ್ರಗಳನ್ನು ನೋಡುವುದಕ್ಕೆ ಆಗಲಿಲ್ಲ. ಒಡನೆಯೇ ನರಸಿಂಹಶಾಸ್ತ್ರಿ ಪಕ್ಕದಲ್ಲಿದ್ದವರಿಗೆ; "ಈ ಗಾಜಿನ ಪೆಟ್ಟಿಗೆ ಏಕೆ? ನಮ್ಮ ಮನಸ್ಸೆಂಬ ಪೆಟ್ಟಿಗೆಯಲ್ಲಿ ಧ್ಯಾನಮಾಡಿದರೆ, ಕಾಶಿರಾಮೇಶ್ವರಾದಿಗಳನ್ನು ಮಾತ್ರವೇ ಅಲ್ಲ. ಕೈಲಾಸವನ್ನೇ ನೋಡಬಹುದು" ಎಂದರು. ಎಳೆ ವಯಸ್ಸಿನಲ್ಲಿಯೇ ಇವರ ಅಂತರ್ಮುಖ ದೃಷ್ಟಿ ಅಷ್ಟು ಸ್ಪಷ್ಟವಾಗಿತ್ತೆಂಬುದು ತಿಳಿಯ ಬರುತ್ತದೆ. ಇವರು ಲೋಕದಲ್ಲಿದ್ದರೂ ಲೋಕದೊಡನೆ ಸಂಬಂಧಪಡದೆಯೇ ಬಾಳುತ್ತ ಬಂದರು.

ಇದನ್ನು ಪ್ರಕಾಶಪಡಿಸುವ ಒಂದು ಸಂದರ್ಭವನ್ನು ಇಲ್ಲಿ ಹೇಳಬಹುದು. ಇವರು ಯಾವಾಗಲೂ ಶ್ರೀ ಕಾಮಾಕ್ಷಿದೇವಿಯನ್ನು ವರ್ಣಿಸುವ "ಮೂಕ ಪಂಚಶತೀ" ಶ್ಲೋಕಗಳನ್ನು ಹೇಳಿಕೊಳ್ಳುತ್ತಲೇ ಇದ್ದರು. ಅದರಲ್ಲಿಯೇ ಇವರಿಗೆ ಮನೋಲಯ ಏರ್ಪಟ್ಟಿತ್ತು. ಒಂದು ದಿನ ಶೃಂಗೇರಿಯ ಹೊರಗಿನ ರಸ್ತೆಯಲ್ಲಿ ಸುಮಾರು ಎರಡು ಮೈಲಿ ದೂರದಲ್ಲಿ ನಡೆದುಕೊಂಡು ಹೋಗುತ್ತಾ ಇದ್ದರು. ಎದುರನಿಂದ ಬಂದ ಒಬ್ಬರು, "ಎಲ್ಲಿಗೆ ಹೋಗುತ್ತಿದ್ದೀಯಾ?" ಎಂದು ಕೇಳಿದರು. "ಶೃಂಗೇರಿಗೆ ಹೋಗುತ್ತಿದ್ದೀನಿ" ಎಂದು ಶ್ರೀ ಶಾಸ್ತ್ರಿಗಳು ಉತ್ತರ ಕೊಟ್ಟರು. "ಈಗ ನೀನು ಎಲ್ಲಿದ್ದೀಯ?" ಎಂದು ಅವರು ಕೇಳಿದರು. "೪೩ನೆಯ ಶ್ಲೋಕದಲ್ಲಿ" ಎಂದು ಶಾಸ್ತ್ರಿಗಳು ಉತ್ತರ ಕೊಟ್ಟರು. ಬಂದವರಿಗೆ, "ಶಾಸ್ತ್ರಿಗಳ ಮನಸ್ಸಿನೊಳಗಿನ ನೆನಕೆ ಮೂಕ ಪಂಚಶತಿಯಲ್ಲೇ ಆಳವಾಗಿ ಬೇರೂರಿಬಿಟ್ಟಿದೆ; ಕಾಲುಗಳೇ ಸೋ(ನಡೆಯುತ್ತಲೇ ಇವೆ; ಬಹಿರಿಂದ್ರಿಯಗಳಿಗೂ ಮನಸ್ಸಿಗೂ ಸಂಬಂಧವಿಲ್ಲದ ಉನ್ನತವಾದ ನೆಲೆ ಇದು" ಎಂಬುದು ಆಗ ತಾನೆ ತಿಳಿಯಿತು. ಅವರು ಶ್ರೀ ಶಾಸ್ತ್ರಿಗಳನ್ನು ತಿರುಗಿ ಶೃಂಗೇರಿ ಪಾಠಶಾಲೆಗೆ ಕರೆದುಕೊಂಡು ಬಂದು ಸೇರಿಸಿದರು. ಹುಟ್ಟಿನಲ್ಲಿಯೇ ಈ ಉನ್ನತ ಸ್ಥಿತಿ ಏರ್ಪಟ್ಟಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರು ಪೀಠಾಧಿಪತಿಯಾಗಿ ಬಂದದ್ದು ತಮ್ಮ ಗುರುಗಳು ಅಪೂರ್ಣವಾಗಿ ಬಿಟ್ಟುಹೋದ ಕಾರ್ಯಗಳನ್ನು ಪೂರ್ತಿಮಾಡಬೇಕೆಂಬ ಒಂದೇ ಒಂದು ಉದ್ದೇಶ ದಿಂದ. ಶೃಂಗೇರಿಯಲ್ಲಿ ಶ್ರೀ ಶಾರದಾಂಬಾ ದೇವಾಲಯದ ಕಟ್ಟಡದ ಕೆಲಸವನ್ನು ಪೂರ್ತಿಮಾಡಿಸಿ, ೧೯೧೬ರಲ್ಲಿ ಕುಂಭಾಭಿಷೇಕ ಮಾಡಿದರು. ಪೀಠಾಧಿಪತಿಗಳಾಗಿ ಶಿಷ್ಯರಿಗೆ ಉಪದೇಶ ಮಾಡುತ್ತಾ ಬಂದರೇ ಹೊರತು ಯಾವ ವಿಧವಾದ ಆಸಕ್ತಿಯೂ ಇಲ್ಲದವರಾಗಿಯೇ ಪೀಠಾಧಿಪತ್ಯವನ್ನು ನಿರ್ವಹಿಸುತ್ತಿದ್ದರು.

ಶಿಷ್ಯರಿಗೆ ಅನುಗ್ರಹ ಮಾಡುವುದಕ್ಕಾಗಿ ಯಾತ್ರೆಯನ್ನೂ ಕೈಗೊಂಡರು. ೧೯೨೬ನೆಯ ವರ್ಷದಲ್ಲಿ ಕಾಲಟಿಯಲ್ಲಿ ಮಠದಲ್ಲಿ ಒಂದು ವೇದ ಪಾಠಶಾಲೆ ಯನ್ನೂ, ವೇದಾಂತ ಪಾಠಶಾಲೆಯನ್ನೂ ಏರ್ಪಡಿಸಿ ನಿರಂತರವಾಗಿ ಪಾಠ ನಡೆ ಯುವಂತೆ ಮಾಡಿದರು. ನಾಲ್ಕು ವರ್ಷಕಾಲ ಯಾತ್ರೆಮಾಡಿ ಶೃಂಗೇರಿಗೆ ಹಿಂದಿರುಗಿದಮೇಲೆ, ಇವರು ಧ್ಯಾನದಲ್ಲಿಯೇ ಬಹಳವಾಗಿ ನಿರತರಾದರು. ಅಡಿಗಡಿಗೆ ಅಂತರ್ಮುಖಿಗಳಾಗುತ್ತಿದ್ದರು. ಹಲವು ದಿನಗಳವರೆಗೂ ಆ ಸ್ಥಿತಿ ಯಲ್ಲಿಯೇ ಮಗ್ನರಾಗಿ ಇರುತ್ತಿದ್ದರು. ಆ ನೆಲೆಯಲ್ಲಿ ಹಲವು ಶಿಷ್ಯರಿಗೆ ಅವರವರ ಭಾಗ್ಯವಿಶೇಷದಂತೆ ಉಪದೇಶವು ಮಾತ್ರ ದೊರೆಯುತ್ತಿತ್ತು. ಗುರುಗಳು ಅಂಥ ಸಮಯಗಳಲ್ಲಿ ಆಹಾರವನ್ನು ಅಪೇಕ್ಷಿಸುತ್ತಿರಲಿಲ್ಲ. ಮಾತನಾಡುವುದು ಕೂಡ ಅಷ್ಟಾಗಿ ಇರುತ್ತಿರಲಿಲ್ಲ. ಸಾಮಾನ್ಯವಾಗಿ ಇತರ ದಿನಗಳಲ್ಲಿ, ಮುಖ್ಯವಾಗಿ ಶ್ರೀ ಚಂದ್ರಮೌಳೀಶ್ವರ ಪೂಜೆಮಾಡುವಾಗ ಇವರು ಮನಶ್ಶಾಂತಿಯಿಂದ ಕೂಡಿ ತನ್ಮಯರಾಗಿ ಇರುತ್ತಿದ್ದರು.

ಶೃಂಗೇರಿಯ ಶ್ರೀ ಚಂದ್ರಮೌಳೀಶ್ವರ ಕೊಟ್ಟೆಯಲ್ಲಿ ಒಂದು ರಾತ್ರಿ ಇವರು ಪೂಜೆ ಮಾಡುತ್ತಿದ್ದಾಗ ಪಕ್ಕದ ಕೋಣೆಯಿಂದ ಒಂದು ನಾಗರಹಾವು ಬಂತು. ಎಲ್ಲರೂ ಗಾಬರಿಯಾದರು. ತಮ್ಮ ಕೈ ಸಂಜ್ಞೆಯಿಂದಲೇ ಅವರು ಗಳನ್ನು ಶಾಂತವಾಗಿರುವಂತೆ ಮಾಡಿ, ಅಭಿಷೇಕಕ್ಕೆ ಇಟ್ಟಿದ್ದ ಹಾಲನ್ನು ಬಟ್ಟಲು ಸಮೇತ ಆ ಹಾವಿನ ಮುಂದೆ ಇಟ್ಟರು. ಹಾವು ಹಾಲನ್ನು ಕುಡಿದು ನೆಮ್ಮದಿಯಾಗಿ ಹೊರಟುಹೋಯಿತು.

ಮತ್ತೊಂದು ಸಲ ಇವರು ಅಂತರ್ಮುಖಿಗಳಾಗಿದ್ದಾಗ ಒಂದು ರಾತ್ರಿ ನರಸಿಂಹವನದಲ್ಲಿ ಒಂದು ಹುಲಿ ಬಂದು ಮಠದ ಹಸುವೊಂದನ್ನು ಅಟ್ಟಿಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದು ಅದರ ಕತ್ತನ್ನು ಕಚ್ಚಿ ಹಿಡಿಯಿತು. ಮಠದೊಳಗಿದ್ದ ಸ್ವಾಮಿಗಳು ದಿಢೀರೆಂದು ಹೊರಕ್ಕೆ ಬಂದು, ಹುಲಿಯನ್ನು ಕುರಿತು, 'ಇಲ್ಲಿ ಬಂದು ಏಕೆಗಲಾಟೆ ಮಾಡುತ್ತೀಯೆ?' ಎಂದು ಕೇಳಲಾಗಿ, ಆ ಹುಲಿ ಹಸುವನ್ನು ಬಿಟ್ಟು ಹೊರಟು ಹೋಯಿತು. ಗುರುಗಳು ಹಸುವನ್ನು ಒಬ್ಬರ ವಶಕ್ಕೆ ಒಪ್ಪಿಸಿ ಚಿಕಿತ್ಸೆ ಮಾಡಿಸಬೇಕೆಂದು ಅಪ್ಪಣೆಮಾಡಿ ಕೊಟ್ಟಿಗೆಗೆ ಕಳುಹಿಸಿದರು. ಶ್ರೀ ಸ್ವಾಮಿಗಳು ಅಂತರ್ಮುಖಿಗಳಾಗಿರುವಾಗ ಅವರಿಗೆ ಬಾಹ್ಯಲೋಕ ಸಂಬಂಧವೇ ಇರುತ್ತಿರಲಿಲ್ಲ. ಆದರೆ ದಿಢೀರೆಂದು (ಇದ್ದಕ್ಕಿದ್ದಂತೆ) ಬಾಹ್ಯಲೋಕ ವಿಷಯಗಳನ್ನು ಕುರಿತು ಅವರು ಮಾತನಾಡಿದಾಗ ಮಠದವರಿಗೇ ಆ ವಿಚಾರ ತಿಳಿದಿರುತ್ತಿರಲಿಲ್ಲ. ಆಮೇಲೆ ಅವರು ವಿಚಾರಿಸಿ ಅದು ಸರಿ ಎಂದು ತಿಳಿದುಕೊಂಡ ಅನೇಕ ಸಂದರ್ಭಗಳುಂಟು. ಇವರು ಉನ್ನತವಾದ ಜೀವನ್ಮುಕ್ತ ಸ್ಥಿತಿಯಲ್ಲಿದ್ದವರು; ತ್ರಿಕಾಲ ಜ್ಞಾನಿಗಳು. ಇವರ ಜೀವನ ಚರಿತ್ರೆಯಲ್ಲಿ ಅನೇಕ ವಿಶೇಷ ಸಂಗತಿಗಳು ಕಾಣಬರುವುವು. ಅವುಗಳನ್ನು ವಿಸ್ತರಿಸುವುದಕ್ಕೆ ಇಲ್ಲಿ ಅವಕಾಶವಿಲ್ಲ.

ಶ್ರೀ ಮಠದ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ತಕ್ಕ ಶಿಷ್ಯನನ್ನು ಹುಡುಕಿ ಆಯ್ದುಕೊಂಡು, ಅವನನ್ನು ತಮ್ಮ ಅನಂತರ ಪೀಠಾಧಿಪತಿಯಾಗಿ ನಿಯಮಿಸಬೇಕೆಂದು ಇವರು ಯೋಚಿಸಿದರು. ತಮ್ಮ ಆತ್ಮಾನುಸಂಧಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ದೊರೆಯಲೆಂಬುದೇ ಉದ್ದೇಶ. ತಮ್ಮ ಅಭಿಪ್ರಾಯವನ್ನು ಆಗ ಶ್ರೀ ಮಠದ ಸರ್ವಾಧಿಕಾರಿಯಾಗಿದ್ದ ಶ್ರೀಕಂಠಶಾಸ್ತ್ರಿಗಳಿಗೆ ತಿಳಿಸಿದರು. ಇದು ನಡೆದದ್ದು ೧೯೩೦ರಲ್ಲಿ. ಶ್ರೀಕಂಠ ಶಾಸ್ತ್ರಿಗಳು, ಶೃಂಗೇರೀ ಪಾಠಶಾಲೆಯಲ್ಲಿ ಓದುತ್ತಿದ್ದ ೧೧ ಮಂದಿ ವಿದ್ಯಾರ್ಥಿಗಳನ್ನು ಹುಡುಕಿದರು; ಅವರನ್ನು ಶ್ರೀ ಸ್ವಾಮಿಗಳ ಮುಂದೆ ನಿಲ್ಲಿಸಿ, 'ಇವರುಗಳಲ್ಲಿ ಯಾರಾದರೂ ಒಬ್ಬರನ್ನು ಶಿಷ್ಯನಾಗಿ ಆಯ್ದುಕೊಳ್ಳಬಹುದು' ಎಂದು ವಿಜ್ಞಾಪನೆ ಮಾಡಿದರು. ಅವರಲ್ಲಿ ೧೦ ಮಂದಿ ಹುಡುಗರನ್ನು ಕಾರಣ ತೋರಿಸದೆಯೇ ನಿರಾಕರಿಸಲಾಯಿತು. ೧೧ನೆಯವನ ವಿಷಯವಾಗಿ ಶ್ರೀಕಂಠಶಾಸ್ತ್ರಿಗಳು ಶ್ರೀ ಸ್ವಾಮಿಗಳಿಗೆ 'ಈ ಹುಡುಗ ಒಳ್ಳೆಯ ಬುದ್ಧಿಶಾಲಿ, ಒಳ್ಳೆಯ ವೈರಾಗ್ಯವುಳ್ಳವನು, ಇವನನ್ನು ಆಯ್ದುಕೊಳ್ಳಬಹುದು' ಎಂದರು. ಅದಕ್ಕೆ ಸ್ವಾಮಿಗಳು, ಶ್ರೀಕಂಠಶಾಸ್ತ್ರಿಗಳನ್ನು ಕುರಿತು, "ಈ ಹುಡುಗ ನಿನ್ನೆ ರಾತ್ರಿ ಏನು ಕನಸು ಕಂಡ ಎಂದು ಕೇಳಿ" ಎಂದರು. ಶ್ರೀಕಂಠಶಾಸ್ತ್ರಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಹುಡುಗನನ್ನು ಕೇಳಲು, ಅವನು, "ನಿನ್ನೆ ರಾತ್ರಿ ನಮ್ಮ ತಾಯಿ ತಂದೆಯವರೊಡನೆ ನಾನು ಮಾತನಾಡುತ್ತಾ ಇದ್ದ ಹಾಗೆ ಕನಸು ಕಂಡೆ" ಎಂದನು. ಒಡನೆಯೇ ಶ್ರೀ ಸ್ವಾಮಿಗಳು ಶ್ರೀಕಂಠಶಾಸ್ತ್ರಿಗಳಿಗೆ, "ಪಾಪ, ಈ ಹುಡುಗ ಮನೆಯ ಯೋಚನೆಯಲ್ಲಿ ಕೊರಗುತ್ತಿದ್ದಾನೆ. ಊರಿಗೆ ಹೋಗಿ ಬರುವಂತೆ ಇವನಿಗೆ ಹೇಳಿಬಿಡಿ. ಪೀಠಕ್ಕೆ ಯೋಗ್ಯತೆಯುಳ್ಳ ಶಿಷ್ಯನನ್ನು ಹುಡುಕಬೇಕು. ಜಾತಕನೋಡಿ ಪರಿವ್ರಾಜಕ ಯೋಗವುಳ್ಳ ಹುಡುಗನನ್ನು ಕರೆದುಕೊಂಡು ಬನ್ನಿ" ಎಂದರು. ಹೀಗೆ, ಬೇರೆಯವರ ಸ್ವಪ್ನಗಳನ್ನು ತಿಳಿಯುವ ಮಟ್ಟಕ್ಕೆ ಏರಿತ್ತು, ಇವರ ತಪೋಮಹಿಮೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೩

ಶಿಷ್ಯನನ್ನು ಕಂಡದ್ದು

ಈ ಸಮಯದಲ್ಲಿ ಬೆಂಗಳೂರಿನಲ್ಲಿ ಒಂದು ಸಂಗತಿ ನಡೆಯಿತು. ಕೈಪು ರಾಮಶಾಸ್ತ್ರಿಗಳೆಂಬ ಒಬ್ಬ ಪಾಠಶಾಲೆ ಉಪಾಧ್ಯಾಯರಿದ್ದರು. ಅವರ ಧರ್ಮಪತ್ನಿ ಶ್ರೀಮತಿ ವೆಂಕಟಲಕ್ಷಮ್ಮ. ಇವರುಗಳಿಗೆ ಮೂವರು ಹೆಣ್ಣು ಮಕ್ಕಳು, ಮೂವರು ಗಂಡು ಮಕ್ಕಳು. ಈ ಕುಟುಂಬದ ಆರ್ಥಿಕ ಪರಿಸ್ಥಿತಿ ಸಾಮಾನ್ಯವಾಗಿತ್ತು.

ಕೈಪು ರಾಮಶಾಸ್ತ್ರಿಗಳು – ವೆಂಕಟಲಕ್ಷಮ್ಮ

ಸೀತಾಲಕ್ಷಮ್ಮ	ಸುಂದರಮ್ಮ	ಶ್ರೀನಿವಾಸ ಶಾಸ್ತ್ರಿ	ರಾಮನಾಥ ಶಾಸ್ತ್ರಿ	ಸುಬ್ರಹ್ಮಣ್ಯ ಶಾಸ್ತ್ರಿ

ಶಾರದಮ್ಮ

ಶ್ರೀನಿವಾಸಶಾಸ್ತ್ರಿ ೧೯೧೭ ರಲ್ಲಿ ಹುಟ್ಟಿದವರು. ಪಾಠಶಾಲೆಯಲ್ಲಿ ಓದುತ್ತಿದ್ದ ಇವರಿಗೆ ಚಿಕ್ಕವಯಸ್ಸಿನಿಂದಲೇ ಯಾವ ವಿಧವಾದ ಆಡಂಬರದಲ್ಲಿಯೂ ಆಸಕ್ತಿಯಿರಲಿಲ್ಲ. ಒಂದು ಹೊಸ ಪಂಚೆಯನ್ನು ತಂದುಕೊಟ್ಟರೂ ಅದನ್ನು ಉಟ್ಟುಕೊಳ್ಳುವುದಕ್ಕೆ ಇವರು ಇಷ್ಟಪಡುತ್ತಿರಲಿಲ್ಲ. ಉಳಿದ ಹುಡುಗರ ಹಾಗೆ ಆಟಗಳಲ್ಲಿ ಹೆಚ್ಚುಕಾಲ ಕಳೆಯುತ್ತಿರಲಿಲ್ಲ. ಒಂದು ಚಿಕ್ಕ ವಿನಾಯಕ ವಿಗ್ರಹವನ್ನಿಟ್ಟುಕೊಂಡು ಪೂಜೆ ಮಾಡುತ್ತಿರುವುದೇ ಇವರಿಗೆ ಆಟ.

ಬೆಂಗಳೂರಿನಲ್ಲಿ ಒಂದು ವಿನಾಯಕದೇವಸ್ಥಾನಕ್ಕೆ ಅಡಿಗಡಿಗೆ ದರ್ಶನಕ್ಕಾಗಿ ಹೋಗಿ ಬರುತ್ತಿದ್ದರು. ರುಚಿಕರವಾದ ಆಹಾರಗಳಲ್ಲಿಯೂ ಇವರ ಮನಸ್ಸು ಹೋಗುತ್ತಿರಲಿಲ್ಲ. [illegible] ಗಮನಿಸುತ್ತಲೇ ಬಂದರು ತಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಮಶಾಸ್ತ್ರಿಗಳು. ಒಂದು ದಿನ ಬೆಂಗಳೂರಿನಲ್ಲಿದ್ದ ವೆಂಕಟರಾಮಯ್ಯ ಎಂಬ ಜ್ಯೋತಿಷಿಗಳು (ಇವರು ಕುಟುಂಬದ ಸ್ನೇಹಿತರು) ಇವರ ಮನೆಗೆ ಬಂದರು. ಶ್ರೀನಿವಾಸ ಶಾಸ್ತ್ರಿಯ ವಿಷಯವಾಗಿ ಪ್ರಸ್ತಾಪ ಬರಲಾಗಿ, ಅವರ ಜಾತಕವನ್ನು ತೆಗೆದುಕೊಂಡು ಬರುವಂತೆ ಅವರ ತಂದೆಯವರಿಗೆ ಹೇಳಿದರು. ಕೂಡಲೆ ಜಾತಕ ತಂದುಕೊಟ್ಟರು. ಆ ಜಾತಕವನ್ನು ಪರಿಶೀಲನೆ ಮಾಡಿದ ಜೋಯಿಸರು, "ಇದು ಮಹಾತ್ಮನ ಜಾತಕ. ಈ ಹುಡುಗ ದೊಡ್ಡ ಸಂನ್ಯಾಸಿಯಾಗುತ್ತಾನೆ. ಒಳ್ಳೆಯ ಕೀರ್ತಿ ಪಡೆಯುತ್ತಾನೆ" ಎಂದರು. ಅದಕ್ಕೆ ಶ್ರೀ ರಾಮಶಾಸ್ತ್ರಿಗಳು, ಜೋಯಿಸರನ್ನು ಕುರಿತು, "ಹೋಗಯ್ಯ, ಇವನಿಗೆ ಪಾಠಶಾಲೆಯ ಪಾಠಗಳನ್ನೋದುವುದಕ್ಕೇ ಆಸೆಯಿಲ್ಲ, ಒಳ್ಳೆ ಬಟ್ಟೆ ಉಟ್ಟುಕೊಳ್ಳುವುದಿಲ್ಲ ಎನ್ನುತ್ತಾನೆ. ಉಳಿದ ಹುಡುಗರ ಜೊತೆ ಆಟವಾಡುವುದರಲ್ಲೂ ಇವನಿಗೆ ಮನಸ್ಸಿಲ್ಲ. ಏನೋ ಜಡಭರತನ ಹಾಗೆ ಇದಾನೆ. ಇವನ ಜಾತಕ ಏನೋ ಮಹಾ ದೊಡ್ಡದು ಎನ್ನುತ್ತೀಯೆ" ಎಂದರು. ಜೋಯಿಸರು, "ನಿಶ್ಚಯವಾಗಿಯೂ ಇವನು ದೊಡ್ಡ ಸಂನ್ಯಾಸಿಯಾಗಿಯೇ ಆಗುತ್ತಾನೆ. ನೀನು ಅವನಿಗೆ ನಮಸ್ಕಾರ ಮಾಡಬೇಕಾಗಿ ಬರುತ್ತದೆ; ನಮಸ್ಕಾರ ಮಾಡುತ್ತೀಯೆ, ನಾನು ನೋಡುತ್ತೇನೆ" ಎಂದು ತೀರ್ಮಾನವಾಗಿ ಹೇಳಿದರು.

ಇದು ನಡೆದು ಕೆಲವು ತಿಂಗಳು ಕಳೆದ ಮೇಲೆ, ಬೆಂಗಳೂರಿನ ಶ್ರೀ ಶಂಕರ ಮಠಕ್ಕೆ ಶೃಂಗೇರೀ ಮಠದ ಸರ್ವಾಧಿಕಾರಿ ಶ್ರೀಕಂಠಶಾಸ್ತ್ರಿಗಳು ಬಂದರು. ಜೋಯಿಸರು (ವೆಂಕಟರಾಮಯ್ಯನವರು) ಇವರನ್ನು ಸಂಧಿಸಿದರು.

ಶ್ರೀಕಂಠಶಾಸ್ತ್ರಿಗಳು — ಯಾರಾದರೂ ಒಬ್ಬ ಒಳ್ಳೆಯ ಹುಡುಗ ಪರಿವ್ರಾಜಕ ಯೋಗವಿರುವ ಜಾತಕವುಳ್ಳವನಾಗಿರುವುದಾದರೆ ತಿಳಿಸಿ. ಶೃಂಗೇರೀ ಪೀಠಕ್ಕೆ ಒಬ್ಬ ಶಿಷ್ಯನನ್ನು ಸ್ವೀಕರಿಸುವಂತೆ ಗುರುಗಳು ಸಂಕಲ್ಪ ಮಾಡಿದ್ದಾರೆ.

ಜೋಯಿಸರು — ಆಹಾ! ಆ ರೀತಿಯ ಜಾತಕ ಇಲ್ಲೇ ಇದೆಯಲ್ಲಾ; ತೆಗೆದುಕೊಂಡು ಬರುತ್ತೇನೆ.

ಒಡನೆಯೇ ಶ್ರೀನಿವಾಸಶಾಸ್ತ್ರಿಯ ಜಾತಕ ಜೋಯಿಸರ ಮೂಲಕ ಶ್ರೀಕಂಠಶಾಸ್ತ್ರಿಗಳ ಕೈಗೆ ಬಂದು ಸೇರಿತು. ಶ್ರೀಕಂಠಶಾಸ್ತ್ರಿಗಳು "ಈ ಹುಡುಗನನ್ನೂ ಅವನ ತಂದೆಯನ್ನೂ ಮಠಕ್ಕೆ ಕರೆದುಕೊಂಡು ಬನ್ನಿ" ಎಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಡನೆಯೇ ಜೋಯಿಸರು ಶ್ರೀ ರಾಮಶಾಸ್ತ್ರಿಗಳನ್ನೂ, ಶ್ರೀನಿವಾಸಶಾಸ್ತ್ರಿಯನ್ನೂ ಕರೆದುಕೊಂಡು ಶೃಂಗೇರೀ ಮಠಕ್ಕೆ ಬಂದರು.

ಶ್ರೀಕಂಠಶಾಸ್ತ್ರಿಗಳು — (ಶ್ರೀ ರಾಮಶಾಸ್ತ್ರಿಗಳನ್ನು ಕುರಿತು) ಈ ಹುಡುಗನಿಗೆ ಉಪನಯನ ಆಗಿಲ್ಲವೋ ?

ಶ್ರೀ ರಾಮಶಾಸ್ತ್ರಿಗಳು — ಇನ್ನೂ ಆಗಿಲ್ಲ, ಆಗಬೇಕು, ಸೌಕರ್ಯ ಸಂದರ್ಭಗಳಿಗಾಗಿ ಕಾದಿದ್ದೇನೆ.

ಶ್ರೀಕಂಠಶಾಸ್ತ್ರಿಗಳು — ಹಾಗಾದರೆ ಶೃಂಗೇರಿಗೆ ಕರೆದುಕೊಂಡು ಬಂದರೆ ಅಲ್ಲಿಯೇ ಮಠದ ಖರ್ಚಿನಲ್ಲಿ ಉಪನಯನ ಮಾಡಬಹುದಲ್ಲ, ಬರುತ್ತೀರಾ ?

ಶ್ರೀ ರಾಮಶಾಸ್ತ್ರಿಗಳು — ಆಹಾ, ಬರುತ್ತೇವೆ.

ಕೂಡಲೇ ಶೃಂಗೇರಿಗೆ ಬರಬೇಕಾದ ದಿನವನ್ನು ಶ್ರೀಕಂಠಶಾಸ್ತ್ರಿಗಳು ಗುರುತಿಸಿ ಶ್ರೀ ರಾಮಶಾಸ್ತ್ರಿಗಳಿಗೆ ಕೊಟ್ಟರು. ಗೊತ್ತುಪಡಿಸಿದ ದಿನ ಶ್ರೀ ರಾಮಶಾಸ್ತ್ರಿಗಳು ಕುಟುಂಬ ಸಮೇತರಾಗಿ ಶೃಂಗೇರಿಗೆ ಬಂದು ಸೇರಿದರು. ಉಪನಯನಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಠದಲ್ಲಿಯೇ ಮಾಡಲಾಗಿತ್ತು. ಶ್ರೀ ರಾಮಶಾಸ್ತ್ರಿಗಳ ಕುಟುಂಬದವರು ಶೃಂಗೇರಿ ಮಠಕ್ಕೆ ಉತ್ತರ ಭಾಗದಲ್ಲಿರುವ ಬಿಡದಿಯಲ್ಲಿ (ಹಳೆಯ ಗೆಸ್ಟ್ ಹೌಸ್) ತಂಗಲು ಏರ್ಪಾಡಾಗಿತ್ತು.

ಅಂದು ೧೯೩೦ ನೆಯ ವರ್ಷದ ಮೇ ತಿಂಗಳು ೨ ನೆಯ ತಾರೀಖು. ಮಠದಲ್ಲಿ ಇವರಿಗೆ ಒಳ್ಳೆಯ ಸ್ವಾಗತ ದೊರೆಯಿತು. ಆಗ ಶೃಂಗೇರಿಯಲ್ಲಿ ಶ್ರೀ ಶಂಕರ ಜಯಂತಿ ಉತ್ಸವ ನಡೆಯುತ್ತಿತ್ತು. ಶ್ರೀ ರಾಮಶಾಸ್ತ್ರಿಗಳ ಕುಟುಂಬದವರು ಯಾವ ಬಿಡದಿಯಲ್ಲಿ ತಂಗಲಿದ್ದರೋ ಅಲ್ಲಿ, ಊರಿನಲ್ಲಿ ಉತ್ಸವ ಬರುವುದಕ್ಕಾಗಿ ಆದಿ ಆಚಾರ್ಯರ ಮೂರ್ತಿಯನ್ನು ಅಲಂಕಾರ ಮಾಡಿ ಇಟ್ಟಿದ್ದರು. ಇದರಲ್ಲಿ ಭವಿಷ್ಯ ಸೂಚಕವಾದ ಒಂದು ದೈವಸಂಕಲ್ಪ ವಿತ್ತೋ ಅಥವಾ ಗುರುಗಳ ಕೃಪೆಯಿಂದ ಹಾಗೆ ಮಾಡಲಾಗಿತ್ತೋ ತಿಳಿಯಲಿಲ್ಲ. ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಅಲ್ಲಿಗೆ ಬಂದರು. ಅದೇ ಸಮಯದಲ್ಲಿ ಶ್ರೀ ರಾಮಶಾಸ್ತ್ರಿಗಳ ಕುಟುಂಬದವರೂ ಅಲ್ಲಿಗೆ ಬಂದು ಸೇರಿದರು. ಶ್ರೀ ಮಹಾಸನ್ನಿಧಾನ ಇವರನ್ನು ಕಂಡರು. "ಉತ್ಸವದಲ್ಲಿ ಎಲ್ಲರೂ ಆಸಕ್ತಿಯಿಂದ ತೊಡಗಿರುವುದರಿಂದ, ನಾಳೆ ಸಾವಕಾಶವಾಗಿ ದರ್ಶಿಸಬಹುದು" ಎಂದು ಜಗದ್ಗುರುಗಳು ಶ್ರೀ ರಾಮಶಾಸ್ತ್ರಿಗಳಿಗೆ ಹೇಳಿ ಹೊರಟು ಹೋದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ಶಂಕರ ಜಯಂತಿ ಉತ್ಸವ ಮುಗಿಯಿತು. ಮರುದಿನ ೪-೫-೧೯೩೦ ವೈಶಾಖ ಶುಕ್ಲ ಷಷ್ಠಿ; ಶ್ರೀ ಷಣ್ಮುಖನಿಗೆ ದೇವಸೇನಾಪತ್ಯ ದೊರೆತ ದಿನ. ಅಂದು ಶ್ರೀನಿವಾಸನಿಗೆ ಉಪನಯನಕ್ಕೆ ದಿನ ಗೊತ್ತುಮಾಡಲಾಗಿತ್ತು.

ಆವತ್ತು ಶ್ರೀ ರಾಮಶಾಸ್ತ್ರಿಗಳ ಬಳಿ ಶ್ರೀಕಂಠಶಾಸ್ತ್ರಿಗಳು, "ಬ್ರಹ್ಮೋಪದೇಶ ಮಾಡುವ ಲಗ್ನವನ್ನು ಮಠದಲ್ಲಿ ತೀರ್ಮಾನಿಸಲಾಗಿದೆ. ಶ್ರೀ ಶಾರದಾಮ್ಮನವರ ದೇವಾಲಯದಲ್ಲಿ ಆ ಲಗ್ನವನ್ನು ಸೂಚಿಸುವುದಕ್ಕೆ ಗಂಟೆ ಬಾರಿಸುತ್ತದೆ. ಅದೇ ಸಮಯದಲ್ಲಿ ನೀವು ಬ್ರಹ್ಮೋಪದೇಶ ಮಾಡಬೇಕು" ಎಂದು ಹೇಳಿದರು. ಶ್ರೀ ರಾಮಶಾಸ್ತ್ರಿಗಳು 'ಸರಿ' ಎಂದರು. ಆದರೆ ಇವರ ಮನಸ್ಸಿನಲ್ಲಿ ಒಂದು ಯೋಚನೆಯುಂಟಾಯಿತು: "ಈ ಲಗ್ನವನ್ನು ನಿಶ್ಚಯಿಸುವುದಕ್ಕೆ ನನಗೆ ಅಧಿಕಾರವಿಲ್ಲ. ಶ್ರೀ ಮಠದ ಆಶ್ರಯದಲ್ಲಿ ಉಪನಯನ ನಡೆಯುತ್ತದೆ. ಕಟಕ ಲಗ್ನದಲ್ಲಿ ಉಪನಯನ ನಡೆದಿರುವವರು ಆದಿ ಆಚಾರ್ಯರ ಹಾಗೆ ಸಂನ್ಯಾಸಿಯಾದದ್ದಾಗಿ ಕೇಳಿದ್ದೇನೆ. ನನ್ನ ಮಗನಿಗೂ ಕಟಕ ಲಗ್ನದಲ್ಲಿ ಬ್ರಹ್ಮೋಪದೇಶ ಮಾಡುವಂತೆ ಗಂಟೆ ಹೊಡೆಯುವ ಹೊತ್ತು ಗೊತ್ತಾಗಿ ಬಿಟ್ಟದ್ದರೋ! — — ನಾನು ಏನು ಹೇಳಲಾದೀತು? ನಡೆಯುವುದು ನಡೆದುಹೋಗಲಿ" ಎಂಬ ಯೋಚನೆಗೊಳಗಾದರು.*

ಸರಿ; ದೇವಸ್ಥಾನದಲ್ಲಿ ಗಂಟೆ ಹೊಡೆಯಿತು. ಬ್ರಹ್ಮೋಪದೇಶವೂ ನಡೆಯಿತು. ಅದು ಕಟಕ ಲಗ್ನವೇ ಆಗಿತ್ತು. ಲೋಕ ಉಜ್ಜೀವಿಸುವುದಕ್ಕಾಗಿ ಉತ್ತಮರಾದ ಶೃಂಗೇರೀ ಪೀಠಕ್ಕೆಂದು ಸಿದ್ಧಗೊಳಿಸಿದ ವಟು ಶ್ರೀನಿವಾಸ ಶಾಸ್ತ್ರಿಯ ಉಪನಯನವು ಶ್ರೀ ಶಾರದಾಂಬೆಯ ಅನುಗ್ರಹದಿಂದಲೂ ಶ್ರೀ ಜಗದ್ಗುರುಗಳ ಆಜ್ಞೆಯಿಂದಲೂ ನೆರವೇರಿತು.*

ನಾಲ್ಕುದಿನ ಉಪನಯನ ಕಾರ್ಯಗಳು ಚೆನ್ನಾಗಿ ನಡೆದವು. ಐದನೆಯ ದಿನ ಶ್ರೀ ರಾಮಶಾಸ್ತ್ರಿಗಳು ಕುಟುಂಬ ಸಮೇತರಾಗಿ ತುಂಗಾನದಿಯ ಆಚೆ

* ಈ ವಿವರವನ್ನು ಈ ಗ್ರಂಥಕರ್ತರಿಗೆ ಶ್ರೀ ರಾಮಶಾಸ್ತ್ರಿಗಳು ತಿಳಿಸಿದಾಗ, ಘಟನೆ ನಡೆದು ೩೫ ವರ್ಷ ಕಳೆದುಹೋಗಿದ್ದವು. ಆದರೂ ಹಳೆಯ ವಿಷಯಗಳನ್ನು ಜ್ಞಾಪಕ ಮಾಡಿಕೊಂಡು ಹೇಳುವಾಗ, ಮನಸ್ಸಿನಲ್ಲಿ ಬಹಳ ಕಳವಳಪಟ್ಟುಗೊಂಡು ಹೇಳಿದರು. ತಂದೆಯೆಂಬ ವ್ಯಾಮೋಹ ಬಿಡಲಿಲ್ಲವೆಂದು ಕಾಣುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಡದಲ್ಲಿರುವ ನೃಸಿಂಹವನಕ್ಕೆ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ದರ್ಶನ ಮಾಡುವುದಕ್ಕಾಗಿ ಹೋದರು. ಎಲ್ಲರಂತೆಯೇ ವಟು ಶ್ರೀನಿವಾಸಶಾಸ್ತ್ರಿಯೂ ಶ್ರೀ ಸ್ವಾಮಿಗಳಿಗೆ ನಮಸ್ಕರಿಸಿದನು. ಎಲ್ಲರೂ ಕುಳಿತುಕೊಂಡ ಬಳಿಕ ಶ್ರೀ ಸ್ವಾಮಿಗಳು ವಟುವನ್ನು ಕುರಿತು, "ನಿನಗೆ ಉಪನಯನವಾಯಿತು. ಗಾಯತ್ರೀ ಉಪದೇಶವನ್ನು ಪಡೆದುಬಿಟ್ಟೆ. ಇನ್ನು ಊರಿಗೆ ಹೋಗಿ ಸಮಿಧಾಧಾನ ಮಾಡುತ್ತಾ ಓದಿಕೊಂಡಿರು" ಎಂದರು.

ವಟು ಶ್ರೀನಿವಾಸ — ನನಗೆ ಊರಿಗೆ ಹೋಗಬೇಕೆಂಬ ಇಚ್ಛೆ ಇಲ್ಲ. ಅಪ್ಪಣೆಯಾದರೆ ಇಲ್ಲೇ ಇರುತ್ತೇನೆ.

ಸ್ವಾಮಿಗಳು — ಏನಪ್ಪಾ! ನೀನು ಇನ್ನೂ ಇಂಗ್ಲೀಷ್ ಓದಬೇಕು. ಉದ್ಯೋಗ ಮಾಡಬೇಕು. ಸಂಪಾದಿಸಬೇಕು. ಅದಕ್ಕಾಗಿ ಊರಿಗೆ ತಾನೆ ಹೋಗಬೇಕು?

ಶ್ರೀನಿವಾಸ — ನನಗೆ ಇಂಗ್ಲೀಷ್ ವಿದ್ಯಾಭ್ಯಾಸವೂ ಬೇಡ. ಆ ಉದ್ಯೋಗವೂ ಬೇಡ. ನಾನು ಸಂಸ್ಕೃತ ಓದಬೇಕು. ಇಲ್ಲೇ ಇದ್ದು ಸಂಸ್ಕೃತ ಓದುತ್ತೇನೆ. ಇಲ್ಲದಿದ್ದರೆ, ಚಿದಂಬರಕ್ಕೆ ಹೋಗುತ್ತೇನೆ.

ಶ್ರೀ ಸ್ವಾಮಿಗಳು ಶ್ರೀ ರಾಮಶಾಸ್ತ್ರಿಗಳನ್ನು ಕುರಿತು "ಏನು, ನಿಮ್ಮ ಮಗ ಹೀಗೆ ಹೇಳುತ್ತಾನಲ್ಲ" ಎಂದರು. "ಅವನ ಮನಸ್ಸು ಹಾಗೆ ಇದೆ" ಎಂದರು ಶ್ರೀ ರಾಮಶಾಸ್ತ್ರಿಗಳು.

ಶ್ರೀ ಸ್ವಾಮಿಗಳು — (ವಟುವನ್ನು ಕುರಿತು) ನೀನು ಓದುತ್ತಿದ್ದೀಯಲ್ಲ ಯಾವ ಪಾಠವನ್ನು ಚೆನ್ನಾಗಿ ಓದಿದ್ದೀಯೆ? ಅದನ್ನು ಹೇಳಬಲ್ಲೆಯಾ?

ವಟು — ನಳ ಚರಿತ್ರೆ ಓದಿದ್ದೇನೆ. ಬಾಯಿಪಾಠ ಮಾಡಿಕೊಂಡಿದ್ದೇನೆ; ಹೇಳುತ್ತೇನೆ.

ಶ್ರೀ ಸ್ವಾಮಿಗಳು — ಹಾಗಾದರೆ ಹೇಳು, ನೋಡೋಣ.

ವಟು ನಳ ಚರಿತ್ರೆಯ ಕೆಲವು ಪದ್ಯಗಳನ್ನು (ಕನ್ನಡದಲ್ಲಿ) ಹೇಳಿದರು.

ಸ್ವಾಮಿಗಳು — ಇದಕ್ಕೆ ಅರ್ಥ ಹೇಳುತ್ತೀಯೋ?

ವಟು — ಹೇಳೆಂದರೆ ಹೇಳುತ್ತೇನೆ.

(ಇಲ್ಲಿಯೇ ಗುರುವಿನ ಕೃಪೆಯನ್ನು ಶಿಷ್ಯ ಬೇಡುವುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಒಡನೆಯೇ ಶ್ರೀ ಸ್ವಾಮಿಗಳು ತಮ್ಮ ಕೈಯನ್ನು ವಟು ಶ್ರೀನಿವಾಸ ಶಾಸ್ತ್ರಿಯ ತಲೆಯಮೇಲಿಟ್ಟು, ''ಹೇಳು'' ಎಂದರು. (ಇಲ್ಲಿ, ಶಿಷ್ಯನಿಗೆ ಗುರುವಿನ ಸ್ಪರ್ಶದೀಕ್ಷೆ ದೊರೆಯಿತು). ವಟು ಶ್ರೀನಿವಾಸಶಾಸ್ತ್ರಿ ಬಹಳ ಗಂಭೀರವಾಗಿಯೂ, ಸ್ಪಷ್ಟವಾಗಿಯೂ ಪದ್ಯಕ್ಕೆ ಅರ್ಥ ಹೇಳಿದರು. ಎಲ್ಲರೂ ಆಶ್ಚರ್ಯಪಟ್ಟರು. ಶ್ರೀ ರಾಮಶಾಸ್ತ್ರಿಗಳಿಗೆ, "ನನ್ನ ಮಗನೇ, ಇಷ್ಟು ಮಟ್ಟಿಗೆ ಅರ್ಥ ಹೇಳುವವನು?" ಎಂದು ದಿಗ್ಭ್ರಮೆಯಾಯಿತು. ಎದ್ದು ನಿಂತರು. ಒಡನೆಯೇ ಶ್ರೀನಿವಾಸಶಾಸ್ತ್ರಿ ತಮ್ಮ ತಾಯಿ ತಂದೆಯರಿಗೆ, "ನೀವು ಊರಿಗೆ ಹೋಗಬಹುದು. ನಾನು ಇಲ್ಲಿಯೇ ಸಂಸ್ಕೃತ ಓದಬೇಕೆಂದಿದ್ದೇನೆ" ಎಂದರು. ಶ್ರೀ ಸ್ವಾಮಿಗಳ ಆಜ್ಞೆಯ ಪ್ರಕಾರ ಶ್ರೀನಿವಾಸಶಾಸ್ತ್ರಿಯನ್ನು ಶೃಂಗೇರಿಯ ಮಠದಲ್ಲಿರುವ ಪಾಠಶಾಲೆಯಲ್ಲಿ ಸೇರಿಸಿ ಮಠದಲ್ಲಿ ಇರುವಂತೆ ಏರ್ಪಾಡು ಮಾಡಿ, ಶ್ರೀ ರಾಮಶಾಸ್ತ್ರಿಗಳು ಉಳಿದ ಕುಟುಂಬದವರೊಡನೆ ಬೆಂಗಳೂರಿಗೆ ಹೊರಟುಹೋದರು.

ಅದು ಮೊದಲು ಉಪನಯನವಾದ ಶ್ರೀನಿವಾಸನ ವಿದ್ಯಾಭ್ಯಾಸಕ್ಕೆ ಶ್ರೀ ಮಠದಲ್ಲಿ ವಿಶೇಷ ಏರ್ಪಾಡು ಮಾಡಲಾಯಿತು. ಒಂದು ವರ್ಷಕಾಲ ಕಾವ್ಯ, ನಾಟಕ ಇವುಗಳಲ್ಲಿ ಪಾಠ ಹೇಳಲಾಯಿತು. ಈ ಕಿರಿಯನಿಗೋಸ್ಕರ ಶ್ರೀ ಮಹಾಸನ್ನಿಧಾನವು ಗಮನಪೂರ್ವಕವಾದ ಕಟಾಕ್ಷ ಬೀರುತ್ತಿದ್ದರು. ಈ ಹುಡುಗನ ಅರಿವು, ನೇರ ನಡವಳಿಕೆ, ಶ್ರದ್ಧೆ, ವಿನಯ ಮೊದಲಾದ ಉತ್ತಮ ಗುಣಗಳು ಮಹಾ ಸನ್ನಿಧಾನದ ಮನಸ್ಸನ್ನು ಆಕರ್ಷಿಸಿಕೊಂಡವು. ತಮ್ಮ ಅನಂತರದಲ್ಲಿ ಶೃಂಗೇರೀ ಪೀಠಕ್ಕೆ ಇವರೇ ಯೋಗ್ಯತೆಯುಳ್ಳವರು ಎಂದು ಶ್ರೀ ಸ್ವಾಮಿಗಳು ಮನಸ್ಸಿನಲ್ಲಿ ತೀರ್ಮಾನಿಸಿಕೊಂಡರು.

ಶೃಂಗೇರೀ ಪೀಠದಲ್ಲಿ ೩೫ನೆಯ ಪೀಠಾಧಿಪತಿಯಾಗಿ ರೂಪುಗೊಂಡ ಶ್ರೀ ಸದ್ಗುರು, ಬಾಲಕ ಶ್ರೀನಿವಾಸನಾಗಿದ್ದಾಗ ನಡೆದ ಸಂಗತಿಗಳನ್ನು ಮುಂದಿನ ಭಾಗದಲ್ಲಿ ಕಾಣುತ್ತೇವೆ. ಈ ಮೊದಲು ಹೇಳಿದ ಹಾಗೆ ಮುಕ್ತಸ್ಥಿತಿಯ ಆಧಾರ ಲಕ್ಷಣಗಳು ಅಲ್ಲಿಯೂ ಒಡಗೊಂಡಿದ್ದವೆಂಬುದು ಚೆನ್ನಾಗಿ ಸ್ಪಷ್ಟವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೈವು ಸೀತಾರಾಮಶಾಸ್ತ್ರಿ (ಮೊದಲ ಜಡ್ಜ)

- ನಂಜುಂಡಶಾಸ್ತ್ರಿ
  - ಸುಬ್ಬರಾಯಶಾಸ್ತ್ರಿ
    - ನಂಜುಂಡಯ್ಯ
    - ಸೀತಮ್ಮ
    - ಲಕ್ಷ್ಮೀನಾರಾಯಣ
    - ರಾಮಶಾಸ್ತ್ರಿ – ವೆಂಕಟಲಕ್ಷ್ಮಮ್ಮ
      - ಸೀತಾಲಕ್ಷ್ಮಮ್ಮ
      - ಸುಂದರಮ್ಮ
      - ಶ್ರೀನಿವಾಸಶಾಸ್ತ್ರಿ (ಶೃಂಗೇರೀ ಸ್ವಾಮಿಗಳು)
      - ರಾಮನಾಥಶಾಸ್ತ್ರಿ
      - ಸುಬ್ರಹ್ಮಣ್ಯಶಾಸ್ತ್ರಿ
      - ಶಾರದಮ್ಮ
    - ಜಾನಕಮ್ಮ
  - ಅನ್ನಪೂರ್ಣಮ್ಮ
- ಶ್ರೀನಿವಾಸಶಾಸ್ತ್ರಿ (ಜಡ್ಜ)
- ವೀರರಾಘವಶಾಸ್ತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೪

ಶ್ರೀಮತ್ ಅಭಿನವ ವಿದ್ಯಾತೀರ್ಥ ಸ್ವಾಮಿಗಳು

(ಶ್ರೀ ಶೃಂಗೇರೀ ಮಠದ ೩೫ನೆಯ ಪೀಠಾಧಿಪತಿಗಳು)

ಇವರ ಪೂರ್ವಿಕರು

೧೯ನೆಯ ಶತಮಾನದ ಮಧ್ಯಕಾಲದಲ್ಲಿ ಮೈಸೂರು ಪ್ರದೇಶಕ್ಕೆ ಸೇರಿದ ಬೆಂಗಳೂರಿನಲ್ಲಿ 'ಅದಾಲತ್ ಕೋರ್ಟಿನಲ್ಲಿ' ಶ್ರೀ ಕೈಪು ಸೀತಾರಾಮ ಶಾಸ್ತ್ರಿಗಳು ' ಹುಜೂರ್ ಅದಾಲತ್ ' ಎಂದು ಕರೆಯುತ್ತಿದ್ದ ಮೊದಲ ಜಡ್ಜಿಯಾಗಿದ್ದರು. ಇವರೇ ನಮ್ಮ ಸದ್ಗುರುವಿನ ವಂಶದ ಮೂಲಪುರುಷರು. ಇವರು ಕೌಂಡಿನ್ಯ ಗೋತ್ರಕ್ಕೆ ಸೇರಿದವರು, ತೆಲುಗರು. ಮುಲಕನಾಡು ಪಂಗಡಕ್ಕೆ ಸೇರಿದವರು. ಇವರ ವಂಶಪರಂಪರೆಯನ್ನು ಹಿಂದೆ ಕೊಟ್ಟಿದೆ.

ಇವರ ಪೂರ್ವಿಕರು ಆಂಧ್ರದೇಶದಲ್ಲಿ ನಂದ್ಯಾಲದ ಪಕ್ಕದಲ್ಲಿರುವ 'ಕೈಪು' ಎಂಬ ಊರಿಗೆ ಸೇರಿದವರು. ಅಲ್ಲಿ ಜೀವನ ಸೌಕರ್ಯಕ್ಕೆ ಕೊರತೆಯುಂಟಾದ್ದರಿಂದ ಅಲ್ಲಿಂದ ಕೆಲವು ಕುಟುಂಬಗಳು ಹೊರಹೊರಟು ದಕ್ಷಿಣಕ್ಕೆ ಬಂದು ಮೈಸೂರು ಪ್ರದೇಶದಲ್ಲಿ ನೆಲಸಿದವು. ಹಾಗೆ ಬಂದು ನೆಲಸಿದ ಕುಟುಂಬಗಳಲ್ಲಿ ಕೈಪು ಸೀತಾರಾಮಶಾಸ್ತ್ರಿಗಳ ಕುಟುಂಬವೂ ಒಂದು. ಈ ಕುಟುಂಬದವರು ಪರಂಪರೆಯಾಗಿ ರಾಜಾಡಳಿತದಲ್ಲಿ ದೊಡ್ಡ ಪದವಿಯಲ್ಲಿದ್ದವರು. ಅದರ ಜೊತೆಗೆ ಈ ವಂಶದವರಿಗೆ ಶಾಸ್ತ್ರಜ್ಞಾನ, ಲೌಕಿಕ ವಿದ್ಯಾಭ್ಯಾಸ ಎಲ್ಲಾ ಸಮೃದ್ಧಿಯಾಗಿ ತುಂಬಿತ್ತು. ಇವರು ಆಂಧ್ರ ದೇಶದಿಂದ ಕನ್ನಡ ದೇಶಕ್ಕೆ ಬಂದು ಮನೆಯಲ್ಲಿ ತೆಲುಗು ಭಾಷೆಯಲ್ಲಿ ಮಾತನಾಡುತ್ತಿದ್ದರೂ, ಪ್ರಾಂತ ಭಾಷೆಯಾದ ಕನ್ನಡವೂ ಇವರಿಗೆ ಸಹಜವಾಗಿ ಆಡುವ ಭಾಷೆಯೇ ಆಗಿಬಿಟ್ಟಿತು. ಆದರೆ ಮನೆಯಲ್ಲಿನ ಸಂಪ್ರದಾಯವೆಲ್ಲಾ ಆಂಧ್ರ ಕ್ರಮದಲ್ಲಿಯೇ. ' ಕೈಪು ' ಎಂಬ ಊರಿನಿಂದ ಬಂದದ್ದರಿಂದ ಈ ವಂಶದವರಿಗೆ ' ಕೈಪು ' ಎಂಬ ಹೆಸರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೀತಾರಾಮಶಾಸ್ತ್ರಿಗಳ ಅನಂತರ ಅವರ ಕುಮಾರ ಶ್ರೀನಿವಾಸಶಾಸ್ತ್ರಿಗಳ ಆ ಕೋರ್ಟಿನ ಜಡ್ಜಿಯಾದರು. ಅದಕ್ಕೆ ಮುಂಚೆ ಅವರು ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣ ತಾಲ್ಲೂಕಿನ ತಹಸಿಲ್ದಾರರಾಗಿದ್ದರು.

ಸುಬ್ಬರಾಯಶಾಸ್ತ್ರಿಯ ನಾಲ್ಕನೆಯ ಮಗನಾದ ಕೈಪು ರಾಮಶಾಸ್ತ್ರಿಗಳ ಬೆಂಗಳೂರಿನ ಒಂದು ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದರು. ಇವ ಒಳ್ಳೆಯ ಕೆಂಪು ಬಣ್ಣವೂ, ನಡುತರವಾದ ಎತ್ತರವೂ ಉಳ್ಳವರು. ಬಹ ಕಟ್ಟುನಿಟ್ಟಾದ ಉಪಾಧ್ಯಾಯರಾಗಿ ಬೆಳಗಿದರು. ಇವರು ಯಾವಾಗಲೂ ಉತ್ತಮವಾದ ಉಡುಪನ್ನೇ ಧರಿಸುತ್ತಿದ್ದರು. ಎಷ್ಟೊಂದು ಕಷ್ಟ ಬಂದರೂ ಸಂತೋಷವಾಗಿರುವ ಮನಸ್ಥಿತಿಯುಳ್ಳವರು. ಮನೆಯಲ್ಲಿ ಕೆಲವು ಪ್ರಾಣಿಗಳನ್ನು ಸಾಕಿ ಅವುಗಳ ಮೇಲೆ ಪ್ರೀತಿ ತೋರುವವರು. ಹಸುಗಳಲ್ಲಿ ವಿಶೇಷ ಪ್ರೀತಿಯುಳ್ಳ ವರು. ಒಮ್ಮೆ ಎರಡು ಹುಲಿ ಮರಿಗಳನ್ನು ಮನೆಯಲ್ಲಿಟ್ಟುಕೊಂಡು ಸಾಕು ತ್ತಿದ್ದರು. ಅಕ್ಕಪಕ್ಕದವರ ನಿರ್ಬಂಧದಿಂದ ಅವುಗಳನ್ನು ಮೈಸೂರಿನ ಮೃಗಾ ಲಯಕ್ಕೆ ಕಳುಹಿಸಬೇಕಾಯಿತು. ಇವರು ಮಂತ್ರಶಾಸ್ತ್ರದಲ್ಲಿಯೂ ಪ್ರೌಢಿಮೆ ಪಡೆದಿದ್ದರು. ಚೇಳು ಕಡಿತ, ಕಾಮಾಲೆ, ಹೊಟ್ಟೆಕಟ್ಟು – ಈ ರೀತಿಯಾ ಬೇನೆಗಳನ್ನು ಮಂತ್ರದಿಂದಲೇ ಪರಿಹಾರ ಮಾಡುತ್ತಿದ್ದರು. ಮೃಗಗಳ ವ್ಯಾಧಿ ಗಳನ್ನೂ ಈ ರೀತಿಯಲ್ಲೇ ವಾಸಿಮಾಡುತ್ತಿದ್ದರು. ಇವರ ನಗುಮುಖ ಸರಸವಾದ ಮಾತು, ಎಲ್ಲರನ್ನೂ ಆಕರ್ಷಿಸುತ್ತಿದ್ದವು.

ಬೆಂಗಳೂರು ಜಿಲ್ಲೆಯಲ್ಲಿ ಕಾನಕಾನಹಳ್ಳಿ(ಈಗ ಕನಕಪುರ)ಎಂಬ ಊರಿನಲ್ಲಿ ವಿಶ್ರಾಂತಿ ಹೊಂದಿದ ರೆವೆನ್ಯೂ ಇಲಾಖೆಯ ಮುನ್ಷಿ ಶ್ರೀಧರಮ್ ರಾಮಯ್ಯ ಎಂಬವರೊಬ್ಬರಿದ್ದರು. ಇವರ ಪತ್ನಿ 'ಕೊಳತ್ತೂರ್' ವಂಶಕ್ಕೆ ಸೇರಿದ ಶ್ರೀಮ ಸುಬ್ಬಮ್ಮ. ಶ್ರೀ ರಾಮಯ್ಯನವರು ಹರಿತಸ ಗೋತ್ರದವರು. ಇವರು ಬಾಲ್ಯದಲ್ಲಿ ಕೈಪು ರಾಮಾಶಾಸ್ತ್ರಿಗಳ ತಂದೆಯವರ ಬಳಿ ಪಾಠ ಕಲಿತವರು. ಆದ್ದರಿಂದ ಇದಕ್ಕೆ ಕೃತಜ್ಞತೆ ಸೂಚಿಸುವುದಕ್ಕಾಗಿಯೋ ಎಂಬಂತೆ, ತಮ್ಮ ಕುಮಾರಿಯಾದ ಶ್ರೀಮತಿ ವೆಂಕಟಲಕ್ಷಮ್ಮನವರನ್ನು ಕೈಪು ರಾಮಶಾಸ್ತ್ರಿಗಳಿಗೆ ಕೊಟ್ಟು ವಿವಾಹ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಯ್ಯ

ಸೀತಮ್ಮ ಶ್ರೀನಿವಾಸಯ್ಯ ವೆಂಕಟಲಕ್ಷ್ಮಮ್ಮ ಸಾವಿತ್ರಮ್ಮ ಸೂರ್ಯನಾರಾಯಣ ರಾವ್

(ಪತಿ) ಕೈಪು ರಾಮಶಾಸ್ತ್ರಿ

ಶ್ರೀನಿವಾಸಶಾಸ್ತ್ರಿ
(ಸ್ವಾಮಿಗಳು)

ಶ್ರೀಮತಿ ವೆಂತಟಲಕ್ಷ್ಮಮ್ಮ ಬಹಳ ಪತಿಭಕ್ತಿಯುಳ್ಳವರು. ತನಗೆ ಬೇಕೆಂದು ಏನೊಂದನ್ನೂ ತೆಗೆದುಕೊಳ್ಳದೆ ತನ್ನ ಗಂಡನಿಗೂ ಮಕ್ಕಳಿಗೂ ಅವಶ್ಯವಾದವನ್ನು ಕೊಡುವುದರಲ್ಲಿ ಈಕೆಗೆ ಹೆಚ್ಚು ತೃಪ್ತಿ. ತನ್ನ ಪತಿಯ ಸ್ನೇಹಿತರು ಮನೆಗೆ ಬಂದರೆ, ತನ್ನ ಶ್ರಮವನ್ನೂ ಗಮನಿಸದೆ ಅವರುಗಳನ್ನು ತಕ್ಕಂತೆ ಉಪಚರಿಸುತ್ತಿದ್ದರು.

ಶ್ರೀನಿವಾಸಶಾಸ್ತ್ರಿಯನ್ನು ಮೂರು ತಿಂಗಳು ಗರ್ಭದಲ್ಲಿ ಧರಿಸಿಕೊಂಡಿದ್ದಾಗ ಕೆಲವು ತಿಂಗಳ ಕಾಲ ಶ್ರೀಮತಿ ವೆಂಕಟಲಕ್ಷ್ಮಮ್ಮ ಹೊಸಕೋಟೆಯೆಂಬ ಊರಿನಲ್ಲಿ ತಮ್ಮ ತಂಗಿಯ ಮನೆಯಲ್ಲಿ ಇದ್ದರು. ಈ ಕಾಲದಲ್ಲಿ ಪ್ರತಿದಿನವೂ ಪೆನ್ನಾರ್ ನದಿಯಲ್ಲಿ ಸ್ನಾನ ಮಾಡಿ, ತೀರದಲ್ಲಿದ್ದ ಅರಳಿಮರವನ್ನು ಒದ್ದೆಬಟ್ಟೆಯಲ್ಲಿಯೇ ಹಲವಾರು ಸಲ ಪ್ರದಕ್ಷಿಣೆ ಮಾಡುತ್ತಿದ್ದರು. ಮುಂದೆ ಜನ್ಮತಾಳಿದ ಪುತ್ರರತ್ನದ ಮೇಲ್ಮೆಗೆ ಇದು ಅಸ್ತಿಭಾರವಾಯಿತೆಂದು ತೋರುತ್ತದೆ. ಶ್ರೀಮತಿ ವೆಂಕಟಲಕ್ಷ್ಮಮ್ಮನವರು ತಮ್ಮ ಆಯುಷ್ಕಾಲವನ್ನೆಲ್ಲಾ ಗಂಡನಿಗೂ ಮಕ್ಕಳಿಗೂ ಮಾತ್ರವೇ ದುಡಿಯುತ್ತಿದ್ದರೇ ಹೊರತು ತನಗೆ ಸುಖ ಬೇಕೆಂದು ಬಯಸಲೇ ಇಲ್ಲ. ಶ್ರೀ ಕೈಪು ರಾಮಶಾಸ್ತ್ರಿಗಳಿಗೂ ಶ್ರೀಮತಿ ವೆಂಕಟಲಕ್ಷ್ಮಮ್ಮನವರಿಗೂ ಹುಟ್ಟಿದ ಹಿರಿಯ ಮಗನಿಗೆ (ಮುಂದೆ ಸ್ವಾಮಿಗಳಾದವರು) ಶ್ರೀನಿವಾಸನೆಂದು ಹಿರಿಯರು ಹೆಸರಿಟ್ಟರು. ಇವರ ಜನನ ೧೯೧೭ನೆಯ ವರ್ಷ ನವೆಂಬರ್ ತಿಂಗಳ ೧೩ನೆಯ ತಾರೀಖು, ಮಂಗಳವಾರ, ದೀಪಾವಳಿ, ನರಕಚತುರ್ದಶಿ ದಿನ (ಪಿಂಗಳ ಸಂವತ್ಸರ ಆಶ್ವೀಜ ಬಹುಳ ಚತುರ್ದಶೀ). ಬೆಂಗಳೂರು ಬಸವನಗುಡಿಯಲ್ಲಿ ಕೈಪು ರಾಮಶಾಸ್ತ್ರಿಗಳ ಸಹೋದರಿಯ ಮನೆಯಲ್ಲಿ ಈ ಶುಭ ಜನನವಾಯಿತು. ಜನ್ಮ ನಕ್ಷತ್ರ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸ್ವಾತಿ. ಹುಟ್ಟಿದ ಹೊತ್ತನ್ನು ಪರಿಶೀಲಿಸಿದ ಜೋಯಿಸರು, "ಗ್ರಹಗಳ ಸೇರುವಿಕೆಯಿಂದ, 'ಧರ್ಮ ಕರ್ಮಾಧಿಪ ಯೋಗ', 'ಸಂನ್ಯಾಸ ಯೋಗ', 'ಗುರು ಶುಕ್ರ ಪರಿವರ್ತನ ಯೋಗ', 'ದಶಮ ಅಂಗಾರಕ ಯೋಗ', 'ಕೋದಂಡ ರಾಹು ಯೋಗ' ಮೊದಲಾದ ವಿಶೇಷಗಳಿಂದ ಕೂಡಿದ ಜಾತಕ ಇದು" ಎಂದರು. ಜಾತಕದಲ್ಲಿ ಹಲವು ಭಾವಗಳನ್ನು ನೋಡಿ, "ಇವರು ಎಲ್ಲಾ ಶಾಸ್ತ್ರಗಳಲ್ಲಿಯೂ ಬಹು ಮೇಲಾದ ತಿಳಿವಳಿಕೆಯನ್ನೂ, ವೇದಾಂತ, ತರ್ಕ, ಜ್ಯೋತಿಷ ಶಾಸ್ತ್ರಗಳಲ್ಲಿ ವಿಶೇಷ ಜ್ಞಾನವನ್ನೂ, ನಾಲ್ಕು ಸಮುದ್ರಗಳವರೆಗೂ ವ್ಯಾಪಿಸುವ ಕೀರ್ತಿಯನ್ನೂ ಪಡೆಯುವರು" ಎಂದು ಜ್ಯೋತಿಷಿಗಳು ಹೇಳಿದರು.

ಈ ಮಗು ಹುಟ್ಟಿದ್ದರಿಂದಲೇ ಆ ಕುಟುಂಬದಲ್ಲಿ ಒಳ್ಳೆಯ ಶುಭ ಸೂಚನೆಗಳು ಕಾಣಬಂದವು. ಮಗು ಹುಟ್ಟಿದ ದಿನ ಶ್ರೀ ರಾಮಶಾಸ್ತ್ರಿಗಳು ಹೊಟ್ಟೆ ಶೂಲೆಯ ವ್ಯಾಧಿಯಿಂದ ಆಸ್ಪತ್ರೆ ಸೇರಿ ಶಸ್ತ್ರಚಿಕಿತ್ಸೆಗಾಗಿ ಕಾಯುತ್ತಿದ್ದರು. ಅವರಿಗೆ ಶುಶ್ರೂಷೆ ಮಾಡಲಾಗದ ಸ್ಥಿತಿಗಾಗಿ ಅವರ ಪತ್ನಿ ನೊಂದುಕೊಂಡರು. ಮಗು ಹುಟ್ಟಿದ ಒಂದು ತಿಂಗಳೊಳಗೆ ಶ್ರೀ ರಾಮಶಾಸ್ತ್ರಿಗಳು ಚಿಕಿತ್ಸೆ ಹೊಂದಿ ಮನೆಗೆ ಬಂದಿದ್ದರು. ಇದು ಮಗುವಿನ ಮಹಿಮೆಯೆಂದು ಎಲ್ಲರೂ ಸಂತೋಷಪಟ್ಟರು. ಶ್ರೀ ಶಾಸ್ತ್ರಿಗಳು ಮನೆಗೆ ಬಂದಮೇಲೆ ಮಗು, ಬಾಣಂತಿಯರನ್ನು ಆರಳೆಪೇಟೆಯಲ್ಲಿದ್ದ ತಮ್ಮ ಸ್ವಂತ ಮನೆಗೆ ಕರೆದುಕೊಂಡು ಬಂದು, ಹಲವರು ಬಂಧುಗಳಿಂದ ಕೂಡಿ ವಿಶೇಷ ವೈಭವದಿಂದ ಮಗುವಿಗೆ ನಾಮಕರಣ ಮಾಡಿದರು.

ಬಾಲ್ಯ ಕಾಲ

ಶ್ರೀನಿವಾಸನದು ಆಗ ಕಪ್ಪು ಬಣ್ಣ; ನಡುತರವಾದ ಎತ್ತರ. ಶೈಶವಾವಸ್ಥೆಯಿಂದಲೂ ತುಂಬ ಚಟುವಟಿಕೆ, ಬಹಳ ಸೂಕ್ಷ್ಮ ಬುದ್ಧಿ. ಸಾಮಾನ್ಯ ಜ್ಞಾನ ವಿಷಯದಲ್ಲಿಯೂ, ಸನಾತನ ಧರ್ಮದಲ್ಲಿಯೂ ಶ್ರದ್ಧೆಯುಳ್ಳವರಾಗಿ ಇದ್ದರು. ಇತರ ಮಕ್ಕಳೊಡನೆ ಆಟವಾಡುವಾಗಲೂ, ಭಜನೆ ಮಾಡುವಾಗಲೂ ಧಾರ್ಮಿಕ ಮಾತುಕತೆಗಳಲ್ಲಿಯೂ ಉಳಿದವರಿಗಿಂತಲೂ ಸೂಕ್ಷ್ಮವಾದ ತಿಳಿವಳಿಕೆಯೂ, ಉಳಿದವರ ಮೇಲೆ ನಾಯಕತ್ವ ವಹಿಸಿಕೊಂಡು ಮುಂದಾಳಾಗಿ ವರ್ತಿಸುವ ಸಾಮರ್ಥ್ಯವೂ ಇವರಲ್ಲಿ ಕಾಣಬರುತ್ತಿದ್ದವು. ತಮ್ಮ ಸಹೋದರ ಸಹೋದರಿಯರಲ್ಲಿ ಪ್ರೀತಿಯುಳ್ಳವರು; ಮನೆಯ ಕೆಲಸಗಳಲ್ಲಿ ಸದಾ ತೊಡಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರುವ ತಮ್ಮ ತಾಯಿಗೆ ಸ್ವಲ್ಪವಾದರೂ ಬಿಡುವು ಕೊಡಬೇಕೆಂದು ಯೋಚಿಸಿ, ಚಿಕ್ಕ ಮಕ್ಕಳನ್ನು ತಾವೇ ನೋಡಿಕೊಳ್ಳುತ್ತಿದ್ದದ್ದೂ ಉಂಟು. ಪಕ್ಕದ ಮನೆಯವರು ಇವರನ್ನು ಗೇಲಿ ಮಾಡಿದರೂ ಅವರಿಗೆ, "ನಮ್ಮ ತಾಯಿಗೆ ಕೆಲಸ ಹೆಚ್ಚು. ಅಕ್ಕ ಅಡಿಗೆ ಮನೆಯಲ್ಲಿ ನೆರವಾಗುತ್ತಾಳೆ. ನನ್ನ ಬಿಟ್ಟರೆ ಯಾರಿದ್ದಾರೆ ಈ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ? ನನ್ನ ತಮ್ಮನಲ್ಲವೇ, ಈ ಮಗು?" ಎನ್ನುವರು. ಪರರಿಗೆ ಸಹಾಯ ಮಾಡುವ ಗುಣ ಸ್ವಭಾವವಾಗಿಯೇ ಇವರಿಗೆ ಬಾಲ್ಯದಲ್ಲಿಯೇ ಉಂಟಾಯಿತು.

ಶ್ರೀನಿವಾಸನು ಆರಂಭದಲ್ಲಿ ಪೂರ್ಣಯ್ಯನವರ ಛತ್ರದಲ್ಲಿರುವ ಮುನಿಸಿಪಲ್ ಪ್ರೈಮರಿ ಹುಡುಗರ ಪಾಠಶಾಲೆಯಲ್ಲಿ ಓದಿದನು. ಆಮೇಲೆ ಬಳೇಪೇಟೆಯಲ್ಲಿ ಹೊಸದಾಗಿ ಪ್ರಾರಂಭವಾದ ಆರ್ಯ ವಿದ್ಯಾಶಾಲೆಗೆ ಸೇರಿದನು. ಅಲ್ಲಿ ಆನೆಯ ತರಗತಿಯವರೆಗೂ ಓದಿದನು. ಪಾಠಶಾಲೆಯ ಓದಿಗಿಂತಲೂ ಮನೆಯಲ್ಲಿ ಹೇಳಿಕೊಟ್ಟ ಪಾಠವೇ ಇವರಿಗೆ ಹೆಚ್ಚು ಪ್ರಯೋಜನವಾಯಿತು.

ಒಂದು ದಿನ ರಾಮಶಾಸ್ತ್ರಿಗಳು ಶ್ರೀನಿವಾಸನನ್ನು ದಂಡಿಸುತ್ತಾ ಸರಿಯಾಗಿ ಓದಲಿಲ್ಲವೆಂಬ ದೋಷಕ್ಕಾಗಿ ಬೆತ್ತದಿಂದ ನಾಲ್ಕಾರುಸಲ ಕೈಗೆ ಹೊಡೆದರು. ಏಟು ತಪ್ಪಿಸಿಕೊಳ್ಳದೆ ಶ್ರೀನಿವಾಸನು ಒಂದಾದಮೇಲೆ ಮತ್ತೊಂದರಂತೆ ಎರಡು ಕೈಗಳನ್ನೂ ನೀಡಿದನು. ಆಗ ರಾಮಶಾಸ್ತ್ರಿಗಳ ಮನೆಯಲ್ಲಿ ತಂಗಿದ್ದ ಮಲೆಯಾಳ ಜೋಯಿಸ ವೆಂಕಟರಾಮ ಅಯ್ಯರ್ ಎಂಬುವರು ಈ ಚಿಕ್ಕ ಹುಡುಗನ ಸಹಿಷ್ಣುತೆಯನ್ನು ಕಂಡು ಆಶ್ಚರ್ಯ ಹೊಂದಿ, ಹೊಡೆಯುತ್ತಿದ್ದ ಶಿಂಡೆಯನ್ನು ತಡೆದು, ಹುಡುಗನ ಕೈ ಗಾಯವಾಯಿತೇನೋ ಎಂದುಕೊಂಡು ಅವನ ಎರಡು ಕೈಗಳನ್ನೂ ಗಮನಿಸಿ ನೋಡಿದರು. ಒಡನೆಯೇ ರಾಮಶಾಸ್ತ್ರಿಗಳನ್ನು ಕುರಿತು "ಶಾಸ್ತ್ರಿಗಳೇ! ನೀವು ಮಹಾ ಭಾಗ್ಯಶಾಲಿಗಳು. ನಿಮ್ಮ ಪುತ್ರ ಪುಣ್ಯಪುರುಷ. ಇವನನ್ನು ನಿಮ್ಮ ಉಳಿದ ಮಕ್ಕಳ ಹಾಗೆಂದು ಭಾವಿಸಬಾರದು. ಇವನು ಮಹಾ ವಿರಕ್ತನೂ ಯೋಗಿಯೂ ಆಗುತ್ತಾನೆ. ಶೃಂಗೇರೀ ಪೀಠಾಧಿಪತಿಗಳೇ ಇವನನ್ನು ಶಿಷ್ಯನನ್ನಾಗಿ ಆಯ್ದುಕೊಂಡರೂ ಆಶ್ಚರ್ಯವಿಲ್ಲ. ಹೇಗಾದರೂ ಆಗಲಿ. ಇವನನ್ನು ನೀವು ಇನ್ನುಮೇಲೆ ಹೊಡೆಯಕೂಡದು. ಇವನು ಅದಷ್ಟು ಬೇಗ ಸಂನ್ಯಾಸಿಯಾದರೂ ಆಗಬಹುದು. ನೀವು ಇವನನ್ನು ನಮಸ್ಕರಿಸುವಂತಾಗುವುದು. ಆದ್ದರಿಂದ ಹೊಡೆಯಬೇಡಿ" ಎಂದರು. ರಾಮಶಾಸ್ತ್ರಿಗಳು ಆಶ್ಚರ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟರು. ಪಕ್ಕದ ಬೀದಿಯಲ್ಲಿದ್ದ ತಮ್ಮ ಬಂಧುವಾದ ಸತ್ಯನಾರಾಯಣ ಜೋಯಿಸರಿಗೆ ಶ್ರೀನಿವಾಸನ ಜಾತಕವನ್ನು ತೋರಿಸಿ ವಿವರಗಳನ್ನು ಕೇಳಿದರು. ಮಲೆಯಾಳ ಜೋಯಿಸರು ಹೇಳಿದ್ದನ್ನು ಸತ್ಯನಾರಾಯಣ ಜೋಯಿಸರು ಅನುಮೋದಿಸಿದ್ದು ಮಾತ್ರವೇ ಅಲ್ಲ, "ಈ ಮಗು ಸಂನ್ಯಾಸಿಯಾಗುವುದಕ್ಕೆ ತಂದೆ ಅನುಮತಿ ಕೊಟ್ಟರೆ ಆಮೇಲೆ ಒಬ್ಬರನ್ನೊಬ್ಬರು ಸಂಧಿಸುವುದಕ್ಕೆ ಅವಕಾಶ ಉಂಟು. ಇಲ್ಲವಾದರೆ, ಈ ಹುಡುಗ ತಪಸ್ಸು ಮಾಡುವುದಕ್ಕೆ ಕಾಡಿಗೆ ಹೋಗಿ ಬಿಡುತ್ತಾನೆ" ಎಂದೂ ಹೇಳಿದರು. ಆ ಮಾತುಗಳನ್ನು ಕೇಳಿದ ಶ್ರೀನಿವಾಸನು ಈ ವಿವರಗಳನ್ನು ತನ್ನ ಅತ್ತೆಯಾದ ಸೀತಮ್ಮನವರಿಗೆ ತಿಳಿಸಿದನು. ಅವರಿಗೆ ಇದರಲ್ಲಿ ನಂಬಿಕೆ ಬರಲಿಲ್ಲ. ಆದರೆ ಶ್ರೀನಿವಾಸನ ಮನಸ್ಸಿನಲ್ಲಿ ಇದು ಆಳವಾಗಿ ನಾಟಿಬಿಟ್ಟಿತು.

ರಾಮಶಾಸ್ತ್ರಿಗಳ ಮನೆಯ ಮುಂದಿನ ಬೀದಿಯಲ್ಲೋ ಅಥವಾ 'ಚಿಕ್ಕ ಲಾಲ್‌ಬಾಗ್' ಎಂಬ ಪುರಸಭಾ ಉದ್ಯಾನದಲ್ಲೋ ಮೂರು ಬೀದಿಗಳ ಮಕ್ಕಳೂ ಸೇರಿ ಸ್ವಲ್ಪ ಹೊತ್ತು ಆಟವಾಡುವುದು ವಾಡಿಕೆ. ಆಟ ಮುಗಿದಮೇಲೆ ಎಲ್ಲರೂ ಒಂದುಕಡೆ ಕೂತು ಮಾತುಕತೆಯಲ್ಲಿ ತೊಡಗುವುದು ವಾಡಿಕೆ. ಆಗ ಶ್ರೀನಿವಾಸನು ತನ್ನ ಮನಸ್ಸಿನಲ್ಲಿ ಆಳವಾಗಿ ನಾಟಿಹೋಗಿದ್ದ ಭಾವನೆಯನ್ನು, ಅಂದರೆ "ಸಂನ್ಯಾಸಿಯಾಗುತ್ತೇನೆ" ಎಂಬುದನ್ನು ಬಹಿರಂಗಪಡಿಸುತ್ತಿದ್ದನು. ಆದರೆ ಅದೊಂದು ಬರೀ ಬಾಯಿಮಾತು ಎಂದು ಉಳಿದ ಹುಡುಗರು ತಿಳಿದುಕೊಂಡಿದ್ದರು. ಒಂದುಸಲ ಇದೇ ಭಾವನೆಯನ್ನು ಮತ್ತೆ ವ್ಯಕ್ತಪಡಿಸಿ, ಜೋಯಿಸರುಗಳು ಹೇಳಿದ್ದ ವಿಷಯಗಳನ್ನೂ ತಿಳಿಯಪಡಿಸಿದಾಗ, ಅವರಲ್ಲಿ ಕೆಲವರು "ಸಂನ್ಯಾಸಿಯಾಗುವುದರಲ್ಲಿ ಏನು ಪ್ರಯೋಜನ! ಮಹಾರಾಜನಾದರೆ ಮೇಲ್ಮೆಯುಂಟು" ಎಂದರು. ಅದಕ್ಕೆ ಶ್ರೀನಿವಾಸನು, "ಹಾಗೆ ತಿಳಿಯಬೇಡಿ. ಮಹಾರಾಜನಾಗುವುದರಿಂದ ಶಾಶ್ವತವಾದ ಪ್ರಯೋಜನ ಏನಾದೀತು? ರಾಜ ಆ ಪದವಿಯಲ್ಲಿರುವವರೆಗೆ ಮಾತ್ರ ಸುಖವನ್ನು ಅನುಭವಿಸಬಹುದು. ಅದಕ್ಕೆ ಕೊನೆಯುಂಟು. ಆದರೆ ನಾನು ಸಂನ್ಯಾಸಿಯಾದರೆ ಕೊನೆಯಿಲ್ಲದ ಹಾಗೆ ಧ್ಯಾನ ಮಾಡುತ್ತಾ ಇರಬಹುದು. ಯಾವ ಚಿಂತೆಯೂ ಇರುವುದಿಲ್ಲ. ಈಶ್ವರನನ್ನು ಕಾಣುವವರೆಗೂ ತಡೆಯಿಲ್ಲದೆ ಧ್ಯಾನ ಮಾಡುವುದಕ್ಕೆ ತಕ್ಕ ಅವಕಾಶ ಸಿಕ್ಕುತ್ತದೆ. ಯಾವಾಗಲೂ ಎಂದೆಂದಿಗೂ ಸುರಕ್ಷಿತನಾಗಿ ಇರುತ್ತೇನೆ."

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದನು. ಅದು ಮೊದಲು ಪ್ರತಿದಿನವೂ ಹುಡುಗರ ಸಂಭಾಷಣೆಗೆ ಇದೇ ಮುಖ್ಯ ವಿಷಯವಾಗಿಬಿಟ್ಟಿತು. ಶ್ರೀನಿವಾಸನ ಮನಸ್ಸಿನಲ್ಲಿ "ಮನುಷ್ಯನಿಗೆ ಹೆಚ್ಚು ಆಸೆ ಇರಕೂಡದು." ಎಂಬ. "ತನ್ನದಲ್ಲದ್ದರಲ್ಲಿ ಬಯಕೆ ಇಟ್ಟುಕೊಳ್ಳುವುದು ತಪ್ಪು" ಎಂಬ ಅಭಿಪ್ರಾಯಗಳು ಪ್ರಬಲವಾಗಿ ನೆಲೆಗೊಂಡವು.

ಆಟಪಾಡುಪಡೆಗಳಲ್ಲಿ

ಮುನಿಸಿಪಲ್ ಪಾರ್ಕಿನಲ್ಲಿ ಮಕ್ಕಳು ಆಡುತ್ತಿದ್ದುದು ಗೋಲಿ, ಚಿಣ್ಣಿ ದಾಂಡು, ಬುಗುರಿ, ಗುಡುಗುಡು ಮೊದಲಾದ ಆಟಗಳನ್ನು. ಇವುಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುವುದು ವಾಡಿಕೆಯಾಗಿತ್ತು. ವಯಸ್ಸಿನಲ್ಲಿ ಕಿರಿಯುವನಾದರೂ ಶ್ರೀನಿವಾಸನು ಇವುಗಳಲ್ಲಿ ಯಾವಾಗಲೂ ಮೊದಲನೆಯವನೇ ಆಗುತ್ತಿದ್ದನು. ಒಂದೊಂದುಸಲ ಸೋತುಬಿಟ್ಟರೆ, ತಾನಾಗಿಯೇ ಸೋಲನ್ನು ಒಪ್ಪಿಕೊಳ್ಳುವನು. (ಬೇರೆಯವರು ಹೇಳಿದರೆ ಅವನ್ನು ಸಹಿಸಿಕೊಳ್ಳುತ್ತಿರಲಿಲ್ಲ.) ಆದರೆ, ಯಾರೇ ಆಗಲಿ ತಪ್ಪು ಆಟ, ಮೋಸದ ಆಟ ಆಡಿದರೆ ಇವುಗಳನ್ನು ಒಪ್ಪುತ್ತಲೇ ಇರಲಿಲ್ಲ. ಒಂದುಸಲ ಮೋಸದ ಆಟವನ್ನಾಡಿದ ಒಬ್ಬ ಹುಡುಗ, ತನಗಿಂತಲೂ ಹೆಚ್ಚು ವಯಸ್ಸಾದ ತಂಗವೇಲು ಎಂಬವನನ್ನು ಹಿಡಿದುಕೊಂಡು ಕೆನ್ನೆಗೆ ಹೊಡೆದು, 'ಇನ್ನು ಮೇಲೆ ಹಾಗೆ ಮಾಡುವುದಿಲ್ಲ' ಎಂದು ಅವನು ಒಪ್ಪಿಕೊಳ್ಳುವವರೆಗೂ ಬಿಡಲಿಲ್ಲ. ಶ್ರೀನಿವಾಸನು ಯಾವುದರಲ್ಲೇ ಆಗಲಿ ನೇರ ನಡವಳಿಕೆಯನ್ನು, ಪ್ರಾಮಾಣಿಕತೆಯನ್ನು ದೃಢವಾಗಿ ಅವಲಂಬಿಸುತ್ತಿದ್ದನು. ಯಾವ ವಿಚಾರವಾಗಿಯೇ ಆಗಲಿ, ಶರೀರ ಬಲದ ಧೈರ್ಯದಿಂದ ನ್ಯಾಯಕ್ಕೆ ವಿರೋಧವಾಗಿ ನಡೆಯುವುದನ್ನು ಶ್ರೀನಿವಾಸನು ಒಪ್ಪುತ್ತಿರಲಿಲ್ಲ. ಆ ಹುಡುಗರಲ್ಲಿ ಗುಂಡು ಎಂಬ ವಯಸ್ಸಾದ ಒಬ್ಬ ಪೋಕರಿ ಇದ್ದ. ಅವನ ಅಯೋಗ್ಯತನವನ್ನು ಸಹಿಸದೆ ಉಳಿದ ಹುಡುಗರು ಅವನನ್ನು ಆಟಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಒಂದು ದಿನ ಅವನು ಬೇಕೆಂದೇ ಹುಡುಗರ ಜೊತೆ ಆಟದಲ್ಲಿ ಸೇರಿಕೊಂಡು ರಗಳೆ ಮಾಡಿದನು. "ಇವನು ಬಲಶಾಲಿ, ಅಯೋಗ್ಯ" ಎಂದು ಉಳಿದವರು ಭಯಪಟ್ಟು ಸುಮ್ಮನೆ ಇದ್ದರು. ಅವನಿಗೆ ಬುದ್ಧಿ ಕಲಿಸಬೇಕೆಂದು ಶ್ರೀನಿವಾಸನು ಮನಸ್ಸುಮಾಡಿದನು. ಉಳಿದ ಗೆಳೆಯರು "ಇವನು ನಮಗಿಂತ ವಯಸ್ಸಾದವನು ಅಯೋಗ್ಯ; ಕುಸ್ತಿಯಲ್ಲಿ ಪಳಗಿದವನು" ಎಂದು ಹೇಳಿ ತಡೆದರು. ಶ್ರೀನಿವಾಸನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ಮಾತನ್ನು ಕೇಳಿ ಸುಮ್ಮನಾಗಲಿಲ್ಲ. ಗುಂಡುವಿನ ಹಿಂದುಗಡೆ ಒಂದು ಪೊದೆಯಲ್ಲಿ ಮರೆಯಾಗಿ ಅಡಗಿಕೊಂಡಿದ್ದು ದಿಢೀರೆಂದು ಅವನ ಮೇಲೆ ನುಗ್ಗಿ ಪಟಪಟನೆ ಐದಾರು ಗುದ್ದು ಹಾಕಿದನು. ಇದ್ದಕ್ಕಿದ್ದ ಹಾಗೆ ತಟಕ್ಕನೆ ಮೇಲೆ ಬಿದ್ದದ್ದರಿಂದ ಗುಂಡುವಿಗೆ ಏನುಮಾಡುವುದಕ್ಕೂ ತೋರಲಿಲ್ಲ. ಮತ್ತೊಂದು ಸಲ ಇಬ್ಬರೂ ಜಗಳವಾಡುವಂತಾಯಿತು. ಕೊನೆಗೆ ಎಲ್ಲರೂ ಆಶ್ಚರ್ಯಪಡುವ ಹಾಗಾಯಿತು. ಶ್ರೀನಿವಾಸನು ಗುಂಡುವನ್ನು ಕೆಳಕ್ಕೆ ಕೆಡವಿ, ಅವನ ಮೇಲೆ ಹತ್ತಿ ಕೂತುಕೊಂಡನು. ಒಡನೆಯೇ ಒಂದು ಕಾಗದವನ್ನು ತರಿಸಿ ಅದರಲ್ಲಿ, "ಇನ್ನು ಎಂದೆಂದೂ ಬೇರೆಯವರ ಆಟದಲ್ಲಿ ನಾನು ತಲೆ ಹಾಕುವುದಿಲ್ಲ" ಎಂದು ಬರೆದು ಅದಕ್ಕೆ ಗುಂಡು ರುಜುಹಾಕುವಂತೆ ಮಾಡಿದನು. "ಇಂಥವರನ್ನು ಅಡಗಿಸದೆ ಬಿಟ್ಟರೆ ಸಮಾಜಕ್ಕೇ ಇವರು ಕೇಡನ್ನುಂಟುಮಾಡುತ್ತಾರೆ" ಎಂದು ಶ್ರೀನಿವಾಸನು ಹೇಳುತ್ತಿದ್ದನು. ನ್ಯಾಯಪಕ್ಷಪಾತಿಗೆ ದೈವಬಲ ಉಂಟೆಂಬ ನಂಬಿಕೆ ಶ್ರೀನಿವಾಸನಿಗಿತ್ತು. ಹೇಡಿತನ ಅವನ ಬಳಿ ಸುಳಿಯದು.

ಒಂದೊಂದು ದಿನ ಆಟ ಮುಗಿದಮೇಲೆ ಮಕ್ಕಳೆಲ್ಲಾ ಒಂದುಕಡೆ ಸೇರಿ, ಚಾಪೆಯಮೇಲೆ ಕುಳಿತು ಒಬ್ಬೊಬ್ಬರು ಒಂದೊಂದು ಕಥೆ ಹೇಳುವುದುಂಟು. ಶ್ರೀನಿವಾಸನು ಹೇಳುವ ಕಥೆಗಳೆಲ್ಲ ಭಾಗವತ, ಮಹಾಭಾರತ, ಎಂ. ಎಸ್. ಪುಟ್ಟಣ್ಣನವರು ಬರೆದ ನೀತಿಚಿಂತಾಮಣಿ – ಇವುಗಳಿಗೆ ಸಂಬಂಧಿಸಿಯೇ ಇರುತ್ತಿದ್ದವು. ಇವನು ಹೇಳಿದ ಜಡಭರತ, ಪ್ರಹ್ಲಾದ, ಹರಿಶ್ಚಂದ್ರ ಮೊದಲಾದ ಕಥೆಗಳನ್ನು ಅವನ ಗೆಳೆಯರು ಬಹುಕಾಲ ಮರೆಯಲಿಲ್ಲ. (ಈಗಲೂ ತಮ್ಮ ಬಾಲ್ಯಸ್ನೇಹಿತರಲ್ಲಿ ಯಾರನ್ನಾದರೂ ಶ್ರೀ ಸ್ವಾಮಿಗಳು ಸಂಧಿಸಿದರೆ 'ಆ ಸಾಯಂಕಾಲದ ಕಥೆಗಳು ಜ್ಞಾಪಕವಿದೆಯೇ?' ಎಂದು ವಿನೋದವಾಗಿ ಕೇಳುವುದುಂಟು) ಕಥೆ ಹೇಳಿ ಮುಗಿದಕೂಡಲೆ ಅದರ ನೀತಿಯನ್ನು ಒಬ್ಬೊಬ್ಬರೂ ಹೇಳಬೇಕು - ಎಂಬುದು ರೂಢಿ. ಇಲ್ಲಿ ಶಾಸ್ತ್ರಪ್ರಜ್ಞೆ ಕಾಣಬರುತ್ತದೆ.

ಸಾಯಂಕಾಲದ ವೇಳೆಗಳಲ್ಲಿ ಹುಡುಗರು "ಪ್ರಶ್ನೆ–ಉತ್ತರ" ಎಂಬ ಒಂದು ಆಟವನ್ನು ಆಡುತ್ತಿದ್ದರು ಆ ಕಾಲಗಳಲ್ಲಿ "ನೀನು ದೊಡ್ಡವನಾದಮೇಲೆ ಏನು ಮಾಡಬೇಕೆಂದಿದ್ದೀಯೆ ?" ಎಂದು ಕೇಳಿಕೊಳ್ಳುತ್ತಿದ್ದರು. ಕೇಳಿದ ಪ್ರಶ್ನೆಗೆ ಒಬ್ಬೊಬ್ಬರೂ [illegible] ಉತ್ತರಗಳನ್ನು ಹೇಳುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀನಿವಾಸನು ಮಾತ್ರ "ನಾನು ದೇವರನ್ನು ಕಾಣಲು ಪ್ರಯತ್ನ ಮಾಡುತ್ತೇನೆ" ಎನ್ನುತ್ತಿದ್ದ.

ಒಬ್ಬ ಹುಡುಗ—ಅದೇಕೆ ನೀನು ಯಾವಾಗಲೂ ಹಾಗೆಯೇ ಹೇಳುತ್ತೀಯೆ ?

ಶ್ರೀನಿವಾಸ—ಏಕೆಂದರೆ, ಅವೇ ಒಳ್ಳೆಯದು.

ಹುಡುಗ — ಆದರೆ 'ದೇವರು ಇದ್ದಾನೆ' ಎಂಬುದು ನಿನಗೆ ಹೇಗೆ ತಿಳಿದಿದೆ ? ನೀನು ದೇವರನ್ನು ಕಂಡಿದ್ದೀಯೇನು ? ಅಥವಾ ದೇವರನ್ನು ಕಂಡ ವರನ್ನಾದರೂ ನೀನು ನೋಡಿದ್ದೀಯಾ ?

ಶ್ರೀನಿವಾಸ—ನೀನು 'ದೇವರಿಲ್ಲ' ಎಂದು ಹೇಳುವುದಕ್ಕೆ ಆಗುತ್ತದೆಯೇ ? ನೀನು ನೋಡದೆಇದ್ದ ಮಾತ್ರಕ್ಕೆ ಅದು ಇಲ್ಲ ಎಂದು ಹೇಳಬಹುದೇ? ನೀನು ಬೊಂಬಾಯನ್ನು ನೋಡಿದ್ದೀಯೇನು ? ಇಲ್ಲವಲ್ಲ ! ಹಾಗಾದರೆ ಬೊಂಬಾಯಿ ಇಲ್ಲ ಎನ್ನಲಾದೀತೇ ?

ಹುಡುಗ — ನಾನು ಬೊಂಬಾಯನ್ನು ನೋಡಿಲ್ಲ. ಆದರೆ ಬೊಂಬಾಯನ್ನು ನೋಡಿದ ಹಲವರನ್ನು ನಾನು ಕಂಡಿದ್ದೇನೆ. ಆದ್ದರಿಂದ ಬೊಂಬಾಯಿ ಇದೆ ಎಂದು ನಂಬುತ್ತೇನೆ.

ಶ್ರೀನಿವಾಸ—ತುಂಬ ಸರಿ. ಅದೇ ರೀತಿಯೇ ಈ ವಿಷಯದಲ್ಲೂ. ನಮ್ಮ ಪೂರ್ವಿಕರು, ಋಷಿಗಳು ಮೊದಲಾದವರು ದೇವರನ್ನು ಕಂಡಿದ್ದಾರೆ ಅದನ್ನು ಅವರು ಹೇಳಿದ್ದಾರೆ. ಅದನ್ನು ನಿಜವೆಂದು ಒಪ್ಪಿಕೊಂಡು ನಾವು ನಂಬುವುದರಲ್ಲಿ ಏನು ಆಕ್ಷೇಪಣೆ ? ಅದನ್ನು ತಳ್ಳಿಹಾಕು ವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ 'ದೇವರಿದ್ದಾನೆ' ಎಂದುತಾನೆ ಹೇಳಬೇಕು ?

ಹೀಗೆ ಎಳೆವಯಸ್ಸಿನಲ್ಲಿಯೇ ತೀವ್ರವಾದ ಆಸ್ತಿಕ್ಯ ಬುದ್ಧಿಯೂ, ಅದನ್ನು ಬೇರೆಯವರು ಅಂಗೀಕರಿಸುವಂತೆ ಮಾಡುವ ಸಾಮರ್ಥ್ಯವೂ ಹುಡುಗ ಶ್ರೀನಿವಾಸನಲ್ಲಿ ಮನೆಮಾಡಿಕೊಂಡಿದ್ದವು

ಮನುಷ್ಯರಲ್ಲಿಯೂ ಮೃಗಗಳಲ್ಲಿಯೂ ಸಮಾನವಾದ ಕರುಣೆ

ಚಿಕ್ಕ ವಯಸ್ಸಿನಿಂದ ಮೊದಲುಗೊಂಡೇ ಶ್ರೀನಿವಾಸನಿಗೆ ಮನುಷ್ಯರಲ್ಲಿ ಹೇಗೋ ಹಾಗೆಯೇ ಪ್ರಾಣಿಗಳಲ್ಲೂ ಕರುಣೆ ತೋರುವುದು ರೂಢಿ. ಬೀದಿಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗುತ್ತಾ ಇರುವಾಗ ಚಿಕ್ಕ ಹುಡುಗರು ಯಾವುದಾದರೂ ಪ್ರಾಣಿಗಳನ್ನು ಹಿಂಸೆ ಮಾಡುತ್ತಿದ್ದರೆ, ಶ್ರೀನಿವಾಸನು ಅದನ್ನು ತಡೆದು, ಅವರಿಗೆ ಒಳ್ಳೆ ಬುದ್ಧಿ ಹೇಳುವುದುಂಟು. ಕೇಳುವುದಿಲ್ಲವೆಂದು ಅವರು ಎದುರಿಸಿ ಹೇಳಿದರೆ, ಅವರನ್ನು ಹೊಡೆದು “ ಈಗ ನಿನಗೆ ಹೇಗಾಗುತ್ತಿದೆ ? ಹಾಗೆಯೇ ಅವಕ್ಕೂ ಆಗುವುದು ” ಎನ್ನುವನು.

ಪೀಠಕ್ಕೆ ಬಂದಮೇಲೆಯೂ ಇವರು ಪಶುಗಳಲ್ಲಿ ಅದೇ ಕರುಣೆಯನ್ನು ಬೀರುತ್ತಾ ಇರುವುದೂ, ಶೃಂಗೇರಿ ಆಶ್ರಮದಲ್ಲಿದ್ದ ಜಿಂಕೆಗಳನ್ನೂ, ಗೋಶಾಲೆಯಲ್ಲಿದ್ದ ಹಸುಗಳನ್ನೂ ಪ್ರೀತಿಯಿಂದ ಕಾಣುವುದನ್ನೂ, ಅವುಗಳು ಇವರಲ್ಲಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವುದನ್ನೂ ಎಲ್ಲರೂ ನೋಡಿರುವ ವಿಚಾರ.

ದುಷ್ಟ ಮೃಗಗಳ ವಿಷಯದಲ್ಲೂ ಇದೇ ಮನಃಪರಿಪಾಕವುಳ್ಳವನಾಗಿದ್ದ ಶ್ರೀನಿವಾಸ. ಬೇರೆ ಹುಡುಗರ ಜೊತೆ ಮಾತುಕತೆಯಾಡುವಾಗಲೂ, ‘ ಮೃಗಗಳನ್ನು ಬೇಟೆಯಾಡುವುದು ತಪ್ಪು ’ ಎಂದು ಹೇಳುವರು. ಉಳಿದವರು “ ಈ ಕೆಟ್ಟ ಮೃಗಗಳು ಬಲಹೀನ ಪ್ರಾಣಿಗಳನ್ನು ಕೊಲ್ಲುತ್ತವೆ. ಆದ್ದರಿಂದ ಬಲಹೀನವಾದುವನ್ನು ಕಾಪಾಡುವುದಕ್ಕಾಗಿ ದುಷ್ಟಮೃಗಗಳನ್ನು ಬೇಟೆಯಾಡಿ ಕೊಲ್ಲಬೇಕು” ಎಂದು ಹೇಳಿದರೆ, ಅದಕ್ಕೆ “ ಈಶ್ವರನು ದುಷ್ಟಮೃಗಗಳಿಗೆ ಆಹಾರವಾಗಿ ಇತರ ಮೃಗಗಳನ್ನು ಸೃಷ್ಟಿಸಿರಲಾಗಿ, ಆ ವ್ಯವಹಾರದಲ್ಲಿ ಮನುಷ್ಯನು ತಲೆಹಾಕುವುದು ತಪ್ಪು” ಎಂದು ಉತ್ತರ ಕೊಡುವರು.

ಒಂದು ದಿನ ಕೆಲವರು ಹುಡುಗರು ಹಾರುವ ಹುಳುಗಳನ್ನು ಹಿಡಿದು ಅವುಗಳ ರೆಕ್ಕೆಗಳನ್ನು ಕಿತ್ತು ತಮ್ಮ ನಾಯಿಯ ಮುಂದೆ ಹಾಕಿ, ನಾಯಿ ಆ ಹುಳುಗಳನ್ನು ತಿನ್ನುವ ದೃಶ್ಯವನ್ನು ನೋಡುತ್ತಾ ಇದ್ದರು. ಇದನ್ನು ಕಂಡು ಶ್ರೀನಿವಾಸನು ಮನಕರಗಿ, ಆ ಹುಡುಗರ ಕೈ ತಿರಿಚಿದನು. ಅವರು ನೋವು ತಡೆದುಕೊಳ್ಳಲಾರದೆ ಕಿರಿಚಿಕೊಂಡರು. “ ಹೀಗೆಯೇ ಇರುವುದು ಆ ಹುಳುಗಳಿಗೂ. ನಿಮಗೆ ಕೈ ಹೇಗೋ ಅವುಗಳಿಗೆ ರೆಕ್ಕೆ ಹಾಗೆ. ಇನ್ನು ಮೇಲೆ ಅವುಗಳ ರೆಕ್ಕೆಗಳನ್ನು ಕೀಳಬೇಡಿ ” ಎಂದು ಚೆನ್ನಾಗಿ ಬುದ್ಧಿ ಹೇಳಿದನು.

ಶ್ರೀನಿವಾಸನು ಹೀಗೆ ಮಾಡಿದ್ದು ಆ ಹುಡುಗರನ್ನು ಹಿಂಸಿಸುವುದಕ್ಕಾಗಿ ಅಲ್ಲ; ಅವರನ್ನು ಸನ್ಮಾರ್ಗಕ್ಕೆ ತಿರುಗಿಸುವುದಕ್ಕಾಗಿಮಾತ್ರ. ಅವನ ಸ್ವಭಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೃದುವಾದುದು. ಉದಾಹರಣೆಗೆ, ಒಂದುವೇಳೆ ಯಾರಾದರೂ ಜಾರಿಬಿದ್ದರೆಂದರೆ, ಇವನು ಕೂಡಲೇ ಓಡಿಹೋಗಿ ಅವರನ್ನು ಎಬ್ಬಿಸಿ, ಕೂರಿಸಿ, ಉಪಚರಿಸುತ್ತಿದ್ದನು.

ಒಬ್ಬ ಮೊಂಡ ಹುಡುಗನನ್ನು ದಂಡಿಸಿ ತಿದ್ದಬೇಕೆಂದು ಹಲವಾರು ರೀತಿ ಪ್ರಯತ್ನಗಳನ್ನು ಮಾಡುತ್ತಿದ್ದ ತಂದೆ, ಒಂದುದಿನ ಆ ಹುಡುಗನನ್ನು ಬಗ್ಗಿಸಿ, ಅವನ ಬೆನ್ನ ಮೇಲೆ ದೊಡ್ಡದೊಂದು ಕಲ್ಲುಚಪ್ಪಡಿಯನ್ನು ಹೇರಿ, ಹಾಗೆಯೇ ಇರುವಂತೆ ಮಾಡಿದ್ದರು. ಹುಡುಗ ನೋವು ತಡೆದುಕೊಳ್ಳಲಾರದೆ ಕಿರಿಚಿಕೊಳ್ಳುತ್ತಿದ್ದನು. ಇದನ್ನು ಕಂಡ ಶ್ರೀನಿವಾಸನು, ಮನಕರಗಿ ಆ ತಂದೆಯನ್ನು ಕುರಿತು "ನೀವು ದೊಡ್ಡವರು; ನನಗಿಂತ ತುಂಬ ತಿಳಿದವರು. ನಿಮ್ಮ ಮಗ ನೋವು ತಾಳಿಕೊಳ್ಳಲಾರದೆ ಕಿರಿಚಿಕೊಳ್ಳುತ್ತಿದ್ದಾನೆ. ಆ ಕಲ್ಲನ್ನು ನನ್ನ ಬೆನ್ನಮೇಲೆ ಇಟ್ಟುಬಿಡಿ. ಒಂದೆರಡು ಗಳಿಗೆವರೆಗಾದರೂ ನಿಮ್ಮ ಹುಡುಗನಿಗೆ ಬಿಡುವು ದೊರೆಯುತ್ತದೆ" ಎಂದನು. ಆ ತಂದೆ ನಾಚಿ, ಚಪ್ಪಡಿಯನ್ನು ಕೆಳಗಿಳಿಸಿ, ಮಗನನ್ನು ಏಳುವುದಕ್ಕೆ ಸಮ್ಮತಿಸಿದನು.

ನೇರ ನಡವಳಿಕೆ

ಯಾವ ಕಾಲದಲ್ಲೇ ಆದರೂ ನೇರ ನಡವಳಿಕೆಯುಳ್ಳವರಾಗಿರಬೇಕು ಎಂಬುದು ಶ್ರೀನಿವಾಸನ ಅಭಿಮತ, ಹಾಗೂ ಅವನ ಸಹಜ ಗುಣ. ಒಂದು ಸಲ ಶ್ರೀನಿವಾಸನು ಮೈಸೂರಿಗೆ ರೈಲುಪ್ರಯಾಣ ಮಾಡುತ್ತಿದ್ದ. ದಾರಿಯಲ್ಲಿ ರೈಲು ಗಾಡಿಯ ಸದ್ದು, ಸ್ಟೇಷನ್ನುಗಳಲ್ಲಿ ಜನಗಳ ಸದ್ದು, ಗಾಡಿಯಲ್ಲೇ ಇದ್ದ ಪ್ರಯಾಣಿಕರ ಸದ್ದು — ಈ ಎಲ್ಲ ಸದ್ದುಗಳನ್ನೂ ಸ್ವಲ್ಪವೂ ಗಮನಿಸದೆ ನೆಟ್ಟ ಮನಸ್ಸಿನಿಂದ ಒಂದು ಪುಸ್ತಕವನ್ನು ಓದುತ್ತಾ ಇದ್ದನು. ಅದೇ ಗಾಡಿಯಲ್ಲಿ ಅವನಿಗೆ ಇದಿರಾಗಿ ಕುಳಿತಿದ್ದ ಪ್ರಯಾಣಿಕರೊಬ್ಬರು ಇದನ್ನು ಗಮನಿಸಿದರು. ಶ್ರೀನಿವಾಸನು ಒಂದುಸಲ ಕೂತಿದ್ದ ಹಾಗೆಯೇ ಕೆಲವು ನಿಮಿಷ ಮಾತ್ರ ಕಣ್ಣು ಮುಚ್ಚಿದನು. ಪುಸ್ತಕ ಕೈಯಿಂದ ಜಾರಿ ಕೆಳಗೆ ಬಿತ್ತು. 'ಈ ಹುಡುಗ ಇಷ್ಟು ತನ್ಮಯನಾಗಿ ಓದುತ್ತಿರುವ ಆ ಪುಸ್ತಕದಲ್ಲಿ ಏನು ವಿಶೇಷವಿದೆಯೋ ತಿಳಿದುಕೊಳ್ಳಬೇಕು' ಎಂದು ಕುತೂಹಲಗೊಂಡ ಆತ ಪುಸ್ತಕವನ್ನು ತೆಗೆದುಕೊಂಡು ಓದತೊಡಗಿದರು. ಶ್ರೀನಿವಾಸನು ಕಣ್ಬಿಟ್ಟ ಮೇಲೆ ಪುಸ್ತಕವನ್ನು ಕಾಣದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಳವಳಪಟ್ಟು, ಆ ಬಳಿಕ ಆ ಹಿರಿಯರ ಕೈಯಲ್ಲಿ ಅದು ಇದ್ದುದನ್ನು ಕಂಡು, ಮೃದುವಾಗಿ ಅವರನ್ನು "ಇದು ನಾನು ಓದುತ್ತಿದ್ದ ಪುಸ್ತಕ" ಎಂದು ವಿನಯದಿಂದ ಹೇಳಿದನು. "ಹೌದು" ಎಂದರು ಆ ಹಿರಿಯರು. ಆ ಕೂಡಲೆ ಪುಸ್ತಕವನ್ನು ಹುಡುಗನಿಗೆ ಕೊಟ್ಟುಬಿಟ್ಟರು. ಹುಡುಗ ಅವರಿಗೆ ಕೃತಜ್ಞತೆ ಸೂಚಿಸಿ, ಒಂದು ಕ್ಷಣ ಕಳೆದಮೇಲೆ "ಇದನ್ನು ನೀವು ತೆಗೆದುಕೊಳ್ಳುವ ಮೊದಲು ನನಗೆ ಹೇಳಿ ತೆಗೆದುಕೊಳ್ಳಬಾರದಿತ್ತೇ? ಯಾರೇ ಆಗಲಿ, ಬೇರೆಯವರ ಸಾಮಾನನ್ನು ಕೇಳದೆ ತೆಗೆದುಕೊಳ್ಳಬಾರದು" ಎಂದು ಖಂಡಿತವಾಗಿ ಹೇಳಿದನು. ಕಿರಿಯರೇ ಆಗಲಿ, ಹಿರಿಯರೇ ಆಗಲಿ, ತಪ್ಪುಮಾಡಿದರೆ ಅದನ್ನು ಶ್ರೀನಿವಾಸನು ಸಹಿಸುತ್ತಿರಲಿಲ್ಲ. ಇದೇ ಬಾಲ್ಯದಿಂದಲೂ ಅವನ ಗುಣವಾಗಿತ್ತು.

ದೈವದಲ್ಲಿ ನಂಬಿಕೆ

ಶ್ರೀನಿವಾಸನಿಗೆ ಬಾಲ್ಯದಲ್ಲಿಯೇ ದೇವರಲ್ಲಿ ಅಪಾರವಾದ ನಂಬಿಕೆ. ಅದು ಯಾವಾಗಲೂ ಅವನ ಕೈ ಬಿಡಲಿಲ್ಲ. ಇದು ಚಿಕ್ಕ ವಯಸ್ಸಿನಿಂದಲೂ ಸ್ಪಷ್ಟವಾಗಿತ್ತು. ಒಂದು ದಿನ ಸಂಜೆ ಆಟ ಮುಗಿದು ಮುನಿಸಿಪಲ್ ಪಾರ್ಕಿನಿಂದ ತಿರುಗಿ ಬರುವಾಗ ಪಕ್ಕದಲ್ಲಿದ್ದ ಕೆರೆ ಕಟ್ಟೆಯ ಮೇಲೆ ಎಲ್ಲರೂ ಕೂತುಕೊಂಡರು. ಆಗ ಪಕ್ಕದಲ್ಲಿದ್ದ 'ಕಮಲಾ ಛತ್ರ' ಇವರ ಕಣ್ಣಿಗೆ ಬಿತ್ತು. ಆ ಛತ್ರದ ಹಿಂಭಾಗದಲ್ಲಿದ್ದ ಒಂದು ಕೊಳದ ವಿಚಾರವಾಗಿ ಮಾತುಕತೆಗಳು ಪ್ರಾರಂಭವಾದವು. ಆ ಕೊಳದ ಬಳಿ ದೆವ್ವ ಇದೆ ಎಂಬುದು ಅವುಗಳಿಗೆ ವಿಷಯವಾಗಿತ್ತು. (ದೆವ್ವವಿದೆಯೆಂಬ ಕಾರಣದಿಂದ ಜನಗಳು ಸೂರ್ಯಾಸ್ತಮಾನವಾದಮೇಲೆ ಆ ಕೊಳಕ್ಕೆ ಹೋಗುತ್ತಿರಲಿಲ್ಲ..) "ದೆವ್ವ ಎಂಬುದು ಸುಳ್ಳು" ಎಂದು ಶ್ರೀನಿವಾಸನು ಹೇಳಿದನು. ಉಳಿದ ಹುಡುಗರು ಕೂಡಲೆ ಶ್ರೀನಿವಾಸನನ್ನು ಪರೀಕ್ಷಿಸಬೇಕೆಂದು ಯೋಚಿಸಿದರು. ಅವರಲ್ಲೊಬ್ಬ, "ಹಾಗಾದರೆ, ಆ ಕೊಳಕ್ಕೆ ಈಗಲೇ ಹೋಗಿ ಕೈಕಾಲು ತೊಳೆದುಕೊಂಡು ಬರುವಷ್ಟು ಧೈರ್ಯವಿದೆಯೆ ನಿನಗೆ?" ಎಂದು ಕೇಳಿದನು. ಶ್ರೀನಿವಾಸನು ಇದನ್ನು ಒಪ್ಪಿಕೊಂಡು "ಖಂಡಿತವಾಗಿ" ಎಂದು ಹೇಳಿ, ಛತ್ರಕ್ಕೆ ಓಡಿಹೋಗಿ, ಅದರ ಹಿಂಭಾಗದಲ್ಲಿದ್ದ ಕೊಳದಲ್ಲಿ ಕೈಕಾಲುಗಳನ್ನು ತೊಳೆದುಕೊಂಡು, ಕೊಳದ ನೀರನ್ನು ಬಾಯಿಗೆ ಹಾಕಿಕೊಂಡು ಮುಕ್ಕುಳಿಸಿ, ಅತ್ಯಂತ ಆತಂಕದಿಂದ ಎದುರು ನೋಡುತ್ತಾ ಇದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಳಿದ ಹುಡುಗರ ಜೊತೆ ಸೇರಿಕೊಂಡನು. ಅವನ ಕೈಕಾಲಂಗಳು ಒದ್ದೆಯಾಗಿ ಇದ್ದುದ್ದನ್ನು ಕಂಡ ಹುಡುಗರು ಆಶ್ಚರ್ಯಪಟ್ಟು, "ನಿನ್ನನ್ನು ಈ ಆಪತ್ತಿಗೆ ಒಳಪಡಿಸಿದ್ದಕ್ಕೆ ಮನ್ನಿಸಬೇಕು" ಎಂದರು. "ಹಾಗೇನೂ ಇಲ್ಲವಲ್ಲಾ" ಎಂದ ಶ್ರೀನಿವಾಸ. "ನೀನು ಹೇಗೆ ನಿರ್ವಾಹ ಮಾಡಿದೆ?" ಎಂದು ಉಳಿದವರು ಕೇಳಿದರು. ಅದಕ್ಕೆ ಶ್ರೀನಿವಾಸನು ಹೇಳಿದ ಉತ್ತರ ವಿವರಣೆಯಿಂದ ಕೂಡಿದ ಉಪದೇಶವಾಗಿ ಪರಿಣಮಿಸಿತು. "ನನ್ನ ನಾಲಿಗೆಯಲ್ಲಿ ರಾಮನಾಮ ಇರುವಾಗ ಎಂಥ ಕೆಟ್ಟ ಪಿಶಾಚಿತಾನೆ ಹತ್ತಿರ ಸುಳಿಯುವುದಕ್ಕೆ ಸಾಧ್ಯವಾದೀತು?" ಬಾಲ್ಯದಲ್ಲಿಯೇ ಈ ಶಕ್ತಿ, ಆತ್ಮವಿಶ್ವಾಸ ಈ ಕಿರಿಯವನಿಗಿದ್ದದ್ದು ಆಶ್ಚರ್ಯವೇ ಸರಿ. ಈಗಲಾದರೋ, ದೆವ್ವಗಳು, ಪಿಶಾಚಿಗಳು ಬಹುಕಾಲದಿಂದ ಮನೆಮಾಡಿಕೊಂಡಿರುವುದಾಗಿ ಹೇಳುತ್ತಿದ್ದ ಸ್ಥಳಗಳಲ್ಲಿಯೂ ಈ ಪೀಠಾಧಿಪತಿಗಳು ಮುಕ್ಕಾಂ ಮಾಡಿ, ನಿತ್ಯಪೂಜೆ ನಡೆಸಿ, ಅದರ ಮಹಿಮೆಯಿಂದಲೇ ಆ ದುಷ್ಟ ಪಿಶಾಚಿಗಳನ್ನು ಓಡಿಸಿದ್ದಾರೆ ಎಂಬುದು ಹಲವರು ಅರಿತಿರುವ ಸಂಗತಿ. ಶ್ರೀ ಸಚ್ಚಿದಾನಂದ ಶಿವಾನುಭವ ನರಸಿಂಹಭಾರತೀ ಸ್ವಾಮಿಗಳ ಜೀವನ ಚರಿತ್ರೆಯಲ್ಲಿನ ಒಂದು ಸಂಗತಿಯನ್ನು ಇಲ್ಲಿ ಜ್ಞಾಪಕ ಮಾಡಿಕೊಳ್ಳಬಹುದು.

ಒಂದು ಗ್ರಾಮದಲ್ಲಿ ಶ್ರೀಮಠದ ಮುಕ್ಕಾಮು ಮಾಡುವುದಕ್ಕೆ ಏರ್ಪಾಡಾಗಿತ್ತು. ಸ್ವಾಮಿಗಳು ತಂಗುವುದಕ್ಕೆ ವಿಶಾಲವಾದ ಜಾಗ ಸಿಕ್ಕಲಿಲ್ಲ. ಒಂದು ದೊಡ್ಡ ಮನೆ ಖಾಲಿಯಾಗಿತ್ತು. ಆದರೆ ಅದರಲ್ಲಿ ಯಾವುದೋ ಒಂದು ಪಿಶಾಚಿಯಿರುವುದರಿಂದ ಅಲ್ಲಿ ಯಾರೂ ವಾಸಮಾಡುವುದಿಲ್ಲ; ಇನ್ನು ಸ್ವಾಮಿಗಳು ತಂಗುವಂತೆ ಮಾಡುವುದು ಹೇಗೆ? ಎಂದು ಊರ ಜನಗಳು ಯೋಚಿಸುತ್ತಿದ್ದರು. ಇದು ಹೇಗೋ ಶ್ರೀ ಸ್ವಾಮಿಗಳ ಕಿವಿಗೆ ಬಿತ್ತು. "ಹಾಗಾದರೆ, ಅಲ್ಲಿಯೇ ನಾವು ತಂಗುತ್ತೇವೆ. ನಮ್ಮ ಪೂಜೆಯನ್ನು ಅಲ್ಲಿಯೇ ನಡಸುತ್ತೇವೆ. ಆ ಪಿಶಾಚಿಯನ್ನು ಓಡಿಸುತ್ತೇವೆ" ಎಂದರು. ಅವರ ಅಪ್ಪಣೆಯ ಪ್ರಕಾರ ಅದೇ ಕಟ್ಟಡದಲ್ಲಿ ಶ್ರೀ ಸ್ವಾಮಿಗಳು ತಂಗುವಂತೆಯೂ, ಪೂಜಾಗೃಹವೂ ಸಿದ್ಧವಾಯಿತು. ರಾತ್ರಿ ಪೂಜೆ ಮುಗಿದ ಕೂಡಲೆ ಆ ಮನೆಯೊಳಗಿನಿಂದ 'ಕ್ರೀಚ್' ಎಂದು ಗಟ್ಟಿಯಾಗಿ ಸದ್ದುಮಾಡಿಕೊಂಡು ಯಾವನೋ ಒಬ್ಬ ಮನುಷ್ಯ ಮನೆಯ ಹಿಂಭಾಗಕ್ಕೆ ಓಡುತ್ತಿರುವ ಹಾಗೆ ಶಬ್ದ ಕೇಳಿಸಿತು. ಆ ಶಬ್ದವನ್ನು ಹಿಂಬಾಲಿಸಿ ಅಲ್ಲಿದ್ದವರು ಹಿಂದುಗಡೆಗೆ ಓಡಿದರು. ಆ ಮನೆಯ ಹಿಂದುಗಡೆ ಇದ್ದ ಬಾವಿಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರೋ ಹಾರಿಬಿದ್ದ ಶಬ್ದ ಕೇಳಿಸಿತು. ಅದನ್ನು ಸ್ವಾಮಿಗಳ ಬಳಿ ಬಂದು ತಿಳಿಯಪಡಿಸಿದರು. "ಇನ್ನು ನಿಮ್ಮ ಮನೆಯಲ್ಲಿ ಪಿಶಾಚಿಯ ಭಯವೇ ಇರುವುದಿಲ್ಲ" ಎಂದರು ಸ್ವಾಮಿಗಳು. ಅದೇ ಪ್ರಕಾರ ಆವತ್ತಿನಿಂದ ಆ ಮನೆಯಲ್ಲಿ ಜನ ಸುಖವಾಗಿ ವಾಸಮಾಡುತ್ತಿದ್ದಾರೆ. ಇದೇರೀತಿಯ ಹಲವು ಸಂಗತಿಗಳು ಈ ಪೀಠಾಧಿಪತಿಗಳ ಚರಿತ್ರೆಯಲ್ಲಿಯೂ ಕಾಣಬರುತ್ತದೆ. ಇದಕ್ಕೆ ಅವರ ತೀವ್ರ ತಪಸ್ಸೇ ಕಾರಣ. ಈ ನಂಬಿಕೆಯೂ, ಶಕ್ತಿಯೂ ಸ್ವಭಾವವಾಗಿಯೇ ಚಿಕ್ಕ ಶ್ರೀನಿವಾಸನಲ್ಲಿ ನೆಲೆಗೊಂಡಿತ್ತೆಂಬುದು ಅವರಿಗೆ ತರುವಾಯ ಒದಗಿಬಂದ ಮಹಾಮಹಿಮೆಯ ಸೂಚನೆಯಾಗಿತ್ತೆಂದು ತೋರುತ್ತದೆ.

ಸಮಾಜಸೇವೆಯಲ್ಲಿ ಆಸಕ್ತಿ

ಇತರರಿಗೆ ಸಹಾಯ ಮಾಡುವುದರಲ್ಲಿ ಶ್ರೀನಿವಾಸನಿಗೆ ವಿಶೇಷ ಆಸಕ್ತಿ. ಮನೆಯಲ್ಲಿ ತಮ್ಮ ತಾಯಿಗೆ ಒತ್ತಾಸೆಕೊಡುತ್ತಿದ್ದನೆಂಬುದನ್ನು ಈ ಮೊದಲೇ ಹೇಳಿದ್ದಾಗಿದೆ. ಅಕ್ಕಪಕ್ಕದವರಿಗೂ ಅದೇರೀತಿ ಸಹಾಯ ಮಾಡುವುದರಲ್ಲಿ ಶ್ರೀನಿವಾಸನಿಗೆ ಬಹಳ ಉತ್ಸಾಹವಿತ್ತು. ಅವರಲ್ಲಿ ಬಹುಪಾಲು ಇವನ ಸಂಬಂಧಿಗಳೇ. ಹುಡುಗನಿಗೆ ಬಿಡುವಾಗಿದ್ದ ಕಾಲಗಳಲ್ಲಿ ಅವರು ಹೇಳಿದ ಸಣ್ಣಪುಟ್ಟ ಕೆಲಸಗಳನ್ನು ಇವನು ಸಂತೋಷದಿಂದ ಮಾಡಿಕೊಡುತ್ತಿದ್ದನು.

ಕೈಪು ರಾಮಶಾಸ್ತ್ರಿಗಳು ಮುನಿಸಿಪಲ್ ಬಾಲಕರ ಪಾಠಶಾಲೆಯಲ್ಲಿ ಉಪಾಧ್ಯಾಯರು. ಶಾಲೆಯ ಹುಡುಗರು ಇವರ ಮನೆಗೆ ಬಂದಾಗ ಇವರು ಹೇಳಿದ ಕೆಲಸಗಳನ್ನು ಮಾಡದೆ ಇದ್ದರಾಗಲಿ, ಅಥವಾ ತರಗತಿಯಲ್ಲಿ ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳದೆ ಇದ್ದರಾಗಲಿ, ಅವರನ್ನು ಕೋಲಿನಿಂದ ಹೊಡೆದು ದುಡಿಸುವರು. ಹಾಗೆ ಏಟು ತಿಂದವರಲ್ಲಿ ಶ್ರೀನಿವಾಸನ ಆಟದ ಗೆಳೆಯರೂ ಇದ್ದರು. ಅವರಿಗೆ ದಂಡನೆ ತಪ್ಪಿಸುವ ಉದ್ದೇಶದಿಂದ ಯಾವ ಯಾವ ಪಾಠಗಳಲ್ಲಿ ಅವರು ಹಿಂದಿದ್ದರೋ ಆ ಪಾಠಗಳನ್ನು ಅವರಿಗೆ ಶ್ರೀನಿವಾಸನು ಪ್ರತ್ಯೇಕವಾಗಿ ಹೇಳಿಕೊಡುವುದುಂಟು. (ಮುಖ್ಯವಾಗಿ ಗಣಿತ ಮತ್ತು ಇಂಗ್ಲಿಷ್ ಅಕ್ಷರಗಳು.) ವಯಸ್ಸು ಬಂದ ಹುಡುಗರಿಗಿಂತ ಶ್ರೀನಿವಾಸನ ಬೋಧನ ಕ್ರಮ ವಿಶೇಷ ರೀತಿಯದಾಗಿತ್ತು ಎನ್ನುತ್ತಾರೆ. ಈ ಅಲ್ಪ ಸಹಾಯಕ್ಕಾಗಿ ಆ ಹುಡುಗರೂ, ಅವರ ತಂದೆ ತಾಯಿಗಳೂ ಶ್ರೀನಿವಾಸನಲ್ಲಿ ಕೃತಜ್ಞರಾಗಿದ್ದರು. ಹೀಗಾಗಿ ಯಾವನುವೆಗೆ ಹೋದರೂ ಆದರದ ಸ್ವಾಗತ ದೊರೆಯುತ್ತಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೋದಾರ್ಢ್ಯ ಮತ್ತು ಸಹಿಷ್ಣುತೆ

ಒಂದು ದಿನ ಆಟ ಮುಗಿದ ಮೇಲೆ ಹುಡುಗರೆಲ್ಲ ಶ್ರೀನಿವಾಸನ ಮನೆಯ ಎದುರು ಮನೆಯಲ್ಲಿ ಸೇರಿದರು. ಈ ಮನೆಯ ಅಜ್ಜಿ ಹುಡುಗರಿಗೆಲ್ಲ ರೊಟ್ಟಿಯನ್ನು ಕೊಟ್ಟರು. ಅದರಲ್ಲಿ ಪ್ರಾಯಶಃ ಮೆಣಸಿನಕಾಯಿ ಸ್ವಲ್ಪ ಹೆಚ್ಚಾಗಿ ಇದ್ದಿರಬಹುದು. ಅದನ್ನು ತಿಂದ ಕೆಲವರು ಹುಡುಗರು 'ನೀರು ಬೇಕು' ಎಂದರು. ಮತ್ತೆ ಕೆಲವರು 'ಬೆಲ್ಲ ಬೇಕು' ಎಂದರು. ಇನ್ನೂ ಬೇರೆ ಕೆಲವರು 'ಸಕ್ಕರೆ ಬೇಕು' ಎಂದರು. 'ಹೀಗೆ ಕೇಳುವುದು ತಪ್ಪು' ಎಂದು ಶ್ರೀನಿವಾಸನು, ಅವರೆಲ್ಲರನ್ನೂ ಆಕ್ಷೇಪಿಸಿದನು. ಅದರ ಮೇಲೆ, ಅವರವರಲ್ಲಿ ಮಾತು ಬೆಳೆಯಿತು. ಒಬ್ಬ ಹುಡುಗ ಶ್ರೀನಿವಾಸನಿಗೆ, "ಅಷ್ಟೊಂದು ನಮ್ರತೆಯೂ ಶಕ್ತಿಯೂ ನಿನಗಿದ್ದಪಕ್ಷದಲ್ಲಿ, ಒಂದು ಹಿಡಿ ಹಸಿರುಮೆಣಸಿನ ಕಾಯನ್ನೇ ಕೊಡುತ್ತೇನೆ. ಅದನ್ನು ತಿಂದು ಸುಮ್ಮನಿರುತ್ತೀಯೋ?" ಎಂದು ಕೇಳಿದನು. ಶ್ರೀನಿವಾಸನು ಇದಕ್ಕೆ ಹೆದರಲಿಲ್ಲ. "ಹಾಗೆ ಯಾರೂ ಹೇಳುವುದಿಲ್ಲ. ಒಂದು ವೇಳೆ ಹೇಳಿದರೆ, ಅದಕ್ಕೂ ನಾನು ಹಿಂಜರಿಯುವುದಿಲ್ಲ" ಎಂದನು. ಪರೀಕ್ಷೆ ಮಾಡಬೇಕೆಂದು ಯೋಚಿಸಿ ಅವರಲ್ಲೊಬ್ಬ ತಕ್ಷಣ ಹೋಗಿ ಒಂದು ಹಿಡಿ ಹಸಿರುಮೆಣಸಿನಕಾಯನ್ನು ತೆಗೆದುಕೊಂಡುಬಂದು ಶ್ರೀನಿವಾಸನಿಗೆ ಕೊಟ್ಟನು. ಅದುವರೆಗೆ ಹುಡುಗರು ಆಡಿಕೊಳ್ಳುತ್ತಿದ್ದ ಮಾತುಗಳನ್ನು ಕೇಳುತ್ತಿದ್ದ ಹಿರಿಯರೊಬ್ಬರು, "ಸಾಕು ನಿಮ್ಮ ಜಗಳ, ಅಷ್ಟಕ್ಕೇ ಬಿಟ್ಟುಬಿಡಿ" ಎನ್ನುತ್ತಿದ್ದರು. ತಾನು ಆಡಿದ ಮಾತನ್ನು ಹಿಂದೆಗೆದುಕೊಳ್ಳುವುದು ಶ್ರೀನಿವಾಸನಿಗೆ ಇಷ್ಟವಿಲ್ಲ. ಅಷ್ಟು ಹಸಿಮೆಣಸಿನಕಾಯನ್ನೂ ತಿಂದುಬಿಟ್ಟನು. "ಇನ್ನೇನು ಗತಿ?" ಎಂದು ಎಲ್ಲರೂ ಭಯಪಟ್ಟರು. ಆದರೆ ಏನೂ ಆಗಲಿಲ್ಲ. ಅದನ್ನು ಕಂಡು ಎಲ್ಲರೂ ಶ್ರೀನಿವಾಸನ ಸಹಿಷ್ಣುತೆಯನ್ನು ಹೊಗಳಿದರು.

ಸಾಯಂಕಾಲದ ಸಂಭಾಷಣೆಗಳಲ್ಲಿ ಶ್ರೀನಿವಾಸನಿಗೆ ಅಹಿಂಸಾತತ್ವವೇ ಮುಖ್ಯ ವಿಷಯವಾಗಿರುತ್ತಿತ್ತು. ಇದನ್ನು ಕೇಳುತ್ತಿದ್ದ ಹುಡುಗರು, "ಇದನ್ನು ಬಾಯಲ್ಲಿ ಹೇಳುತ್ತಿರಬಹುದೇ ಹೊರತು ಕಾರ್ಯತಃ ಮಾಡುವುದಕ್ಕೆ ಸಾಧ್ಯವಿಲ್ಲ" ಎನ್ನುವರು. ಶ್ರೀನಿವಾಸನು ಮಾತ್ರ "ಇದು ಮಾಡುವುದಕ್ಕೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧ್ಯ" ಎನ್ನುವನು. "ಇದನ್ನು ನೀನು ರುಜುವಾತುಮಾಡಿ ತೋರಿಸ ಬಲ್ಲೆಯೋ ?" ಎಂದು ಕೆಲವರು ಶ್ರೀನಿವಾಸನನ್ನು ಕೇಳಲು, ಬೇಕಾದ ಪರೀಕ್ಷೆ ಮಾಡಿ ನೋಡಿ" ಎಂದು ಶ್ರೀನಿವಾಸನು ಹೇಳಿದ ಕೂಡಲೆ ಒಬ್ಬ ಹುಡುಗ ಅಡಿಗೆ ಮನೆಗೆ ಹೋಗಿ ಒಂದು ತಾಳೆಗರಿಯ ಬೀಸಣಿಗೆಯನ್ನು ತೆಗೆದುಕೊಂಡು ಬಂದ. ಅದರ ಗರಿಯ ಭಾಗಗಳನ್ನು ತೆಗೆದುಹಾಕಿ ಉಳಿ ಕಡ್ಡಿ ಕುಚ್ಚಾದ ಭಾಗದಿಂದ ಶ್ರೀನಿವಾಸನಿಗೆ ಹುಡುಗರೆಲ್ಲರೂ ಒಬ್ಬೊಬ್ಬರಾ ಏಟುಕೊಡುತ್ತಾ ಬಂದರು. ಶ್ರೀನಿವಾಸ ಅಷ್ಟೊಂದು ಏಟುಗಳನ್ನೂ ಸಹಿ ಕೊಂಡಿದ್ದನೇ ಹೊರತು ಒಂದು ಆಕ್ಷೇಪಣೆಯನ್ನೂ ಮಾಡಲಿಲ್ಲ. ಮೈಯೆಲ್ಲಾ ಏಟುತಿಂದಿತ್ತು. ಶ್ರೀನಿವಾಸ ಅದನ್ನೆಲ್ಲಾ ಸಹಿಸಿಕೊಂಡಿದ್ದ. ಹೊಡೆ ಹುಡುಗರೆಲ್ಲರೂ ನಾಚಿಕೆಪಟ್ಟರು. ತಮ್ಮ ಕ್ರೂರತನವನ್ನು ನಿಲ್ಲಿಸಿದರು. ಕಡೆಯಲ್ಲಿ ಅವರ.ಗಳಿಗೆ ಶ್ರೀನಿವಾಸ ಒಂದು ಕಥೆ ಹೇಳಿದ: ಒಬ್ಬ ಬೌದ್ಧ ಸನ್ಯಾಸಿಯನ್ನು ಒಬ್ಬ ದೊರೆ ಕ್ರೂರವಾದ ದಂಡನೆಗೆ ಗುರಿಪಡಿಸಿದನು. ಸಂನ್ಯಾಸಿ ಏನೂ ಹೇಳದೆಯೇ ಸಹನೆಯಿಂದ ತಾಳಿಕೊಂಡಿದ್ದರು. ಕಡೆಯಲ್ಲಿ ಆ ದೊರೆ ನಾಚಿಕೆಪಟ್ಟು ಸಂನ್ಯಾಸಿಯ ಕ್ಷಮೆಯನ್ನು ಕೇಳಿಕೊಂಡನು. ಅಷ್ಟೇ ಅಲ್ಲ, ಅವರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಟ್ಟನು. ಇದೇ ಸಹಿಷ್ಣು ತೆಯ ಬಲ." ಸುಖದುಃಖಗಳನ್ನು ಸಮವಾಗಿ ಭಾವಿಸಿ ಅನುಭವಿಸಬೇಕೆಂಬುದು ಜ್ಞಾನಿಯ ನೆಲೆ. ಇದು ಶಾಸ್ತ್ರಾಭ್ಯಾಸ ಮಾಡಿದ ಮೇಲೆ ಉಂಟಾಗುವ ಮನ ಸ್ಥಿತಿ. ಶ್ರೀನಿವಾಸನಿಗೆ ಮಾತ್ರ ಇದು ಬಾಲ್ಯದಲ್ಲಿಯೇ ತೋರಿತೆಂದರೆ, ಪೂರ್ವ ಜನ್ಮ ಸಂಸ್ಕಾರದ ಫಲವೇ ಆಗಿರಬೇಕು.

ಗೌತಮ ಧರ್ಮಸೂತ್ರದಲ್ಲಿ ಹೀಗೆ ಹೇಳಿದೆ: ಮನುಷ್ಯನು ೪೦ ಸಂಸ್ಕಾ ಗಳನ್ನು ಮಾಡಬೇಕು. ಆದರೆ ಅಷ್ಟುಮಾತ್ರವೇ ಸಾಲದು ಅವನಿಗೆ ಎಂಟು ಆತ್ಮಗುಣಗಳು ಇರಬೇಕು ; ಅವಿದ್ದರೆ ಮಾತ್ರ ಅವನಿಗೆ ಸಾಯುಜ್ಯ ದೊರೆಯು ತ್ತದೆ. ನಲವತ್ತು ಸಂಸ್ಕಾರಗಳಲ್ಲಿ ಯಾವುದು ಕೊರತೆಯಾದರೂ, ಎಂಟು ಆತ್ಮಗುಣಗಳಿದ್ದರೆ ಅವನು ಸಾಯುಜ್ಯ ಪಡೆಯುವನು. ಆದರೆ, ನಲವತ್ತು ಸಂಸ್ಕಾರಗಳೂ ಇದ್ದು ಆತ್ಮಗುಣಗಳು ಇಲ್ಲವಾದರೆ ಸಾಯುಜ್ಯ ದೊರೆಯು ದಿಲ್ಲ. ಸಂಸ್ಕಾರಗಳಿಂದ ಕರ್ಮ ಮಾಡುವುದು, ಆ ಮೂಲಕ ಚಿತ್ತಶುದ್ಧಿ ಯನ್ನು ಪಡೆದು ಆತ್ಮ ಗುಣಗಳಿಂದ ಉಂಟಾಗುವ ಜ್ಞಾನವನ್ನು ಪಡೆಯುವ

Sri Vidyabharathi Book Centre, Sringeri

 CC-0. In Public Domain. Digitized by eGangotri

ಕ್ಕಾಗಿಯೇ. ಆ ಆತ್ಮಗುಣಗಳು ದೊರೆತದ್ದಾದರೆ ಆಗ ಮಾತ್ರ ಜನ್ಮತಾಳುವುದರ ಗುರಿಯನ್ನು ಸಾಧಿಸಿದಂತಾಗುವುದು.

ಆ ಎಂಟು ಆತ್ಮಗುಣಗಳು ಯಾವುವೆಂದರೆ :—

೧. **ದಯಾ ಸರ್ವಭೂತೇಷು** :—ಎಲ್ಲಾ ಜೀವರಾಶಿಗಳಲ್ಲಿಯೂ ಕರುಣೆ ತೋರುವುದು.

೨. **ಕ್ಷಾಂತಿಃ** :—ತಾಳಿಕೊಳ್ಳುವುದು ; ಸಹನೆ.

೩. **ಅನಸೂಯಾ** :—ಇತರರ ಅಭ್ಯುದಯದ ಬಗ್ಗೆ ಅಸಹನೆಯಿಲ್ಲದಿರುವುದು.

೪. **ಶೌಚಮ್** :—ಶುಚಿಯಾಗಿರುವುದು. ಶರೀರ, ಮನಸ್ಸು ಇವುಗಳಲ್ಲಿ ಕೊಳೆಯಿಲ್ಲದಂತಿರುವುದು.

೫. **ಅನಾಯಾಸಃ** :—ಮಾಡಬೇಕಾದ್ದನ್ನೆಲ್ಲಾ ಕ್ಲೇಶಪಡದೆ ಮಾಡುವುದು.

೬. **ಮಂಗಳಮ್** :—ಯಾವಾಗಲೂ ಒಳ್ಳೆಯದನ್ನೇ ಆಡುವುದು.

೭. **ಅಕಾರ್ಪಣ್ಯಮ್** :—ಕೃಪಣತನವಿಲ್ಲದಿರುವುದು.

೮ **ನಿಸ್ಪೃಹಾ** :—ಯಾವುದರಲ್ಲೂ ಮಮತೆಯಿಲ್ಲದಿರುವುದು.

ಜೀವನ್ಮುಕ್ತನ ಲಕ್ಷಣಗಳಾದ ಈ ಎಂಟು ಆತ್ಮಗುಣಗಳೂ ಶ್ರೀನಿವಾಸನ ಬಾಲ್ಯದಲ್ಲಿಯೇ ಸ್ವಭಾವಜನ್ಯವಾಗಿ ಕಾಣಿಸಿಕೊಂಡವು. ಇವು ಪೂರ್ವಜನ್ಮ ಸುಕೃತಫಲ. ಇವರು ಪೀಠಕ್ಕೆ ಬಂದಮೇಲೆ ಈ ಗುಣಗಳು ಎದ್ದು ಕಾಣುತ್ತಿವೆ.

ಹನ್ನೊಂದು ತಿಂಗಳು ಕಳೆದಮೇಲೆ

ಶ್ರೀನಿವಾಸನಿಗೆ ಉಪನಯನ ನಡೆದ ವಿವರಗಳನ್ನೂ, ಅವನನ್ನು ಶೃಂಗೇರಿಯಲ್ಲಿ ಶ್ರೀಮಠದ ಪಾಠಶಾಲೆಯಲ್ಲಿ ಸೇರಿಸಿದ ವಿವರವನ್ನೂ ಹಿಂದೆ ಹೇಳಿದೆ. ವಿದ್ಯಾರ್ಥಿಯಾಗಿ ಶ್ರೀನಿವಾಸನು ಯಾವಾಗಲೂ ಓದುತ್ತಲೇ ಇದ್ದುದಕ್ಕಾಗಿ ಜೊತೆಗಾರರು ಒಂದೊಂದು ಸಲ ಕೀಟಲೆ ಮಾಡಿದರೆ ಅದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಣನೆಗೆ ತೆಗೆದುಕೊಳ್ಳದೆ ಅವರುಗಳು ಏಳುವುದಕ್ಕೆ ಮುಂಚೆಯೇ ತುಂಗಾ ನದಿಯ ದಡದಲ್ಲಿ ಕೂತುಕೊಂಡು ಓದುವನು.

ಹೀಗೆ ಹನ್ನೊಂದು ತಿಂಗಳು ಕಳೆದವು. ಒಂದು ದಿನ ಶೃಂಗೇರಿಯಿಂದ ಬೆಂಗಳೂರಿನಲ್ಲಿದ್ದ ಶ್ರೀ ರಾಮಶಾಸ್ತ್ರಿಗಳಿಗೆ ಒಂದು ಕಾಗದ ಬಂತು. ಅದನ್ನು ದೀಪದ ಬೆಳಕಿನಲ್ಲಿ ಓದಿ, ಸ್ವಲ್ಪ ಹೊತ್ತು ಏನೂ ಹೇಳದೆ ಮೌನವಾಗಿದ್ದರು ಶಾಸ್ತ್ರಿಗಳು. ಅದನ್ನು ಕಂಡ ಅವರ ಹೆಂಡತಿ ಶ್ರೀಮತಿ ವೆಂಕಟಲಕ್ಷ್ಮಮ್ಮನವರು "ಏನು ಕಾಗದ? ನೋಡಿಕೊಂಡು ಮಾತಾಡದೆ ಇದ್ದೀರಲ್ಲಾ!" ಎಂದು ಕೇಳಿದರು.

ರಾಮಶಾಸ್ತ್ರಿ :—ಏನೂ ಇಲ್ಲ; ಕಾಗದ ಶೃಂಗೇರಿಯಿಂದ ಬಂದಿದೆ.

ವೆಂಕಟಲಕ್ಷ್ಮಮ್ಮ :—ಮಗು ಸೌಖ್ಯವಾಗಿದಾನೆಯೇ?

ರಾಮಶಾಸ್ತ್ರಿ :—ಆಹಾ; ಸೌಖ್ಯವಾಗಿದಾನೆ.

ವೆಂಕಟಲಕ್ಷ್ಮಮ್ಮ :—ಹಾಗಾದರೆ, ಏನು ಯೋಚಿಸುತ್ತಿದ್ದೀರಿ?

ರಾಮಶಾಸ್ತ್ರಿ :—ಏನೂ ಇಲ್ಲ; ಅದರಲ್ಲಿ ಒಂದು ವಿಷಯ ಬರೆದಿದೆ. ಆ ವಿಷಯವಾಗಿ ನಿನ್ನನ್ನು ಕೇಳಬೇಕು.

ವೆಂಕಟಲಕ್ಷ್ಮಮ್ಮ :—ಏನು, ಅದು?

ರಾಮಶಾಸ್ತ್ರಿ :—ನಮ್ಮ ಹುಡುಗ ಶ್ರೀನಿವಾಸನಿಗೆ ಸಂನ್ಯಾಸಕೊಟ್ಟು ಶಿಷ್ಯನಾಗಿ ಮಾಡಿಕೊಳ್ಳುವುದಕ್ಕೆ ಪೀಠಾಧಿಪತಿಗಳಿಗೆ ಉದ್ದೇಶವಂತೆ. ಅದಕ್ಕೆ ತಾಯಿಯಾದ ನೀನು ಅನುಮತಿಕೊಡಬೇಕಂತೆ. ನಿನ್ನನ್ನು ಕೇಳಿ ತಿಳಿಸಬೇಕೆಂದು ಬರೆದಿದ್ದಾರೆ. ನಿನ್ನನ್ನು ಹೇಗೆ ಕೇಳುವುದು ಎಂದು ಯೋಚಿಸುತ್ತಿದ್ದೇನೆ.

ವೆಂಕಟಲಕ್ಷ್ಮಮ್ಮ —(ಸಂತೋಷದಿಂದ) ತುಂಬ ಸಂತೋಷ. ಅನುಮತಿ ಕೊಟ್ಟೆ ಎಂದು ಉತ್ತರ ಬರೆದುಬಿಡಿ. ನಮ್ಮ ವಂಶಕ್ಕೆ ಕ್ಷೇಮವುಂಟಾಗುತ್ತದೆ. ಹೀಗೆ ಸಂನ್ಯಾಸ ದೊರೆಯಬೇಕಾದರೆ ಕೊಟ್ಟು ಇಟ್ಟಿರಬೇಕು! ಸಮ್ಮತ ಎಂದು ಈ ಕ್ಷಣ ಮಠಕ್ಕೆ ಬರೆದುಬಿಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಮಶಾಸ್ತ್ರಿಗಳಿಗೆ ಇದು ಅನಿರೀಕ್ಷಿತವಾದ ಉತ್ತರ. ಕೂಡಲೆ ತಾಯಿಯ ಸಮ್ಮತಿಯನ್ನು ಶ್ರೀಮಠಕ್ಕೆ ತಿಳಿಯಪಡಿಸಿದರು ಶ್ರೀ ರಾಮಶಾಸ್ತ್ರಿಗಳು.

ಷಷ್ಟಿಂ ಕುಲಾನ್ಯತೀತಾನಿ ಷಷ್ಟಿಮಾಗಾಮಿಕಾನಿ ಚ |
ಕುಲಾನ್ಯುದ್ಧರತೇ ಪ್ರಾಜ್ಞಃ ಸಂನ್ಯಸ್ತಮಿತಿ ಯೋ ವದೇತ್ ||

[ಕಳೆದ ಕುಲಗಳರುವತ್ತು,
ಮುಂಬರುವ ಕುಲಗಳರುವತ್ತು,
ಉದ್ಧರಿಪ ನಿಷ್ಟನೂ ಪ್ರಾಜ್ಞ—
'ತೊರೆದೆ' ನಾನೆಂದ ಪ್ರಾಜ್ಞ]

ಎಂಬುದು ಶಾಸ್ತ್ರ. ಹಾಗೆಂದರೆ, 'ನಾನು ಸಂನ್ಯಾಸಾಶ್ರಮವನ್ನು ಪಡೆದೆ' ಎಂದು ಯಾವ ಮಹಾನುಭಾವ ಹೇಳುವನೋ, ಅವನಿಂದ ಅವನಿಗೆ ಹಿಂದಿನ ಅರುವತ್ತು ತಲೆಮೊರೆಗಳೂ, ಮುಂದಿನ ಅರುವತ್ತು ತಲೆಮೊರೆಗಳೂ ಮೇಲ್ಮೆ ಹೊಂದುತ್ತವೆ. ಆಪತ್ಸಂನ್ಯಾಸತೆಗೆದುಕೊಂಡರೂ ಇದೇ ಫಲ. ಈ ವಿಷಯ ಶ್ರೀ ವೆಂಕಟಲಕ್ಷ್ಮಮ್ಮನವರ ಮನಸ್ಸಿನಲ್ಲಿ ಶಾಸ್ತ್ರವನ್ನು ಓದದೆಯೇ ತೋರಿತು ಎಂಬುದು, ಶಿಷ್ಯರಾದ ನಾವು ಮಾಡಿದ ಭಾಗ್ಯವೆಂದೇ ಹೇಳಬೇಕು. "ಒಂದು ಜೀವ ಒಬ್ಬ ಮಹಾನುಭಾವನಾಗಿ ಅವತರಿಸಬೇಕಾಗಿದ್ದರೆ, ಅದಕ್ಕೆ ತಕ್ಕ ಯೋಗ್ಯತೆಯುಳ್ಳ ತಾಯಿಯನ್ನು ಹುಡುಕಿಕೊಂಡಲ್ಲವೇ ಗರ್ಭವಾಸ ಮಾಡಬೇಕು?"

ಸಂನ್ಯಾಸಕ್ಕೆ ಏರ್ಪಾಡು :

ಆಂಗೀರಸ ಸಂವತ್ಸರ ಜ್ಯೇಷ್ಠಶುದ್ಧ ಪಂಚಮಿ (22-5-1931) ದಿನದಂದು ಶ್ರೀನಿವಾಸನಿಗೆ ಸಂನ್ಯಾಸಕೊಡುವುದಾಗಿ ತೀರ್ಮಾನಿಸಲಾಯಿತು. ಅದಕ್ಕೆ ಎರಡು ದಿನ ಮೊದಲು ಸಾಯಂಕಾಲ ಶ್ರೀ ರಾಮಶಾಸ್ತ್ರಿಗಳೂ ಅವರ ಕುಟುಂಬದವರೂ ನರಸಿಂಹವನದಲ್ಲಿ ಶ್ರೀ ನರಸಿಂಹಭಾರತೀಸ್ವಾಮಿಗಳ ಅಧಿಷ್ಠಾನದ ಮುಂದುಗಡೆ ಕೂತುಕೊಂಡು ಶ್ರೀ ಜಗದ್ಗುರುಗಳ ಆಗಮನವನ್ನು ಎದುರುನೋಡುತ್ತಿದ್ದರು. ಆಗ ಬಂಧುಗಳಲ್ಲೊಬ್ಬರು, "ಶ್ರೀನಿವಾಸಾ, ನೀನು

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದ್ಗುರುವಾಗುವುದರಲ್ಲಿದ್ದೀಯೆ. ಇನ್ನು ಮೇಲೆ ನಿನ್ನೊಡನೆ ಸಹಜವಾಗಿ ಮಾತಾಡುವುದಕ್ಕಾಗುವುದಿಲ್ಲ. ನೀನು ಜಗದ್ಗುರುವಾದಮೇಲೆ ನಮ್ಮನು ಮರೆಯಕೂಡದು'' ಎಂದರು. ದಕ್ಕೆ ಶ್ರೀನಿವಾಸನು ಕೊಟ್ಟ ಉತ್ತರ ಆಶ್ಚರ್ಯಕರವಾಗಿತ್ತು. "ಒಬ್ಬರು ಮರ ಬೆಳಸುವುದಕ್ಕೆ ಇವತ್ತು ಭೂಮಿಯಲ್ಲಿ ಬೀಜ ನೆಟ್ಟರೆ; ಅದರ ಹಣ್ಣನ್ನು ತಿನ್ನಬೇಕು ಎಂದು ನಾಳೆಯೇ ಅವರ ಬಂಧುಗಳೆಲ್ಲ ಆಸೆಪಟ್ಟರೆ ಆಶ್ಚರ್ಯವಲ್ಲವೆ?" ಎಂದನು.

ಅದೇ ರಾತ್ರಿ ಇಂತಹುದೇ ಆದ ಮತ್ತೊಂದು ಸಂಗತಿ ನಡೆಯಿತು. ಹೊತ್ತು ಬಹಳವಾಗಿದ್ದರೂ, ಸ್ವಾಮಿಗಳಾಗಲಿರುವ ಶ್ರೀನಿವಾಸನು ತಂಗಿದ್ದ ಕೋಣೆಯಲ್ಲಿ ಕೆಲವರು ಬಂಧುಗಳು ಸೇರಿಕೊಂಡಿದ್ದರು. ಆಗ ಶ್ರೀಮಠದ ಸರ್ವಾಧಿಕಾರಿ ಶ್ರೀಕಂಠಶಾಸ್ತ್ರಿಗಳು ಅಲ್ಲಿ ಬಂದು, "ಶಿಷ್ಯಸ್ವಾಮಿಗಳ ಕೋಣೆಯಲ್ಲಿರುವವರೆಲ್ಲರೂ ದಯವಿಟ್ಟು ಹೊರಕ್ಕೆ ಬರಬೇಕು, ಅವರಿಗೆ ಮುಖ್ಯವಾದ ಕೆಲಸಗಳಿವೆ." ಎಂದರು. ಜೊತೆಗೆ ಒಂದು ಮಾತನ್ನೂ ಸೇರಿಸಿದರು. "ತೀರ ಹತ್ತಿರದ ಬಂಧುಗಳು ಮಾತ್ರ ಬೇಕಾದರೆ, ಇನ್ನೂ ಐದು ಅಥವಾ ಹತ್ತು ನಿಮಿಷ ಅವರೊಡನೆ ಇರಬಹುದು" ಎಂದರು. ಸರ್ವಾಧಿಕಾರಿಗಳ ಅಪ್ಪಣೆ ಕಠಿನವಾಗಿಯೇ ಇತ್ತು. ಎಲ್ಲರೂ ಕೋಣೆಯನ್ನು ಬಿಟ್ಟು ಹೊರಕ್ಕೆ ಬಂದು ಬಿಟ್ಟರು. ಹತ್ತಿರ ಬಂಧುಗಳಾದ ಐದಾರು ಜನಗಳು ಮಾತ್ರ ಒಳಗೇ ಕೂತಿದ್ದರು. ಇದಾದ ಮೇಲೆ ನಡೆದ ಸಂಭಾಷಣೆಯಲ್ಲಿ ಹೆತ್ತವರಿಗೆ ಕೂಡ ಆಶ್ಚರ್ಯವುಂಟಾಗುವಂತೆಯೂ, ಹಿರಿಯರೊಬ್ಬರಿಗೆ ಶ್ರೀನಿವಾಸನು ಪಾಠಕಲಿಸಿದಂತೆಯೂ ಒಂದು ಘಟನೆ ನಡೆಯಿತು. ಅದನ್ನು ಆ ಹಿರಿಯರು ಬದುಕಿರುವವರೆಗೂ ಮರೆಯಲಿಲ್ಲ. ''ಶ್ರೀನಿವಾಸ! ನಾಳೆ ಮೊದಲುಗೊಂಡು ಈ ರೀತಿ ಸಹಜವಾಗಿ ನಿನ್ನೊಡನೆ ಮಾತನಾಡಲಾಗುವುದಿಲ್ಲ. ಆದ್ದರಿಂದ, ನನ್ನಲ್ಲಿಯೂ, ಇಲ್ಲಿರುವ ನಿನ್ನ ಹತ್ತಿರದ ಬಂಧುಗಳಲ್ಲಿಯೂ ಇದುವರೆಗೆ ಇದ್ದ ಹಾಗೆಯೇ ಪ್ರೀತಿ ಇರಬೇಕು" ಎಂದರು ಆ ಹಿರಿಯರು. ಇದನ್ನು ಕೇಳಿದೊಡನೆಯೇ ಶ್ರೀನಿವಾಸನ ಮುಖದಲ್ಲಿ ಕಾಣಿಸಿಕೊಂಡ ಮಾರ್ಪಾಟಿನಿಂದ ಅವರ ಅಭಿಪ್ರಾಯ ಬಹಿರಂಗವಾಗಿಬಿಟ್ಟಿತು. ಮುಖ ಕೆಂಪಾಗಿ ತುಟಿಗಳು ಅದುರತೊಡಗಿದವು; ಹುಬ್ಬು ಗಂಟಿಕ್ಕಿತು. ನಿಧಾನವಾಗಿಯೂ ತೀರ್ಮಾನವಾಗಿಯೂ ಉತ್ತರ ಹೊರಬಂತು: "ನಿಮ್ಮ ಹಾಗೆ ವಯಸ್ಸಾದವರು ಈ ರೀತಿ ಹೇಳುವುದು ಸರಿಯಲ್ಲ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು. ಆ ಹಿರಿಯರಿಗೆ ಮಾತಾಡುವುದಕ್ಕೆ ನಾಲಗೆಯೇ ಏಳಲಿಲ್ಲ. ನಾಚಿ ತಲೆ ತಗ್ಗಿಸಿದರು. "ಸಮೋಽಹಂ ಸರ್ವಭೂತೇಷು",—"ಎಲ್ಲರಲ್ಲಿಯೂ ನಾನು ಸಮವಾಗಿ ಇರುವೆನು" ಎಂಬ ದೊಡ್ಡ ಗುಣ ಇಲ್ಲಿ ಕಾಣಬಂತು.

ಸಂನ್ಯಾಸತೆಗೆದುಕೊಳ್ಳುವುದಕ್ಕೆ ಹಿಂದಿನ ರಾತ್ರಿ ಶ್ರೀಕಂಠಶಾಸ್ತ್ರಿಗಳು ಶ್ರೀನಿವಾಸನನ್ನು ಕುರಿತು, "ನಾಳೆ ಸಂನ್ಯಾಸ ತೆಗೆದುಕೊಂಡಮೇಲೆ ನಿನ್ನ ತಂದೆಗೂ, ಉಳಿದ ಹಿರಿಯರೆಲ್ಲರಿಗೂ ನೀನು ನಮಸ್ಕಾರ ಮಾಡಲಾಗುವುದಿಲ್ಲ; ಆದ್ದರಿಂದ ಈಗಲೇ ಹೋಗಿ ಅವರುಗಳಿಗೆ ನಮಸ್ಕಾರಮಾಡಿ ಬರಬಹುದು" ಎಂದರು. (ಸಂನ್ಯಾಸಿಯನ್ನು ಅವರ ತಂದೆ ನಮಸ್ಕರಿಸಬೇಕು. ಆದರೆ ತಾಯಿಯನ್ನು ಸಂನ್ಯಾಸಿ ನಮಸ್ಕರಿಸಬೇಕು—ಎಂಬುದು ಶಾಸ್ತ್ರ: **ಪಿತೃವಂದ್ಯೋ ಹಿ ಮಸ್ಕರೀ, ಪ್ರಸೂರ್ವಂದ್ಯಾ ಪ್ರಯತ್ನತಃ**). ಶ್ರೀನಿವಾಸನು ಒಡನೆಯೇ ತನ್ನ ತಂದೆಯವರನ್ನೂ ಉಳಿದ ಹಿರಿಯರನ್ನೂ ನಮಸ್ಕರಿಸಿದನು.

ಸಂನ್ಯಾಸಾಶ್ರಮ ಸ್ವೀಕಾರ

೧೯೩೧ನೆಯ ವರ್ಷ ಮೇ ತಿಂಗಳು ೨೨ನೆಯ ತಾರೀಖು ಶೃಂಗೇರಿಯ ಚರಿತ್ರೆಯಲ್ಲಿ ಮುಖ್ಯವಾದ ದಿನ. ಮುಂದೆ ಬರುವ ಪೀಠಾಧಿಪತಿಗೆ ಸಂನ್ಯಾಸ ಕೊಡುವ ಮೊದಲು ಮಾಡಬೇಕಾದ ವೈದಿಕ ಕರ್ಮಗಳು ನಡೆಯುವ ಕಡೆಯ ದಿನ. ಅದಲ್ಲದೆ, ಆಗ ಪೀಠದಲ್ಲಿರುವ ಮಹಾಸನ್ನಿಧಾನಕ್ಕೂ ಅದು ಮುಖ್ಯವಾದ ದಿನವೇ. ಶಿಷ್ಯ ಸ್ವೀಕಾರವೆಂಬುದು ಸಾಮಾನ್ಯಕ್ರಮದಲ್ಲಿ ನಡೆಯುವ ಸಂಗತಿಯಾದರೂ, ಮಹತ್ತಾದ ಪೀಠದ ಹೊಣೆಗಾರಿಕೆಯ ಭಾರಗಳನ್ನು ಶಿಷ್ಯಸ್ವಾಮಿಗಳಿಗೆ ವಹಿಸಿಬಿಟ್ಟು, ಮಹಾಸನ್ನಿಧಾನವು ತಪಸ್ಸಿನಲ್ಲಿ ಅಧಿಕಾಧಿಕವಾಗಿ ನೆಲೆಗೊಳ್ಳುವ ಸ್ಥಿತಿಯನ್ನು ಹೆಚ್ಚುಗೊಳಿಸುವುದೂ ಆದ ದಿನ. ಹಿರಿಯ ಸನ್ನಿಧಾನಕ್ಕೆ ವಿಶೇಷ ಸಂತೋಷದ ದಿನ.

ಸಂನ್ಯಾಸಕೊಡುವ ಸಮಯದಲ್ಲಿ ಒಂದು ಸಂಪ್ರದಾಯವುಂಟು. ಸಂನ್ಯಾಸತೆಗೆದುಕೊಳ್ಳುವ ಹುಡುಗ ತನ್ನ ತಾಯಿಯಬಳಿ, "ನಾನು ಸಂನ್ಯಾಸ ತೆಗೆದುಕೊಳ್ಳುವುದಕ್ಕೆ ನನಗೆ ಅನುಮತಿ ಕೊಡು" ಎಂದು ಕೇಳಬೇಕು. ಅದಕ್ಕೆ ತಾಯಿ ನೇರವಾಗಿ ಸಮ್ಮತಿಕೊಡಬೇಕು. ಅದಾದಮೇಲೆ ಶಿಷ್ಯನು

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವನ್ನು, "ನನ್ನನ್ನು ಶಿಷ್ಯನಾಗಿ ತೆಗೆದುಕೊಂಡು ಮಹಾವಾಕ್ಯವನ್ನು ಉಪದೇಶಮಾಡಬೇಕು" ಎಂದು ಪ್ರಾರ್ಥಿಸಬೇಕು. ಇದು ನದೀತೀರದಲ್ಲಿ ಎಲ್ಲರೂ ಇರುವ ಕಾಲದಲ್ಲಿ ನಡೆಯತಕ್ಕದ್ದು. ಈ ವಿವರವನ್ನರಿತು ಶ್ರೀ ರಾಮ ಶಾಸ್ತ್ರಿಗಳು ತಮ್ಮ ಪತ್ನಿಗೆ "ನೀನು ಸಮ್ಮತಿಕೊಡುವಾಗ ಜನಗುಂಪು ನೆರೆದಿರುತ್ತದೆ. ಧೈರ್ಯವಾಗಿ ಸಮ್ಮದಿಯಿಂದ 'ಅನುಮತಿ ಕೊಟ್ಟೆ' ಎಂದು ಹೇಳಬೇಕು" ಎಂದು ಹೇಳಿದರು. ಆ ತಾಯಿಯೂ ಸಮ್ಮತಿಸಿದಳು. ಅನುಮತಿಕೊಡುವ ಸಮಯ ಬಂತು. ತುಂಗಾ ನದಿಯಲ್ಲಿ ವಟು ಶ್ರೀನಿವಾಸ ಶಾಸ್ತ್ರೀಯೂ ಜಗದ್ಗುರು ಶ್ರೀ ಚಂದ್ರಶೇಖರಭಾರತೀಸ್ವಾಮಿಗಳೂ ನಿಂತರು. ಶಿಷ್ಯಜನಗಳ ಗುಂಪು ದಡದಮೇಲೆ ನೆರೆದು ನಿಂತಿತು. ವಟು ಶ್ರೀನಿವಾಸ ತಾಯಿಯ ಅನುಮತಿ ಕೇಳಿದನು. ತಾಯಿ ವೆಂಕಟಲಕ್ಷ್ಮಮ್ಮನವರೂ ಅಧಿಕ ಸಂತೃಪ್ತಿಯಿಂದ "ಸಮ್ಮತ" ಎಂದಳು. ತಾಯ್ತಂದೆಯರಿಗೆ ಇದೊಂದು ಪರೀಕ್ಷಾಕಾಲ. ಲೋಕೋತ್ತರವಾದ ಸ್ಥಿತಿಯನ್ನು ಪಡೆಯುವ ಸಂನ್ಯಾಸಾಶ್ರಮವಾದರೂ ತನ್ನ ಮಗುವನ್ನು ಸಂನ್ಯಾಸಿಯಾಗಿಸುವುದಕ್ಕೆ ಸಮ್ಮತಿಕೊಡುವ ತಾಯ್ತಂದೆಯರು ವಿರಳ; ಕೆಲವರು ಮಾತ್ರವೇ. ಶೃಂಗೇರೀ ಮಠದ ಶಿಷ್ಯರ ಭಾಗ್ಯವು ಈ ಅನುಮತಿಯನ್ನು ಮನಸ್ಸಮಾಧಾನದಿಂದ ಕೊಡುವಂತೆ ವೆಂಕಟ ಲಕ್ಷಮ್ಮನವರನ್ನು ಪ್ರೇರಿಸಿತೆಂದು ತೋರುತ್ತದೆ ಆಮೇಲೆ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳು ಶ್ರೀನಿವಾಸಶಾಸ್ತ್ರೀಗೆ 'ಶ್ರೀ ಅಭಿನವ ವಿದ್ಯಾತೀರ್ಥರು' ಎಂಬ ಯೋಗಪಟ್ಟವನ್ನು ಕೊಟ್ಟು ಮಹಾವಾಕ್ಯ ಉಪದೇಶಮಾಡಿದರು.

ಮರೆಯಲಾಗದ ಕೆಲವು ಸಂಗತಿಗಳು

ಸಂನ್ಯಾಸಕೊಟ್ಟ ದಿನ ಸಾಯಂಕಾಲ ಶೃಂಗೇರಿಯ ಬೀದಿಗಳಲ್ಲಿ ಉಭಯ ಸನ್ನಿಧಾನಗಳ ಮೆರವಣಿಗೆ ಏರ್ಪಾಡಾಗಿತ್ತು. ಶ್ರೀಮಠದ ಎರಡು ಪಲ್ಲಕ್ಕಿಗಳನ್ನೂ ಸಿದ್ಧಗೊಳಿಸಿಟ್ಟಿದ್ದರು. ಮುಂದುಗಡೆ ಹಿರಿಯ ಸ್ವಾಮಿಗಳಿಗೆ ಚಿನ್ನದ ಪಲ್ಲಕ್ಕಿಯೂ, ಅದರ ಹಿಂದುಗಡೆ ಕಿರಿಯ ಸ್ವಾಮಿಗಳಿಗೆ ಬೆಳ್ಳಿ ಪಲ್ಲಕ್ಕಿಯೂ ಅಣಿಯಾಗಿಟ್ಟಿತ್ತು. ಉಭಯ ಸನ್ನಿಧಾನಗಳೂ ಶ್ರೀ ಶಾರದಾಂಬೆಯ ದರ್ಶನ ಮಾಡಿ, ದೇವಾಲಯಕ್ಕೆ ಪ್ರದಕ್ಷಿಣೆಮಾಡಿ, ಗುರು ಎಡಪಕ್ಕದಲ್ಲಿಯೂ ಶಿಷ್ಯ ಬಲಪಕ್ಕದಲ್ಲಿಯೂ ಬಂದು ದೇವಾಲಯದ ಮುಂದುಗಡೆ ನಿಂತರು. ಗುರುವಿನ

Sri Vidyabharathi Book Centre, Sringeri

CC-0. In Public Domain. Digitized by eGangotri

ತೋರುಬೆರಳನ್ನು ಶಿಷ್ಯಸ್ವಾಮಿಗಳು ತಮ್ಮ ಬಲಗೈಯಲ್ಲಿ ಹಿಡಿದುಕೊಂಡಿದ್ದರು. ಪಲ್ಲಕ್ಕಿಯ ಪಕ್ಕಕ್ಕೆ ಬರುವವರೆಗೂ ಹೀಗೆ ಬಂದರು. ಹಿಂದೆ ಇದ್ದ ಬೆಳ್ಳಿ ಪಲ್ಲಕ್ಕಿಯು ಬಳಿಗೆ ಬಂದೊಡನೆ ಗುರುಗಳು ಸರಕ್ಕನೆ ತಮ್ಮ ಬೆರಳನ್ನು ಎಳೆದು ಕೊಂಡು ಆ ಪಲ್ಲಕ್ಕಿಯಲ್ಲಿ ಕುಳಿತುಬಿಟ್ಟರು. ಶಿಷ್ಯಸ್ವಾಮಿಗಳನ್ನು ಕುರಿತು ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳಬೇಕೆಂದು ಮೃದುವಾಗಿ ಹೇಳಿದರು. ಶಿಷ್ಯಸ್ವಾಮಿಗಳ ಮುಖದಲ್ಲಿ ಕಾಣಿಸಿಕೊಂಡ ಕಳವಳ ಸ್ಪಷ್ಟವಾಗಿ ತಿಳಿಯಿತು. ಅಲ್ಲಿದ್ದ ಎಲ್ಲಾ ಜನಗಳಿಗೂ ಏನೊಂದೂ ತೋರಲಿಲ್ಲ. ಮಠದಲ್ಲಿ ಮುಖ್ಯರಾದ ಕೆಲವರು ಹಿರಿಯರು ಈ ಸ್ಥಿತಿಯನ್ನರಿತು ಧೈರ್ಯಮಾಡಿ, ನಮ್ರಭಾವದಿಂದ ದೊಡ್ಡಸ್ವಾಮಿಗಳ ಹತ್ತಿರ ಹೋಗಿ, ಚಿನ್ನದ ಪಲ್ಲಕ್ಕಿಯಲ್ಲಿ ಕೂತುಕೊಳ್ಳ ಬೇಕೆಂದು ಅವರಲ್ಲಿ ಪ್ರಾರ್ಥಿಸಿದರು. ಆದರೆ ಅವರುಗಳ ಯತ್ನ ಒಂದೂ ಫಲಿಸಲಿಲ್ಲ. ಶಿಷ್ಯಸ್ವಾಮಿಗಳೂ ಏನು ಮಾಡುವುದೆಂದು ತಿಳಿಯದೆ ಅನುಮಾನಿ ಸುತ್ತಾ ನಿಂತುಕೊಂಡರು.

ಆ ಸಮಯದಲ್ಲಿ ಶ್ರೀಮಠದ ಸರ್ವಾಧಿಕಾರಿಗಳು ಬಂದು ಮಹಾಸನ್ನಿಧಾನ ವನ್ನು ಚಿನ್ನದ ಪಲ್ಲಕ್ಕಿಯಲ್ಲಿ ಮಂಡಿಸಬೇಕೆಂದು ಪ್ರಾರ್ಥಿಸಿಸರು. ಹಿರಿಯ ಸನ್ನಿಧಾನ ತಮ್ಮ ತೀರ್ಮಾನವನ್ನು ಪ್ರಕಟವಾಗಿ ತಿಳಿಸಿದರು: "ಇವತ್ತು ನಡೆದ ಸಂಗತಿಗಳ ಅರ್ಥವನ್ನೂ ಉದ್ದೇಶವನ್ನೂ ನೀವು ಇಷ್ಟು ಬೇಗ ಮರೆತುಬಿಟ್ಟರಾ? ಒಂದು ವೇಳೆ ಮರೆತಿದ್ದರೆ, ಹೇಳುತ್ತೇವೆ ಕೇಳಿ; ಅದನ್ನು ಯಾವಾಗಲೂ ನಿಮ್ಮ ನೆನಪಿನಲ್ಲಿಟ್ಟುಕೊಂಡಿರಿ: ಇಂದು ಮೊದಲು ಈ ಪೀಠಕ್ಕೆ ಸಲ್ಲುವ ಸಕಲ ಮರ್ಯಾದೆಗಳೂ ವೈಭವಗಳೂ ಎಲ್ಲಾ ಅವರಿಗೇ (ಎಂದು ಚಿಕ್ಕಸ್ವಾಮಿ ಗಳನ್ನು ತೋರಿಸಿ) ಸೇರತಕ್ಕದ್ದು, ನನಗಲ್ಲ. ಇನ್ನೂ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅದನ್ನೂ ಚೆನ್ನಾಗಿ ಗಮನಿಸಿ. ಇನ್ನು ನನಗೆ ಬೇಕಾಗಿರುವುದು ಒಂದೇ ಒಂದು. ನನ್ನನ್ನು ಒಂಟಿಯಾಗಿ, ಪ್ರತ್ಯೇಕವಾಗಿ ಬಿಟ್ಟುಬಿಡಿ. ಈಗಿರುವ ಲೋಕಜೀವನದ ಶಾಂತಿಹೀನಸ್ಥಿತಿಯಿಂದ ತೊಲಗಿ ಹೋಗಿ ದೂರ ಇರುವುದು ನನ್ನ ಅಪೇಕ್ಷೆ" ಎಂದರು. ಅವರ ಜೀವನ ಚರಿತ್ರೆ ಯನ್ನು ಓದಿದರೆ, ಈ ಸಂಭಾಷಣೆ ಅವರ ಅಂತರ್ಮುಖಸ್ಥಿತಿಯನ್ನು ಎತ್ತಿ ತೋರಿಸುವ ಹೆಗ್ಗುರುತಾಗಿತ್ತು ಎನ್ನಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿ ಸೇರಿದ್ದ ಎಲ್ಲರನ್ನೂ ಈ ಉತ್ತರ ಸ್ತಬ್ಧರನ್ನಾಗಿ ಮಾಡಿತು. ಮಹಾ ಸನ್ನಿಧಾನದ ಅಪ್ಪಣೆ ಪ್ರಕಾರವೇ ಊರ ಮೆರವಣಿಗೆ ನಡೆಯಿತು. ಸಂಕ್ಷೇಪವಾಗಿ ಹೇಳುವುದಾದರೆ, ಈ ದಿನವೇ ಮಹಾಸನ್ನಿಧಾನದವರು, ಶ್ರೀಮಠದ ಸಕಲ ಜವಾಬ್ದಾರಿಗಳ್ಳು, ಮಹಿಮೆ, ಆಡಳಿತನಿರ್ವಾಹ ಎಲ್ಲವನ್ನೂ ತಮ್ಮ ಶಿಷ್ಯರಾದ ಚಿಕ್ಕಸನ್ನಿಧಾನಕ್ಕೆ ಒಪ್ಪಿಸಿಬಿಟ್ಟುದ್ದಾಗಿ ತೀರ್ಮಾನಿಸಿಕೊಂಡು, ತಾವು ಏಕಾಂತ ಸ್ಥಿತಿಯಲ್ಲಿ ನೆಲಸಿ ಅದು ಅವಿಚ್ಛಿನ್ನವಾದ ತಪೋನೆಲೆಯಾಗುವಂತೆ ಆತ್ಮಾನು ಸಂಧಾನ ನಿರತರಾದರು. ಮಹಾಸನ್ನಿಧಾನದ ಜೀವನದಲ್ಲಿ ಅವರ ಲಕ್ಷ್ಯಕ್ಕೂ, ಆ ಬಳಿಕ ಅವರೇರಿದ್ದ ಮಹೋನ್ನತ ಸ್ಥಿತಿಗೂ ಈ ಘಟನೆ ಕೀಲಿಕೈಯಂತಿರು ವುದರಿಂದ ಇದನ್ನು ಇಲ್ಲಿ ವಿಶೇಷವಾಗಿ ಎತ್ತಿ ಹೇಳಲಾಯಿತು.

ಮತ್ತೊಂದು ಮುಖ್ಯ ಸಂಗತಿಯೂ ಅಂದೇ ನಡೆಯಿತು. ಅವತ್ತು ರಾತ್ರಿ ಉಭಯ ಸನ್ನಿಧಾನಗಳೂ ಸ್ನಾನಾನುಷ್ಠಾನಗಳನ್ನು ಮುಗಿಸಿಕೊಂಡು ಶ್ರೀ ಶಾರದಾಂಬೆಯ ದೇವಾಲಯಕ್ಕೆ ಬಂದರು. ಗುರುಗಳು ತಮ್ಮ ಶಿಷ್ಯನನ್ನು ಶ್ರೀ ಶಾರದಾದೇವಿಯ ಉಪಾಸನೆಯಲ್ಲಿ ನೆಲೆಗೊಳಿಸುವ ಸಂದರ್ಭ ಒದಗಿಬಂತು. ಇಬ್ಬರು ಸ್ವಾಮಿಗಳೂ ಶ್ರೀ ಶಾರದಾಂಬೆಯ ದೇವಾಲಯದಲ್ಲಿ ಗರ್ಭಗೃಹದ ಬಾಗಿಲ ಹೊಸಿಲ ಬಳಿ ಬಂದರು. ಅವಸರವಾಗಿ ಬಾಗಿಲ ಹೊಸಿಲನ್ನು ದಾಟಿ ಚಿಕ್ಕಸನ್ನಿಧಾನವು ಒಳಗೆ ಹೋಗುವವರ ಹಾಗೆ ತೋರಿತು. ದೊಡ್ಡ ಸನ್ನಿಧಾನ ಅವರನ್ನು ಕುರಿತು, ಸ್ವಲ್ಪ ನಿಧಾನವಾಗಿ ಬರುವಂತೆ ಹೇಳಿದರು. ಆಗ ಈ ಕೆಳಗೆ ಕಂಡಂತೆ ಸಂಭಾಷಣೆ ನಡೆಯಿತು.

ಹಿರಿಯ ಸನ್ನಿಧಾನ—ನಾವು ಈಗ ಎಲ್ಲಿಗೆ ಹೋಗುತ್ತಿದ್ದೇವೆ, ಗೊತ್ತೇ ?

ಕಿರಿಯ ಸನ್ನಿಧಾನ—ಶ್ರೀ ಶಾರದಾಂಬೆಯ ದೇವಾಲಯದೊಳಕ್ಕೆ.

ಹಿರಿಯ ಸನ್ನಿಧಾನ—ಅಷ್ಟು ಮಾತ್ರವೇ ಅಲ್ಲ. ಇದೆಲ್ಲವೂ ನಮ್ಮ ತಾಯಿಯ ಮನೆ. ಈಗ ತಾಯಿಯ ಸ್ವಂತ ಕೋಣೆಯೊಳಕ್ಕೆ ಹೋಗುತ್ತಿದ್ದೇವೆ. ನಮ್ಮ ತಾಯಿ ಸಾಧಾರಣವಾಗಿ ಲೋಕದಲ್ಲಿ ಕಾಣಬರುವ ಎಲ್ಲ ತಾಯಿಯರಂತೆ ಅಲ್ಲ. ಏಕೆಂದರೆ, ನಾವು ಏನೇನನ್ನು ಕೇಳುವೆವೋ ಅದನ್ನೆಲ್ಲಾ ಕೊಡುವುದಕ್ಕೆ ಸಮರ್ಥಳಾದವಳು. ಕೊಟ್ಟೇ ಕೊಡುತ್ತಾಳೆ. ಹೌದು, ಏನು ಕೇಳಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಿಯೇ, ಕೊಡುತ್ತಾಳೆ. ಆದ್ದರಿಂದ ನಾವು ಈ ತಾಯಿಯ ಸಮೀಪಕ್ಕೆ ಹೋಗುವಾಗ ನೆಮ್ಮದಿಯಿಂದಲೂ ಪೂರ್ಣನಂಬಿಕೆಯಿಂದಲೂ ಹೋಗಬೇಕು.

ಇದರಿಂದ ಶ್ರೀಶಾರದಾದೇವಿಯ ಮಹಿಮೆಯನ್ನೂ ಆಕೆಯನ್ನು ಉಪಾಸಿಸುವುದರ ಫಲವನ್ನೂ ಲೋಕಕ್ಕೆ ಎತ್ತಿ ತೋರಿಸಿರುವರೆಂಬಂತಿದೆ. ಶ್ರೀ ಆದಿಶಂಕರಾಚಾರ್ಯರಿಂದ ಶ್ರೀ ಚಕ್ರದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಶಾರದಾಂಬೆಯ ಮೂರ್ತಿಯನ್ನು ಎಲ್ಲರೂ ಈ ಭಾವನೆಯಿಂದ ಚೆನ್ನಾಗಿ ದರ್ಶನ ಮಾಡಿ, ಅದನ್ನು ಸದಾಕಾಲವೂ ಮನಸ್ಸಿನಲ್ಲಿ ಇಟ್ಟುಕೊಂಡು ಸಕಲ ಶ್ರೇಯಸ್ಸುಗಳನ್ನೂ ಪಡೆಯಬೇಕು -- ಎಂಬುದನ್ನು ಜಗದ್ಗುರುಗಳು ಉಪದೇಶಿಸಿದ್ದಾರೆಂದು ತಿಳಿಯಬೇಕು.

ಅದ್ವಿತೀಯ ಪ್ರಗತಿ

ಹಿರಿಯ ಸನ್ನಿಧಾನವು ಸದಾ ತಪಸ್ಸಿನಲ್ಲಿಯೇ ತೊಡಗಿರಬೇಕೆಂಬ ಮನಸ್ಸುಳ್ಳವರಾದರೂ ಶ್ರೀಮಠದ ನಿರ್ವಾಹವಿಷಯಗಳಲ್ಲಿ ಕಿರಿಯ ಸನ್ನಿಧಾನಕ್ಕೆ ಅವಶ್ಯವಾದ ಅನುಭವವುಂಟುಮಾಡಿಕೊಡುವುದರಲ್ಲಿಯೂ ಗಮನಕೊಡುತ್ತಾ ಬಂದರು. ಈ ತಯಾರಿಕೆ ಒಂದು ವಿಶೇಷಮಾರ್ಗ; ಉಳಿದ ಗುರುಶಿಷ್ಯ ಸಂಬಂಧಗಳಂತಿರಲಿಲ್ಲ. ತಾಯಿ ಮಗುವನ್ನು ತನ್ನ ಮಾರ್ಗದಲ್ಲಿಯೇ ಬೆಳಸುವ ಹಾಗೆ, ಜೀವನ್ಮುಕ್ತರಾದ ಗುರುಗಳು ತಮ್ಮ ಶಿಷ್ಯನನ್ನೂ ಜೀವನ್ಮುಕ್ತನಾಗಿರುವಂತೆಯೇ ಬೆಳಸಿದರು. ಅದರಲ್ಲಿ ಪೂರ್ಣ ಫಲವನ್ನೂ ತಾವೇ ಕಂಡರು. ಹಾಗೆಂದಮೇಲೆ, ಇದು ಅಸಾಧಾರಣವಾದ ಮಾರ್ಗವಲ್ಲದೆ ಮತ್ತೇನು? ಇದು ಶೃಂಗೇರೀ ಮಠದ ಒಂದು ಅನನ್ಯ ಸದೃಶಮಹಿಮೆ, ಜೀವನ್ಮುಕ್ತಪರಂಪರೆ ಎಂದೇ ಹೇಳಬೇಕು.

ಸಂನ್ಯಾಸ ತೆಗೆದುಕೊಂಡ ಸುಮಾರು ಆರು ವರ್ಷಗಳೊಳಗೇ ಚಿಕ್ಕ ಸ್ವಾಮಿಗಳು ಕಾವ್ಯ, ನಾಟಕ, ನ್ಯಾಯಶಾಸ್ತ್ರ ಮೊದಲಾದವುಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದುಬಿಟ್ಟರು. ಆದಿಶಂಕರಾಚಾರ್ಯ ಭಗವತ್ಪಾದರ ಭಾಷ್ಯ ಪಾಠವು ಮಹಾಸನ್ನಿಧಾನದಿಂದ ನೇರವಾಗಿ ಕಿರಿಯ ಸನ್ನಿಧಾನಕ್ಕೆ ಪೂರ್ತಿಯಾಗಿ ಉಪದೇಶಮಾಡಲ್ಪಟ್ಟಿತೆಂಬುದು ಗಮನಾರ್ಹವಾದದ್ದು. ಕಿರಿಯ ಸನ್ನಿಧಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ಓದಿನಲ್ಲಿ ಹೆಚ್ಚಾದ ಅಕ್ಕರೆಯುಳ್ಳವರು. ಇವರಿಗೆ ಬಹು ಶೀಘ್ರವಾಗಿಯೇ ಮೀಮಾಂಸಶಾಸ್ತ್ರ, ತರ್ಕಶಾಸ್ತ್ರ, ಇವುಗಳಲ್ಲಿ ಪೂರ್ಣಪಾಂಡಿತ್ಯ ಉಂಟಾಯಿತು. ಮಹಾಸನ್ನಿಧಾನದ ಹಾಗೆಯೇ ಇವರೂ ರಾತ್ರಿ ಬಹಳ ಹೊತ್ತು ಓದುವರು. ಭಾಷ್ಯಪಾಠವನ್ನು ಹೇಳಿಕೊಡುವಾಗಲೇ ನಡುನಡುವೆ ಮಠದ ಪ್ರಾಚೀನ ವಿಷಯಗಳು ಸಂಪ್ರದಾಯಗಳು, ಮಂತ್ರಶಾಸ್ತ್ರದ ಸೂಕ್ಷ್ಮಗಳು, ಇವುಗಳ ವಿಷಯ ವಾಗಿಯೂ ಮಹಾಸನ್ನಿಧಾನವು ಶಿಷ್ಯಸ್ವಾಮಿಗಳಿಗೆ ಉಪದೇಶಿಸುವರು. ಅನುಭವ ಪೂರ್ವಕವಾದ ಉಪದೇಶಗಳೊಡನೆ ಮಂತ್ರಶಾಸ್ತ್ರದ ಹಿರಿಮೆಯ ಬೋಧೆಯೂ ದೊರೆತದ್ದು ಬಹಳ ಶ್ಲಾಘ್ಯವಾದುದು.

ತಮ್ಮ ಶಿಷ್ಯನ ಮೇಧಾಶಕ್ತಿ, ಶಾಂತಿಸ್ವಭಾವ, ಗುರುಭಕ್ತಿ, ದೈವಭಕ್ತಿ ಇವುಗಳನ್ನು ಕಂಡ ಗುರುಗಳು ಅವುಗಳನ್ನು ಕುರಿತು ಅಲ್ಲಿ ಬರುವ ಶಿಷ್ಯರುಗಳ ಬಳಿ ಅಡಿಗಡಿಗೆ ಹೇಳುತ್ತಿದ್ದದ್ದುಂಟು. ತಮ್ಮ ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳೇ ಪುನರವತಾರಮಾಡಿ ತಮಗೆ ಶಿಷ್ಯ ರಾಗಿ ದೊರೆತಿದ್ದಾರೆ ಎಂದು ಅವರು ಭಾವಿಸಿದ್ದರು. ಚಿಕ್ಕಸನ್ನಿಧಾನವಾದರೋ ಗುರುವಿನ ಉಪದೇಶಗಳನ್ನು ಅತ್ಯಂತ ಶ್ರದ್ಧೆಯಿಂದ ಗ್ರಹಿಸಿ ಅವರ ಮಾರ್ಗ ವನ್ನೇ ಹಿಡಿದು ಬಂದರು. ಹೀಗಾಗಿ, ಗುರುವಿನ ಮಹಿಮೆ ಶಿಷ್ಯನಲ್ಲೂ ಕಾಣಿ ಕೊಂಡಿತು.

ಒಂದು ಸಲ ಉತ್ತರದೇಶದಿಂದ ಒಬ್ಬ ತರ್ಕವಿದ್ವಾಂಸರು ಶ್ರೀಮಠಕ್ಕೆ ಆಚಾರ್ಯದರ್ಶನಕ್ಕಾಗಿ ಬಂದರು. ತರ್ಕಶಾಸ್ತ್ರದಲ್ಲಿ ಒಂದು ಸೂಕ್ಷ್ಮವಾದ ವಿಷಯದ ಬಗ್ಗೆ ಹಿರಿಯ ಸನ್ನಿಧಾನದ ಬಳಿ ವಿವರಣೆ ಕೇಳಿ ತಿಳಿದುಕೊಳ್ಳಬೇಕು ಎಂಬುದು ಅವರ ಉದ್ದೇಶ. ಆಗ ಚಿಕ್ಕ ಸನ್ನಿಧಾನಕ್ಕೆ ತರ್ಕಪಾಠ ನಡೆಯುತ್ತ ಇದ್ದ ಕಾಲ. ಆದರೆ ಆ ಶಾಸ್ತ್ರಪಾಠ ಅವರಿಗೆ ಆವತ್ತು ಪೂರ್ತಿಯಾಗಿ ಅಗಲಿಲ್ಲ. ಇಬ್ಬರೂ ಸನ್ನಿಧಾನಗಳೂ ಜತೆಜತೆಯಾಗಿ ಕುಳಿತಿರುವ ಸಮಯದಲ್ಲಿ ಉತ್ತರ ದೇಶದ ವಿದ್ವಾಂಸರಿಗೆ ದರ್ಶನಕೊಡಲಾಯಿತು. ದೊಡ್ಡ ಸನ್ನಿಧಾನದಲ್ಲಿ ವಿದ್ವಾಂಸರು ತಮಗೆ ಉಂಟಾಗಿದ್ದ (ತರ್ಕಶಾಸ್ತ್ರ) ಸಂದೇಹವನ್ನು ತಿಳಿಯಪಡಿಸಿ ಆ ವಿಷಯವಾಗಿ ವಿವರಣೆ ಹೇಳಬೇಕೆಂದು ಪ್ರಾರ್ಥಿಸಿದರು. ಒಡನೆಯೇ ಮಹಾಸನ್ನಿಧಾನವು ಚಿಕ್ಕ ಸನ್ನಿಧಾನವನ್ನು ಕುರಿತು " ನೀವು ಇದಕ್ಕೆ ಉತ್ತರ

Sri Vidyabharathi Book Centre, Sringeri

CC-0. In Public Domain. Digitized by eGangotri

ಹೇಳಿ" ಎಂದರು. ಅದಕ್ಕೆ ಆ ವಿದ್ವಾಂಸನು ಹಿರಿಯರನ್ನು ಕುರಿತು, "ತಮ್ಮಿಂದ ವಿವರಣೆ ಕೇಳಲು ಆಸೆಪಡುತ್ತೇನೆ. ತಮ್ಮ ಶಿಷ್ಯರಿಂದ ಅಲ್ಲ" ಎಂದರು. ಅದಕ್ಕೆ ದೊಡ್ಡ ಸನ್ನಿಧಾನ, "ನಮ್ಮ ಶಿಷ್ಯರು ಹೇಳುತ್ತಾರೆ. ಆದರಲ್ಲಿ ಮತ್ತೆಯೂ ವಿವರಣೆ ಅವಶ್ಯವೆನ್ನಿಸಿದರೆ ಆಗ ನಾವು ಹೇಳುತ್ತೇವೆ" ಎಂದರು. ಹೀಗೆ ಹೇಳಿ ತಮ್ಮ ಶಿಷ್ಯರನ್ನು ಗುರುಗಳು ಮತ್ತೆ ನೋಡಿದರು. ಶಿಷ್ಯನಮೇಲೆ ಗುರುವಿನ ಕರುಣಾಕಟಾಕ್ಷ ಬಿತ್ತು. ಒಡನೆಯೇ ಬಹು ಸುಲಭವಾಗಿಯೂ ಸ್ಪಷ್ಟವಾಗಿಯೂ ವಿಚಾರ ಮಥನಮಾಡಿ ವಿದ್ವಾಂಸರ ಸಂದೇಹವನ್ನು ಚಿಕ್ಕ ಸನ್ನಿಧಾನ ಪರಿಹರಿಸಿದರು. ವಿದ್ವಾಂಸರು ಆಶ್ಚರ್ಯಚಕಿತರಾಗಿ ಎದ್ದು ಪೂರ್ಣವಾಗಿ ಉಭಯ ಸನ್ನಿಧಾನಗಳಿಗೂ ನಮಸ್ಕರಿಸಿ, ಹಿರಿಯರನ್ನು ಕುರಿತು, "ನಾನೆಂದುಕೊಂಡಿದ್ದದ್ದು ತಪ್ಪು. ಅವರಿಗೆ ಚಿಕ್ಕವಯಸ್ಸು, ವಿದ್ವತ್ತು ಸಾಮಾನ್ಯವಾಗಿರಬಹುದು, ಎಂದುಕೊಂಡಿದ್ದೆ. ನನ್ನ ಸಂದೇಹವೀಗ ಪರಿಹಾರವಾಗಿ ವಿಷಯ ಸ್ಪಷ್ಟವಾಯಿತು. ತಮ್ಮ ಕಟಾಕ್ಷವೀಕ್ಷಣೆಯಿಂದಲೇ (ನಯನ ದೀಕ್ಷೆ) ಶಿಷ್ಯನಿಗೆ ಆವಶ್ಯಕ ಶಕ್ತಿಯನ್ನುಂಟುಮಾಡುವ ಪ್ರತಿಭೆ ತಮ್ಮಲ್ಲಿದೆಯೆಂದು ತಿಳಿದುಕೊಂಡೆ" ಎಂದು ಹೇಳಿದರು. ಅಂತೇವಾಸಿಗಳಾದ ಶಿಷ್ಯರಿಗೆ ಗುರುವಿನ ಕೃಪೆ ಉಂಟಾಗುವುದಕ್ಕೆ ಹಲವು ಮಾರ್ಗಗಳುಂಟು ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಶಿಷ್ಯರನ್ನು ತಮ್ಮಂತೆಯೇ ರೂಪಿಸಿಕೊಂಡರು

ಶೃಂಗೇರಿಗೆ ಬರುವ ಶಿಷ್ಯರುಗಳೆಲ್ಲರೂ ಅಲ್ಲಿ ಬಂದು ಇಳಿದ ಕೂಡಲೆ ಹಿರಿಯ ಸನ್ನಿಧಾನವನ್ನು ದರ್ಶನಮಾಡುವುದರಲ್ಲಿ ಮಾತ್ರವೇ ಉತ್ಸಾಹವುಳ್ಳವರಾಗಿರುತ್ತಿದ್ದರು. ಅವರನ್ನೇ ಪೀಠಾಧಿಪತಿಯಾದ ಜಗದ್ಗುರುವೆಂದು ಭಾವಿಸಿದರು. ಚಿಕ್ಕ ಸನ್ನಿಧಾನವನ್ನು ಸಾವಕಾಶವಾಗಿ ದರ್ಶಿಸುವರು. ಹಲವರು ದೊಡ್ಡ ಸನ್ನಿಧಾನವನ್ನು ಮಾತ್ರವೇ ದರ್ಶನಮಾಡಿಬಿಟ್ಟು ತಮ್ಮ ಯಾತ್ರೆಯನ್ನು ಸರಿಯಾಗಿ ಮುಗಿಸಿದೆನೆಂದು ಭಾವಿಸಿಕೊಂಡು ಊರಿಗೆ ಹಿಂದಿರುಗುವುದೂ ಉಂಟು. ಇದು ಹಿರಿಯವರ ಕಿವಿಗೆ ಬಿತ್ತೆಂದು ತೋರುತ್ತದೆ. ಇದು ಅವರ ಮನಸ್ಸಿಗೆ ಅತೃಪ್ತಿಯನ್ನುಂಟುಮಾಡಿತು. ಈ ವಿಷಯವಾಗಿ ಕೆಲವು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲ ಯೋಚನೆಮಾಡಿ ಒಂದು ಉಪಾಯವನ್ನು ಹುಡುಕಿದರು. ಅದು ಅವರ ಸ್ವಂತ ತೀರ್ಮಾನ. ಸ್ಥಿರವಾದ ತೀರ್ಮಾನ, ಶಿಷ್ಯರುಗಳನ್ನೂ ಚೆನ್ನಾಗಿ ತಿದ್ದಿತು.

ಬಹು ದೂರದಿಂದ ಬರುವ ಶಿಷ್ಯರುಗಳು ಅಪೂರ್ವವಾದ ಫಲಗಳು ಪುಷ್ಪಗಳು—ಇವನ್ನು ಸ್ವಾಮಿಗಳಿಗೆ ಸಮರ್ಪಿಸಬೇಕೆಂದು ತೆಗೆದುಕೊಂಡು ಬರುವುದು ವಾಡಿಕೆ. ಅವರುಗಳು ಬಂದಕೂಡಲೆ ಹಿರಿಯ ಗುರುಗಳು ಸಾಧಾರಣವಾಗಿ ಅವರ ಕುಶಲಾದಿಗಳನ್ನು ವಿಚಾರಿಸಿ, ಒಂದೊಂದು ಫಲವನ್ನೂ ಎತ್ತಿ ಹಿಡಿದು ನೋಡಿ, ಮೆಚ್ಚಿ, ಮತ್ತೆ ಅವನ್ನು ಆ ತಟ್ಟೆಯಲ್ಲೇ ಇಟ್ಟು, "ಇವು ಚೆನ್ನಾಗಿದೆ. ಗುರುವಿಗೆ ಸಮರ್ಪಿಸಲು ಯೋಗ್ಯವಾಗಿಯೇ ಇವೆ" ಎನ್ನುವರು. ತೆಗೆದುಕೊಂಡು ಬಂದ ಶಿಷ್ಯನಿಗೆ ಮನಸ್ಸಿನಲ್ಲಿ ಗೊಂದಲವುಂಟಾಗುವುದು. "ನಮ್ಮ ಮಹಾಸನ್ನಿಧಾನವೇ 'ಗುರುವಿಗೆ' ಎಂಬ ಪದವನ್ನು ಉಪಯೋಗಿಸುತ್ತಾರಲ್ಲ! ಇದು ಯಾರನ್ನು ಕುರಿತದ್ದು?" ಎಂದು ಅವರಿಗೆ ಸಂದೇಹ. ದೊಡ್ಡ ಸನ್ನಿಧಾನ ಚಿಕ್ಕಸನ್ನಿಧಾನ ತಂಗಿರುವ ಕೋಣೆಯನ್ನು ಬೆರಳೆತ್ತಿ ತೋರಿಸುವರು. "ಅಲ್ಲಿ ಹೋಗಿ ನಿಮ್ಮ ಗುರುವನ್ನು ದರ್ಶಿಸಿದಿರಾ? ಅವರೇ ಪೀಠಾಧಿಪತಿ, ಜಗದ್ಗುರು, ನಿಮ್ಮ ಗುರು" ಎನ್ನುವರು. ಮೊದಲು ಅವರನ್ನೇ ದರ್ಶಿಸಬೇಕೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು—ಎನ್ನುವರು. ತಮಗೆ ಶ್ರೀಮಠದ ಆಡಳಿತ ಸಂಬಂಧವಾದ ಜವಾಬ್ದಾರಿ ಏನೊಂದೂ ಇಲ್ಲವೆಂದು ಹೇಳುವರು.

ಶಿಷ್ಯರುಗಳು ಮಹಾಸನ್ನಿಧಾನವನ್ನು ದರ್ಶಿಸಬೇಕೆಂದು ಅಪೇಕ್ಷೆಪಟ್ಟರೆ, "ಸರಿ, ಬರಲಿ; ಆದರೆ ಪೀಠಾಧಿಪತಿಯಾದ ಚಿಕ್ಕಸನ್ನಿಧಾನವನ್ನು ದರ್ಶಿಸಿದ ಮೇಲೆಯೇ ತಮ್ಮನ್ನು ದರ್ಶಿಸುವುದಕ್ಕೆ ಬರಬೇಕು" ಎಂದು ತಿಳಿಯಪಡಿಸುವರು. ಚಿಕ್ಕ ಸನ್ನಿಧಾನವೇ ನಿಮ್ಮ ಗುರು, ಜೀವನಮಾರ್ಗದರ್ಶಕರು ದೈವ" ಎನ್ನುವರು. ಒಂದು ವೇಳೆ ಶಿಷ್ಯರಲ್ಲಿ ಯಾರಾದರೂ "ನಿಮ್ಮನ್ನು ದರ್ಶಿಸಿದ ಬಳಿಕ ಅವರ ದರ್ಶನಕ್ಕಾಗಿ ಹೋಗುತ್ತೇವೆ" ಎಂದರೆ, ಅದನ್ನು ಅಂಗೀಕರಿಸಲೊಲ್ಲರು. "ಚಿಕ್ಕ ಸನ್ನಿಧಾನವು ಈಚೆಗೆ ಬಂದ ಗುರು" ಎಂದು ಭಾವಿಸಕೂಡದು. ಏಕೆಂದರೆ, ಅವರು ನಮ್ಮ ಗುರುನಾಥರ, ಉಗ್ರನರಸಿಂಹಭಾರತಿಗಳ, ಅಪರಾವತಾರವೆಂದೇ ನನಗೆ ತೋರುತ್ತದೆ" ಎನ್ನುವರು. ತಮ್ಮ ಪರಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವನ್ನು "ಉಗ್ರನರಸಿಂಹಭಾರತಿಗಳು" ಎಂದು ಹೇಳದೆ "ದೊಡ್ಡನರಸಿಂಹ ಭಾರತಿಗಳು" ಎಂದು ಹೇಳಬೇಕೆಂದು ಹೇಳುವರು. ಈ ಪಾಠ ಶಿಷ್ಯರುಗಳಿಗೆ ಬಹು ದೃಢವಾದ ಮಾರ್ಗದರ್ಶನವಾಯಿತು. ಹೇಗೆಂದರೆ, ಶಿಷ್ಯರುಗಳು ಎರಡು ಸನ್ನಿಧಾನಗಳಲ್ಲೇ ಪರಸ್ಪರ ವ್ಯತ್ಯಾಸ ಮಾಡುವ ವಾಡಿಕೆ ಇದರದೆಸೆಯಿಂದ ಬಿಟ್ಟುಹೋಯಿತು.

ಒಂದು ಸಲ, ಹಿರಿಯ ಸನ್ನಿಧಾನ ಅಂತರ್ಮುಖಿಗಳಾಗಿದ್ದ ಸ್ಥಿತಿ. ಕಿರಿಯ ಸನ್ನಿಧಾನದ ಅನುಗ್ರಹದ ಮೂಲಕ ಈ ಗ್ರಂಥಕರ್ತನಿಗೆ ಅಂತರ್ಮುಖಿಗಳಾಗಿದ್ದವರನ್ನು ದರ್ಶಿಸುವುದಕ್ಕೆ ಅನುಮತಿ ದೊರೆಯಿತು. ಹಿರಿಯ ಸನ್ನಿಧಾನವಿರುತ್ತಿದ್ದ ಕೊಠಡಿಯ ಕಿಟಕಿಯ ಕದ ತೆರೆಯಿತು. ಕಿಟಕಿಯ ಹಿಂದೆ ಮಹಾಸನ್ನಿಧಾನ ನಿಂತುಕೊಂಡಿದ್ದರು. ಶರೀರವೆಲ್ಲಾ ಸಂಪೂರ್ಣ ಜ್ಯೋತಿರ್ಮಯವಾದ ಸ್ವರೂಪ. ತಪೋಬಲದ ಮಹಿಮೆ ಚೆನ್ನಾಗಿ ಕಾಣಬಂತು. ಗಂಭೀರವಾದ ದನಿಯಲ್ಲಿ ಕೆಳಗೆ ಕಂಡಂತೆ ಸಂಭಾಷಣೆ ನಡೆಯಿತು.

ದರ್ಶನಮಾಡಬಂದ ಶಿಷ್ಯನನ್ನು ನೋಡಿ, ಸನ್ನಿಧಾನ, "ನಿಮ್ಮ ಗುರುವನ್ನು ದರ್ಶನಮಾಡಿದಿರಾ?" ಎಂದರು, ಗಂಭೀರವಾಗಿ, ಶಿಷ್ಯನಿಗೆ ಏನೊಂದೂ ಅರ್ಥವಾಗಲಿಲ್ಲ. "ಇವರೇ ನಮ್ಮ ಗುರುಗಳು. ಬೇರೆ ಯಾರನ್ನು ನೋಡುವುದು?" ಎಂದು ಏನೂ ತೋರದೇ ಹಿಂದೆಮುಂದೆ ನೋಡುತ್ತ ನಿಂತನು. ದೊಡ್ಡ ಸನ್ನಿಧಾನ ಈ ಸ್ಥಿತಿಯನ್ನರಿತು ಗಂಭೀರವಾದ ದನಿಯಲ್ಲಿ, "ಅವರೇ, ಚಿಕ್ಕಸ್ವಾಮಿಗಳು ಎನ್ನುತ್ತೀರಲ್ಲಾ, ಅವರೇ ನಿಮ್ಮ ಗುರುಗಳು. ಹೋಗಿ ದರ್ಶನ ಮಾಡಿಕೊಂಡು ಬನ್ನಿ" ಎಂದರು. ಶಿಷ್ಯ ಒಡನೆಯೇ ಹಾಗೇ ಮಾಡಿದನು.

ಹೀಗೆ ತಾವು ಶರೀರಸ್ಥರಾಗಿರುವಾಗಲೇ ತಮ್ಮ ಶಿಷ್ಯರಿಗೆ ಪೀಠಾಧಿಪತಿ ಎಂಬ ಮರ್ಯಾದೆಯೂ ಅವರಲ್ಲಿ ಗುರುಭಕ್ತಿಯೂ ಶಿಷ್ಯರುಗಳ ಮನಸ್ಸಿನಲ್ಲಿ ಉಂಟಾಗುವ ಹಾಗೆ ಮಾಡಿದರು.

ಒಂದು ಸಲ ತಿರುನೆಲ್ವೇಲಿಯ ವಕೀಲ್ ಆರ್. ಕೃಷ್ಣಸ್ವಾಮಿ ಅಯ್ಯರ್ ಎಂಬವರು, ತರುವಾಯ ಶ್ರೀಜ್ಞಾನಾನಂದಭಾರತೀಸ್ವಾಮಿಗಳಾದವರು, ಶೃಂಗೇರಿಗೆ ಬಂದು ದರ್ಶನಮಾಡಿ ತಮ್ಮ ಊರಿಗೆ ಹಿಂತಿರುಗಿದರು. ಹಿಂದಿರುಗುವ ಮುನ್ನಾದಿನ ದೊಡ್ಡ ಸನ್ನಿಧಾನದ ಬಳಿ, "ನಾಳೆ ಊರಿಗೆ ಹೋಗಬೇಕೆಂದಿದ್ದೇನೆ" ಎಂದರು. ಅದಕ್ಕೆ ದೊಡ್ಡ ಸ್ವಾಮಿಗಳು, "ಹಾಗೇನು? ನಾಳೆ ಬೆಳಗ್ಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂಜೆಯ ಭಟ್ಟರು ಬರುವುದಿಲ್ಲ. ನಾನೇ ಶ್ರೀ ಚಂದ್ರಮೌಳೀಶ್ವರನಿಗೆ ಪೂಜೆ ಮಾಡಬೇಕು ಬಾಲಸ್ವಾಮಿಗಳು ಬೆಳಗ್ಗೆ ನಿಮಗೆ ಮಂತ್ರಾಕ್ಷತೆಯನ್ನು ಕೊಡುತ್ತಾರೆ" ಎಂದರು. ಅದಕ್ಕೆ ಕೃಷ್ಣ ಸ್ವಾಮಿ ಅಯ್ಯರು "ಹಾಗಾದರೆ ಈಗಲೇ ನಾನು ಮಂತ್ರಾಕ್ಷತೆ ತೆಗೆದುಕೊಳ್ಳುತ್ತೇನೆ" ಎಂದರು. ಇವರಿಗೆ ಎರಡು ಸನ್ನಿಧಾನಗಳಲ್ಲಿಯೂ ಪರಸ್ಪರ ವ್ಯತ್ಯಾಸಮನೋಭಾವವಿರುವುದನ್ನರಿತು ಕೊಂಡ ಮಹಾಸನ್ನಿಧಾನ ನಕ್ಕುಬಿಟ್ಟು, "ಬಾಧಕವಿಲ್ಲ, ನಾಳೆ ಪ್ರಾತಃಕಾಲ ದಲ್ಲಿಯೇ ನಾನೇ ಮಂತ್ರಾಕ್ಷತೆ ಕೊಡುತ್ತೇನೆ" ಎಂದು ಹೇಳಿ ಒಳಕ್ಕೆ ಹೋದರು.

ಮರುದಿನ, ಉಭಯ ಸನ್ನಿಧಾನಗಳೂ ಪೀಠದಲ್ಲಿ ಮಂಡಿಸಿರುವ ಸಮಯ ದಲ್ಲಿ, ಶ್ರೀ ಕೃಷ್ಣಸ್ವಾಮಿ ಅಯ್ಯರನ್ನು ಕರಸಲಾಯಿತು. ಆಗ ದೊಡ್ಡಸನ್ನಿಧಾನ ಚಿಕ್ಕ ಸನ್ನಿಧಾನಕ್ಕೆ, "ಇವರು ಊರಿಗೆ ಹೋಗುತ್ತಾರಂತೆ. ಇವರಿಗೆ ಮಂತ್ರಾಕ್ಷತೆ ಕೊಡಿ" ಎಂದು ಹೇಳಿ ಅಕ್ಷತೆ ಬಟ್ಟಲನ್ನು ಚಿಕ್ಕ ಸನ್ನಿಧಾನದ ಬಳಿಗೆ ಸರಿಸಿದರು. ಇವರು ಕೃಷ್ಣಸ್ವಾಮಿ ಅಯ್ಯರಿಗೆ ಮಂತ್ರಾಕ್ಷತೆ ಕೊಟ್ಟರು. ಈ ರೀತಿ ತಮಗೂ, ತಮ್ಮ ಅನಂತರ ಪೀಠಕ್ಕೆ ಬರಲಿರುವ ಶಿಷ್ಯಸ್ವಾಮಿಗಳಿಗೂ ಭೇದವಿಲ್ಲವೆಂಬುದನ್ನು ಅದೇ ವಿಧಾನಗಳಲ್ಲಿ ಸ್ಪಷ್ಟಪಡಿಸುತ್ತಿದ್ದರು

ಚಿಕ್ಕಸನ್ನಿಧಾನವೇ ಪೀಠಾಧಿಪತಿಯೆಂಬುದನ್ನು ಎಲ್ಲರೂ ನಿಸ್ಸಂಶಯವಾಗಿ ಮನಗಾಣಬೇಕೆಂಬ ಉದ್ದೇಶದಿಂದ ದೊಡ್ಡಸನ್ನಿಧಾನವು ಮೈಸೂರು ಸಂಸ್ಥಾನದ ಸರ್ಕಾರಕ್ಕೆ ಕಳಿಸಿದ ಕಾಗದಪತ್ರಗಳಲ್ಲಿ, "ಚಿಕ್ಕ ಸನ್ನಿಧಾನವು ಸರ್ಕಾರಕ್ಕೆ ಮಾಡುವ ಶಿಫಾರಸುಗಳೆಲ್ಲ ಮಹಾಸನ್ನಿಧಾನ ಮಾಡಿದ್ದಾಗಿಯೇ ಭಾವಿಸಬೇಕು" ಎಂದು ತಿಳಿಯಪಡಿಸಿದರು.

ಶಿಷ್ಯಸ್ವಾಮಿಗಳವರ ಹೊಣೆಗಾರಿಕೆ

ತಮ್ಮ ಶಿಷ್ಯನನ್ನು ಪೀಠದಲ್ಲಿ ಸ್ಥಾಪಿಸಿದುದರಿಂದ, ಶ್ರೀಮಠದ ಕಾರ್ಯ ನಿರ್ವಾಹದ ಹೊಣೆ ತಮ್ಮನ್ನು ಬಿಟ್ಟು ತೊಲಗಿತು ಎಂದು ಮಹಾಸನ್ನಿಧಾನವು ಭಾವಿಸಿ ತಮ್ಮ ತಪಸ್ಸನ್ನು ಅಧಿಕಪಡಿಸಿಕೊಳ್ಳುವುದಕ್ಕೆ ತೊಡಗಿದರು. ಹಲವು ವಿಧವಾದ ಆಹಾರ ನಿಯಮಗಳನ್ನು ಅನುಸರಿಸುತ್ತ ಬಂದರು. ಶ್ರೀಕಂಠಶಾಸ್ತ್ರಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಗಳು ನಿರ್ವಾಹಕರಾಗಿದ್ದ ಕಾಲದಲ್ಲೇ ಯಾರಾದರೂ ಶಿಷ್ಯರು ಬಂದು ಏನಾದರೂ ಹೇಳಿದರೆ, "ಲೌಕಿಕವಿಷಯಗಳ ಸಂಬಂಧವಾಗಿ ಶ್ರೀಕಂಠಶಾಸ್ತ್ರಿಗಳಿಗೆ ತಿಳಿಸಬೇಕು" ಎಂದು ಹೇಳಿ, ತಾವು ತಪ್ಪಿಸಿಕೊಳ್ಳುತ್ತಿದ್ದರು. ಈಗ ಈ ರೀತಿಯಲ್ಲಿ ತಪ್ಪಿಸಿಕೊಳ್ಳುವ ಯೋಚನೆ ಬಲವಾಯಿತು. ಅಡಿಗಡಿಗೆ ಅಂತರ್ಮುಖಸ್ಥಿತಿಗೆ ಹೋಗಿಬಿಡುವರು. ಆ ಕಾಲದಲ್ಲೆಲ್ಲಾ ಉಗ್ರವಾದ ತಪಸ್ಸುಮಾಡುವರು. ಆಗ ಶ್ರೀಮಠದ ನಿರ್ವಾಹಮಾತ್ರವೇ ಅಲ್ಲ, ಹಿರಿಯ ಸನ್ನಿಧಾನದ ತಪಸ್ಸಿಗೆ ಯಾವ ಕೊರತೆಯೂ ಉಂಟಾಗದಂತೆ ಎಲ್ಲವನ್ನೂ ನೋಡಿಕೊಳ್ಳುವ ಹೊಣೆಯನ್ನು ಚಿಕ್ಕ ಸನ್ನಿಧಾನವೇ ಹೊರುವಂತಾಯಿತು.

ಶ್ರೀ ಮಠಕ್ಕೆ ಭಾರತದಲ್ಲೆಲ್ಲಾ ಶಿಷ್ಯರು ಹೇರಳವಾಗಿ ಇದ್ದಾರೆ. ರಾಜರುಗಳು ಮೊದಲುಗೊಂಡು ಸಾಮಾನ್ಯಜನಗಳವರೆಗೂ ಶಿಷ್ಯರಿದ್ದಾರೆ. ಈ ರೀತಿಯಾದ ಶಿಷ್ಯರು ಶೃಂಗೇರಿಗೆ ಬಂದು ದರ್ಶನಮಾಡುವಾಗ ಅವರುಗಳನ್ನು ಗಮನಿಸಿ, ಅವರುಗಳ ಆಧ್ಯಾತ್ಮಿಕ ಬೆಳವಣಿಗೆಯನ್ನು ತಿಳಿದುಕೊಂಡು ಅದಕ್ಕೆ ತಕ್ಕ ಉಪದೇಶಗಳನ್ನು ಮಾಡುವುದೂ, ಲೌಕಿಕಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೋ ಎಂದು ಮೇಲ್ವಿಚಾರಣೆ ನೋಡಿಕೊಳ್ಳುವುದೂ, ಮಹಾಸನ್ನಿಧಾನವನ್ನು ದರ್ಶನ ಮಾಡಬೇಕೆಂದು ಬಂದ ಶಿಷ್ಯರು ತಿಳಿಯಪಡಿಸಿದರೆ ಅದು ಬಹಳ ಆವಶ್ಯವಾದದ್ದೋ ಅಲ್ಲವೋ ಎಂದು ದೀರ್ಘವಾಗಿ ಆಲೋಚನೆಮಾಡಿ ಅತ್ಯಂತ ಮುಖ್ಯವಾದದ್ದಾಗಿ ಕಂಡಾಗ ಮಾತ್ರವೇ ಅನುಮತಿಕೊಡುವುದೂ— ಮೊದಲಾದ್ದನ್ನು ನಿರ್ವಾಹ ಮಾಡುವ ಸಾಮರ್ಥ್ಯ ಚಿಕ್ಕ ಸನ್ನಿಧಾನದಲ್ಲಿ ಈಗ ಕಂಡುಬಂತು. ಇವರೊಡನೆ ಸಂಭಾಷಿಸಿದ ಬಳಿಕ, ಇವರ ಅನುಗ್ರಹವೇ ಪೂರ್ಣವಾಗಿದೆ. ದೊಡ್ಡ ಸನ್ನಿಧಾನವನ್ನು ದರ್ಶನಮಾಡುವುದಕ್ಕೆ ಪ್ರಯತ್ನಿಸಿ ಅವರ ತಪಸ್ಸಿಗೆ ಕೊರತೆಯುಂಟುಮಾಡುವುದೇಕೆ? ಬೇಡ—ಎಂದು ಹಲವರು ಶಿಷ್ಯರು ತಮ್ಮ ಊರಿಗೆ ಹಿಂದಿರುಗಿದ್ದೂ ಉಂಟು. ಹೀಗೆ ಕಾಲ ಕ್ರಮದಲ್ಲಿ ಎಲ್ಲರೂ ಶಿಷ್ಯಸ್ವಾಮಿಗಳಲ್ಲಿಯೂ ಗುರುಸ್ವಾಮಿಗಳ ಮಹಿಮೆಯನ್ನು ಕಂಡುಕೊಂಡರು. ಗುರುಸಂಕಲ್ಪಮಾಡಿದರೆ ಶಿಷ್ಯನಿಗೆ ಎಲ್ಲಾ ಶಕ್ತಿಗಳೂ ಬಂದುಬಿಡುತ್ತವೆ— ಎಂಬುದರಲ್ಲಿ ಸಂದೇಹವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಯಲ್ಲಿ ಅತಿರುದ್ರ, ಚಂಡೀ, ಹೋಮಗಳು.

ದೇಶದಲ್ಲೆಲ್ಲಾ ಮಳೆಯೇ ಇಲ್ಲದೆ ಜನಗಳು ಏಳು ವರ್ಷಗಳಿಂದಲೂ ಕಷ್ಟಪಡುತ್ತಿದ್ದರು. ಆದರಿಂದ, ೧೯೫೩ನೆಯ ವರ್ಷದಲ್ಲಿ ಲೋಕಕ್ಷೇಮ ಕ್ಕೋಸ್ಕರ, ಶೃಂಗೇರಿಯಲ್ಲಿ ಒಂದು ಸಹಸ್ರ ಚಂಡೀಹೋಮವನ್ನೂ ಅತಿರುದ್ರ ಹೋಮವನ್ನೂ ನಡಸಬೇಕೆಂದು ಎಲ್ಲರೂ ಚಿಕ್ಕಸನ್ನಿಧಾನದಲ್ಲಿ ಪ್ರಾರ್ಥನೆ ಮಾಡಿಕೊಂಡರು. ಇದನ್ನು ಮಹಾಸನ್ನಿಧಾನಕ್ಕೆ ವರದಿಮಾಡಲಾಯಿತು (ಅವರು ಆಗ ಅಂತರ್ಮುಖಿಗಳಾಗಿದ್ದರು). ಅನುಮತಿ ದೊರೆಯಿತು. ಈ ಹೋಮಗಳನ್ನು ನಡೆಸುವ ಜವಾಬ್ದಾರಿಯನ್ನು ಶೃಂಗೇರಿಯ ಶ್ರೀ ಚಂದ್ರಮೌ ರಾವ್ ಅವರೂ, ಶಿವಮೊಗ್ಗೆಯ ಶ್ರೀ ಸುಂದರಮಯ್ಯರೂ ವಹಿಸಿಕೊಳ್ಳಬೇಕೆಂದು ಚಿಕ್ಕಸನ್ನಿಧಾನವು ಅಪ್ಪಣೆಮಾಡಿದರು. ಇಂಡಿಯಾ ದೇಶದ ಹಲವೆಡೆಗಳಿಂದ ಬಂದ ಶಿಷ್ಯರುಗಳೂ ಭಕ್ತರೂ ಉತ್ಸಾಹದಿಂದಲೂ ಭಕ್ತಿಶ್ರದ್ಧೆಗಳಿಂದಲೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಈ ಹೋಮಗಳು ೧೯೫೩ನೆಯ ವರ್ಷ ಶೃಂಗೇರಿಯ ನರಸಿಂಹವನದಲ್ಲಿ ಇದಕ್ಕಾಗಿಯೇ ನಿರ್ಮಿಸಲ್ಪಟ್ಟ ವಿಸ್ತಾರವಾದ ಚಪ್ಪರದಲ್ಲಿ ನಡೆದವು. ಸುಮಾರು ಐನೂರು ಮಂದಿ ವೇದಪಾರಂಗತರಾದ ಋತ್ವಿಕ್ಕುಗಳು ಹಲವು ಭಾಗಗಳಿಂದ ಆಹ್ವಾನಿತರಾಗಿದ್ದರು. ಇನ್ನೂ ಇತರ ಪಂಡಿತರೂ ಹೇರಳವಾಗಿ ಬಂದು ಸೇರಿದ್ದರು. ಅವರವರಿಗೆ ತಕ್ಕ ರೀತಿಯಲ್ಲಿ ಆಹಾರಕ್ಕೂ ತಂಗುವುದಕ್ಕೂ ಅನುಕೂಲವಾದ ವಸತಿ ಏರ್ಪಾಡಾಗಿತ್ತು. ಯಜ್ಞ ದರ್ಶನ ಮಾಡಬೇಕೆಂದು ಸುಮಾರು ಐವತ್ತು ಸಾವಿರ ಶಿಷ್ಯರು ಪರಸ್ಥಳಗಳಿಂದ ಬಂದು ಕೂಡಿದ್ದರು. ತುಂಗಾನದಿಯ ತೀರದಲ್ಲಿ ಇವರಿಗಾಗಿ ದೊಡ್ಡ ದೊಡ್ಡ ಚಪ್ಪರಗಳನ್ನು ಕಟ್ಟಿಸಿದ್ದರು. ಒಂದೊಂದು ಜಾತಿಯ ಶಿಷ್ಯರಿಗೂ ಬೇರೆ ಬೇರೆ ಭೋಜನಶಾಲೆ ಗಳನ್ನು ಸಿದ್ಧಪಡಿಸಲಾಗಿತ್ತು. ಈ ಹೋಮಗಳ ಸಂಬಧವಾಗಿಯೇ ಶ್ರೀ ಶಾ ದಾಂಬೆಗೆ ಬ್ರಹ್ಮೋತ್ಸವವೂ ಏರ್ಪಾಡಾಗಿತ್ತು. ಇಂಥ ದೊಡ್ಡ ಆಸ್ತಿ ಸಮ್ಮೇಳನವನ್ನು ಸಾಮಾನ್ಯವಾಗಿ ಕಾಣಲು ಸಾಧ್ಯವಿಲ್ಲ. ಎರಡು ಯಜ್ಞ ಗಳಲ್ಲಿಯೂ ವೈದಿಕ ಕಾರ್ಯಗಳನ್ನು ಶಾಸ್ತ್ರಜ್ಞಾನದಲ್ಲಿ ಶ್ರೇಷ್ಠರಾದ ವಿದ್ವಾಂ ರುಗಳು ಗಮನಿಸಿ ನಡೆಸುತ್ತ ಬಂದರು. ಚಿಕ್ಕಸನ್ನಿಧಾನವು ಪ್ರತಿದಿನವೂ ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಲೆಗಳಿಗೆ ಬಂದು ವೈದಿಕ ಲೌಕಿಕ ಏರ್ಪಾಡುಗಳು ಸರಿಯಾಗಿವೆಯೋ ಇಲ್ಲವೋ ಎಂದು ಗಮನಿಸಿ ನೋಡುತ್ತಿದ್ದರು. ಏನಾದರೂ ತಪ್ಪು ಇರುವುದಾಗಿ ತಿಳಿದುಬಂದಲ್ಲಿ ದಾಕ್ಷಿಣ್ಯವಿಲ್ಲದೆ ಆಗಲೇ ಅದನ್ನು ತಿದ್ದಿ ಸರಿಪಡಿಸುತ್ತಿದ್ದರು.

ಪೂರ್ಣಾಹುತಿಯ ದಿನ. ಅದಕ್ಕೆ ಕೆಲವು ತಿಂಗಳು ಹಿಂದಿನಿಂದಲೇ ಮಹಾಸನ್ನಿಧಾನ ಅಂತರ್ಮುಖಿಗಳಾಗಿದ್ದರು. ಹಲವು ಊರುಗಳಿಂದ ಶಿಷ್ಯರುಗಳು ಇಲ್ಲಿ ಬಂದು ಸೇರಿದ್ದರಿಂದ ಅವರುಗಳಿಗೆ ದರ್ಶನಕೊಡುವುದಕ್ಕಾಗಿ ಮಹಾಸನ್ನಿಧಾನವು ಬಹಿರ್ಮುಖರಾಗಬಹುದೆಂದು ಎಲ್ಲರೂ ನಿರೀಕ್ಷಿಸಿಕೊಂಡಿದ್ದರು. ಆವತ್ತು ಬೆಳಗ್ಗೆ ಸುಮಾರು ಎಂಟೂವರೆ ಗಂಟೆಗೆ ಚಿಕ್ಕಸನ್ನಿಧಾನವು ಮಹಾಸನ್ನಿಧಾನದಬಳಿ ಹೋಗಿ, ನಮಸ್ಕರಿಸಿ, "ಇವತ್ತು ಪೂರ್ಣಾಹುತಿಯ ದಿನ. ಹಲವರು ಶಿಷ್ಯರು ದರ್ಶನಕ್ಕಾಗಿ ಬಂದಿದ್ದಾರೆ" ಎಂದು ವಿಜ್ಞಾಪನೆಮಾಡಿದರು. ಅದಕ್ಕೆ ದೊಡ್ಡವರು, "ನಾವು ಹೊರಗೆ ಬರುವುದಿಲ್ಲ, ನೀವೇ ಯಜ್ಞವನ್ನು ನಡಸಿ" ಎಂದು ಹೇಳಿಬಿಟ್ಟರು. ತಾವು ಹೊರಗೆ ಬಂದರೆ ತಮ್ಮನ್ನು ನೋಡುವುದಕ್ಕೇ ಶಿಷ್ಯರು ಗುಂಪುಗುಂಪಾಗಿ ಬರುತ್ತಾರೆ ತಾವು ಹೊರಗೆ ಬರದೆ ಚಿಕ್ಕಸ್ವಾಮಿಗಳೇ ಇದ್ದು ನಡಸಿದ ಪಕ್ಷದಲ್ಲಿ ಅವರಲ್ಲಿ ಶಿಷ್ಯರ ಶ್ರದ್ಧೆಯೂ ಭಕ್ತಿಯೂ ವೃದ್ಧಿಹೊಂದುತ್ತದೆ" ಎಂದು ಭಾವಿಸಿಯೇ ಹೀಗೆ ಮಾಡಿದರೆಂದು ತೋರುತ್ತದೆ. ಮತ್ತೆಯೂ ಒಂದು ಮಾತು ಹೇಳಿದರು: "ಮಳೆ ಬರುತ್ತದೆ, ಬೇಗನೇ ಎಲ್ಲವನ್ನೂ ಮುಗಿಸಿಬಿಡಿ'' ಎಂದರು. ಸುಮಾರು ಏಳು ವರ್ಷಗಳಿಂದಲೂ ಮಳೆಯನ್ನೇ ಕಾಣದ ಜನಗಳು ಈ ಮಾತು ಕೇಳಿ ಆಶ್ಚರ್ಯಪಟ್ಟರು. ಮಳೆಗೆ ಯಾವ ವಿಧವಾದ ಸೂಚನೆಯೂ ಕಾಣುವುದಿಲ್ಲವಲ್ಲ: ಹಾಗಾದರೂ ಇವರು ಹೀಗೆ ಹೇಳುತ್ತಿದ್ದಾರಲ್ಲ!—ಎಂದು ಕೆಲವರು ಸಂದೇಹಪಟ್ಟರು.

ಮಹಾಸನ್ನಿಧಾನದ ಆಜ್ಞೆಯ ಪ್ರಕಾರ ಚಿಕ್ಕಸನ್ನಿಧಾನವೇ ನಿಂತು ಪೂರ್ಣಾಹುತಿಯನ್ನು ಸಮರ್ಪಿಸಿ ಯಜ್ಞಗಳನ್ನು ಪೂರ್ಣಗೊಳಿಸಿದರು. ಆಗ ಮಧ್ಯಾಹ್ನ ಸುಮಾರು ಮೂರುಗಂಟೆ ಇರಬೇಕು. ಪೂರ್ಣಾಹುತಿ ಮಾಡುತ್ತಿರುವಾಗಲೇ ದಿಢೀರನೆ ದಕ್ಷಿಣ ದಿಕ್ಕಿನಿಂದ ದೊಡ್ಡ ಕಪ್ಪು ಮೋಡ ಕಾಣಿಸಿಕೊಂಡು ವೇಗವಾಗಿ ಮೇಲ್ಮೇಲೆ ಏರಿ ಬರುತ್ತಾ ಇತ್ತು. ಪೂರ್ಣಾಹುತಿ ಮುಗಿದು ಎಲ್ಲರೂ ಯಜ್ಞಶಾಲೆಯಿಂದ ಹೊರಟರು. ಒಡನೆಯೇ ಘನವಾದ ಮಳೆ ಆಲಿಕಲ್ಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮೇತವಾಗಿ ಒಂದು ಗಂಟೆಹೊತ್ತು ಹುಯ್ಯಿತು. ಎಲ್ಲಿ ನೋಡಿದರೂ ಬರೀ ಪ್ರವಾಹವೇ ; ಸಂಜೆ ಐದು ಗಂಟೆ ಹೊತ್ತಿಗೆ ಮಳೆ ಬಿಟ್ಟಿತು. "ಇದನ್ನೇ, ಮಹಾಸನ್ನಿಧಾನ ಹೇಳಿದ್ದು ! ಅವರಿಗೆ ಹೇಗೆ ತೋರಿತು, ಇದು ?" ಎಂದು ಎಲ್ಲರೂ ವಿಸ್ಮಯಹೊಂದಿದರು.

ಇದಕ್ಕೆ ಮೊದಲು ಈ ಯಜ್ಞಗಳನ್ನು ಶ್ರೀ ಮಹಾಸನ್ನಿಧಾನದ ವರ್ಧಂತಿಯ ಸಂಬಂಧದಲ್ಲಿ ನಡಸಬೇಕೆಂದು ಉದ್ದೇಶಿಸಿರುವುದಾಗಿ ಆಚಾರ್ಯರ ಬಳಿ ವಿಜ್ಞಾಪನೆ ಮಾಡಿದ್ದರು. ಅದಕ್ಕೆ ಮಹಾಸನ್ನಿಧಾನ ತಮಗಾಗಿ ಮಾಡ ಕೂಡದು ಎಂದು ತೀರ್ಮಾನವಾಗಿ ಹೇಳಿಬಿಟ್ಟಿದ್ದರು. ಆಮೇಲೆ, ಲೋಕ ಕ್ಷೇಮಕ್ಕಾಗಿ ಮಾಡಬಹುದೆಂದು ಅನುಮತಿಕೊಟ್ಟಿದ್ದರಿಂದ ವರ್ಧಂತಿಯಾಗಿ ಕೆಲವು ತಿಂಗಳು ಕಳೆದಮೇಲೆ ನಡಸಲಾಯಿತು.

ಶೃಂಗೇರಿಯ ಪಕ್ಕದಲ್ಲಿರುವ ದುರ್ಗಾದೇವಾಲಯಕ್ಕೆ ದರ್ಶನಮಾಡುವುದಕ್ಕಾಗಿ ಇಬ್ಬರು ಸನ್ನಿಧಾನಗಳೂ ಒಂದುಸಲ ಹೊರಟರು. ವರ್ಷ ವರ್ಷವೂ ಅಲ್ಲಿ ಶೃಂಗೇರೀ ಸನ್ನಿಧಾನದ ನೇರ ಮೇಲ್ವಿಚಾರಣೆಯಲ್ಲಿ ಬ್ರಹ್ಮೋತ್ಸವ ನಡೆಯುವುದು. ಅವತ್ತು ಪೀಠಾಧಿಪತಿಗಳು ದುರ್ಗಾದೇವಾಲಯದಲ್ಲಿ ತಂಗಿ ಪೂಜೆ ಮಾಡುವುದು ವಾಡಿಕೆ. ಈ ಸಲವೂ ಪೂಜೆಗಾಗಿ ಹೊರಟರು. ಶ್ರೀ ಶಾರದಾಂಬೆಯ ದೇವಾಲಯದ ಮುಂದೆ, ಪೀಠಾಧಿಪತಿಗಳು ಹತ್ತಿ ಹೋಗುವುದಕ್ಕಾಗಿ ಪಲ್ಲಕ್ಕಿಯನ್ನಿಡಲಾಗಿತ್ತು. ಇಬ್ಬರು ಸನ್ನಿಧಾನಗಳೂ ಅಮ್ಮನವರ ದರ್ಶನಮಾಡಿಬಿಟ್ಟು ಹೊರಗೆ ಬಂದು ಪಲ್ಲಕ್ಕಿಯ ಬಳಿ ಬಂದೊಡನೆಯೇ ದೊಡ್ಡವರು, ಚಿಕ್ಕ ಸನ್ನಿಧಾನವನ್ನು ಕುರಿತು "ನೀವು ಪಲ್ಲಕ್ಕಿಯಲ್ಲಿ ಹತ್ತಿ ದುರ್ಗಾದೇವಾಲಯಕ್ಕೆ ಬನ್ನಿ. ನಾನು ತುಂಗಾನದಿಯನ್ನು ದಾಟಿ ನಡೆದು ಕೊಂಡು ಬಂದು ಸೇರುತ್ತೇನೆ" ಎಂದು ಹೇಳಿದರು. ಎಷ್ಟೆಷ್ಟು ಪ್ರಾರ್ಥನೆ ಮಾಡಿದರೂ ಒಪ್ಪದೆ ಒಂದೇ ನಿರ್ಧಾರದಿಂದ ಪಟ್ಟುಹಿಡಿದು ಚಿಕ್ಕಸ್ವಾಮಿಗಳನ್ನು ಅಲ್ಲಿಂದ ಪಲ್ಲಕ್ಕಿಯಲ್ಲಿ ಹೊರಡುವಂತೆ ಮಾಡಿ, ತಾವು ಮಾತ್ರ ನದಿಯ ದಡವನ್ನನುಸರಿಸಿ ನಡೆದುಕೊಂಡು ದುರ್ಗಾ ದೇವಾಲಯಕ್ಕೆ ಹೋಗಿ ಸೇರಿದರು. ಪಲ್ಲಕ್ಕಿ ಚಿಕ್ಕಸ್ವಾಮಿಗಳೊಡನೆ ಊರಿನಲ್ಲಿ ಮೆರವಣಿಗೆ ಬಂದು ದುರ್ಗಾ ದೇವಾಲಯಕ್ಕೆ ಬಂದು ಸೇರಿತು.

Sri Vidyabharathi Book Centre, Sringeri

CC-0. In Public Domain. Digitized by eGangotri

ಈ ರೀತಿ ಚಿಕ್ಕ ಸನ್ನಿಧಾನವೇ ಪೀಠಾಧಿಪತಿಯೆಂದು ಹಲವು ವಿಧಗಳಿಂದ ಲೋಕಕ್ಕೆ ಸ್ಪಷ್ಟವಾಗಿ ನಿರೂಪಿಸತೊಡಗಿದರು. ಶೃಂಗೇರಿಯಲ್ಲಿ ನಡೆಯುವ ವಾಕ್ಯಾರ್ಥಸಭೆಗಳಲ್ಲಿಯೂ ಹಿರಿಯ ಸನ್ನಿಧಾನ ಅಧ್ಯಕ್ಷರಾಗಿರುವ ಸಮಯ ಗಳಲ್ಲಿಯೂ ಚಿಕ್ಕ ಸನ್ನಿಧಾನವೇ ಅದರಲ್ಲಿ ಹೆಚ್ಚಾಗಿ ಭಾಗವಹಿಸುವಂತೆ ಮಾಡುವರು; ತಾವು ಸಾಕ್ಷಿ ಮಾತ್ರದಂತೆ ಇರುವರು. ಇದು ಜೀವನ್ಮುಕ್ತ ಸ್ಥಿತಿಯಲ್ಲಿ ಉನ್ನತವಾದ ಹಂತ.

ಶಿಷ್ಯರುಗಳು 'ಮಂತ್ರೋಪದೇಶ ಮಾಡಬೇಕು' ಎಂದು ಕೇಳಿಕೊಂಡರೂ ಅದನ್ನು ಚಿಕ್ಕಸ್ವಾಮಿಗಳಿಂಲೇ ಪಡೆದುಕೊಳ್ಳುವಂತೆ ಹೇಳಿ, 'ಆ ಬಳಿಕ ತಮಗೆ ತಿಳಿಸಿದರೆ ಸಾಕು' ಎನ್ನುವರು. ಇಲ್ಲಿ ಒಂದು ವಿಶೇಷ ಸಂಗತಿಯನ್ನು ಸೂಚಿಸಲೇ ಬೇಕು.

ಒಬ್ಬ ಶಿಷ್ಯರು ತಮ್ಮೂರಿನಲ್ಲಿ ಒಬ್ಬ ಶಾಸ್ತ್ರಿಗಳಿಂದ ದೇವೀ ಮಂತ್ರದ ಉಪದೇಶತೆಗೆದುಕೊಂಡರು. ಆ ಶಾಸ್ತ್ರಿಗಳು, "ಇದನ್ನು ಮಹಾಸನ್ನಿಧಾನದ ಕಿವಿಯಲ್ಲಿ ಹಾಕಿಬಿಡಿ, 'ಮಂತ್ರಸಿದ್ಧಿಸಬೇಕು' ಎಂದು ಕೇಳಿಕೊಳ್ಳಿ" ಎಂದು ಹೇಳಿದ್ದರು. ಅದಕ್ಕನುಸಾರವಾಗಿ ಆ ಶಿಷ್ಯರು ಶೃಂಗೇರಿಗೆ ಹೋದರು. ಅಲ್ಲಿ ಮಹಾಸನ್ನಿಧಾನ ತಮ್ಮ ಗುರುವಿನ ಅಧಿಷ್ಠಾನಕ್ಕೆ ಪ್ರದಕ್ಷಿಣೆಮಾಡುತ್ತಿದ್ದಾಗ ಅವರಿಗೆ ಅಡ್ಡಬಿದ್ದು ನಮಸ್ಕಾರಮಾಡಿ ಮೇಲೆ ತಿಳಿಸಿದಂತೆ ಹೇಳಿಕೊಂಡರು. 'ಏನು?' ಎಂದು ಗುರುಗಳು ಕೇಳಲು, ಮತ್ತೊಮ್ಮೆ ಅದನ್ನೇ ಹೇಳಿದರು. ಗುರುಗಳು ಕೈಸಂಜ್ಞೆಯಿಂದಲೇ 'ಸಿದ್ಧಿಯಾಗಲಿ' ಎಂದು ಅನುಗ್ರಹಿಸಿದರು. ಅದು ನವರಾತ್ರಿಸಮಯ. ಶಿಷ್ಯರಿಗೆ ಮನಸ್ಸಿನಲ್ಲಿ, 'ತನಗೆ ನೇರವಾಗಿ ಸನ್ನಿಧಾನ ದಿಂದ ಉಪದೇಶಪಡೆಯುವ ಭಾಗ್ಯದೊರೆಯಲಿಲ್ಲವಲ್ಲಾ' ಎಂದು ವ್ಯಥೆಮಾತ್ರ ಇತ್ತು.

ಇದಾದ ಮೇಲೆ ಕೆಲವು ತಿಂಗಳುಗಳು ಕಳೆದವು. ಆ ಶಿಷ್ಯರು ಮತ್ತೊಮ್ಮೆ ಶೃಂಗೇರಿಗೆ ದರ್ಶನಕ್ಕಾಗಿ ಬಂದರು. ಮಹಾಸನ್ನಿಧಾನ ಅಂತರ್ಮುಖಿಗಳಾಗಿ ದ್ದಾರೆಂದು ತಿಳಿಯಬಂತು. ಅವರನ್ನು ದರ್ಶಿಸುವ ಸಂದರ್ಭ ಸಿಕ್ಕದಲ್ಲಾ ಎಂಬ ಆತಂಕದಿಂದ ಶ್ರೀ ಶಾರದಾಂಬೆಯ ದೇವಾಲಯದಲ್ಲಿ ಕೂತುಕೊಂಡು ಇವರು ಜಪಮಾಡುತ್ತಿದ್ದರು. ಆಗ ಈ ಶಿಷ್ಯರ ಜೊತೆಯಲ್ಲಿ ಊರಿನಿಂದ ಬಂದಿದ್ದ ಶಾಸ್ತ್ರಿಗಳು ನರಸಿಂಹವನದಿಂದ ಓಡಿ ಬಂದು ಈ ಶಿಷ್ಯರಿಗೆ, "ಮಹಾಸನ್ನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾನವು ದರ್ಶನಕೊಡುತ್ತಾರೆ. ಶಿವಮೊಗ್ಗೆಯ ಸುಂದರಯ್ಯರು ನಿಮ್ಮನ್ನು ಕರೆದುಕೊಂಡು ಬರಹೇಳಿದರು" ಎಂದರು. ಆ ಶಿಷ್ಯರು ಸಂತೋಷದಿಂದ ಆಚೆ ದಡಕ್ಕೆ ಓಡಿದರು. ಕಿಟಕಿಯ ಪಕ್ಕದಲ್ಲಿ ಒಳಭಾಗದಲ್ಲಿ ಮಹಾಸನ್ನಿಧಾನವು ನಿಂತುಕೊಂಡಿರುವ ದೃಶ್ಯ. ಅಂತರ್ಮುಖಾವಸ್ಥೆಯಲ್ಲಿ ಅವರನ್ನು ದರ್ಶಿಸಿದವರೆ ಭಾಗ್ಯಶಾಲಿಗಳು. ತೇಜೋಮಯ ರೂಪ. ಓಡಿ ಬಂದ ಶಿಷ್ಯರು ಹೊರಗಡೆಯೇ ಇದ್ದು ಅಂತರ್ಮುಖಿಗಳಾಗಿರುವ ಮಹಾಸನ್ನಿಧಾನವನ್ನು ನಮಸ್ಕರಿಸಿ, ಕಣ್ಣುಗಳಲ್ಲಿ ನೀರುತುಂಬಿ ತುಳುಕುತ್ತಿರಲು ನಿಂತರು. ಮಹಾಸನ್ನಿಧಾನವು (ಗಂಭೀರವಾದ ಧ್ವನಿಯಿಂದ) 'ಯಾರು?' ಎಂದರು.

ಶಿಷ್ಯ :—ನಾನು....ಊರು...ನವರಾತ್ರಿಕಾಲದಲ್ಲಿ ಇಲ್ಲಿ ಸನ್ನಿಧಾನವನ್ನು ದರ್ಶಿಸಿ ಅನುಗ್ರಹ ಪಡದೆನು.....

ಗುರುಗಳು ;—ನವರಾತ್ರಿ ಕಾಲದಲ್ಲಿ ನಾವು ಹೊರಕ್ಕೆ ಬರಲಿಲ್ಲ, ಶಿಷ್ಯರಿಗೆ ಏನು ಮಾಡುವುದೋ ತಿಳಿಯಲಿಲ್ಲ. "ಬಂದಿದ್ದಿರಲ್ಲಾ!" ಎಂದು ಹೇಗೆ ಹೇಳುವುದೆಂದು ಅನುಮಾನಿಸುತ್ತ ನಿಂತರು.

ಗುರುಗಳು :—ಇರಬಹುದು. ಎನನ್ನಾದರೂ ನಿರ್ಬಂಧಪಡಿಸಿ ಕೇಳಿರಬಹುದು. ಅದು ನಮಗೆ ತಿಳಿಯದು.

ಶಿಷ್ಯರಿಗೆ ಇಲ್ಲಿ ದೊಡ್ಡದೊಂದು ಬೆಳಕು ಬಂದಂತಾಯಿತು."ಸ್ಥಿತಪ್ರಜ್ಞನ ನೆಲೆಯನ್ನು ಗೀತೆಯಲ್ಲಿ ಓದಿದ್ದೇವೆ. ಅದು ಹೇಗಿರುವುದೆಂದು ಅರ್ಥಮಾಡಿಕೊಳ್ಳಲಾಗಲಿಲ್ಲ. ಈಗ ಸಂಶೋಧನ ಕಲಾಶಾಲೆಯಲ್ಲಿ ತೋರಿಸುವ ಹಾಗೆ ಸ್ಥಿತಪ್ರಜ್ಞನು ಪ್ರತ್ಯಕ್ಷವಾಗಿ ತನ್ನ ನೆಲೆಯನ್ನು ತೋರಿಸುವ ಸ್ಥಳ ಇದು" ಎಂದು ತಾನು ಓದಿದ ವೇದಾಂತ ಶಾಸ್ತ್ರದ ವಿವರಣೆಯನ್ನು ಇಲ್ಲಿ ಕಂಡರು. ಆಗ ಅಲ್ಲಿ ಆರು ಜನಗಳು ಮಾತ್ರವೇ ಇದ್ದರು. ಗುರುಗಳು ಉಳಿದವರೊಡನೆ ಒಂದೆರಡು ಮಾತಾಡಿಬಿಟ್ಟು ಮತ್ತೆ ಆ ಶಿಷ್ಯನನ್ನು ಕುರಿತು, "ಮಂತ್ರೋಪದೇಶವನ್ನು ಪೀಠಾಧಿಪತಿಗಳಬಳಿಯೋ, ಸಂನ್ಯಾಸಿಗಳಬಳಿಯೋ ಮಾತ್ರವೇ ತೆಗೆದುಕೊಳ್ಳಬೇಕೆಂದು ನಿಯಮವಿಲ್ಲ. ಬೇರೆ ತಕ್ಕವರಾದ ದೊಡ್ಡವರ ಬಳಿಯೂ ಉಪದೇಶ ಪಡೆದುಕೊಳ್ಳಬಹುದು. ಅವಶ್ಯವಾದರೆ, ಮೂಲಮಂತ್ರವನ್ನು ಮಾತ್ರ ನಮ್ಮಿಂದ ಪಡೆದು... ...ದೊಡ್ಡದೇನಲ್ಲ. ಮಂತ್ರೋಪ

Sri Vidyabharathi Book Centre, Sringeri

CC-0. In Public Domain. Digitized by eGangotri

ದೇಶವನ್ನು ಬೇರೆಯವರಿಂದ ಪಡೆದುಕೊಂಡು ಅದನ್ನು ನಮ್ಮ ಕಿವಿಗೆ ಹಾಕಿದರೆ ಸಾಕು" ಎಂದು ಹೇಳಿ, ಕೆಲವು ಕ್ಷಣ ಕಳೆದ ಮೇಲೆ, ಇನ್ನೂ ಗಂಭೀರವಾದ ದನಿಯಲ್ಲಿ, "ತಿಳಿಯಿತೇ ?" ಎಂದು ಸ್ಪಷ್ಟವಾಗಿ ಕೇಳಿದರು. ಶಿಷ್ಯನಿಗೆ ಕಣ್ಣಿನಲ್ಲಿ ಬಳಬಳನೆ ನೀರುಕ್ಕಿ ಬಂತು. ನಾವು ಬಾಯಿಬಿಟ್ಟು ಕೇಳದೇ ಮನಸ್ಸಿನಲ್ಲೇ ಇಟ್ಟುಕೊಂಡು ಹೊರಪಡಿಸಲಾರದೆ ಯೋಚಿಸುತ್ತಿರುವ ಪ್ರಶ್ನೆಗೆ ಇಷ್ಟೊಂದು ಕರುಣೆಯಿಂದ ಉತ್ತರ ಕೊಟ್ಟರಲ್ಲಾ ಎಂದು ಸಂತೋಷಪಟ್ಟರು. ಇದನ್ನು ಮತ್ತೊಮ್ಮೆ ಚಿಕ್ಕಸನ್ನಿಧಾನದಬಳಿ ಈ ಶಿಷ್ಯರು ತಿಳಿಯಪಡಿಸಲಾಗಿ, "ನೀವು ಭಾಗ್ಯಶಾಲಿ. ಅವರ ಅನುಗ್ರಹ ದೊರೆಯಿತು. ತಇನ್ನು ಚಿಂತೆಮಾಡಬೇಡಿ" ಎಂದರು.

ಇದರಂತೆಯೇ, ಅಂತರ್ಮುಖಾವಸ್ಥೆಯಲ್ಲಿರುವಾಗ ಹಲವರಿಗೆ ಅನುಗ್ರಹ ದೊರೆತಿದೆ. ಆದರೆ, ಚಿಕ್ಕಸನ್ನಿಧಾನವು ಎಲ್ಲರನ್ನೂ ಅಂತರ್ಮುಖಿಗಳಾಗಿರುವ ಗುರುವನ್ನು ಸಂಧಿಸಲು ಬಿಡುತ್ತಿರಲಿಲ್ಲ. ಮಹಾಸನ್ನಿಧಾನದ ತಪಸ್ಸಿಗೆ ವಿಘ್ನ ಉಂಟಾಗದಂತಿರಬೇಕು ಎಂಬುದೇ ಇದಕ್ಕೆ ಕಾರಣ.

ಶ್ರೀರಾಜೇಂದ್ರ ಪ್ರಸಾದರ ಆಗಮನ

೧೯೫೫ನೆಯ ವರ್ಷ ಆಗಸ್ಟ್ ತಿಂಗಳು ೨೫ನೆಯ ತಾರೀಖು ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದ ಸನ್ಮಾನ್ಯ ಶ್ರೀ ಬಾಬೂ ರಾಜೇಂದ್ರಪ್ರಸಾದರವರು ಗುರು ದರ್ಶನಕ್ಕಾಗಿ ಶೃಂಗೇರಿಗೆ ಬಂದರು. ರಾಜಕೀಯವಾದಿಗಳು ಬಂದು ದರ್ಶಿಸುವುದ ರಲ್ಲಿ ಹಿರಿಯ ಸನ್ನಿಧಾನಕ್ಕೆ ಯಾವಾಗಲೂ ಇಷ್ಟವಿರಲಿಲ್ಲ. ವ್ಯರ್ಥವಾಗಿ ಕಾಲ ಹರಣ ಮಾಡುವುದೂ ಚರ್ಚೆಮಾಡುವುದೂ ಅವರಿಗೆ ಹಿಡಿಸುತ್ತಿರಲಿಲ್ಲ. ಆತ್ಮಾರ್ಥವಾದ ವಿಷಯಗಳ ಬಗ್ಗೆ ಯಾರು ಬಂದು ಏನನ್ನು ಕೇಳಿದರೂ ಅವರಿಗೆ ಉತ್ಸಾಹದಿಂದ ಭಾವಬೋಧಕವಾಗಿ ಉತ್ತರ ಹೇಳುತ್ತಿದ್ದರು. ಹಾಗಿರಲಾಗಿ ರಾಜೇಂದ್ರಪ್ರಸಾದರು ಒಬ್ಬ ರಾಜಕಾರಣಿಯೆಂಬ ಕಾರಣದಿಂದ ಮಹಾಸನ್ನಿ ಧಾನವು ಮೊದಮೊದಲು ಉತ್ಸಾಹ ತೋರಿಸಲಿಲ್ಲ. ಹಲಮಂದಿ ಮುಖ್ಯ ಶಿಷ್ಯರು ಶ್ರೀ ರಾಜೇಂದ್ರಪ್ರಸಾದರು ಅತ್ಯಂತ ಉನ್ನತಾಧಿಕಾರಿಗಳು ಮಾತ್ರವಲ್ಲ, ನಿಜವಾಗಿ ಸತ್ಪುರುಷರೂ ಹೌದು ಎಂಬುದಾಗಿ ಹೇಳಿದಮೇಲೆ, ಅವರ ಮನಸ್ಸು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಲ್ಪ ಬದಲಾಯಿಸಿತು. ಪ್ರಸಾದರು ಬರುವುದಕ್ಕೆ ಕೆಲವು ದಿನ ಮೊದಲು ಆಪ್ತಕಾರ್ಯದರ್ಶಿ ಶ್ರೀ ಎಸ್. ಜಿ. ನರಸಿಂಹಯ್ಯನವರು ಮಹಾಸನ್ನಿಧಾನದ ಬಳಿ ಹೋಗಿ "ರಾಜೇಂದ್ರಪ್ರಸಾದರು ಸುಸಂಸ್ಕೃತವಿದ್ವಾಂಸರು, ಆಸ್ತಿಕರು, ಶಾಸ್ತ್ರಗಳಲ್ಲಿ ನಂಬಿಕೆಯುಳ್ಳವರು, ಸಾಧುಪುರುಷರು" ಎಂದು ತಿಳಿಸಿದರು. ಒಡನೆಯೇ ಮಹಾಸನ್ನಿಧಾನವು "ಹಾಗೇನು? ಶ್ರೀಮಠದ ಮರ್ಯಾದೆಗಳೊಡನೆ ಅವರನ್ನು ಸ್ವಾಗತಿಸಿ ಪಲ್ಲಕ್ಕಿಯಲ್ಲಿ ಕರೆದುಕೊಂಡು ಬನ್ನಿ" ಎಂದು ಅಪ್ಪಣೆ ಮಾಡಿದರು.

ಒಡನೆಯೇ ಆಪ್ತಕಾರ್ಯದರ್ಶಿ, ಮಠದಲ್ಲಿರುವ ಬೆಳ್ಳಿ ಪಲ್ಲಕ್ಕಿಯನ್ನು ತೊಳೆಯಿಸುತ್ತಿದ್ದರು. ಅದೇ ಸಮಯದಲ್ಲಿ ಮಹಾಸನ್ನಿಧಾನವು ಭಿಕ್ಷೆಯನ್ನು ಮುಗಿಸಿಕೊಂಡು ಆಕಡೆ ಬಂದವರು ಇವರುಗಳನ್ನು ನೋಡಿದರು. "ಏನು ವಿಶೇಷ?" ಎಂದು ಕೇಳಿದರು. "ಅಪ್ಪಣೆಯಾದ ಪ್ರಕಾರ ಶ್ರೀ ರಾಜೇಂದ್ರ ಪ್ರಸಾದರನ್ನು ಕರೆದುಕೊಂಡುಬರುವುದಕ್ಕೆ ಬೆಳ್ಳಿ ಪಲ್ಲಕ್ಕಿಯನ್ನು ಚೊಕ್ಕಟ ಪಡಿಸುತ್ತಿದ್ದೀವೆ" ಎಂದರು. ಒಡನೆಯೇ ಸನ್ನಿಧಾನವು, "ಇದು ಬೇಡ, ಬಂಗಾರದ ಪಲ್ಲಕ್ಕಿಯನ್ನೇ ತೆಗೆದುಕೊಂಡುಹೋಗಿ" ಎಂದರು. ಅದರಂತೆ ಬಂಗಾರದ ಪಲ್ಲಕ್ಕಿಯೇ ಸಿದ್ಧವಾಯಿತು. ಶ್ರೀ ರಾಜೇಂದ್ರಪ್ರಸಾದರು ಊರ ಒಳಕ್ಕೆ ಪ್ರವೇಶ ಮಾಡುವ ಸಮಯದಲ್ಲಿ ಶ್ರೀಮಠದ ಸರ್ವಾಧಿಕಾರಿಗಳೂ, ಆಪ್ತ ಕಾರ್ಯದರ್ಶಿಗಳೂ, ಶ್ರೀಮಠದ ವಿದ್ವಾಂಸರೂ, ಪುರಪ್ರಮುಖರೂ, ಚಿನ್ನದ ಪಲ್ಲಕ್ಕಿ ಮತ್ತು ಶ್ರೀಮಠದ ಸಕಲ ರಾಜಮರ್ಯಾದಿಗಳೊಡನೆ ಹೋಗಿ ಅವರನ್ನು ಎದುರುಗೊಂಡು ಸ್ವಾಗತಿಸಿದರು. ಪಲ್ಲಕ್ಕಿಯನ್ನು ತೋರಿಸಿ, "ಇದರಲ್ಲಿ ಏರಿಕೊಂಡು ಬರಬೇಕು" ಎಂದರು, ಸರ್ವಾಧಿಕಾರಿಗಳಾದ ಶೇಷು ಅಯ್ಯರು ಮತ್ತು ಆಪ್ತಕಾರ್ಯದರ್ಶಿಗಳು.

ಶ್ರೀರಾಜೇಂದ್ರಪ್ರಸಾದರು :—ಇದನ್ನು ಯಾರು ಉಪಯೋಗಿಸುತ್ತಾರೆ?

ಆಪ್ತಕಾರ್ಯದರ್ಶಿ :—ಮುಖ್ಯಮುಖ್ಯಕಾಲಗಳಲ್ಲಿ ಜಗದ್ಗುರುಗಳು ಉಪಯೋಗಿಸುತ್ತಾರೆ.

ಶ್ರೀ ರಾಜೇಂದ್ರಪ್ರಸಾದರು :—(ಒಡನೆಯೇ ಪಲ್ಲಕ್ಕಿಯನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡು) ಶ್ರೀ ಜಗದ್ಗುರುಗಳು ಏರುವ ಪಲ್ಲಕ್ಕಿಯಲ್ಲಿ ನಾನು ಏರುವುದೇ? ಅಗದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಪ್ತಕಾರ್ಯದರ್ಶಿ :—ತಾವು ಭಾರತದೇಶದ ಪ್ರಧಾನಪುರುಷರಾದ ರಾಷ್ಟ್ರಾಧ್ಯಕ್ಷರಲ್ಲವೇ ? ಅದು ಚಕ್ರವರ್ತಿಗೆ ಸಮಾನವಾದ ಸ್ಥಾನವಾದುದರಿಂದ ಅದಕ್ಕೆ ತಕ್ಕ ಸ್ವಾಗತ ನೀಡಬೇಕೆಂದು ನಮ್ಮ ಮಹಾಸನ್ನಿಧಾನದ ಆಜ್ಞೆ.

ಶ್ರೀ ರಾಜೇಂದ್ರಪ್ರಸಾದರು - ಇರಬಹುದು. ಆದರೆ ನಾನು ನಡೆದೇ ಬರುತ್ತೇನೆ, ಅಥವಾ ಕಾರಿನಲ್ಲಿ ಬರುತ್ತೇನೆ.

ಆಪ್ತಕಾರ್ಯದರ್ಶಿ—ತಾವು ಪಲ್ಲಕ್ಕಿಯಲ್ಲಿ ದಯಮಾಡಿದರೆ ಮಹಾಸನ್ನಿಧಾನದ ಸಂತೋಷವನ್ನು ಹೆಚ್ಚಿಸಿದಂತಾಗುವುದು.

ಶ್ರೀ ರಾಜೇಂದ್ರಪ್ರಸಾದರು—ಹಾಗೆ ಮಾಡದೆ ಇದ್ದುದಕ್ಕಾಗಿ ನಾನು ಅವರಲ್ಲಿ ಕ್ಷಮೆ ಕೇಳಿಕೊಳ್ಳುತ್ತೇನೆ. ನಾನು ಕಾರಿನಲ್ಲಿ ಬರುತ್ತೇನೆ.

ಆಮೇಲೆ ರಾಷ್ಟ್ರಾಧ್ಯಕ್ಷರ ಮೆರವಣಿಗೆ ತೆರೆದ ಕಾರಿನಲ್ಲಿ ಶೃಂಗೇರಿಯ ರಾಜಬೀದಿಯಲ್ಲಿ ಹೊರಟು ಶ್ರೀಮಠಕ್ಕೆ ಬಂದು ಸೇರಿತು. ಅವರನ್ನು ಮಹಾಸನ್ನಿಧಾನವು ಪ್ರೀತಿಯಿಂದ ಬರಮಾಡಿಕೊಂಡು, ಮೊದಲು ಶ್ರೀಶಾರದಾಂಬೆಯ ಸನ್ನಿಧಿಯಲ್ಲೂ ತರುವಾಯ ಶ್ರೀ ಚಂದ್ರಮೌಳೀಶ್ವರ ತೊಟ್ಟಿಯಲ್ಲಿಯೂ ಸಂಭಾಷಣೆ ನಡಸಿದರು. ಚಂದ್ರಮೌಳೀಶ್ವರತೊಟ್ಟಿಯಲ್ಲಿ ಸುಮಾರು ಮುಕ್ಕಾಲು ಗಂಟೆ ಹೊತ್ತು ಇಬ್ಬರೂ ಏಕಾಂತದಲ್ಲಿ ಸಂಭಾಷಣೆ ಮಾಡಿದರು. ಸಂಭಾಷಣೆ ಸಂಸ್ಕೃತದಲ್ಲಿಯೇ ನಡೆಯಿತು. ಆಗ ಚಿಕ್ಕ ಸನ್ನಿಧಾನವು ಹೊರಗಡೆಯೇ ಇದ್ದುಬಿಟ್ಟರು. ಒಡನೆಯೇ ಮಹಾಸನ್ನಿಧಾನವು ಚಿಕ್ಕಸನ್ನಿಧಾನವನ್ನು ಒಳಕ್ಕೆ ಬರಮಾಡಿಕೊಂಡರು. ಇವರು ಒಳಕ್ಕೆ ಹೋದೊಡನೆಯೇ ಶ್ರೀ ರಾಜೇಂದ್ರ ಪ್ರಸಾದರು ಎದ್ದು ಚಿಕ್ಕ ಸನ್ನಿಧಾನವನ್ನು ವಂದಿಸಿ ಕೂತುಕೊಂಡರು. ಚಿಕ್ಕ ಸ್ವಾಮಿಗಳು ಅವರೊಡನೆ ಸ್ಪಷ್ಟವಾದ ಸರಳ ಹಿಂದಿಯಲ್ಲಿ ಮಾತಾಡಲು ಆರಂಭಿಸಿದರು.

ಶ್ರೀ ರಾಜೇಂದ್ರಪ್ರಸಾದರು—ಓ! ತಮಗೆ ಇಷ್ಟು ಸರಳವಾಗಿ, ಇಷ್ಟು ಶುದ್ಧವಾಗಿ, ಹಿಂದಿಯಲ್ಲಿ ಮಾತಾಡಬರುತ್ತದೆಯೆಂದು ನನಗೆ ಗೊತ್ತಿರಲಿಲ್ಲ! ಇಷ್ಟು ಹೊತ್ತೂ ನಾನು ಗುರುಗಳೊಡನೆ ಮಾತಾಡುತ್ತಿದ್ದಾಗ ತಾವು ಜೊತೆಯಲ್ಲಿ ಇದ್ದಿದ್ದರೆ, ಆ ಕಾಲವನ್ನು ಇನ್ನೂ ಚೆನ್ನಾಗಿ ಉಪಯೋಗಿಸಿ ಕೊಳ್ಳಬಹುದಾಗಿತ್ತು ಎನ್ನಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕ ಸನ್ನಿಧಾನ—ತಾವಿಬ್ಬರೂ ಏಕಾಂತದಲ್ಲಿ ಮಾತಾಡುತ್ತಿರುವಾಗ ನಾನು ಒಳಗೆ ಬರುವುದು ಉಚಿತವಲ್ಲವೆಂದೇ ಬರಲಿಲ್ಲ.

ಶ್ರೀ ರಾಜೇಂದ್ರಪ್ರಸಾದರು—ಅದು ತಮ್ಮ ವಿಷಯದಲ್ಲಿ ಬಾಧಕವೇ?

ಚಿಕ್ಕ ಸನ್ನಿಧಾನ—ಯಾರೇ ಆದರೂ ನಿಯಮವೆಂಬುದು ಒಂದೇ ತಾನೆ? ಅದನ್ನು ಮೀರಿ ನಡೆಯುವುದು ತಪ್ಪು ಎಂದೇ ನಾನು ಹೊರಗೆ ಇದ್ದೆ.

ಇದಾದಮೇಲೆ ಅರ್ಧ ಗಂಟೆ ಹೊತ್ತು ಮೂವರೂ ಮಾತಾಡುತ್ತಾ ಇದ್ದರು. ಚಿಕ್ಕ ಸನ್ನಿಧಾನದ ಹಿಂದೀಭಾಷಾ ಪರಿಚಯ ವಿಶೇಷದಿಂದ ಶ್ರೀ ರಾಜೇಂದ್ರಪ್ರಸಾದರು ಹಲವು ವಿಷಯಗಳನ್ನು ತಿಳಿದುಕೊಂಡರು.

ತಾವು ಅವಸರವಾಗಿ ಹಿಂದಿರುಗಬೇಕಾಗಿರುವುದಾಗಿಯೂ, ದರ್ಶನಕ್ಕೆ ಮತ್ತೆ ಬರಬೇಕೆಂಬ ಆಸೆಯಿರುವುದಾಗಿಯೂ ಹೇಳಿ, ಶ್ರೀ ರಾಜೇಂದ್ರ ಪ್ರಸಾದರು ಇಬ್ಬರು ಸನ್ನಿಧಾನಗಳ ಅಪ್ಪಣೆಯನ್ನು ಪಡೆದರು.

ಈ ಸಂದರ್ಶನದ ಸವಿನೆನಪಿನ ಕಾರಣದಿಂದಲೇ, ೧೯೬೦ರಲ್ಲಿ ಶ್ರೀ ರಾಜೇಂದ್ರಪ್ರಸಾದರು ಮದರಾಸಿಗೆ ಬಿಜಯಮಾಡಿದಾಗ, ಅಲ್ಲಿ ಈಗಿನ ಶೃಂಗೇರಿ ಜಗದ್ಗುರುಗಳು ಬಿಡಾರ ಮಾಡಿದ್ದರೆಂಬುದನ್ನು ಕೇಳಿ, ಅವರು ತಂಗಿದ್ದ ಸ್ಥಳಕ್ಕೆ ಹೋಗಿ ದರ್ಶನ ಪಡೆದರು.

ಗುರುನಾಥರ ಸಂಕಲ್ಪ

ಕೆಲವು ವರ್ಷಗಳ ಹಿಂದಿನ ವಿಷಯವೊಂದನ್ನು ಈಗ ಪ್ರಸ್ತಾಪಿಸೋಣ.

ಈರೋಡಿನಲ್ಲಿ ವಕೀಲರಾಗಿದ್ದ ಎಸ್. ಗಣಪತಿ ಅಯ್ಯರ್ ಎಂಬುವರು ಅಲ್ಲಿನ ಶೃಂಗೇರೀ ಮಠದ ಧರ್ಮಾಧಿಕಾರಿಗಳಾಗಿದ್ದ ಕಾಲ. ಶಿಷ್ಯರುಗಳಲ್ಲಿ ಮುಖ್ಯರಾಗಿದ್ದವರು ಅವರು. ಮಹಾಸನ್ನಿಧಾನವು ೧೯೩೪ನೆಯ ವರ್ಷದಲ್ಲಿ ಈರೋಡಿಗೆ ಬಿಜಮಾಡಿದಾಗ ಶ್ರೀಮಠದ ಮೊಕ್ಕಾಮು ಇವರ ಗೃಹದಲ್ಲಿಯೇ ಏರ್ಪಾಡಾಗಿತ್ತು. ಅಲ್ಲಿಂದೀಚೆಗೆ ದೊಡ್ಡ ಸನ್ನಿಧಾನಕ್ಕೂ ಇವರಿಗೂ ಹತ್ತಿರವಾದ ಬಳಕೆಯುಂಟಾಗಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಣಪತಿ ಅಯ್ಯರು ಒಂದು ಸಲ ಶೃಂಗೇರಿಗೆ ಹೋಗಿದ್ದರು. ದೊಡ್ಡ ಸನ್ನಿಧಾನವನ್ನು ದರ್ಶಿಸಿದ ಮೇಲೆ ಇಬ್ಬರೂ ಶ್ರೀ ವಿದ್ಯಾಶಂಕರಾಲಯಕ್ಕೆ ಪ್ರದಕ್ಷಿಣೆ ಮಾಡುತ್ತಾ ಇದ್ದ ಸಮಯ.

ಗಣಪತಿ ಅಯ್ಯರ್ :—ದಕ್ಷಿಣದೇಶಕ್ಕೆ ಸನ್ನಿಧಾನವು ಯಾತ್ರೆ ಬಂದು ಬಹುವರ್ಷಗಳಾಗಿವೆ. ಮತ್ತೊಂದು ಸಲ ಯಾತ್ರೆ ಬರಬೇಕಾಗಿ ಎಲ್ಲರೂ ಪ್ರಾರ್ಥಿಸುತ್ತಾರೆ.

ಮಹಾಸನ್ನಿಧಾನ:—ಇನ್ನು ಮೇಲೆ ಈ ಶರೀರಕ್ಕೆ ದೇಶಾಟನೆ ಆಗುವುದಿಲ್ಲ.

ಗಣಪತಿ ಅಯ್ಯರ್ :—ಹಾಗಾದರೆ ಚಿಕ್ಕಸನ್ನಿಧಾನವನ್ನಾದರೂ ಯಾತ್ರೆ ಹೊರಡುವಂತೆ ಅನುಗ್ರಹ ಮಾಡಬೇಕು.

ಮಹಾಸನ್ನಿಧಾನ :—ಅಯ್ಯಾ ಗಣಪತಿ ಅಯ್ಯರೇ, ದಕ್ಷಿಣ ದೇಶದಲ್ಲಿ ಹೇರಳವಾಗಿ ವಿದ್ವಾಂಸರುಗಳಿದ್ದಾರೆ. ಅವರುಗಳೆಲ್ಲ ಹಲವು ವಿಷಯಗಳನ್ನು ವಿಪುಲವಾಗಿ ಚರ್ಚೆಮಾಡಬಲ್ಲರು. ಅವರುಗಳಿಗೆ ತೃಪ್ತಿಕರವಾಗಿ ಉತ್ತರ ಹೇಳುವ ಸಾಮರ್ಥ್ಯ ಬರಬೇಕು. ಇದರ ಜೊತೆಗೆ, ಶಿಷ್ಯರುಗಳಿಗೆ ಅನುಗ್ರಹ ಮಾಡುವುದಕ್ಕೆ ತಪಸ್ಸು ಅಧಿಕವಾಗಬೇಕು. ಆದ್ದರಿಂದ ಸ್ವಲ್ಪ ಕಾಲ ಕಳೆದ ಮೇಲೆ ಚಿಕ್ಕಸ್ವಾಮಿಗಳನ್ನು ಯಾತ್ರೆ ಮಾಡುವಂತೆ ಹೇಳಿಕಳಿಸಬಹುದು.

ಇದರಿಂದ, ತಮ್ಮ ಶಿಷ್ಯರಾದ ಚಿಕ್ಕಸ್ವಾಮಿಗಳಿಗೆ ಈ ಎರಡು ಶಕ್ತಿಗಳೂ ಉಂಟಾಗಬೇಕೆಂದು ಹಿರಿಯವರು ಸಂಕಲ್ಪ ಮಾಡಿದರೆಂದು ತಿಳಿಯಬರುತ್ತದೆ. ಹೇಳಿದ ಸ್ಥಳ, ಈಗಲೂ ವಿದ್ಯಾತೀರ್ಥರು ಲಂಬಿಕಾಯೋಗದಲ್ಲಿ ಇರುತ್ತಿರುವ ಶ್ರೀ ವಿದ್ಯಾಶಂಕರದೇವಾಲಯ. ಹೇಳಿದವರು ಸರ್ವಜ್ಞ ಮೂರ್ತಿಯಾದ ಜೀವನ್ಮುಕ್ತರು. ಅವರ ಸಂಕಲ್ಪ ನೆರವೇರಿರುವುದರಲ್ಲಿ ಏನು ಸಂದೇಹ? ಇದರ ಫಲವನ್ನು, ಸನ್ನಿಧಾನವನ್ನು ಈಗ ದರ್ಶನಮಾಡುವ ನಾವು ಅನುಭವಿಸಿ ಸಂತೋಷಪಡುತ್ತಿದ್ದೇವೆ.

ಈ ಸಂದರ್ಭದಲ್ಲಿ ಮತ್ತೊಂದು ಸಂಗತಿಯನ್ನು ಸೂಚಿಸುವುದು ಉಚಿತವಾಗಿದೆ. ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳು (೩೩ನೆಯ ಪೀಠಾಧಿಪತಿಗಳು) ತಮ್ಮ ಶಿಷ್ಯರಾದ ಶ್ರೀನರಸಿಂಹಶಾಸ್ತ್ರಿ (ಆಮೇಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದ ಶ್ರೀ ಚಂದ್ರಶೇಖರಭಾರತೀಸ್ವಾಮಿ ಗಳಿಗೆ. ಸರ್ವಜ್ಞತ್ವ ಉಂಟಾಗಬೇಕೆಂದು ಶ್ರೀ ಶಾರದಾಂಬೆಯನ್ನು ಬೇಡಿಕೊಂಡರು :

ಸರ್ವಜ್ಞಂ ಶ್ರೀನೃಸಿಂಹಂ ಕುರು ಶಿವದಯಿತೇ ಸತ್ವರಂ ಮದ್ವಿನಮ್ರಮ್

(ಭಕ್ತಿಸುಧಾ ತರಂಗಿಣೀ ಪುಟ ೪೪೫)

[ಶಿವದಯಿತೆ, ಬಹು ಬೇಗ ಸರ್ವಜ್ಞನಾಗಿಸೌ
ನನ್ನಲ್ಲಿ ನಮ್ರನಾಗಿಹ ಶ್ರೀ ನೃಸಿಂಹನಂ]

ಎಂಬ ಕಡೆಯ ಪಾದವುಳ್ಳ ನಾಲ್ಕು ಶ್ಲೋಕಗಳಲ್ಲಿ ಈ ವಿಧವಾಗಿ ಪ್ರಾರ್ಥನೆ ಮಾಡಿದರು, ಆ ಗುರುಗಳು. ಅದರ ಫಲವಾಗಿ ಉತ್ತಮವಾದ ಸರ್ವಜ್ಞ ಮೂರ್ತಿಯಾಗಿ ಪರಿಣಮಿಸಿದರು ಇಳನೆಯ ಪೀಠಾಧಿಪತಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು. ಶ್ರೀ ಸದ್ಗುರುವಿನ ಕರುಣೆಯೂ ಶ್ರೀ ಶಾರದಾದೇವಿಯ ಕೃಪಾಕಟಾಕ್ಷವೂ ನೆಲಸಿರುವ ಮತ್ತು ಸರ್ವಜ್ಞ ಪೀಠಾರೋಹಣ ಮಾಡಿದ ಆದಿ ಶಂಕರರು ೧೨ ವರ್ಷಕಾಲ ತಂಗಿದ್ದು ಭಾಷ್ಯಪಾಠ ಹೇಳಿದ ಸ್ಥಳ ಶೃಂಗೇರಿ. ಅಂತಹಪುಣ್ಯಸ್ಥಳದಲ್ಲಿ ಶ್ರೀ ಶಂಕರರಿಂದಲೇ ಸ್ಥಾಪಿತವಾದದ್ದು ಶ್ರೀ ಶಾರದಾಪೀಠ. ಶ್ರೀ ಸದ್ಗುರುವಿನ ಕೃಪೆ ಅಂತಹ ಪೀಠವನ್ನು ಅಲಂಕರಿಸುವವರೆಲ್ಲರನ್ನೂ ಸರ್ವಜ್ಞರಾಗಿ ಮಾಡುತ್ತವೆ ಮತ್ತು ಶ್ರೀ ಶಾರದಾಂಬೆಯ ಕಟಾಕ್ಷ. ಇದರಲ್ಲಿ ಸಂದೇಹವೇ ಇಲ್ಲ.

ದುರ್ಭರ ವಿಯೋಗ

೧೯೫೪ನೆಯ ವರ್ಷ ಸೆಪ್ಟೆಂಬರ್ ೨೬ ಭಾನುವಾರ ಶೃಂಗೇರಿಯಲ್ಲಿ ನಡೆದ ಒಂದು ಘಟನೆ ಭಾರತ ದೇಶವನ್ನೇ ದುಃಖಸಾಗರದಲ್ಲಿ ಮುಳುಗಿಸಿತು. ಅದೇನೆಂದರೆ, ಮಹಾಸನ್ನಿಧಾನದ ನಿರ್ಯಾಣ.

ವಾಡಿಕೆಯಂತೆ ಚಾತುರ್ಮಾಸ್ಯ ಕಾಲದಲ್ಲಿ ಮಹಾಸನ್ನಿಧಾನವು ಈಚೆ ದಡದಲ್ಲಿರುವ ಚಂದ್ರಮೌಳೀಶ್ವರ ತೊಟ್ಟಿಯಲ್ಲಿ ತಂಗಿದ್ದರು. ಚಾತುರ್ಮಾಸ್ಯ ಮುಗಿದಮೇಲೆ ಆಚೆದಡದಲ್ಲಿರುವ ನರಸಿಂಹವನಕ್ಕೆ ದಯಮಾಡಿದರು. ನವರಾತ್ರಿ ಉತ್ಸವಕ್ಕಾಗಿ ಶ್ರೀಮಠದಲ್ಲಿ ಎಲ್ಲಾ ಏರ್ಪಾಡುಗಳೂ ನಡೆಯುತ್ತಿದ್ದವು. ನವರಾತ್ರಿ ಉತ್ಸವದ ಆರಂಭಕ್ಕೆ ಮುನ್ನಾ ದಿನ, ಅಮಾವಾಸ್ಯೆಯಂದು

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ಶಾರದಾಂಬೆಯ ದೇವಾಲಯದಲ್ಲಿ ಅಮ್ಮನವರ ಮೂಲಮೂರ್ತಿಗೆ ವಿಶೇಷ ಅಭಿಷೇಕ ನಡೆಯುವುದು ವಾಡಿಕೆ. ಅದಕ್ಕೆ ಬೇಕಾದ ಏರ್ಪಾಡುಗಳೂ ನಡೆಯುತ್ತಿದ್ದವು. ನವರಾತ್ರಿ ಉತ್ಸವ ವೈಭವಗಳನ್ನು ನೋಡುವುದಕ್ಕಾಗಿ ಅಸಂಖ್ಯಮಂದಿ ಶಿಷ್ಯರುಗಳೂ ಭಕ್ತರುಗಳೂ ಶೃಂಗೇರಿಯಲ್ಲಿ ಬಂದು ಕೂಡಿದ್ದರು. (ಅಭಿಷೇಕದಿನದಂದು ಶ್ರೀ ಶಾರದಾಂಬೆ ತುಂಗಾದೇವಿಯ ರೂಪದಲ್ಲಿ ಇರುತ್ತಾಳೆ ಎಂದು ಹೇಳುವುದುಂಟು.)

೨೧-೯-೧೯೮೯ರ ಅಮಾವಾಸ್ಯೆಯಂದು ಬೆಳಕುಹರಿಯುವ ಕಾಲ ನಾಲ್ಕು ಅಥವಾ ನಾಲ್ಕುವರೆ ಗಂಟೆಯಲ್ಲಿ ಶ್ರೀ ಮಹಾಸನ್ನಿಧಾನವು ತಮಗೆ ಶುಶ್ರೂಷೆಮಾಡುವುದಕ್ಕಾಗಿ ಶ್ರೀಮಠದಲ್ಲಿ ನಿಯಮಿತರಾಗಿದ್ದ ಮಹಾಬಲಭಟ್ಟ ರೆಂಬ ಶಿಷ್ಯನನ್ನು ಕರೆದು, "ತುಂಗಾನದಿಯಲ್ಲಿ ಸ್ನಾನಮಾಡುವುದಕ್ಕೆ ಹೋಗ ಬೇಕು. ಬೇಗ ಸಿದ್ಧಮಾಡು" ಎಂದು ಅಪ್ಪಣೆ ಮಾಡಿದರು. ಅದನ್ನು ಕೇಳಿದೊಡನೆ ಶಿಷ್ಯನು ಅವಸರಪಟ್ಟುಕೊಂಡು ಎದ್ದು ವಸ್ತ್ರವೇ ಮೊದಲಾದ ಸಾಮಗ್ರಿಗಳನ್ನೂ, ಒಂದು ಕೈಲಾಂದ್ರ(ದೀಪ)ವನ್ನೂ ತೆಗೆದುಕೊಂಡು ಬಂದನು. ಮಹಾಸನ್ನಿಧಾನವು ಆಶ್ರಮದಿಂದ ಹೊರಬಂದು ತಮ್ಮ ಗುರುವಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳ ಅಧಿಷ್ಠಾನಕ್ಕೆ ಪ್ರದಕ್ಷಿಣೆ ಮಾಡಿ ನೇರವಾಗಿ ತುಂಗಾನದಿಗೆ ಪಾದಬೆಳೆಸಿದರು. ಮಹಾಬಲ ಭಟ್ಟರೂ, ಒಂದು ಕೈಯಲ್ಲಿ ದೀಪವನ್ನೂ, ಒಂದು ಕೈಯಲ್ಲಿ ಗುರುಗಳ ಮಡಿ ಬಟ್ಟೆ ಚೀಲವನ್ನೂ ಹಿಡಿದುಕೊಂಡು ಗುರುಗಳ ಮುಂದೆ ನಡೆದರು.

ಗುರುಗಳು ಸ್ನಾನಕ್ಕಾಗಿ ತುಂಗೆಯಲ್ಲಿಳಿದರು. ಆಗ ಬೆಳಗಿನ ಐದು ಗಂಟೆ ಇರಬಹುದು. ನದಿಯ ದಡದಮೇಲೆ ಮಹಾಬಲಭಟ್ಟರು ನಿಂತಿದ್ದರು. ಗುರುಗಳು ನದಿಯಲ್ಲಿ ಸ್ನಾನಮಾಡಿ ಮೇಲೆ ಎದ್ದು ಮತ್ತೊಮ್ಮೆ ಮಂತ್ರಗಳನ್ನು ಹೇಳಿಕೊಳ್ಳುತ್ತ ನೀರಿನಲ್ಲಿ ಪ್ರವೇಶಿಸಿದರು ಸ್ವಲ್ಪಹೊತ್ತು ಆದರೂ ಗುರುಗಳು ಕಾಣಬರಲಿಲ್ಲ. ದಡದ ಮೇಲಿನಿಂದ ಗಮನಿಸುತ್ತಿದ್ದ ಮಹಾಬಲಭಟ್ಟರು, "ಗುರುಗಳು ನೀರಿನಲ್ಲಿ ಹೋಗಿಬಿಟ್ಟರಲ್ಲಾ !" ಎಂದು ಗಟ್ಟಿಯಾಗಿ ಕೂಗು ಹಾಕುತ್ತಾ ತಾವೂ ನದಿಯಲ್ಲಿ ಧುಮುಕಿದರು. ಕೆಲವು ಕ್ಷಣಗಳವರೆಗೂ ಗುರು ಗಳಿರುವ ಸ್ಥಳ ತಿಳಿಯಲಿಲ್ಲ. ತರುವಾಯ, ಸ್ವಲ್ಪದೂರ ಈಜಿಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋದಮೇಲೆ, ಗುರುಗಳ ಶರೀರವನ್ನು ಕಂಡು, ತಮ್ಮ ತೋಳಿನಲ್ಲಿ ಅಪ್ಪಿಕೊಂಡರು. ತುಂಗಾನದಿಯ ಪ್ರವಾಹ ಇಬ್ಬರನ್ನೂ ಕೊಚ್ಚಿಕೊಂಡು ಹೋಗುತ್ತಿತ್ತು.

ಭಟ್ಟರು ಕೂಗುಹಾಕಿದ ಸದ್ದು ಕೇಳಿ ಶ್ರೀ ಶಾರದಾ ದೇವಾಲಯದ ಪಕ್ಕದಲ್ಲಿದ್ದ ಶ್ರೀಮಠದ ಜನಗಳು ತುಂಗಾನದಿಯ ದಡಕ್ಕೆ ಓಡಿದರು. ಭಟ್ಟರು ತಮ್ಮ ಗುರುವನ್ನು ಅಪ್ಪಿಕೊಂಡೇ ಜಲಪ್ರವಾಹದಿಂದ ಸೆಳೆಯಲ್ಪಟ್ಟು ಹೋಗುತ್ತಿದ್ದರು. ಆಗಲೂ ಕೂಗು ಹಾಕುತ್ತಲೇ ಇದ್ದರು. ಆ ಶಬ್ದದಿಂದ ಇವರಿದ್ದ ಸ್ಥಳ ದಡದಲ್ಲಿದ್ದವರಿಗೆ ತಿಳಿಯಬಂತು. ಸುಮಾರು ಮೂರು ಫರ್ಲಾಂಗು ದೂರದವರೆಗೂ ಹೀಗೆ ಹೋಗುತ್ತಲೇ ಇರಲಾಗಿ, ಕೂಗನ್ನು ಕೇಳಿ, ಸ್ನಾನಮಾಡಿ ದಡದ ಮೇಲೆ ನಿಂತಿದ್ದ ತೆಳು ಶರೀರಿಯೂ, ರಾಷ್ಟ್ರೀಯ ಸ್ವಯಂಸೇವಕನೂ ಆದ ಕೇಶವಮೂರ್ತಿಯೆಂಬ ಒಬ್ಬ ತರುಣನು ಕೂಡಲೆ ನದಿಗೆ ದುಮುಕಿ ಅವರಿಬ್ಬರನ್ನೂ ತನ್ನ ತೋಳುಗಳಲ್ಲಿ ಸಿಕ್ಕಿಸಿಕೊಂಡು ದಡಕ್ಕೆ ಬಂದು ಸೇರಿದನು. ಇವನ ಬಡಕಲು ಶರೀರ ಹೇಗೆ ತಾನೆ ಆ ಘನವಾದ ಎರಡು ಶರೀರಗಳನ್ನೂ ಹೊತ್ತುಕೊಂಡಿತೋ ! ಎಂದು ಕಂಡವರೆಲ್ಲಾ ಅಚ್ಚರಿಹೊಂದಿದರು. ಇಷ್ಟರಲ್ಲಿ ಚಿಕ್ಕಸನ್ನಿಧಾನವು ಮಠದ ಭಟ್ಟರುಗಳೊಡನೆ ಆ ಸ್ಥಳಕ್ಕೆ ಓಡಿಬಂದರು.

ಒಡನೆಯೇ ಡಾಕ್ಟರನ್ನು ಕರಸಿಕೊಂಡು ಪರೀಕ್ಷಿಸಿದ್ದರಲ್ಲಿ ಮಹಾಸನ್ನಿಧಾನದ ಶರೀರದಲ್ಲಿ ಉಸಿರಿಲ್ಲವೆಂದೂ, ಆದರೆ ಅವರ ಹೊಟ್ಟೆಯಲ್ಲಿ ನೀರು ಒಂದು ಹನಿಕೂಡ ಹೋಗಿಲ್ಲವೆಂದೂ ಡಾಕ್ಟರು ಹೇಳಿದರು. ಮಹಾಸನ್ನಿಧಾನದ ದೇಹವನ್ನು ದಡದಮೇಲಿಟ್ಟಾಗ ಅವರು ಪದ್ಮಾಸನ ಹಾಕಿಕೊಂಡಿದ್ದದ್ದೂ ಕೈಗಳು ಚಿನ್ಮುದ್ರೆಯಲ್ಲಿದ್ದದ್ದೂ ಕಾಣಬಂದವು. ತಮ್ಮ ತಪೋಮಹಿಮೆಯಿಂದಲೂ, ಯೋಗಶಕ್ತಿಯಿಂದಲೂ ಕೂಡಿ, ಪ್ರಾಣಾಯಾಮ ಮಾಡುತ್ತ ಕೈಯಲ್ಲಿ ಚಿನ್ಮುದ್ರೆಯನ್ನು ಧರಿಸಿ ಜಲಸಮಾಧಿಹೊಂದಿದ್ದರು—ಎಂಬುದು ಎಲ್ಲರಿಗೂ ಸ್ಪಷ್ಟವಾಗಿ ತಿಳಿಯಿತು. ಪರಮಹಂಸರುಗಳು ಪ್ರಾರಬ್ಧ ಮುಗಿದ ಮೇಲೆ ತಮ್ಮ ಶರೀರವನ್ನು ಜಲದಲ್ಲಿಯೋ ನೆಲದಲ್ಲಿಯೋ ಎಲ್ಲಿಯಾದರೂ ತ್ಯಾಗ ಮಾಡಬಹುದು. ಉತ್ತಮ ಪುರುಷರು ತಮ್ಮ ಜೀವಿತದಲ್ಲಿ ಕರ್ಮಯೋಗ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಯೋಗ, ಇವುಗಳನ್ನು ಅವಲಂಬಿಸಿ, ಜ್ಞಾನವುಂಟಾದಬಳಿಕ ಯೋಗ ಶಕ್ತಿಯಿಂದ ತಮ್ಮ ಶರೀರವನ್ನು ತ್ಯಾಗಮಾಡುತ್ತಾರೆ—ಎಂಬ ಧರ್ಮವನ್ನು ಮಹಾಕವಿ ಕಾಳಿದಾಸನು ರಘುವಂಶಕಾವ್ಯದಲ್ಲಿ,

ಯೋಗೇನಾಂತೇ ತನುತ್ಯಜಾಮ್
[ಕಡೆಯಲ್ಲಿ ಯೋಗದಿಂ ದೇಹಬಿಡುವವರು]

ಎಂದು ಎತ್ತಿ ಹೇಳಿದ್ದಾನೆ. ಯೋಗ ಶಾಸ್ತ್ರವನ್ನು ಚೆನ್ನಾಗಿ ಅರಿತುಕೊಂಡಿರುವವರಿಗೆ ಈ ಅತಿಶಯವಾದ ಶಕ್ತಿಯುಂಟು. ಇಲ್ಲಿ 'ಯೋಗೇನ' ಎಂಬ ಪದಕ್ಕೆ 'ಪರಮಾತ್ಮ ಧ್ಯಾನದೊಡನೆ' ಎಂದು ಅರ್ಥ. ಶರೀರವನ್ನು ಒದರಿ ತಳ್ಳುವ ಕಾಲದಲ್ಲಿ ಇವರುಗಳಿಗೆ ಪರಮಾತ್ಮಧ್ಯಾನ ಮುಖ್ಯವಾಗಿ ಇರುತ್ತದೆ ಎಂದು ಹೇಳಲಾಗಿದೆ.

ಊರೆಲ್ಲ ದುಃಖಸಾಗರದಲ್ಲಿ ಮುಳುಗಿತು. ಜನಗಳು ಗುಂಪುಗುಂಪಾಗಿ ಹಿಂಬಾಲಿಸಿಬರುತ್ತಿರುವ ಗುರುಗಳ ದೇಹವನ್ನು ನರಸಿಂಹವನಕ್ಕೆ ತಂದು, ಈಗ ಸಮಾಧಿಕಟ್ಟಿರುವ ಸ್ಥಳದಲ್ಲಿ ಭೂಸ್ಥಾಪನೆಮಾಡಲಾಯಿತು. ಸಮಾಧಿಯಲ್ಲಿ ಪೂಜೆಯೂ ಮಹಾಪೂಜೆಯೂ ನಡೆಯಿತು. ಮಹಾಪೂಜೆ ನಡೆದ ದಿನ ಸಂಜೆ ಆರು ಗಂಟೆಯಲ್ಲಿ, ಹಲವು ಊರುಗಳಿಂದ ಶೃಂಗೇರಿಗೆ ಬಂದಿದ್ದ ಶಿಷ್ಯರುಗಳು ಶ್ರೀ ನರಸಿಂಹಭಾರತೀ ಸ್ವಾಮಿಗಳ ಸಮಾಧಿಯ ಮುಂದಿನ ಮಂಟಪದಲ್ಲಿ ಸಭೆ ಸೇರಿದರು. ತಮ್ಮನ್ನು ಬಿಟ್ಟು ಅಗಲಿಹೋದ ಗುರುನಾಥರ ವಿಷಯವಾಗಿ ಸನ್ನಿಧಾನವು ಕನ್ನಡದಲ್ಲಿ ಮಾತಾಡಿದರು. ತಾವು ಆಶ್ರಮ ಪಡೆದುಕೊಂಡದ್ದು, ಅದು ಮೊದಲು ಗುರುಗಳು ತಮ್ಮನ್ನು ಪೂರ್ಣವಾತ್ಸಲ್ಯದಿಂದ ಉಪದೇಶ ಮಾಡುತ್ತ ಬಂದದ್ದು, ಮೊದಲಾದ ವಿಷಯಗಳನ್ನು ಭಾವಪರವಶರಾಗಿ ಹೇಳಿದರು "ನನಗೆ ಚಿಕ್ಕ ವಯಸ್ಸು, ಅವರು ಹಲವು ವಿಷಯಗಳನ್ನು ಹೇಳುತ್ತಲೇ ಇದ್ದರೂ, ಹೊತ್ತಾಗಿಬಿಡುವುದು ; ನಾನು ಕಣ್ಣೋತು ಮಲಗಿ ಬಿಡುತ್ತಿದ್ದೆ. ಆಗ ತಮ್ಮ ಕಾಷಾಯ ಅಂಗವಸ್ತ್ರವನ್ನು ಹಾಸಿ ಅದರಲ್ಲಿ ನನ್ನನ್ನು ಎತ್ತಿ ಮಲಗಿಸುತ್ತಿದ್ದರು. ಹೀಗೆ ತಾಯಿಯಂತೆ ನನ್ನನ್ನು ಬೆಳಸಿದರು ನಮ್ಮ ಗುರುಗಳು" ಎಂದು ಹೇಳುವಾಗ, ಸನ್ನಿಧಾನದ ಅವರನ್ನೂ ದುಃಖ

Sri Vidyabharathi Book Centre, Sringeri

CC-O. In Public Domain. Digitized by eGangotri

ಆವರಿಸಿತು. ಶ್ರಮಪಟ್ಟು ಸಮಾಧಾನಮಾಡಿಕೊಂಡು ಸ್ವಲ್ಪ ಹೊತ್ತು ಮಾತಾಡಿದರು.

ಆಗಲೇ, "ನಮ್ಮ ಗುರುನಾಥರು ತಮ್ಮ ಗುರುವಿಗೆ ಯಾವ ರೀತಿ ಸುಂದರವಾದ ಸಮಾಧಿಯನ್ನು ಅಮೃತಶಿಲೆಯಲ್ಲಿ ಕಟ್ಟಿಸಿದರೋ ಅದೇ ರೀತಿಯಲ್ಲಿ ನಮ್ಮ ಗುರುಗಳ ಸಮಾಧಿಯನ್ನೂ ಕಟ್ಟಿಸಬೇಕು" ಎಂದರು. ಸತ್ಪುರುಷರ ಸಂಕಲ್ಪ ಸತ್ಯಸಂಕಲ್ಪವಾಗಿಯೇ ಮುಗಿಯುವುದು. ಈಗ ಅಲ್ಲಿ ಕಟ್ಟಿರುವ ಸಮಾಧಿಗಳನ್ನು ನೋಡಿದರೆ, "ಎರಡೂ ಒಂದೇ ಕಾಲದಲ್ಲಿ ಕಟ್ಟಿದವೊ!" ಎಂದು ಸಂದೇಹವುಂಟಾಗುವುದು. ಒಂದಕ್ಕೊಂದಕ್ಕೆ ವ್ಯತ್ಯಾಸವೇ ತಿಳಿಯುವುದಿಲ್ಲ.

ಸನ್ನಿಧಾನಕ್ಕೆ ಪೀಠಾಧಿಪತಿಯಾಗಿ ಪಟ್ಟಾಭಿಷೇಕಮಾಡಲು ಒಂದು ಶುಭ ದಿನವನ್ನು ಗೊತ್ತುಮಾಡಲಾಯಿತು. ೧೯–೧೦–೧೯೫೪ರಂದು ಹಲವು ದೇಶಗಳಿಂದ ಶಿಷ್ಯರುಗಳು ಬಂದು ಸೇರಿರಲು, ಈಗ ಪೀಠಾಧಿಪತಿಯಾಗಿರುವ ಮಹಾಸನ್ನಿಧಾನಕ್ಕೆ ಬಹು ವಿಜೃಂಭಣೆಯಿಂದ ಪಟ್ಟಾಭಿಷೇಕ ನಡೆಯಿತು. ಶ್ರೀಮಠದ ಶಿಷ್ಯರುಗಳಾದ ಹಲವು ಅರಸರುಗಳಿಂದ ಗುರುಕಾಣಿಕೆಗಳು ಸಮರ್ಪಿಸಲ್ಪಟ್ಟವು. ಶಿಷ್ಯಕೋಟಿಯ ಪರವಾಗಿ ಹರಿಹರಪುರ ಮಠಾಧಿಪತಿಗಳು ಮಹಾ ಸನ್ನಿಧಾನಕ್ಕೆ ವಂದನೆಗಳನ್ನು ಸಮರ್ಪಿಸಿದರು.

———

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೫

ಆಚಾರ್ಯರವರ ವಿಶಿಷ್ಟ ಹಿರಿಮೆ

ಬಾಲ್ಯದಲ್ಲಿಯೇ ನ್ಯಾಯವನ್ನನುಸರಿಸಿ ಒಂದು ಎಲ್ಲೆಯನ್ನು ಗೊತ್ತು ಮಾಡಿಕೊಂಡು ಅದಕ್ಕೆ ಕಟ್ಟುಬಿದ್ದು ಮೀರದೆ ನಡೆದುಕೊಳ್ಳಬೇಕೆಂಬ ಪ್ರಾಮಾಣಿಕತೆಯಲ್ಲಿ ಬೆಳೆದವರು ನಮ್ಮ ಗುರುಗಳು. ಸಂನ್ಯಾಸ ತೆಗೆದುಕೊಂಡ ಮೇಲೆ ಇದನ್ನು ಇನ್ನೂ ಕಠಿನವಾಗಿ ಅನುಷ್ಠಿಸಿದರು. ಮಠದ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಈ ನೇರನಡವಳಿಕೆಯನ್ನು ಹಿರಿಯ ಸನ್ನಿಧಾನ ಇದ್ದಾಗಲೇ ಇವರೂ ಕಾಣಿಸಿಬಿಟ್ಟರು. ಕಟ್ಟುಪಾಡಿಗೆ ಒಳಪಟ್ಟಿರುವುದು ಈ ಪೀಠದ ಪರಂಪರೆಯ ಲಕ್ಷಣ. ಅದಕ್ಕನುಗುಣವಾಗಿ, ಹಿರಿಯ ಸನ್ನಿಧಾನ ನಿರ್ಯಾಣಹೊಂದಿದ ಬಳಿಕ ತಾವೇ ಪೀಠಾಧಿಪತಿಯಾದ ಮೇಲೆ, ಎಲ್ಲಾ ಕಾರ್ಯಗಳಲ್ಲಿಯೂ ಒಂದು ಕಟ್ಟುಪಾಡೂ, ಪ್ರಾಮಾಣಿಕವಾದ ಆಚರಣೆಯೂ ಇರಬೇಕೆಂಬುದನ್ನು ಸನ್ನಿಧಾನವು ದೃಢಪಡಿಸಿದರು. ಇವರ ಆಡಳಿತದಲ್ಲಿ ಎಲ್ಲಾ ಕಾರ್ಯಗಳನ್ನೂ ನ್ಯಾಯಬದ್ಧವಾಗಿ ನಿಖರವಾಗಿ ನಡಸುವರು. ಪ್ರತಿಯೊಂದು ವಸ್ತುವೂ ಅದಕ್ಕೆ ಗೊತ್ತಾದ ಸ್ಥಳದಲ್ಲೇ ಇರಬೇಕು. ಕಂಡ ಕಂಡ ಕಡೆ ಇರಕೂಡದು. ಶ್ರೀಮಠದ ಸಿಬ್ಬಂದಿಗಳು ಎಲ್ಲಾ ವಿಷಯಗಳನ್ನೂ ಜಾಗರೂಕತೆಯಿಂದ ಗಮನಿಸುತ್ತಿರಬೇಕು. ಭಿಕ್ಷೆ, ಓದು (ಅಧ್ಯಯನ), ಬಿಡುವು ಪಡೆಯುವುದು (ಅನಧ್ಯಯನ) —ಇವುಗಳಲ್ಲಿ ಕೂಡ ಪ್ರಾಚೀನ ಸಂಪ್ರದಾಯಗಳನ್ನು ಮಾರ್ಪಡಿಸಕೂಡದು ಎನ್ನುವರು. ತಮ್ಮ ಭಿಕ್ಷೆ ಅತ್ಯಂತ ಸಾತ್ವಿಕವಾದದ್ದಾಗಿ ಇರಬೇಕು. ಸಾತ್ವಿಕವಲ್ಲದ ಪದಾರ್ಥಗಳನ್ನು ತ್ಯಜಿಸಿಬಿಡುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಹಾರನಿಯಮದ ಕಾರಣದಿಂದ, ಯಾವಾಗಲೂ ಎಲ್ಲರಲ್ಲೂ ಕರುಣೆ ದೋರುವ ಗುಣ ಸಹಜವಾಗಿಯೇ ಉಂಟಾಯಿತು. ಗೊತ್ತುಪಡಿಸಿದ ಕಾರ್ಯಗಳನ್ನು ನೆರವೇರಿಸುವುದರಲ್ಲಿ ಒಂದು ನಿಷ್ಠೆ ಮತ್ತು ಶಾಂತಗುಣ ಇವರಿಗೆ ಸ್ವತಸ್ಸಿದ್ಧವಾದವು. ಸಾಧ್ಯವಾದ ಮಟ್ಟಿಗೆ ಎಲ್ಲರೂ ಇತರರ ಕಷ್ಟವನ್ನು ನಿವಾರಣೆ ಮಾಡಬೇಕೆನ್ನುವರು. ಪೂರ್ವಾಶ್ರಮ ಬಂಧುವಾದ ಒಬ್ಬಾಕೆ ದರ್ಶನಕ್ಕೆ ಬಂದಳು. ಆಕೆಯ ಕುಟುಂಬದವರ ಯೋಗಕ್ಷೇಮವನ್ನು ಕೇಳಿ, ಕಡೆಯಲ್ಲಿ "ನೀನು ದೊಡ್ಡ ಕುಟುಂಬದವಳಾಗಿದ್ದೆಯಮ್ಮಾ. ಎಲ್ಲರೂ ಕಾಲಗತಿಹೊಂದಿ, ಈಗ ನಿನಗೆ ಆಶ್ರಯ ನೀಡುವವರು ಯಾರೂ ಇಲ್ಲವೆಂದು ಕೇಳಿ ಸಂಕಟವಾಗುತ್ತದೆ'' ಎಂದರು. ಇದನ್ನು ಆಕೆ ಅಡಿಗಡಿಗೆ ನೆನೆದುಕೊಂಡು, "ಸನ್ನಿಧಾನದ ಕರುಣೆ ಅಪಾರ, ಮನಸ್ಸಿಗೆ ನೆಮ್ಮದಿ ಉಂಟುಮಾಡಿತು" ಎನ್ನುವರು. ಸನ್ನಿಧಾನದ ಕಾರ್ಯನಿರ್ವಾಹಸಾಮರ್ಥ್ಯ ಬಹು ಹೆಚ್ಚಿನದು. ಲೌಕಿಕದಲ್ಲಿಯೂ ಅಸಾಧಾರಣವಾದ ತಿಳಿವಳಿಕೆಯುಳ್ಳವರು. ಯಾವುದನ್ನೇ ಆದರೂ ಪೂರ್ವಾಪರ ಯೋಚನೆಯಿಂದ ತೀರ್ಮಾನಿಸಿಬಿಡುವರು. ಆಯಾ ಕಾರ್ಯಗಳಿಗೆ ತಕ್ಕಂತೆ ಗೊತ್ತುಪಾಡುಮಾಡಿಕೊಡುವುದರಲ್ಲಿ ವಿಶೇಷ ಶಕ್ತಿಯುಳ್ಳವರು.

ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ತಿಳಿದುಕೊಳ್ಳಬೇಕೆಂಬ ಆಸೆ ಅತ್ಯಧಿಕವಾಗಿದೆ ನಮ್ಮ ಸನ್ನಿಧಾನಕ್ಕೆ. ಹೇರಳವಾಗಿ ಪುಸ್ತಕಗಳನ್ನು ತರಿಸಿಕೊಂಡು ಯಾವಾಗಲೂ ಓದುತ್ತಲೇ ಇರುವರು. ವಿದ್ವಾಂಸರುಗಳು ಬಂದು ಶಾಸ್ತ್ರವಿಷಯವಾಗಿ ಚರ್ಚೆ, ವಾಕ್ಯಾರ್ಥ ಮಾಡುತ್ತಿದ್ದರೆ, ಇವರು ಬಹಳ ಉತ್ಸಾಹದಿಂದ ಅದರಲ್ಲಿ ಭಾಗವಹಿಸುವರು. ಬಾಲವಿದ್ವಾಂಸರು ವಾಕ್ಯಾರ್ಥ ಮಾಡುವುದಕ್ಕೆ ಮುಂದೆ ಬಂದರೆ, ಅವರುಗಳನ್ನು ಉತ್ಸಾಹಪಡಿಸಿ ಮತ್ತೂ ಮತ್ತೂ ಅವರಿಗೆ ಉತ್ಸಾಹವೇರುವಂತೆ ಮಾಡುವರು. ಆ ಸಮಯದಲ್ಲಿ ಹಿರಿಯ ವಿದ್ವಾಂಸರು ಯಾರಾದರೂ ಮಧ್ಯೆ ಪ್ರವೇಶಿಸಿ ಚರ್ಚೆಯನ್ನು ತಗ್ಗಿಸಿ ಬಾಲವಿದ್ವಾಂಸರನ್ನು ಅಡಗಿಸಲು ಪ್ರಯತ್ನಮಾಡಿದ್ದೇ ಆದರೆ, ಅದಕ್ಕೆ ಅವಕಾಶಕೊಡದೆ ಬಾಲವಿದ್ವಾಂಸರಿಗೆ ಸರಿಯಾದ ದಾರಿಯನ್ನು ತೋರಿಸಿ ಧೈರ್ಯಕೊಡುವರು. ವಾಕ್ಯಾರ್ಥಸಭೆಗಳಲ್ಲಿ ಇದನ್ನೆಲ್ಲಾ ನೋಡುವುದೇ ಒಂದು ವಿದ್ಯಾರ್ಜನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕಕ್ಕೆ ಉಪಯೋಗವಾಗುವ ಉದ್ಯಮಗಳ ಸಂಬಂಧವಾದ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಶ್ರದ್ಧೆಯುಂಟು. ವ್ಯವಸಾಯವೋ, ಹೂಗಿಡ ಬೆಳೆಸುವುದೋ ಇಂಜನಿಯರಿಂಗಿಗೆ ಸಂಬಂಧಪಟ್ಟದ್ದೋ ಯಾವುದೇ ಆದರೂ ನಿಪುಣರಾದವರು ಹೇಳುತ್ತಿದ್ದರೆ, ಬಹು ಸುಲಭವಾಗಿ ಅದನ್ನು ತಿಳಿದುಕೊಂಡು ಅವರುಗಳಿಗೆ ಉತ್ಸಾಹ ಕೊಡುವರು. ಶಿಷ್ಯರು ತಮ್ಮ ಯಂತ್ರಶಾಲೆಗೆ ಗುರುಗಳು ಬಂದು ಅನುಗ್ರಹಿಸಬೇಕೆಂದರೆ ಹಿಂಜರಿಯುವುದಿಲ್ಲ. ಯಾವ ಕಾರ್ಯಾಗಾರವೇ ಆದರೂ ಅಲ್ಲಿ ಹೋಗಿ ಆ ಕೆಲಸದ ಸೂಕ್ಷ್ಮಗಳನ್ನು ಗಮನವಿಟ್ಟು ಕೇಳಿ ಆಶೀರ್ವದಿಸುವರು. ಈ ರೀತಿ ಸನ್ನಿಧಾನವು ತಮ್ಮ ಕಾರ್ಯಾಗಾರಗಳಿಗೆ ಬಿಜಯಮಾಡಿದ್ದರಿಂದಲೇ ತಮ್ಮ ಉದ್ಯೋಗ ವಿಶೇಷವಾಗಿ ಮೇಲ್ಮೆಹೊಂದಿದೆಯೆಂದು ಅವರು ಆಡಿಗಡಿಗೆ ಹೇಳುತ್ತಾರೆ.

ಮಹಾಸನ್ನಿಧಾನಕ್ಕೆ ಹಲವು ಭಾಷೆಗಳಲ್ಲಿ ಪೂರ್ಣ ಪಾಂಡಿತ್ಯವುಂಟು. ತಾಯ್ನುಡಿ ತೆಲುಗು. ಇವರು ಹುಟ್ಟಿದ ಊರಿನಲ್ಲಿ ಪ್ರದೇಶಭಾಷೆ ಕನ್ನಡ. ಓದಿದ್ದು ಸಂಸ್ಕೃತ. ಜತೆಗೆ ತಾವೇ ಅಭ್ಯಾಸಮಾಡಿದ್ದು ಹಿಂದಿ. ಹೀಗಾಗಿ ಇವುಗಳಲ್ಲಿ ಒಳ್ಳೆಯ ಪಾಂಡಿತ್ಯವುಂಟಾಯಿತು. ಇಂಡಿಯಾದ ಯಾವ ಪ್ರಾಂತ, ಪ್ರದೇಶಗಳಿಂದ ಬಂದ ಶಿಷ್ಯರೊಡನೆಯೂ ಅವರವರಭಾಷೆಯಲ್ಲೇ ಮಾತಾಡಿ ಅವರನ್ನು ತೃಪ್ತಿಪಡಿಸುವರು. ಇಂಗ್ಲಿಷನ್ನು ಮಾತ್ರವೇ ಬಲ್ಲ ನೆರೆ ಮತ್ತು ಅನ್ಯದೇಶಗಳವರು ದರ್ಶನಕ್ಕೆ ಬಂದರೆ, ಆಗ ಭಾಷಾಂತರಕಾರರಾದ ಒಬ್ಬ ಶಿಷ್ಯರನ್ನಿಟ್ಟುಕೊಂಡು ಆ ಮೂಲಕ ಸಂಭಾಷಣೆಯನ್ನು ನಡಸುವರು.

ವೇದಾಂತ ಸೂಕ್ಷ್ಮಗಳಲ್ಲಿ, ಹಲವು ಅಂಶಗಳ ಬಗ್ಗೆ ತಮಗೆ ತಿಳಿವುಂಟಾಗಬೇಕೆಂದು ಬ್ರಿಟನ್, ಅಮೆರಿಕ, ಜರ್ಮನಿ, ಇಟಲಿ, ಫ್ರಾನ್ಸ್ ಮೊದಲಾದ ಹೊರದೇಶಗಳಿಂದ ಬಂದವರು ಹೀಗೆ ಭಾಷಾಂತರಕಾರರ ಮೂಲಕ ಸನ್ನಿಧಾನದಿಂದ ವಿಷಯುಗಳನ್ನು ಕೇಳಿ ತಿಳಿದುಕೊಂಡು ಬಹಳ ಪ್ರಯೋಜನ ಪಡೆದಿದ್ದಾರೆ. ಪತ್ರ ವ್ಯವಹಾರಗಳ ಮೂಲಕವಾಗಿಯೂ ಕೆಲವರಿಗೆ ಮಹತ್ವಪೂರ್ಣವಾದ ಉಪದೇಶಗಳನ್ನು ಧಾರಾವಾಹಿಯಾಗಿ ಮಾಡುತ್ತಲೇ ಬರುತ್ತಿದ್ದಾರೆ. ಹೊರನಾಡುಗಳಿಂದ ಬಂದ ಈ ಸಂಬಂಧವಾದ ಪ್ರಶ್ನೆಗಳನ್ನೂ, ಅದಕ್ಕೆ ಇವರು ಕೊಟ್ಟ ಉತ್ತರವನ್ನೂ, ಅದರಿಂದ ಅವರುಗಳಿಗೆ ತಿಳಿವು ಉಂಟಾಗಿ ಅವರುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಕಾರ ಸ್ಮರಣೆಯಿಂದ ಕೃತಜ್ಞತೆ ಅರ್ಪಿಸಿ ಕಳಿಸಿರುವ ಪ್ರತ್ಯುತ್ತರಗಳನ್ನೂ ನೋಡಿದರೆ ಆಶ್ಚರ್ಯವಾಗುವುದು. ಆ ಮೂಲಕ ನಮ್ಮ ಸನಾತನ ಧರ್ಮದ ಮಹತ್ವ ನಮ್ಮ ವೇದಾಂತದ ಮೇಲ್ಮಟ್ಟವು ಅವರಿಗೆ ಮಾತ್ರವೇ ಅಲ್ಲ, ನಮಗೂ ಸ್ಪಷ್ಟವಾಗಿ ತಿಳಿಯಬರುವುದು.

ಇವರಲ್ಲಿರು ಮುಖ್ಯವಾದ ಗುಣ 'ಉಪಕಾರವನ್ನು ಮರೆಯದಿರುವುದು' ಎಂಬುದು. ತೀರ್ಥಪ್ರಸಾದ ಪಡೆಯುವುದಕ್ಕೆ ಸಾವಿರಗಟ್ಟಲೆ ಜನ ಬರುತ್ತಾರೆ. ಇವರುಗಳಲ್ಲಿ ತಮಗೆ ಯಾವಾಗಲಾದರೂ ಒಮ್ಮೆ ಒಂದು ಚಿಕ್ಕ ಸಹಾಯ ಮಾಡಿದ್ದವರನ್ನು ಕಂಡರೂ, ಹಲವರ ನಡುವೆ ಅದನ್ನು ಎತ್ತಿ ಹೇಳಿ, ಅವರಿಗೆ ತಮ್ಮ ಕೃತಜ್ಞತೆಯನ್ನು ತಿಳಿಯಪಡಿಸುವರು. ಬಹಳ ಜ್ಞಾಪಕಶಕ್ತಿಯುಳ್ಳವರು. ಎಷ್ಟೋ ವರ್ಷಗಳ ಹಿಂದೆ ಸಂಧಿಸಿದ್ದರೂ ಅವರನ್ನು ಮರೆಯುವುದಿಲ್ಲ.

ಬೆಂಗಳೂರಿನಲ್ಲಿ ನಡೆದ ಒಂದು ಸಂಗತಿಯನ್ನು ಅಲ್ಲಿರುವವರು ಮರೆಯಲಾರರು. ಒಂದು ಸಲ ಬೆಂಗಳೂರಿನಲ್ಲಿ ತಂಗಿದ್ದಾಗ, ಗುರುಗಳು ಯಾವುದೋ ಒಂದು ಮನೆಯಲ್ಲಿ ಪಾದಪೂಜೆ ಸ್ವೀಕರಿಸುವುದಕ್ಕಾಗಿ ಕಾರಿನಲ್ಲಿ ದಯಮಾಡಿಸುತ್ತಿದ್ದರು. ದಾರಿಯಲ್ಲಿ ಕಾರಿನಿಂದ ಇಳಿದು ಮತ್ತಾವುದೋ ಒಂದು ಮನೆಯ ಒಳಕ್ಕೆ ಪಾದಬೆಳಸಿದರು. ತಾವು ಹುಟ್ಟಿದ ಮನೆ ಅದು. ಆಗ ಮನೆಯ ವೃದ್ಧ ಯಜಮಾನರು ಊಟಕ್ಕೆ ಕೂತಿದ್ದರು. ನಿರೀಕ್ಷೆಯಿಲ್ಲದೆಯೇ ಸನ್ನಿಧಾನವು ಮನೆಯೊಳಗೆ ಬರಲಾಗಿ, ಆ ವೃದ್ಧರು ಗಡಿಬಿಡಿಯಿಂದ ಊಟವನ್ನು ಬಿಟ್ಟು ಎದ್ದು ಬಿಡಬೇಕೆಂದು ಪ್ರಯತ್ನಿಸುತ್ತಿರುವುದನ್ನು ಊಹಿಸಿ, ಸನ್ನಿಧಾನವು ಭೋಜನಗೃಹವನ್ನೇ ಪ್ರವೇಶಿಸಿ, 'ನಿದಾನವಾಗಿ ಭೋಜನಮಾಡಿ ಬನ್ನಿ' ಎಂದು ಮೃದುವಾಗಿ ನುಡಿದು, ಅವರು ಬರುವವರೆಗೂ ಕಾದಿದ್ದು ಬಂದಮೇಲೆ ಅವರಿಗೂ ಅವರ ಸಹಧರ್ಮಿಣಿಗೂ ವಿಶೇಷ ಕಟಾಕ್ಷ ಸೂಚಕವಾದ ಮಂತ್ರಾಕ್ಷತೆಗಳನ್ನು ನೀಡಿದರು. ಆ ವೃದ್ಧ ದಂಪತಿಗಳು ಕೈಪು ರಾಮಶಾಸ್ತ್ರಿಗಳ ಆಕ್ಕಭಾವಂದಿರು. ಋಜುವರ್ತನೆ ಹಾಗೂ ಪ್ರಾಮಾಣಿಕತೆ—ಇವುಗಳನ್ನೇ ತಮ್ಮ ಮುಖ್ಯಲಕ್ಷಣವನ್ನಾಗಿ ಪಡೆದು ಮೈಸೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿದ್ದು ಈಗ ವಿಶ್ರಾಂತರಾಗಿ ಮೈಸೂರಿನಲ್ಲಿ ನೆಲಸಿರುವ ಶ್ರೀಮಾನ್ ಎ. ಶೇಷಪ್ಪನವರು ಈ ದಂಪತಿಗಳ ಜ್ಯೇಷ್ಠಪುತ್ರರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಂಗಳೂರು ಪ್ರೌಢವಿದ್ಯಾ ಪಾಠಶಾಲೆಯಲ್ಲಿ ಸುಮಾರು ಒಂದೂವರೆ ವರ್ಷ ತಮಗೆ ವೇದಾಂತಪಾಠ ಹೇಳಿಕೊಟ್ಟ ಪಂಡಿತರಾಜ ವಿ. ಎಸ್. ರಾಮ ಚಂದ್ರ ಶಾಸ್ತ್ರಿಗಳನ್ನು ಕುರಿತು ಮಹಾಸನ್ನಿಧಾನವು ಅನೇಕ ಸಭೆಗಳಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಬಡವರೆಂದರೆ ಮಹಾಸನ್ನಿಧಾನಕ್ಕೆ ವಿಶೇಷ ಕರುಣೆ. ನೆಯ್ವೇಲಿಯಲ್ಲಿ ನಡೆದ ಒಂದು ಸಂಗತಿ ಇಲ್ಲಿ ಸೂಚಿಸತಕ್ಕದ್ದಾಗಿದೆ. ಚಿಕ್ಕವಯಸ್ಸಿನವರಾದ ಇಂಜನಿಯರೊಬ್ಬರು ಅಲ್ಲಿ ಕೆಲಸದಲ್ಲಿದ್ದರು. ಅವರ ತಾಯ್ತಂದೆಗಳು ವಯಸ್ಸಾದವರು. ಅವರ ತಾಯಿಗೆ ಸ್ವಸ್ಥವಿಲ್ಲದೆ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದರು. ತಂದೆಯವರು ಪ್ರತಿದಿನವೂ ಶ್ರೀಮಠದ ಮುಕ್ಕಾಮಿಗೆ ಬಂದು ದರ್ಶನ ಮಾಡಿ ಸನ್ನಿಧಾನದ ತೀರ್ಥಪ್ರಸಾದಗಳನ್ನು ಪಡೆದುಕೊಂಡು ಹೋಗಿ ತಮ್ಮ ಪತ್ನಿಗೂ ಕೊಡುತ್ತಿದ್ದರು. ಹಿಂದೊಂದು ಕಾಲದಲ್ಲಿ ತಕ್ಕಮಟ್ಟಿಗೆ ಅನುಕೂಲವುಳ್ಳ ಕುಟುಂಬವಾಗಿದ್ದರೂ, ಈಗ ಸನ್ನಿಧಾನವನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಪಾದಪೂಜೆ ಮಾಡುವಷ್ಟು ಅನುಕೂಲ ತಮಗೆ ಇಲ್ಲವಲ್ಲಾ ಎಂದು ಇವರು ನೊಂದುಕೊಂಡರು. ಈ ವಿಷಯ ಶ್ರೀ ಸನ್ನಿಧಾನಕ್ಕೆ ಅದು ಹೇಗೋ ತಿಳಿಯಬಂತು.

ನೆಯ್ವೇಲಿಯನ್ನು ಬಿಟ್ಟು ಅಲ್ಲಿಂದ ಸನ್ನಿಧಾನವು ಹೊರಡುವ ದಿನ ಶ್ರೀಮಠದ ಪ್ರೋಲೀಸ್ ಬಂಡಿ (ವ್ಯಾನ್) ಪಕ್ಕದ ಊರಿಗೆ ಪ್ರಯಾಣ ಮಾಡು ವುದಕ್ಕೆ ಸಿದ್ಧವಾಗಿ ಆ ದಿಕ್ಕಿಗೆ ತಿರುಗಿ ನಿಂತಿತು. ಅದೇ ದಿಕ್ಕಿಗೆ ತಿರುಗಿ ಸನ್ನಿಧಾನದ ಮೋಟಾರೂ ನಿಂತಿತ್ತು. ಸನ್ನಿಧಾನವು ಪ್ರಯಾಣಕ್ಕೆಂದು ಹೊರ ಬಂದು, ತಾವು ಹತ್ತಬೇಕಾಗಿದ್ದ ಮೋಟಾರನ್ನು ಬೇರೊಂದು ಪಕ್ಕಕ್ಕೆ ತಿರುಗಿಸಿ ನಿಲ್ಲಿಸುವಂತೆ ಅಪ್ಪಣೆ ಮಾಡಿದರು. ಮೊಟಾರನ್ನು ತಿರುಗಿಸಿದರು. ಅದರಲ್ಲಿ ಕುಳಿತ ಕೂಡಲೆ ಸನ್ನಿಧಾನ ಇಂಜನಿಯರ ಮನೆಯನ್ನು ಸೂಚಿಸಿ ಅಲ್ಲಿಗೆ ಕಾರನ್ನು ಬಿಡುವಂತೆ ಹೇಳಿದರು. ಆ ಮನೆಯ ಮುಂದೆ ಕಾರು ನಿಲ್ಲಿಸುವಂತೆ ಹೇಳಿ ಕೆಳಕ್ಕಿಳಿದರು. ಆ ಮನೆಯೊಳಕ್ಕೆ ಪ್ರವೇಶಿಸಿದರು. ಸ್ವಸ್ಥವಿಲ್ಲದೆ ಇಂಜನಿಯರ ತಾಯಿ ಮಲಗಿದ್ದರು. ಸನ್ನಿಧಾನ ಆ ತಾಯಿಗೆ ದರ್ಶನಕೊಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕ್ಷತೆಕೊಟ್ಟು, ಹಿಂದಿರುಗಿದರು. ಎಲ್ಲಿಯೋ ಹೊರಗೆ ಹೋಗಿ ಬರುತ್ತಿದ್ದ ಆ ಮನೆಯ ಯಜಮಾನರು (ಇಂಜನಿಯರ ತಂದೆ) ತಮ್ಮ ಮನೆಯ ಕಡೆ ಸನ್ನಿಧಾನದ ಮೋಟಾರು ತಿರುಗಿದ್ದನ್ನು ಕಂಡು ಓಡಿಬಂದರು. ಅಷ್ಟರೊಳಗೆ ಸನ್ನಿಧಾನ ಆ ಮನೆಯಿಂದ ಹೊರ ಬಂದು ಮೋಟಾರಿನಲ್ಲಿ ಏರಿಕೊಂಡರು. ಆದರೆ ಮನೆಯ ಯಜಮಾನರಿಗೂ ದರ್ಶನ ಸಿಕ್ಕಿತು—ಹೀಗೆ ಶ್ರೀ ಜಗದ್ಗುರುಗಳವರ ಹೃದಯದಲ್ಲಿ ಬಡವರ ಬಗ್ಗೆ ಕರುಣೆ ತುಂಬಿರುವುದೆಂಬುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೭

ಶ್ರೀ ಮಹಾಗಣಪತಿ ಮೂರ್ತಿ

ಕೈಪು ಕುಟುಂಬದವರ ಕುಲದೈವ ಶ್ರೀ ಗಣಪತಿಯೆಂಬ ವಿಷಯವನ್ನು ಅರಿತರೆ ಈ ಕುಟುಂಬದ ಖ್ಯಾತಿಗೆ ಕಾರಣ ತಿಳಿದಂತೆ. ಮಹಾಸನ್ನಿಧಾನವು ಬಾಲ್ಯವಲ್ಲಿ ಆಟವಾಡಿಕೊಂಡಿದ್ದ ಸಮಯಗಳಲ್ಲಿ ಒಂದು ಚಿಕ್ಕ ವಿನಾಯಕ ಮೂರ್ತಿಯನ್ನು ಇಟ್ಟುಕೊಂಡು ಮಕ್ಕಳ ಜೊತೆ 'ಪೂಜೆ ಆಟ' ಆಡುತ್ತಿದ್ದರೆಂದು ತಿಳಿಯಬರುತ್ತದೆ. ಈ ದೈವವೇ ಇವರ ಕುಟುಂಬದ ಕ್ಷೇಮಕ್ಕೆ ಕಾರಣವಾಗಿತ್ತು. ಈ ಕುಟುಂಬದ ಮೂಲ ಪುರುಷರು ಕೈಪು ಸೀತಾರಾಮಶಾಸ್ತ್ರಿಗಳು ವೇದದಲ್ಲಿಯೂ, ಶಾಸ್ತ್ರದಲ್ಲಿಯೂ ಪಾರಂಗತರಾದವರು. ಇವರ ಕುಮಾರರೂ ಹಾಗೆಯೇ ಒಬ್ಬೊಬ್ಬರೂ ಒಂದೊಂದು ಶಾಸ್ತ್ರದಲ್ಲಿ ಶ್ರೇಷ್ಠವಾದ ಪಾಂಡಿತ್ಯವುಳ್ಳವರು. ಶ್ರೀ ನಂಜುಂಡಶಾಸ್ತ್ರಿಗಳು ವೇದದಲ್ಲಿ ಹೆಚ್ಚು ಪಾಂಡಿತ್ಯವುಳ್ಳವರು. ಶ್ರೀನಿವಾಸಶಾಸ್ತ್ರಿಗಳೂ ಶಾಸ್ತ್ರಜ್ಞಾನದ ಜತೆಗೆ ರಾಜಕೀಯ ವಿಚಾರಗಳಲ್ಲೂ ನಿಪುಣರೆಂದು ಖ್ಯಾತಿಪಡೆದಿದ್ದರು. ಇವರು ಚನ್ನಪಟ್ಟಣ ತಾಲ್ಲೂಕಿನಲ್ಲಿ ತಹಸೀಲ್ದಾರರಾಗಿ ಕೆಲಸ ಮಾಡುತ್ತಿದ್ದರು. ಈ ಕಾರಣದಿಂದ ಶ್ರೀನಿವಾಸ ಶಾಸ್ತ್ರಿಗಳು ಸಂಸ್ಥಾನದಲ್ಲಿ ಆಸ್ಥಾನ ವಿದ್ವಾಂಸರಾಗಿಯೂ ನಿಯಮಿಸಲ್ಪಟ್ಟರು.

ಶ್ರೀನಿವಾಸಶಾಸ್ತ್ರಿಗಳು ಪ್ರಸಿದ್ಧ ಗಣಪತಿ ಉಪಾಸಕರು. ಇವರು ಚಿಕ್ಕಂದಿನಲ್ಲಿ ಧರ್ಮಾಂಬುಧಿ ಕೆರೆಯಲ್ಲಿ (ಈಗ ಬೆಂಗಳೂರು ರೈಲ್ವೇಸ್ಟೇಷನ್ನಿನ ಎದುರಿಗೆ ಕಾರ್ಪೋರೇಷನ್ ಬಸ್‌ಸ್ಟಾಂಡ್ ಆಗಿರುವ ಸ್ಥಳದಲ್ಲಿ) ಒಂದು ಗಣಪತಿ ವಿಗ್ರಹವನ್ನು (ಕಲ್ಲಿನ ವಿಗ್ರಹ) ಕಂಡರಂತೆ. ಅರಳೇಪೇಟೆಯಲ್ಲಿರುವ ತಮ್ಮ ಮನೆಗೆ ಅದನ್ನು ತೆಗೆದುಕೊಂಡು ಹೋಗಿ ಕ್ರಮವಾಗಿ ಪೂಜಿಸಲಾರಂಭಿಸಿದರು. ಇವರ ಭಕ್ತಿಯನ್ನು ನೋಡಿ ಇವರ ಹಿರಿಯರು ಈ ಮನೆಯ ಮಧ್ಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಜಾರದಲ್ಲಿ ಇದಕ್ಕಾಗಿ ಗೋಡೆಯಲ್ಲಿ ಒಂದು ಗೂಡುಮಾಡಿಕೊಟ್ಟು ಇವರ ಪೂಜೆಗೆ ಪ್ರೋತ್ಸಾಹವನ್ನಿತ್ತರು. ಹುಡುಗನಿಗೆ ಈ ಗಣಪತಿ ಪೂಜೆಯಲ್ಲಿ ಉತ್ಸಾಹ ಅಧಿಕವಾಯಿತು. ದಿನ ಕಳೆಯುತ್ತ ಕಳೆಯುತ್ತ ಗಣಪತಿ ಪೂಜೆಯೂ ವೃದ್ಧಿಯಾಗುತ್ತ ಬಂತು. ಮನೆಯಲ್ಲಿದ್ದ ಉಳಿದವರೂ ಈ ಪೂಜೆಯಲ್ಲಿ ಸೇರಿಕೊಂಡು ಶ್ರೀ ಮಹಾಗಣಪತಿಯ ಅನುಗ್ರಹವನ್ನು ಪಡೆದರು. ಶ್ರೀನಿವಾಸನಿಗೆ ಮಾತ್ರ ಈ ಗಣಪತಿ ಗುರು, ದೈವ, ಬಂಧು, ಮಾರ್ಗದರ್ಶಿ, ಎಲ್ಲವೂ ಆಗಿಬಿಟ್ಟಿತು ಶ್ರೀನಿವಾಸನು ಅಡಿಗಡಿಗೆ, "ಗಣಪತಿ ಹೀಗೆ ಹೇಳುತ್ತಾನೆ; ಹೀಗೆ ಹೀಗೆ ಮಾಡಬೇಕೆಂದು ನನಗೆ ಹೇಳುತ್ತಾನೆ. ಆದ್ದರಿಂದ ಇದನ್ನು ನಾನು ಹೀಗೆಯೇ ಮಾಡುತ್ತೇನೆ" ಎನ್ನುವನು.

ಈ ಗಣಪತಿ ಮೂರ್ತಿಯ ಆರಾಧನೆ ಇವರ ವಂಶದಲ್ಲಿ ಪರಂಪರೆಯಾಗಿ ಬೆಳೆದು ಬಂತು.

೨೦ನೆಯ ಶತಮಾನದ ಆರಂಭದಲ್ಲಿ ಈ ವಂಶದಲ್ಲಿ ಬಂದ ಬಿ. ಸುಬ್ರಹ್ಮಣ್ಯ ಶಾಸ್ತ್ರಿಗಳು (ಅದಾಲತ್ ಕೋರ್ಟ್ ಶ್ರೀನಿವಾಸಶಾಸ್ತ್ರಿಗಳ ಮಗಳ ಮಗ) ತಮಗೆ ತಹಸಿಲ್ದಾರ್‌ಪದವಿ ದೊರೆತಕೂಡಲೆ ಸಾವಿರ ಮೋದಕಗಳನ್ನು ಮಾಡಿ ಈ ವಿನಾಯಕನಿಗೆ ವಿಶೇಷ ಪೂಜೆ ಮಾಡಿದರು. ಇವರು ಆ ಬಳಿಕ ಅಸಿಸ್ಟೆಂಟ್ ಕಮಿಷನರ್ ಕೆಲಸದಲ್ಲಿದ್ದರು.

ಬಹಳ ಕಾಲದ ಅನಂತರ ಈ ಮನೆ ಈ ವಂಶದವರ ಕೈತಪ್ಪಿ ಬೇರೆ ಒಬ್ಬರಿಗೆ ಸೇರಿತು. ಹಾಗಾದರೂ ಕೆಲವು ವರ್ಷಗಳ ವರೆಗೆ ಆ ವಿಗ್ರಹ ಅದೇ ಗೂಡಿನಲ್ಲೇ ನೆಲಸಿತ್ತು. ಆದರೆ, ಅದಕ್ಕೆ ಯಾವ ವಿಧವಾದ ಪೂಜೆಯೂ ನಡೆಯುತ್ತಿರಲಿಲ್ಲ. ಆ ಮನೆಯಲ್ಲಿ ವಾಸವಾಗಿದ್ದವರಿಗೆ 'ಈ ಗಣಪತಿಯನ್ನು ಬೇರೆ ಕಡೆಯಲ್ಲಿಟ್ಟರೆ ಒಳ್ಳೆಯದು' ಎಂಬ ಭಾವನೆ ತೋರಿತು. ಹಾಗಾಗಿ ಒಂದು ದಿನ ರಾತ್ರೆ ಎಲ್ಲರೂ ಮಲಗಿಕೊಂಡ ಮೇಲೆ, ಆ ಮನೆಯಾತ ಗಣಪತಿ ವಿಗ್ರಹವನ್ನು ಎತ್ತಿಕೊಂಡು ಹೋಗಿ ಗವೀಪುರದ ಕೆರೆ ಅಂಗಳದಲ್ಲಿ ಇಟ್ಟು ಬಂದರು.

ಅಲ್ಲಿ ಆ ವಿಗ್ರಹವನ್ನು ನೋಡಿದವರೊಬ್ಬರು ಇದನ್ನು ತೆಗೆದುಕೊಂಡು ಹೋದರು. ಅದು ಅವರಿಗೆ ಆಗಿಬರಲಿಲ್ಲ. ಅದನ್ನು ಮತ್ತೆ ಆ ಕೆರೆಯಂಗಳ ದಲ್ಲಿಯೇ ಒಂದು [illegible] ಇಟ್ಟುಬಿಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಾಮರಾಜಪೇಟೆಯಲ್ಲಿ ಒಂದು ಮನೆಯಲ್ಲಿ ಒಕ್ಕಲಿದ್ದ ರಾಮಭಟ್ಟರೆಂಬುವರು ಅದನ್ನು ಕಂಡರು. ಅವರು ಅದನ್ನು ತಮ್ಮ ಮನೆಗೆ ತೆಗೆದುಕೊಂಡುಹೋಗಿ, ಪಕ್ಕದ ಮನೆಯವರಾದ ಗುಂಡೂರಾವ್ ಎಂಬವರ ಸಹಾಯದಿಂದ ಅದಕ್ಕೆ ಪೂಜೆ ನಡಸುತ್ತ ಬಂದರು. ತಾವು ಎಂದಾದರೊಂದು ದಿನ ಸ್ವಂತಮನೆಮಾಡಿಕೊಂಡು ಅದರಲ್ಲಿ ಈ ಗಣಪತಿಯನ್ನು ಇಟ್ಟುಕೊಳ್ಳಬೇಕೆಂದು ಅವರು ಆಸೆಪಟ್ಟರು. ಶ್ರೀ ಗಣಪತಿಯೇ ಇವರ ಭಕ್ತಿಗೆ ಮೆಚ್ಚಿ ಕರುಣೆದೋರಿದನೋ ಎಂಬಂತೆ, ಚೌಬೀನಾ ಸುಬ್ಬರಾಯರ ಪತ್ನಿ ಶ್ರೀಮತಿ ರಾಮಕ್ಕ ಎಂಬವರು ತನ್ನ ಪತಿಯ ಜ್ಞಾಪಕಾರ್ಥವಾಗಿ ಶ್ರೀ ರಾಮಭಟ್ಟರಿಗೆ ೧೯೧೨ರಲ್ಲಿ ಮನೆಕಟ್ಟುವಂಥ ಒಂದು ಮಂದಳವನ್ನು ದಾನಕೊಟ್ಟಳು. ಆದರೆ, ರಾಮಭಟ್ಟರೋ ಬಹಳ ಬಡವರು. ಆ ಮಂದಳದ ಹಿಂಭಾಗದಲ್ಲಿ ಒಂದು ಸಣ್ಣ ಕಟ್ಟಡ ಕಟ್ಟುವುದಕ್ಕೆ ಮಾತ್ರವೇ ಅವರಿಗೆ ಅನುಕೂಲವಿದ್ದದ್ದು. ಇವರು ವಾಸವಿರುವುದಕ್ಕೂ ಆ ಕಟ್ಟಡ ಸಾಲದು. ಸ್ವಲ್ಪ ಕಾಲ ಅಲ್ಲಿ ಇದ್ದು, ಅವರು ಕಾಲಗತಿಹೊಂದಿದರು. ಅದಕ್ಕೆ ಮುಂಚೆ ತಮ್ಮ ಮಗ ಸುಬ್ಬರಾಯಶಾಸ್ತ್ರಿಯ ಬಳಿ, " ಈ ಮನೆಯ ಮುಂಭಾಗದಲ್ಲಿ ಒಂದು ಮನೆ ಕಟ್ಟಬೇಕು " ಎಂದು ಮಾತು ತೆಗೆದುಕೊಂಡರು.

ಶ್ರೀ ಮಹಾಗಣಪತಿಗೆ ಒಂದು ಶಾಶ್ವತ ವಾಸಸ್ಥಾನವನ್ನು ನಿರ್ಮಿಸಿಕೊಳ್ಳಬೇಕೆಂಬ ತೀರ್ಮಾನವಾಯಿತೋ ಎಂಬಂತೆ, ಸಿದ್ದರಾಮಪ್ಪ, ರಾಮಣ್ಣ ಎಂಬ ಇಬ್ಬರು ಸಹೋದರರು, ಕಂಟ್ರಾಕ್ಟರ್ ಸಹೋದರರು, ಅಸಿಸ್ಟೆಂಟ್ ಕಮಿಷನರಾಗಿದ್ದ ಶ್ರೀ ವೀರಪ್ಪ, ಈ ಮೂವರೂ ಸೇರಿ ಶ್ರೀ ಗಣಪತಿಗೆ ಒಂದು ದೇವಸ್ಥಾನ ಕಟ್ಟಿಕೊಡುವುದಾಗಿ ಒಪ್ಪಿಕೊಂಡರು. ಶಾಸ್ತ್ರಿಗಳು ಸಂತೋಷದಿಂದ ಸಮ್ಮತಿಸಿದರು. ಪ್ರತಿಷ್ಠೆಯನ್ನು ಆಗಮೋಕ್ತಪ್ರಕಾರವಾಗಿ ಮಾಡಬೇಕಲ್ಲವೇ ? 'ಅದನ್ನು ಆ ಗಣಪತಿಯೇ ಏರ್ಪಡಿಸಿಕೊಳ್ಳಲಿ' ಎಂದು ಶಾಸ್ತ್ರಿಗಳು ಬೇರೆ ಮಾರ್ಗವಿಲ್ಲದೆ ಸುಮ್ಮನಿದ್ದರು. ಆಶ್ಚರ್ಯವೇನೆಂದರೆ, ಮತ್ತೊಬ್ಬ ಭಕ್ತರು ಬಂದು, "ಇವರೊಡನೆ ಇನ್ನೂ ಮೂರು ದೇವಮೂರ್ತಿಗಳನ್ನು—ಎಂದರೆ ವಲ್ಲೀ ದೇವಸೇನೆಯರೊಡಗೂಡಿದ ಸುಬ್ರಹ್ಮಣ್ಯಸ್ವಾಮಿಯನ್ನೂ—ಪ್ರತಿಷ್ಠೆ ಮಾಡುವುದಾದರೆ ಅದಕ್ಕೆ ತಗುಲುವ ಎಲ್ಲಾ ವೆಚ್ಚವನ್ನೂ ನಾನೇ ವಹಿಸಿಕೊಳ್ಳುತ್ತೇನೆ" ಎಂದರು. ಸುಬ್ರಹ್ಮಣ್ಯಶಾಸ್ತ್ರಿಗಳೂ ಇದಕ್ಕೆ ಒಪ್ಪಿಕೊಂಡರು. ೧೯೪೨ನೆಯ ಸೆಪ್ಟೆಂಬರ್ ೧೪ನೆಯ ತಾರೀಖು ಸೋಮವಾರ (ಚಿತ್ರಭಾನು ಸಂವತ್ಸರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾದ್ರಪದ ಶುಕ್ಲ ಚತುರ್ಥಿ) ದಿನ ಈ ಪ್ರತಿಷ್ಠಾಕಾರ್ಯಗಳು ನೆರವೇರಿದವು. ಇದರಲ್ಲಿ ಮೂರು ವಿಶೇಷಾಂಶಗಳಿವೆ.

೧. ಈ ಪ್ರತಿಷ್ಠೆಯನ್ನು ಶೃಂಗೇರೀ ಪೀಠಾಧಿಪತಿ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಅನುಗ್ರಹಿಸಿದರು.

೨. ಶೃಂಗೇರಿಯಿಂದ ಇದಕ್ಕಾಗಿ ವಿಶೇಷ ಪ್ರಸಾದಗಳನ್ನು ಶ್ರೀ ಕೃಷ್ಣಾನಂದ ಸ್ವಾಮಿಗಳು ತೆಗೆದುಕೊಂಡು ಬಂದಿದ್ದರು.

೩. ಅವರೇ ವಿಗ್ರಹಗಳ ಪ್ರತಿಷ್ಠೆಯನ್ನೂ ಮಾಡಿದರು.

ಅಸಿಸ್ಟೆಂಟ್ ಕಮಿಷನರಾದ ಬಿ. ಸುಬ್ರಹ್ಮಣ್ಯಶಾಸ್ತ್ರಿಗಳೂ ಈ ವಿಷಯವಾಗಿ ಸುದ್ದಿ ಕೇಳಿ ಅಲ್ಲಿ ಬಂದು ಶ್ರೀ ಗಣಪತಿ ವಿಗ್ರಹವನ್ನು ಪರಿಶೀಲನೆಮಾಡಿ ಇದೇ ತಾವು ಹಿಂದೆ ನೋಡಿದ್ದದ್ದು' ಎಂದು ಹೇಳಿ ಅದಕ್ಕೆ ಪೂಜೆಮಾಡಿದರು.

ಏತನ್ಮಧ್ಯೆ, ತಮ್ಮ ಮುತ್ತಾತನವರು ಪೂಜಿಸುತ್ತಿದ್ದ ಶ್ರೀ ಮಹಾಗಣಪತಿ ವಿಗ್ರಹ ಏನಾಯಿತೋ, ಎಲ್ಲಿ ಹೋಯಿತೋ ಎಂದು ಈಗಿನ ಜಗದ್ಗುರು (ಆಗ ಇನ್ನೂ ಶಿಷ್ಯಸ್ವಾಮಿಗಳು) ಯೋಚಿಸುತ್ತಿದ್ದರೆಂದು ಕಾಣುತ್ತದೆ. ತಮ್ಮ ಜನ್ಮ ನಕ್ಷತ್ರವಾದ ಸ್ವಾತಿನಕ್ಷತ್ರದಲ್ಲಿಯೇ ಆ ಗಣಪತಿಯ ಪ್ರತಿಷ್ಠೆಯೂ ನಡೆಯಿತು. ಮಹಾಸ್ವಾಮಿಗಳು ಬೆಂಗಳೂರಿಗೆ ಬಿಜಯಮಾಡಿದಾಗ, ೧೯೬೧ನೆಯ ಡಿಸೆಂಬರ್ ೧೧ನೆಯ ತಾರೀಖು ಸೋಮವಾರ (ಶುಕ್ಲಪಕ್ಷ ಚತುರ್ದಶಿ ದಿನ) ಈ ಸನ್ನಿಧಾನಕ್ಕೆ ಪಾದ ಬೆಳೆಯಿಸಿ ತಮ್ಮ ಪೂರ್ವಾಶ್ರಮ ಕುಲದೈವವಾದ ಶ್ರೀ ಗಣಪತಿಯನ್ನು ಸಂತೋಷದಿಂದ ಆರಾಧಿಸಿದರು. ಆಮೇಲೆ, ೧೯೬೩ನೆಯ ವರ್ಷ ಬೆಂಗಳೂರಿಗೆ ಬಿಜಯಮಾಡಿದ ಶ್ರೀ ಶೃಂಗೇರೀ ಶಿವಗಂಗಾ ಮಠದ ಪೀಠಾಧಿಪತಿಗಳೂ, ೧೯೬೬ನೆಯ ವರ್ಷದಲ್ಲಿ ಬಿಜಯಮಾಡಿದ ಶ್ರೀ ದ್ವಾರಕಾ ಮಠದ ಪೀಠಾಧಿಪತಿಗಳೂ, ಇಲ್ಲಿಗೆ ಬಿಜಯ ಮಾಡಿ ಶ್ರೀ ಗಣಪತಿಯನ್ನು ಆರಾಧಿಸಿದರು. ಈ ಸ್ಥಳ ಈಗ ಮುಖ್ಯವಾದ ಸ್ಥಳವಾಗಿದೆ. ಇದರ ಸುತ್ತಲೂ ವ್ಯಾಪಾರಸ್ಥಾನಗಳು ಹೆಚ್ಚಾಗಿವೆ. ಶ್ರೀ ಮಹಾಗಣಪತಿಯ ಮಹಿಮೆ ಎಷ್ಟು ಎಂಬುದನ್ನು ಬಾಯಿಮಾತಿನಿಂದ ಹೇಳುವುದಕ್ಕೆ ಸಾಧ್ಯವೇ!

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೭

ವಿಜಯ ಯಾತ್ರೆಗಳು

"ಒಬ್ಬ ಸಂನ್ಯಾಸಿ ಮೂರು ದಿನಗಳಮೇಲೆ ಒಂದೂರಿನಲ್ಲಿ ತಂಗಕೂಡದು, ಬೇರೆ ಊರಿಗೆ ಹೋಗಬೇಕು" ಎಂದು ಶಾಸ್ತ್ರ ಹೇಳುತ್ತದೆ. ಆದರೆ, ಈ ಕಟ್ಟುಪಾಡು ಪೀಠಾಧಿಪತಿಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ, ಶಿಷ್ಯರುಗಳು ಹಲವು ಊರುಗಳಲ್ಲಿಯೂ ಅನೇಕಾನೇಕ ಮಂದಿ ಇರುತ್ತಾರೆ. ಅವರೆಲ್ಲರಿಗೂ ಜಗದ್ಗುರು ಮಂತ್ರೋಪದೇಶಗಳನ್ನೂ, ಬೇರೆ ಹಲವು ವಿಧವಾದ ಅನುಗ್ರಹ ಗಳನ್ನೂ ಮಾಡುವುದಕ್ಕಾಗಿ ಅಲ್ಲಲ್ಲೆ ಹಲವು ದಿನಗಳ ವರೆಗೆ ತಂಗಿರಬೇಕಾಗುತ್ತದೆ. ಶಿಷ್ಯರುಗಳ ಪ್ರಾರ್ಥನೆಗಳನ್ನು ಲಾಲಿಸಿ ಹಲವು ದಿನಗಳವರೆಗೆ ಒಂದೇ ಊರಿನಲ್ಲಿ ತಂಗಿರಬೇಕಾಗುತ್ತದೆ.

ಈ ಕಾರಣದಿಂದ ಪೀಠಾಧಿಪತಿಗಳು ದೇಶದ ಹಲವು ಪ್ರಾಂತಗಳಲ್ಲಿಯೂ, ಊರುಗಳಲ್ಲಿಯೂ ಪರ್ಯಟನ ಮಾಡಬೇಕಾಗಿದ್ದು ಅವಶ್ಯವಾಗಿದೆ. ದೇವಾಲ ಯಕ್ಕೆ ಬಂದು ಮೂಲಸ್ಥಾನವನ್ನು ದರ್ಶನಮಾಡಬೇಕಾಗಿರುವುದೇನೋ ವಿಶೇಷ, ಹೌದು. ಆದರೆ, ಅದು ಸಾಧ್ಯವಾಗದೆ ಹೋಗುವ ಭಕ್ತರುಗಳಿಗೆ ದರ್ಶನಕೊಟ್ಟು ಕಾಪಾಡುವುದಕ್ಕಾಗಿ ಉತ್ಸವ ಮೂರ್ತಿ ಹೊರಟು, ಪ್ರದಕ್ಷಿಣೆ ಯಾಗಿ ಬಂದು ಊರ ಜನಗಳನ್ನು ಅನುಗ್ರಹಿಸುವ ಹಾಗೆ, ಶೃಂಗೇರಿಗೆ ಹೋಗಿ ಪೀಠಾಧಿಪತಿಗಳನ್ನು ದರ್ಶನಮಾಡುವುದಕ್ಕೆ ಸೌಕರ್ಯವಿಲ್ಲದ ಶಿಷ್ಯರುಗಳಿಗೆ ಅನುಗ್ರಹಮಾಡುವುದಕ್ಕೋಸ್ಕರವಾಗಿಯೇ ಪೀಠಾಧಿಪತಿಗಳು ಯಾತ್ರೆಗಳನ್ನು ಕೈಕೊಳ್ಳಬೇಕಾಗಿದೆ. ಅದೂ ಅಲ್ಲದೆ, ರಾಮೇಶ್ವರಯಾತ್ರೆ, ಕಾಶೀಯಾತ್ರೆ ಮೊದಲಾದ ವಿಶೇಷಯಾತ್ರೆಗಳನ್ನು ಕೈಗೊಂಡು, ಮಾರ್ಗಮಧ್ಯದ ಊರುಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುವ ಶಿಷ್ಯರುಗಳಿಗೆ ದರ್ಶನಕೊಟ್ಟು ಮಂತ್ರೋಪದೇಶಮಾಡಿ ಅವರುಗಳನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಸುವುದೇ ಇವರುಗಳ ಕರ್ತವ್ಯ. ಆದಿ ಶಂಕರಭಗವತ್ಪಾದರು ಮೂರು ಸಲ ಭಾರತದೇಶವನ್ನು ಸುತ್ತಿ ಬಂದಿರುವುದಾಗಿ ತಿಳಿಯಬರುತ್ತದೆ. ಅದನ್ನನುಸರಿಸಿಯೇ ಶೃಂಗೇರಿ ಮೊದಲಾದ ಪೀಠಾಧಿಪತಿಗಳು ಹಲವು ಸಲ ತೀರ್ಥಯಾತ್ರೆಗಳನ್ನು ಏರ್ಪಡಿಸಿಕೊಳ್ಳುತ್ತಾರೆ.

ಶೃಂಗೇರೀ ಪೀಠಾಧಿಪತಿಗಳಲ್ಲಿ ಹಲವರು ಸಂಪೂರ್ಣ ಭಾರತವನ್ನು ಹಲವು ಸಲ ಸುತ್ತಿ ಯಾತ್ರೆಮಾಡಿದ್ದಾರೆ. ಚಾತುರ್ಮಾಸ್ಯಕಾಲಗಳಲ್ಲಿ (ಆಷಾಢ ಪೌರ್ಣಮಿ ವ್ಯಾಸಪೂಜೆಯ ದಿನ ಮೊದಲುಗೊಂಡು, ಭಾದ್ರಪದ ಮಾಸದ ಪೌರ್ಣಮಿಯವರೆಗೆ ಎರಡು ತಿಂಗಳು ಕಾಲ) ಯಾವ ಸಂನ್ಯಾಸಿಗಳೂ ತಾವು ತಂಗಿರುವ ಊರನ್ನು ಬಿಟ್ಟು ಹೊರಗೆ ಹೋಗಕೂಡದು. ಒಂದೇ ಸ್ಥಳದಲ್ಲಿ ಇರಬೇಕು ಎಂಬ ನ್ಯಾಯವನ್ನು ಶೃಂಗೇರೀ ಪೀಠಾಧಿಪತಿಗಳೂ ಅನುಸರಿಸಿ, ಆ ಎರಡು ತಿಂಗಳ ಕಾಲವೂ ಒಂದೇ ಊರಿನಲ್ಲಿ ಇದ್ದುಕೊಂಡು, ಉಪನ್ಯಾಸಗಳು, ಉಪದೇಶಗಳು ಮೊದಲಾದುವನ್ನು ಮಾಡುತ್ತಾರೆ.

ಶೃಂಗೇರಿಯಲ್ಲಿ ನವರಾತ್ರಿ ಒಂದು ವಿಶೇಷ ಸಂಗತಿ. ಶ್ರೀ ಜಗದ್ಗುರುಗಳು ನವರಾತ್ರಿ ಉತ್ಸವವನ್ನು, ಶೃಂಗೇರಿಯಲ್ಲಿದ್ದರೆ ಹೇಗೆ ನಡೆಯುತ್ತಿತ್ತೋ ಹಾಗೆಯೇ ಯಾತ್ರೆಯಲ್ಲಿರುವ ಕಾಲದಲ್ಲಿ ಯಾತ್ರಾಸ್ಥಳದಲ್ಲಿಯೇ ನಡಸುತ್ತಾರೆ. ಅಂತಹ ಸಮಯಗಳಲ್ಲೂ ಮೂಲಸ್ಥಾನವಾದ ಶೃಂಗೇರಿಯಲ್ಲೂ ಎಂದಿನಂತೆ ಉತ್ಸವವು ನೆರವೇರುತ್ತದೆ. ನವರಾತ್ರಿಯಲ್ಲಿ ಮಹಾನವಮಿಯಂದು ಶತಚಂಡೀ ಹೋಮ ಬಹು ಮುಖ್ಯವಾದ ಕಾರ್ಯಕ್ರಮ. ಶ್ರೀಮದಭಿನವವಿದ್ಯಾತೀರ್ಥ ಸ್ವಾಮಿಗಳ ವಿಜಯಯಾತ್ರೆಯ ಆರಂಭಕಾಲ ಮೊದಲುಗೊಂಡು ಪ್ರತಿಯೊಂದು ವರ್ಷವೂ ಶತಚಂಡೀಹೋಮವು ನಡೆಯುತ್ತಾ ಬರುತ್ತಿದೆ. ಆ ಕೈಂಕರ್ಯವನ್ನು ಅನುಸ್ಯೂತವಾಗಿ ಕೊಯಮುತ್ತೂರಿನ ಶ್ರೀಮಾನ್ ಬಿನ್ನಿ ಸುಬ್ಬರಾವ್ ಅವರು ನಡಸಿಕೊಂಡು ಬರುತ್ತಿದ್ದಾರೆ. ಶ್ರೀ ಸನ್ನಿಧಾನ ಯಾವ ಊರಿನಲ್ಲಿ ನವರಾತ್ರಿ ವೈಭವವನ್ನು ನಡಸಿದರೂ ಅಲ್ಲಿಗೆ ಅವರು ಹೋಗಿ ಈ ಸೇವೆಯನ್ನು ಸಲ್ಲಿಸುತ್ತಾರೆ. ಶ್ರೀ ಜಗದ್ಗುರುಗಳು ನವರಾತ್ರಿ ದಿನಗಳಂದು ಶೃಂಗೇರಿಯಲ್ಲಿದ್ದರೆ ಒಂಬತ್ತು ದಿನಗಳಲ್ಲೂ ಪ್ರತಿ ದಿನವೂ ರಾತ್ರಿ ಸಿಂಹಾಸನದಲ್ಲಿ ಮಂಡಿಸಿ ದರ್ಬಾರ್ ನಡಸುವುದುಂಟು. ಆ ಕಾಲದಲ್ಲಿ ಶ್ರೀ ಜಗದ್ಗುರುಗಳು ಯಾವ

Sri Vidyabharathi Book Centre, Sringeri

CC-0. In Public Domain. Digitized by eGangotri

ಊರಿನಲ್ಲಿರುವರೋ ಅಲ್ಲಿಯೇ ನವರಾತ್ರಿವೈಭವದ ಈ ದರ್ಬಾರು ನಡೆಯುತ್ತದೆ. ಇಂಡಿಯಾದಲ್ಲಿ ಹಲವು ಸಂಸ್ಥಾನಗಳ ರಾಜರುಗಳ ಹೆಸರಿನಲ್ಲಿ ಪೀಠಕ್ಕೆ ಸಲ್ಲುವ ಕಾಣಿಕೆಗಳು ನವರಾತ್ರಿ ಸಮಯದಲ್ಲಿ ಶ್ರೀ ಜಗದ್ಗುರುಗಳ ಮುಂದೆ ಸಮರ್ಪಿಸಲ್ಪಡುವುವು. ಈ ಉತ್ಸವವು ಕಣ್ಣುಗಳನ್ನು ಸೆಳೆದು ತಣಿಸುವ ದೃಶ್ಯವೇ ಸರಿ. ಶ್ರೀ ಜಗದ್ಗುರುಗಳು ದರ್ಬಾರಿನಲ್ಲಿ ವಿದ್ವಾಂಸರುಗಳಿಗೂ ಮುಖ್ಯ ಶಿಷ್ಯರುಗಳಿಗೂ ಬಿರುದುಗಳನ್ನು ನೀಡುವುದೂ, ವಿಶೇಷ ಸನ್ಮಾನಗಳನ್ನು ಮಾಡುವುದೂ ಸಂಪ್ರದಾಯ. ಶೃಂಗೇರಿಯ ಮೂರನೆಯ ಪೀಠಾಧಿಪತಿಗಳು ಉತ್ತರ ಇಂಡಿಯದಲ್ಲಿ ತಮ್ಮ ತರುವಾಯದ ಶಿಷ್ಯರನ್ನು ತಮ್ಮ ಅನಂತರ ಪೀಠಾಧಿಪತಿಯಾಗಿ ಬಂದವರು, ಕರೆದುಕೊಂಡು ಯಾತ್ರೆ ಮಾಡಿದರು. ನೇಪಾಳಕ್ಕೂ ಬಿಜಯ ಮಾಡಿದರು. ೩೩ನೆಯ ಪೀಠಾಧಿಪತಿಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳೂ ಎರಡು ಸಲ ದಕ್ಷಿಣದೇಶ ಯಾತ್ರೆ ಮಾಡಿದರು. ಕಟ್ಟಕಡೆಯ ಯಾತ್ರೆಯಲ್ಲಿ ೧೯೧೦ನೆಯ ವರ್ಷ ಕೇರಳದಲ್ಲಿರುವ ಶ್ರೀ ಆದಿ ಶಂಕರರ ಅವತಾರ ಸ್ಥಳವಾದ ಕಾಲಟಿಗ್ರಾಮವನ್ನೂ, ಅವರ ತಾಯಿಯವರಾದ ಆರ್ಯಾಂಬೆಯ ಸಮಾಧಿ ಪ್ರದೇಶವನ್ನೂ ಕಂಡುಹಿಡಿದು ಅಲ್ಲಿ ದೇವಾಲಯಗಳನ್ನು ಕಟ್ಟಿಸಿ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರು.

ಇದಲ್ಲದೆ, ಯಾತ್ರೆ ಕಾಲಗಳಲ್ಲಿ ಹಿಂದೂಮತ ಸ್ಥಾಪನಗಳಲ್ಲಿ ಏನಾದರೂ ಕುಂದುಕೊರತೆಗಳು ಕಂಡುಬಂದರೆ, ಅವುಗಳನ್ನು ಅಲ್ಲಲ್ಲೇ ಸರಿಮಾಡಿಸಿ ಸನಾತನ ಧರ್ಮವನ್ನು ಕಾಪಾಡಿ ಅದು ಪ್ರಗತಿಮಾರ್ಗದಲ್ಲಿ ಮುಂದುವರಿಯುವಂತೆ ಹಲವುಕಾರ್ಯಕ್ರಮಗಳನ್ನು ಶೃಂಗೇರೀ ಜಗದ್ಗುರುಗಳು ಕೈಗೊಂಡಿದ್ದಾರೆ. ದೇವಿಯ ಆಲಯಗಳಲ್ಲಿ ವಾಮಾಚಾರಮಾರ್ಗದಲ್ಲಿ ಸೇವಾಕ್ರಮಗಳು ನಡೆಯುತ್ತಿದ್ದ ಪಕ್ಷದಲ್ಲಿ ಅವುಗಳನ್ನು ಮಾರ್ಪಡಿಸಿ ವೈದಿಕಕ್ರಮಾನುಸಾರವಾಗಿ ಪೂಜೆ ನಡಸಲು ಏರ್ಪಾಡುಮಾಡಿದ್ದಾರೆ. ಎಲ್ಲೆಲ್ಲಿ ಶಾಸ್ತ್ರಕ್ರಮದಲ್ಲಿ ತಪ್ಪುಗಳುಂಟಾಗವುವೋ ಅಲ್ಲೆಲ್ಲಾ ಅವುಗಳನ್ನು ಪರಿಹರಿಸಿ, ತಿದ್ದಿ ಉತ್ತಮಪಡಿಸುತ್ತ ಬಂದಿದ್ದಾರೆ. ಉದಾಹರಣೆಯಾಗಿ, ರಾಮನಾಥಪುರಂ ರಾಜರ ಅರಮನೆಯಲ್ಲಿ ಇರುವ ಶ್ರೀ ರಾಜರಾಜೇಶ್ವರೀ ಆಲಯದಲ್ಲಿ ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ವಾಮಾಚಾರ ಪೂಜೆಯನ್ನು ಶೃಂಗೇರೀಮಠದ ೩೩ನೆಯ ಪೀಠಾಧಿಪತಿ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀಸ್ವಾಮಿಗಳು ಮಾರ್ಪಡಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ವೈದಿಕಕ್ರಮದಲ್ಲಿ ನಡೆಸುವಂತೆ ಏರ್ಪಡಿಸಿದರು. ಆ ವೈದಿಕ ಕ್ರಮದ ಪೂಜೆಯೇ ಈಗಲೂ ನಡೆದುಬರುತ್ತಿದೆ. ಇದುಎಲ್ಲರೂ ಬಲ್ಲ ವಿಷಯ. ಶೃಂಗೇರಿ ಪೀಠದ ೩೪ನೆಯ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ೧೯೨೪ರಿಂದ ೧೯೨೭ರವರೆಗೆ ದಕ್ಷಿಣದೇಶ ಯಾತ್ರೆಯನ್ನು ಪೂರ್ತಿಯಾಗಿ ಮಾಡಿದರು. ಅದಾದ ಮೇಲೆ ೧೯೩೪ರಲ್ಲಿ ಮೈಸೂರು, ಕೊಯಮತ್ತೂರು ಮಾರ್ಗವಾಗಿ ಕಾಲಟಿ ಯಾತ್ರೆಮಾಡಿ ಶೃಂಗೇರಿಗೆ ಹಿಂದಿರುಗಿದರು. ಆ ಬಳಿಕ ಶೃಂಗೇರಿಯಲ್ಲೇ ತಂಗಿಬಿಟ್ಟರು. ಬಹಳ ಕಾಲ ಅಂತರ್ಮುಖವಾಗಿಯೇ ಇದ್ದದ್ದರಿಂದ ಯಾತ್ರೆಗಳನ್ನು ಕೈಗೊಳ್ಳಲಿಲ್ಲ. ಹಲವರು ಶಿಷ್ಯರು ಬೇಡಿ ಕೊಂಡರೂ ಯಾತ್ರೆಗಳು ಆಗಲಿಲ್ಲ.

೧೯೩೧ರಲ್ಲಿ ತಮ್ಮ ಅನಂತರ ಪಟ್ಟಕ್ಕೆ ಬರಬೇಕಾದವರನ್ನು ಶಿಷ್ಯರಾಗಿ ನಿಯಮಿಸಿದ ಮೇಲೆ, ಪೀಠಾಧಿಪತ್ಯದಲ್ಲಿ ಯಾವ ವಿಧವಾದ ಆಸಕ್ತಿಯೂ ಇಲ್ಲದೆ ಶೃಂಗೇರಿಯಲ್ಲಿ ಜೀವನ್ಮುಕ್ತ ಸ್ಥಿತಿಯಲ್ಲಿಯೇ ನೆಲಸಿದ್ದರು. ಮತ್ತೊಮ್ಮೆ ಯಾತ್ರೆ ಬರಬೇಕು—ಎಂದು ಕೆಲವರು ಮುಖ್ಯ ಶಿಷ್ಯರುಗಳು ಪ್ರಾರ್ಥಿಸಿದಾಗ, "ಈ ಶರೀರಕ್ಕೆ ಇನ್ನು ಯಾತ್ರೆ ಇಲ್ಲ!" ಎಂದು ಹೇಳಿದರು "ತಮ್ಮ ಶಿಷ್ಯರನ್ನಾದರೂ (ಎಂದರೆ ಚಿಕ್ಕ ಸ್ವಾಮಿಗಳನ್ನು) ಯಾತ್ರೆಗೆ ಕಳಿಸಬೇಕೆಂದು" ಕೇಳಲಾಗಿ, "ಅದಕ್ಕೆ ತಕ್ಕ ಕಾಲ ಬರುವುದು" ಎಂದು ಅಪ್ಪಣೆ ಮಾಡಿದರು. ಅದರಿಂದ ಸುಮಾರು ೩೦ ವರ್ಷ ಕಾಲ ಶೃಂಗೇರೀ ಪೀಠಾಧಿಪತಿಗಳ ಯಾತ್ರೆಯೇ ಇಲ್ಲದೆ ಕಳೆದುಹೋಯಿತು. ಶೃಂಗೇರಿಗೆ ಹೋಗಿ ದರ್ಶನಮಾಡಿದ ಶಿಷ್ಯರುಗಳಿಗೆ ಮಾತ್ರ ನೇರವಾಗಿ ಅನುಗ್ರಹ ದೊರೆಯಿತು. ತಮ್ಮ ಗುರುವಿನ ದರ್ಶನ ದೊರೆಯಲಿಲ್ಲವಲ್ಲ ಎಂದು ಹಲವು ಊರುಗಳಲ್ಲಿ ಉಳಿದ ಶಿಷ್ಯರುಗಳಿಗೆ ಮನಸ್ಸಿನಲ್ಲಿ ಇದೇ ಒಂದು ದೊಡ್ಡ ಚಿಂತೆಯಾಗಿತ್ತು.

ಇದನ್ನೆಲ್ಲ ಚೆನ್ನಾಗಿ ಅರಿತಿದ್ದ ಶೃಂಗೇರಿಯ ೩೫ನೆಯ ಪೀಠಾಧಿಪತಿಗಳು ೧೯೫೬ನೆಯ ವರ್ಷ ಯಾತ್ರೆ ಹೊರಟು ಹಲವು ಸಲ ದಕ್ಷಿಣ ಇಂಡಿಯದಲ್ಲೂ, ಒಂದು ಸಲ ಉತ್ತರ ಇಂಡಿಯ ಪೂರ್ತಿಯಾಗಿಯೂ, ನೇಪಾಳದಲ್ಲೂ, ಯಾತ್ರೆ ಮಾಡಿ ಅಲ್ಲಲ್ಲೇ ಶಿಷ್ಯರನ್ನು ಅನುಗ್ರಹಿಸಿದರು. ಈ ಯಾತ್ರೆಗಳಲ್ಲಿ ಹಲವು ವಿಶೇಷ ಸಂಗತಿಗಳು ನಡೆದಿವೆ. ಅವುಗಳ ವಿವರಗಳನ್ನು ಮುಂದಿನ ಅಧ್ಯಾಯದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡಲಾಗಿದೆ. ಈಗ ಯಾತ್ರೆಗಳೆಲ್ಲಕ್ಕೂ ಸಾಮಾನ್ಯವಾಗಿ ಅನ್ವಯಿಸುವ ಅಂಶಗಳನ್ನು ಮಾತ್ರ ಕಾಣಬಹುದು.

ಮೊದಲನೆಯ ಯಾತ್ರೆ (೧೯೫೬–೧೯೬೨)

ತಮ್ಮ ಗುರುಗಳಿರುವವರೆಗೂ ೩೫ನೆಯ ಪೀಠಾಧಿಪತಿಗಳು ಎಲ್ಲಿಗೂ ಯಾತ್ರೆ ಹೊರಡಲಿಲ್ಲ. ೧೯೫೪ರಲ್ಲಿ ಗುರುಗಳು ಜಲಸಮಾಧಿ ಹೊಂದಿದವೇಲೆ ಸುಮಾರು ಒಂದೂವರೆ ವರ್ಷ ಕಾಲ ಕಳೆದ ಬಳಿಕ ತಾವು ಯಾತ್ರೆಯನ್ನು ಆರಂಭಿಸಿದರು. ೧೯೫೬ರ ಮಾರ್ಚಿ ೧೪ರಲ್ಲಿ ಶೃಂಗೇರಿಯಿಂದ 'ಕಳಸ' ಎಂಬ ಕ್ಷೇತ್ರಕ್ಕೆ ಬಿಜಯ ಮಾಡಿದರು. ದಕ್ಷಿಣ ಕನ್ನಡ ಪ್ರದೇಶವಲ್ಲಿರುವ ಹಲವು ಊರುಗಳಿಗೆ ಹೋದರು. ಅಲ್ಲಿಂದ ಕಾಲಟಿಗೆ ಬಂದು ಸೇರಿದರು. ಅಲ್ಲಿ ೧೯೫೬ನೆಯ ವರ್ಷದ ಚಾತುರ್ಮಾಸ್ಯವನ್ನೂ ಗುರುಗಳ ಆರಾಧನೆಯನ್ನೂ ನಡಸಿದರು. ಅಲ್ಲಿಂದ ಕನ್ಯಾಕುಮಾರಿಗೆ ಬಿಜಯಮಾಡಿ, ತಿರುನೆಲ್ವೇಲಿ ಜಿಲ್ಲೆಯಲ್ಲಿ ಹಲವು ಊರುಗಳಿಗೆ ಪಾದಬೆಳಸಿದರು. ೧೯೫೭ರಲ್ಲಿ ಕುತ್ತಾಲದಲ್ಲಿ ಚಾತುರ್ಮಾಸ್ಯವನ್ನು ನಡಸಿ ಶೆಂಗೋಟ್ಟೈಯಲ್ಲಿ ಆ ವರ್ಷದ ನವರಾತ್ರಿ ಉತ್ಸವವನ್ನು ಆಚರಿಸಿದರು. ಅಲ್ಲಿಂದ ರಾಮನಾಥಪುರಂ ಜಿಲ್ಲೆಯಲ್ಲಿ ಸಂಚಾರ. ೧೯೫೮ನೆಯ ವರ್ಷದ ಚಾತುರ್ಮಾಸ್ಯ ಕಾಲಕ್ಕೆ ಕಾಲಟಿಗೆ ಬಂದು ಸೇರಿದರು. ೧೯೫೮ನೆಯ ವರ್ಷದ ನವರಾತ್ರಿ ಉತ್ಸವವನ್ನು ಕೊಯಮತ್ತೂರಿನಲ್ಲಿ ನಡಸಿ, ಅದೇ ಜಿಲ್ಲೆಯ ಧಾರಾಪುರ, ಈರೋಡು, ಭವಾನಿ, ಗೋಪಿ ತಾಲ್ಲೂಕುಗಳಲ್ಲಿ ಯಾತ್ರೆ ಮಾಡಿದರು. ಈರೋಡಿನಲ್ಲಿ ೧೯೫೯ನೆಯ ವರ್ಷದ ಶಿವರಾತ್ರಿ ಉತ್ಸವವನ್ನು ಬಹು ವಿಜೃಂಭಣೆಯಿಂದ ನಡಸಿದರು. ರಾತ್ರಿಯೆಲ್ಲಾ ನಡೆದ ಪೂಜೆಗೆ ಹಲವು ಊರುಗಳಿಂದ ಶಿಷ್ಯರುಗಳು ದರ್ಶನಕ್ಕೆ ಬಂದಿದ್ದರು. ಬೆಳಕು ಹರಿಯುವ ಕಾಲದಲ್ಲಿ ನಾಲ್ಕನೆಯ ಯಾಮದ ಪೂಜೆ ಮುಗಿಯುವ ಸಮಯದಲ್ಲಿ, ಶ್ರೀ ಸನ್ನಿಧಾನವು ಪೂಜೆಯಲ್ಲಿ ಮೈಮರೆತು ಶಿವಾನಂದಲಹರಿಯಿಂದ ಇನಿದನಿಯಲ್ಲಿ ಶ್ಲೋಕಗಳನ್ನು ಹೇಳಿದ್ದನ್ನು ಎಲ್ಲರೂ ಭಕ್ತಿಪೂರ್ವಕವಾಗಿ ಅನುಭವಿಸಿದರು. ಅನಂತರ ಈರೋಡು ತಾಲ್ಲೂಕಿನ ಹಲವಾರು ಪಟ್ಟಣಗಳಿಗೂ ಗ್ರಾಮಗಳಿಗೂ ಬಿಜಯಮಾಡಿ, ತಿರುಚ್ಚಿ ಜಿಲ್ಲೆಯಲ್ಲಿ ಕರೂರು, ಕುಳಿತ್ತಲೈ ತಾಲ್ಲೂಕುಗಳಿಗೆ ಬಿಜಯ Sri Vidyabharathi Book Centre, Sringeri ರ್ಮಾಸ್ಯವನ್ನು

CC-O. In Public Domain. Digitized by eGangotri

ತಿರುಚ್ಚಿ ಜಿಲ್ಲೆಯ ಅಯ್ಯಲೂರಿನಲ್ಲಿ ನಡಸಿದರು. ಅಲ್ಲಿಯೇ ಅಖಿಲ ಭಾರತ **ಶಂಕರ ಸೇವಾಸಮಿತಿಯನ್ನು** ಆರಂಭಿಸಿ, ಭಗವತ್ಪಾದರ ಗ್ರಂಥಗಳನ್ನೂ, ಉಪದೇಶಗಳನ್ನೂ ಲೋಕವಲ್ಲೆಲ್ಲಾ ಹರಡುವಂತೆ ಮಾಡುವುದಕ್ಕೂ, ಅಲ್ಲಲ್ಲಿ ಸಮಿತಿಯ ಮೂಲಕ ವಿದ್ವತ್ಸದಸ್ಸುಗಳನ್ನು ನಡಸುವುದಕ್ಕೂ, '**ಶಂಕರ ಕೃಪಾ**' ಎಂಬ ತಮಿಳು **ಮಾಸ** ಪತ್ರಿಕೆಯನ್ನು ಆರಂಭಿಸುವುದಕ್ಕೂ ಏರ್ಪಾಡು ಮಾಡಿದರು. ಶೃಂಗೇರೀ ಮಠದ ಶಿಷ್ಯರುಗಳ ಮಹಾಸಭೆಯನ್ನೂ ಅದೇ ಸಮಯದಲ್ಲಿ ನಡಸಲಾಯಿತು.

ಶ್ರೀಮದಾಚಾರ್ಯರ ಮದರಾಸು ವಿಜಯಕ್ಕೆ ಸ್ವಲ್ಪ ಮುಂಚೆ, ಅಖಿಲ ಭಾರತ ಶಂಕರ ಸೇವಾಸಮಿತಿಯ ವಿದ್ವತ್ಸಮ್ಮೇಳನವೊಂದು ೧೯೬೦ನೆಯ ವರ್ಷ ಮೇ ತಿಂಗಳು ಮದರಾಸಿನಲ್ಲಿ ಬಹಳ ಯಶಸ್ವಿಯಾಗಿ ನೆರವೇರಿತು. ಡಾ|| ಸಿ. ಪಿ. ರಾಮಸ್ವಾಮಿ ಅಯ್ಯರ್, ಜಡ್ಜ್ ವೆಂಕಟರಮಣರಾವ್, ಕೆ. ಎಸ್. ರಾಮಸ್ವಾಮಿ ಶಾಸ್ತ್ರಿಗಳು ಮೊದಲಾದ ವಿದ್ವಾಂಸರುಗಳು ಭಾಷಣಗಳನ್ನು ಮಾಡಿದರು. ಸಮಿತಿಯ ಮದರಾಸು ಶಾಖೆಯ ಮೊದಲ ಪ್ರಕಟನೆಯಾದ Homage to Shankara (ಶಂಕರರಿಗೆ ಪ್ರಣಾಮ) ಎಂಬ ಪುಸ್ತಕ (ಶ್ರೀ ಸಿ. ಪಿ. ರಾಮಸ್ವಾಮಿ ಅಯ್ಯರು ರಚಿಸಿದ್ದು) ಈ ಸಮ್ಮೇಳನದಲ್ಲಿ ಪ್ರಕಟವಾಯಿತು. ಅಯ್ಯಲೂರಿನಿಂದ ಸೇಲಮಿಗೆ ಹೋಗಿ ಅಲ್ಲಿ ನವರಾತ್ರಿ ಉತ್ಸವವನ್ನು ನಡಸಿ, ದರ್ಬಾರಿನ ಸಮಯದಲ್ಲಿ ಹಲವರು ವಿದ್ವಾಂಸರುಗಳಿಗೂ ಮುಖ್ಯ ಶಿಷ್ಯರುಗಳಿಗೂ ಬಿರುದುಗಳನ್ನೂ, ಸನ್ಮಾನಗಳನ್ನೂ ದಯಪಾಲಿಸಿದರು.

ಕೆಲವರು ಶಿಷ್ಯರುಗಳ ಪ್ರಾರ್ಥನೆಗೆ ಸಮ್ಮತಿಸಿ ೧೯೬೯ರಲ್ಲಿ ಮತ್ತೊಮ್ಮೆ ಕೊಯಮುತ್ತೂರಿಗೆ ಬಿಜಯಮಾಡಿ ಅಲ್ಲಿ ಹೊಸ ಶಂಕರಮಠವನ್ನು ಆರಂಭಗೊಳಿಸಿದರು. ೧೯೬೯ನೆಯ ಡಿಸೆಂಬರ್ ೧೩ರಂದು ಕೊಯಮುತ್ತೂರಿನಿಂದ ಹೊರಟು ತಿರುಚ್ಚಿ ಜಿಲ್ಲೆಯ ಕರೂರಿಗೆ ಬಂದು ಅಲ್ಲಿ ಹೊಸದಾಗಿ ಕಟ್ಟಿದ ಶೃಂಗೇರೀ ಶಂಕರಮಠದಲ್ಲಿ ಶ್ರೀ ರಾಜರಾಜೇಶ್ವರೀ ವಿಗ್ರಹವನ್ನು ಪ್ರತಿಷ್ಠೆ ಮಾಡಿದರು. ಈಗ ಈ ಮಠದ ಕಟ್ಟಡ ಬಹಳವಾಗಿ ವಿಸ್ತರಿಸಿದೆ. ಇದರಲ್ಲಿ ವಿಶೇಷ ಪೂಜೆಗಳು, ಉತ್ಸವಗಳು ವ್ಯವಸ್ಥಿತವಾಗಿ ನಡೆದುಕೊಂಡುಬರುತ್ತಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರೂರಿನಿಂದ ಮತ್ತೆ ಸೇಲಮಿಗೆ ಹೋಗಿ ಅಲ್ಲಿ ಹೊಸದಾಗಿ ಶಂಕರಮಠ ಕಟ್ಟುವುದಕ್ಕೆ ಏರ್ಪಾಡು ಮಾಡಿದರು. ಹಲವು ವರ್ಷಗಳಿಗೆ ಮೊದಲೇ ಸೇಲಮಿನ ವಕೀಲರು ವೆಂಕಟರಾವ್ ಅವರ ಕುಟುಂಬದವರಿಂದ ಕಾದಿರಿಸಲ್ಪಟ್ಟಿದ್ದ ಸ್ಥಳದಲ್ಲಿ ಸೊಗಸಾದ ಮಠ ನಿರ್ಮಿತವಾಗಿದೆ.

ಸೇಲಮಿನಿಂದ ಮೈಸೂರು ಪ್ರದೇಶದ ಕೋಲಾರ, ಆಂಧ್ರ ಪ್ರದೇಶದ ಚಿತ್ತೂರು, ಅನಂತಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಬಿಜಯಮಾಡಿಕೊಂಡು ಹಂಪೆಗೆ ಹೋದರು. ಇದು ಶೃಂಗೇರಿ ಮಠದ ಪೀಠಾಧಿಪತಿಗಳಾದ ವಿದ್ಯಾರಣ್ಯಸ್ವಾಮಿಗಳಿಂದ ಹಿಂದೆ ಸ್ಥಾಪಿತವಾದ ವಿಜಯನಗರ ರಾಜ್ಯದ ಮುಖ್ಯ ಪಟ್ಟಣ. ಇಲ್ಲಿರುವ ವಿರೂಪಾಕ್ಷ ಮಠವು ಶೃಂಗೇರೀ ಮಠದ ಅಧಿಕಾರಕ್ಕೆ ಒಳಪಟ್ಟಿದೆ. ಈ ಮಠದಲ್ಲಿ ಆ ವರ್ಷದ ಶಿವರಾತ್ರಿ ಉತ್ಸವ ನಡೆಯಿತು. ಅಲ್ಲಿಂದ ಆಂಧ್ರ ಪ್ರದೇಶದ ಮುಖ್ಯಪಟ್ಟಣವಾದ ಹೈದರಾಬಾದಿಗೆ ೧೯೬೦ನೆಯ ಏಪ್ರಿಲ್ ತಿಂಗಳು ೧೯ನೆಯ ದಿನ ಬಿಜಯಮಾಡಿದರು.

ಹೈದರಾಬಾದಿನಲ್ಲಿ ಶ್ರೀಮಠದ ಶಿಷ್ಯರಾದ ರಾಜಾ ವೆಂಕಟರಾವ್ ಅಂಬೇಕರ್ ಅವರು ಶ್ರೀಮಠಕ್ಕಾಗಿ ಎರಡು ಲಕ್ಷ ರೂಪಾಯಿ ವೆಚ್ಚಮಾಡಿ ಕಟ್ಟಿಸಿ ಗುರುಗಳಿಗೆ ಸಮರ್ಪಿಸಿದ ಶ್ರೀ ಶಂಕರಮಠದಲ್ಲಿ ಶ್ರೀ ಶಾರದಾ ಮತ್ತು ಶ್ರೀ ಶಂಕರ ಭಗವತ್ಪಾದರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸಿದರು. ಆ ವರ್ಷದ ಶ್ರೀ ಶಂಕರ ಜಯಂತಿಯೂ ಇದೇ ಮಠದಲ್ಲಿ ನಡೆಯಿತು. ೧೯೬೦ರ ಮೇ ೨೩ರಲ್ಲಿ ಹೈದರಾಬಾದಿನಿಂದ ಹೊರಟು ಹಲವು ಸ್ಥಳಗಳಲ್ಲಿ ಯಾತ್ರೆಮಾಡಿಕೊಂಡು ವಿಜಯವಾಡಕ್ಕೆ ಬಿಜಯಮಾಡಿದರು. ಮದರಾಸಿನಿಂದ ಬಹುಮಂದಿ ಮುಖ್ಯ ಶಿಷ್ಯರುಗಳು ಅಲ್ಲಿಗೆ ಬಂದು ಸನ್ನಿಧಾನವು ಮದರಾಸಿಗೆ ಬಿಜಯಮಾಡಬೇಕೆಂದು ಬಿನ್ನಹಮಾಡಿಕೊಂಡರು.

ಒಂದು ಶತಮಾನಕ್ಕೆ ಮುಂಚೆ ಶೃಂಗೇರೀ ಪೀಠಾಧಿಪತಿಗಳು ಮದರಾಸಿಗೆ ಬಿಜಯಮಾಡಿದ್ದ ಬಳಿಕ ಇದುವರೆಗೂ ಈ ಪೀಠದ ಮಹಾತ್ಮರು ಬಿಜಯಮಾಡದೆ ಇದ್ದ ಕಾರಣ, ಸಾರ್ವಜನಿಕರ ಆಹ್ವಾನವನ್ನು ಅಂಗೀಕರಿಸಿ ಜಗದ್ಗುರುಗಳು ಮದರಾಸಿಗೆ ೧೯೬೦ರಲ್ಲಿ ಬಿಜಯಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದರಾಸಿನ ಹಲವು ಸ್ಥಳಗಳಲ್ಲಿ ಶೃಂಗೇರೀ ಮಠಕ್ಕೆ ಸಂಬಂಧಪಟ್ಟ ಚಿಹ್ನೆಗಳಿವೆ. ತಿರುವೊಟ್ರಿಯೂರಿನಲ್ಲಿ ಆದಿ ಶಂಕರರು ಶ್ರೀ ತ್ರಿಪುರಸುಂದ ಅಮ್ಮನವರ ದೇವಾಲಯದಲ್ಲಿ ಒಂದು ಶ್ರೀ ಚಕ್ರವನ್ನು ಸ್ಥಾಪಿಸಿದರೆಂದು ಹೇಳಲಾಗಿದೆ. ಶೃಂಗೇರೀ ಪೀಠಾಧಿಪತಿಗಳಾದ ಶ್ರೀ ಸಚ್ಚಿದಾನಂದ ಭಾರ (೨; ೧೭೦೫–೧೭೪೧); ಶ್ರೀ ಅಭಿನವ ಸಚ್ಚಿದಾನಂದ ಭಾರತಿ (೧; ೧೭೪೧–೧೭೬೭), ಶ್ರೀ ಸಚ್ಚಿದಾನಂದ ಭಾರತೀ (೩; ೧೭೭೦–೧೮೧೪)–ಈ ಮಹಾತ್ಮರುಗಳು ಮದರಾಸಿಗೆ ಬಿಜಯಮಾಡಿದ್ದರು. ಶ್ರೀ ಸಚ್ಚಿದಾನಂ ಭಾರತಿಗಳು ೧೭೯೨ರಲ್ಲೂ, ೧೮೦೫ರಲ್ಲೂ, ಹೀಗೆ ಎರಡು ಸಲ ಮದರಾಸಿ ಬಿಜಯಮಾಡಿದ್ದಾಗಿ ದಾಖಲೆಗಳಿವೆ. ಶ್ರೀ ನರಸಿಂಹ ಭಾರತೀ ಸ್ವಾಮಿಗಳ (೬) ಇದೇ ಪ್ರಕಾರ ೧೮೩೭ರಲ್ಲಿ ತಾವೊಬ್ಬರೇ ಒಂದು ಸಲವೂ, ೧೮೭೦ರ ತಮ್ಮ ಶಿಷ್ಯರೂ ಮುಂದಿನ ಪೀಠಾಧಿಪತಿಗಳೂ ಆದ ಸಚ್ಚಿದಾನಂದ ಶಿವಾಭಿನ ನರಸಿಂಹ ಭಾರತೀ ಸ್ವಾಮಿಗಳೊಡನೆ ಒಂದು ಸಲವೂ ಮದರಾಸಿಗ ಬಿಜ ಮಾಡಿದ್ದರು. ಆ ಕಾಲಗಳಲ್ಲಿ ಮದರಾಸಿನಲ್ಲಿದ್ದ ಬ್ರಿಟಿಷ್ ಗವರ್ನರುಗ ಶೃಂಗೇರೀ ಜಗದ್ಗುರುಗಳಿಗೆ ವಿಶೇಷ ಮರ್ಯಾದೆಗಳನ್ನು ತೋರಿದ್ದಾಗಿ ದಾಖ ಗಳಿವೆ. ಹಲವು ತಿಂಗಳುಗಳವರೆಗೆ ಶೃಂಗೇರೀ ಪೀಠಾಧಿಪತಿಗಳು ಮದರಾಸಿನ ತಂಗಿದ್ದು ಎಲ್ಲರಿಗೂ ದರ್ಶನಕೊಡುತ್ತಿದ್ದರೆಂದೂ ತಿಳಿಯಬರುತ್ತದೆ.

೧೮೭೦ರ ಬಳಿಕ ಶೃಂಗೇರೀ ಪೀಠಾಧಿಪತಿಗಳು ಮದರಾಸಿಗೆ ಬಿಜಯ ಮಾಡದೆ ಇದ್ದ ಕಾರಣದಿಂದ ೧೯೬೦ರಲ್ಲಿ ಸನ್ನಿಧಾನವು ಮದರಾಸಿಗೆ ಬಿಜ ಮಾಡಿದಾಗ ಜನರು ನೀಡಿದ ಸ್ವಾಗತ ಅತ್ಯಂತ ಶ್ಲಾಘ್ಯವಾದದ್ದಾಗಿಯೂ, ಭಕ್ತಿ ಶ್ರದ್ಧಾ ಪೂರ್ಣವಾಗಿಯೂ ಇತ್ತು.

೧೯೫೬ನೆಯ ವರ್ಷದಲ್ಲಿ ಯಾತ್ರೆಗೆ ಹೊರಟ ಮೊದಲು ಒಂದೊಂ ಊರಿನಲ್ಲೂ ಶ್ರೀ ಸನ್ನಿಧಾನವನ್ನು ಮಠದ ಪಲ್ಲಕ್ಕಿಯಲ್ಲಿ ಊರ ಮೆರವಣಿಗೆಯ ಕರೆದುಕೊಂಡು ಹೋಗಲಾಗುತ್ತಿತ್ತು. ಮದರಾಸಿಗೆ ಅವರು ಬಂದಾಗ ನಡೆ ಪಲ್ಲಕ್ಕಿ ಮೆರವಣಿಗೆ ಹಲವಾರು ಸಾವಿರ ಜನಗಳೊಡನೆ ಹಲವು ಮೈಲುಗಳ ಮ ನಡೆಯಿತು ; ಎಲ್ಲರ ಮನಸ್ಸನ್ನೂ ಆಕರ್ಷಿಸಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದರಾಸಿನ ಜಾರ್ಜ್‌ಟೌನಿನಲ್ಲಿ ಬಹುಕಾಲದಿಂದಲೂ ಶೃಂಗೇರೀ ಪೀಠಕ್ಕೆ ಸೇರಿದ ಸ್ವಂತ ಮಠವಿದೆ. ಈ ಯಾತ್ರೆಯಲ್ಲಿ ಶ್ರೀ ಶೃಂಗೇರೀ ಜಗದ್ಗುರುಗಳು ಮದರಾಸಿಗೆ ಪ್ರವೇಶ ಮಾಡುವಾಗ ಈ ಮಠದಲ್ಲಿಯೇ ಸ್ವಲ್ಪ ಕಾಲ ತಂಗಿ ದರ್ಶನ ನೀಡಿದರು.

೧೯೫೦ನೆಯ ವರ್ಷದ ವ್ಯಾಸ ಪೂಜೆ, ನವರಾತ್ರಿ ಉತ್ಸವಗಳು ಮದರಾಸಿನಲ್ಲಿ ನಡೆದವು. ನವರಾತ್ರಿ ವೈಭವವು ಮದರಾಸಿನ ರಾಜಾ ಅಣ್ಣಾಮಲೈ ಪುರದಲ್ಲಿ ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರ್ ಅವರ ವಿಶಾಲವಾದ ಬಂಗಲೆಯ ಅಂಗಳದಲ್ಲಿ ವಿಜೃಂಭಣೆಯಿಂದ ನೆರವೇರಿತು. ರಾತ್ರಿ ಕಾಲಗಳಲ್ಲಿ ದೀಪಗಳನ್ನು ಬೆಳಗಿಸಕೂಡದು ಎಂದು ಸರ್ಕಾರ ವಿಧಿಸಿದ್ದ ತಡೆ ಆಜ್ಞೆ ನವರಾತ್ರಿಗೆ ಹಿಂದಿನ ದಿನ ಹಿಂತೆಗೆದುಕೊಳ್ಳಲಾಯಿತು. ಶೃಂಗೇರೀ ಜಗದ್ಗುರುಗಳ ಮದರಾಸು ವಿಜಯದಲ್ಲಿ ಅವರಿಂದ ನಡಸಲ್ಪಡುವ ನವರಾತ್ರಿ ಉತ್ಸವ ಯಾವ ವಿಧವಾದ ವಿಘ್ನವೂ ಇಲ್ಲದೆ ವಿಶೇಷ ವೈಭವದಿಂದ ನಡೆಯಬೇಕೆಂಬುದು ದೇವಿಯ ಆಶಯವಿರಬೇಕೆಂದು ತೋರಿತು. ಈ ಮದರಾಸು ಮುಕ್ಕಾಮಿನಲ್ಲಿ ಡಾ|| ಸಿ. ಪಿ. ರಾಮಸ್ವಾಮಿ ಅಯ್ಯರ್, ಭಾರತದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು, ಅಮೆರಿಕ ರಾಯಭಾರಿ ಡಾಕ್ಟರ್ ವಿಲ್ಸ್‌ವರ್ತ್ ಬಂಕರ್, ಮಾನ್ಯ ಶ್ರೀ ಕೆ. ಎಂ. ಮುನ್ಷಿ ಮೊದಲಾದವರುಗಳು ಶ್ರೀ ಸನ್ನಿಧಾನವನ್ನು ದರ್ಶಿಸಿ ವಿಶೇಷ ಅನುಗ್ರಹ ಪಡೆದರು. ರಾಷ್ಟ್ರಪತಿ ಶ್ರೀ ರಾಜೇಂದ್ರಪ್ರಸಾದರವರಿಗೆ ಶ್ರೀ ಸನ್ನಿಧಾನವು "ರಾಷ್ಟ್ರ ರತ್ನ" ಎಂಬ ಬಿರುದನ್ನೂ, ಹಂಸಚಿಹ್ನೆಯಿರುವ ಚಿನ್ನದ ಪದಕವನ್ನೂ ನೀಡಿ ಅನುಗ್ರಹಿಸಿದರು. ಈ ಊರಿನಲ್ಲಿ ವಿನಾಯಕ ಚತುರ್ಥೀ ವಿದ್ವತ್ಸದಸ್ಸಿಗೆ ಭಾರತದ ಎಲ್ಲ ಕಡೆಗಳಿಂದಲೂ ಹಲವರು ಘನ ವಿದ್ವಾಂಸರುಗಳು ಬಂದಿದ್ದರು. ಶ್ರೀ ಸನ್ನಿಧಾನದ ಅಧ್ಯಕ್ಷತೆಯಲ್ಲಿ ಹಲವು ಶಾಸ್ತ್ರಗಳ ವಿಷಯವಾಗಿ ವಾಕ್ಯಾರ್ಥಗಳು ನಡೆದವು.

ತಮಿಳುನಾಡಿನ ಮುಖ್ಯ ನಗರವಾದ ಮದರಾಸಿಗೆ ಜಗದ್ಗುರುಗಳು ಬಿಜಯ ಮಾಡಿದ್ದು ಈ ಪ್ರಾಂತದಲ್ಲಿ ಹೊಸ ವಿಕಾಸವನ್ನು ಉಂಟುಮಾಡಿತು ಎಂದೇ ಹೇಳಬೇಕು. ದಿವಂಗತ ಶ್ರೀ ಅನಂತರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಅನೇಕ ಮುಖ್ಯಸ್ಥರುಗಳನ್ನೊಳಗೊಂಡ ಒಂದು ಸ್ವಾಗತಸಮಿತಿ ಸೇರಿಸಲಾಯಿತು. ಇದರ ಮೂಲಕ ಜಗದ್ಗುರುಗಳ ಬಿಜಯ ಅತ್ಯಂತ ಸಂಭ್ರಮವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆರವೇರಿತು. ಇದರಲ್ಲಿ ಸೇರಿ ಸೇವೆ ಮಾಡಿದವರ ಶ್ರದ್ಧೆ ಬಹಳ ಶ್ಲಾಘಿಸತಕ್ಕದ್ದಾಗಿದೆ. ಮುಖ್ಯವಾಗಿ ಪಿ. ಎಸ್. ಸುಬ್ರಮಣಿಯ ಅಯ್ಯರ್, ಕೆ. ಆರ್. ಸುಂದರಮಯ್ಯರ್, ವಿ. ವೈದ್ಯ ಸುಬ್ರಹ್ಮಣ್ಯ ಅಯ್ಯರ್ ಇವರುಗಳ ಸೇವೆ ಪ್ರಶಂಸನೀಯವಾದುದು. ಮದರಾಸು ನಗರವು ಬಹುವಿಸ್ತಾರವಾಗಿರುವುದರಿಂದಲೂ ಅನೇಕ ಮಂದಿ ಶಿಷ್ಯರುಗಳು ದಕ್ಷಿಣ ಮದರಾಸಿನಲ್ಲಿ ಇರುವುದರಿಂದಲೂ ಅವರುಗಳ ಬೇಡಿಕೆಯನ್ನು ಅಂಗೀಕರಿಸಿ ಮದರಾಸಿನ ದಕ್ಷಿಣಭಾಗದಲ್ಲಿರುವ ತ್ಯಾಗರಾಜನಗರದಲ್ಲಿ, ವೆಂಕಟನಾರಾಯಣ ರಸ್ತೆಯಲ್ಲಿ ಒಂದು ಮಠವನ್ನು ನಿರ್ಮಿಸಿದರು. ಅದಕ್ಕಾಗಿ ಹೆಚ್ಚುಕಡಮೆ ಒಂದು ಲಕ್ಷ ರೂಪಾಯಿ ಬೆಲೆಬಾಳುವ ತೋಟವೂ ಬಂಗಲೆಯೂ ಶ್ರೀಮಠದವರಿಂದ ಕೊಳ್ಳಲಾಯಿತು ಈ ಏರ್ಪಾಡಿಗೆ ಮುಂದೆ ನಿಂತು ಪ್ರಯತ್ನಮಾಡಿದವರು ಶ್ರೀ ಪಿ. ಎಸ್. ಸುಬ್ರಹ್ಮಣ್ಯ ಅಯ್ಯರ್ ಮತ್ತು ಶ್ರೀ ಕೆ. ಎಸ್. ವೆಂಕಟರಾಮ ಅಯ್ಯರ್. ಈ ಶಂಕರ ಮಠದಲ್ಲಿ ಶ್ರೀ ಸನ್ನಿಧಾನದ ಅನುಗ್ರಹದಿಂದ ಉಪನ್ಯಾಸಮಂಟಪ, ಲೈಬ್ರೆರಿ ಮೊದಲಾದ ಹಲವು ಹೊಸ ಕಟ್ಟಡಗಳು ಏರ್ಪಟ್ಟು ವಿಶೇಷವಾದ ಧರ್ಮಕಾರ್ಯಗಳೂ ಪ್ರವಚನಗಳೂ ನಡೆಯುತ್ತಿವೆ.

ಮದರಾಸಿನಿಂದ ಶ್ರೀ ಸನ್ನಿಧಾನವು ತಿರುಪತಿಗೆ ಬಿಜಯಮಾಡಿ ಅಲ್ಲಿ ದೇವಸ್ಥಾನದ ಆಶ್ರಯದಲ್ಲಿ ನಡೆದ ವಿದ್ವತ್ಸದಸ್ಸಿನ ಅಧ್ಯಕ್ಷತೆ ವಹಿಸಿ ಉಪದೇಶ ನೀಡಿದರು.

೧೯೬೧ರಲ್ಲಿ ಶೃಂಗೇರೀ ಜಗದ್ಗುರುಗಳು ಶಿಷ್ಯರ ಬೇಡಿಕೆಯ ಪ್ರಕಾರ ಕಾಂಚೀಪುರಕ್ಕೆ ಬಿಜಯಮಾಡಿದರು. ಅಲ್ಲಿ ಬಂಗಾದರ ಪಲ್ಲಕ್ಕಿಯಲ್ಲಿ ಮಹಾಜನರಿಂದ ಶ್ರೀ ಸನ್ನಿಧಾನದ ಊರ ಮೆರವಣಿಗೆ ನಡಸಲಾಯಿತು. ಎಲ್ಲಾ ದೇವಸ್ಥಾನಗಳಲ್ಲಿಯೂ ಮೂರ್ತಿ ದರ್ಶನ ಮಾಡಿ ಅಲ್ಲಿರುವ ಶೃಂಗೇರೀ ಶಂಕರಮಠದಲ್ಲಿ ತಂಗಿದರು. ಅಲ್ಲಿಂದ ಮದರಾಸಿಗೆ ಬಂದು ಆ ಮೇಲೆ ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಗೆ ಬಿಜಯಮಾಡಿದರು. ಗುಂಟೂರಿನಲ್ಲಿ ಹೊಸದಾಗಿ ಕಟ್ಟಬೇಕೆಂದು ಏರ್ಪಾಡಾಗಿದ್ದ ಶ್ರೀ ಶಂಕರಮಠಕ್ಕೆ ಶಂಕುಸ್ಥಾಪನೆ ಮಾಡಿದರು. ಗುಂಟೂರಿನಿಂದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಮೂಲ ಮೂರ್ತಿಗೆ ಪೂಜೆ ಮಾಡಿ ದೇವಾಲಯದ ಜೀರ್ಣೋದ್ಧಾರಕ್ಕೆ ಹಣವನ್ನು ಸ್ಥಾಪಿಸಿದರು. ಅಲ್ಲಿಂದ ೧೯೬೧

Sri Vidyabharathi Book Centre, Sringeri

CC-0. In Public Domain. Digitized by eGangotri

ಜುಲೈ ತಿಂಗಳು ಬೆಂಗಳೂರಿಗೆ ಬಂದು ಸೇರಿದರು. ಈ ವರ್ಷದ ಚಾತುರ್ಮಾಸ್ಯವೂ, ನವರಾತ್ರಿ ಉತ್ಸವವೂ ಬೆಂಗಳೂರಿನ ಶಂಕರಪುರದಲ್ಲಿರುವ ಶ್ರೀ ಶಂಕರಮಠದಲ್ಲಿ ನಡೆದವು.

೧೯೬೨ನೆಯ ಫೆಬ್ರುವರಿ ೮ನೆಯ ತಾರೀಖು ೮ ಗ್ರಹಗಳ ಒಕ್ಕೂಟದಿಂದ ಲೋಕಕ್ಕೆ ಮಹತ್ತಾದ ಕೇಡುಂಟಾಗುವುದೆಂದು ಶಾಸ್ತ್ರವನ್ನರಿತವರು ಹೇಳಿದ್ದರು. ಜನಗಳಿಗೆ ಯಾವ ವಿಧವಾದ ಕೆಡುಕೂ ಉಂಟಾಗದಿರುವುದಕ್ಕಾಗಿಯೂ, ಲೋಕಕ್ಷೇಮಕ್ಕೋಸ್ಕರವಾಗಿಯೂ ೧೯೬೧ನೆಯ ಡಿಸೆಂಬರ್‌ನಲ್ಲಿ ಮೈಸೂರು ರಾಜ್ಯದಲ್ಲಿನ ರುದ್ರಪಟ್ಟಣಕ್ಕೆ ಬಿಜಯಮಾಡಿ ಜಗದ್ಗುರುಗಳು ಅಲ್ಲಿ ಶಾಸ್ತ್ರೋಕ್ತ ಕ್ರಮದಿಂದ ಅತಿರುದ್ರ ಯಜ್ಞವನ್ನು ನೆರವೇರಿಸಿದರು. ೧೯೬೨ನೆಯ ಫೆಬ್ರುವರಿಯಲ್ಲಿ ರಾಮನಾಥಪುರಂ ಜಿಲ್ಲೆಯಲ್ಲಿರುವ ನವಪಾಷಾಣ (ಸಮುದ್ರದಲ್ಲಿ ನವಗ್ರಹಗಳು ಶಿಲಾಸ್ತಂಭರೂಪದಲ್ಲಿ ನಿರ್ಮಿತವಾಗಿರುವ ಸ್ಥಳ ಇದು) ಕ್ಷೇತ್ರದಲ್ಲಿ ಶಿವಗಂಗೆಯ ಬ್ರಹ್ಮ ಶ್ರೀ ಸುಂದರೇಶ ಶ್ರೌತಿಗಳ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ನವಗ್ರಹ ಯಜ್ಞವನ್ನು ನಡಸುವಂತೆ ಅಪ್ಪಣೆ ಮಾಡಿ ಅದಕ್ಕೆ ನೆರವಾಗುವಂತೆ ಹಲವು ಶಿಷ್ಯರನ್ನು ಅಲ್ಲಿಗೆ ಕಳುಹಿಸಿದರು.

ಮೈಸೂರು ಮಹಾರಾಜರ ಪ್ರಾರ್ಥನೆಗೆ ಸಮ್ಮತಿಸಿ ಮೈಸೂರಿಗೆ ದಯಮಾಡಿ ಶ್ರೀ ಮಠದ ಪ್ರಧಾನ ಶಿಷ್ಯರಾದ ಮಹಾರಾಜರ ವಿಶೇಷ ಸೇವೆಗಳನ್ನು ಅಂಗೀಕರಿಸುತ್ತಾ ಕೆಲವು ದಿನ ಅಲ್ಲಿ ತಂಗಿದ್ದರು. ಅಲ್ಲಿಂದ ಬೆಂಗಳೂರಿಗೆ ಆಗಮಿಸಿ ೧೯೬೨ನೆಯ ವರ್ಷದ ಶಿವರಾತ್ರಿಯನ್ನು ಅಲ್ಲೇ ನಡಸಿದರು.

ಮದರಾಸಿನಲ್ಲಿರುವ ಶಿಷ್ಯರುಗಳ ಪ್ರಾರ್ಥನೆಯನ್ನು ಮೊದಲೇ ಒಪ್ಪಿಕೊಂಡಿದ್ದುದರಿಂದ, ೧೯೬೨ನೆಯ ಮಾರ್ಚಿ ತಿಂಗಳಲ್ಲಿ ಬೆಂಗಳೂರಿನಿಂದ ಮದರಾಸಿಗೆ ಪ್ರಯಾಣ ಬೆಳೆಸಿ, ಅಲ್ಲಿನ ಗಾಂಧೀನಗರದಲ್ಲಿ ಶ್ರೀ ಅನಂತಪದ್ಮನಾಭಸ್ವಾಮಿ ವಿಗ್ರಹವನ್ನು ಪ್ರತಿಷ್ಠೆ ಮಾಡಿ, ತರುವಾಯ ತಿರುಚಿರಾಪಳ್ಳಿ ಮಾರ್ಗವಾಗಿ ಸೇಲಂ ನಗರಕ್ಕೆ ಬಿಜಯಮಾಡಿದರು. ಸೇಲಮಿನಲ್ಲಿ ವಕೀಲ ವೆಂಕಟರಾವ್ ಅವರಿಂದ ಹಲವು ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟಿದ್ದ ಶಂಕರಾಲಯಕ್ಕೆ ಸೇರಿದಂತೆ ಖಾಲಿ ಇದ್ದ ನಿವೇಶನವನ್ನು ಅವರ ಕುಟುಂಬದವರು ಶ್ರೀ ವೆಂಕಟರಾವ್ ಅವರ ಕಟ್ಟಳೆಯ ಪ್ರಕಾರ ಶ್ರೀ ಶೃಂಗೇರೀಮಠಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮರ್ಪಿಸಿದರು. ಅದರಲ್ಲಿ ಹೊಸದಾಗಿ ಕಟ್ಟಿದ್ದ ಶ್ರೀಮಠವನ್ನು ಶ್ರೀಸನ್ನಿಧಾನವು ಆರಂಭಗೊಳಿಸಿದರು. ೧೯೬೨ನೆಯ ಜುಲೈ ೯ನೆಯ ತಾರೀಖು ಶೃಂಗೇರಿಗೆ ಹಿಂದಿರುಗಿ ಬಂದರು.

ಸುಮಾರು ೩೫ ವರ್ಷಗಳಿಂದ ಶೃಂಗೇರೀ ಶ್ರೀ ಜಗದ್ಗುರುಗಳು ದಕ್ಷಿಣ ದೇಶದಲ್ಲಿ ಯಾತ್ರೆ ಮಾಡದೆ ಶೃಂಗೇರಿಯಲ್ಲಿಯೇ ಇದ್ದುದರಿಂದಲೂ, ನಮ್ಮ ಪರಮಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಅಡಿಗಡಿಗೆ ಅಂತರ್ಮುಖಿಗಳಾಗಿಯೇ ಇರುತ್ತಿದ್ದುದ್ದರಿಂದಲೂ, ಅವರನ್ನು ಬಿಟ್ಟು ನಮ್ಮ ಸನ್ನಿಧಾನ ಹೊರಗೆ ಯಾತ್ರೆಮಾಡಲು ಇಷ್ಟಪಡದೆ ಇದ್ದುದ್ದರಿಂದಲೂ, ಮಠಕ್ಕೂ ಶಿಷ್ಯವರ್ಗಗಳಿಗೂ ಇದ್ದ ನಿಕಟ ಸಂಬಂಧ ಈಚೀಚೆಗೆ ಕಡಿಮೆಯಾಗುತ್ತಿತ್ತು. ಇದರಿಂದ ಹಲವು ಬಗೆಯ ಕಳವಳ–ಗೊಂದಲಗಳು ಶಿಷ್ಯರಲ್ಲಿ ತಲೆದೋರಿತ್ತು. ಮೇಲೆ ಕಾಣಿಸಿರುವಂತೆ ಈಗಿನ ಮಹಾಸ್ವಾಮಿಗಳ ಪ್ರಥಮ ದಿಗ್ವಿಜಯ ಯಾತ್ರೆಯು ಸುಮಾರು ಆರೂವರೆ ವರ್ಷ ಕಾಲ ನಡೆಯಿತು. ಆ ಕಾಲದಲ್ಲಿ ಅಲ್ಲಲ್ಲೇ ಹಲವು ಬಗೆಯ ಉಪಯುಕ್ತ ಕಾರ್ಯಗಳನ್ನು ಮಾಡಿಯೂ, ಮಠಗಳನ್ನು ಕಟ್ಟಿಸಿಯೂ, ಆರಂಭಗೊಳಿಸಿಯೂ, ಹಲವಾರು ದೇವಾಲಯ ಪ್ರತಿಷ್ಠಾಪನೆಗಳನ್ನು ಮಾಡಿಯೂ ಶ್ರೀ ಸ್ವಾಮಿಗಳು ಶಿಷ್ಯರ ಗುರುಭಕ್ತಿಯನ್ನು ಬಹಳ ಬಲಪಡಿಸಿದರು. ನವನಾಗರಿಕತೆಯ ಪ್ರಾದುರ್ಭಾವದಿಂದ ಕುಂದಿ ಹೋಗಿದ್ದ ಸನಾತನ ಧರ್ಮಾನುಷ್ಠಾನಗಳನ್ನು ಶಿಷ್ಯರುಗಳು ಕ್ರಮಗೊಳಿಸಿಕೊಂಡರು ಇದು ಅತಿಯುಶಯೋಕ್ತಿಯಲ್ಲ. ಎಲ್ಲಾ ಕಡೆಗಳಲ್ಲಿಯೂ ಬಡವ-ಹಣಗಾರ ಎಂಬ ವ್ಯತ್ಯಾಸವಿಲ್ಲದೆ ಶಿಷ್ಯರಿಗೆ ದರ್ಶನವನ್ನೂ ಉಪದೇಶವನ್ನೂ ನೀಡಿದರು. ತಮಿಳಿನಲ್ಲಿ ತಡೆಬಡೆಯಿಲ್ಲದೆ ಉಪದೇಶಗಳನ್ನು ಮಾಡಿ ಪಾಮರ ಜನಗಳ ಮನಸ್ಸಿನಲ್ಲಿ ಧರ್ಮತತ್ವಗಳು ಚೆನ್ನಾಗಿ ಬೇರೂರುವಂತೆ ಮಾಡಿದರು

ದಕ್ಷಿಣದೇಶದಲ್ಲಿ ವೇದಶಾಸ್ತ್ರಗಳನ್ನೋದಿದ ಎಲ್ಲಾ ವಿದ್ವಾಂಸರುಗಳನ್ನೂ ಆದರಿಸಿ, ವಿದ್ವತ್ಸದಸ್ಸುಗಳಲ್ಲಿ ತಾವು ಅಧ್ಯಕ್ಷತೆವಹಿಸಿ, ಅವರೊಡನೆ ಎಲ್ಲಾ ಶಾಸ್ತ್ರಗಳಲ್ಲಿಯೂ ಸಮಾಲೋಚನೆ ವಿಮರ್ಶೆಗಳನ್ನು ನಡಸಿದ್ದರಿಂದ ಪಂಡಿತರುಗಳಿಗೆ ವಿಶೇಷ ಉತ್ಸಾಹವುಂಟಾಯಿತು. ಶೃಂಗೇರೀ ಪೀಠಾಧಿಪತಿಗಳು ೩೫ ವರ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಂದ ಯಾತ್ರೆಯಲ್ಲಿ ಹೊರಬಾರದೆ ಇದ್ದದ್ದರಿಂದ ದೊಡ್ಡ ದೊಡ್ಡ ಶಾಸ್ತ್ರ ರಹಸ್ಯಗಳನ್ನು ಆಚಾರ್ಯರ ಉಪದೇಶದ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗ ಲಿಲ್ಲವಲ್ಲಾ ಎಂದು ವಿದ್ವಾಂಸರುಗಳು ಪಡುತ್ತಿದ್ದ ಮನಸ್ಸಂಕಟ ಪರಿಹಾರ ವಾಯಿತು.

ಶೃಂಗೇರೀ ಪೀಠಾಧಿಪತಿಗಳು ಸಾಧಾರಣವಾಗಿ ಶೃಂಗೇರಿಯಲ್ಲಿಯೇ ಇದ್ದುಕೊಂಡು ಶ್ರೀ ಶಾರದಾಂಬೆಯನ್ನು ಪ್ರತಿದಿನವೂ ಸಂದರ್ಶಿಸಿ ಪೂಜೆ ಮಾಡುವುದನ್ನೇ ಬಯಸುತ್ತಾರೆ. ನಮ್ಮ ಪರಮೇಷ್ಠಿಗುರು ಶ್ರೀಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಸ್ವಾಮಿಗಳು ರಚಿಸಿರುವ ಭಕ್ತಿಸುಧಾತರಂಗಿಣಿ ಯಲ್ಲಿರುವ ಹಲವು ಶ್ಲೋಕಗಳಿಂದ ಇದನ್ನು ನಾವು ತಿಳಿದುಕೊಳ್ಳಬಹುದು.

ತಿಷ್ಠಾಮ್ಯತ್ರೈವ ಮಾತಃ ತವ ಪದಯುಗಳಂ ವೀಕ್ಷಮಾಣಃ
ಪ್ರಮೋದಾತ್ ।
ನಾಹಂ ತ್ಯಕ್ತ್ವಾ ತವಾಂಘ್ರಿಂ ಸಕಲಸುಖಕರಂ ಕ್ವಾಪಿ ಗಚ್ಛಾಮಿ
ನೂನಮ್ ॥

[ಇಲ್ಲೇ ನಿಲ್ಲುವೆ ತಾಯೆ, ನಿನ್ನ ಪದಯುಗಳವನು
ನೋಡುತ್ತ ಸಂತೋಷದಿಂದ.
ಸಕಲ ಸುಖಗಳನೀವ ನಿನ್ನ ಪಾದವ ತೊರೆದು
ಹೋಗೆ ನಾನೆಲ್ಲಿಗೂ, ಎಂದೆಂದಿಗೂ.]

(—ಶಾರದಾ ಶತಶ್ಲೋಕೀಸ್ತವಃ–೨೬)

"ಅಮ್ಮಾ, ನಾನು ಇಲ್ಲಿಯೇ (ಶೃಂಗೇರಿಯಲ್ಲಿಯೇ) ಇದ್ದುಕೊಂಡು ಸಕಲ ಸುಖವನ್ನೂ ಕೊಡಬಲ್ಲ ನಿನ್ನ ಪಾದಾರವಿಂದಗಳನ್ನೇ ದರ್ಶನಮಾಡುತ್ತಾ ಇರುತ್ತೇನೆ. ಬೇರೆ ಎಲ್ಲಿಗೂ ಹೋಗುವುದಿಲ್ಲ."

ಔರಸತನಯಂ ಮಾಂ ತವ ಕಸ್ಮಾದ್ದೂರೀಕರೋಷಿ ವದ ವಾಣಿ ।

[ನಾ ನಿನ್ನ ಸ್ವಂತ ಮಗ ನನ್ನನೇತಕೆ ದೂರ
ಮಾಡುತಿಹೆ ಹೇಳು ವಾಣಿ]

(ಶ್ರೀ ವಾಣೀ ಪ್ರಶ್ನಮಾಲಾಸ್ತುತಿಃ–೨)

Sri Vidyabharathi Book Centre, Sringeri

CC-O. In Public Domain. Digitized by eGangotri

"ನಿನ್ನ ಮಗನಾದ ನನ್ನನ್ನು ಏಕೆ ದೂರ ಕಳಿಸಲು ಯೋಚಿಸುತ್ತೀಯ ?"

ನಮ್ಮ ಪರಮ ಗುರುಗಳಿಗೋ ಶೃಂಗೇರಿಯನ್ನು ಬಿಟ್ಟು ಹೊರಗೆ ಯಾತ್ರೆ ಮಾಡುವುದರಲ್ಲಿ ಸ್ವಲ್ಪವೂ ಮನಸ್ಸಿರಲಿಲ್ಲ. ಅದರಂತೆಯೇ ಈಗಿನ ನಮ್ಮ ಜಗದ್ಗುರುಗಳೂ ಶೃಂಗೇರಿಯಲ್ಲಿಯೇ ಇದ್ದುಕೊಂಡು ಶ್ರೀ ಶಾರದಾಂಬೆಯನ್ನು ದಿನದಿನವೂ ದರ್ಶನ ಮಾಡುತ್ತ ಇರುವುದರಲ್ಲಿ ತಮಗೆ ಇಷ್ಟ ಎಂದು ಅಡಿಗಡಿಗೆ ಹೇಳುತ್ತಿರುತ್ತಾರೆ. ಯಾತ್ರೆ ಮುಗಿದು ಶೃಂಗೇರಿಗೆ ಹಿಂದಿರುಗಿದೊಡನೆಯೇ ತಾಯಿಯನ್ನು ಕಾಣಲು ಮಗು ಓಡಿಹೋಗುವ ಹಾಗೆ ಅತ್ಯಂತ ಆಸೆಯಿಂದ ಶಾರದಾಂಬೆಯ ದೇವಾಲಯಕ್ಕೆ ಹೋಗಿಬಿಡುವರು. ಶಿಷ್ಯರೆಲ್ಲರೂ ತಮ್ಮ ಕ್ಷೇಮವನ್ನುದ್ದೇಶಿಸಿ ಶೃಂಗೇರಿಗೆ ಬಂದು ದೇವಿಯನ್ನು ಅವಶ್ಯವಾಗಿ ದರ್ಶನ ಮಾಡಬೇಕು — ಎನ್ನುವರು. ದರ್ಶನಕ್ಕಾಗಿ ಶೃಂಗೇರಿಗೆ ಬರುವ ಭಕ್ತರು ಹೆಚ್ಚು ಶ್ರಮವಿಲ್ಲದೆ ತಂಗಿರುವುದಕ್ಕಾಗಿಯೇ ಎಲ್ಲಾ ಸೌಕರ್ಯಗಳನ್ನೂ ಉಳ್ಳ ತಂಗು ಕಟ್ಟಡಗಳನ್ನು ಹೇರಳವಾಗಿ ಕಟ್ಟಿಸಿದ್ದಾರೆ. ಹೀಗಿರುವಲ್ಲಿ ಹಲವು ಕಾರಣಗಳಿಂದ ಶೃಂಗೇರಿಗೆ ಬರುವುದಕ್ಕೆ ಸಾಧ್ಯವಿಲ್ಲದಿರುವ ಶಿಷ್ಯರುಗಳನ್ನು ಅನುಗ್ರಹಿಸುವುದಕ್ಕಾಗಿ, ಶಿಷ್ಯಕೋಟಿಯ ಪ್ರಾರ್ಥನಾ ನಿರ್ಬಂಧಕ್ಕೊಳಪಟ್ಟು ಮತ್ತೆಯೂ ಯಾತ್ರೆಯನ್ನು ಕೈಕೊಳ್ಳಬೇಕಾಗಿ ಬಂತು.

ಎರಡನೆಯ ಯಾತ್ರೆ

೧೯೬೨ನೇ ವರ್ಷದ ಚಾತುರ್ಮಾಸ್ಯ, ಗಣಪತಿ ವಿದ್ವತ್ಸದಸ್ಸು, ನವರಾತ್ರಿ —ಈ ಉತ್ಸವಗಳು ಶೃಂಗೇರಿಯಲ್ಲಿ ನಡೆದವು. ಆ ಹಿಂದಿನ ಆರು ವರ್ಷಗಳೂ ದಕ್ಷಿಣದೇಶದಲ್ಲಿ ಯಾತ್ರೆಮಾಡಿ ಅಲ್ಲಲ್ಲೇ ವಿದ್ವತ್ಸದಸ್ಸುಗಳನ್ನು ನಡೆಸಿ, ಹಲವು ವಿದ್ವಾಂಸರುಗಳಿಗೆ ಉಪದೇಶಗಳನ್ನೂ ಸನ್ಮಾನಗಳನ್ನೂ ಕೊಡುತ್ತಿದ್ದುದರಿಂದ ಈ ಸಲ ಶೃಂಗೇರಿಯಲ್ಲಿ ನಡೆದ ಗಣಪತಿ ವಿದ್ವತ್ಸಭೆಗೆ ದಕ್ಷಿಣದೇಶದಿಂದ ಅನೇಕ ಮಂದಿ ವಿದ್ವಾಂಸು ಬಂದಿದ್ದರು.

೧೯೫೪ರಲ್ಲಿ ಸಮಾಧಿಸ್ಥರಾದ ತಮ್ಮ ಗುರುಗಳ ಅಧಿಷ್ಠಾನದಲ್ಲಿ, ಅವರ ಗುರುಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರ್ಮಿಸಿದ ಹಾಗೆಯೇ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಈಗಿನ ಜಗದ್ಗುರುಗಳು ತೀರ್ಮಾನಮಾಡಿದ್ದರಷ್ಟೆ. ಇವರು ತಮ್ಮ ಪ್ರಥಮ ಯಾತ್ರೆಯಲ್ಲಿ ಇದ್ದಾಗಲೇ ಈ ಕಟ್ಟಡದ ಕೆಲಸ ಅನುಸ್ಯೂತವಾಗಿ ನಡೆಯುತ್ತಲೇ ಇತ್ತು. ಆಗಿಂದಾಗ್ಗೆ ನಡೆಯುತ್ತಿದ್ದ ಕಟ್ಟಡದ ಕೆಲಸಗಳ ಬಗ್ಗೆ ವರದಿಗಳನ್ನು ಪ್ಲಾನುಗಳ ಸಹಾಯದಿಂದ ಶ್ರೀ ಸನ್ನಿಧಾನಕ್ಕೆ ಅವರಿದ್ದ ಮುಕ್ಕಾಮಿನಲ್ಲಿ ಶ್ರೀಮಠದ ನಿರ್ವಾಹಕರ್ತರುಗಳು ವಿಜ್ಞಾಪಿಸುತ್ತಾ, ಮುಂದಿನ ಕೆಲಸಗಳ ಬಗ್ಗೆ ಅವರ ಅಪ್ಪಣೆ ಪಡೆದು ಕೆಲಸವನ್ನು ಪೂರ್ತಿ ಮಾಡುತ್ತ ಬಂದರು.

ಶೃಂಗೇರಿಗೆ ದರ್ಶನಕ್ಕಾಗಿ ಬರುವ ಶಿಷ್ಯರುಗಳಿಗೆ ತಂಗುವುದಕ್ಕಾಗಿ ಒಳ್ಳೆಯ ಸೌಕರ್ಯಗಳಿಂದ ಕೂಡಿದ ಕಟ್ಟಡ ಅವಶ್ಯವೆಂಬುದನ್ನರಿತುಕೊಂಡು, 'ಶಂಕರ ಕೃಪಾ' ಎಂಬ ವಿಶಾಲವಾದ ಬಿಡದಿಯನ್ನು ಕಟ್ಟಿಸಿದರು. ಇದನ್ನು ೧೮-೧೦-೧೯೬೨ರಂದು ಮೈಸೂರು ಮಹಾರಾಜರವರು ಆರಂಭಗೊಳಿಸಿದರು. ಅದರ ಜೊತೆಯಲ್ಲಿ ಶಾರದಾಂಬೆಯ ದೇವಾಲಯದ ಮುಂಭಾಗದ ಗೋಪುರವನ್ನೂ, ಶ್ರೀ ಆದಿಶಂಕರರ ಆಲಯದ ಮೇಲಿನ ಗೋಪುರವನ್ನೂ ನವೀಕರಿಸಲು ಏರ್ಪಾಡು ಮಾಡಿದರು. ಶ್ರೀ ಶಾರದಾಂಬೆಯ ಸನ್ನಿಧಿಯ ಮುಂದಿನ ಗೋಪುರ ಕರಿಕಲ್ಲಿನಿಂದಲೇ ಪೂರ್ತಿಯಾಗಿ ಕಟ್ಟಲ್ಪಟ್ಟಿತು. ಆ ದೇವಾಲಯದ ಮೇಲ್ಛಾವಣಿ ಮಳೆಗಾಲದಲ್ಲಿ ಬಹಳವಾಗಿ ಸೋರತೊಡಗಿ ಶ್ರಮಕೊಡುತ್ತಿದ್ದದ್ದರಿಂದ ಅದರ ಮೇಲೆ ಒಂದು ಕಟ್ಟಡ ಕಟ್ಟಲಾಯಿತು. ಈ ರೀತಿಯ ಕಟ್ಟಡಕೈಂಕರ್ಯಗಳ ಮೇಲ್ವಿಚಾರಣೆಯನ್ನು ಇಂಜನಿಯರ್ ಪಿ. ಎಸ್. ಸುಬ್ರಹ್ಮಣ್ಯ ಆಯ್ಯರ್ ಅವರು ಬಹಳ ಶ್ರಮವಹಿಸಿ ಶ್ರದ್ಧಾಭಕ್ತಿಯಿಂದ ಶ್ರೀಮದಾಚಾರ್ಯರಿಂದ ಆಗಿಂದಾಗ್ಗೆ ಅಪ್ಪಣೆ ಪಡೆದುಕೊಂಡು ನಿರ್ವಹಿಸಿದರು.

೧೯೬೨ನೆಯ ಅಕ್ಟೋಬರ್ ತಿಂಗಳಿನಲ್ಲಿ ಶೃಂಗೇರಿಯಿಂದ ಹೊರಟು ಶಿವಮೊಗ್ಗ ಜಿಲ್ಲೆಯ ಕೆಲವು ಸ್ಥಳಗಳಿಗೆ ಯಾತ್ರೆ ಹೋಗಿ, ಮುಖ್ಯಸ್ಥಳವಾದ ಗೋಕರ್ಣ ಕ್ಷೇತ್ರಕ್ಕೆ ಬಿಜಯಮಾಡಿದರು. ಅಲ್ಲಿ ದೇವಾಲಯದಲ್ಲಿ ತಾವೇ ಪೂಜೆಮಾಡಿ ಶಿಷ್ಯರನ್ನು ಅನುಗ್ರಹಿಸಿ ೧೯೬೩ನೆ ಜನವರಿ ತಿಂಗಳಲ್ಲಿ ಶೃಂಗೇರಿಗೆ ಹಿಂದಿರುಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

೧೯೬೩ನೆಯ ಫೆಬ್ರುವರಿ ೨೮ರಲ್ಲಿ ಶೃಂಗೇರಿಯಲ್ಲಿ ಶ್ರೀ ಮಲಹಾನಿಕರೇಶ್ವರ ದೇವಸ್ಥಾನದ ಕುಂಭಾಭಿಷೇಕವೂ, ಮಾರ್ಚಿ ೩ರಂದು ಪರಮಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಅಧಿಷ್ಠಾನದ ಕುಂಭಾಭಿಷೇಕವೂ ಶ್ರೀ ಶಾರದಾಂಬಾದೇವಾಲಯದ ಮುಂಗೋಪುರದ ಕುಂಭಾಭಿಷೇಕವೂ ಶ್ರೀ ಶಂಕರಾಚಾರ್ಯ ದೇವಾಲಯದ ವಿಮಾನದ ಕುಂಭಾಭಿಷೇಕವೂ—ಇವೆಲ್ಲವೂ ಬಹು ವಿಜೃಂಭಣೆಯಿಂದ ನೆರವೇರಿದವು. ಇಂಡಿಯದ ಹಲವು ಭಾಗಗಳಿಂದ ಸುಮಾರು ೫೦,೦೦೦ಕ್ಕೂ ಮೇಲ್ಪಟ್ಟ ಜನ ಬಂದು ಸೇರಿದ್ದರು. ಗುಂಪುಗುಂಪಾಗಿ ಬಂದ ಅವರೆಲ್ಲರೂ ತಂಗುವುದಕ್ಕಾಗಿ ತುಂಗಾನದಿಯ ದಡದಲ್ಲಿ ಸುಮಾರು ೨೫೦ ಪ್ರತ್ಯೇಕ ತಡಕೆ ಮನೆಗಳನ್ನು ನಿರ್ಮಿಸಲಾಗಿತ್ತು. ಅದೇ ಸಮಯದಲ್ಲಿ ಲೋಕ ಕ್ಷೇಮಕ್ಕಾಗಿ ಒಂದು ಸಹಸ್ರ ಚಂಡೀಯಜ್ಞವನ್ನು ನಡಸಬೇಕೆಂದು ಏರ್ಪಾಡು ಮಾಡಿದರು. ಮೈಸೂರು ಮಹಾರಾಜರವರೂ ಶೃಂಗೇರಿಗೆ ಬಂದು ತಂಗಿದ್ದರು.

ಶ್ರೀ ಶಂಕರಸೇವಾಸಮಿತಿಯವರಿಂದ ಸಂಕಲ್ಪಿಸಲ್ಪಟ್ಟ **ಕುಂಭಾಭಿಷೇಕ ವಿಶೇಷ ಸ್ಮರಣ ಸಂಚಿಕೆಯನ್ನು** (ಶೃಂಗೇರೀ ಸೊವೆನೀರ್) ಶ್ರೀ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರು ಬಿಡುಗಡೆ ಮಾಡಿದರು. ಈ ವಿಶೇಷ ಸ್ಮರಣ ಸಂಚಿಕೆಯನ್ನು ಪ್ರಕಟಿಸುವುದಕ್ಕೆ ಮದರಾಸಿನ ಅನಂತರಾಮಕೃಷ್ಣಯ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಲಾಗಿತ್ತು. ಆ ಸಮಿತಿಯೇ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಕೈಂಕರ್ಯ ನಡಸಿತು. ಈ ಸಂಚಿಕೆಯಲ್ಲಿ ಅನೇಕ ಅಪೂರ್ವ ವಿಷಯಗಳು ಮುದ್ರಿಸಲ್ಪಟ್ಟಿವೆ. ಪ್ರಬಂಧಗಳನ್ನು ಪರಿಶೀಲನೆ ಮಾಡಿ ಅಚ್ಚುಕೂಟದೊಡನೆ ಸಂಬಂಧವಿಟ್ಟುಕೊಂಡು ಶ್ರಮಪಟ್ಟವರುಗಳಲ್ಲಿ ದಿವಂಗತ ಕೆ. ಆರ್. ವೆಂಕಟರಾಮ ಅಯ್ಯರ್, ಶ್ರೀ ಕೆ. ಆರ್. ಆರ್ ಶಾಸ್ತ್ರಿ (ಈಗ ಸಾಧು ರಾಮಾನಂದರು), ಶ್ರೀ ಆರ್. ಎ. ಚಟ್ಟನಾಥಯ್ಯರ್—ಇವರುಗಳನ್ನು ಸ್ಮರಿಸಬೇಕು. ಈ ಸಂಚಿಕೆಯನ್ನು ಮುದ್ರಿಸಿ ಪ್ರಕಟಿಸುವುದಕ್ಕೆ ಸಮಿತಿಯ ದ್ವಾರಾ ನಿಧಿಯನ್ನು ಶೇಖರಿಸಿ, ಮದರಾಸಿನಲ್ಲಿ ಅಚ್ಚುಮಾಡಿ ಕುಂಭಾಭಿಷೇಕಕ್ಕೆ ಮುಂಚೆ ಪ್ರತಿಗಳನ್ನು ತೆಗೆದುಕೊಂಡು ಬಂದು ಸೇರಿಸುವುದಕ್ಕೆ ಎಡೆಬಿಡದ ಪ್ರಯತ್ನದಿಂದ ಕೈಂಕರ್ಯಮಾಡಿದ ಶ್ರೀ ಪಿ. ಎಸ್. ಸುಬ್ರಹ್ಮಣ್ಯ ಅಯ್ಯರನ್ನು ಅಭಿನಂದಿಸಬೇಕು.

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಸಮಾಧಿಯ ನಿರ್ಮಾಣದಲ್ಲಿನ ಒಂದು ವಿಶೇಷವನ್ನು ಇಲ್ಲಿ ಎತ್ತಿ ಹೇಳಬೇಕು. ಹಿಂದೊಂದು ಸಮಯದಲ್ಲಿ ನಮ್ಮ ಪರಮಗುರುಗಳು ಗುಂಟೂರು ರಾಮರಾವ್ ಎಂಬ ಶಿಷ್ಯರೊಡನೆ (ಸೆಂಟ್ರಲ್ ಬ್ಯಾಂಕ್ ಇನ್‌ಸ್ಪೆಕ್ಟರು) ಸಂಭಾಷಣೆಮಾಡುತ್ತಿರುವಾಗ, "ಮಹಾತ್ಮರುಗಳ ಸಮಾಧಿಯಲ್ಲಿ ಕೆಂಪು ಬಣ್ಣದ ಬಾಣಲಿಂಗವನ್ನು ಪ್ರತಿಷ್ಠೆ ಮಾಡುವುದು ಶ್ಲಾಘ್ಯ" ಎಂದು ಹೇಳಿದರಂತೆ. ಪರಮಗುರುಗಳ ಸಮಾಧಿಗೆ ಅಂಥದೇ ಒಂದು ಬಾಣಲಿಂಗ ದೊರೆಯುತ್ತದೆಯೋ ಎಂದು ಶ್ರೀ ರಾಮರಾವ್ ಯೋಚಿಸಿಕೊಂಡರು. ಕೆಲವು ವರ್ಷ ಕಳೆಯಿತು. ೧೯೬೨ನೆಯ ವರ್ಷದಲ್ಲಿ ಶ್ರೀ ರಾಮರಾವ್ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಈ ರೀತಿಯ ಬಾಣಲಿಂಗ ಒಂದೆಡೆಯಲ್ಲಿರುವುದಾಗಿ ಯಾರೋ ಮಾತಾಡುತ್ತಿರಲಾಗಿ, ಅದು ಆಕಸ್ಮಾತ್ತಾಗಿ ಅವರ ಕಿವಿಗೆ ಬಿತ್ತು. ಅದನ್ನು ಹುಡುಕಿಕೊಂಡು ಹೋಗಿ, ನೋಡಿ, ತೆಗೆದುಕೊಂಡುಬಂದು, ಅವರು ಶೃಂಗೇರಿಗೆ ತಲುಪಿಸಿದರು. ೧೯೬೩ರ ಮಾರ್ಚಿ ತಿಂಗಳಲ್ಲಿ ಸಮಾಧಿಯಲ್ಲಿ ಸ್ಥಾಪಿತವಾಗಿರುವುದು ಅದೇ ಬಾಣಲಿಂಗ. ಈ ಕುಂಭಾಭಿಷೇಕ ವೈಭವದ ಸಮಯಲ್ಲಿ ಶ್ರೀ ರಾಮರಾವ್ ಅವರೇ ಮೇಲಿಕಂಡ ವಿವರಗಳನ್ನು ತಿಳಿಯಪಡಿಸಿದರು. ಅಂದು ಮೊದಲು ಆ ಲಿಂಗಕ್ಕೆ ದಿನದಿನವೂ ಕ್ರಮವಾಗಿ ಪೂಜೆಯಾಗುತ್ತಿದೆ.

೧೯೯೩ನೆಯ ಜೂನ್ ತಿಂಗಳಲ್ಲಿ ಶ್ರೀ ಜಗದ್ಗುರುಗಳವರು ಬೆಂಗಳೂರಿಗೆ ಬಂದು ಅಲ್ಲಿನ ಶ್ರೀಮಠದ ಹಿಂಭಾಗದಲ್ಲಿ ಕಟ್ಟಿರುವ ಶ್ರೀ ಚಂದ್ರಶೇಖರ ಭಾರತೀ ಕಲ್ಯಾಣಮಂಟಪವನ್ನು ತೆರೆದು, ಬೆಂಗಳೂರು ಪ್ರೌಢವಿದ್ಯಾಶಾಲೆಯ ಸ್ವರ್ಣ ಮಹೋತ್ಸವದಲ್ಲಿ ಅಧ್ಯಕ್ಷತೆವಹಿಸಿದರು. ೧೯೬೩ನೆಯ ವರ್ಷದ ಚಾತುರ್ಮಾಸ್ಯ, ಗಣಪತಿ ಸದಸ್ಸು ನವರಾತ್ರಿ ಉತ್ಸವ—ಈ ವಿಶೇಷಗಳು ಶೃಂಗೇರಿಯಲ್ಲಿ ನಡೆದವು. ಶೃಂಗೇರಿಯಲ್ಲಿ ೧೯೬೩ರಲ್ಲಿ ನಡೆದ ಕುಂಭಾಭಿಷೇಕದ ವಾರ್ಷಿಕೋತ್ಸವವಾಗಿ ೧೯೬೪ನೆಯ ವರ್ಷದಲ್ಲಿ ಶೃಂಗೇರಿಯಲ್ಲಿ ಶ್ರೀ ಶಾರದಾಂಬೆಗೆ ಕೋಟಿ ನಾಮಾರ್ಚನೆಯನ್ನೂ ನಡಸಿದರು. ಅದರ ಪರಿಸಮಾಪ್ತಿಯಲ್ಲಿ ಒಂದು ವಿದ್ವತ್ಸದಸ್ಸೂ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

೧-೬೪ರ ಏಪ್ರಿಲ್ ತಿಂಗಳು ಜಗದ್ಗುರುಗಳು ಮತ್ತೆ ಯಾತ್ರೆಯನ್ನು ಕೈಕೊಂಡು ಶಿವಮೊಗ್ಗಕ್ಕೆ ಬಂದು ಅಲ್ಲಿ ಒಂದು ಶಂಕರಮಠ ಕಟ್ಟುವುದಕ್ಕೆ ಏರ್ಪಾಡು ಮಾಡಿ, ಬೆಂಗಳೂರಿಗೆ ಬಂದರು.

ಶ್ರೀ ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ನಾಲ್ಕು ಆಮ್ನಾಯ ಪೀಠಗಳಲ್ಲಿ ದ್ವಾರಕಾ ಪೀಠವು ಪಶ್ಚಿಮಾಮ್ನಾಯ ಪೀಠ ಎನ್ನಿಸಿಕೊಂಡಿದೆ. ಈ ಪೀಠದ ಅಧಿಪತಿಗಳಾದ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳು ಆ ಸಮಯದಲ್ಲಿ ಬೆಂಗಳೂರಿಗೆ ಬಿಜಯಮಾಡಿದರು. ೩-೫-೧೯೬೪ರಂದು ಶೃಂಗೇರೀ ಶಂಕರಮಠದಲ್ಲಿ ಶೃಂಗೇರೀ ಮತ್ತು ದ್ವಾರಕಾ ಪೀಠಾಧಿಪತಿಗಳಿಬ್ಬರೂ ಸಂಧಿಸಿದ್ದರು. ಇಬ್ಬರಿಂದಲೂ ಉಪನ್ಯಾಸಗಳು ನಡೆದವು. ಇದು ಮರೆಯಲಾಗದ ಸಂಗತಿ.

ಜಗದ್ಗುರುಗಳು ಬೆಂಗಳೂರಿನಿಂದ ಸೇಲಮಿಗೆ ಬಿಜಯಮಾಡಿ, ಪಾಲಕ್ಕಾಡು ಮಾರ್ಗವಾಗಿ ಕಾಲಟಿಗೆ ಬಂದು ಸೇರಿದರು. ೧೬-೫-೧೯೬೪ರಂದು ಕಾಲಟಿಯಲ್ಲಿ "ಶ್ರೀ ಶಂಕರ ಎಜ್ಯುಕೇಷನಲ್ ಟ್ರಸ್ಟ್" ಎಂಬ ಕಟ್ಟಡಕ್ಕೆ ಅಸ್ತಿಭಾರ ಶಿಲೆ ಸ್ಥಾಪಿಸಿದರು. ಅಲ್ಲಿಂದ ಕೊಯಮುತ್ತೂರು, ಮಧುರೆ, ತಿರುನೆಲ್ವೇಲಿ—ಈ ಜಿಲ್ಲೆಗಳಲ್ಲಿ ಯಾತ್ರೆ ಮಾಡಿ ೨೪-೭-೧೯೬೪ರಂದು ಕುತ್ತಾಲಕ್ಕೆ ಬಂದು, ಅಲ್ಲಿ ಚಾತುರ್ಮಾಸ್ಯ, ಗಣಪತಿ ವಿದ್ವತ್ಸದಸ್ಸು, ಇವುಗಳನ್ನು ನಡಸಿದರು. ಕಲ್ಲಿಡೈಕ್ಕುರಿಚ್ಚಿಯಲ್ಲಿ ನವರಾತ್ರಿ ಉತ್ಸವವನ್ನು ನಡಸಿ, ತಿರುನೆಲ್ವೇಲಿ, ಕನ್ಯಾಕುಮಾರಿ ಮೊದಲಾದ ಸ್ಥಳಗಳಿಗೆ ಹೋಗಿ, ನವಂಬರ್ ಕಡೆಯ ವಾರದಲ್ಲಿ ತಿರುವನಂತಪುರಕ್ಕೆ ಬಂದರು. ಕುತ್ತಾಲದಲ್ಲಿಯೇ ಸನ್ನಿಧಾನವನ್ನು ದರ್ಶಿಸಿದ ತಿರುವನಂತಪುರದ ಮಹಾರಾಜರು ಶ್ರೀ ಜಗದ್ಗುರುಗಳನ್ನು ಸ್ವಾಗತಿಸಿ ಅಲ್ಲಿ ಅವರ ಸನ್ನಿಧಿಯಲ್ಲಿ ಚಂಡೀ ಹೋಮ ನೆರವೇರಿಸಿದರು. ಅಲ್ಲಿಂದ ಶ್ರೀ ಜಗದ್ಗುರುಗಳು ರಾಮೇಶ್ವರಕ್ಕೆ ಬಿಜಯಮಾಡಿದರು. ಅಲ್ಲಿ ಶೃಂಗೇರಿಗೆ ಪುರಾತನಕಾಲದಿಂದಲೂ ಬಾಧ್ಯಪಟ್ಟಿರುವ ಮಠದಲ್ಲಿ ತಂಗಿ, ಶ್ರೀ ರಾಮನಾಥ ಸ್ವಾಮಿ ಆಲಯದಲ್ಲಿ ತಾವೇ ಪೂಜೆ ಮಾಡಿದರು. ಬಳಿಕ ಸಮುದ್ರಸ್ನಾನಗಳನ್ನು ಆಚರಿಸಿ ಪಳನಿಗೆ ಬಿಜಯಮಾಡಿದರು. ಅಲ್ಲಿ ಬೆಟ್ಟದ ಮೇಲೆ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ತಾವೇ ಅಭಿಷೇಕ, ಪೂಜೆ ಮೊದಲಾದುವನ್ನು ಮಾಡಿ ಮಧುರೆಗೆ ದಯಮಾಡಿದರು.

Sri Vidyabharathi Book Centre, Sringeri

Om Public Domain. Digitized by eGangotri

ಈ ವಿಜಯ ಯಾತ್ರಾ ಕಾಲದಲ್ಲಿ ನಾಲ್ಕು ಆಮ್ನಾಯ ಪೀಠಗಳಲ್ಲಿ ಒಂದಾದ ಮತ್ತು ಪುರಿ–ಜಗನ್ನಾಥದಲ್ಲಿ ಸ್ಥಾಪಿತವಾದ ಪುರಿಯಲ್ಲಿ ಪೂರ್ವಾಮ್ನಾಯ ಶ್ರೀ ಗೋವರ್ಧನ ಪೀಠದ ಅಧಿಪತಿಗಳಾದ ಶ್ರೀ (೧೦೮) ನಿರಂಜನದೇವ ತೀರ್ಥಸ್ವಾಮಿಗಳು ಆಹ್ವಾನಿತರಾಗಿ ಮಧುರೆಗೆ ಬಂದು ಸೇರಿದರು. ಶೃಂಗೇರಿ, ಪುರಿ – ಈ ಎರಡು ಪೀಠಾಧಿಪತಿಗಳನ್ನೂ ಒಂದೇ ವೇದಿಕೆಯಮೇಲೆ ಅಕ್ಕಪಕ್ಕದಲ್ಲಿ ಬಿಜಮಾಡಿಸಿ, ಅವರುಗಳ ಉಪದೇಶಭಾಗ್ಯವನ್ನು ಪಡೆಯುವ ಅವಕಾಶ ಇಲ್ಲಿ ಸೇರಿದ್ದವರಿಗೆ ದೊರೆಯಿತು. ಮಧುರೆಯಲ್ಲಿ ಆಗ ನಡೆದ ಚಂಡೀಯಾಗದಲ್ಲಿಯೂ ಈ ಇಬ್ಬರು ಜಗದ್ಗುರುಗಳೂ ಉಪಸ್ಥಿತರಾಗಿದ್ದರು.

ಶೃಂಗೇರೀ ಜಗದ್ಗುರುಗಳು ೧೯೬೫ನೆಯ ಮಾರ್ಚಿ ತಿಂಗಳಲ್ಲಿ ಮಧುರೆಯಿಂದ ಹೊರಟು ಶ್ರೀ ಶಂಕರಜಯಂತೀ ಉತ್ಸವ ವೇಳೆಗೆ ಕಾಲಟಿಗೆ ಬಂದು ಸೇರಿದರು. ೧೯೬೫ನೆಯ ವರ್ಷ ಕಾಲಟಿಯಲ್ಲಿ ನಡೆದ ಶಂಕರಜಯಂತೀ ಉತ್ಸವ ವಿಶೇಷ ವೈಭವದಿಂದ ಕೂಡಿತ್ತು. ಅಖಿಲ ಭಾರತ ಶಂಕರ ಸೇವಾ ಸಮಿತಿ ಈ ಸಮಯದಲ್ಲಿ, ಶೃಂಗೇರಿ, ಪುರಿ, ದ್ವಾರಕಾ—ಈ ಮೂರೂ ಪೀಠಾಧಿಪತಿಗಳ ಅಧ್ಯಕ್ಷತೆಯಲ್ಲಿ ವಿದ್ವತ್ಸದಸ್ಸನ್ನು ಏರ್ಪಡಿಸಿತ್ತು. ಮೂವರು ಆಮ್ನಾಯ ಪೀಠಾಧಿಪತಿಗಳನ್ನೂ ಜತೆಯಾಗಿ ಸಂದರ್ಶಿಸುವುದಕ್ಕಾಗಿ ದೇಶದ ಹಲವು ಮೂಲೆಗಳಿಂದ ಬಂದು ಸೇರಿದ್ದ ಆಸ್ತಿಕರುಗಳ ಗುಂಪು ಬಹು ದೊಡ್ಡದಾಯಿತು. ಚಂಡೀಹೋಮವೂ ಇಲ್ಲಿ ನೆರವೇರಿತು. ಆದಿ ಶಂಕರರ ಜನ್ಮಭೂಮಿಯೂ ಆಚಾರ್ಯರ ತಾಯಿಯವರ ಸಮಾಧಿ ಸ್ಥಾನವೂ ಆದ ಈ ಕ್ಷೇತ್ರವನ್ನು ಕಂಡುಹಿಡಿದು, ಇಲ್ಲಿ ಆಚಾರ್ಯರ ಮೂರ್ತಿಯನ್ನು ಪ್ರತಿಷ್ಠೆ ಮಾಡಿದ ಹಿರಿಮೆ ಶೃಂಗೇರಿಯ ೩೩ನೆಯ ಪೀಠಾಧಿಪತಿಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಗಳಿಗೇ ಸೇರಿದ್ದು. ಆ ರೀತಿಯ ಮಹಿಮೆ ಹೊಂದಿದ ಸ್ಥಳದಲ್ಲಿಯೇ ಮೂವರು ಆಮ್ನಾಯ ಪೀಠಾಧಿಪತಿಗಳೂ ಸೇರಿ, ಎಲ್ಲರಿಗೂ ದರ್ಶನ ನೀಡಿದರು. ಇದಕ್ಕಾಗಿಯೇ ಅಪಾರವಾಗಿ ಭಕ್ತರುಗಳು ಇಲ್ಲಿ ಬಂದು ಸೇರಿದರು. ಮೂವರು ಪೀಠಾಧಿಪತಿಗಳು ಒಂದೇ ಕಡೆ ಅನುಗ್ರಹಿಸಿದ ಭಾಷಣಗಳು ಲೋಕಕ್ಕೆ ಅನನ್ಯ ಸದೃಶ ಉಪದೇಶಗಳಾದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಮೇಲೆ ಜಗದ್ಗುರುಗಳು ಕಾಲಟಿಯಿಂದ ಕೊಯಮುತ್ತೂರು, ಸತ್ಯಮಂಗಲಮ್, ಗೋಪಿ, ಈರೋಡು ಮಾರ್ಗವಾಗಿ ತಿರುಚ್ಚಿ ಜಿಲ್ಲೆಯಲ್ಲೂ ಮಧುರೆ ಜಿಲ್ಲೆಯಲ್ಲೂ ಯಾತ್ರೆಗಳನ್ನು ಮಾಡಿ ೧೯೬೪ನೆಯ ಜುಲೈ ೧ನೆಯ ತಾರೀಖು ಕರೂರಿನ ಬಳಿ ಇರುವ ಸೇರೂರಿನಲ್ಲಿ ಶ್ರೀ ಸದಾಶಿವ ಬ್ರಹ್ಮೇಂದ್ರರ ಸಮಾಧಿಯ ಪಕ್ಕದ ಈಶ್ವರ ದೇವಾಲಯದಲ್ಲಿ ಕುಂಭಾಭಿಷೇಕವನ್ನು ನೆರವೇರಿಸಿದರು. ಇಲ್ಲಿಂದ ಸೇಲಮಿಗೆ ಪಾದಬೆಳೆಯಿಸಿ ೧೯೬೪ನೆಯ ವರ್ಷದ ಚಾತುರ್ಮಾಸ್ಯವನ್ನು ಅಲ್ಲಿನ ಶೃಂಗೇರೀ ಮಠದಲ್ಲಿ ನೆರವೇರಿಸಿದರು. ಅಲ್ಲಿ ತಂಗಿದ್ದ ಎರಡು ತಿಂಗಳ ಕಾಲದಲ್ಲಿ ಪ್ರಧಾನ ನ್ಯಾಯಾಧಿಪತಿ ಶ್ರೀ ಚಂದ್ರಾರೆಡ್ಡಿ, ಮೈಸೂರು ಮುಖ್ಯ ಮಂತ್ರಿ ಶ್ರೀ ಜತ್ತಿ, ಮತ್ತೂ ಇತರ ಹಲವರು ಪ್ರಮುಖರು ಬಂದು ಸನ್ನಿಧಾನವನ್ನು ದರ್ಶಿಸಿದನು.

ಮದರಾಸಿನಿಂದ ಮುಖ್ಯ ಶಿಷ್ಯರುಗಳು ಸೇಲಮಿಗೆ ಬಂದು ಮದರಾಸಿಗೆ ಬಿಜಯಮಾಡಬೇಕೆಂದು ಶ್ರೀ ಸ್ವಾಮಿಗಳನ್ನು ಪ್ರಾರ್ಥಿಸಿಕೊಂಡದ್ದರಿಂದ ೧೯೬೪ನೆಯ ಸೆಪ್ಟೆಂಬರ್ ತಿಂಗಳಿನಲ್ಲಿ ಮದರಾಸಿಗೆ ಬಿಜಯ ಮಾಡಿದರು. ಆ ವರ್ಷದ ನವರಾತ್ರಿ ಉತ್ಸವ ಮದರಾಸಿನ ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರ ಸ್ವಂತಗೃಹ 'ನವಸುಜಾ'ದಲ್ಲಿ ನಡೆಯಿತು. ಅಲ್ಲಿ ಶ್ರೀ ಸನ್ನಿಧಾನದ ಅನುಗ್ರಹದಿಂದ ಸಹಸ್ರಚಂಡೀ ಹೋಮವೂ, ಅತಿರುದ್ರವೂ ನಡೆದವು. ನರಕಚತುರ್ದಶೀ ಜಗದ್ಗುರುಗಳ ವರ್ಧಂತಿಯ ದಿನ. ಸನ್ನಿಧಾನದ ೪೮ನೆಯ ಜನ್ಮದಿನೋತ್ಸವ ವೈಭವದಿಂದ ಆಗ ಮದರಾಸು ಗವರ್ನರಾಗಿದ್ದ ಮೈಸೂರು ಮಹಾರಾಜರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜಾ ಅಣ್ಣಾ ಮಲೈ ನಗರದಲ್ಲಿ ಶೃಂಗೇರೀ ಜಗದ್ಗುರು ಪ್ರವಚನ ಮಂದಿರದ ಅಡಿಗಲ್ಲನ್ನು ಶ್ರೀ ಜಗದ್ಗುರುಗಳೇ ಸ್ಥಾಪಿಸಿದರು. ಈ ಪ್ರವಚನ ಮಂದಿರವನ್ನು ಪರಿಪಾಲನ ಮಾಡುವುದಕ್ಕೆ '**ಶೃಂಗೇರೀ ಜಗದ್ಗುರು ಸನಾತನ ಧರ್ಮ ವಿದ್ಯಾ ಸಮಿತಿ**' ನಿರೂಪಿತವಾಯಿತು. ಅನತಿಕಾಲದಲ್ಲೇ ಸುಂದರವಾದ ಮಂಟಪ. ಶಾರದಾ-ವಿಘ್ನೇಶ್ವರ-ಆದಿಶಂಕರರ ದೇವಾಲಯಗಳು, ಅರ್ಚಕರಿಗೆ ಬಿಡದಿಗಳು—ಇವುಗಳೂ ನಿರ್ಮಾಣವಾದವು. ಇದಕ್ಕೆ ಆವಶ್ಯಕವಾದ ನೆಲವನ್ನಷ್ಟೂ ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರು ಉಚಿತವಾಗಿಯೇ ಸಮರ್ಪಿಸಿದರು. ಈ ಬೀದಿಗೆ 'ಶೃಂಗೇರೀ ಮಠದ ಬೀದಿ' ಎಂದೇ ನಗರಸಭೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರಿಟ್ಟಿದೆ. ಮದರಾಸಿನಲ್ಲಿ ಹಲವು ಕುಂಭಾಭಿಷೇಕಗಳನ್ನು ತಾವೇ ನಡಸಿದರು. ಮುಖ್ಯವಾಗಿ ಮಾಂಬಲಮ್ ಶಿವ-ವಿಷ್ಣು ಆಲಯದಲ್ಲಿ ಶ್ರೀ ನಟರಾಜ ಪ್ರತಿಷ್ಠಾ ಕುಂಭಾಭಿಷೇಕವೂ, ಅಡ್ಯೈಯಾರು ಶ್ರೀ ಅನಂತಪದ್ಮನಾಭಸ್ವಾಮಿ ಪ್ರತಿಷ್ಠಾ ಕುಂಭಾಭಿಷೇಕವೂ ಎತ್ತಿ ಹೇಳತಕ್ಕವಾಗಿವೆ.

೧೯೬೫ನೆಯ ಡಿಸೆಂಬರಿನಲ್ಲಿ ಜಗದ್ಗುರುಗಳು ಮದರಾಸಿನಿಂದ ಕಾಂಚೀ ಪುರಕ್ಕೆ ಹೊರಟರು. ಅಲ್ಲಿಂದ ಅರಕೋಣಂ, ಪುಷ್ಪಗಿರಿ, ಕಡಪ್ಪೈ, ಅಹೋ ಬಿಲಮ್, ನಂದ್ಯಾಲ, ಮಹಾನಂದಿ, ಕರ್ನೂಲು, ಆದವಾನಿ ಮಾರ್ಗವಾಗಿ ಪ್ರಯಾಣ ಮಾಡಿ ಡಿಸೆಂಬರ್ ಕಡೆಯಲ್ಲಿ ಹೈದರಾಬಾದಿಗೆ ಬಂದು ಸೇರಿದರು. ಇಲ್ಲಿ ಆಂಧ್ರದ ಗವರ್ನರು ಶ್ರೀ ಪಟ್ಟಮ್ ಥಾನುಪಿಳ್ಳೆ ಸದ್ಗುರುವನ್ನು ದರ್ಶಿಸಿದರು. ಗುರುಗಳು ಹೈದರಾಬಾದಿನಿಂದ ಶ್ರೀಶೈಲಕ್ಕೆ ಪ್ರಯಾಣಮಾಡಿದರು. ಅಲ್ಲಿ ಶ್ರೀ ಕೃಷ್ಣ ದೇವಾಲಯ ಗೋಪುರ ಕುಂಭಾಭಿಷೇಕ, ಶೃಂಗೇರೀ ಮಠಕ್ಕೆ ಅಸ್ತಿಭಾರ ಶಿಲೆ ಸ್ಥಾಪನೆ ಮೊದಲಾದುವನ್ನು ನಡಯಿಸಿ, ೧೯೬೬ನೆಯ ಫೆಬ್ರುವರಿ ಯಿಂದ ಏಪ್ರಿಲ್‌ವರೆಗೆ ಆಂಧ್ರ ಪ್ರಾಂತ್ಯದ ಹಲವು ಸ್ಥಳಗಳಿಗೆ ಹೋಗಿ ೧೯೬೬ ನೆಯ ಮೇ ತಿಂಗಳಲ್ಲಿ ಹೈದರಾಬಾದಿಗೆ ಹಿಂತಿರುಗಿದರು. ಅಲ್ಲಿಂದ ನಾಗಪುರಿ, ತಪಸೀನದಿಯ ಉತ್ಪತ್ತಿಸ್ಥಾನವಾದ ಪಾಂಡೂರ್ಣಾ ಮೊದಲಾದ ಸ್ಥಳಗಳ ಮಾರ್ಗವಾಗಿ ಭೂಪಾಲ್ ನಗರಕ್ಕೆ ಬಂದರು. ಅಲ್ಲಿ ಪುರಪ್ರಮುಖರೆಲ್ಲರೂ ಸ್ವಾಗತಿಸಿ ಯಥಾವಿಧಿ ಪಾದಪೂಜೆ ನಡಸಿದರು. ಅಲ್ಲಿನವರ ಸತ್ಕಾರಗಳನ್ನು ಸ್ವೀಕರಿಸಿ, ಉಜ್ಜಯಿನಿಗೆ ಬಂದು ಅಲ್ಲಿ ಗ್ವಾಲಿಯರ್ ಮಹಾರಾಣಿಯ ಬಂಗಲೆ ಯಲ್ಲಿ ತಂಗಿ ೧೯೬೬ನೆಯ ವರ್ಷದ ಚಾತುರ್ಮಾಸ್ಯ, ಗಣಪತಿ ಸದಸ್ಸುಗಳನ್ನು ಅಲ್ಲಿಯೇ ನಡಸಿದರು. ಗ್ವಾಲಿಯರ್ ಮಹಾರಾಣಿಯೂ, ಮಹಾರಾಜರೂ ಹಲವು ಸಲ ಬಂದು ಸದ್ಗುರುವನ್ನು ದರ್ಶಿಸಿದರು. ಆಮೇಲೆ, ಗ್ವಾಲಿಯರ್ ಮಹಾರಾಜರ ಆಹ್ವಾನಕ್ಕೆ ಸಮ್ಮತಿಸಿ ಆ ವರ್ಷದ ನವರಾತ್ರಿ ಉತ್ಸವವನ್ನು ಗ್ವಾಲಿಯರಿನಲ್ಲಿ ನಡಸಿದರು. ದೇವತಾರಾಧನೆಗಳೆಲ್ಲ ರಾಜಮಾತೆಯವರ ವೆಚ್ಚದಲ್ಲಿ ಅತ್ಯಂತ ವೈಭವದಿಂದ ನಡೆದವು.

ಗ್ವಾಲಿಯರ್‌ನಿಂದ ಆಗ್ರಾ, ಭರತಪುರ, ಮಥುರಾ (ಬೃಂದಾವನ) ಮಾರ್ಗವಾಗಿ ಗುರುಗಳು ದಿಲ್ಲಿಗೆ ಬಂದರು. ದಿಲ್ಲಿಯಲ್ಲಿ ಒಂದೊಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಊರಿನಲ್ಲೂ ತಂಗಿ ಅಲ್ಲೆಲ್ಲಾ ಸಾವಿರಾರು ಸಂಖ್ಯೆಯಲ್ಲಿ ಬಂದು ಸೇರಿದ ಜನ ಸಮೂಹಗಳಿಗೆ ಉಪನ್ಯಾಸಗಳ ಮೂಲಕ ಸನಾತನ ಧರ್ಮತತ್ತ್ವಗಳನ್ನು ಉಪದೇಶಮಾಡಿದರು. ಈ ಯಾತ್ರೆಯಲ್ಲಿ ಸನ್ನಿಧಾನವು ಹಿಂದಿಯಲ್ಲಿಯೇ ಉಪನ್ಯಾಸಗಳನ್ನು ಮಾಡಿ, ಬಂದವರೊಡನೆ ಸುಲಭವಾದ ಹಿಂದಿಯಲ್ಲಿಯೇ ಸಂಭಾಷಣೆ ನಡಸಿದುದನ್ನು ಕಂಡ ಉತ್ತರದೇಶದವರೆಲ್ಲರೂ ಆಶ್ಚರ್ಯ ಹೊಂದಿದರು. ಈ ಕಾರಣದಿಂದ ಎಲ್ಲೆಡೆಗಳಲ್ಲೂ ಸನ್ನಿಧಾನದ ಉಪದೇಶಗಳನ್ನು ಕೇಳುವುದಕ್ಕಾಗಿ ಗಂಡಸರೂ, ಹೆಂಗಸರೂ ಹೆಚ್ಚುಹೆಚ್ಚಾಗಿ ಬರುತ್ತಿದ್ದರು. ತಮ್ಮೊಡನೆ ವಿಶೇಷ ಸಂದರ್ಶನಕ್ಕಾಗಿ ಬಂದ ಪಂಜಾಬಿ ಜನಗಳಿಗೆ, "ನಿಮ್ಮ ತಾಯ್ನುಡಿಯಲ್ಲೇ ನೀವು ಮಾತಾಡಿ. ನಾನು ತಿಳಿದುಕೊಂಡು ಹಿಂದಿಯಲ್ಲಿ ನಿಮಗೆ ಉತ್ತರ ಹೇಳುತ್ತೇನೆ" ಎನ್ನುತ್ತಿದ್ದರು. ಸಂಭಾಷಣೆಗಳು ಆ ರೀತಿಯೇ ನಡೆದವು. ಹಲವು ಭಾಷೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಶಕ್ತಿ ೩೨ನೆಯ ಪೀಠಾಧಿಪತಿಗಳಲ್ಲಿದ್ದಂತೆಯೇ ಈಗಿನ ಮಹಾಸನ್ನಿಧಾನಕ್ಕೂ ಇದೆ. ಇದರಿಂದ ಗುರುವಿಗೂ, ಶಿಷ್ಯರುಗಳಿಗೂ ಬಳಕೆ ಅಧಿಕವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೮

ದಿಳ್ಳಿ ವಿಜಯ

೧೯೬೬ನೆಯ ನವಂಬರ್ ಆರನೆಯ ತಾರೀಖು ಜಗದ್ಗುರುಗಳು ಭಾರತದ ಮುಖ್ಯ ಪಟ್ಟಣವಾದ ದಿಳ್ಳಿ ಮಹಾನಗರಕ್ಕೆ ಬಿಜಯಮಾಡಿದರು. ಉತ್ತರ ಪ್ರದೇಶದ ಗವರ್ನರ್ ಶ್ರೀಮಾನ್ ಝಾ ಮೊದಲಾದವರು ಹಲವು ಭಾಷೆಗಳಲ್ಲಿ ಸ್ವಾಗತಪತ್ರಗಳನ್ನು ಓದಿ ಬರಮಾಡಿಕೊಂಡ ದೃಶ್ಯ ಸ್ಮರಣೀಯವಾಗಿದೆ. ಇಂಡಿಯದ ಮುಖ್ಯ ಪಟ್ಟಣಕ್ಕೆ ಶೃಂಗೇರೀ ಜಗದ್ಗುರು ಮೊಟ್ಟಮೊದಲ ಸಲ ಬಿಜಯಮಾಡುತ್ತಿದ್ದರಾದ್ದರಿಂದ ದಿಳ್ಳಿಯಲ್ಲಿ ತಂಗಿದ್ದ ಕಾಲವೆಲ್ಲಾ ಗುಂಪು ಗುಂಪಾಗಿ ಜನಗಳು ದರ್ಶನಕ್ಕೆ ಬರುತ್ತಲೇ ಇದ್ದರು. ಆ ಪಟ್ಟಣದಲ್ಲಿ ರಾಜಕೀಯ ವ್ಯವಹಾರಗಳು ಹಲವಾರು ನಡೆಯುತ್ತಿದ್ದವಾದರೂ ಅವುಗಳಲ್ಲಿ ಸನ್ನಿಧಾನಕ್ಕೆ ಯಾವ ವಿಧವಾದ ಆಸಕ್ತಿಯೂ ಇರಲಿಲ್ಲ. ಭಾರತದ ರಾಷ್ಟ್ರಪತಿ ಡಾ॥ ಎಸ್. ರಾಧಾಕೃಷ್ಣನ್, ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ, ಮತ್ತುಳಿದ ಮಂತ್ರಿಗಳು - ಎಲ್ಲರೂ ಹಲವು ಸಲ ಬಂದು ಸದ್ಗುರುವನ್ನು ದರ್ಶಿಸಿ ಅನುಗ್ರಹ ಪಡೆದರು. ಶ್ರೀ ಸನ್ನಿಧಾನದ ೫೦ನೆಯ ಜನ್ಮದಿನದ ವರ್ಧಂತಿ ವೈಭವ ವಿಜೃಂಭಣೆಯಿಂದ ದಿಳ್ಳಿಯಲ್ಲಿ ನಡೆಯಿತು. ಆ ಸಂಬಂಧದಲ್ಲಿ ಮಹಾರುದ್ರವು ಮೂರು ದಿನಗಳ ವರೆಗೆ ನಡೆಯಿತು. ಹೊರದೇಶದಿಂದ ಬಂದ ಹಲವರು ಪ್ರಮುಖರುಗಳು ಮಹಾಸನ್ನಿಧಾನವನ್ನು ದರ್ಶಿಸಿ ಉಪದೇಶವಾಕ್ಯಗಳನ್ನು ಕೇಳಿದರು. ಅಂತಹವರಲ್ಲಿ ಗ್ರೀಸ್ ದೇಶದ ರಾಣಿಯೂ ಒಬ್ಬರು. ಇವರು ಹಲವು ಸಲ ದರ್ಶನ ಮಾಡಿ ಹಲವು ಆಧ್ಯಾತ್ಮಿಕ ಸಂದೇಹಗಳನ್ನೂ ಪರಿಹಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿಕೊಂಡರು. ಅಮೇರಿಕದಿಂದ ಬಂದಿದ್ದ ಯಾತ್ರಿಕರು ಮಹಾಸನ್ನಿಧಾನವನ್ನು ದರ್ಶಿಸಿ ಹಲವು ವಿಷಯಗಳನ್ನು ಕೇಳಿ ತಿಳಿದುಕೊಂಡು ಸಂತೋಷ ಹೊಂದಿದರು. ೧೯೬೭ನೆಯ ಡಿಸೆಂಬರಿನಲ್ಲಿ ದಿಳ್ಳಿಯಿಂದ ಕುರುಕ್ಷೇತ್ರಕ್ಕೆ ಬಿಜಯ ಮಾಡಿ ಮತ್ತೆ ದಿಳ್ಳಿಗೆ ಹಿಂದಿರುಗಿದರು.

೧೯೬೮ನೆಯ ಜನವರಿ ಒಂದನೆಯ ತಾರೀಖು ಜಗದ್ಗುರುಗಳು ದಿಳ್ಳಿಯನ್ನು ಬಿಟ್ಟು ಹೊರಟು ಮೋದಿನಗರ, ಮೀರತ್, ಮುಸಾಫರ್‌ನಗರ—ಈ ಮಾರ್ಗವಾಗಿ ಹರಿದ್ವಾರಕ್ಕೆ ಹೋಗಿ ಗಂಗಾಸ್ನಾನ ಮಾಡಿದರು. ಅಲ್ಲಿಂದ ರಾಮ್‌ಪೂರ್, ಪಡುರಲ್ಲಿ, ಷಾಜಹಾನ್‌ಪೂರ್, ಸೀತಾಪುರಗಳಿಗೆ ಹೋಗಿ, ಪುರಾಣಗಳಲ್ಲಿ ಪ್ರಸಿದ್ಧಿ ಹೊಂದಿರುವ ನೈಮಿಶಾರಣ್ಯಕ್ಕೆ ಬಿಜಯಮಾಡಿದರು. ಅಲ್ಲಿಂದ ಲಕ್ಷ್ಮಣಪುರಕ್ಕೂ (ಲಕ್ನೋ, ಉತ್ತರ ಪ್ರದೇಶ), ಶ್ರೀಮಠದ ಶಿಷ್ಯರಾದ ಗವರ್ನರ್ ಶ್ರೀ ವಿಶ್ವನಾಥನ್ ಅವರ ಆಹ್ವಾನವನ್ನಂಗೀಕರಿಸಿ ಕಾನ್ಪುರಕ್ಕೂ ಪ್ರಯಾಣಮಾಡಿ ಶ್ರೀ ವಾಲ್ಮೀಕಿ ಮಹರ್ಷಿಗಳು ತಪಸ್ಸು ಮಾಡಿದ ಸ್ಥಳವಾದ ಬ್ರಹ್ಮಾವರ್ತಕ್ಕೆ ಹೋಗಿ, ಸರಯೂನದೀತೀರದಲ್ಲಿರುವ ಶ್ರೀ ರಾಮರ ಜನ್ಮಭೂಮಿಯಾದ ಅಯೋಧ್ಯೆಯನ್ನು ಸೇರಿದರು. ಅಲ್ಲಿಂದ ಗೋರಖ್‌ಪುರಕ್ಕೆ ಹೋಗಿ ಗೀತಾಪ್ರೆಸ್ಸಿನಲ್ಲಿ ಶ್ರೀ ಹನುಮಾನ್ ಪ್ರಸಾದ್ ಪೊತ್ತರಿಂದ ಸ್ವಾಗತಿಸಲ್ಪಟ್ಟು, ಆ ಊರಿನಲ್ಲಿರುವ ದಕ್ಷಿಣದೇಶದ ಶಿಷ್ಯರುಗಳ ಆಹ್ವಾನವನ್ನಂಗೀಕರಿಸಿ ಅವರ ಮನೆಗಳಿಗೂ ಪಾದಧೂಳಿಯನ್ನು ಅನುಗ್ರಹಿಸಿದರು. ಗೋರಖ್‌ಪೂರ್ ಸರ್ವಕಲಾಶಾಲೆಗೂ ಚರಣಾನುಗ್ರಹವಾಯಿತು. ಅಲ್ಲಿಂದ ಪಾಟ್ನಾಕ್ಕೆ ಹೋದರು. ಆ ಬಳಿಕ ಮುಸಾಫರ್‌ಪುರ, ಮೋತೀಹಾರಿ, ಮಾರ್ಗವಾಗಿ ನೇಪಾಳಕ್ಕೆ ಬಿಜಯಮಾಡಿದರು. ಆದಿಶಂಕರರ ತರುವಾಯ ಚತುರಾಮ್ನಾಯ ಪೀಠಾಧಿಪತಿಗಳಲ್ಲಿ ನೇಪಾಳದೇಶಕ್ಕೆ ಬಿಜಯಮಾಡಿದವರೆಂದರೆ ಇವರೇ ಮೊಟ್ಟಮೊದಲನೆಯವರು. ಇಲ್ಲಿ ಜಗದ್ಗುರುಗಳು ಮಹಾಶಿವರಾತ್ರಿ ಪೂಜೆಯನ್ನು ಶ್ರೀ ಪಶುಪತಿನಾಥ ದೇವಾಲಯದಲ್ಲಿ ಬಹು ವಿಜೃಂಭಣೆಯಿಂದ ರಾತ್ರಿಯೆಲ್ಲಾ ಮಾಡಿದರು. ದಕ್ಷಿಣ ದೇಶದಿಂದಲೂ ಕಲ್ಕತ್ತೆಯಿಂದಲೂ ಬಂದ ಶಿಷ್ಯರೂ, ನೇಪಾಳದ ಮಹಾರಾಜರೂ, ನೇಪಾಳದ ಪ್ರಧಾನ ಪುರೋಹಿತರೂ ಪೂಜೆ ಮುಗಿಯುವ ವರೆಗೂ ಇದ್ದು ಭಕ್ತಿಯಿಂದ ಸಮಗ್ರ ಪೂಜೆಯನ್ನೂ ವೀಕ್ಷಿಸಿದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಕ್ರಿಸ್ತ ಶಕ ೭ನೆಯ ಶತಮಾನದಲ್ಲಿ ನೇಪಾಳರಾಜ ಅಂಶುವರ್ಮನು ಬೌದ್ಧಮತವನ್ನು ಅವಲಂಬಿಸಿ ತನ್ನ ಮಗಳನ್ನು ಟಿಬೆಟ್ ರಾಜನಿಗೆ ಮದುವೆ ಮಾಡಿಕೊಟ್ಟು ಬೌದ್ಧ ಮತ ತತ್ವಗಳನ್ನು ಟಿಬೆಟ್ಟಿನಲ್ಲಿ ಹರಡುವಂತೆ ಮಾಡಿದನು. ಕ್ರಿಸ್ತ ಶಕ ೮ನೆಯ ಶತಮಾನದ ತರುವಾಯ ಶ್ರೀ ಆದಿಶಂಕರರು ಅವತರಿಸಿ ಕನ್ಯಾಕುಮಾರಿ ಮೊದಲುಗೊಂಡು ನೇಪಾಳದ ವರೆಗೂ ಯಾತ್ರೆ ಮಾಡಿ ಬೌದ್ಧರುಗಳನ್ನೂ ಜೈನರುಗಳನ್ನೂ ಗೆದ್ದು ಅದ್ವೈತ ಮತವನ್ನು ಭದ್ರಪಡಿಸಿದರು. ಮೈಸೂರು ಪ್ರಾಂತದಲ್ಲಿರುವ ಶಿವಮೊಗ್ಗ ಪ್ರದೇಶದಿಂದ ಕನ್ನಡ ಬ್ರಾಹ್ಮಣರುಗಳನ್ನು ಕರೆಸಿಕೊಂಡು ಅವರುಗಳ ಮೂಲಕ ನೇಪಾಳದಲ್ಲಿರುವ ಶ್ರೀ ಪಶುಪತಿನಾಥ ದೇವಾಲಯದಲ್ಲಿ ಪೂಜೆ ನಡೆಯುವುದಕ್ಕೆ ಏರ್ಪಾಡು ಮಾಡಿದರು. ಈಗಲೂ ಅವರ ವಂಶದವರೇ ಅಲ್ಲಿ ಅರ್ಚಕರಾಗಿದ್ದಾರೆ.

ಇದರಂತೆಯೇ ಕೇರಳದ ನಂಬೂದಿರಿ ಬ್ರಾಹ್ಮಣರನ್ನು ಬದರೀನಾಥ ಕ್ಷೇತ್ರದಲ್ಲಿ ಪೂಜೆಮಾಡುವಂತೆ ಏರ್ಪಡಿಸಿರುವುದನ್ನು ಇಲ್ಲಿ ಗಮನಿಸತಕ್ಕದ್ದಾಗಿದೆ. ಶ್ರೀ ಆದಿ ಶಂಕರರಿಗೆ ಪರಮಗುರುಗಳಾದ ಶ್ರೀ ಗೌಡಪಾದಾಚಾರ್ಯರು ರಚಿಸಿದ ಮಾಂಡೂಕ್ಯಕಾರಿಕೆ ಆಕಾಲದಲ್ಲಿ ವಿದ್ವಾಂಸರುಗಳಲ್ಲಿ ಪ್ರಚುರವಾಗಿತ್ತು. ಈ ಗ್ರಂಥ ಚೀನೀ ಭಾಷೆಗೂ ಭಾಷಾಂತರಿಸಲ್ಪಟ್ಟಿತ್ತು. ಆದರೆ, ಶ್ರೀ ಗೌಡಪಾದಾಚಾರ್ಯರು ಪ್ರತಿಪಾದಿಸಿದ್ದ ಸಿದ್ಧಾಂತಗಳ ಬಗ್ಗೆ ಕೆಲವು ಸಂದೇಹಗಳೂ ಭಿನ್ನಾಭಿಪ್ರಾಯಗಳೂ ಅಲ್ಲಲ್ಲಿ ವಿದ್ವಾಂಸರುಗಳನ್ನು ಬಾಧಿಸುತ್ತಿದ್ದವು. ಶ್ರೀ ಆದಿ ಶಂಕರರು ಎಲ್ಲ ಸಂದೇಹಗಳನ್ನೂ ಪರಿಹರಿಸಿ ಗುರುಗಳ ಪ್ರತಿಪಾದನೆಗಳನ್ನೆಲ್ಲ ಸಮರ್ಥಿಸಿ ಅದ್ವೈತ ಮತವನ್ನು ಚಿರಸ್ಥಾಯಿಯಾಗಿ ಮಾಡಿದರು.

೧೯೬೭ನೆಯ ಮಾರ್ಚಿ ೧೧ನೆಯ ತಾರೀಖು ಕಠಮಂಡುವಿನಿಂದ ಹೊರಟು ಹಲವು ಊರುಗಳ ಮಾರ್ಗವಾಗಿ ಪ್ರಯಾಣ ಮಾಡಿ ಕಲ್ಕತ್ತೆಕ್ಕೆ ಮಾರ್ಚಿ ೨೬ನೆಯ ತಾರೀಖು ಬಿಜಯಮಾಡಿದರು. ಮೂರು ವರ್ಷಗಳ ವರೆಗೂ ಜಗದ್ಗುರುಗಳ ಆಗಮನವನ್ನು ನಿರೀಕ್ಷಿಸಿಕೊಂಡೇ ಇದ್ದ ಕಲ್ಕತ್ತಾ ನಿವಾಸಿಗಳಿಗೆ ಇದೊಂದು ಮಹೋತ್ಸವವಾಯಿತು. ಅಲ್ಲಿ ಗುರುಗಳು ಮೂರು ವಾರ ತಂಗಿದ್ದರು. ಶ್ರೀ ಪಿ. ಸುಬ್ರಹ್ಮಣ್ಯಂ (ಸಾಹುಜೈನ್ ಕಂಪೆನಿಯ ಕಾರ್ಯದರ್ಶಿ), ಮಾಡಿದ ಏರ್ಪಾಡುಗಳನ್ನನುಸರಿಸಿ ಚಂಡೀಹೋಮ, ಇನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಲವು ಕಾರ್ಯಕ್ರಮಗಳು, ವಿದ್ವತ್ಸದಸ್ಸು, ಸರ್ವ ಕಲಾಶಾಲೆಯ ಅವಲೋಕನ, ಮೊದಲಾದವು ನಡೆದವು. ದಿನದಿನವೂ ಅಸಂಖ್ಯಾತ ಜನ ದರ್ಶನಕ್ಕೆ ಬರುತ್ತಿದ್ದರು. ಕಲ್ಕತ್ತದಲ್ಲಿ ಶ್ರೀ ಜಗದ್ಗುರುಗಳು ನಡಸಿದ ದೇವತಾರಾಧನಾ ಕಾಲಗಳಲ್ಲಿ ಶ್ರೀ ಚಂದ್ರಮೌಳೀಶ್ವರ ಸ್ಫಟಿಕಲಿಂಗಾಭಿಷೇಕಕ್ಕಾಗಿ ಶಿಷ್ಯರುಗಳು ದೊಡ್ಡ ದೊಡ್ಡ ಹಂಡೆಗಳಲ್ಲಿಯೂ ಕೊಡಗಳಲ್ಲಿಯೂ ಹಸುವಿನ ಹಾಲನ್ನು ತಂದು ಕೊಡುತ್ತಿದ್ದುದನ್ನು ಇಲ್ಲಿ ಹೇಳದೆ ಇರಲಾಗುವುದಿಲ್ಲ. ಬಂಗಾಳಿಗಳು, ದಕ್ಷಿಣದೇಶದವರು ಎಂಬ ವ್ಯತ್ಯಾಸವಿಲ್ಲದೆ ದರ್ಶನಕ್ಕೆ ಎಲ್ಲರೂ ಬರುತ್ತಿದ್ದರು. ಒಂದೊಂದು ವಾರವೂ ಒಂದು ದಿನ ಹಿಂದಿಯಲ್ಲೂ, ಒಂದು ದಿನ ತಮಿಳಿನಲ್ಲೂ ಜಗದ್ಗುರುಗಳ ಉಪನ್ಯಾಸಗಳು ನಡೆಯುತ್ತಿದ್ದವು. ಉತ್ತರ ದೇಶದವರು (ಬಂಗಾಳಿಗಳೂ ಸೇರಿ) ಶ್ರೀ ಸ್ವಾಮಿಗಳು ಹಿಂದೀ ಭಾಷೆಯಲ್ಲಿ ಮಾಡಿದ ಉಪದೇಶಭಾಷಣಗಳನ್ನು ಭಕ್ತಿಯಿಂದ ಮೆಚ್ಚಿಕೊಂಡರು. ಉಪನ್ಯಾಸಗಳನ್ನು ಕೇಳುವುದಕ್ಕಾಗಿಯೇ ಅಪಾರ ಜನಸಮೂಹಗಳು ಬರುತ್ತಿದ್ದವು.

ಖರಗ್‌ಪುರದಲ್ಲಿನ ಶಿಷ್ಯರುಗಳ ಪ್ರಾರ್ಥನೆಗೆ ಒಪ್ಪಿಕೊಂಡು ಜಗದ್ಗುರುಗಳು ೧೯೬೭ನೆಯ ಏಪ್ರಿಲ್ ೨೧ನೆಯ ತಾರೀಖು ಕಲ್ಕತ್ತದಿಂದ ಖರಗ್ಪೂರಕ್ಕೆ ಪ್ರಯಾಣಮಾಡಿದರು. ಮಾರ್ಗದಲ್ಲಿ ಕೋಲಾಗಡ್ ಎಂಬ ಸ್ಥಳದಲ್ಲಿ ಸಮುದ್ರಜಲದ ಒಳಸರಿವು ಇತ್ತು. ಕಾರುಗಳನ್ನು ಕೂಡ ಹಡಗಿನಲ್ಲಿಯೇ ಆಚೆದಡಕ್ಕೆ ಸಾಗಿಸಬೇಕು. ಜಗದ್ಗುರುಗಳೂ ಜೊತೆಯಲ್ಲಿ ಬಂದ ಗೋಷ್ಠಿಯೂ ಸಂಜೆ ೫ ಗಂಟೆಗೆ ಈ ಸ್ಥಳವನ್ನು ದಾಟಬೇಕಾದ ಆವಶ್ಯಕತೆಯೂ ಉಂಟಾಯಿತು. ನೀರು ತಕ್ಕಷ್ಟು ಆಳವಾಗಿರಲಿಲ್ಲವಾದ್ದರಿಂದ ಹಡಗು ಬಿಡುವುದಕ್ಕೆ ಸಾಧ್ಯವಿಲ್ಲದಂತಾಯಿತು. ಹಾಗಾಗಿ ಮೋಟಾರುಗಳು ಆಚೆ ದಡಕ್ಕೆ ಹೋಗಲಾಗಲಿಲ್ಲ. ಶುಕ್ರವಾರ ಸಂಜೆ ೬ ಗಂಟೆಗೆ ಜಗದ್ಗುರುಗಳೂ ಅವರ ಜೊತೆ ಬಂದವರೂ ಅಲ್ಲೇ ತಂಗಬೇಕಾಯಿತು. ಅಲ್ಲಿ ಕೊಯ್ಯಾ ಸೇತುವೆ (ರೈಲ್ವೆ ಸೇತುವೆ) ಕೆಲಸ ನಡೆಯುತ್ತಿತ್ತು. ಅಲ್ಲಿದ್ದ ಮಹಾರಾಷ್ಟ್ರ, ಮೈಸೂರು ಕಂಟ್ರಾಕ್ಟರುಗಳ ಸಹಾಯದಿಂದ ಅಲ್ಲಿ ಶುಕ್ರವಾರ ಪೂಜೆಗೆ ಏರ್ಪಾಡಾಯಿತು. ಇಬ್ಬರು ಇಂಜಿನಿಯರುಗಳು ಜೊತೆಯಲ್ಲಿದ್ದು ಪೂಜಾಕಾರ್ಯವನ್ನು ಆಗಮಾಡಿಸಿದರು. ರೈಲ್ವೆ ಸೇತುವೆಯನ್ನು ಕಬ್ಬಿಣ ದೂಲಗಳ ಮೇಲೆ ಇದಕ್ಕೆ ಮುಂಚೆ ಎರಡು ಸಲ ಕಟ್ಟಿದರೂ ಅದು ಕಳಚಿ ಬಿದ್ದುದನ್ನು ತಿಳಿಸಿ, ಅನುಗ್ರಹ

Sri Vidyabharathi Book Centre, Sringeri

CC-0. In Public Domain. Digitized by eGangotri

ಮಾಡಬೇಕೆಂದು ಜಗದ್ಗುರುಗಳಲ್ಲಿ ಪ್ರಾರ್ಥನೆಮಾಡಿಕೊಂಡರು. "ಇನ್ನು ಹಾಗೆ ಕಳಚಿ ಬೀಳುವುದಿಲ್ಲ. ಈ ಸಲ ಧೈರ್ಯದಿಂದ ಕೆಲಸಗಳನ್ನು ಮುಂದುವರಿಸಿರಿ" ಎಂದು ಜಗದ್ಗುರುಗಳು ಅನುಗ್ರಹಿಸಿ ಅವರಿಗೆ ಪ್ರಸಾದವನ್ನು ಕೊಟ್ಟರು. ಎಂಜಿನಿಯರುಗಳ ಚಿಂತೆ ಒಡನೆಯೇ ಪರಿಹಾರವಾಯಿತು. ಸೇತುವೆ ಆ ಮೇಲೆ ಬಹು ಅಚ್ಚುಕಟ್ಟಾಗಿಯೇ ನಿರ್ಮಾಣವಾಯಿತು. ಅದುವರೆಗೂ ಮುರಿದು ಬೀಳುತ್ತಲೇ ಇದ್ದ ಸೇತುವೆ ಈಗ ಚೆನ್ನಾಗಿ ರೂಪುಗೊಂಡಿದೆ ಎಂಬುದನ್ನು ವಿವರಿಸಿ ರೈಲ್ವೇ ಅಧಿಕಾರಿಗಳು ಈಗ ಆ ಸ್ಥಳದಲ್ಲಿ ಶಿಲಾ ಶಾಸನವನ್ನು ಸ್ಥಾಪಿಸಿದ್ದಾರೆ. ಈ ರೀತಿ ಅನುಗ್ರಹ ಮಾಡುವುದಕ್ಕಾಗಿಯೇ ಜಗದ್ಗುರು ಅಲ್ಲಿಗೆ ಬಿಜಯಮಾಡಿದರೋ ಏನೋ ಎಂದು ತೋರಿತು. ತಕ್ಕಷ್ಟು ಆಳವಿಲ್ಲದ್ದರಿಂದ ಹಡಗನ್ನು ಬಿಡಲಾಗಲಿಲ್ಲ. ಆದರಿಂದ ಜಗದ್ಗುರುಗಳು ಖರಗ್ಪುರಕ್ಕೆ ಹೋಗದೆ ಕಲ್ಕತ್ತಕ್ಕೇ ಅವತ್ತು ರಾತ್ರೆ ಹಿಂದಿರುಗಿದರು.

ಮರುದಿನ ಕಲ್ಕತ್ತದಿಂದ ಹೊರಟು ಬರ್ದವಾನ್, ಜೀಲ್ಕೋರಾ, ರಾಂಚಿ, ಗಯೆ, ಬುದ್ಧಗಯೆ—ಈ ಸ್ಥಳಗಳಲ್ಲಿ ಕೆಲವು ದಿನ ಯಾತ್ರೆಮಾಡಿ ತರುವಾಯ ಡಾಲ್ಮಿಯಾಪುರವನ್ನು ತಲುಪಿದರು. ಹಿಂದಕ್ಕೆ ಸರಿದು 'ವಿಂಧ್ಯಾಚಲಂ' ಎಂಬ ದೊಡ್ಡ ದೇವೀ ಕ್ಷೇತ್ರದಲ್ಲಿ ತಂಗಿ ಗಂಗಾಸ್ನಾನಮಾಡಿ ಪೂಜೆಯನ್ನು ಮುಗಿಸಿ, ೩೦-೪-೧೯೬೭ರಂದು ಕಾಶಿಗೆ ಬಿಜಯಮಾಡಿದರು. ಜಗದ್ಗುರುಗಳ ಕಾಶೀ ವಿಜಯ ಬಹು ವಿಜೃಂಭಣೆಯಿಂದ ನಡೆಯಿತು. ಅದುವರೆಗೆ ವಿಧಿಸಿದ್ದ 'ದೀಪ ಉರಿಸಬಾರದು' ಎಂಬ ತಡೆ ಆಜ್ಞೆಯನ್ನು ಜಗದ್ಗುರುಗಳು ಬಂದಮೇಲೆ ಆ ರಾತ್ರಿಯೇ ಸರ್ಕಾರ ರದ್ದುಪಡಿಸಿತು. ಊರಿನಲ್ಲಿರುವ ಎಲ್ಲಾ ಸಂಸ್ಥೆಗಳೂ ವಿದ್ವತ್ಸಭೆಗಳೂ, ಆದರದ ಸ್ವಾಗತ ನೀಡಿದವು. ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ವೇದಸಭೆ, ವಿದ್ವತ್ಸಭೆಗಳು ನಡೆದವು. ಜಗದ್ಗುರುಗಳು ಅವುಗಳಲ್ಲಿ ಎಲ್ಲಾ ವಿದ್ವಾಂಸರಿಗೂ, ಹೇರಳವಾಗಿ ಸಂಭಾವನೆಗಳನ್ನು ನೀಡಿದರು. ಹಲವು ವಿಶ್ವವಿದ್ಯಾನಿಲಯಗಳು ಜಗದ್ಗುರುಗಳನ್ನು ಆಹ್ವಾನಿಸಿ ಅವರಿಗೆ ಮರ್ಯಾದೆಗಳನ್ನು ಅರ್ಪಿಸಿದವು. ಕಾಶೀ ರಾಜರ ವಿಶೇಷ ಆಹ್ವಾನವನ್ನಂಗೀಕರಿಸಿ ಜಗದ್ಗುರುಗಳು ಗಂಗೆಯನ್ನು ದಾಟಿ ರಾಜರ ಅರಮನೆಗೆ ಬಿಜಯಮಾಡಿದರು. ಎಳೆಯ ಮಹಾರಾಜ ಇನ್ನೂ ಏಳು ವರ್ಷದ ಬಾಲಕ. ಅವನಿಗೆ ಈಗಾಗಲೇ ಉಪನಯನ ನಡೆದಿದೆ ಎಂಬುದನ್ನೂ, ಅವನು ವೇದಪಠನ ಮಾಡಿದುದನ್ನೂ ಕೇಳಿ ಬಹಳ ಸಂತೋಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಂದಿ ಜಗದ್ಗುರುಗಳು ರಾಜರ ಆಸ್ತಿಕ್ಯವನ್ನೂ, ಬಾಲಕನ ಶ್ರದ್ಧೆಯನ್ನೂ ಬಹಳವಾಗಿ ಶ್ಲಾಘಿಸಿದರು. "ಪುರಾಣಗಳಲ್ಲಿ ಕಾಶೀರಾಜರು ಬಹಳ ಆಸ್ತಿಕರು, ಅನುಷ್ಠಾನಪರರು, ಜ್ಞಾನಿಗಳು ಎಂದೆಲ್ಲಾ ಓದಿದ್ದೇವೆ. ರಾಜಕುಟುಂಬದವರು ಈಗಲೂ ಅದೇ ರೀತಿ ಇರುವುದನ್ನು ಪ್ರತ್ಯಕ್ಷವಾಗಿ ಕಂಡು ಸಂತೋಷ ಹೊಂದಿದೆವು. ಪುರಾಣದಲ್ಲಿ ಹೇಳಿರುವುದು ಅತಿಶಯವೇನಲ್ಲ" ಎಂದರು. ಬಳಿಕ ಮಹಾರಾಜರು ನೀಡಿದ ಮರ್ಯಾದೆಗಳನ್ನು ಅಂಗೀಕರಿಸಿ ಅಲ್ಲಿಂದ ಹೊರಟು ಪ್ರಯಾಗಕ್ಕೆ (ಅಲಹಾಬಾದಿಗೆ) ಬಂದು ಸೇರಿದರು. ತ್ರಿವೇಣಿಯಲ್ಲಿ ಶಿಷ್ಯರಿಗೆ ಅನುಗ್ರಹಮಾಡಿದರು; ತಾವೂ ಸ್ನಾನವನ್ನಾಚರಿಸಿದರು.

ಜಗದ್ಗುರುಗಳು ಅಲಹಾಬಾದಿನಿಂದ ಕಾನ್ಪುರ, ಕನೋಜ್, ಅಲಿಘರ್ ಮಾರ್ಗವಾಗಿ ದಿಳ್ಳಿಗೆ ಮೇ ತಿಂಗಳು ಒಂಬತ್ತನೆಯ ತಾರೀಖು ಬಂದು ಸೇರಿದರು. ಈ ವರ್ಷ ದಿಳ್ಳಿಯಲ್ಲಿ ಶ್ರೀ ಶಂಕರಜಯಂತಿ ಉತ್ಸವ ಬಹು ವಿಜೃಂಭಣೆಯಿಂದ ನಡೆಯಿತು. ಶಂಕರಜಯಂತಿಯಲ್ಲಿ ವಿಶೇಷ ವಿದ್ವತ್ಸದಸ್ಸು ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಎಂದೆಂದೂ ನಡೆಯುವ ಹಾಗೆಯೇ ಈ ವರ್ಷವೂ ನಡೆಯಿತು. ಎಲ್ಲಾ ಶಾಸ್ತ್ರಗಳಲ್ಲಿಯೂ ವ್ಯುತ್ಪನ್ನರಾದ ಹಲವು ಮಹಾವಿದ್ವಾಸರುಗಳು ಇದರಲ್ಲಿ ಭಾಗವಹಿಸಿ ವಾಕ್ಯಾರ್ಥಮಾಡಿದರು. ಶ್ರೀ ಜಗದ್ಗುರುಗಳು ವಿದ್ವಾಂಸರುಗಳಿಗೆ ಶಾಲು, ಸನ್ಮಾನಗಳನ್ನೂ ನೀಡಿದರು. ಭಾರತದ ನೂತನ ರಾಷ್ಟ್ರಪತಿಯಾಗಿ ಆಯ್ಕೆಹೊಂದಿ ಪದವಿಯನ್ನು ವಹಿಸಿಕೊಳ್ಳಲಿರುವ ಡಾ|| ಜಾಕೀರ್ ಹುಸೇನ್ ಅವರು ಶೃಂಗೇರೀ ಜಗದ್ಗುರುಗಳನ್ನು ಮುಕ್ಕಾಮಿನಲ್ಲಿ ಬಂದು ಸಂದರ್ಶಿಸಿ ಅನುಗ್ರಹಪಡೆದರು. ಜಗದ್ಗುರುಗಳ ಆಶ್ರಯದಲ್ಲಿ ಹಲವಾರು ಧಾರ್ಮಿಕ ಉಪನ್ಯಾಸಗಳನ್ನು ನಡಸಲಾಯಿತು.

ದಿಳ್ಳಿಯಿಂದ ಜಗದ್ಗುರುಗಳು ಹರಿದ್ವಾರದ ಮಾರ್ಗವಾಗಿ ಕೇದಾರನಾಥ, ಬದರೀನಾಥ ಯಾತ್ರೆಯನ್ನು ಕೈಕೊಂಡರು.

ಹಿಮಾಲಯದಲ್ಲಿ ಪ್ರವೇಶಿಸಿದೊಡನೆ ಮೊದಲನೆಯ ಬಿಡಾರ, ರುದ್ರಪ್ರಯಾಗ; ಇದು ಒಂದು ಮಹಾ ಪುಣ್ಯಕ್ಷೇತ್ರ. ಮಂದಾಕಿನಿಯೂ ಅಲಕನಂದೆಯೂ ಸಂಗಮವಾಗುವ ಸ್ಥಳ. ಸರಸ್ವತಿಯೆಂಬ ಅಂತರ್ವಾಹಿನಿ ನದಿಯೂ ಇಲ್ಲಿ ಬಂದು ಸೇರುತ್ತದೆ. ಆದ್ದರಿಂದ ಇದು ಪ್ರಯಾಗದಷ್ಟೇ ಮುಖ್ಯವಾದ ಕ್ಷೇತ್ರ. ಅಲ್ಲಿಂದ ಮಂದಾಕಿನಿಯೂ ಗಂಗೆಯೂ ಸೇರುವ ಸ್ಥಳವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಪ್ತಕಾಶಿಗೆ ಹೋಗಿ ಸೇರಿದರು. ಪಂಚಪಾಂಡವರಲ್ಲಿ ಭೀಮಸೇನನು ಇಲ್ಲಿ ದೇವಾಲಯ ಕಟ್ಟಿದ್ದಾಗಿಯೂ, ಯಾವಾಗಲೂ ಆರಿಹೋಗದೆ ಉರಿಯುತ್ತಿರುವ ಅಖಂಡಜ್ಯೋತಿ ಅಲ್ಲಿ ಬೆಳಗುತ್ತಿರುವುದಾಗಿಯೂ ಇಲ್ಲಿನ ವೈಶಿಷ್ಟ್ಯವನ್ನು ಎತ್ತಿ ಹೇಳುತ್ತಾರೆ. ಅಲ್ಲಿಂದ ಕೇದಾರನಾಥಕ್ಕೆ ಹೋಗಿ ಅಲ್ಲಿ ದೇವಾಲಯದಲ್ಲಿ ಶ್ರೀ ಕೇದಾರನಾಥಸ್ವಾಮಿಗೆ ತಾವೇ ಪೂಜೆಗಳನ್ನು ಮಾಡಿದರು. ಕೇದಾರನಾಥದಿಂದ ತಿರುಗಿ ಗುಪ್ತಕಾಶಿಗೆ ಬಂದು, ರುದ್ರಪ್ರಯಾಗದ ಮಾರ್ಗವಾಗಿ ಜೋಷಿಮಠಕ್ಕೆ ಬಿಜಯಮಾಡಿದರು.

ಜೋಷಿಮಠದ ಜಗದ್ಗುರುಗಳಿಂದ ಸ್ವಾಗತಿಸಲ್ಪಟ್ಟು ಅಲ್ಲಿ ತಂಗಿದರು. ಶ್ರೀ ಆದಿ ಶಂಕರರು ಕೆಲವು ವರ್ಷ ಕಾಲ ಈ ಸ್ಥಳದಲ್ಲಿ ತಪಸ್ಸು ಮಾಡಿದ್ದಾಗಿ ಹೇಳುತ್ತಾರೆ. ಅವರು ತಪಸ್ಸು ಮಾಡಿದ ಸ್ಥಳದಲ್ಲಿ ಒಂದು ಜ್ಯೋತಿರ್ಲಿಂಗವಿದೆ. ಇದು ವರ್ಷ ವರ್ಷವೂ ಬೆಳೆಯುತ್ತಲೇ ಇರುವುದಾಗಿ ಹೇಳುತ್ತಾರೆ. ಇಲ್ಲಿಂದ ಜಗದ್ಗುರುಗಳು ಬದರೀನಾಥಕ್ಕೆ ಹೊರಟರು. ಅಲಕನಂದಾ ನದಿಗೆ ಪಕ್ಕದಲ್ಲಿರುವ ತಪ್ತಕುಂಡ (ಬಿಸಿನೀರು ಊಟೆ) ಎಂಬ ಸ್ಥಳದಲ್ಲಿ ಅನುಷ್ಠಾನಗಳನ್ನು ಮುಗಿಸಿಕೊಂಡು, ಬ್ರಹ್ಮಕಪಾಲಕ್ಕೆ ಬಿಜಯಮಾಡಿ, ಅಲ್ಲಿ ಪುರಾಣಗಳಲ್ಲಿ ಹೇಳಲ್ಪಡುವ ನರನಾರಾಯಣರಿಗೆ ತಾಯಿಯಾದ ಮಾತಾಮೂರ್ತಿಯನ್ನು ದರ್ಶಿಸಿ, ಶರಣ ಪಾದುಕೆ ಎಂಬ ಸ್ಥಳಕ್ಕೆ ಹೋಗಿ ಬಂದರು.

ಹಿಮಾಲಯ ಪರ್ವತದ ತಪ್ಪಲಿನ ಸಹಜ ಸೌಂದರ್ಯವನ್ನು ಕಂಡು "ಇಲ್ಲಿಯೇ ಇದ್ದುಕೊಂಡು ಕೆಲವು ತಿಂಗಳಾದರೂ ತಪಸ್ಸು ಮಾಡಬೇಕು" ಎಂಬ ಉತ್ಕಟಾಭಿಲಾಷೆ ಜಗದ್ಗುರುಗಳಿಗೆ ಉಂಟಾಯಿತು. ಆದರೆ ತಾವು ಪೀಠಾಧಿಪತಿಗಳಾಗಿರುವ ಕಾರಣದಿಂದ ಶಿಷ್ಯರುಗಳ ಅನುಗ್ರಹಾರ್ಥವಾಗಿ ಯಾತ್ರೆಯನ್ನು ಮುಂದುವರಿಸಬೇಕಾಯಿತು. ತಮ್ಮ ಅಭಿಲಾಷೆಯನ್ನು ತಾವೇ ನಿಗ್ರಹಿಸಿಕೊಂಡರು.

ಬದರೀನಾಥ—ಶೃಂಗೇರಿ

೧೯೬೭ನೆಯ ಜೂನ್ ತಿಂಗಳು ೨ನೆಯ ತಾರೀಖು ಬದರೀನಾಥದಿಂದ ದೇವಪ್ರಯಾಗ ಮಾರ್ಗವಾಗಿ ಋಷೀಕೇಶಕ್ಕೆ ಬಂದು, ಸ್ವಾಮಿ ಶಿವಾನಂದ ಅವರೊಡನೆ ಇದ್ದು, ಹರಿದ್ವಾರಕ್ಕೆ ಬಂದರು. ಅಲ್ಲಿಂದ ಡೆಹರಾಡೂನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಬಾಲ, ಜಮ್ಮು ಮಾರ್ಗವಾಗಿ ಕಾಶ್ಮೀರದ ಮುಖ್ಯ ಪಟ್ಟಣವಾದ ಶ್ರೀನಗರ ತಲುಪಿದರು. ಅಲ್ಲಿ ಶ್ರೀ ಶಂಕರಾಚಾರ್ಯರಾಲಯದಲ್ಲಿ ಆದಿ ಶಂಕರರ ಅಮೃತ ಶಿಲಾ ವಿಗ್ರಹವನ್ನೂ, ಐದೂವರೆ ಅಡಿ ಎತ್ತರವಾದ ದೊಡ್ಡ ಬಾಣಲಿಂಗವನ್ನೂ ದರ್ಶಿಸಿ, ಅಲ್ಲಿಂದ ೧೬ ಮೈಲಿ ಆಚೆ ಇರುವ “ಕ್ಷೀರಭವಾನೀ” ಆಲಯಕ್ಕೆ ಹೋದರು. ಶ್ರೀನಗರದಿಂದ ಅಮೃತಸರಸ್ಸಿಗೆ ಹೋಗಿ, ಲೂದಿಯಾನಾ ಮತ್ತು ಕರ್ನಾಲ್ ಮಾರ್ಗವಾಗಿ ದಿಳ್ಳಿಗೆ ಮೂರನೆಯ ಸಲ ಜೂನ್ ೨೦ನೇ ತಾರೀಖು ಬಂದು ಸೇರಿದರು. ಇಲ್ಲಿ **ಶಂಕರ ಅದ್ವೈತವಿದ್ಯಾ ಆಶ್ರಮದಲ್ಲಿ** ಶ್ರೀ ಶಾರದಾದೇವಿ, ಶ್ರೀ ಶಂಕರ ಭಗವತ್ಪಾದರು—ಇವರ ಮೂರ್ತಿಗಳನ್ನು ಜೂನ್ ೨೭ನೆಯ ತಾರೀಖು ಪ್ರತಿಷ್ಠೆ ಮಾಡಿದರು. ಇಲ್ಲಿಂದ ಹರಿದ್ವಾರಕ್ಕೆ ಹೋಗಿ ಅಲ್ಲಿ ಹೊಸದಾಗಿ ಕಟ್ಟಿದ್ದ ಶೃಂಗೇರೀ ಶಂಕರಮಠವನ್ನು ಆರಂಭಗೊಳಿಸಿ ದಿಳ್ಳಿಗೆ ಹಿಂದಿರುಗಿದರು. ಇಲ್ಲಿ ಪುರಿ ಪೀಠಾಧಿಪತಿ ಜಗದ್ಗುರು ಶಂಕರಾಚಾರ್ಯರು ಶೃಂಗೇರೀ ಜಗದ್ಗುರುಗಳನ್ನು ದರ್ಶಿಸಿದರು.

ದಿಳ್ಳಿಯಿಂದ ಆಳ್ವಾರ್, ಜಯಪುರ, ಅಜ್ಮೀರ್, ಜೋಧಪುರ, ಬಿಲ್ವಾರ, ಉದಯಪುರಿ, ಡೊಂಗರ್‌ಪೂರ್, ಅಹಮದಾಬಾದ್, ಬರೋಡ, ಧಾರಾ, ನಂಜಿಕ್ಕಾವಡಿ, ತ್ರಿಯಂಬಕೇಶ್ವರ—ಇವುಗಳಿಗೆ ಹೋಗಿ, ತರುವಾಯ ಬೊಂಬಾಯಿಗೆ ಬಂದು ಸೇರಿದರು. ಬೊಂಬಾಯಿಯಲ್ಲಿ ಶ್ರೀ ಕೆ. ಎಂ. ಮುನ್ಶಿಯವರ ಅಧ್ಯಕ್ಷತೆಯಲ್ಲಿ ಹಲವು ಪ್ರಮುಖರನ್ನೊಳಗೊಂಡ ಕಮಿಟಿಯಿಂದ ಸ್ವಾಗತಪಡೆದರು. ಈ ವರ್ಷದ ಚಾತುರ್ಮಾಸ್ಯವೂ, ನವರಾತ್ರಿಯೂ, ವರ್ಧಂತಿಯೂ ಬೊಂಬಾಯಿಯಲ್ಲಿ ನಡೆದವು.

೧೯೬೭ನೆಯ ನವಂಬರ್ ತಿಂಗಳು ಬೊಂಬಾಯನ್ನು ಬಿಟ್ಟು ಪೂನಾಕ್ಕೆ ಹೋದರು. ಅಲ್ಲಿಂದ ಕುರ್ತವಾಡಿ, ಸೊಲ್ಲಾಪುರ, ಹರಮನುಬಾ, ಬೀದರ್ ಮಾರ್ಗವಾಗಿ ಹೈದರಾಬಾದಿಗೆ ಬಂದು ಅಲ್ಲಿರುವ ಶೃಂಗೇರೀ ಮಠದಲ್ಲಿ ಒಂದು ವಾರ ಕಾಲ ತಂಗಿದ್ದರು. ಅಲ್ಲಿಂದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಶ್ರೀ ಶಂಕರಮಠದಲ್ಲಿ ಡಿಸೆಂಬರ್ ೧೮ರಂದು ಶ್ರೀ ಆದಿ ಶಂಕರರ ಬಿಂಬವನ್ನು ಪ್ರತಿಷ್ಠೆ ಮಾಡಿ, ಕುಂಭಾಭಿಷೇಕವನ್ನೂ ಮಾಡಿದರು. ಶ್ರೀಶೈಲದಿಂದ ಬೆಂಗಳೂರಿಗೆ ಬಂದು ೧೯೬೮ನೆಯ ವರ್ಷ ಶಿವರಾತ್ರಿ ಪೂಜೆಯನ್ನು ಅಲ್ಲಿ ನಡಸಿದರು. ಮಾರ್ಚಿ ಆರನೆಯ ತಾರೀಖು ಶ್ರೀ ಶಂಕರಮಠದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಾರದಾಂಬಾ ದೇವಾಲಯದ ಮೇಲೂ ಶ್ರೀ ಆದಿ ಶಂಕರರ ಆಲಯದ ಮೇಲೂ ಕಟ್ಟಿದ್ದ ಹೊಸ ವಿಮಾನಗಳಿಗೆ ಕುಂಭಾಭಿಷೇಕವನ್ನು ನಡಸಿದರು. ೧೯೬೮ನೆಯ ಮಾರ್ಚಿ ೨೨ನೆಯ ತಾರೀಖು ಶೃಂಗೇರಿಗೆ ಹಿಂದಿರುಗಿದರು. ಬಹು ಕಾಲ ಶ್ರೀ ಶಾರದಾಂಬೆಯನ್ನು ದರ್ಶಿಸದೆ ಇದ್ದದ್ದರಿಂದ ಉಂಟಾದ ತಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಒಡನೆಯೇ ಅಮ್ಮನವರ ದರ್ಶನಮಾಡಿ, ಶಿಷ್ಯಕೋಟಿಗೆ ಸುಖಸಂತೋಷಗಳನ್ನಿತ್ತು ಸಂರಕ್ಷಿಸೆಂದು ಪ್ರಾರ್ಥಿಸಿದರು.

ಈ ರೀತಿ ೧೯೬೪ನೆಯ ಏಪ್ರಿಲ್ ತಿಂಗಳಲ್ಲಿ, ಶೃಂಗೇರಿಯಿಂದ ಹೊರಟು, ೧೯೬೮ನೆಯ ಮಾರ್ಚಿ ವರೆಗೆ ನಾಲ್ಕು ವರ್ಷ ಕಾಲ ಕೈಕೊಂಡ ಎರಡನೆಯ ವಿಜಯ ಯಾತ್ರೆ ಉತ್ತರದೇಶದಲ್ಲಿ ಏರ್ಪಟ್ಟಿತು. ಈ ಎರಡು ದೊಡ್ಡ ಯಾತ್ರೆಗಳ ಮೂಲಕ ಶ್ರೀ ಆದಿ ಶಂಕರರ ಅನಂತರ ಈ ಜಗದ್ಗುರುಗಳೇ ನೇಪಾಳವೂ ಸೇರಿದಂತೆ ಅಖಿಲ ಭಾರತ ಯಾತ್ರೆಯನ್ನು ಪೂರ್ತಿಮಾಡಿದವರು, ಎಂಬುದು ಸ್ಮರಣೀಯವಾಗಿದೆ.

[ಮೇಲೆ ಹೇಳಿರುವ ಯಾತ್ರೆಗಳ ಪೂರ್ಣ ವಿವರಗಳೂ, ಒಂದೊಂದು ಊರಿನಲ್ಲೂ ನಡೆದ ವಿಶೇಷ ಸಂಗತಿಗಳೊಡನೆ, 'ಶಂಕರ ಕೃಪಾ' ಮಾಸ ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇಲ್ಲಿ ಬಹಳ ಸಂಕ್ಷೇಪವಾಗಿ ಅವನ್ನು ಹೇಳಲಾಗಿದೆ.]

ನಾಲ್ಕು ವರ್ಷಗಳ ಕಾಲ ಗುರುಗಳು ಯಾತ್ರೆಯಲ್ಲಿದ್ದದ್ದರಿಂದ ಶೃಂಗೇರಿಗೆ ಗುರುಕಟಾಕ್ಷದ ಕೊರತೆಯುಂಟಾಗಿ ಅದರಿಂದ ಅಲ್ಲಿ ಅವಶ್ಯವಾದಷ್ಟು ಮಳೆ ಬರಲಿಲ್ಲವೆಂದು ಸ್ಥಳೀಯ ಶಿಷ್ಯರು ಜಗದ್ಗುರುಗಳಿಗೆ ಬಿನ್ನಹ ಮಾಡಿದರು. ಗುರುಗಳ ಮನಸ್ಸು ಕರಗಿತು. ಅವರ ಪ್ರಾರ್ಥನೆಗೆ ಸಮ್ಮತಿಸಿತೋ ಎಂಬಂತೆ ಈ ವರ್ಷ ಶೃಂಗೇರಿಯಲ್ಲೂ ಆ ಸುತ್ತುಮುತ್ತಿನಲ್ಲೂ ಹೇರಳವಾಗಿ ಮಳೆ ಹುಯ್ಯಿತು. ೧೯೬೮ನೆಯ ವರ್ಷದ ಚಾತುರ್ಮಾಸ್ಯವೂ ಗಣಪತಿಸದಸ್ಸೂ ಶೃಂಗೇರಿಯಲ್ಲಿ ನಡೆದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಟಿ ನಾಮಾರ್ಚನೆ

ಯಾತ್ರೆ ನಿರ್ವಿಘ್ನವಾಗಿ ನೆರವೇರಿದ್ದಕ್ಕಾಗಿ ಶ್ರೀ ಶಾರದಾಂಬೆಗೆ ಶೃಂಗೇರಿಯಲ್ಲಿ ಕೋಟಿನಾಮಾರ್ಚನೆಯನ್ನು ನಡಸಬೇಕೆಂದು ಕೆಲವು ಶಿಷ್ಯರು ಪ್ರಾರ್ಥಿಸಿದರು. ಜಗದ್ಗುರುಗಳ ಆಜ್ಞೆಯಪ್ರಕಾರ . ಶೃಂಗೇರಿಯಲ್ಲಿ ೩–೧೦–೧೯೬೭ರ ವರೆಗೆ ಪೂರ್ತ, ಅಖಿಲಭಾರತ ಶಂಕರ ಸೇವಾಸಮಿತಿಯ ಜವಾಬ್ದಾರಿಯಲ್ಲಿ ಕೋಟಿನಾಮಾರ್ಚನೆ ನಡೆಯಿತು. ಭರತಖಂಡದ ಎಲ್ಲಾ ಕಡೆಗಳಿಂದಲೂ ಹಲವು ಸಾವಿರ ಸಂಖ್ಯೆಯಲ್ಲಿ ಭಕ್ತರು ಬಂದು ನೆರೆದಿದ್ದರು. ಆ ಹದಿನೆಂಟು ದಿನಗಳು ಶ್ರೀ ಜಗದ್ಗುರುಗಳು ಬೆಳಗೂ ಸಂಜೆಯೂ ಕೋಟಿ ಅರ್ಚನೆ ನಡೆಯುತ್ತಿದ್ದ ಸಮಯದಲ್ಲಿ ಶ್ರೀ ಶಾರದಾಂಬೆಯ ದೇವಾಲಯಕ್ಕೆ ಬಿಜಯಮಾಡಿ ಭಕ್ತರುಗಳಿಗೆ ದರ್ಶನ ನೀಡುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೯

ಮೂರನೆಯ ವಿಜಯ ಯಾತ್ರೆ

ಶಿಷ್ಯರ ಬೇಡಿಕೆಯನ್ನು ಲಾಲಿಸಿ ಶ್ರೀ ಜಗದ್ಗುರುಗಳು ೧೯೬೭ನೆಯ ಜನವರಿ ಹದಿನೈದನೆಯ ತಾರೀಖು ಪುನಃ ದಕ್ಷಿಣದೇಶ ಯಾತ್ರೆಗೆ ತೊಡಗಿದರು. ೧೯೬೪ರ ಅನಂತರ ತಮಿಳುನಾಡಿನಲ್ಲಿ ಯಾತ್ರೆ ಇರಲಿಲ್ಲವಾದ್ದರಿಂದ ಹಲವರು ಮತ್ತೊಮ್ಮೆ ದಯಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಗುರುಗಳು ಶೃಂಗೇರಿಯನ್ನು ಬಿಟ್ಟು ತಾಲಕ್ಕೋಡು, ಕಾರ್ಗಲ್ ಮಾರ್ಗವಾಗಿ ಗೋಕರ್ಣಕ್ಕೆ ಹೋಗಿ, ಸಮುದ್ರದಲ್ಲಿ ಸ್ನಾನಮಾಡಿ ಮೂರ್ತಿಗಳಿಗೆ ಪೂಜೆ ನಡಸಿದರು. ಗೋಕರ್ಣದಲ್ಲಿದ್ದ ಶೃಂಗೇರೀ ಮಠದ ಕಟ್ಟಡ ಈಚೆಗೆ ಶಿಥಿಲವಾಗಿದ್ದದ್ದರಿಂದ ಹೊಸ ಕಟ್ಟಡಕ್ಕೆ ಅಸ್ತಿವಾರಶಿಲೆಯನ್ನು ಶ್ರೀ ಜಗದ್ಗುರುಗಳು ನಾಟಿದರು.

ಗೋಕರ್ಣದಿಂದ ಶಿವಮೊಗ್ಗ, ಕಡೂರು, ಅರಸಿಕೆರೆ – ಈ ಊರುಗಳಲ್ಲಿ ತಂಗಿ ಜನವರಿ ಕಡೆಯ ವಾರದಲ್ಲಿ ಬೆಂಗಳೂರಿಗೆ ಬಂದರು. ಫೆಬ್ರುವರಿ ಮೊದಲವಾರದಲ್ಲಿ ಬೆಂಗಳೂರಿನಿಂದ ಹೊರಟು ತಿರುಪತ್ತೂರು, ರಾಣಿಪೇಟೆ ಮೊದಲಾದ ಊರುಗಳಲ್ಲಿ ಶಿಷ್ಯರುಗಳನ್ನು ಅನುಗ್ರಹಿಸಿ ಫೆಬ್ರುವರಿ ೫ನೆಯ ತಾರೀಖು ಮದರಾಸಿಗೆ ಬಂದು ಸೇರಿದರು. ತ್ಯಾಗರಾಜನಗರದ ಶೃಂಗೇರೀ ಶ್ರೀ ಶಂಕರಮಠದಲ್ಲಿ ಹೊಸದಾಗಿ ಕಟ್ಟಿದ್ದ ಪ್ರವಚನಮಂಟಪವನ್ನು ಆರಂಭಗೊಳಿಸಿದರು. ಅಣ್ಣಾಮಲೆಪುರದ ಪ್ರವಚನಮಂದಿರದಲ್ಲಿ ಫೆಬ್ರುವರಿ ೯ನೆಯ ತಾರೀಖು ಶ್ರೀ ಶಾರದಾ ಮತ್ತು ಶ್ರೀ ಶಂಕರಾಚಾರ್ಯ ಮೂರ್ತಿ ಪ್ರತಿಷ್ಠಾ ಕುಂಭಾಭಿಷೇಕವನ್ನು ನೆರವೇರಿಸಿದರು. [illegible]ನೆ ಸನ್ನಿಧಿಯಲ್ಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಲವು ಹೊಸ ಗ್ರಂಥಗಳನ್ನು ಪ್ರಕಟಿಸಲಾಯಿತು. ಇದಕ್ಕೆ ಸೇರಿದಂತೆಯೇ ಮದರಾಸು ರಾಜಾ ಅಣ್ಣಾಮಲೈನಗರದಲ್ಲಿ ಶತಚಂಡೀ, ಮಹಾರುದ್ರ ಮೊದಲಾದ ಯಾಗಗಳು ಶ್ರೀ ಜಗದ್ಗುರುಗಳ ಸಮ್ಮುಖದಲ್ಲಿ ನಡೆದವು. ಈ ವರ್ಷದ ಶಿವರಾತ್ರಿ ಪೂಜೆಯನ್ನು ತ್ಯಾಗರಾಜನಗರದ ಶೃಂಗೇರೀ ಶ್ರೀ ಶಂಕರ ಮಠದಲ್ಲಿ ಹೊಸದಾಗಿ ನಿರ್ಮಿಸಿದ್ದ ವಿಶಾಲವಾದ ಮಂಟಪದಲ್ಲಿ ನಡಸಿದರು. ರಾತ್ರಿಯೆಲ್ಲಾ ನಡೆದ ಅಭಿಷೇಕಕ್ಕಾಗಿ ಹಂಡೆ ಹಂಡೆಗಳಷ್ಟು ಹಾಲನ್ನು ಜನರು ತಂದು ಸಮರ್ಪಿಸಿದರು.

ಶ್ರೀ ಜಗದ್ಗುರುಗಳು ಮದರಾಸಿನಿಂದ ಹೊರಟು ತಿಂಡಿವನ, ವೃದ್ಧಾಚಲ, ಚಿದಂಬರ, ಮೊದಲಾದ ಸ್ಥಳಗಳಲ್ಲಿ ಯಾತ್ರೆಮಾಡಿ ಶ್ರೀರಂಗಕ್ಕೆ ಬಂದರು. ಶ್ರೀ ಶಂಕರ ಗುರುಕುಲದಲ್ಲಿ ಪೂಜೆ ನಡಸಿದರು. ಇದರ ಸ್ಥಾಪಕರಾದ ಶ್ರೀ ಟಿ. ಕೆ. ಬಾಲಸುಬ್ರಮಣ್ಯಯ್ಯರಿಂದ ಸ್ಥಾಪಿಸಲ್ಪಟ್ಟ **ಶ್ರೀ ವಾಣೀ ವಿಲಾಸಂ** ಅಚ್ಚುಕೂಟಕ್ಕೆ ಬಿಜಯಮಾಡಿ, ಅದರ ಕೆಲಸಗಳನ್ನು ವೀಕ್ಷಿಸಿ ಎಲ್ಲರನ್ನೂ ಆಶೀರ್ವದಿಸಿದರು. ತಿರುಚ್ಚಿಯಲ್ಲಿ ಹಲವು ಸ್ಥಳಗಳಿಗೆ ಬಿಜಯಮಾಡಿ, ವೈಗೈ ನಲ್ಲೂರು, ಮಣತ್ತಟ್ಟೈಗೆ ಹೋಗಿ ಶಿಷ್ಯರನ್ನು ಅನುಗ್ರಹಿಸಿ ದಿಂಡಿಗಲ್ಲಿಗೆ ಪಾದಬೆಳೆಯಿಸಿದರು.

ದಿಂಡಿಗಲ್ಲಿನಲ್ಲಿ ಒಂದು ದಿನ ತಂಗಿದ್ದು ಅಲ್ಲಿಂದ ತೆಂಗರೆ, ಮುಳ್ಳಿಪಳ್ಳಿ, ಮುನ್ನಾದಿಮಂಗಲಮ್, ವತ್ತಲಗುಂಡು, ಶೋಳವನ್ದಾನ್ ಮೊದಲಾದ ಗ್ರಾಮಗಳಿಗೆ ಹೋಗಿ ಅಲ್ಲಿ ಶಿಷ್ಯರುಗಳ ಸತ್ಕಾರಗಳನ್ನು ಅಂಗೀಕರಿಸಿ ಮಧುರೆಗೆ ಹೋಗಿ ಸೇರಿದರು. ಅಲ್ಲಿ ಎರಡು ದಿನ ತಂಗಿದ್ದು ಹಲವು ಸಂಸ್ಥೆಗಳ ಸೇವೆಗಳನ್ನು ಕೈಗೊಂಡರು. ತಿರುನೆಲ್ವೇಲಿಗೆ ಬಿಜಯಮಾಡಿದರು. ಅಲ್ಲಿ ಮೂರು ದಿನ ತಂಗಿ ನಾಗರಕೋಯಿಲಿಗೆ ಹೋಗಿ, ಅಲ್ಲಿಂದ ತಿರುವನಂತಪುರಕ್ಕೆ ಬಂದು, ಹೊಸ ಶಂಕರ ಮಠದಲ್ಲಿ ತಂಗಿದ್ದರು. ಅಲ್ಲಿ ಜಗದ್ಗುರುಗಳ ಸನ್ನಿಧಿಯಲ್ಲಿ ಮಹಾರುದ್ರ ನಡೆಯಿತು. ಶ್ರೀ ಪದ್ಮನಾಭಸ್ವಾಮಿ ಆಲಯಕ್ಕೆ ಹೋಗಿ ದರ್ಶನಮಾಡಿ ಶಂಕರಮಠದಲ್ಲಿ ಪುಸ್ತಕಾಲಯವನ್ನು ತೆರೆದು, ಭಕ್ತರುಗಳಿಗೆ ಆಶೀರ್ವಾದಮಾಡಿ ಮಹಾರಾಜರನ್ನೂ ಅವರ ಕುಟುಂಬದವರನ್ನೂ ಅನುಗ್ರಹಿಸಿ, ಆಲಪ್ಪುಳ್ಳೈಗೆ ಹೋದರು. ಅಲ್ಲಿ [illegible] ದಿನ ತಂಗಿ [illegible] ೧೯೬೬ನೆಯ ಮಾರ್ಚ್

Sri Vidyabharathi Book Centre, Sringeri

CC-O. In Public Domain. Digitized by eGangotri

೫ನೆಯ ತಾರೀಖಿನಂದು ಕಾಲಟಿಗೆ ಬಂದರು. ಅಲ್ಲಿಂದ ಕೊಚ್ಚಿ ಎರ್ಣಾಕುಲಕ್ಕೆ ಹೋಗಿ ಕೊಚ್ಚಿ ಮಹಾರಾಜರ ಸೇವೆಗಳನ್ನು ಸ್ವೀಕರಿಸಿ, ಭಕ್ತರುಗಳನ್ನು ಅನುಗ್ರಹಿಸಿ, ಪರ್ಲೆಗೂ, ಕೆಲವು ಪಾಲಕ್ಕಾಡು ಗ್ರಾಮಗಳಿಗೂ ಹೋಗಿ, ನೂರಣಿ ಅಗ್ರಹಾರದಲ್ಲಿ ಪರಾತ್ಪರಗುರು ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳ ಆರಾಧನೆಯನ್ನು ನಡಿಸಿ, ದತ್ತಮಂಗಲಂ ಮಾರ್ಗವಾಗಿ ಕೊಯಮತ್ತೂರಿಗೆ ಬಂದು ಸೇರಿದರು. ಎರಡು ದಿನ ಕೋವೈಯಲ್ಲಿ ತಂಗಿಬಿಟ್ಟು, ಗಾಂಗೇಯಂ, ಕೊಡುಮುಡಿ ಮಾರ್ಗವಾಗಿ ಕರೂರಿಗೆ ಹೋಗಿ ಅಲ್ಲಿ ಶಿಷ್ಯರುಗಳನ್ನು ಅನುಗ್ರಹಿಸಿ, ಹತ್ತಿರದಲ್ಲೇ ಇರುವ ತಿರುಮನಿಲೈ ಊರಿಗೆ ಬಿಜಯಮಾಡಿದರು. ಮರು ದಿನ ಕೃಷ್ಣರಾಯಪುರಕ್ಕೂ ಮಹಾದಾನಪುರಕ್ಕೂ, ಹೋಗಿ ಶಿಷ್ಯರುಗಳಿಗೆ ಆಶೀರ್ವಾದ ಮಾಡಿ, ಕರೂರಿಗೆ ಹಿಂದಿರುಗಿ ಬಂದು, ನೆರೂರಿಗೆ ಹೋಗಿ, ಶ್ರೀ ಸದಾಶಿವ ಬ್ರಂಹ್ಮೇಂದ್ರರ ಸಮಾಧಿಯ ದರ್ಶನಮಾಡಿ, ತೊಟ್ಟಿಯಕ್ಕೆ ಹೋಗಿ ಶ್ರೀ ಕಣ್ಣಾಯಿರಂಪಿಳ್ಳೆಯಿಂದ ಉಪಚರಿಸಲ್ಪಟ್ಟು, ನಾಮಕ್ಕಲ್ಲಿಗೆ ಹೋಗಿ ಶ್ರೀ ನಾಮಗಿರಿ ಅಮ್ಮನವರನ್ನೂ ಸುಬ್ರಹ್ಮಣ್ಯಸ್ವಾಮಿಯನ್ನೂ ದರ್ಶಿಸಿ, ಸೇಲಮಿಗೆ ೧೩-೩-೧೯೬೩ರಲ್ಲಿ ಬಿಜಯಮಾಡಿದರು. ಕೆಲವುಕಾಲದಿಂದ ಮಳೆಯಿಲ್ಲದೆ ತಪಿಸುತ್ತಿದ್ದ ಸೇಲಂ ಪಟ್ಟಣಕ್ಕೆ ಜಗದ್ಗುರುಗಳು ಬಿಜಯಮಾಡಿದೊಡನೆಯೇ ಸಾಕಷ್ಟು ಹುಯ್ದು ಮಳೆಯಿಂದ ಎಲ್ಲ ನಾಗರಿಕರಿಗೂ ಪರಮಸಂತೋಷವುಂಟಾಯಿತು. ಸೇಲಮಿನಲ್ಲಿ ಮಕ್ಕಳ ಪಾಠಶಾಲೆ ಮೊದಲಾದ ಕೆಲವು ಸಂಸ್ಥೆಗಳಿಗೆ ಹೋಗಿ ನೆರೆದಿದ್ದವರನ್ನೆಲ್ಲ ಆಶೀರ್ವದಿಸಿ, ೪ ದಿನ ಸೇಲಂ ಶೃಂಗೇರೀಮಠದಲ್ಲಿ ತಂಗಿದ್ದು. ಅಲ್ಲಿಂದ ಪುಗಳೂರಿಗೆ ಹೋಗಿ ಶಿಷ್ಯರಿಗೆ ಅನುಗ್ರಹ ಮಾಡಿ, ತಿರುಪ್ಪೂರಿಗೆ ದಯಮಾಡಿದರು.

ಗುರುಗಳು ಮರುದಿನ ಗೋಪಿಚೆಟ್ಟಿಪಾಳೆಯಕ್ಕೆ ಬಿಜಯಮಾಡಿದರು. ಅಲ್ಲಿ ಡಾಕ್ಟರ್ ವೆಂಕಟರಾಮಯ್ಯರವರ ಜ್ಞಾಪಕಾರ್ಥವಾಗಿ ತಮಗೆ ಸಮರ್ಪಿಸಲ್ಪಟ್ಟ ಕಟ್ಟಡವನ್ನು ತೆರೆದು ಆರಂಭಗೊಳಿಸಿದರು. ಅವತ್ತು ಸಂಜೆ ಗೋಪಿಯಿಂದ ಕೊಯಮತ್ತೂರಿಗೆ ಹೋಗಿ ಗುರುಭಕ್ತ ಚೂಡಾಮಣಿ ಬಿನ್ನಿ ಶ್ರೀ ಸುಬ್ಬರಾವ್ ಅವರು ೨೫ ವರ್ಷಗಳಿಂದಲೂ ಎಡೆಬಿಡದೆ ನಡಸುತ್ತಿದ್ದ ಶ್ರೀರಾಮನವಮಿ ಉತ್ಸವವನ್ನು ಆರಂಭಗೊಳಿಸಿ ರಾತ್ರಿ ಪೂಜೆಗೆ ಗೋಪಿಗೆ ಹಿಂದಿರುಗಿದರು. ಮರುದಿನ ಗೋಪಿಯಲ್ಲಿ ಪರಮಗುರು ಸಚ್ಚಿದಾನಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳ ಆರಾಧನೆ (೨೦-೩-೧೯೬೯) ನಡೆಯಿತು. ಅಂದು ಸಂಜೆ ಸತ್ಯಮಂಗಲಕ್ಕೆ ಹೋಗಿ ಒಂದು ದಿನ ತಂಗಿದ್ದು ಮಾರನೆಯ ದಿನ ನಂಜನಗೂಡಿಗೆ ಹೋಗಿ ಶ್ರೀಕಂಠೇಶ್ವರದೇವಸ್ಥಾನದಲ್ಲೂ ದತ್ತಾತ್ರೇಯ ದೇವಾಲಯದಲ್ಲೂ ದೇವತಾ ದರ್ಶನಮಾಡಿಕೊಂಡು ಅಲ್ಲಿಂದ ಮೈಸೂರಿಗೆ ಬಿಜಯಮಾಡಿದರು.

ಮೈಸೂರಿನಲ್ಲಿ ಮಹಾರಾಜರ ಪ್ರತಿನಿಧಿಗಳು, ನಗರಸಭೆಯವರು ಮತ್ತು ಇತರ ಸಾವಿರಾರು ಜನಗಳಿಂದಲೂ ಆನೆ, ಕುದುರೆ ಮೊದಲಾದವುಗಳಿಂದಲೂ ಸ್ವಾಗತಿಸಲ್ಪಟ್ಟ ಗುರುಗಳು ಪಾದಚಾರಿಯಾಗಿ ಮೂರು ಮೈಲಿ ಉದ್ದದ ಮೆರವಣಿಗೆಯಲ್ಲಿ ಮೈಸೂರಿನ ಶ್ರೀ ಶಂಕರಾಲಯಕ್ಕೆ ಬಂದು ಸೇರಿದರು. ‘ಮಹೀಸುರ” ಎಂಬ ಪದ (ಭೂಮಿಯಲ್ಲಿ ದೇವರುಗಳು) ಮೈಸೂರೆಂದು ಮಾರ್ಪಾಟುಹೊಂದಿದ್ದಕ್ಕೆ ತಕ್ಕಂತೆ ಅಂದು ಭಕ್ತರು ಮಾಡಿದ ಸತ್ಕಾರಗಳನ್ನು ಶ್ರೀ ಜಗದ್ಗುರುಗಳು ಬಹಳವಾಗಿ ಕೊಂಡಾಡಿದರು. ಮರುದಿನ ಮೈಸೂರು ಮಹಾರಾಜರಿಂದ ಆಹ್ವಾನಿಸಲ್ಪಟ್ಟು ಅರಮನೆಗೆ ಬಿಜಯಮಾಡಿ, ಮಹಾರಾಜರ ಕುಟುಂಬದವರನ್ನು ಆಶೀರ್ವದಿಸಿ, ಆ ಮರುದಿನವೂ ಮಹಾರಾಜರ ಆಹ್ವಾನಕ್ಕೆ ಸಮ್ಮತಿಸಿ ಅರಮನೆಗೆ ಹೋಗಿ, ಪಾದಪೂಜೆಗಳನ್ನಂಗೀಕರಿಸಿ, ಶ್ರೀ ಪಿ. ಆರ್. ಹರಿಹರಯ್ಯರವರಿಂದ ಶ್ರೀ ಶಂಕರ ಮಠದಲ್ಲಿ ಸ್ಥಾಪಿಸಲ್ಪಟ್ಟ ‘ಶ್ರೀ ಶಂಕರ ಕೃಪಾ ಮುದ್ರಣ ಪ್ರಕಾಶನಾಲಯಮ್” ಎಂಬ ಮುದ್ರಣಶಾಲೆಯನ್ನು ಆರಂಭಗೊಳಿಸಿದರು. ಶ್ರೀ ಟಿ. ರಾಮಲಿಂಗೇಶ್ವರರಾವ್ ಅವರಿಂದ ಬರೆಯಲ್ಪಟ್ಟು ಶ್ರೀ ವೈ. ಎಸ್. ರಾಮಸ್ವಾಮಿಯವರಿಂದ ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟ “Sringeri Revisited” (ಶೃಂಗೇರಿಯ ಪುನರ್ದರ್ಶನ) ಎಂಬ ಗ್ರಂಥವನ್ನು ಪ್ರಕಾಶಪಡಿಸಿದರು. ಮೈಸೂರಿನಲ್ಲಿ ಎರಡು ದಿನ ಇದ್ದು ಕೃಷ್ಣರಾಜಸಾಗರ, ಹಾಸನ ಮಾರ್ಗವಾಗಿ ೩೧-೩-೧೯೬೯ರಂದು ಶೃಂಗೇರಿಯನ್ನು ಸೇರಿದರು.

೧೯೬೯ನೆಯ ವರ್ಷ ಜನವರಿ ೧೫ನೆಯ ತಾರೀಖು ಪ್ರಾರಂಭವಾದ ೩ನೆಯ ವಿಜಯಯಾತ್ರೆಯಲ್ಲಿ ಎರಡೂವರೆ ತಿಂಗಳೊಳಗಾಗಿಯೇ (೩೧-೩-೬೯ ರೊಳಗೆ) ಬಹು ವೇಗವಾಗಿ ತಮಿಳುನಾಡು, ಕೇರಳ, ಮೈಸೂರು, ಪ್ರಾಂತ್ಯಗಳನ್ನು ಸುತ್ತಿ ಬಂದು ಶ್ರೀ ಜಗದ್ಗುರುಗಳಿಗೆ ಶರೀರಶ್ರಮ ಬಹಳವಾಗಿತ್ತು.

Sri Vidyabharathi Book Centre, Sringeri

 CC-0. In Public Domain. Digitized by eGangotri

ಆದರೂ ಅವರನ್ನು ಪ್ರತ್ಯಕ್ಷವಾಗಿ ದರ್ಶನಮಾಡಿ ಅನುಗ್ರಹಪಡೆದ ಭಕ್ತಕೋಟಿಗೆ ಅತ್ಯಂತ ಸಂತೋಷವಾಯಿತು. ಎರಡು ಮೂರು ವರ್ಷಗಳಿಗೊಂದುಸಲ ಆದರೂ ಈ ರೀತಿ ವಿಜಯಯಾತ್ರೆಗಳನ್ನು ನಡಸಿ ಶಿಷ್ಯರನ್ನು ಅನುಗ್ರಹಿಸ ಬೇಕೆಂದು ಹಲವಾರು ಪ್ರದೇಶಗಳಲ್ಲಿರುವ ಶಿಷ್ಯರುಗಳು ಪ್ರಾರ್ಥಿಸಿದರು.

೧೯೬೯ನೆಯ ವರ್ಷದ ಚಾತುರ್ಮಾಸ್ಯ, ಗಣಪತಿಸಭೆ, ನವರಾತ್ರಿ, ವರ್ಧಂತಿ—ಇವುಗಳು ಶೃಂಗೇರಿಯಲ್ಲಿ ನಡೆದವು. ಈ ವರ್ಷ ನವರಾತ್ರಿಯಲ್ಲಿನ ಒಂದು ವಿಶೇಷವನ್ನು ಎತ್ತಿ ಹೇಳಬೇಕು. ಶ್ರೀಮತಿ ರಾಜಮ್ ನಾಗರಾಜನ್ ಶ್ರೀಮತಿ ಸೀತಾಲಕ್ಷ್ಮಿ ಸುಬ್ರಮಣ್ಯಮ್ ಇವರುಗಳು ವಿಶೇಷವಾಗಿ ಶ್ರಮವಹಿಸಿ ಅನೇಕ ಭಕ್ತೆಯರಿಂದ ಒಂದು ನಿಧಿಯನ್ನು ಕೂಡಿಸಿದರು ; ಸುಮಾರು ೨೫,೦೦೦ ರೂಪಾಯಿ ಬೆಲೆಯುಳ್ಳ ನವರತ್ನಗಳಿಂದ (ಇವುಗಳಲ್ಲಿ ಹೆಚ್ಚಾಗಿ ಒಳ್ಳೆಯ ಮುತ್ತು, ವಜ್ರ, ಹವಳ, ಪಚ್ಚೆ, ಕೆಂಪು) ಖಚಿತವಾದ ಮತ್ತು ಹಂಸಲಕ್ಷ್ಮಿ ಗಳೊಡನೆ ಕೂಡಿದ ಎರಡು ಮಾಂಗಲ್ಯಗಳನ್ನು ಮಾಡಿಸಿ ಶ್ರೀ ಶಾರದಾಂಬೆಗೆ ಸಮರ್ಪಿಸಿದರು. ಇವುಗಳನ್ನು ವಿಧ್ಯುಕ್ತರೀತಿಯಲ್ಲಿ ಅಮ್ಮನವರಿಗೆ ಧರಿಸಲಾಯಿತು. ಇದರ ಜೊತೆಗೆ ಅಖಿಲ ಭಾರತ ಸುವಾಸಿನಿಯರ ಭಿಕ್ಷೆಯೂ ಪಾದಪೂಜೆಯೂ ನೆರವೇರಿದವು. ಕೇರಳದಿಂದ ಬಂದಿದ್ದ ಪಂಚವಾದ್ಯ ವಿದ್ವಾಂಸರುಗಳ ಸೇವೆಯೊಡನೆ ಉತ್ಸವ ಬಹು ವಿಜೃಂಭಣೆಯಿಂದ ನೆರವೇರಿತು.

———

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೧೦

ಸುರೇಶ್ವರ ಅಧಿಷ್ಠಾನದ ಕುಂಭಾಭಿಷೇಕ

೧೯೭೦ನೆಯ ವರ್ಷದಲ್ಲಿ ಶೃಂಗೇರಿಯ ಚರಿತ್ರೆಯಲ್ಲಿ ಒಂದು ಮುಖ್ಯ ಕಾರ್ಯವು ನೆರವೇರಿತು. ಶ್ರೀ ಆದಿ ಶಂಕರ ಭಗವತ್ಪಾದರಿಂದ ಶೃಂಗೇರಿ ಶ್ರೀ ಶಾರದಾಪೀಠಕ್ಕೆ ನಿಯಮಿಸಲ್ಪಟ್ಟ ಮೊದಲನೆಯ ಅಧಿಪತಿ ಶ್ರೀ ಸುರೇಶ್ವರಾಚಾರ್ಯರೆಂಬುದು ಎಲ್ಲರೂ ಅರಿತದ್ದೇ. ಶ್ರೀ ಸುರೇಶ್ವರಾಚಾರ್ಯರ ಅಧಿಷ್ಠಾನವು ಶೃಂಗೇರಿಯಲ್ಲಿ ಶ್ರೀ ಶಾರದಾಂಬಾದೇವಾಲಯಕ್ಕೆ ಸೇರಿಕೊಂಡದ್ದೋ ಎಂಬ ಹಾಗೆ ದಕ್ಷಿಣಭಾಗದಲ್ಲಿ ಏರ್ಪಟ್ಟಿದೆ. ಇದು ಬಹು ಚಿಕ್ಕ ಕಟ್ಟಡವಾಗಿತ್ತು. ಮೊಟ್ಟಮೊದಲನೆಯ ಪೀಠಾಧಿಪತಿಗಳ ಸಮಾಧಿಯು ವಿಸ್ತಾರವಾದ ಮಂಟಪಗಳಿಂದ ಕೂಡಿರಬೇಕೆಂಬುದು ಈಗಿನ ಜಗದ್ಗುರುಗಳ ಅಭಿಪ್ರಾಯ ಆಗಿತ್ತು.

ಅದನ್ನರಿತು ಆಂಧ್ರಪ್ರದೇಶದ ಒಂಗೋಲ್‌ನಿವಾಸಿಗಳಾದ ಗಣೇಶಶೆಟ್ಟಿ ಎಂಬ ಮಹಾಭಕ್ತರು ತಾವಾಗಿಯೇ ಜಗದ್ಗುರುಗಳ ಸನ್ನಿಧಿಗೆ ಬಂದು ಆ ಕಟ್ಟಡದ ಪುನರ್ನಿರ್ಮಾಣಕ್ಕೆ ಆವಶ್ಯಕವಾದ ಹಣವನ್ನು ತಾವೇ ಸಮರ್ಪಿಸುವುದಕ್ಕೆ ಅನುಮತಿಕೊಡಬೇಕೆಂದು ಪ್ರಾರ್ಥಿಸಿದರು. ಇದನ್ನು ಜಗದ್ಗುರುಗಳು ಒಪ್ಪಿಕೊಂಡರು ; ಕಟ್ಟಡದ ಕೆಲಸ ಪ್ರಾರಂಭವಾಯಿತು. ಬಹು ಶೀಘ್ರದಲ್ಲಿಯೇ ಇನ್ನೂ ಹಲವರು ಶಿಷ್ಯರೂ ಇದಕ್ಕೆ ಕಾಣಿಕೆಗಳನ್ನು ಸಮರ್ಪಿಸಿದರು.

ಶ್ರೀ ಸುರೇಶ್ವರಾಚಾರ್ಯ ಅಧಿಷ್ಠಾನ ಜೀರ್ಣೋದ್ಧಾರ, ಕುಂಭಾಭಿಷೇಕ ವೈಭವಗಳನ್ನು ನಿರ್ವಹಿಸುವುದಕ್ಕೆ ಶ್ರೀ ಜಗದ್ಗುರುಗಳು ಶ್ರೀ ಟಿ. ಎಲ್. ವೆಂಕಟ

Sri Vidyabharathi Book Centre, Sringeri

CC-0. In Public Domain. Digitized by eGangotri

ರಾಮಯ್ಯರ್ (ಅಧ್ಯಕ್ಷರು), ಬೆಂಗಳೂರಿನ ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಈರೋಡು ಶ್ರೀ ಕೆ. ವಿ. ಸುಬ್ಬರತ್ನಮಯ್ಯರ್ (ಕಾರ್ಯದರ್ಶಿಗಳು), ಮತ್ತೂ ಹಲವರು ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ನಿಯಮಿಸಿದರು. ೧೦-೫-೧೯೭೦ರಲ್ಲಿ ಈ ಕುಂಭಾಭಿಷೇಕವನ್ನು ಶ್ರೀ ಜಗದ್ಗುರುಗಳು ನಡಸಿದರು. ಅಖಿಲ ಭಾರತದಿಂದಲೂ ಸಾವಿರ ಸಾವಿರ ಸಂಖ್ಯೆಯಲ್ಲಿ ಜನಗಳು ಬಂದು ಸೇರಿದ್ದರು. ಮದರಾಸಿನ ಶ್ರೀ ವೈದ್ಯ ಸುಬ್ರಮಣ್ಯ ಅಯ್ಯರ ಉದಾರ ಸಹಾಯದಿಂದ ತಯಾರಿಸಲ್ಪಟ್ಟ ಶ್ರೀ ಸುರೇಶ್ವರಾಚಾರ್ಯರ ಅಮೃತಶಿಲಾ ಮೂರ್ತಿಯನ್ನೂ ಇದೇ ಸಮಯದಲ್ಲಿ ಹಲವು ಶತಮಾನಗಳಿಂದಲೂ ನೆಲೆಸಿದ್ದ ಬಾಣಲಿಂಗವನ್ನೂ ಅಧಿಷ್ಠಾನದಲ್ಲಿ ಸ್ಥಾಪಿಸಲಾಯಿತು.

ಈ ಕುಂಭಾಭಿಷೇಕದ ಸಂಬಂಧವಾಗಿ, ಶೃಂಗೇರಿಯಲ್ಲೇ, ಅಖಿಲ ಭಾರತ ಶಂಕರ ಸೇವಾಸಮಿತಿಯವರು ಭಾರತದ ಹಲವು ಕಲಾಶಾಲೆಗಳ ಮಹೋಪಾಧ್ಯಾಯರು(ಪ್ರೊಫೆಸರು)ಗಳನ್ನೊಳಗೊಂಡ ಒಂದು ವಿಮರ್ಶ ಸಭೆ (ಸಮೀಕ್ಷಾವಿಭಾಗ)ಯನ್ನು ೬-೫-೧೯೭೦ರಿಂದ ೧೦-೫-೧೯೭೦ರ ವರೆಗೆ ೫ ದಿನಗಳು ನಡಸಿದರು. ಕುಂಭಾಭಿಷೇಕೋತ್ಸವವನ್ನು ಮೈಸೂರು ಗವರ್ನರು ಶ್ರೀ ಧರ್ಮವೀರ ಅವರು ಆರಂಭಗೊಳಿಸಿದರು. ಸಮೀಕ್ಷಾವಿಭಾಗದಲ್ಲಿ ಚರ್ಚೆಗೆ ಬಂದ ವಿಷಯ, "ಶ್ರೀ ಆದಿಶಂಕರರು ಹಲವು ಕ್ಷೇತ್ರಗಳಲ್ಲಿ ಎಸಗಿದ ಕಾರ್ಯಗಳು" ಎಂಬುದು. ದಿಳ್ಳಿ, ಕಲ್ಕತ್ತ, ಉಜ್ಜಯಿನಿ, ಮೈಸೂರು ಪ್ರದೇಶ, ಕೇರಳ, ತೆಲುಗುದೇಶ, ತಮಿಳ್ನಾಡು ಮೊದಲಾದ ಎಲ್ಲಾ ಸ್ಥಳಗಳಿಂದಲೂ ವಿಮರ್ಶೆಯಲ್ಲಿ ಶ್ರದ್ಧಾಳುಗಳಾದ ಬಹುಮಂದಿ ಮಹೋಪಾಧ್ಯಾಯರು, ಪ್ರಾಚೀನ ಸಂಪ್ರದಾಯಗಳ ವಿಮರ್ಶವಿಚಕ್ಷಣರೆನಿಸಿದ ಅನೇಕ ವಿದ್ವಾಂಸರು ಈ ಚರ್ಚಾಸಭೆಯಲ್ಲಿ ಭಾಗವಹಿಸಿದರು. ಕೆಲವರು ವಿಮರ್ಶ ಪ್ರಬಂಧಗಳನ್ನು ಓದಿದರು. ಕೆಲವರು ಉಪನ್ಯಾಸಗಳನ್ನು ಕೊಟ್ಟರು. ಇದೇ ಸಮಯದಲ್ಲಿ ಗವರ್ನರ್ ಅವರಿಂದ ಸುರೇಶ್ವರನ್ನು ಕುರಿತ ಕೆಳಗೆ ಕಾಣಿಸಿರುವ ಹೊಸ ಪ್ರಕಟನೆಗಳನ್ನು ಪ್ರಕಾಶಪಡಿಸಲಾಯಿತು.

೧) ಶ್ರೀ ಸುರೇಶ್ವರ ಸ್ಮರಣ ಸಂಚಿಕೆ.

೨) ಶ್ರೀ ಸುರೇಶ್ವರರು (ಕನ್ನಡ)—ಶ್ರೀ ಕವಿ ನರಸಿಂಹಭಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

೩) ಶ್ರೀ ಸುರೇಶ್ವರರು (ಇಂಗ್ಲಿಷು)
—ಶ್ರೀ ಟಿ. ಎ. ರಾಮಲಿಂಗೇಶ್ವರರಾವ್.

೪) ನೈಷ್ಕರ್ಮ್ಯಸಿದ್ಧಿಃ —ಶ್ರೀ ಸುರೇಶ್ವರ ರಚಿತ.

೫) ನೈಷ್ಕರ್ಮ್ಯಸಿದ್ಧಿಸಾರಮ್ (ತಮಿಳು)
—ಶ್ರೀ ಕೆ. ವಿ. ಸುಬ್ಬರತ್ನಂ ಅಯ್ಯರ್.

೬) ಪಂಚೀಕರಣ ವಾರ್ತಿಕಮ್ (ಸಂಸ್ಕೃತ ವ್ಯಾಖ್ಯಾನದೊಡನೆ)
—ಶ್ರೀ ಸುರೇಶ್ವರ ರಚಿತ.

ಈ ಐದು ದಿನ ಸಂಜೆಗಳಲ್ಲೂ ನಡೆದ ಚರ್ಚಾಸಭೆಗಳಲ್ಲಿ ಶ್ರೀ ಜಗದ್ಗುರುಗಳವರೇ ಅಗ್ರಾಸನ ವಹಿಸಿ ಉಪದೇಶ ಭಾಷಣಗಳನ್ನು ಮಾಡಿದರು. ಕೊನೆಯಲ್ಲಿ ಜಗದ್ಗುರುಗಳು ಎಲ್ಲಾ ವಿದ್ವಾಂಸರಿಗೂ ಶಾಲು, ಸಂಭಾವನೆ ಮೊದಲಾದವನ್ನು ನೀಡಿದರು. ಈ ವಿಮರ್ಶಸಭೆಯಲ್ಲಿ ಜರುಗಿದ ನಡವಳಿಕೆಗಳನ್ನು ನೋಡಿ, ಕೇಳಿ, ಆನಂದಿಸುವುದಕ್ಕಾಗಿ ಹಲವು ಊರುಗಳಿಂದ ಬಹುಮಂದಿ ವಿದ್ವಾಂಸರು ಬಂದು ಸೇರಿದ್ದರು.*

೧೯೭೦ನೆಯ ವರ್ಷದ ಶ್ರೀಗಣಪತಿ ವಿದ್ವತ್ಸಭೆ, ನವರಾತ್ರಿ, ವರ್ಧಂತಿ—ಇವು ಶೃಂಗೇರಿಯಲ್ಲಿ ನಡೆದವು. "ಪ್ರತಿಪನ್ಮುಖ್ಯರಾಕಾಂತ ತಿಥಿಮಂಡಲ ಪೂಜಿತಾ" ಎಂಬುದಾಗಿ ಶ್ರೀ ಲಲಿತಾ ಸಹಸ್ರನಾಮದಲ್ಲಿರುವ ನಾಮಕ್ಕೆ ಅನುಗುಣವಾಗಿ ಶೃಂಗೇರಿಯಲ್ಲಿ ಪ್ರತಿವರ್ಷವೂ ಆಶ್ವೀಜ ಶುದ್ಧ ಪಾಡ್ಯ ಮೊದಲು ಪೌರ್ಣಿಮಾ ವರೆಗೂ ನವರಾತ್ರಿ ಉತ್ಸವವು ನಡೆಯುತ್ತದೆ ತುಂಗಾನದಿಯಲ್ಲಿ ನೆರವೇರುವ ತೆಪ್ಪೋತ್ಸವದೊಡನೆ ಈ ಉತ್ಸವವು ಕೊನೆಮುಟ್ಟುತ್ತದೆ. ಇದಕ್ಕೆ ಮುಂಚೆ ಮಹಾಲಯ ಅಮಾವಾಸ್ಯೆಯ ದಿನ

---

* ಮೇಲೆ ಕಂಡಂತೆ ಶ್ರೀ ಸುರೇಶ್ವರ ಕುಂಭಾಭಿಷೇಕ ಸಂಬಂಧವಾದ ಸಂಗತಿಗಳು, ವಿಮರ್ಶಸಭೆಯ ನಡವಳಿಕೆಗಳು—ಇವುಗಳ ವಿಷಯವಾಗಿ ಸಮಿತಿಯವರಿಂದ ಪ್ರತ್ಯೇಕವಾಗಿ ಎರಡು ಪುಸ್ತಕಗಳು ಪ್ರಚುರವಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಾರದಾಂಬೆಗೆ ಮಂಗಳಾಭಿಷೇಕ ನಡೆಯುವುದು. ಅವತ್ತು ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಆರಾಧನೆಯೂ ನಡೆಯುತ್ತದೆ. ಈ ಸಲ ಶೃಂಗೇರಿಯಲ್ಲಿ ನಡೆದ ಶ್ರೀ ಜಗದ್ಗುರುಗಳ ವರ್ಧಂತೀ ಮಹೋತ್ಸವದಲ್ಲಿ ಮೈಸೂರು ಹೈಕೋರ್ಟ್ ಜಡ್ಜ್ ಶ್ರೀ ಇ. ಎಸ್. ವೆಂಕಟರಾಮಯ್ಯ, ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಬ್ರಹ್ಮಾನಂದರೆಡ್ಡಿ ಮೊದಲಾದ ಪ್ರಮುಖರು ಬಂದು ಪಾಲ್ಗೊಂಡರು. ಶ್ರೀ ಬ್ರಹ್ಮಾನಂದರೆಡ್ಡಿಯವರು ಶ್ರೀ ಶಾರದಾಂಬಾ ದೇವಾಲಯದ ಮುಂದಿನ ಗೋಪುರದ ಕಲಶಗಳ ಸ್ವರ್ಣ ಲೇಪನಕ್ಕಾಗಿ ೫೦೦೦ ರೂಪಾಯಿಗಳನ್ನು ಗುರುಕಾಣಿಕೆಯಾಗಿ ಸಮರ್ಪಿಸಿದರು.

ಅಧ್ಯಾಯ ೧೧

ನಾಲ್ಕನೆಯ ಯಾತ್ರೆ

೧೯೭೧ನೆಯ ಫೆಬ್ರುವರಿ ೧೫ನೆಯ ತಾರೀಖು ಶ್ರೀ ಜಗದ್ಗುರುಗಳು ಶೃಂಗೇರಿಯಿಂದ ಯಾತ್ರೆ ಹೊರಟು ಹಲವು ಊರುಗಳಲ್ಲಿ ತಂಗಿ ೨೨ನೆಯ ತಾರೀಖು ಬೆಂಗಳೂರಿಗೆ ಬಿಜಯಮಾಡಿದರು. ಶಿವರಾತ್ರಿ ಪೂಜಾದಿಗಳು ಈಗ ಇಲ್ಲಿಯೇ ನಡೆದವು. ಮಾರ್ಚಿ ೧ರಂದು ಬೆಳಗ್ಗೆ ಬೆಂಗಳೂರಿನಿಂದ ೩೦ ಮೈಲಿ ದೂರದಲ್ಲಿರುವ ಶಿವಗಂಗೆಗೆ ಬಿಜಯಮಾಡಿ ಅಲ್ಲಿರುವ ಪೀಠಾಧಿಪತಿಗಳಿಂದಲೂ ಅವರ ಶಿಷ್ಯಸ್ವಾಮಿಗಳಿಂದಲೂ ಸ್ವಾಗತಿಸಲ್ಪಟ್ಟು ಪಾದಪೂಜೆಗಳನ್ನು ಸ್ವೀಕರಿಸಿ, ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನದ ಮೇಲೆ ಹೊಸದಾಗಿ ಕಟ್ಟಿದ್ದ ಗೋಪುರಕ್ಕೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಗಣಪತಿ, ದಕ್ಷಿಣಾಮೂರ್ತಿ, ದಂಡಪಾಣಿ ಮೂರ್ತಿಗಳಿಗೂ ಪ್ರತಿಷ್ಠಾ ಕುಂಭಾಭಿಷೇಕಗಳನ್ನು ನಡಸಿ, ಶಿವಗಂಗಾ ಬೆಟ್ಟದಲ್ಲಿರುವ ಶ್ರೀ ಶಂಕರಾಚಾರ್ಯರ ಗುಹೆಗೆ ಹೋಗಿಬಂದು, ಶ್ರೀ ಗಂಗಾಧರೇಶ್ವರ, ಸ್ವರ್ಣಾಂಬಿಕಾ ಮೂರ್ತಿಗಳನ್ನು ದರ್ಶಿಸಿ ಸಂಜೆ ಬೆಂಗಳೂರಿಗೆ ಹಿಂದಿರುಗಿದರು.

ಬೆಂಗಳೂರು ಶ್ರೀ ಶಂಕರಮಠದಲ್ಲಿ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ೧೯೧೧ರಲ್ಲಿ ಭಾರತೀಯ ಗೀರ್ವಾಣ ಪ್ರೌಢ ವಿದ್ಯಾಭಿವರ್ಧಿನೀ ಪಾಠಶಾಲೆಯನ್ನು ಸ್ಥಾಪಿಸಿ ೬೦ ವರ್ಷಗಳು ಪೂರ್ತಿಯಾದುದರಿಂದ ೧೯೭೧ ಮಾರ್ಚಿ ೬ನೆಯ ತಾರೀಖಿನಿಂದ ೯ನೆಯ ತಾರೀಖು ಪೂರ್ತ ಪಾಠಶಾಲೆಯ ವಜ್ರಮಹೋತ್ಸವದ ಆಚರಣೆಯು ಶ್ರೀ ಜಗದ್ಗುರುಗಳ ಸನ್ನಿಧಾನದಲ್ಲಿ ಬಹು ಯಶಸ್ವಿಯಾಗಿ ನೆರವೇರಿತು. ಭಾರತದ ಉಪರಾಷ್ಟ್ರಪತಿ ಘನವೆತ್ತ ಡಾಕ್ಟರ್ ಜಿ. ಎಸ್. ಪಾಠಕ್ ಅವರು ವಜ್ರಮಹೋತ್ಸವವನ್ನು ಆರಂಭಗೊಳಿಸಿ ಪ್ರಶಂಸಾಭಾಷಣಮಾಡಿದರು. ಶೃಂಗೇರೀ ಜಗದ್ಗುರುಗಳೂ ಪುರಿಯ ಶ್ರೀ ಜಗದ್ಗುರುಗಳೂ ಅನುಗ್ರಹ ಭಾಷಣಗಳನ್ನುಮಾಡಿ ಆಶೀರ್ವದಿಸಿದರು. ಮೈಸೂರು ಗವರ್ನರ್ ಶ್ರೀ ಧರ್ಮವೀರ ಅವರೂ ಬಿಜಯ ಮಾಡಿದರು. ಇದಕ್ಕೆ ಸಂಬಂಧಿಸಿದಂತೆ ವೇದಸದಸ್ಸು, ಶಾಸ್ತ್ರಸಭೆ, "ಶ್ರೀ ಶಂಕರರೂ ತತ್ಕಾಲದ ಜೀವನವೂ" ಎಂಬ ವಿಷಯವನ್ನು ಕುರಿತು ಚರ್ಚಾಗೋಷ್ಠಿಯೂ ನಡೆದುವು. ಅವುಗಳಲ್ಲಿ ಬಹುವಾಗಿ ವೇದಶಾಸ್ತ್ರ ವಿದ್ವಾಂಸರೂ, ಹಲವರು ಸಂಸ್ಕೃತ ಪಂಡಿತರೂ ಭಾಗವಹಿಸಿದರು. 'ಸುರಸರಸ್ವತೀ ಸಭೆ'ಯ ಮಹಾಸಭೆಯೂ ನಡೆಯಿತು. ಹೈಕೋರ್ಟಿನ ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಎ. ನಾರಾಯಣಪೈ ಅವರು ವಜ್ರಮಹೋತ್ಸವ ಭಾಷಣ ಮಾಡಿದರು. ಗುರುಗಳು ೧ನೇ ತಾರೀಖಿನಂದು ಬೆಂಗಳೂರು ಶೇಷಾದ್ರಿಪುರದಲ್ಲಿ ಶಿವಗಂಗಾ ಮಠದ ವೇದಪಾಠಶಾಲೆಯನ್ನೂ, ಪುಸ್ತಕ ಭಂಡಾರವನ್ನೂ ಆರಂಭಗೊಳಿಸಿದರು.

ಬೆಂಗಳೂರಿನಿಂದ ಹೊರಟು ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ೧೪ನೆಯ ತಾರೀಖು ಪರಾಪರಗುರು ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳ ಆರಾ[illegible]ಲ್ಲಿ ತಂಗಿ ೧೯–೨೦ರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮದರಾಸಿಗೆ ಬಿಜಯಮಾಡಿದರು. ೨೩ರಂದು ತ್ಯಾಗರಾಜನಗರದ ಶೃಂಗೇರೀ ಶ್ರೀ ಶಂಕರಮಠದಲ್ಲಿ ಪರಮಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳ ಜಯಂತಿಯೂ, ೨೮ರಂದು ಆರಾಧನೆಯೂ ನಡೆದವು. ಅಲ್ಲಿ ನಡೆದ ಚಂಡೀಹೋಮ, ಮಹಾರುದ್ರಯಾಗ ಕಾಲಗಳಲ್ಲಿ ಅಲ್ಲಿನ ಶಿಷ್ಯಸ್ತೋಮವನ್ನು ಅನುಗ್ರಹಿಸಿ ೩೦ರಂದು ತಿರುಪತಿಯಲ್ಲಿ ತಂಗಿ ೩೧ರಂದು ತಿರುಮಲೆಗೆ ಬಿಜಯಮಾಡಿದರು.

ತಿರುಮಲೆಯಲ್ಲಿ ವಡಕ್ಕುಮಾಡಯಲ್ಲಿ (ಮಂದಿರದ ಉತ್ತರ ಬೀದಿಯಲ್ಲಿ) ಪುರಾತನಕಾಲದಿಂದಲೂ ಶೃಂಗೇರೀ ಮಠಕ್ಕೆ ಸೇರಿದ ಒಂದು ನಿವೇಶನವಿತ್ತು. ಶಿಷ್ಯರುಗಳಿಂದ ಗುರುಕಾಣಿಕೆಯಾಗಿ ಕೊಡಲ್ಪಟ್ಟ ಹಣದಪೈಕಿ ಆ ನಿವೇಶನದಲ್ಲಿ ೩ ಲಕ್ಷರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಕಲ್ಯಾಣಮಂಟಪವನ್ನು ೩೧–೩–೧೯೭೧ರಂದು ಶ್ರೀ ಜಗದ್ಗುರುಗಳವರ ಸಮಕ್ಷದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದರೆಡ್ಡಿಯವರು ತೆರೆದರು. ಅವರೊಡನೆ ಆಂಧ್ರಪ್ರದೇಶದ ಇನ್ನಿಬ್ಬರು ಮಂತ್ರಿಗಳೂ ಬಂದಿದ್ದರು.

ಜಗದ್ಗುರುಗಳು ತಿರುಪತಿಯಿಂದ ಹೊರಟು ಮದರಾಸಿಗೆ ಬಂದು, ೧೮ನೆಯ ತಾರೀಖು ಅಲ್ಲಿಂದ ಹೊರಟು ಪಾಂಡಿಚೇರಿಗೆ ಬಿಜಯಮಾಡಿದರು. ಲೆಫ್ಟಿನೆಂಟ್ ಗವರ್ನರ್ ಮಾನ್ಯ ಶ್ರೀ ಬಿ. ಡಿ. ಜತ್ತಿಯವರೂ ಪುರಪ್ರಮುಖರೂ ಸನ್ನಿಧಾನವನ್ನು ಸ್ವಾಗತಿಸಿ ಸನ್ಮಾನಿಸಿದರು. ಶಿಷ್ಯರುಗಳ ಪ್ರಾರ್ಥನೆಗೆ ಸಮ್ಮತಿಸಿ ಚಿದಂಬರಕ್ಕೆ ಹೋಗಿ ಅಲ್ಲಿ ಶ್ರೀ ನಟರಾಜಸ್ವಾಮಿಯಾದಿಮೂರ್ತಿಗಳ ದರ್ಶನಮಾಡಿ, ೧೨ನೆಯ ತಾರೀಖು ನೆಯ್ವೇಲಿಗೆ ಬಿಜಯಮಾಡಿ, ೨೩ನೆಯ ತಾರೀಖು ಶ್ರೀರಂಗಕ್ಕೆ ಬಿಜಯಮಾಡಿದರು. ಅಲ್ಲಿ ಮೂರು ದಿನ ತಂಗಿ ೧೪ರಂದು ಹೊಸವರ್ಷ ಹುಟ್ಟಿದಂದು, **ಗುಣಶೀಲಕ್ಕೆ** ಬಿಜಯ ಮಾಡಿ, ಪ್ರಸನ್ನ ವೆಂಕಟಾಚಲಪತಿ ದೇವಸ್ಥಾನದ ರಾಜಗೋಪುರದ ಜೀರ್ಣೋದ್ಧಾರ ಕಾರ್ಯವನ್ನು ಆರಂಭಗೊಳಿಸಿದರು. ತಿರುವೆರುಂಬೂರ್ ಬಾಯ್ಲರ್ ಫ್ಯಾಕ್ಟರಿಗೂ ಕೈಲಾಸಪುರಂ ಕಾಲನಿಗೂ ಬಿಜಯಮಾಡಿ, ಭಕ್ತರನ್ನು ಅನುಗ್ರಹಿಸಿದರು. ಶೃಂಗೇರಿ ಜಗದ್ಗುರುಗಳ ಆಜ್ಞೆಯಿಂದ ಕಟ್ಟಲ್ಪಟ್ಟು, ಕಳೆದ ವರ್ಷ ಕುಂಭಾಭಿಷೇಕ ನಡೆದಿದ್ದ ಬಾಲಗಣಪತಿ ಆಲಯಲ್ಲಿ ವೈಭವ ಉತ್ಸವ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಿರುಚ್ಚಿಯಿಂದ ಕಂಬರಸಂಪೇಟೆ, ಪಟ್ಟುವೂರು, ಅಲ್ಲೂರು, ವೈಗನಲ್ಲೂರು, ಮಣತ್ತಟ್ಟೈ ಗ್ರಾಮದವರಿಂದ ಆಹ್ವಾನಿಸಲ್ಪಟ್ಟು, ಮಹಾದಾನಪುರದಲ್ಲಿ ಶ್ರೀ ಭಾಷ್ಯಸ್ವಾಮಿಗಳನ್ನು ನೋಡಿ ಅನುಗ್ರಹಿಸಿ ಕೃಷ್ಣರಾಯಪುರದ ಮಾರ್ಗವಾಗಿ ಕರೂರಿಗೆ ಬಂದು ಸೇರಿದರು. ಅಲ್ಲಿ ಶ್ರೀ ರಾಜರಾಜೇಶ್ವರಿಯ ಪಂಚಲೋಹ ಉತ್ಸವಮೂರ್ತಿ ಪ್ರತಿಷ್ಠೆಯನ್ನು ನಡಸಿ ಸೇಲಮಿಗೆ ಹೋಗಿ ಸೇರಿದರು. ಇಲ್ಲಿಂದ ಅರುಗಾಮೆಯಲ್ಲಿರುವ ಸ್ಕಂದಗಿರಿಗೆ ಹೋಗಿ ಸ್ಕಂದರನ್ನೂ, ಅಷ್ಟಾದಶಭುಜ ಲಕ್ಷ್ಮಿಯನ್ನೂ ದರ್ಶಿಸಿ ಶ್ರೀ ಶಾಂತಾನಂದಸ್ವಾಮಿಗಳಿಂದ ಸಮರ್ಪಿಸಲ್ಪಟ್ಟ ಮರ್ಯಾದೆಗಳನ್ನು ಅಂಗೀಕರಿಸಿ ಸೇಲಮಿಗೆ ಹಿಂದಿರುಗಿದರು.

೧೮–೭–೭೧ರಲ್ಲಿ ಈರೋಡಿಗೆ ಬಿಜಯಮಾಡಿ ಒಂದು ದಿನ ತಂಗಿ, ಗೋಪಿಚೆಟ್ಟಿಪಾಳೆಯಕ್ಕೆ ಬಂದರು. ಅಲ್ಲಿ ತಮ್ಮ ಸಮ್ಮುಖದಲ್ಲಿ ನಡೆದ ಮಹಾರುದ್ರಯಾಗವಾದಮೇಲೆ ಅಲ್ಲಿಂದ ಹೊರಟು ಕೊಯಮತ್ತೂರಿಗೆ ಹೋಗಿ ಎರಡು ದಿನ ತಂಗಿದ್ದು, ೨೪–೪–೭೧ರಲ್ಲಿ ಕಾಲಟಿಗೆ ಬಂದು ಸೇರಿದರು.

ಕಾಲಟಿಯಲ್ಲಿ ಈ ವರ್ಷ ವಿಶೇಷಕಾರ್ಯಗಳು ನಡೆದವು. ಶ್ರೀ ವೈದ್ಯ ಸುಬ್ರಮಣಿಯ ಅಯ್ಯರ ಪ್ರಬಲ ಪ್ರಯತ್ನದಿಂದ ಕಟ್ಟಲ್ಪಟ್ಟ ಶ್ರೀ ಶಂಕರ ಸಂಶೋಧನ ನಿಲಯದ ಕಟ್ಟಡವನ್ನು ಶ್ರೀ ಪಿ. ಎಸ್. ಲೋಕನಾಥನ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತೆರೆದು ಆರಂಭಗೊಳಿಸಿದರು. ಶ್ರೀ ಶಂಕರರ ಗ್ರಂಥಗಳು, ಶ್ರೀ ಶಂಕರ ವೇದಾಂತ–ಇವುಗಳಲ್ಲಿ ಸಂಶೋಧನೆ ನಡಸಿ ಉಪನ್ಯಾಸಗಳನ್ನು ಮಾಡುವುದಕ್ಕೂ, ಹಲವು ಪ್ರಕಟನೆಗಳನ್ನು ಹೊರತರುವುದಕ್ಕೂ ಇಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಇದನ್ನು ಜಗದ್ಗುರುಗಳು ಸಂತೋಷದಿಂದ ಅನುಗ್ರಹಿಸಿದರು. ಗುರುಗಳು ಶ್ರೀ ಶಂಕರಜಯಂತೀ ಉತ್ಸವವನ್ನೂ ಇಲ್ಲಿಯೇ ನಡಸಿದರು.

ಶಿಷ್ಯರುಗಳ ವಿಶೇಷಾಹ್ವಾನಕ್ಕೆ ಒಪ್ಪಿಕೊಂಡು ಜಗದ್ಗುರುಗಳು ಶಿವಮೊಗ್ಗ ಜಿಲ್ಲೆಯ ಶಿಕಾರಿಪುಕ್ಕೆ ಬಿಜಯಮಾಡಿದರು. ಮೇ ೧೪ ಮೊದಲು ೨೨ ಪೂರ್ತಿಯಾಗಿ ಅಲ್ಲಿ ಅತಿರುದ್ರ ಮಹಾರುದ್ರಯಜ್ಞಗಳು ನಡೆದವು. ಶಿಷ್ಯರನ್ನು ಅನುಗ್ರಹಿಸಿ [illegible]ರಿಗೆ ಬಿಜಯಮಾಡಿ ಅಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೆ. ಆರ್. ಸುಬ್ಬರಾವ್ ಅವರು ಎರಡು ಲಕ್ಷ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ್ದ 'ಸೀತಾರಾಮ ಕಲ್ಯಾಣ ಮಂಟಪ'ದಲ್ಲಿ ಶ್ರೀ ಸೀತಾಲಕ್ಷ್ಮಣ ಹನುಮತ್ಸಮೇತ ಶ್ರೀ ರಾಮಚಂದ್ರಮೂರ್ತಿ ಪ್ರತಿಷ್ಠೆಯನ್ನು ನಡಸಿಕೊಟ್ಟು ಶೃಂಗೇರಿಗೆ ಹಿಂದಿರುಗಿದರು.

ಈ ವರ್ಷದ (೧೯೭೧) ಚಾತುರ್ಮಾಸ್ಯ, ಗಣಪತಿಸಭೆ, ನವರಾತ್ರಿ ಉತ್ಸವಗಳು ಶೃಂಗೇರಿಯಲ್ಲಿ ನಡೆದವು. ೨೪–೮–೭೧ರಿಂದ ೫–೯–೭೧ರವರೆಗೆ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಗಣಪತಿಸದಸ್ಸುನಡೆಯಿತು. ೫–೯–೭೧ರಂದು ಸದಸ್ಸು ಸಮಾಪ್ತಿಯಂದು, ಮೈಸೂರು ಗವರ್ನರ್ ಶ್ರೀ ಧರ್ಮವೀರ ಅವರು ಶೃಂಗೇರಿಗೆ ಬಿಜಯಮಾಡಿ ಜಗದ್ಗುರುಗಳನ್ನು ವಂದಿಸಿ ಭಾಷಣ ಮಾಡಿದರು.

ಶೃಂಗೇರಿಯಲ್ಲಿ ಅನೇಕ ದೇವಾಲಯಗಳ ಮತ್ತು ಪಾಠಶಾಲಾ ಕಟ್ಟಡದ ಜೀರ್ಣೋದ್ಧಾರವು ಅಗತ್ಯವೆನಿಸಿತ್ತು. ದೇಶದೇಶಗಳಿಂದ ಅಸಂಖ್ಯಾತ ಯಾತ್ರಿಕರು ಬರುವುದರಿಂದ ಅವರು ತಂಗುವುದಕ್ಕೆ ತಕ್ಕಷ್ಟು ಹೊಸ ವಸತಿಗಳು ನಿರ್ಮಾಣವೂ ಅನಿವಾರ್ಯವೆನಿಸಿತ್ತು. ಇವುಗಳಿಗಾಗಿ ಲಕ್ಷಗಟ್ಟಲೆ ಹಣ ಅವಶ್ಯವಾಗಿದ್ದದ್ದರಿಂದ ಶಿಷ್ಯರು ಸೇರಿ ಈ ಜೀರ್ಣೋದ್ಧಾರ ಕೈಂಕರ್ಯಗಳಿಗಾಗಿ ಒಂದು ನ್ನಿಧಿಯನ್ನು ಶೇಖರಿಸುವುದಕ್ಕೋಸ್ಕರ ೧೮–೧೦–೧೯೭೧ರಂದು ಶ್ರೀ ಜಗದ್ಗುರುಗಳ ವರ್ಧಂತಿಯಂದು (ದೀಪಾವಳಿ ಹಬ್ಬದಂದು) ಶ್ರೀ ಎ. ಆರ್. ಸೋಮನಾಥಯ್ಯರ ಅಧ್ಯಕ್ಷತೆಯಲ್ಲಿ ಒಂದು 'ಸುಧರ್ಮ ಸಮಿತಿ'ಯನ್ನು ಏರ್ಪಡಿಸಿದರು.

ಶ್ರೀ ಜಗದ್ಗುರುಗಳು ಈ ವರ್ಷ 'ರಾಷ್ಟ್ರ ಸಂರಕ್ಷಣ ನಿಧಿಗೆ' (National Defence Fund) ೧೦,೦೦೧ ರೂಪಾಯಿಗಳನ್ನಿತ್ತು, ದೇಶಕ್ಕೆ ಕ್ಷೇಮ ಉಂಟಾಗಲೆಂದು ಹರಸಿದರು.

೧೯೭೨ನೆಯ ವರ್ಷ ಶೃಂಗೇರಿಯಲ್ಲಿ ೧೫–೨–೧೯೭೨ರಿಂದ ೩–೨–೧೯೭೨ ಪೂರ್ತಿ ಶ್ರೀ ಶಾರದಾಂಬೆಗೆ ಶ್ರೀ ಜಗದ್ಗುರುಗಳ ಆಶ್ರಯದಲ್ಲಿ ಕೋಟಿನಾಮಾರ್ಚನೆ, ಅತಿರುದ್ರ, ಋಕ್ಸಂಹಿತಾ ಹೋಮ, ಚಂಡೀಹೋಮ ಮೊದಲಾದ ವೈಭವಗಳು ಮೈಸೂರು ಮಹಾರಾಜರವರೊಬ್ಬರ ಖರ್ಚಿನಲ್ಲಿಯೇ ನಡೆದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜಯವಾಡದ ಕಂಠೀ ಸೂರ್ಯನಾರಾಯಣ ಮಹಾಗ್ನಿಚಿತ್‌ಯಾಜಲು ನರಸಿಂಹವನದಲ್ಲಿ ಚಾತುರ್ಮಾಸ್ಯಯಾಗವನ್ನು ನಡಸಿದರು.

ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಬ್ರಂಹ್ಮಾನಂದರೆಡ್ಡಿಯವರ ಸೇವಾರ್ಥವಾದ ೫ ಸ್ವರ್ಣ ಕಲಶಗಳು ಶ್ರೀ ಶಾರದಾಂಬೆಯ ದೇವಸ್ಥಾನದ ರಾಜಗೋಪುರದ ಮೇಲೆ ೧೮-೨-೧೯೭೨ರಂದು ಸ್ಥಾಪಿಸಲ್ಪಟ್ಟವು.

ಸನ್ನಿಧಾನದ ಆಪ್ತಕಾರ್ಯದರ್ಶಿ ಶ್ರೀ ಪದ್ಮನಾಭ ಉಪಾಧ್ಯಾಯರವರು ೧೨೦೦೦ ರೂಪಾಯಿ ವೆಚ್ಚಮಾಡಿ ಶೃಂಗೇರೀ ನಗರ ಪ್ರವೇಶ ಸ್ಥಳದಲ್ಲಿ ಕಟ್ಟಿಸಿದ್ದ ಮಹಾದ್ವಾರ ವರ್ತುಲ(Circle)ವನ್ನು ಮೈಸೂರು ಮಹಾರಾಜರವರು ೨೬-೨-೧೯೭೨ರಂದು ತೆರೆದು ಆರಂಭಿಸಿದರು. ಈ ವರ್ತುಲದ ಎರಡು ಕಡೆಗಳಲ್ಲಿಯೂ ಶ್ರೀ ಶಾರದಾದೇವಿಯ ವಿಗ್ರಹಗಳನ್ನು ಇಡಿಸಲಾಗಿದೆ

೨೮ನೆಯ ತಾರೀಖಿನಂದು ಶ್ರೀ ಗಂಗೇಶ್ವರಾನಂದಜೀ ಅವರಿಂದ ರಚಿಸಲ್ಪಟ್ಟ ಮತ್ತು ಶುಕ್ಲಯಜುಸ್ಸನ್ನೂ ಒಳಗೊಂಡ 'ಚತುರ್ವೇದ' ಗ್ರಂಥವನ್ನು, "ಚತುರ್ಧಾಮ ವೇದವಿದ್ಯಾಭವನ ನ್ಯಾಸ" ನಿರ್ವಾಹಕರಾದ ಸತ್ಯದೇವ ಬ್ರಹ್ಮಚಾರಿಯವರು ತಂದು ಗುರುಗಳಿಗೆ ಸಮರ್ಪಿಸಿದರು. ಅದಕ್ಕೆ ಶೃಂಗೇರಿಯ ರಾಜಬೀದಿಗಳಲ್ಲಿ ಉತ್ಸವ ನಡಸಿ ತರುವಾಯ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಒಂದು ವಿಶೇಷಸ್ಥಾನವನ್ನು ಏರ್ಪಡಿಸಿದರು.

ಮೈಸೂರು ಮಹಾರಾಜರು ಶ್ರೀ ವೈದ್ಯ ಸುಬ್ರಹ್ಮಣ್ಯಯ್ಯರಿಗೆ 'ಧರ್ಮಾತ್ಮಾ' ಎಂಬ ಬಿರುದನ್ನೂ ಶ್ರೀ ಪದ್ಮನಾಭ ಉಪಾಧ್ಯಾಯರಿಗೆ 'ಗುರುಭಕ್ತ ತಿಲಕ' ಎಂಬ ಬಿರುದನ್ನೂ ದಯಪಾಲಿಸಿದರು. ಶ್ರೀ ಸನ್ನಿಧಾನವು ಇವುಗಳ ಸಂಬಂಧವಾದ ಪದಕಗಳನ್ನೂ, ವಸ್ತ್ರಗಳನ್ನೂ ಸನ್ಮಾನಿತರಿಗೆ ಕೊಡಿಸಿ ಅವರನ್ನು ಆಶೀರ್ವದಿಸಿದರು.

೨೮-೨-೧೯೭೨ರಂದು ಶೃಂಗೇರಿಯಲ್ಲಿ ನಡೆದ ಶಿಷ್ಯರುಗಳ ಸಭೆಯಲ್ಲಿ "ಶೃಂಗೇರಿಯಲ್ಲಿ ಪ್ರವಚನ ಮಂಟಪ ನಿರ್ಮಾಣ, ಶ್ರೀ ಶಾರದಾಂಬಾ ದೇವಾಲಯದ ಕದಕ್ಕೆ ಬೆಳ್ಳಿ ಕವಚ, ದೇವಾಲಯದ ಮುಖಮಂಟಪದಲ್ಲಿ ಅಮೃತಶಿಲೆಯ ನೆಲಗಟ್ಟು, ಶಿಷ್ಯರುಗಳು ತಂಗುವುದಕ್ಕೆ ಹೆಚ್ಚು ಬಿಡದಿಗಳು, ವೇದಶಾಸ್ತ್ರ ಪಾಠಶಾಲೆಯ ಕಟ್ಟಡದ ನಿರ್ಮಾಣ ಮೊದಲಾದ ಕಾರ್ಯಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಮಾಡಬೇಕು" ಎಂದು ಗೊತ್ತುಮಾಡಿ, ಅದಕ್ಕೆ ಶ್ರೀ ಜಗದ್ಗುರುಗಳ ಅನುಗ್ರಹವನ್ನು ಪಡೆದು, ಇದನ್ನು 'ಸುಧರ್ಮ ಸಮಿತಿ'ಯ ಮೂಲಕ ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.

೭-೪-೧೯೭೨ರಂದು ಶ್ರೀ ಸನ್ನಿಧಾನವು ಕೂಡಲಿಗೆ ಬಿಜಯಮಾಡಿದರು. ಇವರ ಸನ್ನಿಧಿಯಲ್ಲಿ ೯ನೆಯ ತಾರೀಖು ಹೊಸ *ಕೂಡಲಿ ಮಠಾಧಿಪತಿಗಳಾದ ಶ್ರೀ ವಿದ್ಯಾಭಿನವ ನೃಸಿಂಹ ಭಾರತೀ ಸ್ವಾಮಿಗಳ ಪಟ್ಟಾಭಿಷೇಕವೂ ವಿದ್ವತ್ಸದಸ್ಸೂ ವಿಜೃಂಭಣೆಯಿಂದ ನೆರವೇರಿದವು.

೧೯೭೨ನೆಯ ವರ್ಷದ ಶ್ರೀ ಶಂಕರ ಜಯಂತಿ, ಚಾತುರ್ಮಾಸ್ಯವ್ರತ, ನವರಾತ್ರಿ, ವರ್ಧಂತಿ ಮೊದಲಾದ ಉತ್ಸವಗಳು ಶೃಂಗೇರಿಯಲ್ಲಿ ನೆರವೇರಿದವು.

---

*ಕೂಡಲಿಮಠ ಶೃಂಗೇರೀ ಜಗದ್ಗುರು ಶ್ರೀ ರಾಮಚಂದ್ರಭಾರತೀ ಸ್ವಾಮಿಗಳಿಂದ (೧೫೧೭-೧೫೪೭) ಸ್ಥಾಪಿಸಲ್ಪಟ್ಟಿತು. ಅವರ ಶಿಷ್ಯರುಗಳಲ್ಲಿ ಒಬ್ಬರಾದ ಶ್ರೀ ನರಸಿಂಹ ಭಾರತಿಗಳು ಈ ಶಾಖೆಯಲ್ಲಿ ಮೊದಲ ಪೀಠಾಧಿಪತಿಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೧೨

ಐದನೆಯ ಮತ್ತು ಆರನೆಯ ವಿಜಯ ಯಾತ್ರೆಗಳು

೧೯೭೩ನೆಯ ವರ್ಷ ಮಾರ್ಚಿ ತಿಂಗಳು ೧೪ನೆಯ ತಾರೀಖು ಶ್ರೀ ಜಗದ್ಗುರುಗಳು ಶೃಂಗೇರಿಯಿಂದ ಹೊರಟು ದಕ್ಷಿಣ ಕನ್ನಡ, ಮೈಸೂರು ಮಾರ್ಗವಾಗಿ ೩೦ನೆಯ ತಾರೀಖು ಬೆಂಗಳೂರಿಗೆ ಬಂದರು. ಬೆಂಗಳೂರಿಗೆ ಬರುವ ಮುನ್ನ ದಾರಿಯಲ್ಲಿ ಶ್ರೀ ಶೃಂಗೇರೀ ಶಿವಗಂಗಾ ಮಠಕ್ಕೆ ಬಿಜಯ ಮಾಡಿದರು. ಬೆಂಗಳೂರಿನಲ್ಲಿ ಹಲವು ದೇವಾಲಯಗಳಿಗೆ ಪಾದಬೆಳಸಿ ಶಿಷ್ಯರನ್ನು ಅನುಗ್ರಹಿಸಿದರು. ಗೋವಾಪ್ರಾಂತದ ಮುಖ್ಯಮಂತ್ರಿಗಳು ಶ್ರೀ ಜಗದ್ಗುರುಗಳನ್ನು ಗೋವಾಕ್ಕೆ ಬಿಜಯಮಾಡಬೇಕೆಂದು ಆಹ್ವಾನಿಸಿದ್ದರು. ಇದಕ್ಕೆ ಶ್ರೀ ಜಗದ್ಗುರುಗಳು ಸಮ್ಮತಿಕೊಟ್ಟಿದ್ದರೂ ಗೋವಾ ಯಾತ್ರೆಯನ್ನು ತಾತ್ಕಾಲಿಕವಾಗಿ ತಡೆದಿಟ್ಟು, ಏಪ್ರಿಲ್ ಕಡೆಯ ಭಾಗದಲ್ಲಿ ಶೃಂಗೇರಿಗೆ ಹಿಂದಿರುಗಿದರು. ಅಲ್ಲಿ ಶಂಕರಜಯಂತೀ ಉತ್ಸವವು ಬಹು ವೈಭವದಿಂದ ನಡೆಯಿತು. ಮೇ ೨೧ನೆಯ ತಾರೀಖು ಶೃಂಗೇರಿಯಿಂದ ಹೊರಟು ಮಂಗಳೂರಿಗೆ ದಯಮಾಡಿ ಅಲ್ಲಿ ೨೨ನೆಯ ತಾರೀಖು 'ಪದ್ಮಶಾಲಿ' ಸಂಘದ ಬೆಳ್ಳಿ ಮಹೋತ್ಸವದ ಆಚರಣೆಗೆ ಶುಭವನ್ನು ಕೋರಿ, ೨೩ನೆಯ ತಾರೀಖಿನಂದು ಕಲಶ ಕ್ಷೇತ್ರದ ಅರುಗಿನಲ್ಲಿರುವ ಹೆರ್ನ್ನಾಡಿನಲ್ಲಿ ಶ್ರೀ ಅನ್ನಪೂರ್ಣೇಶ್ವರೀ ಸಾಮ್ರಾಜ್ಯಪಟ್ಟಾಭಿಷೇಕೋತ್ಸವವು ವೈಭವದಿಂದ ನಡೆಯುವಂತೆ ಅನುಗ್ರಹಿಸಿ ಶೃಂಗೇರಿಗೆ ಹಿಂದಿರುಗಿದರು.

ಈ ವರ್ಷ ಶ್ರೀಗಣಪತಿ ಸದಸ್ಸು ಶೃಂಗೇರಿಯಲ್ಲಿ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ೩೧-೮-೧೯೭೩ರಿಂದ ೧೨-೯-೧೯೭೩ರ ವರೆಗೆ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಡಿಯದ ಹಲವು ಭಾಗಗಳಿಂದ ಬಂದಿದ್ದ ಸಕಲ ಶಾಸ್ತ್ರಪಾರಂಗತರಾದ ಬಹು ಮಂದಿ ವಿದ್ವಾಂಸರು ಭಾಗವಹಿಸಿದ್ದರು. ಸದಸ್ಸಿನ ಸಮಾಪ್ತಿ ಸಮಯದಲ್ಲಿ ಗೋವಾ ಮುಖ್ಯ ಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ಕರ್ ದರ್ಶನಕ್ಕೆ ಬಂದರು. ಇವರ ತಂದೆಯವರಾದ ಶ್ರೀ ಬಂದೋಡ್ಕರ್ ಅವರೂ ಸಹ ಗೋವಾ ಮುಖ್ಯಮಂತ್ರಿಗಳಾಗಿದ್ದರು. ಅವರಿಗೆ ಮಹಾ ಸನ್ನಿಧಾನದಲ್ಲಿ ಬಹಳ ಭಕ್ತಿಯಿದ್ದದ್ದನ್ನು ಪ್ರಸ್ತಾಪಿಸಿ ಶೃಂಗೇರಿಯಲ್ಲಿ ನಡೆಯುತ್ತಿರುವ ಪಾಠಶಾಲೆ ಸಂಸ್ಕೃತ ಅಭಿವೃದ್ಧಿ ಮೊದಲಾದ ಕಾರ್ಯಗಳನ್ನು ಪ್ರಶಂಸಿಸಿದರು. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರಹೆಗ್ಗಡೆಯವರೂ ಬಂದು ದರ್ಶಿಸಿದರು. ಈ ವರ್ಷ ಶ್ರೀ ಶಾರದಾಂಬಾ ದೇವಾಲಯಕ್ಕೆ ಉತ್ತರದಲ್ಲಿ ಪ್ರವಚನ ಮಂಟಪದ ಕಟ್ಟಡವು ಪೂರ್ತಿಯಾಯಿತು. ಅದನ್ನು ಕರ್ಣಾಟಕ ಪ್ರಾಂತ್ಯದ ರೆವೆನ್ಯೂ ಮಂತ್ರಿ ಶ್ರೀ ಹುಚ್ಚಮಾಸ್ತಿಗೌಡರು ತೆರೆದು ಆರಂಭಗೊಳಿಸಿದರು. ನವರಾತ್ರಿ ವೈಭವೆಲ್ಲ ಈ ಮಂಟಪದಲ್ಲೇ ನಡೆಯಿತು.

೮-೧೦-೧೯೭೩ರಿಂದ ೨೫-೧೦-೧೯೭೩ ಪೂರ್ತಿ ಇಂಡಿಯದ ಹಲವು ಭಾಗಗಳಿಂದಲೂ ಬಂದಿದ್ದ ಋತ್ವಿಕ್ಕುಗಳ ಸಹಕಾರದಿಂದ ಶ್ರೀ ಶಾರದಾಂಬೆಗೆ ಲಲಿತಾಸಹಸ್ರನಾಮದಿಂದ ಕೋಟ್ಯರ್ಚನೆ ನಡಸಲಾಯಿತು. ಶ್ರೀಶಾರದಾಂಬೆಯ ಮಂದಿರದ ಮುಂಭಾಗದ ಬೆಳ್ಳಿ ಕದವನ್ನು ಗೋವಾ ಮುಖ್ಯಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ಕರ್ ತೆರೆದಿಟ್ಟರು.

ಶೃಂಗೇರಿಯಲ್ಲಿ ರಚಿಸಿದ್ದ ಉತ್ಸವ ಸಮಿತಿ ೧೩-೧೦-೭೩ರಿಂದ ೨೪-೧೦-೭೩ರ ವರೆಗೆ ಮಹಾಸನ್ನಿಧಾನ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳ ವರ್ಧಂತೀ ಮಹೋತ್ಸವವನ್ನು ನಡಸಿತು. ಇದಕ್ಕೆ ಸೇರಿದಂತೆ ೨೩ರಂದು ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಧರ್ಮಸಮ್ಮೇಳನ ನಡೆಯಿತು. ೨೫ನೆಯ ತಾರೀಖು ಪ್ರಾತಃಕಾಲ ಕರ್ನಾಟಕ ರಾಜ್ಯದ ಗವರ್ನರ್ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಭಾಷಣದಲ್ಲಿ ಅವರು ಜಗದ್ಗುರುಗಳ ಮಹಿಮೆಗಳನ್ನು ವಿವರಿಸಿದರು. ಮೈಸೂರ್ ಯೂನಿವರ್ಸಿಟಿ ವೈಸ್‌ಚಾನ್ಸೆಲರ್, ಪ್ರೊಫೆಸರ್ ಡಿ. ಜವರೇಗೌಡರು ಈ ಸಮ್ಮೇಳನವನ್ನು ಆರಂಭಗೊಳಿಸಿದ್ದರು. ಎರಡು ದಿನವೂ ಉಪನ್ಯಾಸಗಳು ನಡೆದುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಮಹಾಸನ್ನಿಧಾನವು ವಿದ್ವಾಂಸರುಗಳಿಗೆ ಶಾಲು ಸಂಭಾವನೆಗಳನ್ನು ನೀಡಿದರು. ಹಿಂದೆ ಮೈಸೂರಿನಲ್ಲಿ ಮುಖ್ಯ ನ್ಯಾಯಾಧಿಪತಿಗಳಾಗಿದ್ದ ಶ್ರೀ ಸೋಮನಾಥಯ್ಯರ್ ಅವರ ಅಧ್ಯಕ್ಷತೆಯಲ್ಲಿ ೨೪-೧೦-೭೩ರ ಸಂಜೆ ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ, ಆಂಧ್ರದ ಮಾಜಿ ಮಂತ್ರಿ ಚೆನ್ನಾರೆಡ್ಡಿ ಇವರುಗಳು ಶ್ರೀ ಶೃಂಗೇರೀ ಪೀಠಾಧಿಪತಿಗಳ ಮಹಿಮೆಯನ್ನು ಕುರಿತು ಭಾಷಣಗಳನ್ನು ಮಾಡಿದರು.

೧೯೭೪ನೆಯ ಮಾರ್ಚಿ ೨೫ನೆಯ ತಾರೀಖು ಮೊದಲುಗೊಂಡು ಏಪ್ರಿಲ್ ೪ನೆಯ ತಾರೀಖು ಪೂರ್ತಾ ಜಗದ್ಗುರುಗಳ ಅನುಗ್ರಹವನ್ನು ಪಡೆದು, ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರವರು ಶೃಂಗೇರಿಯಲ್ಲಿ ಸಹಸ್ರಚಂಡೀ, ಅತಿರುದ್ರ, ಕೋಟಿನಾಮಾರ್ಚನೆ ಇವನ್ನು ಬಹು ವಿಜೃಂಭಣೆಯಿಂದ ನಡಸಿದರು. ಶ್ರೀ ಜಗದ್ಗುರುಗಳು ಮಹಾರಾಜರಿಗೆ, "ಗುರುಭಕ್ತಾವತಂಸ" ಎಂಬ ಬಿರುದನ್ನು ಸುವರ್ಣಹಾರಪದಕಗಳೊಡನೆ ಅನುಗ್ರಹಿಸಿದರು. ಇದೇ ಸಮಯದಲ್ಲಿ ಹಲವು ವಿದ್ವಾಂಸರುಗಳಿಂದ ಕೂಡಿದ ಸದಸ್ಸು ನಡೆಯಿತು. ವಿದ್ವಾಂಸರುಗಳಿಗೂ ಋತ್ವಿಕ್ಕುಗಳಿಗೂ ಮಹಾರಾಜರು ಸನ್ಮಾನಮಾಡಿದರು. ಗೋವಾ ಮುಖ್ಯಮಂತ್ರಿ ನೇರವಾಗಿ ಬಂದು ಈ ವೈಭವಗಳನ್ನು ಕಂಡು, ಗುರುಗಳು ಗೋವೆಗೆ ಬಿಜಯಮಾಡಿ ಈ ವೈಭವಗಳನ್ನು ಅಲ್ಲಿಯೂ ನಡಸಬೇಕೆಂದು ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಜ್ಯೋತಿರ್ಮಠದ ಜಗದ್ಗುರುಗಳು ಶೃಂಗೇರಿಗೆ ದಯಮಾಡಿ ಗುರುದೇವತೆಗಳ ದರ್ಶನವನ್ನು ಮಾಡಿದರು. ಶ್ರೀ ಅನ್ನಪೂರ್ಣಾದೇವೀ ಆಲಯದ ಮಹಾಂತರವರು ಶೃಂಗೇರಿಗೆ ಬಂದು ಶ್ರೀ ಜಗದ್ಗುರುಗಳು ಕಾಶಿಗೆ ಬಿಜಯಮಾಡಿ ಮೂರ್ತಿ ಪ್ರತಿಷ್ಠೆ, ಕುಂಭಾಭಿಷೇಕಗಳನ್ನು ನಡಸಿಕೊಡಬೇಕು ಎಂದು ಮತ್ತೆ ಪ್ರಾರ್ಥಿಸಿದರು. ಶೃಂಗೇರೀ ಮಠದ ಶಿಷ್ಯಸಮೂಹ ಇದಕ್ಕೆ ಧಾರಾಳವಾಗಿ ನಿಧಿಸಹಾಯಮಾಡಬೇಕೆಂದೂ ಸಹ ಪ್ರಾರ್ಥಿಸಿದರು.

ಈ ವರ್ಷ ಶಂಕರಜಯಂತಿಯೂ ಚಾತುರ್ಮಾಸ್ಯವೂ ಶೃಂಗೇರಿಯಲ್ಲೇ ನಡೆದವು.

ಈ ವರ್ಷ ಆಗಸ್ಟ್ ತಿಂಗಳಲ್ಲಿ ಶ್ರೀ ಮಹಾಸನ್ನಿಧಾನದ ಆಪ್ತ ಕಾರ್ಯದರ್ಶಿಯಾದ ವಿದ್ವಾನ್ ಶ್ರೀ [illegible], ಶ್ರೀಮಠದ ವಿದ್ವಾನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸುಂದರ ಘನಪಾಠಿಗಳೂ ಡಿಲ್ಲಿಯ ಹತ್ತಿರ ಘೋರವಿಪತ್ತಿನಲ್ಲಿ ಮರಣ ಹೊಂದಿದರು. ಇದು ಎಲ್ಲರಿಗೂ ವಿಶೇಷ ಸಂಕಟವನ್ನುಂಟುಮಾಡಿತು. ಇದಾದ ಸ್ವಲ್ಪ ಕಾಲದಲ್ಲೇ ಸೆಪ್ಟೆಂಬರ್ ತಿಂಗಳಲ್ಲಿ ಶ್ರೀಮಠದ ಪ್ರಧಾನ ಶಿಷ್ಯರಾದ ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಕಾಲಗತಿ ಹೊಂದಿದರು. ಈ ಮೂರು ಅಗಲಿಕೆಗಳೂ ಶ್ರೀಮಠಕ್ಕೆ ಮಹತ್ತಾದ ನಷ್ಟಗಳೇ, ಆದರೆ, ಆದಿಶಂಕರಭಗವತ್ಪಾದರು.

ಮುನಿರ್ನವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತ ತಮಾಃ

[ವ್ಯಾಮೋಹಪಡನು ಮುನಿ, ಮಿಗಿಲು ದೀಕ್ಷೆಯ ತಳೆದು
ತಮವ ತೊಲಗಿಸಿರುವವನು]

ಎಂದು ಹೇಳಿರುವ ಹಾಗೆ, ಬೇರೆಯವರಿಗೆ ಅತ್ಯಂತ ಮನಸ್ಸಂಕಟವುಂಟು ಮಾಡುವ ಈ ಸಂಗತಿಗಳಿಂದ ಶ್ರೀ ಮಹಾಸನ್ನಿಧಾನದ ಮನಸ್ಥಿತಿ ಯಾವ ರೀತಿಯಿಂದಲೂ ಬಾಧಿತವಾಗದೆ, "ಎಷ್ಟು ಕಾಲ ಬದುಕಿದ್ದರೂ ಕೊನೆಗೆ, ಒಂದಲ್ಲ ಮತ್ತೊಂದು ದಿನ, ಎಲ್ಲರೂ ಬಿಟ್ಟುಹೋಗಲೇಬೇಕಲ್ಲವೇ ?" ಎಂದು ಹೇಳಿ ಉಳಿದವರನ್ನು ಸಮಾಧಾನಮಾಡಿಕೊಳ್ಳುವಂತೆ ಬೋಧಿಸಿದರು.

ಶ್ರೀಮಠದ ಹೊರಗಿನ ಕಾರ್ಯಗಳನ್ನು ತಾವೇ ಸ್ವಂತವಾಗಿ ನೋಡುತ್ತಿದ್ದ ಶ್ರೀ ಪದ್ಮನಾಭ ಉಪಾಧ್ಯಾಯರೂ ಶ್ರೀ ಸುಂದರ ಘನಪಾಠಿಗಳೂ ಮೃತರಾಗಿ ಹೋದ್ದರಿಂದ ಆ ಕೆಲಸವನ್ನು ನೋಡಿಕೊಳ್ಳುವುದಕ್ಕೆ ತಾತ್ಕಾಲಿಕವಾಗಿ ವಿದ್ಯಾರ್ಥಿ ಬ್ರಹ್ಮಚಾರಿ ಶ್ರೀ ಸೀತಾರಾಮ ಆಂಜನೇಯಲು ನಿಯಮಿತರಾದರು. ನವರಾತ್ರಿಯಲ್ಲಿ ಪ್ರತಿದಿನವೂ ಶ್ರೀ ಮಹಾಸನ್ನಿಧಾನವು ಶ್ರೀ ಶಾರದಾದೇವಿಯ ಪೂಜೆಮಾಡಿ ಬಹಳ ಹೊತ್ತು ದೇವಿಯ ಸನ್ನಿಧಿಯಲ್ಲಿ ಏಕಾಂತಧ್ಯಾನ ಮಾಡುತ್ತಬಂದರು. ನವರಾತ್ರಿ ಉತ್ಸವ ಮುಗಿದು, ಏಕಾದಶೀ ದಿನ ಶ್ರೀ ಶಾರದಾಂಬೆಯ ಗರ್ಭಗೃಹದಲ್ಲಿ ಸಾಧಾರಣವಾಗಿರುತ್ತಿದ್ದದ್ದಕ್ಕಿಂತಲೂ ಬಹಳ ಹೆಚ್ಚು ಕಾಲ ಧ್ಯಾನದಲ್ಲಿದ್ದು ಹೊರ ಮಂಟಪಕ್ಕೆ ಬಂದು, ಗುಂಪು ಗುಂಪಾಗಿ ಶಿಷ್ಯರುಗಳು ಸುತ್ತುವರಿದು ನಿಂತಿರಲು, ಮುಂದಿನ ಏಕಾದಶೀ ದಿನ ತಾವು ಶಿಷ್ಯಸ್ವೀಕಾರ ಮಾಡಿಕೊಳ್ಳುವುದಕ್ಕೆ ತೀರ್ಮಾನಿಸಿರುವುದಾಗಿಯೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲಿಂದಲೂ ಶ್ರೀಮಠದಲ್ಲಿ ಇದ್ದುಕೊಂಡಿರುವ ವಿದ್ಯಾರ್ಥಿ ಶ್ರೀ ಸೀತಾರಾಮ ಆಂಜನೇಯಲು ಅವರು ಆ ಶಿಷ್ಯರೆಂದೂ ಘೋಷಿಸಿದರು.

ಶೃಂಗೇರೀಮಠದಲ್ಲಿ ಬಹುಕಾಲದಿಂದಲೂ ಒಂದು ಸಂಪ್ರದಾಯ ನಡೆದು ಬಂದಿದೆ, ಅದೇನೆಂದರೆ, ಮುಂದಿನ ಪೀಠಾಧಿಪತಿಯನ್ನು ತೀರ್ಮಾನಿಸುವುದಕ್ಕೋ, ನಿಯಮಿಸುವುದಕ್ಕೋ ಶ್ರೀ ಶಾರದಾದೇವಿಯ ಅಪ್ಪಣೆ ದೊರೆತ ಮೇಲೆ ಅದನ್ನನುಸರಿಸಿಯೇ ನಡೆಯುವುದು ವಾಡಿಕೆ. ಹಾಗೆ ಅಪ್ಪಣೆ ದೊರೆಯುವ ವರೆಗೂ ಆ ವಿಷಯವಾಗಿ ಯೋಚಿಸುವುದೇ ಇಲ್ಲ. ಆದ್ದರಿಂದ, ಶ್ರೀ ಶಾರದಾದೇವಿಯ ಅಪ್ಪಣೆಯೇ ಈ ವಿಷಯದಲ್ಲಿ ಕಾರಣವಾಯಿತು.

ಅದನ್ನನುಸರಿಸಿ, ನವೆಂಬರ್ ತಿಂಗಳು ೧೧ನೆಯ ತಾರೀಖು ಸೋಮವಾರ ಶಿಷ್ಯಸ್ವೀಕಾರಕ್ಕೆ ದಿನ ಗೊತ್ತುಮಾಡಲಾಯಿತು. ಅದಕ್ಕೆ ಮುನ್ನಾದಿನ ೧೦-೧೧-೧೯೭೪ನೆಯ ದಿನ ಶಾಸ್ತ್ರಕ್ರಮದಂತೆ ಸಂನ್ಯಾಸ ಸ್ವೀಕಾರಕ್ಕೆ ಮೊದಲು ಮಾಡಿಕೊಳ್ಳಬೇಕಾದ ಅಷ್ಟಶ್ರಾದ್ಧ ಮೊದಲಾದವನ್ನು ಅನೇಕ ಮಂದಿ ಋತ್ವಿಕ್ಕುಗಳನ್ನಿಟ್ಟುಕೊಂಡು ನಡಸಲಾಯಿತು. ಶ್ರೀ ಸೀತಾರಾಮ ಆಂಜನೇಯಲು ಅವರ ತಾಯ್ತಂದೆಗಳು ಆ ಮುಂಚೆಯೇ ಶ್ರೀ ಶೃಂಗೇರಿಗೆ ಬಂದು ಸೇರಿದ್ದರು. ತಮ್ಮ ಕುಮಾರರ ಸಂನ್ಯಾಸ ತೆಗೆದುಕೊಳ್ಳುದಕ್ಕೆ ಅನುಮತಿಯನ್ನು ನೀಡಿದ್ದರು.

೧೧-೧೧-೭೪ನೆಯ ಸೋಮವಾರದಂದು ಪ್ರಾತಃಕಾಲ ತುಂಗಾನದಿಯ ನಡುವೆ ವಿದ್ಯಾರ್ಥಿ ಶ್ರೀ ಸೀತಾರಾಮ ಆಂಜನೇಯಲು ನಿಂತುಕೊಂಡು ತಮ್ಮ ಯಜ್ಞೋಪವೀತ, ವಸ್ತ್ರಗಳು, ಕೌಪೀನ ಮೊದಲಾದವನ್ನು ಒಂದೊಂದಾಗಿ ಕಳಚಿ ನದಿಯಲ್ಲಿ ಹಾಕಿ, ಹುಟ್ಟಿದ ರೂಪದಲ್ಲೆ ಬಂದು ಎದುರುಗಡೆ ಕರೆಯಲ್ಲಿ ನಿಂತಿದ್ದ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳನ್ನು ಕುರಿತು, 'ಗುರುವೇ ಶರಣಂ' ಎಂದು ಹೇಳಲಾಗಿ, ಅವರಿಗೆ ಶ್ರೀ ಗುರುಗಳು ಅಭಯ ನೀಡಿ ಸಂನ್ಯಾಸಕ್ಕೆ ಬೇಕಾದ ಕಾಷಾಯ, ದಂಡ, ಕಮಂಡಲ, ಪಾದುಕೆ, ಕೃಷ್ಣಾಜಿನ ಮೊದಲಾದುವನ್ನು ಅನುಗ್ರಹಿಸಿ ಅವರಿಗೆ ಕ್ರಮವಾಗಿ ಮಹಾವಾಕ್ಯೋಪದೇಶವನ್ನೂ ಮಾಡಿದರು. ಆ ಮೇಲೆ ಎರಡು ಸನ್ನಿಧಾನಗಳೂ ಶ್ರೀ ಶಾರದಾಂಬೆಯ ಆಲಯಕ್ಕೆ ಬರಲಾಗಿ, ಅಲ್ಲಿ ಸರ್ವಜ್ಞ ಪೀಠದಲ್ಲಿ ಹೊಸ ಸ್ವಾಮಿಗಳನ್ನುಕೂರಿಸಿ ಅವರ ಶಿರಸ್ಸಿನಮೇಲೆ ಸಾಲಿಗ್ರಾಮವನ್ನಿಟ್ಟು ಗುರುವಾದ

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀ ಮಹಾಸನ್ನಿಧಾನವು ಶಾಸ್ತ್ರಪ್ರಕಾರವಾಗಿ ಪೂಜೆಮಾಡಿ, ಶಿಷ್ಯ 'ಭಾರತೀ ತೀರ್ಥ' ಎಂಬ ಯೋಗಪಟ್ಟವನ್ನೂ ಕೊಟ್ಟು ಅನುಗ್ರಹಿಸಿದರು. ಅದಾದ ಮೇಲೆ ಶ್ರೀ ಸನ್ನಿಧಾನವು (ಬಾಲಸ್ವಾಮಿಗಳಾದ ಶ್ರೀ ಭಾರತೀತೀರ್ಥರು ಶ್ರೀಮಹಾಸನ್ನಿಧಾನವನ್ನು ಸರ್ವಜ್ಞ ಪೀಠದಲ್ಲಿ ಕುಳ್ಳಿರಿಸಿ ಅವರಿಗೆ ಶಾಸ್ತ್ರಪ್ರಕಾರ ಪಾದಪೂಜೆ ಮಾಡಿದರು. ೧೧-೧೧-೭೪ರಂದು ಸಾಯಂಕಾಲ ಎರಡು ಸನ್ನಿಧಾನಗಳೂ ಒಟ್ಟಿಗೆ ಸೇರಿ ದರ್ಶನಕೊಟ್ಟರು. ಆವತ್ತು ರಾತ್ರಿ ಶ್ರೀ ಮಹಾಸನ್ನಿಧಾನವು ಬಂಗಾರದ ಪಲ್ಲಕ್ಕಿಯಲ್ಲೂ ಶ್ರೀ ಸನ್ನಿಧಾನವು ಬೆಳ್ಳಿ ಪಲ್ಲಕ್ಕಿಯಲ್ಲಿಯೂ ಮಂಡಿಸಿ ಹೇರಳವಾದ ಶಿಷ್ಯರುಗಳು ದರ್ಶನ ಮಾಡಲು ಅನುಕೂಲವಾಗುವಂತೆ ಶೃಂಗೇರಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಬಂದರು.

೧೨-೧೧-೭೪ನೆಯ ದಿನ ಶ್ರೀ ಶೃಂಗೇರೀ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯ ವಜ್ರಮಹೋತ್ಸವವು ವೈಭವವಾಗಿ ನೆರವೇರಿತು. ಕರ್ನಾಟ ದೇಶದ ಗವರ್ನರ್ ಶ್ರೀ ಮೋಹನಲಾಲ್ ಸುಖಾಡಿಯ ಅವರು ಉತ್ಸವವನ್ನು ತೊಡಗಿಸಿದರು. ಮೈಸೂರು ರೆವೆನ್ಯೂ ಮಂತ್ರಿ ಶ್ರೀ ಹುಚ್ಚುಮಾಸ್ತಿಗೌಡರು ಮತ್ತು ಇತರ ಹಲವು ಪ್ರಮುಖರುಗಳು ಮಾತಾಡಿದ ಬಳಿಕ ಎರಡು ಸನ್ನಿಧಾನಗಳ ಅನುಗ್ರಹ ಭಾಷಣಗಳು ನಡೆದವು.

೧೨-೧೧-೭೪ರ ಸಂಜೆ ಶ್ರೀ ಶಾರದಾದೇವಿಗೆ ೧೦೦೮ ಚಿನ್ನದ ಕಾಸುಗಳನ್ನೂ ಮೂರು ಎಲೆಗಳನ್ನೂ ಉಳ್ಳ ಮಾಲೆಯನ್ನು ಧರಿಸಲಾಯಿತು. ಮದರಾಸಿನ ಗುರುಭಕ್ತಶಿರೋಮಣಿ, ಧರ್ಮಾತ್ಮ, ಪದ್ಮಭೂಷಣ, ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರ ಸಹಧರ್ಮಿಣಿ ಶ್ರೀಮತಿ ನಾರಾಯಣಿ ಅಮ್ಮನವರ ವಿಶೇಷ ಪ್ರಯತ್ನದಿಂದ, ಅವರು ಸಮರ್ಪಿಸಿದ ದೊಡ್ಡ ಮೊತ್ತದಿಂದಲೂ ಹಲವು ಊರುಗಳಲ್ಲಿರುವ ಶಿಷ್ಯರುಗಳ ಕಾಣಿಕೆಗಳಿಂದಲೂ ಇದನ್ನು ತಯಾರಿಸಲಾಗಿತ್ತು. ಮಾಲೆಯ ಒಟ್ಟು ತೂಕ ಸುಮಾರು ಎಂಟೂವರೆ ಕೆ.ಜಿ. ಆಗುತ್ತದೆ. ಇವುಗಳಲ್ಲಿರುವ ೧೦೦೮ ಕಾಸುಗಳ ಪೈಕಿ ೧೦೦೦ ಕಾಸುಗಳಮೇಲೆ ಲಲಿತಾಸಹಸ್ರನಾಮದ ಒಂದೊಂದು ನಾಮವನ್ನು ಕೆತ್ತಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳಗ್ಗೆ ೧೦ ಗಂಟೆ ಹೊತ್ತಿಗೆ ಈ ಮಾಲೆಯನ್ನು ಒಂದು ಪಲ್ಲಕ್ಕಿಯಲ್ಲಿ ಇಟ್ಟು ಶೃಂಗೇರಿಯ ಬೀದಿಗಳಲ್ಲಿ ಪ್ರದಕ್ಷಿಣೆಯಾಗಿ ಮೆರವಣಿಗೆ ಮಾಡಿದರು. ಸುವಾಸಿನಿಯರು ಲಲಿತಾಸಹಸ್ರನಾಮ, ಸೌಂದರ್ಯಲಹರೀ ಸ್ತೋತ್ರಗಳನ್ನು ಹಾಡಿಕೊಂಡು ಭಕ್ತಿ ಪರವಶರಾಗಿ ಉತ್ಸವದ ಜೊತೆ ನಡೆದರು. ಈ ಉತ್ಸವಗಳ ಕಾಲದಲ್ಲಿ ಮಾಲೆಯನ್ನು ತಾಯಿ ಶ್ರೀ ಶಾರದಾಂಬೆಗೆ ಧರಿಸಬೇಕೆಂಬುದು ಶ್ರೀ ಗುರುಗಳ ಅಪೇಕ್ಷೆ. ಈ ಉತ್ಸವಗಳನ್ನು ಕಣ್ತುಂಬ ನೋಡಬೇಕೆಂದೂ, ಅವುಗಳಲ್ಲಿ ಕಲೆತುಕೊಳ್ಳಬೇಕೆಂದೂ ಮದರಾಸಿನಿಂದಲೂ ಇನ್ನೂ ಹಲವು ಊರುಗಳಿಂದಲೂ ಅಸಂಖ್ಯವಾಗಿ ಶಿಷ್ಯರುಗಳು ಬಂದು ಸೇರಿದ್ದರು. ಶ್ರೀ ಮಹಾಸನ್ನಿಧಾನ ತಮ್ಮ ಶ್ರೀಕರಗಳಿಂದ ಬೆಳಗ್ಗೆ ೧೧ ಗಂಟೆ ಹೊತ್ತಿಗೆ ಬಲವಾದ ಜಯಘೋಷ ಮೊಳಗುತ್ತಿರಲು ಅಮ್ಮನವರಿಗೆ ಈ ಮಾಲೆಯನ್ನು ಧರಿಸಿ ದೀಪಾರಾಧನೆ ಮಾಡಿದರು.

೧೩-೧೧-೧೯೭೪ರಂದು ಶ್ರೀ ಮಹಾಸನ್ನಿಧಾನದ ೫೮ನೆಯ ಜನ್ಮದಿನ ವೈಭವ, ಆಂಧ್ರದೇಶದ ಮುಖ್ಯಮಂತ್ರಿ ಶ್ರೀ ವೆಂಗಲ್‌ರಾವ್ ಅವರಿಂದ ಆರಂಭಗೊಂಡಿತು. ಶೃಂಗೇರಿಗೆ ಬರುವ ಸೇವಾರ್ಥಿಗಳು ತಂಗುವುದಕ್ಕೆ ಒಂದು ಧರ್ಮಶಾಲೆಯನ್ನು, ತಿರುಪತಿ-ತಿರುಮಲೆ ದೇವಸ್ಥಾನದಿಂದ ಸುಮಾರು ೪ ಲಕ್ಷ ರೂಪಾಯಿ ವೆಚ್ಚದಲ್ಲಿ ಏರ್ಪಡಿಸುವುದಾಗಿ ಆಂಧ್ರದ ಮುಖ್ಯಮಂತ್ರಿಗಳು ಹೇಳಿದರು. ಆಂಧ್ರಪ್ರದೇಶದ ಎಂಡೋಮೆಂಟ್ಸ್ ಮಂತ್ರಿ ಶ್ರೀ ಸೂರ್ಯನಾರಾಯಣರಾಜು ಅವರೂ, ತಿರುಪತಿ ದೇವಸ್ಥಾನದ ಬೋರ್ಡ್ ಮುಖ್ಯ ಸಲಹೆಗಾರರಾದ ಶ್ರೀ ಅಣ್ಣಾರಾವ್ ಅವರೂ ಆಗ ಮುಖ್ಯಮಂತ್ರಿಗಳೊಡನೆ ಇದ್ದರು. ಶ್ರೀ ಮಹಾಸನ್ನಿಧಾನವು ಇವರೆಲ್ಲರಿಗೂ ಶಾಲುಗಳನ್ನೂ ಆಶೀರ್ಮಂತ್ರಾಕ್ಷತೆಗಳನ್ನೂ ಅನುಗ್ರಹಿಸಿದರು.

೩೫ನೆಯ ಪೀಠಾಧಿಪತಿಗಳು ಪಟ್ಟಕ್ಕೆ ಬಂದಾಗಿನಿಂದ ಹಲವು ಕಡೆಗಳಲ್ಲಿ ಶೃಂಗೇರೀ ಮಠಗಳ ಕಟ್ಟಡ ಮೊದಲೇ ಇದ್ದು ಕಾಲಕ್ರಮದಲ್ಲಿ ಶಿಥಿಲವಾಗಿದ್ದ ಮಠಗಳ ನವೀಕರಣ ಇವುಗಳನ್ನು ಮಾಡಿದ್ದಲ್ಲದೆ ದರ್ಶನಕ್ಕೆ ಬರುವ ಶಿಷ್ಯರುಗಳು ತಂಗುವುದಕ್ಕೆ ಒಳ್ಳೆಯ ವಸತಿಗಳನ್ನು ಶೃಂಗೇರಿಯಲ್ಲೂ ಏರ್ಪಡಿಸಿದ್ದಾರೆ. ತಿರುಪತಿ ದೇವಸ್ಥಾನದ ಹೆಸರಿನಲ್ಲಿ ತಯಾರಾಗುವ

Sri Vidyabharathi Book Centre, Sringeri

CC-0. In Public Domain. Digitized by eGangotri

ಈ ಹೊಸ ಛತ್ರದಿಂದ ಶೃಂಗೇರಿಗೆ ಬರುವ ಅಸಂಖ್ಯಾತ ಯಾತ್ರಿಕರಿಗೆ ಆವಶ್ಯಕವಾಗಿರುವ ಸ್ಥಳ ಸೌಕರ್ಯವು ಒದಗಿದಂತಾಗುವುದು.

೭-೧೨-೧೯೭೪ರಂದು ಆಪ್ತಶಿಷ್ಯರ ಪ್ರಾರ್ಥನೆಯ ಪ್ರಕಾರ ಎರಡು ಸನ್ನಿಧಾನಗಳೂ ಶಿವಮೊಗ್ಗಕ್ಕೆ ಹೋಗಿ ೧೦-೧೨-೧೯೭೪ರಂದು ಶೃಂಗೇರಿಗೆ ಹಿಂದಿರುಗಿದರು. ಮತ್ತೆಯೂ ೨೯-೧೨-೧೯೭೪ರಂದು ಹೊರಟು ಯಾತ್ರೆಮಾಡಿ ಎರಡು ಸನ್ನಿಧಾನಗಳೂ ೩೧-೧-೧೯೭೫ರಂದು ಶೃಂಗೇರಿಗೆ ಹಿಂದಿರುಗಿ ಬಂದರು. ಶ್ರೀ ರಾಮೇಶ್ವರಂ ದೇವಸ್ಥಾನದವರಿಂದ ಆಹ್ವಾನಬರಲಾಗಿ ಅದನ್ನೊಪ್ಪಿಕೊಂಡು ೨೭-೧-೭೫ರಂದು ಇಬ್ಬರು ಜಗದ್ಗುರುಗಳೂ ಶೃಂಗೇರಿಯಿಂದ ಹೊರಟು ಹಾಸನ, ಮೈಸೂರು, ಸತ್ಯಮಂಗಲಂ, ಗೋಪಿ, ಈರೋಡು, ಕರೂರು, ತೆನ್‌ಕರೈ ಮಾರ್ಗವಾಗಿ ರಾಮನಾಥಪುರಕ್ಕೆ ಹೋಗಿ ಅಲ್ಲಿ ರಾಮನಾಥಪುರಂ ರಾಜರ ಅರಮನೆಯಲ್ಲಿ ತಂಗಿ, ಆಮೇಲೆ ಇವರುಗಳಿಗೆಂದು ಏರ್ಪಾಡು ಮಾಡಿಸಿದ್ದ 'ನೀರಾವಿ ಹಡಗಿನಲ್ಲಿ' (ಸ್ಟೀಮ್ ಬೋಟಿನಲ್ಲಿ) ರಾಮೇಶ್ವರಕ್ಕೆ ಹೋಗಿ ಅಲ್ಲಿ ೫-೨-೧೯೭೫ರಲ್ಲಿ ಶ್ರೀ ರಾಮನಾಥಸ್ವಾಮಿ, ಶ್ರೀ ಪರ್ವತ ವರ್ಧನಿ ಅಮ್ಮನವರು, ಶ್ರೀ ಕಾಶೀ ವಿಶ್ವನಾಥಸ್ವಾಮಿ, ಶ್ರೀ ಕಾಶೀ ವಿಶಾಲಾಕ್ಷಿ ಅಮ್ಮನವರು—ಈ ಮೂರ್ತಿಗಳ ವಿಮಾನ ಕುಂಭಾಭಿಷೇಕವನ್ನೂ ನೆರವೇರಿಸಿ ಮತ್ತೆ ರಾಮನಾಥಪುರಕ್ಕೆ ಬಂದು ರಾಜರ ಅರಮನೆಯಲ್ಲಿ ತಂಗಿದರು. ಅಲ್ಲಿ ರಾಜರು ವಿಶೇಷ ಭಕ್ತಿಯಿಂದ ಮಾಡಿದ ಸೇವೆಗಳನ್ನು ಕೊಂಡಾಡಿ, ಅಲ್ಲಿಂದ ಮಧುರೆ, ರಾಜಪಾಳೆಯಂ, ತಿರುನೆಲ್ವೇಲಿ, ಕಲ್ಲಿಡೈಕುರಿಚ್ಚಿ, ಆಳ್ವಾರ್‌ಕುರಿಚ್ಚಿ, ಶೆಂಗೋಟ್ಟೈ ಮಾರ್ಗವಾಗಿ ಕಾಲಟಿಗೆ ಬಂದು, ಅಲ್ಲಿ ಮಹಾರುದ್ರಹೋಮ, ಚಂಡೀಹೋಮ ಮೊದಲಾದುವನ್ನು ನಡಸಿದರು. ಶಂಕರ ವಿದ್ಯಾಶಾಲೆಗೂ ಶ್ರೀ ರಾಮಕೃಷ್ಣಾಶ್ರಮಕ್ಕೂ ಬಿಜಯಮಾಡಿ ಉಪದೇಶ ಭಾಷಣಗಳನ್ನು ಮಾಡಿದರು. ಕಾಲಟಿಯಿಂದ ಹೊರಟು ಎರ್ಣಾಕುಳಂ, ತಿರುಚೂರು, ಆಲಪ್ಪುಳೈ, ಮಂಗಳೂರು ಮಾರ್ಗವಾಗಿ ೧೦-೩-೧೯೭೫ರಂದು ಶೃಂಗೇರಿಗೆ ಹಿಂದಿರುಗಿದರು. ೧೧-೩-೧೯೭೫ರಂದು ಶ್ರೀ ಶಿವರಾತ್ರಿ ಉತ್ಸವವನ್ನು ಶೃಂಗೇರಿಯಲ್ಲಿ ನಡಸಿದರು. ಈ ವರ್ಷ ಶಂಕರಜಯಂತೀ ಉತ್ಸವ ಮೇ ತಿಂಗಳು ೧೨ನೆಯ ತಾರೀಖು ಮೊದಲು ೧೬ನೆಯ ತಾರೀಖು ಪೂರ್ತ ಶೃಂಗೇರಿಯಲ್ಲಿ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಯಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯವನ್ನು ಏರ್ಪಡಿಸಬೇಕೆಂಬ ಹಲವು ಶಿಷ್ಯರ ಕೋರಿಕೆಯನ್ನು ಶ್ರೀಮಹಾಸನ್ನಿಧಾನವು ಅಂಗೀಕರಿಸಿ ತುಂಗಾನದಿಯ ದಕ್ಷಿಣತೀರದಲ್ಲಿ ಮೆಟ್ಟಲುಸಾಲಿಗೆ ಸೇರಿದಂತಿರುವ ಸ್ಥಳದಲ್ಲಿ ಈ ದೇವಾಲಯವನ್ನು ನಿರ್ಮಾಣಮಾಡಬೇಕೆಂದು ತೀರ್ಮಾನಿಸಿದರು. ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಈ ಸೇವೆಗಾಗಿ ೮೦೦೦ (ಎಂಟು ಸಾವಿರ) ರೂಪಾಯಿಗಳ ಕಾಣಿಕೆಯನ್ನು ಸಮರ್ಪಿಸಿದರು. ೯-೫-೧೯೭೫ರಂದು ಶ್ರೀ ಮಹಾಸನ್ನಿಧಾನ, ಶ್ರೀ ಸನ್ನಿಧಾನ—ಇಬ್ಬರ ಮುನ್ನೆಲೆಯಲ್ಲಿ ಸಂಡೂರು ಮಹಾರಾಜ ಶ್ರೀ ಯಶವಂತರಾವ್ ಘೋರ್ಪಡೆಯವರಿಂದ ದೇವಾಲಯ ಕಟ್ಟಡ ಅಡಿಗಲ್ಲು ನಾಟಲ್ಪಟ್ಟಿತು. ೫-೬-೧೯೭೫ರಂದು ಶೃಂಗೇರಿಯಲ್ಲಿ ತಿರುಪತಿ ದೇವಸ್ಥಾನದ ಛತ್ರವನ್ನು ಕಟ್ಟುವುದಕ್ಕೆ ಶ್ರೀ ಜಗದ್ಗುರುಗಳು ಅಡಿಗಲ್ಲು ನಾಟಿದರು. ಕರ್ಣಾಟಕ ಸರ್ಕಾರ ನೀಡಿರುವ ಈ ಸ್ಥಳದಲ್ಲಿ ೫ ಲಕ್ಷ ರೂಪಾಯಿ ವೆಚ್ಚದಲ್ಲಿ ವಿಸ್ತಾರಾಕೃತಿಯ ಕೋಣೆಗಳುಳ್ಳ ಛತ್ರವು ಕಟ್ಟಲ್ಪಡುವುದೆಂಬುದನ್ನು ತಿರುಪತಿ ದೇವಸ್ಥಾನದ ನಿರ್ವಾಹಾಧಿಕಾರಿ ಶ್ರೀ ಪಿ. ಎಸ್. ರಾಜಗೋಪಾಲರಾಜು ಅವರು ತಿಳಿಯಪಡಿಸಿದರು.

ಆರನೆಯ ಯಾತ್ರೆ

ಶ್ರೀ ಮಹಾಸನ್ನಿಧಾನದ ೫೯ನೆಯ ವರ್ಧಂತಿ ಉತ್ಸವವು ೧೯೭೫ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಆ ಸಂಬಂಧದಲ್ಲಿ ೧೯೭೫ನೆಯ ನವೆಂಬರ್ ೩ನೆಯ ತಾರೀಖಿನಂದು ಒಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕರ್ಣಾಟಕ ರಾಜ್ಯದ ಗವರ್ನರಾದ ಮಾನ್ಯ ಮೋಹನಲಾಲ ಸುಖಾಡಿಯ ಅವರು ಉತ್ಸವವನ್ನು ಆರಂಭಗೊಳಿಸಿದರು. ರಾಜ್ಯದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರು ಅಗ್ರಾಸನ ವಹಿಸಿದ್ದರು. ಈರೋಡಿನ ಶ್ರೀ ಕೆ. ವಿ. ಸುಬ್ಬರತ್ನಮ್ ಅವರು 'ಶ್ರೀಮತ್ ಅಭಿನವ ವಿದ್ಯಾತೀರ್ಥ ವಿಜಯಮ್' ಎಂಬ ಹೆಸರಿನಿಂದ ತಮಿಳಿನಲ್ಲಿ ರಚಿಸಿದ ಶ್ರೀ ಮಹಾಸನ್ನಿಧಾನದ ಜೀವನ ಚರಿತ್ರೆಯನ್ನು ಅಂದು ಬಿಡುಗಡೆಮಾಡಲಾಯಿತು. ಶ್ರೀ ಆರ್. ಸೋಮನಾಥ ಅಯ್ಯರ್, ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಶ್ರೀ ಕೆ. ಹನುಮಂತಯ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರ್, ಶ್ರೀ ಸೂರ್ಯನಾರಾಯಣ ಅಡಿಗ— ಇವರುಗಳು ಭಾಷಣಮಾಡಿದರು. ಶ್ರೀ ಸನ್ನಿಧಾನ ಶ್ರೀ ಭಾರತೀತೀರ್ಥ ಸ್ವಾಮಿಗಳು ಅನುಗ್ರಹಭಾಷಣ ಮಾಡಿ ಆಶೀರ್ವದಿಸಿ ಶ್ರೀ ಮಹಾಸನ್ನಿಧಾನವು ಶಿಷ್ಯಕೋಟಿಯನ್ನು ನಾನಾ ವಿಧಗಳಲ್ಲಿ ಅನುಗ್ರಹಿಸುತ್ತಿರುವ ವಿಷಯವನ್ನು ವಿವರಿಸಿದರು. ವರ್ಧಂತಿ ಉತ್ಸವಗಳು ಮುಗಿದ ಕೂಡಲೆ ಮೂರುದಿನಗಳ ವರೆಗೆ ಧರ್ಮಸಮ್ಮೇಳನವೊಂದನ್ನು ಏರ್ಪಡಿಸಿತ್ತು. ವೇದಾಧ್ಯಯನಕ್ಕೆ ಪ್ರೋತ್ಸಾಹ ನೀಡಲು ಶ್ರೀ ಮಹಾಸನ್ನಿಧಾನವು ಕೈಕೊಂಡಿರುವ ಕಾರ್ಯಕ್ರಮಕ್ಕೆ ಅನುಸಾರವಾಗಿ ವಿದ್ವತ್ಸಭೆಯನ್ನು ನಡಸಿ ಹಲವಾರು ವಿದ್ವಾಂಸರಿಗೆ ಉದಾರವಾಗಿ ಸಂಭಾವನೆ ನೀಡಿ ಗೌರವಿಸಲಾಯಿತು. ನವೆಂಬರ್ ೨೩ರಂದು ಈರೋಡಿನ ಶ್ರೀ ಕೆ. ವಿ. ಸುಬ್ಬರತ್ನಮ್ ಅವರು, 'ವಿವೇಕ ಚೂಡಾಮಣಿ'ಯನ್ನು (ಶ್ರೀ ಜಗದ್ಗುರು ಗ್ರಂಥಮಾಲೆಯ ೨೭ರಿಂದ ೩೦ನೆಯ ಭಾಗಗಳು) ಮತ್ತು ೧೯೭೫ನೆಯ ವರ್ಷದ ವಿ ಜ ಯ ದ ಶ ಮಿ ವಿಶೇಷ ಸಂಚಿಕೆಯನ್ನೂ ಶ್ರೀ ಜಗದ್ಗುರುಗಳಿಗೆ ಸಮರ್ಪಿಸಿದರು.

ಬೆಂಗಳೂರಿನಿಂದ ಹೊರಟು ಉಭಯ ಸನ್ನಿಧಾನಗಳೂ ತುಮಕೂರು, ಹಾಸನ, ಚಿಕ್ಕಮಗಳೂರು ಡಿಸ್ಟ್ರಿಕ್ಟುಗಳಲ್ಲಿ ಸಂಚರಿಸಿ, ನವೆಂಬರ್ ೨೭ರಂದು ಶೃಂಗೇರಿಯನ್ನು ತಲುಪಿದರು. ಡಿಸೆಂಬರ್ ೧ರಂದು ಉಭಯ ಸನ್ನಿಧಾನಗಳೂ ಮತ್ತೆ ಯಾತ್ರೆ ಹೊರಟರು. ಕುಂದಾಪುರ, ಭಟ್ಕಳ, ಕುಮಟ, ಕರೂರು ಮಾರ್ಗವಾಗಿ ಡಿಸೆಂಬರ್ ೧೦ನೆಯ ತಾರೀಖು ಗೋವಾ ತಲುಪಿದರು. ಗೋವಾದಿಂದ ಡಿಸೆಂಬರ್ ೨೦ರಂದು ಕೊಂಡ (Conda), ಧಾರವಾಡ-ಹುಬ್ಬಳ್ಳಿ, ಯೆಲ್ಲಾಪುರ, ಅಂಕೋಲ, ಗೋಕರ್ಣ, ಸಿರಸಿ, ಹಾವೇರಿ, ರಾಣೀಬೆನ್ನೂರು, ದಾವಣಗೆರೆ, ಚಿತ್ರದುರ್ಗ, ಸಿರಾಗಳನ್ನು ಸಂದರ್ಶಿಸಿ, ೧೯೭೬ನೆಯ ಜನವರಿ ೧೮ರಂದು ಬೆಂಗಳೂರಿಗೆ ಬಂದು ಸೇರಿದರು. ೧೯೭೬ನೆಯ ಮಾರ್ಚಿ ೩ನೆಯ ತಾರೀಖಿನವರೆಗೂ ಬೆಂಗಳೂರಿನಲ್ಲೇ ತಂಗಿದ್ದರು.

೧೯೭೬ನೆಯ ಫೆಬ್ರುವರಿ ೧೨ರಂದು ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಕರ್ಣಾಟಕದ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸರ ಸಂಗಡ ಶ್ರೀ ಶಂಕರಮಠಕ್ಕೆ ಬಂದು ಉಭಯ ಜಗದ್ಗುರುಗಳನ್ನೂ ದರ್ಶನಮಾಡಿ ಆಶೀರ್ವಾದ ಪಡೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಫೆಬ್ರುವರಿ ೨೯ರಂದು 'ಅಖಿಲ ಭಾರತ ಶಂಕರ ಸೇವಾಸಮಿತಿ'ಯ ಒಂದು ವಿಶೇಷ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯಿತು. ಶ್ರೀ ಎ ಆರ್. ಸೋಮನಾಥ ಅಯ್ಯರವರು ಅಧ್ಯಕ್ಷತೆ ವಹಿಸಿದ್ದರು. ಆ ಸಂದರ್ಭದಲ್ಲಿ ಶ್ರೀ ಸನ್ನಿಧಾನ ಸ್ವಾಮಿಗಳು ಅನುಗ್ರಹ ಭಾಷಣಮಾಡಿದರು. ಮಾರ್ಚಿ ೪ರಂದು ಶ್ರೀ ಜಗದ್ಗುರುಗಳು ಬೆಂಗಳೂರಿನಿಂದ ಪ್ರಯಾಣಮಾಡಿ, ಮಾರ್ಗದಲ್ಲಿ ಸೊಂಡೇಕೊಪ್ಪ, ಅರಸೀಕೆರೆಗಳಿಗೆ ಭೇಟಿಕೊಟ್ಟು ಮಾರ್ಚಿ ೬ರಂದು ಶೃಂಗೇರಿಗೆ ತಲುಪಿದರು.

ಮಾರ್ಚಿ ೧೦ರಂದು ಮತ್ತೆ ಶೃಂಗೇರಿಯಿಂದ ಹೊರಟು ಉಭಯ ಶ್ರೀಗಳೂ ಮಣಿಪಾಲ, ಧರ್ಮಸ್ಥಳ ಮಲ್ಲಮತ್ತೂಕುಲಗಳಿಗೆ ಭೇಟಿಕೊಟ್ಟು ಶೃಂಗೇರಿಗೆ ಹಿಂದಿರುಗಿದರು. ಮಾರ್ಚಿ ೧೧ರಂದು ಶ್ರೀಗಳು ಉಡುಪಿಯಲ್ಲಿ ತಂಗಿ ಶ್ರೀ ಶಾರದಾಂಬೆಯ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದರು. ಉಡುಪಿಯಲ್ಲಿ ಉಭಯ ಸನ್ನಿಧಾನಗಳನ್ನೂ ಅಷ್ಟ ಮಠಗಳ ಮಠಾಧಿಪತಿಗಳೂ ಸ್ವಾಗತಿಸಿದರು. ಮಲ್ಲದಲ್ಲಿ ಶ್ರೀ ಸತ್ಯನಾರಾಯಣ ಪ್ರತಿಷ್ಠೆಯನ್ನು ಶ್ರೀ ಮಹಾಸನ್ನಿಧಾನವೇ ನೆರವೇರಿಸಿದರು. ಮಾರ್ಚಿ ೧೮ರಂದು ಸುರತ್ಕಲ್ಲಿನಲ್ಲಿ ಶ್ರೀ ವೀರಭದ್ರಸ್ವಾಮಿಗೆ ಕುಂಭಾಭಿಷೇಕ ನಡಸಲಾಯಿತು. ಮಾರ್ಚಿ ೧೯ರಂದು ಮಂಗಳೂರಿನಲ್ಲಿ ಶ್ರೀ ರಾಜಲಕ್ಷ್ಮಿ ದೇವಸ್ಥಾನದಲ್ಲಿನ ಪ್ರತಿಷ್ಠಾಪನ ವಿಧಿಗಳಲ್ಲಿ ಶ್ರೀ ಮಹಾಸನ್ನಿಧಾನ ಭಾಗವಹಿಸಿದ್ದರು. ಕಿಗ್ಗದಲ್ಲಿ ದೇವಾಲಯದ ಅಷ್ಟಬಂಧ ಮತ್ತು ಕುಂಭಾಭಿಷೇಕಗಳು ಜಗದ್ಗುರುಗಳ ಸಮ್ಮುಖದಲ್ಲಿ ನೆರವೇರಿದವು.

ಆ ವರ್ಷದ ಶ್ರೀರಾಮನವಮಿ ಉತ್ಸವಗಳನ್ನು ಶೃಂಗೇರಿಯಲ್ಲಿ ನಡಸಲಾಯಿತು. ಶ್ರೀ ಶಂಕರಜಯಂತಿ ಉತ್ಸವವು ೧೯೭೬ನೆಯ ಏಪ್ರಿಲ್ ೩೦ರಿಂದ ಮೇ ೪ನೆಯ ತಾರೀಖಿನವರೆಗೆ ನಡೆಯಿತು. ಉತ್ತರಪ್ರದೇಶದ ರಾಜ್ಯಪಾಲ (ಗವರ್ನರ್) ಶ್ರೀ ಚೆನ್ನಾರೆಡ್ಡಿಯವರು ಉತ್ಸವದಲ್ಲಿ ಭಾಗವಹಿಸಿದ್ದರು; ಶ್ರೀ ಮಹಾಸನ್ನಿಧಾನವನ್ನು ದರ್ಶನಮಾಡಿ, ಉತ್ತರಪ್ರದೇಶಕ್ಕೆ ಆಗಮಿಸಬೇಕೆಂದು ಪ್ರಾರ್ಥಿಸಿದರು. ಶಂಕರಜಯಂತಿ ಉತ್ಸವಗಳ ಸಂದರ್ಭದಲ್ಲಿ ಉಭಯ ಸನ್ನಿಧಾನಗಳೂ ಅನುಗ್ರಹಭಾಷಣಮಾಡಿದರು. ೧೯೭೬ನೆಯ ವರ್ಷದ ಚಾತುರ್ಮಾಸ್ಯ ವ್ರತ ಶೃಂಗೇರಿಯಲ್ಲೇ ನಡೆಯಿತು. ಎಂದಿನಂತೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುಸಂಖ್ಯೆಯಲ್ಲಿ ಶಿಷ್ಯವೃಂದ ಬಂದು ಸೇರಿ ವ್ಯಾಸಪೂಜೆಯನ್ನು ಸಂದರ್ಶಿಸಿ, ಜಗದ್ಗುರುಗಳನ್ನು ವಂದಿಸಿ, ಕಾಣಿಕೆಯನ್ನರ್ಪಿಸಿದರು.

ಶ್ರೀ ಗಣಪತಿ ವಾಕ್ಯಾರ್ಥಸದಸ್ಸುಕೂಡ ೧೯೭೬ರ ಆಗಸ್ಟ್ ೨೮ರಿಂದ ಸೆಪ್ಟೆಂಬರ್ ೮ರ ವರೆಗೆ ಶೃಂಗೇರಿಯಲ್ಲಿ ನಡೆಯಿತು.

ಆ ವರ್ಷದ ನವರಾತ್ರಿಕೂಡ ಶೃಂಗೇರಿಯಲ್ಲೆ ನೆರವೇರಿತು. ಆಗ ಸೇರಿದ್ದ ಅಸಂಖ್ಯ ಶಿಷ್ಯರು ಉತ್ಸವಗಳಲ್ಲಿ ಭಾಗವಹಿಸಿ ಆನಂದಿಸಿದ್ದಲ್ಲದೆ, ಮಹಾಸನ್ನಿಧಾನವೂ ಶ್ರೀ ಶಾರದಾಂಬೆಗೆ ಪೂಜೆಮಾಡಿದ್ದನ್ನು ಕಣ್ಣಾರಕಾಣುವ ಭಾಗ್ಯಪಡೆದರು, ಕಂಡು ಪುನೀತರಾದರು. ಶ್ರೀ ಮಹಾಸನ್ನಿಧಾನ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರ ವರ್ಧಂತಿಯ ಸಂದರ್ಭದಲ್ಲಿ ಅಕ್ಟೋಬರ್ ೮ರಿಂದ ವರ್ಧಂತಿಯ ದಿನ ಅಕ್ಟೋಬರ್ ೨೨ರ ವರೆಗೆ ಶ್ರೀ ಶಾರದಾಂಬೆಗೆ ಕೋಟಿ ಅರ್ಚನೆಯನ್ನು ನಡಸಲಾಯಿತು.

ಅಕ್ಟೋಬರ್ ೨೦ರಿಂದ ೨೨ರ ವರೆಗೆ ಧರ್ಮಸಮ್ಮೇಳನವೊಂದನ್ನು ಬಹು ವೈಭವದಿಂದ ನಡಸಲಾಯಿತು. ಈ ವರ್ಷದ ನವರಾತ್ರಿ ಉತ್ಸವ ಸಮಯದಲ್ಲಿ ಸೆಪ್ಟೆಂಬರ್ ೨೮ರಂದು ಶ್ರೀಮತಿ ರಾಜಮ್ ನಾಗರಾಜನ್ ಅವರು ಭಕ್ತರ ಪರವಾಗಿ ಶ್ರೀ ಜಗದ್ಗುರುಗಳಿಗೆ ಒಂದು ಬಂಗಾರದ ಬಿಲ್ವ ಹಾರವನ್ನು ಅರ್ಪಿಸಿದರು. ಅದರ ತೂಕ ೪೭ ಸವರನ್‌ಗಳು; ಬೆಲೆ ಸುಮಾರು ೨೬೦೦೦ ರೂಪಾಯಿ. ಶ್ರೀ ಮಹಾಸನ್ನಿಧಾನವು ಮರುದಿನ ಅದನ್ನು ಶ್ರೀ ಶಾರದಾಂಬೆಗೆ ಸಮರ್ಪಿಸಿದರು. ಮುಂದಿನ ಎರಡು ದಿನಗಳೂ ದರ್ಬಾರಿನ ಸಮಯದಲ್ಲಿ ಶ್ರೀ ಮಹಾಸನ್ನಿಧಾನವು ಆ ಬಿಲ್ವ ಹಾರವನ್ನು ಧರಿಸಿ ಕಂಗೊಳಿಸುವುದನ್ನು ಕಾಣುವುದು ಶಿಷ್ಯವರ್ಗಕ್ಕೆಲ್ಲಾ ಕಣ್ಣಿಗೆ ಹಬ್ಬವಾಗಿತ್ತು.

ಶ್ರೀ ಮಹಾಸನ್ನಿಧಾನವು ಶ್ರೀ ಸನ್ನಿಧಾನವನ್ನೊಡಗೊಂಡು ೧೯೭೬ನೆಯ ನವೆಂಬರ್ ೪ನೆಯ ತಾರೀಖು ಕಾಶೀಯಾತ್ರೆಗೆ ಹೊರಟರು. ಮಾರ್ಗದಲ್ಲಿ ಕರ್ಣಾಟಕ ಮತ್ತು ಆಂಧ್ರದ ಅನೇಕ ಪ್ರದೇಶಗಳಿಗೆ ಭೇಟಿ ಕೊಟ್ಟರು. ಚಿಕ್ಕಮಗಳೂರು, ಹಾಸನಗಳಿಗೆ ಭೇಟಿಕೊಟ್ಟು, ನವೆಂಬರ್ ೬ರಂದು ಬೆಂಗಳೂರು ತಲುಪಿದರು. ನವಂಬರ್ [illegible]೩ರ ವರೆಗೂ ಬೆಂಗಳೂರಿನಲ್ಲಿ ತಂಗಿದ್ದರು. ಶ್ರೀ ಮಹಾಸನ್ನಿಧಾನದ ವರ್ಧಂತಿ ಮಹೋತ್ಸವವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಚರಿಸುವುದಕ್ಕಾಗಿ ನವಂಬರ್ ೧೨ರಂದು ಶಂಕರಮಠದಲ್ಲಿ ವೈಭವದ ಸಮಾರಂಭವನ್ನೇರ್ಪಡಿಸಲಾಯಿತು. ಕರ್ಣಾಟಕದ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ಶ್ರೀ ಸನ್ನಿಧಾನವು ತಮ್ಮ ಅನುಗ್ರಹ ಭಾಷಣದಲ್ಲಿ ಶ್ರೀ ಮಹಾಸನ್ನಿಧಾನದ ಮಹಾಮಹಿಮೆಯನ್ನು ಕುರಿತು ವಿವರಿಸಿ, 'ಗುರು' ಎಂಬ ಹೆಸರು ಅವರಲ್ಲಿ ಅನ್ವರ್ಥವಾಗಿದೆಯೆಂದರು. ಶಿಷ್ಯವೃಂದ ಗುರುಗಳಲ್ಲಿಟ್ಟಿರುವ ಭಕ್ತಿಯನ್ನು ಪ್ರಶಂಸಿಸಿದರು. ಶ್ರೀ ಮಹಾಸನ್ನಿಧಾನಕೂಡ ಅನುಗ್ರಹ ಭಾಷಣಮಾಡಿ ಶಿಷ್ಯರನ್ನು ಆಶೀರ್ವದಿಸಿದರು.

ನವೆಂಬರ್ ೧೩ರಂದು ಉಭಯ ಶ್ರೀಗಳೂ ಬೆಂಗಳೂರಿನಿಂದ ಹೊರಟು ಪ್ರಯಾಣ ಬೆಳಸಿದರು. ಗೌರೀಬಿದನೂರು ಹಿಂದೂಪುರ, ಅನಂತಪುರ, ಗೂಟಿ, ಕರ್ನೂಲು, ದೋರ್ನಾಲ್, ಶ್ರೀಶೈಲ, ಉಮಾಮಹೇಶ್ವರ, ಇಂಡಚರ್ಲಗಳಿಗೆ ಭೇಟಿಕೊಟ್ಟು ನವಂಬರ್ ೨೮ನೆಯ ತಾರೀಖು ಹೈದರಾಬಾದಿಗೆ ತಲುಪಿದರು. ಅವರು ೧೯೭೭ನೆಯ ಡಿಸೆಂಬರ್ ೧೦ರ ವರೆಗೆ ಹೈದರಾಬಾದಿನಲ್ಲಿ ತಂಗಿದ್ದರು.

ಡಿಸೆಂಬರ್ ೧೦ರಂದು ಉಭಯಸನ್ನಿಧಾನಗಳೂ ಕಾಶೀಯಾತ್ರೆಗಾಗಿ ಹೈದರಾಬಾದನ್ನು ಬಿಟ್ಟು ಹೊರಡುತ್ತಿರುವಲ್ಲಿ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ಜೆ. ವೆಂಗಲ್‌ರಾವ್ ಅವರು ಭಾಗವಹಿಸಿದ್ದರು. ಆಗ ಅವರು ಭಾಷಣಮಾಡಿ, ಕಾಶಿಯಿಂದ ಹಿಂದಿರುಗುವಾಗ ಆ ಅವಳಿನಗರಕ್ಕೆ ಮತ್ತೊಮ್ಮೆ ಭೇಟಿಕೊಟ್ಟು ಅಲ್ಲಿ ಹೆಚ್ಚುಕಾಲ ತಂಗಿದ್ದು ಅನುಗ್ರಹಿಸಬೇಕೆಂದು ಉಭಯ ಶ್ರೀಗಳನ್ನೂ ಪ್ರಾರ್ಥಿಸಿಕೊಂಡರು.

ಹೈದರಾಬಾದಿನಿಂದ ಪ್ರಯಾಣ ಬೆಳಸಿ ಶ್ರೀಗಳವರುಗಳು ಯಾದಗಿರಿ ಗುಟ್ಟ, ವರಂಗಲ್ ಕಾಳೇಶ್ವರ, ಮಂಥನಿ, ಕರೀಂನಗರ, ವೇಮುಲವಾಡ, ಧರ್ಮಪುರಿ, ನಿರ್ಮಲ್, ಬಸಾರ್, ಕುಂತಲ, ಅಭಿದಾಬಾಡ್. ಯೋತ್ಮಲ್, ವಾರ್ಧಾ, ನಾಗಪುರಗಳಿಗೆ ಭೇಟಿಕೊಟ್ಟರು. ಅವರು ೧೯೭೬ನೆಯ ಡಿಸೆಂಬರ್ ೨೮ರಿಂದ ೧೯೭೭ನೆಯ ಜನವರಿ ೬ರ ವರೆಗೆ ನಾಗಪುರದಲ್ಲಿ ತಂಗಿದ್ದರು.

Sri Vidyabharathi Book Centre, Sringeri

CC-0. In Public Domain. Digitized by eGangotri

ಜನವರಿ ೭ರಂದು ನಾಗಪುರದಿಂದ ಹೊರಟು ಹಿಂಗನ್‌ಘಾಟ್, ರಾಮಕರ್, ಸಿಯೋನಿ. ಲಖ್ನಾದಾನ್, ಪರಮಹಂಸಗಂಗಾಶ್ರಮ, ಜಬ್ಬಲ್ಪುರ, ಕಟ್ನಿ, ರೇವಾ, ಸೋಹಾಗಿಗಳನ್ನು ಬೇಟಿಮಾಡಿ ಜನವರಿ ೧೮ನೆಯ ದಿನ ಅಲಹಾಬಾದನ್ನು ತಲುಪಿದರು. ಸರ್ಕಾರದ ಅಪ್ಪಣೆಯ ಪ್ರಕಾರ, ಕುಂಭಮೇಳ, ನಡೆಯುವಸ್ಥಳಕ್ಕೆ ೧೨ ಮೈಲಿ ದೂರ ಈಚೆಕಡೆಯೇ ಇರುವ ಯಾಮೀ ರೈಲ್ವೇ ಸ್ಟೇಷನ್ ಹತ್ತಿರವೇ ಎಲ್ಲಾ ವಾಹನಗಳನ್ನೂ ನಿಲ್ಲಿಸಬೇಕಾಗಿದ್ದರೂ, ಗವರ್ನರ್ ಶ್ರೀ ಚೆನ್ನಾರೆಡ್ಡಿಯವರ ಆದೇಶದಂತೆ, ನಮ್ಮ ಶ್ರೀ ಸನ್ನಿಧಾನಗಳ ವಾಹನಗಳನ್ನು ದರ್ಯಾಗಂಜಿನಲ್ಲಿರುವ ಶೃಂಗೇರಿಮಠಕ್ಕೆ ಯಾವ ತಡೆಯೂ ಇಲ್ಲದೆ ತೆಗೆದು ಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ವಿಶೇಷ ಏರ್ಪಾಡುಗಳನ್ನು ಮಾಡಲಾಗಿತ್ತು.

ಈ ಸಲದ ಕುಂಭಾಭಿಷೇಕದ ವೈಶಿಷ್ಟ್ಯವೇನೆಂದರೆ, ಭರತಖಂಡದಲ್ಲಿರುವ ನಾಲ್ಕು ಆಮ್ನಾಯಪೀಠಗಳ ಪೀಠಾಧಿಪತಿಗಳೆಲ್ಲರೂ ಆ ಸಮಯದಲ್ಲಿ ಪ್ರಯಾಗದಲ್ಲಿ ಬಂದು ಸೇರಿದ್ದರು. ಅವರೆಲ್ಲರೂ ೧೯೭೭ರ ಜನವರಿ ೧೯ರಂದು ಪ್ರಯಾಗದಿಂದ ಪ್ರಯಾಣಮಾಡಿದರು.

ಶ್ರೀ ಜಗದ್ಗುರುಗಳ ವಾರಾಣಸೀಗಮನ ಮತ್ತು ಶ್ರೀ ಅನ್ನಪೂರ್ಣಾದೇವಿಯ ಕುಂಭಾಭಿಷೇಕ

ಜನವರಿ ೨೦ನೆಯ ತಾರೀಖು ಅಪರಾಹ್ನ ೪ ಗಂಟೆ ಸಮಯದಲ್ಲಿ ಶ್ರೀ ಶೃಂಗೇರೀ ಶಾರದಾಪೀಠದ ಜಗದ್ಗುರುಗಳು ಕಾಶೀ ಕ್ಷೇತ್ರವನ್ನು ತಲುಪಿದಾಗ. ಮುಖ್ಯಪೇಟೆ (Main Bazar) ಯಲ್ಲಿ ಅವರಿಗೆ ಬಹಳ ವೈಭವ ಪೂರ್ವಕವಾಗಿ ಸ್ವಾಗತ ನೀಡಲಾಯಿತು. ಸ್ವಾಗತಾನಂತರ ಅವರು ತಂಗಲಿದ್ದ ಬಿಡದಿಯವರೆಗೂ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಕಾಶೀಮಹಾರಾಜ ಅರಮನೆಯಲ್ಲಿ ಅವರು ತಂಗುವುದಕ್ಕೆ ಏರ್ಪಾಟುಮಾಡಿದ್ದರು.

ವಸಂತಪಂಚಮಿ ದಿನ, ಎಂದರೆ ಜನವರಿ ೨೪ನೆಯ ದಿನ ಬೆಳಗಿನಜಾವ ೩ ಗಂಟೆ ಸಮಯದಿಂದಲೂ ಭಕ್ತಜನಗಳು ಅನ್ನಪೂರ್ಣಾದೇವಿಯ ದೇವಸ್ಥಾನದ ಬಳಿ ಸೇರತೊಡಗಿದರು; ಅಂದು ಶ್ರೀ ಗುರುಗಳು ಪ್ರತಿಷ್ಠಿಸಲಿದ್ದ ದೇವಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಸ ವಿಗ್ರಹದ ಪ್ರತಿಷ್ಠಾಪನೋತ್ಸವನ್ನು ದರ್ಶನಮಾಡಬೇಕೆಂಬ ಹಿರಿಯಾಸೆಯಿಂದ ಬಂದು ಸೇರತೊಡಗಿದರು.

ಪುರಿಯ ಶ್ರೀ ಶಂಕರಾಚಾರ್ಯರು (ಶ್ರೀ ನಿರಂಜನದೇವ್ ತೀರ್ಥ ಸ್ವಾಮಿಜಿ), ಶ್ರೀ .ಹರಿಹರಪುರ ಮಠದ ಪೀಠಾಧ್ಯಕ್ಷರಾದ ಶ್ರೀ ಸ್ವಾಮಿಗಳು ಆಂಧ್ರ, ಬಿಹಾರ, ಕರ್ಣಾಟಕ ಮತ್ತು ಉತ್ತರ ಪ್ರದೇಶಗಳಿಂದ ಅನೇಕ ಸಾಧುಗಳು—ಎಲ್ಲರೂ ಪುಣ್ಯಕರವಾದ ಪವಿತ್ರಕಾರ್ಯವನ್ನು ದರ್ಶಿಸುವುದಕ್ಕೆ ಬಂದು ನೆರೆದಿದ್ದರು. ಕರ್ಣಾಟಕ ರಾಜ್ಯದ ಮಂತ್ರಿಗಲ್ಲೊಬ್ಬರಾದ ಶ್ರೀ ಹುಚ್ಚಮಾಸ್ತಿಗೌಡರು, ಗೋವದ ಮುಖ್ಯಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ಕರ್ ಇನ್ನೂ ಇತರ ಅನೇಕ ಪ್ರಖ್ಯಾತರಾದ ಭಕ್ತರುಗಳೂ ಉತ್ಸವಕ್ಕೆ ಬಂದಿದ್ದರು.

ಆ ದಿನ (೧೪ನೆಯ ತಾರೀಖು) ಶ್ರೀ ಮಹಾಸನ್ನಿಧಾನ ಮತ್ತು ಶ್ರೀ ಸನ್ನಿಧಾನ –ಉಭಯರೂ ಬೆಳಗ್ಗೆ ಸುಮಾರು ೯ ಗಂಟೆ ಸಮಯದಲ್ಲಿ ದೇವಾಲಯಕ್ಕೆ ಆಗಮಿಸಿದರು. ಆ ಹೊತ್ತಿಗೆ ಪುರಿಯ ಶ್ರೀ ಶಂಕರಾಚಾರ್ಯರವರೂ ಅಲ್ಲಿಗೆ ದಯಮಾಡಿಸಿದರು.

ಗೊತ್ತುಮಾಡಿದ್ದ ಸುಮುಹೂರ್ತದಲ್ಲಿ ದೇವಾಲಯದ ದಕ್ಷಿಣದ್ವಾರದಿಂದ ಗರ್ಭಗೃಹಕ್ಕೆ ಪ್ರವೇಶಮಾಡಿದರು. ಅವರು ಯಾಗಶಾಲೆಯಲ್ಲಿ ಪೂರ್ಣಾಹುತಿಯನ್ನು ಮುಗಿಸಿ ವೇದಘೋಷವೂ ಮಂಗಳವಾದ್ಯಗಳೂ ಮೊಳಗುತ್ತಿರಲು ಶ್ರೀ ಶೃಂಗೇರೀ ಶಾರದಾಪೀಠದ ಶ್ರೀ ಮಹಾಸನ್ನಿಧಾನವು ಹೊಸದಾಗಿ ರೂಪಿತವಾದ ಶ್ರೀ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆಗಳನ್ನು ಮಾಡಿದರು. ಆಮೇಲೆ ಪುರಿಯ ಶ್ರೀ ಶಂಕರಾಚಾರ್ಯರೂ ದಿವ್ಯ ಮಾತೆಗೆ ಪೂಜೆ ಮಾಡಿದರು. ಅನಂತರ, ದೇವಾಲಯದ ಗೋಪುರದ ಮೇಲಿನ ಕಲಶಕ್ಕೆ, ಯಾಗಶಾಲೆಯಿಂದ ತಂದ ಗಂಗಾಜಲದಿಂದ ಅಭಿಷೇಕ ನಡೆಯಿತು. ಅದಾದಮೇಲೆ, ಶ್ರೀ ಮಹಾಸನ್ನಿಧಾನವು ಹಿಂದಿಯಲ್ಲಿ ಅನುಗ್ರಭಾಷಣಮಾಡಿ ಭಕ್ತವೃಂದವನ್ನು ಆಶೀರ್ವದಿಸಿದರು. ಅದೇ ಸಮಯದಲ್ಲಿ 'ದೇವಾಲಯದ ಜೀರ್ಣೋದ್ಧಾರ ಸಮಿತಿ'ಯಿಂದ ಪ್ರಕಟಿತವಾದ 'ಅನ್ನಪೂರ್ಣಾ ಪ್ರತಿಷ್ಠಾ ಪುಷ್ಪಾಂಜಲಿ' ಎಂಬ ಒಂದು ದ್ವಿಭಾಷಾ (ಹಿಂದಿ–ಇಂಗ್ಲಿಷ್) ಪುಸ್ತಕವನ್ನು ಬಿಡುಗಡೆಮಾಡಿದರು. ಶ್ರೀ ಅನ್ನಪೂರ್ಣಾ ದೇವಿಗೆ ಕೋಟಿ ಅರ್ಚನೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಜನವರಿ ೨೫ನೆಯ ತಾರೀಖು ಪ್ರಾರಂಭವಾಯಿತು. ದೇವಸ್ಥಾನದ ಮಹಂತರ ಸೂಚನೆಯ ಪ್ರಕಾರ ಅನ್ನಪೂರ್ಣಾದೇವಿಯ ದೇವಸ್ಥಾನದ ಹತ್ತಿರದ ಜ್ಞಾನವಾಪಿಯ ಬಳಿ ಶತಚಂಡಿ ಮತ್ತು ಮಹಾರುದ್ರ ಹೋಮಗಳನ್ನು ಆ ತಿಂಗಳ ೨೪ರಿಂದ ೨೮ರವರೆಗೆ ನಡಸಲಾಯಿತು. ಶ್ರೀ ಶೃಂಗೇರೀಮಠದಲ್ಲಿಯೂ ಜನವರಿ ೨೬ರಿಂದ ೩೧ರ ವರೆಗೆ ಈಹೋಮಗಳನ್ನು ನಡಸಲಾಯಿತು.

ಕಾಶೀ ಮಹಾರಾಜರ ಆಹ್ವಾನವನ್ನು ಮನ್ನಿಸಿ ಉಭಯ ಸನ್ನಿಧಾನಗಳೂ ಸಾಂಗವೇದ ವಿದ್ಯಾಶಾಲೆಗೆ ಭೇಟಿ ನೀಡಿದರು. ನಮ್ಮ ಜಗದ್ಗುರುಗಳು ಕಾಶೀ ಕ್ಷೇತ್ರಕ್ಕೆ ಆಗಮಿಸಿದ್ದರ ಸಂಬಂಧದಲ್ಲಿ ಒಂದು ವಿದ್ವತ್ ಸದಸ್ಸನ್ನು ಏರ್ಪಡಿಸಿತ್ತು. ಆ ಸದಸ್ಸಿನಲ್ಲಿ ಇಂಡಿಯ ದೇಶದ ಎಲ್ಲಾ ಭಾಗಗಳಿಂದಲೂ ಸುಮಾರು ೪೦೦ ಮಂದಿ ವಿದ್ವಾಂಸರುಗಳು ಭಾಗವಹಿಸಿದ್ದರು. ಆ ವಿದ್ವಾಂಸರ ಪರವಾಗಿ ಜಗದ್ಗುರುಗಳಿಗೆ ಸಂಸ್ಕೃತ ಭಾಷೆಯಲ್ಲಿ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಆ ಎಲ್ಲ ವಿದ್ವಾಂಸರಿಗೂ ಶ್ರೀ ಮಹಾಸನ್ನಿಧಾನವು ಬಹು ಉದಾರವಾಗಿ ಸಂಭಾವನೆಗಳನ್ನು, ಹಲವಾರು ಪಂಡಿತರುಗಳಿಗೆ ವಿಶೇಷ ಬಹುಮಾನಗಳನ್ನೂ ನೀಡಿದರು.

೧೯೭೭ನೆಯ ಫೆಬ್ರುವರಿ ೨ನೆಯ ತಾರೀಖು ಶ್ರೀ ಸನ್ನಿಧಾನಗಳು ಪ್ರಯಾಗಕ್ಕೆ ಪ್ರಯಾಣಮಾಡಿ, ೪ರಂದು ಸಂಗಮದಲ್ಲಿ ಪುಣ್ಯಸ್ನಾನಮಾಡಿ ಕೊಂಡು ಆದೇ ದಿನ ಕಾಶಿಗೆ ಹಿಂದಿರುಗಿದರು. ಫೆಬ್ರುವರಿ ೬ರಂದು ಪ್ರಯಾಣ ಹೊರಟು ಡಾಲ್ಮಿಯ ನಗರ, ಗಯಾ ತಿಲೈಯ, ಧನಬಾದ್, ದುರ್ಗಾಪುರ, ತಾರಕೇಶ್ವರಗಳನ್ನು ಸಂದರ್ಶಿಸಿ, ಕಲ್ಕತ್ತಾವನ್ನು ತಲುಪಿ, ೧೯೭೭ರ ಮಾರ್ಚಿ ತಿಂಗಳ ಕೊನೆಯ ವರೆಗೂ ಅಲ್ಲಿಯೇ ತಂಗಿದ್ದರು.

ನಮ್ಮ ಮಹಾಸನ್ನಿಧಾನದ ೬೧ನೆಯ ವರ್ಷವರ್ಧಂತಿ ಮಹೋತ್ಸವವನ್ನು ರಾಷ್ಟ್ರಾದ್ಯಾಂತವೂ ೧೯೭೭ನೆಯ ನವೆಂಬರ್ ಎರಡನೆಯ ವಾರದಲ್ಲಿ ವೈಭವದಿಂದ ನಡಸುವುದಕ್ಕಾಗಿ ಸಂಯೋಜನೆಗಳನ್ನು ಏರ್ಪಡಿಸಲಾಗುತ್ತಿರುವುದರಿಂದ, ೧೯೭೬ರ ನವೆಂಬರಿನಿಂದ ೧೯೭೭ರ ನವೆಂಬರ್‌ವರೆಗಿನ ಒಂದು ವರ್ಷ ಶ್ರೀಮಠದ ಭಕ್ತರಿಗೆಲ್ಲಾ ಬಹು ಮಹತ್ವಪೂರ್ಣವಾದ ಕಾಲವೆನ್ನಿಸಿದೆ.

ನಮ್ಮ ಜಗದ್ಗುರುಗಳ ಮತ್ತು ಶ್ರೀ ಶಾರದಾದೇವಿಯ ಕೃಪಾಪೂರ್ಣವಾದ ಪರಮಾನುಗ್ರಹವು ನಮಗೆ ನಿರಂತರವಾಗಿ ದೊರಕುತ್ತಿರಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೧೩

ಶ್ರೀ ಭಾರತೀತೀರ್ಥ ಸ್ವಾಮಿಗಳು
(ಶ್ರೀ ಸನ್ನಿಧಾನ)

ಆಂಧ್ರಪ್ರದೇಶದಲ್ಲಿ ಗುಂಟೂರು ಜಿಲ್ಲೆಯಲ್ಲಿ ಪಲನಾಡು ತಾಲ್ಲೂಕಿನಲ್ಲಿ 'ನಾಗುಲೇರು' ಎನ್ನುವ ನದೀತೀರದಲ್ಲಿ 'ಅಲಗುಮಲ್ಲಪಾಡು' ಅಗ್ರಹಾರದಲ್ಲಿ ವೇದವ್ಯುತ್ಪನ್ನರಾಗಿಯೂ ಆಚಾರಶೀಲರಾಗಿಯೂ ಇರುವ ಆಂಧ್ರಕುಟುಂಬ ವೊಂದಿದೆ. ಅವರ ಕುಲದೈವ ತಿರುಮಲೆಯಲ್ಲಿ ನೆಲಸಿರುವ ಶ್ರೀ ವೆಂಕಟೇಶ್ವರ ಸ್ವಾಮಿ. ಅವರು ಕುತ್ಸ ಗೋತ್ರದವರು. ಈ ಕುಟುಂಬದಲ್ಲಿ ಶ್ರೀ ವೆಂಕಟೇಶ್ವ ರಾವಧಾನಿಯೆಂಬರು ಉದಿಸಿದರು. ಅವರಿಗೆ ಸ್ಮಾರ್ತಭಾಗ ವಿದ್ಯಾಭ್ಯಾಸ ತಿರುಪತಿಯಲ್ಲೂ, ವೇದಭಾಗ ವಿದ್ಯಾಭ್ಯಾಸ ಮಚಲೀಪಟ್ಟಣದ ವಿದ್ವಾನ್ ಪಿಶುಪಾಟಿ ಕೊಂಡಾಭಟ್ಟರಲ್ಲಿಯೂ ನಡೆಯಿತು. ಅವರು ತಮ್ಮ ೧೫ನೆಯ ವಯಸ್ಸಿನಲ್ಲಿ ನರಸರಾವ್ ಪೇಟೆ ತಾಲ್ಲೂಕು ಮೆನ್ನೇಕಲ್ಲುಗ್ರಾಮದಲ್ಲಿ ವಾಸಿಸುತ್ತಿದ್ದ ವೇದಮೂರ್ತಿ ಕೋಟಿ ಬ್ರಹ್ಮಯ್ಯ ಶಾಸ್ತ್ರಿಯೆಂಬವರ ಪುತ್ರಿ ಸೌಭಾಗ್ಯವತಿ ಅನಂತಲಕ್ಷ್ಮಿಯನ್ನು ವಿವಾಹವಾದರು.

ಶ್ರೀ ವೆಂಕಟೇಶ್ವರಾವಧಾನಿಗಳಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ತಮಗೆ ಒಂದು ಗಂಡುಮಗು ಆಗಬೇಕೆಂದು ದೇವತೆಗಳನ್ನು ಪೂಜಿಸಿಯೂ, ಪ್ರಾರ್ಥಿಸಿಯೂ, ಸೇವೆಗಳನ್ನು ಮಾಡಿಯೂ, ವ್ರತಗಳನ್ನು ಅನುಷ್ಠಿಸಿಯೂ ಬೇಡಿಕೊಂಡರು. ಒಂದು ವರ್ಷ ಕಾಲ ತಮ್ಮ ಗ್ರಾಮದಲ್ಲಿರುವ ಪರಶಿವನಿಗೆ ಬಿಡದೆ ಮಹನ್ಯಾಸಪೂರ್ವಕವಾಗಿ ರುದ್ರಾಭಿಷೇಕ ಮಾಡಿದರು. ಅದೇ ಊರಿನಲ್ಲಿರುವ ಶ್ರೀ ಆಂಜನೇಯಸ್ವಾಮಿಯ ದೇವಸ್ಥಾನದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೌ। ಅನಂತಲಕ್ಷ್ಮಿ ಅಮ್ಮನವರು ಜಪ ಮಾಡುತ್ತಲೂ, ತಪಸ್ಸುಮಾಡಿಯೂ ಭಗವಂತನನ್ನು ಆರಾಧಿಸುತ್ತಿದ್ದರು.

ಒಂದು ದಿನ ಅನಂತಲಕ್ಷ್ಮಿ ಅಮ್ಮನವರ ಕನಸಿನಲ್ಲಿ ಶ್ರೀ ಆಂಜನೇಯ ಸ್ವಾಮಿ ಕಾಣಿಸಿಕೊಂಡು ಮೂರು ಹಣ್ಣುಗಳನ್ನು ಕೊಟ್ಟು ಅಂತರ್ಧಾನ ಹೊಂದಿದನು. ಈಕೆ ಕಣ್ತೆರೆದು, ತಾನು ಕಂಡ ಹಿತಕರವಾದ ಕನಸನ್ನು ತನ್ನ ಪತಿಗೆ ತಿಳಿಸಿದರು. ಮುಂದಿನ ಕೆಲವು ದಿನಗಳಲ್ಲಿ ಈಕೆ ಗರ್ಭಧರಿಸಿದಳು. ಅವಧಾನಿಗಳು ಚೈತ್ರಮಾಸದ ವಸಂತ ನವರಾತ್ರಿಯಲ್ಲಿ ತಮ್ಮ ಪೂಜಾಗೃಹದಲ್ಲಿ ಇರುವ ಶ್ರೀ ರಾಮಪಟ್ಟಾಭಿಷೇಕ ಪಟದ ಹತ್ತಿರ ಶ್ರೀ ರಾಮದೇವರ ಬಳಿ, "ಪ್ರಭೂ ! ನನಗೆ ಒಂದು ಗಂಡುಮಗುವನ್ನು ಅನುಗ್ರಹಮಾಡು. ಅವನಿಗೆ ಶ್ರೀ ರಾಮಾಂಜನೇಯಲು ಎಂದು ಹೆಸರಿಡುತ್ತೇನೆ" ಎಂದು ಹಗಲೂ ಇರುಳೂ ಪ್ರಾರ್ಥಿಸುತ್ತಿದ್ದರು. ಸೌ|| ಅನಂತಲಕ್ಷ್ಮಿ ಅಮ್ಮನವರಿಗೆ ಒಂಬತ್ತು ತಿಂಗಳು ತುಂಬಿತು. ಅವಧಾನಿಗಳ ಪ್ರಾರ್ಥನೆ ವ್ಯರ್ಥವಾಗಲಿಲ್ಲವೆಂದು ಸೂಚಿಸುವ ಅನೇಕ ಸೂಚನೆಗಳು ಕಾಣಿಸಿಕೊಂಡವು. ಇವನ್ನು ಅಂದಂದು ಅವಧಾನಿಗಳು ತಮ್ಮ ಸಹಧರ್ಮಿಣಿಗೆ ತಿಳಿಸುತ್ತಬಂದರು. ಈಕೆ ೧೦ನೆಯ ತಿಂಗಳಲ್ಲಿ ಒಂದು ಗಂಡುಮಗುವನ್ನು ಪ್ರಸವಿಸಿದರು.

ಖರ ಸಂವತ್ಸರ ಚೈತ್ರ ಶುಕ್ಲ ಷಷ್ಠಿ ಬುಧವಾರ ಮೃಗಶೀರ್ಷ ನಕ್ಷತ್ರ ಧನುರ್ಲಗ್ನ ಸೇರಿರುವ ಶುಭಯೋಗ ಶುಭದಿನದಲ್ಲಿ (೧೦-೪-೧೯೫೧) ಮಗುವಿನ ಜನನವಾಯಿತು. ಅವಧಾನಿಗಳಿಗೆ ಗಂಡು ಸಂತಾನ ಉಂಟಾದ್ದಕ್ಕಾಗಿ ಇಡೀ ಗ್ರಾಮ ಸಂತೋಷಪಟ್ಟಿತು. ಮಗುವಿಗೆ 'ಸೀತಾರಾಮ ಆಂಜನೇಯಲು' ಎಂದು ನಾಮಕರಣಮಾಡಿದರು.

ಒಂದು ದಿನ ಸೌ|| ಅನಂತಲಕ್ಷ್ಮಿ ಅಮ್ಮನವರು ಬೆಳಕುಹರಿಯುವ ಹೊತ್ತು — ಮುಂಜಾನೆ ೫ ಗಂಟೆ ಸಮಯದಲ್ಲಿ ಎಚ್ಚತ್ತು ಕಣ್ಣು ಬಿಟ್ಟರು. ಪಕ್ಕದಲ್ಲಿ ಮಲಗಿಕೊಂಡಿದ್ದ ತನ್ನ ಮಗನ ಮೇಲೆ ಆಕೆಯ ನೋಟ ಹರಿಯಿತು. ಎಂಥ ಆಶ್ಚರ್ಯ ! ಮಗುವಿನ ಮುಖಮಂಡಲವನ್ನು ಸುತ್ತಿ ಸೂರ್ಯಪ್ರಭೆಯ ಹಾಗಿರುವ ಒಂದು ಕಾಂತಿ ಮಂಡಲವನ್ನು ಕಂಡರು, ತಾಯಿಗೆ ದಿಗಿಲಾಯಿತು. ಹತ್ತಿರ ಇದ್ದ ಕೆಲವರಿಗೆ ಈ ಸಂಗತಿಯ ವಿಷಯವಾಗಿ ಹೇಳಿದರು. ವಿಷಯವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿತ ಹಿರಿಯರುಗಳು, " ಈ ಹುಡುಗನಿಗೆ ಮಹತ್ತಾದ ಭವಿಷ್ಯವಿದೆ ಎಂಬುದಕ್ಕೆ ಇದು ಒಂದು ಸೂಚನೆ" ಎಂದು ಅಭಿಪ್ರಾಯ ತಿಳಿಸಿದರು. ಹೆತ್ತವರಿಗೆ ಉಂಟಾದ ಉತ್ಸಾಹ ವಿವರಿಸುವುದಕ್ಕೆ ಸಾಧ್ಯವಿಲ್ಲ.

ಮಗುವಿಗೆ ಮೂರು ವರ್ಷ ತುಂಬುವುದಕ್ಕೆ ಮುಂಚೆಯೇ ಗ್ರಾಮದಲ್ಲಿರುವ ಹೆಂಗಸರು ಈ ಮಗುವಿದ್ದ ಮನೆಗೆ ಬಂದು, ಮಗುವನ್ನು ತಮ್ಮ ಮನೆಗೆ ಎತ್ತಿಕೊಂಡು ಹೋಗುತ್ತಿದ್ದರು. ಮಗು ಮತ್ತೆ ಮನೆ ಸೇರುವುದಕ್ಕೆ ಸಾಯಂಕಾಲವಾಗುತ್ತಿತ್ತು. ಅದುವರೆಗೂ ಅವರು ಮಗುವಿನ ಜೊತೆ ಮಾತು ಕಥೆಯಾಡುತ್ತಾ ವಿನೋದಪಡುವರು. ಪ್ರತಿ ದಿನವೂ ತಾಯಿ ಅನಂತಲಕ್ಷ್ಮಿ ಅಮ್ಮನವರಿಗೆ ಮನೆಮನೆ ತಿರುಗಿ ಮಗುವನ್ನು ಹುಡುಕಿಕೊಂಡು ಮನೆ ಸೇರಿಸುವುದೇ ಒಂದು ಕೆಲಸವಾಗಿತ್ತು.

ಒಂದು ದಿನ ಮಗು ಬಿಡುವಿಲ್ಲದೆ ಅಳುತ್ತಲೇ ಇತ್ತು. ಎಷ್ಟೆಷ್ಟು ಸಮಾಧಾನಮಾಡಿದರೂ ಅಳುವನ್ನು ನಿಲ್ಲಿಸಲೇ ಇಲ್ಲ. ತಾಯಿ ಮಗುವನ್ನು ಶ್ರೀ ಭವಾನಿಶಂಕರ ಸನ್ನಿಧಾನಕ್ಕೆ ಎತ್ತಿಕೊಂಡುಹೋದರು. ದೇವಸ್ಥಾನಕ್ಕೆ ತಲುಪಿದ ಕೂಡಲೆ ಅಳು ನಿಂತಿತು. " ಶಂಭೋ ಶಿವ ಶಿವ" ಎಂದು ಮಗು ತನ್ನ ತೊದಲು ನುಡಿಯಲ್ಲಿ ಮತ್ತೆ ಮತ್ತೆ ಉಚ್ಚರಿಸಿತು. ತಾಯಿ ಮಗುವಿನೊಂದಿಗೆ ಮನೆಗೆ ಹಿಂದಿರುಗಿದಳು. ಆದರೆ ಮಗು "ಶಂಭೋ ಶಿವ ಶಿವ" ಎಂದು ನುಡಿಯುತ್ತಲೇ ಇತ್ತು. ಗ್ರಾಮದಲ್ಲಿರುವವರು " ಮೂರೇ ವರ್ಷ ವಯಸ್ಸಿನ ಈ ಮಗು ಎಷ್ಟು ಚೆನ್ನಾಗಿ ಈಶ್ವರನಾಮವನ್ನು ಹೇಳುತ್ತದೆ!" ಎಂದು ಆಶ್ಚರ್ಯಪಟ್ಟರು.

ಹುಡುಗನ ಅಕ್ಕನಿಗೆ ೭ ವರ್ಷ. ಆ ಚಿಕ್ಕ ವಯಸ್ಸಿನಲ್ಲಿಯೂ ಅವಳು ಸಂಸ್ಕೃತದಲ್ಲಿ ಸಂಭಾಷಣೆಮಾಡುವ ಸಾಮರ್ಥ್ಯ ಹೊಂದಿದ್ದಳು. ತನ್ನ ತಮ್ಮನಿಗೆ ಸಂಸ್ಕೃತಭಾಷೆಯನ್ನು ಕಲಿಸುವುದಕ್ಕೆ ಪ್ರಯತ್ನಮಾಡುತ್ತ ಬಂದಳು. ಅವರ ತಂದೆ ಇದನ್ನು ಕಂಡು ಆಂಜನೇಯುಲುವಿಗೆ ಸಂಸ್ಕೃತ ಭಾಷೆಯನ್ನು ಸುಲಭ ರೀತಿಯಲ್ಲಿ ಕಲಿಸುತ್ತ ಬಂದರು.

ಹುಡುಗನಿಗೆ ಏಳನೆಯ ವಯಸ್ಸಿನಲ್ಲಿ ಸಂಪ್ರದಾಯದಂತೆ ಉಪನಯನ ನಡಸಲಾಯಿತು. [illegible] ಆಸಕ್ತಿಯನ್ನು ತೋರುತ್ತಾ, ವಿಷಯ

Sri Vidyabharathi Book Centre, Sringeri

CC-0. In Public Domain. Digitized by eGangotri

ಗಳನ್ನು ಗ್ರಹಿಸುತ್ತಾ, ಆ ಬಗ್ಗೆ ಆಲೋಚಿಸುವುದರಲ್ಲೂ ಅಪಾರವಾದ ಅಪೇಕ್ಷೆ ತೋರಿಸುತ್ತಾ ಚೆನ್ನಾಗಿ *ಏಕಸಂಧಿಗ್ರಾಹಿಯಾಗಿ ಬೆಳಗಿದನು.

೧೯೬೦ನೆಯ ವರ್ಷ ಶ್ರೀ ಶೃಂಗೇರೀ ಜಗದ್ಗುರು ಶ್ರೀ ಅಭಿನವ ವಿದ್ಯಾ ತೀರ್ಥ ಸ್ವಾಮಿಗಳು ನರಸರಾವ್‌ಪೇಟೆಯಲ್ಲಿ ಮುಕ್ಕಾಂ ಮಾಡಿದ್ದಾಗ, ಶ್ರೀ ಮಹಾಸನ್ನಿಧಾನವನ್ನು ದರ್ಶಿಸುವುದಕ್ಕಾಗಿ ಶ್ರೀ ವೆಂಕಟೇಶಾವಧಾನಿಗಳು ತಮ್ಮ ಕುಟುಂಬದೊಡನೆ ಬಂದರು. ಪೂಜೆಯ ಸಮಯದಲ್ಲಿ ಹುಡುಗ ಸೀತಾರಾಮಾಂಜನೇಯಲು ಮಂತ್ರಗಳನ್ನು ಉಚ್ಚರಿಸುತ್ತಲೇ ಇದ್ದನು. ಬಹಳ ಸ್ಪಷ್ಟವಾದ, ಶುದ್ಧವಾದ ಉಚ್ಚಾರ. ಇದು ಮಹಾಸನ್ನಿಧಾನದ ಗಮನ ವನ್ನು ಸೆಳೆಯಿತು. ಹುಡುಗನೊಡನೆ ಮಹಾಸನ್ನಿಧಾನವು ಸಂಸ್ಕೃತದಲ್ಲಿ ಮಾತಾಡಲು, ಹುಡುಗನೂ ಸರಿಯಾದ ಕ್ರಮದಲ್ಲಿ ಅದೇ ಭಾಷೆಯಲ್ಲಿ ಉತ್ತರ ಕೊಟ್ಟನು. ಶ್ರೀ ಮಹಾಸನ್ನಿಧಾನವು ಬಹಳ ಸಂತೋಷಪಟ್ಟು ಹುಡುಗನನ್ನು ಆಶೀರ್ವದಿಸಿದರು. ಆಗ ಶ್ರೀ ಸೀತಾರಾಮಾಂಜನೇಯಲುವಿಗೆ ವಯಸ್ಸು ೯ ವರ್ಷ.

ಮುಂದಿನ ವರ್ಷ ಜಗದ್ಗುರುಗಳು ವಿಜಯವಾಡದಲ್ಲಿ ಮುಕ್ಕಾಂ ಮಾಡಿದ್ದಾಗ, ಆ ನಗರದಲ್ಲಿರುವ ಪ್ರಸಿದ್ಧಿ ಹೊಂದಿದ ಆಯುರ್ವೇದ ಪಂಡಿತರು ಕೌತ ಸುಬ್ರಮಣ್ಯ ಶಾಸ್ತ್ರಿಗಳು ಸೀತಾರಾಮಾಂಜನೇಯಲುವನ್ನೂ ಅವನ ತಂದೆತಾಯಿಗಳನ್ನೂ ಆಚಾರ್ಯರ ದರ್ಶನಕ್ಕಾಗಿ ಕರೆದುಕೊಂಡುಹೋದರು. ಈ ಸಲವೂ ಶ್ರೀ ಮಹಾಸನ್ನಿಧಾನ ಹುಡುಗನೊಡನೆ ಸಂಸ್ಕೃತದಲ್ಲಿ ಸಂಭಾಷಿಸಿದರು. ಹುಡುಗ ವೇದಮಂತ್ರಗಳನ್ನು ಸ್ವಲ್ಪವೂ ತಪ್ಪಿಲ್ಲದಂತೆ ಸ್ಪಷ್ಟವಾಗಿ ಉಚ್ಚರಿಸುತ್ತಿದ್ದುದನ್ನು ಕಂಡು ಶ್ರೀ ಜಗದ್ಗುರುಗಳವರು ಉತ್ಸಾಹಗೊಂಡು, ಶ್ರೀ ಸೀತಾರಾಮ ಆಂಜನೇಯಲುವಿಗೆ ಒಂದು ಹೊನ್ ವಸ್ತ್ರವನ್ನು ನೀಡಿ ಆಶೀರ್ವದಿಸಿದರು. ಆ ವಸ್ತ್ರವನ್ನು ಉಟ್ಟುಕೊಂಡಮಾತ್ರ ದಲ್ಲಿಯೇ ತನ್ನೊಳಗೆ ಏನೋ ಒಂದು ಮಾರ್ಪಾಡು ಉಂಟಾದಂತೆ ಹುಡುಗನಿಗೆ

---

* ಯಾವುದೇ ವಿಷಯವನ್ನು ಒಂದು ಸಲ ಕೇಳಿದ ಮಾತ್ರವೇ ಚೆನ್ನಾಗಿ ಅರಿತುಕೊಳ್ಳಬಲ್ಲವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರಿತು. ಅದು ಮೊದಲು ಹುಡುಗ ಶ್ರೀ ಜಗದ್ಗುರುಗಳ ಸ್ಮರಣೆಮಾಡುತ್ತಲೇ ಇದ್ದನು. ಮನೆಯಲ್ಲಾಗಲಿ, ಹೊರಗೇ ಆಗಲಿ, ಶ್ರೀ ಜಗದ್ಗುರುಗಳ ವಿಷಯವಾಗಿಯೇ ಅವನ ಮಾತು. ಅಷ್ಟಕ್ಕೆ ನಿಲ್ಲದೆ, ಊರಜನಗಳೊಡನೆಯೂ ಶ್ರೀ ಆಚಾರ್ಯರನ್ನು ಹೊಗಳಿ ಹೊಗಳಿ ಮಾತಾಡತೊಡಗಿದನು. ಶ್ರೀ ಸೀತಾರಾಮಾಂಜನೇಯಲುವಿನ ವಿದ್ಯಾಭ್ಯಾಸ ನರಸರಾವ್‌ಪೇಟೆಯಲ್ಲಿ ವಿದ್ವಾನ್ ಶ್ರೀ ಪ್ರತಾಪಗಿರಿ ಶಾಸ್ತ್ರಿಗಳವರಲ್ಲಿ ನಡೆಯಿತು.

ಹುಡುಗ ತನ್ನ ತಂದೆಯಾದ ಅವಧಾನಿಗಳ ಬಳಿ ವೇದಾಭ್ಯಾಸಮಾಡಿದನು. ಆಂಗ್ಲವಿದ್ಯಾಶಾಲೆಯಲ್ಲಿ ಸೇರಿ ಎಸ್.ಎಸ್.ಎಲ್.ಸಿ. ವರೆಗೆ ಓದಿದನು. ಆ ಕಾಲದಲ್ಲಿ ನರಸರಾವ್‌ಪೇಟೆಯಲ್ಲಿದ್ದ ಶ್ರೀ ವಿದ್ಯಾರಣ್ಯಸ್ವಾಮಿಗಳು (ಆಮೇಲೆ ಶೃಂಗೇರಿಗೆ ಹೋಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವರು) ಸೀತಾರಾಮ ಆಂಜನೇಯಲುವಿನ ಮೇಧಾಶಕ್ತಿಯನ್ನು ಹೊಗಳಿ, "ಅವನಿಗೆ ಮಹತ್ತಾದ ಭವಿಷ್ಯ ಕಾದಿದೆ. ಒಬ್ಬ ಮಹಾಪುರುಷನಾಗಿ ಬೆಳಗಲಿದ್ದಾನೆ" ಎಂದು ಹೇಳಿದರು. ಹುಡುಗ ಶೃಂಗೇರಿಗೆ ಹೋಗಿ ಅಲ್ಲಿ ಶಾಸ್ತ್ರವನ್ನು ಕಲಿಯಬೇಕೆಂದು ಬಹಳ ಆಸೆಯಿಟ್ಟುಕೊಂಡಿದ್ದನು. ದಿನಗಳು ಕಳೆಯುತ್ತ ಕಳೆಯುತ್ತ ಈ ಬಯಕೆ ಹೆಚ್ಚುತ್ತಲೇ ಬಂತು ; ಬಹು ತೀವ್ರವಾಯಿತು.

೧೯೬೭ನೆಯ ವರ್ಷ ಜಗದ್ಗುರು ಮಹಾಸನ್ನಿಧಾನ ಉಜ್ಜಯಿನಿಯಲ್ಲಿ ಮುಕ್ಕಾಂ ಮಾಡಿದ್ದರು. ಆಗ ವಿದ್ಯಾರಣ್ಯಸ್ವಾಮಿಗಳೊಡನೆ ಶ್ರೀ ಸೀತಾರಾಮ ಆಂಜನೇಯಲುವೂ ಅಲ್ಲಿ ಬಂದಿದ್ದ. ೧೫ ವರ್ಷ ವಯಸ್ಸಿನ ಈ ಹುಡುಗ ಶ್ರೀ ಮಹಾಸನ್ನಿಧಾನ ಅವರಿಂದಲೇ ಶಾಸ್ತ್ರಗಳನ್ನು ಕಲಿತು ಅಭ್ಯಾಸಮಾಡಬೇಕೆಂಬ ಅಭಿಲಾಷೆಯನ್ನು ಶ್ರೀ ಮಹಾಸನ್ನಿಧಾನಕ್ಕೆ ವಿಜ್ಞಾಪಿಸಿಕೊಂಡನು. ಆ ಸಮಯದಲ್ಲಿ ಶ್ರೀ ಮಹಾಸನ್ನಿಧಾನ ಏನೊಂದೂ ಹೇಳಲಿಲ್ಲ. ಮರುದಿನ ಬೆಳಗ್ಗೆ ಶ್ರೀ ಮಹಾಸನ್ನಿಧಾನ ಶ್ರೀ ಸೀತಾರಾಮ ಆಂಜನೇಯಲುವನ್ನು ತಮ್ಮ ಮುಂದೆ ಬರಬೇಕೆಂದು ಹೇಳಿಕಳಿಸಿದರು. ಹುಡುಗ ಬಂದ. ಶ್ರೀ ಮಹಾಸನ್ನಿಧಾನವು ಅವನನ್ನು ಕುರಿತು, "ನೀನು ತರ್ಕಸಂಗ್ರಹ*ವನ್ನು

---

* ತರ್ಕಶಾಸ್ತ್ರ ವಿಷಯಗಳನ್ನು ಅಡಕವಾಗಿ ವಿವರಿಸುವ ಒಂದು ಚಿಕ್ಕ ಗ್ರಂಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಓದಿದ್ದೀಯಾ ?" ಎಂದು ಕೇಳಿದರು. ಹುಡುಗ ಬಹು ವಿನಯದಿಂದ ಕೈಮುಗಿದು 'ಇಲ್ಲ' ಎಂದು ಉತ್ತರಕೊಟ್ಟನು. ಅಂದು ಮೊದಲು ಶ್ರೀ ಮಹಾಸನ್ನಿಧಾನವು ಶ್ರೀ ಸೀತಾರಾಮ ಆಂಜನೇಯಲುವಿಗೆ ತರ್ಕಶಾಸ್ತ್ರದಲ್ಲಿ ಪಾಠ ಹೇಳಲು ಆರಂಭಿಸಿದರು.

[ಶ್ರೀ ಶಾರದಾಪೀಠವನ್ನು ಅಲಂಕರಿಸುತ್ತ ಬಂದಿರುವ ಅಧಿಪತಿಗಳೆಲ್ಲರೂ ತರ್ಕಶಾಸ್ತ್ರದಲ್ಲಿಯೂ, ವೇದಾಂತದಲ್ಲಿಯೂ ಪೂರ್ಣ ಪಾಂಡಿತ್ಯ ಪಡೆದವರು ಎಂಬುದನ್ನು ಎಲ್ಲರೂ ಬಲ್ಲರು. ಪ್ರಖ್ಯಾತಿ ಪಡೆದ ಶ್ರೀ ಶಾರದಾಪೀಠವಾಗಿರುವ ಸರ್ವಜ್ಞ ಪೀಠಕ್ಕೆ ಬರುವ ಕಾಲದಲ್ಲಿ, ತಕ್ಕ ಯೋಗ್ಯತೆಯುಳ್ಳವರಾಗಿರಬೇಕು ಎಂಬುದಕ್ಕಾಗಿಯೇ, ನಮ್ಮ ಶ್ರೀ ಮಹಾಸನ್ನಿಧಾನವು ಶ್ರೀ ಸೀತಾರಾಮ ಆಂಜನೇಯಲುವಿಗೆ ತರ್ಕಶಾಸ್ತ್ರದಲ್ಲಿ ಪ್ರತ್ಯೇಕವಾದ ಪರಿಶ್ರಮ ನೀಡಿದರೆಂದು ತೋರುತ್ತದೆ.]

ಮೂರು ತಿಂಗಳಲ್ಲಿ ತರ್ಕಸಂಗ್ರಹದ ಪಾಠ ಮುಗಿಯಿತು. ಶ್ರೀ ಗುರುಗಳ ಅನುಗ್ರಹವನ್ನು ಪರಿಪೂರ್ಣವಾಗಿ ಪಡೆದ ಸೀತಾರಾಮ ಆಂಜನೇಯಲು ಆವೇಲೂ ತರ್ಕಶಾಸ್ತ್ರದ ಸೂಕ್ಷ್ಮಗಳನ್ನೂ ವಿಶೇಷಗಳನ್ನೂ ತಿಳಿದುಕೊಳ್ಳಬೇಕೆಂದು ಮಹತ್ತಾದ ಆಸೆಯುಳ್ಳವನಾದನು. ಗುರು ಸೇವೆ ಮಾಡಿಕೊಂಡು ಶ್ರೀ ಮಹಾಸನ್ನಿಧಾನದ ಯಾತ್ರೆಯಲ್ಲೆಲ್ಲಾ—ನೇಪಾಳ, ಕಾಶ್ಮೀರ, ಬದರಿ ಇವೂ ಸೇರಿ—ಅವರ ಜೊತೆಯಲ್ಲೇ ಇದ್ದನು. ತರ್ಕದಲ್ಲಿಯೂ ಮೀಮಾಂಸ ದಲ್ಲಿಯೂ ಪಾಠಗಳನ್ನು ಪ್ರಾರಂಭಿಸಿ ಅಭ್ಯಾಸಿಸಿದನು. ಶ್ರೀ ಮಹಾಸನ್ನಿಧಾನದ ಕೃಪಾಕಟಾಕ್ಷದಿಂದ ಪರಿಪೂರ್ಣ ಪಾಂಡಿತ್ಯಪಡೆದನು.

ಶ್ರೀ ಶಂಕರಜಯಂತಿ ಉತ್ಸವ ಸಮಯದಲ್ಲಿಯೂ ವಿನಾಯಕ ಚತುರ್ಥೀ ಉತ್ಸವ ಸಮಯದಲ್ಲಿಯೂ ಶೃಂಗೇರೀ ಶ್ರೀ ಜಗದ್ಗುರುಗಳು ವರ್ಷಕ್ಕೆ ಎರಡು ಸಲ ವಿದ್ವತ್ಸದಸ್ಸನ್ನು ಸೇರಿಸುತ್ತಾರೆ. ಅಖಿಲ ಭಾರತದ ಎಲ್ಲಾ ಪ್ರದೇಶ ಗಳಿಂದಲೂ ವಿದ್ಯಾಪಾರಂಗತರು ಈ ಸಮ್ಮೇಳನಗಳಿಗೆ ಬರುತ್ತಾರೆ. ಆ ಸಮಯ ಗಳಲ್ಲಿ ಶ್ರೀ ಸೀತಾರಾಮ ಆಂಜನೇಯಲು ಪಂಡಿತರುಗಳೊಡನೆ ಬಹು ಸರಳ ಶೈಲಿಯಲ್ಲಿ ಶುದ್ಧವಾದ ಸಂಸ್ಕೃತದಲ್ಲಿ ಮಾತಾಡುವರು. ಅವರುಗಳು ಈ ವಿದ್ಯಾರ್ಥಿಯ ಮೇಧಾಶಕ್ತಿಯಿಂದ ಆಕರ್ಷಿತರಾಗಿ, ಆಶ್ಚರ್ಯಗೊಳ್ಳುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಯಶಾಸ್ತ್ರದಲ್ಲಿ ವಿಸ್ತಾರವಾದ ಪರಿಶ್ರಮ ಪಡೆಯುವುದಕ್ಕೋಸ್ಕರ ಶ್ರೀ ಸೀತಾರಾಮ ಆಂಜನೇಯಲು ಆನಂದಾವರಂ ಕೊಲ್ಲಪ್ಪೂಡಿ ಶ್ರೀ ಗೋಪಾಲ ಕೃಷ್ಣಮೂರ್ತಿ ಶಾಸ್ತ್ರಿ ಎಂಬ ಪಂಡಿತರ ಬಳಿ ಪಾಠಕಲಿತುಕೊಳ್ಳಲು ಶ್ರೀ ಮಹಾಸನ್ನಿಧಾನ ಏರ್ಪಾಡುಮಾಡಿದರು. ಈ ಶ್ರೀ ಗೋಪಾಲಕೃಷ್ಣಶಾಸ್ತ್ರಿ, ವಾರಣಾಸಿಯ ಪಂಡಿತರಾಜ, ಪದ್ಮಭೂಷಣ, ದ್ರವಿಡ ರಾಜೇಶ್ವರ ಶಾಸ್ತ್ರಿಗಳ ಬಳಿ ಶಾಸ್ತ್ರಾಭ್ಯಾಸಮಾಡಿದವರು. ಮುಂದೆ ಶ್ರೀ ಸೀತಾರಾಮ ಆಂಜನೇಯಲುವಿಗೆ ಶ್ರೀ ಮಹಾಸನ್ನಿಧಾನವೇ ತರ್ಕಶಾಸ್ತ್ರ (ಉತ್ತರವಾದಮ್), ವೇದಾಂತ– ಇದನ್ನು ನೇರವಾಗಿ ಪಾಠಹೇಳಿ ಅನುಗ್ರಹಮಾಡಿದರು.

———

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ೧೪

ಉಪಸಂಹಾರ

ಶ್ರೀ ಶೃಂಗೇರೀ ಪೀಠಾಧಿಪತಿಗಳ ಜೀವನಚರಿತ್ರೆಯ ಹಲವು ಸೂಕ್ಷ್ಮಾಂಶಗಳನ್ನು ಈ ಹಿಂದೆ ಕಂಡೆವು. ಇದೊಂದು ಜೀವನ್ಮುಕ್ತ ಪರಂಪರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಬಹಳ ಎಳೆವಯಸ್ಸಿನಲ್ಲಿಯೇ ಶಾಸ್ತ್ರಾಭ್ಯಾಸಕ್ಕೆ ಮುಂಚೆಯೇ, ಇವರುಗಳಲ್ಲಿ ಆತ್ಮಗುಣಗಳ ಚಿಹ್ನೆಗಳು ಭದ್ರವಾಗಿ ಮನೆಮಾಡಿಕೊಂಡಿರುತ್ತವೆ. ಅನಂತರ ಜೀವನ್ಮುಕ್ತರಾಗಬೇಕಾದ ನೆಲೆಗೆ ಇದು ತಕ್ಕ ಆಧಾರವಾಗುವುದು. ಈ ಪೀಠದಲ್ಲಿ ೩೩ನೆಯ ಅಧಿಪತಿಯಾಗಿ ಬಂದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳಿಗೆ ೯ನೆಯ ವಯಸ್ಸಿನಲ್ಲಿ ಸಂನ್ಯಾಸಾಶ್ರಮವನ್ನು ಕೊಡಲಾಯಿತು. ಶಾಸ್ತ್ರಗಳನ್ನು ಓದಿದವರ ವಂಶದಲ್ಲಿ ಜನ್ಮವೆತ್ತಿದವರು ಇವರು. ಆದರೆ ೯ನೆಯ ವಯಸ್ಸಿನಲ್ಲಿ ಶಾಸ್ತ್ರವನ್ನು ಓದುವದಕ್ಕೆ ಹೇಗೆ ಸಾಧ್ಯ ? ಹಾಗಿದ್ದರೂ—ಸಂನ್ಯಾಸಕ್ಕೇ ಹುಟ್ಟಿದವರಾಗಿ ತೋರುವುದು—ಸಂನ್ಯಾಸ ತೆಗೆದುಕೊಂಡ ರಾತ್ರೆ ನಿದ್ದೆಯಲ್ಲಿ, 'ಸರ್ವೋಽಹಮ್', 'ಸರ್ವೋಽಹಮ್' ಎಂದು ಹೇಳುತ್ತಿದ್ದರು. ಇದು ಶಾಸ್ತ್ರಾಭ್ಯಾಸ ಮಾಡಿ ವಿಷಯಗಳನ್ನು ಅರಿತು ಆತ್ಮ ಸಾಕ್ಷಾತ್ಕಾರ ಪಡೆದವರಿಗೆ ಜಾಗರಾವಸ್ಥೆಯಲ್ಲಿ ಏರ್ಪಡುವ ಮನಃಸ್ಥಿತಿ....ಇದು ನಿದ್ದೆಯಲ್ಲಿಯೇ ಉಂಟಾಯಿತು ಎಂದರೆ, ಆ ಮಗು ಪೂರ್ವಜನ್ಮದಲ್ಲಿ ಮಾಡಿದ ಜ್ಞಾನಾಭ್ಯಾಸದ ವಾಸನೆಯ ಫಲವೆಂದೇ ತಿಳಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ರೀತಿ ೩೪ನೆಯ ಪೀಠಾಧಿಪತಿಯಾಗಿ ಮಂಡಿಸಿದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಜೀವನ ಚರಿತ್ರೆಯನ್ನು ನೋಡೋಣ. ೧೩ನೆಯ ವಯಸ್ಸಿನಲ್ಲಿ ಇವರು ಶ್ರೀಮಠಕ್ಕೆ ಪೀಠಾಧಿಪತಿಯಾಗಿ ಬಂದರು. ಸಂನ್ಯಾಸವೇ ತಮ್ಮ ಜೀವನ ಗುರಿ ಎಂಬುದನ್ನು ಸ್ಪಷ್ಟವಾಗಿಯೂ ದೃಢವಾಗಿಯೂ ಆಗಲೇ ತಮ್ಮ ತಾಯಿಗೆ ಹೇಳಿದರು. ಇದು ಕೂಡ ಪೂರ್ವ ಜನ್ಮದಲ್ಲಿ ಉಂಟಾದ ಜ್ಞಾನಾನುಭವದ ಫಲವೇ ಆಗಿರುವುದು. ಪಾಠಶಾಲೆಯಲ್ಲಿ ಓದುವ ಕಾಲದಲ್ಲಿಯೇ ಇವರಲ್ಲಿ ಕಾಣಿಸಿಕೊಂಡ ವಿರಕ್ತಿಯೂ, ವೈರಾಗ್ಯ ಪೂರ್ಣತೆಯೂ, ನೆನಸಿಕೊಳ್ಳತಕ್ಕದ್ದು.

೩೫ನೆಯ ಪೀಠಾಧಿಪತಿಯಾಗಿ ಮಂಡಿಸಿರುವ ಶ್ರೀ ಅಭಿನವ ವಿದ್ಯಾತೀರ್ಥಸ್ವಾಮಿಗಳ ಜೀವನಚರಿತ್ರೆಯಲ್ಲಿಯೂ ಈ ವಿಶೇಷವನ್ನು ಅರಿತುಕೊಂಡೆವು. ಪಾಠಶಾಲೆಯಲ್ಲಿ ಓದುತ್ತಿರುವಾಗಲೇ ಆತ್ಮಗುಣಗಳ ಕುರುಹುಗಳು ಇವರಲ್ಲಿ ಕಾಣಬಂದವು. ಮೊಟ್ಟಮೊದಲನೆಯದಾಗಿ ಇವರ ಉಪನಯನಕಾಲದಲ್ಲಿ ೩೪ನೆಯ ಪೀಠಾಧಿಪತಿಗಳ ಮುಂದೆ ನಿಲ್ಲಿಸಿದಾಗಲೇ, ತನಗೆ ಲೋಕಜೀವನದಲ್ಲೋ, ಇಂಗ್ಲಿಷ್ ಓದುವುದರಲ್ಲೋ, ಉದ್ಯೋಗ ಮಾಡುವುದರಲ್ಲೋ ಉದ್ದೇಶವಿಲ್ಲ—ಎಂಬುದನ್ನು ಪೀಠಾಧಿಪತಿಗಳೆದುರಿಗೂ ತನ್ನ ತಂದೆತಾಯಿಗಳ ಬಳಿಯೂ ಬಹಿರಂಗವಾಗಿ ತಿಳಿಯಪಡಿಸಿದ್ದಲ್ಲದೆ ಅವರ ವಾಸಸ್ಥಳವಾದ ಬೆಂಗಳೂರಿಗೆ ಹಿಂದಿರುಗುವ ಯೋಚನೆಯೇ ಇಲ್ಲವೆಂಬುದನ್ನೂ ತಿಳಿಸಿಬಿಟ್ಟರು. ಆಗಲೇ ಶ್ರೀ ಶೃಂಗೇರಿಯಲ್ಲಿರುವ ಪಾಠಶಾಲೆಯಲ್ಲಿ ವಿದ್ಯಾರ್ಥಿಯಾಗಿ ಸೇರಿಸಲ್ಪಟ್ಟರು. ಆದಾದಮೇಲೆ, ಅವರು ತಮ್ಮ ಮನೆಗೆ ಹೋಗಲಿಲ್ಲ. ಮುಂದಿನ ವರ್ಷ ಅವರಿಗೆ 'ಸಂನ್ಯಾಸ' ಕೊಡಲಾಯಿತು.

೩೬ನೆಯ ಪೀಠಾಧಿಪತಿಯಾಗಿ ಆಯ್ಕೆಯಾಗಿರುವ ಶ್ರೀ ಭಾರತೀತೀರ್ಥರ ಚರಿತ್ರೆಯಲ್ಲಿಯೂ ಈ ಮಹಿಮೆ ಗೋಚರವಾಗುತ್ತಿದೆ. ಇವರ ೯ನೆಯ ವಯಸ್ಸಿನಲ್ಲಿ, ಶೃಂಗೇರೀ ಜಗದ್ಗುರುಗಳನ್ನು ಮೊಟ್ಟಮೊದಲು ಸಂಧಿಸಿದಾಗಲೇ, ಇವರ ಸಂಸ್ಕೃತಜ್ಞಾನವೂ, ಲೋಕ ಜೀವನದಲ್ಲಿ ನಿರಾಸಕ್ತಿಯೂ ಕಾಣಿಸಿಕೊಂಡವು. ಇವರಿಗೆ ೧೫ ವರ್ಷ ವಯಸ್ಸಾಗಿದ್ದಾಗ (೧೯೬೬)

Sri Vidyabharathi Book Centre, Sringeri

CC-O. In Public Domain. Digitized by eGangotri

ಉಜ್ಜಯನಿಯಲ್ಲಿ ಶ್ರೀ ಜಗದ್ಗುರುಗಳನ್ನು ಸಂಧಿಸಿದರು. ಆಗಲೇ ತನಗೆ ಕುಟುಂಬ ಜೀವನದಲ್ಲಿ ಮನಸ್ಸಿಲ್ಲ ಎಂಬುದನ್ನು ಮತ್ತೆಯೂ ಸ್ಪಷ್ಟಪಡಿಸಿದರು. ಅದು ಮೊದಲು ಶ್ರೀಮಠದಲ್ಲಿಯೇ ಇದ್ದುಕೊಂಡು ಶಾಸ್ತ್ರಗಳನ್ನು ಅಭ್ಯಾಸ ಮಾಡಿದರು. ಇವರು ಮತ್ತೆ ತಮ್ಮ ಮನೆಗೆ ಹೋಗಲೇ ಇಲ್ಲ. ೧೯೭೪ರಲ್ಲಿ ಸಂನ್ಯಾಸ ತೆಗೆದುಕೊಳ್ಳುವವರೆಗೂ ಶ್ರೀಮಠದಲ್ಲಿಯೇ ತಂಗಿದ್ದರು. ಆಗ ಇವರಲ್ಲಿ ಕಂಡುಬಂದ ಉತ್ತಮವಾದ ವೈರಾಗ್ಯಸ್ಥಿತಿ ಸ್ಮರಣೀಯವಾಗಿದೆ.

ಹೀಗೆ, ಈ ಪೀಠಕ್ಕೆ ಅಧಿಪತಿಗಳಾಗಿ ಬರುವವರು ಪೂರ್ವಜನ್ಮದಲ್ಲಿಯೇ ಜ್ಞಾನಪಡೆದು, ಅದನ್ನು ಪೂರ್ತಿಯಾಗ ಈ ಜನ್ಮದಲ್ಲಿ ಅನುಭವಿಸಿ, ಅದರ ಫಲವನ್ನುಲೋಕದ ಜನರಿಗೆ ವಿನಿಯೋಗಿಸುವುದಕ್ಕಾಗಿಯೇ ಅವತರಿಸಿದವರು— ಎಂಬುದು ಚೆನ್ನಾಗಿ ವ್ಯಕ್ತವಾಗುವುದು ಎನ್ನಲಾಗಿ, ಶ್ರೀ ಶೃಂಗೇರೀ ಶಾರದಾಪೀಠಕಲ್ಲಿ ಮಂಡಿಸಿದವರುಗಳು ಒಂದು ಜೀವನ್ಮುಕ್ತಪರಂಪರೆಯೇ ಎಂದು ಬೇರೆ ಹೇಳಬೇಕಾಗಿಲ್ಲ. ಶೃಂಗೇರೀ ಶ್ರೀ ಶಾರದಾಂಬಿಕೆಯ ಅನುಗ್ರಹ ಎಲ್ಲೆಲ್ಲಿಯೂ ಬೆಳಗುತ್ತಿರಲಿ !

ಹೀಗೆ ಶೃಂಗೇರೀ ಪೀಠಾಧಿಪತಿಗಳಲ್ಲಿ ಕಾಣಬರುವ ಮಹಿಮೆಗಳಿಗೆಲ್ಲಾ ಮುಖ್ಯಕಾರಣವೆಂದರೆ, ಅವರು ಪೂರ್ವಜನ್ಮದಲ್ಲಿ ಮಾಡಿದ ಬ್ರಹ್ಮವಿದ್ಯಾ ಸ್ವರೂಪಿಣಿಯಾದ ದೇವಿಯ ಉಪಾಸನೆಯೆ. ತಿರುಕ್ಕಡವೂರಿನಲ್ಲಿ ನೆಲಸಿರುವ ಶ್ರೀ ಅಭಿರಾಮಿಯ ಮಹಿಮೆಯನ್ನು ಹಾಡಿದ ಶ್ರೀ ಅಭಿರಾಮಿಭಟ್ಟರು 'ಅಭಿರಾಮಿ ಅಂದಾದಿ'ಯಲ್ಲಿ ೫೨ನೆಯ ಪದ್ಯದಲ್ಲಿ ಈ ವಿಷಯವಾಗಿ ವಿವರಿಸಿದ್ದಾರೆ :

ವೈಯಮ್ ತುರಗಮ್ ಮದಕರಿ ಮಾಮುಗುಟಮ್ ಶಿವಿಗೈ
ಪೆಯ್ಯುಮ್ ಕನಕಮ್ ಪೆರುವಿಲೈ ಆರಮ್ ಪಿಱೈ ಮುಡಿತ್ತ
ಐಯನ್ ತಿರುಮನೈಯಾಳ್ ಅಡಿತ್ತಾಮರೈಕ್ಕು ಅನ್ಬು ಮುನ್ಬು
ಶೆಯ್ಯುಮ್ ತವಮುಡೈ ಯಾರ್‌ಕ್ಕುಳವಾಗಿಯ ಶಿನ್ನಙ್ಗಳೇ ||

Sri Vidyabharathi Book Centre, Sringeri

CC-O. In Public Domain. Digitized by eGangotri

[ರಥ ತುರಗ ಮದಕರಿ ಮಹಾಮಕುಟ ಶಿಬಿಕೆ
ಹೊನ್ನುಮಳೆ ಮಣಿಹಾರ ಎಲ್ಲವೂ ಪಡೆಮುಡಿದ
ಅಯ್ಯನಾ ಸಿರಿಮಡದಿಯಡಿದಾವರೆಯ ಮುನ್ನ
ಒಲವಿನಿಂ ಪೂಜಿಸಿದ ತಪವುಳ್ಳವರಿಗುಳ್ಳ ಚಿಹ್ನಂಗಳೇ]

(ಚಂದ್ರನನ್ನು ತಲೆಯಲ್ಲಿ ಧರಿಸಿಕೊಂಡಿರುವ ಚಂದ್ರಮೌಳೀಶ್ವರನ ಮಡದಿಯಾದ ಅಭಿರಾಮಿ ಅಮ್ಮನವರ ದಿವ್ಯ ಪಾದಾರವಿಂದಗಳನ್ನು ಪೂರ್ವಜನ್ಮದಲ್ಲಿ ಭಕ್ತಿಯಿಂದ ಪೂಜಿಸಿದ ಪೂಜ್ಯಪಾದರು (ಭಕ್ತರು) ಯಾರೆಂದರೆ, ಈ ಜನ್ಮದಲ್ಲಿ ತೇರು, ಕುದುರೆ, ಆನೆ, ಮಕುಟ (ಕಿರೀಟ), ಪಲ್ಲಕ್ಕಿ, ಅಪಾರ ಸಂಪತ್ತು, ಅಪರಿಮಿತವಾದ ಬೆಲೆಬಾಳುವ ಆಭರಣಗಳು— ಇವೆಲ್ಲ ಉಳ್ಳವರಾಗಿ ಇರುವವರೇ.)

ಮೇಲೆ ಹೇಳಿದ ಚಿಹ್ನೆಗಳು ಶೃಂಗೇರೀ ಪೀಠಾಧಿಪತಿಗಳ ಸಂಸ್ಥಾನ ಚಿಹ್ನೆಗಳೇ. ಈ ಜನ್ಮದಲ್ಲಿ ಶ್ರೀಚಕ್ರಮಧ್ಯನಿವಾಸಿಯಾದ ಶೃಂಗೇರೀ ಶ್ರೀ ಶಾರದಾದೇವಿಯನ್ನು ಪ್ರತ್ಯೇಕವಾಗಿ ಏಕಾಂತದಲ್ಲಿ ಆರಾಧಿಸುವುದಕ್ಕೆಂದೇ ದೇವಿಯ ಕೃಪೆಯಿಂದ ಅವತರಿಸಿದ ಉಪಾಸಕರು ಇವರು. ಶ್ರೀ ಲಲಿತಾ ಸಹಸ್ರನಾಮದಲ್ಲಿ ೬೯ನೆಯ ನಾಮವಾದ 'ಸಾಮ್ರಾಜ್ಯ ದಾಯಿನೀ' ಎಂಬುದರ ಅರ್ಥವೇ ಈ ಪದ್ಯದಲ್ಲಿ ನಿರೂಪಿಸಲ್ಪಟ್ಟಿದೆ.

ಅಭಿರಾಮಿ ಅಂದಾದಿಯ ೫೧ನೆಯ ಪದ್ಯದಲ್ಲಿ,

ಜನ್ಮಮೃತ್ಯುಜರಾತಪ್ತ ಜನವಿಶ್ರಾನ್ತಿದಾಯಿನೀ ।

ಎಂಬ ನಾಮದ ತಾತ್ಪರ್ಯವನ್ನು ವಿವರಿಸುತ್ತಾರೆ. (ಆ ಜನ್ಮದಲ್ಲಿಯೇ ದೇವಿಯ ಉಪಾಸನೆಯಿಂದ ಮುಕ್ತಿ ಪಡೆಯದೆ ಇದ್ದರೂ ಮುಂದಿನ ಜನ್ಮದಲ್ಲಿ ಎಲ್ಲಾ ವಿಧ ಸುಖಸಾಧನಗಳನ್ನೂ ಪಡೆದು, ಆದರೆ ಪೂರ್ವಜನ್ಮದಲ್ಲಿ ಏರ್ಪಟ್ಟ ಜ್ಞಾನ ಕಾರಣದಿಂದ ಆಸಕ್ತಿ ಸಂಪೂರ್ಣವಾಗಿ ತೊಡೆದು ಹೋದ ಸ್ಥಿತಿಯಲ್ಲಿ (ಸಂಪೂರ್ಣ ವೈರಾಗ್ಯಸ್ಥಿತಿಯಲ್ಲಿ) ಜೀವನ್ಮುಕ್ತರಾಗಿ ಇದ್ದುಕೊಂಡು ಲೋಕ ಕ್ಷೇಮಕ್ಕಾಗಿ ಜೀವಿಸುತ್ತ ವಿದೇಹಮುಕ್ತಿ ಪಡೆಯುವರು.)

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾರತೀತೀರ್ಥ ಸ್ವಾಮಿಗಳು
(ಶ್ರೀ ಸನ್ನಿಧಾನ)

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಬಂಧಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

೧

ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು

೩೩ನೆಯ ಪೀಠಾಧಿಪತಿಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ಕೊಯಮುತ್ತೂರು ಜಿಲ್ಲೆಯಲ್ಲಿ ಯಾತ್ರೆಮಾಡುತ್ತಿದ್ದಾಗ, ಒಬ್ಬ ಬಡ ಬ್ರಾಹ್ಮಣ ತನ್ನ ಮಗಳಿಗೆ ಮದುವೆ ಮಾಡುವುದಕ್ಕೆ ಹಣಸಹಾಯ ಬೇಕೆಂದು ಶ್ರೀ ಮಹಾಸನ್ನಿಧಾನದಲ್ಲಿ ಪ್ರಾರ್ಥಿಸಿಕೊಂಡನು. ಆತನಿಗೆ ಏನೋ ಒಂದು ಮೊತ್ತವನ್ನು ಕೊಡುವಂತೆ ಶ್ರೀಮಠದ ಸರ್ವಾಧಿಕಾರಿಯಾಗಿದ್ದ ಶ್ರೀಕಂಠಶಾಸ್ತ್ರಿಗಳಿಗೆ ಶ್ರೀ ಸನ್ನಿಧಾನ ಹೇಳಿದ್ದರೆಂದು ತಿಳಿಯಬರುತ್ತದೆ. ಶಾಸ್ತ್ರಿಗಳು ಆ ಬ್ರಾಹ್ಮಣನನ್ನು ಕರಸಿ ೫೦ ರೂಪಾಯಿಕೊಟ್ಟರು. ಮದುವೆಗೆ ಇದು ಹೇಗೆ ಸಾಕಾದೀತು?—ಎಂದು ಹೇಳಿ ಬ್ರಾಹ್ಮಣ ಅದನ್ನು ತೆಗೆದುಕೊಳ್ಳಲಿಲ್ಲ. ಮರುದಿನ ತೀರ್ಥವಿನಿಯೋಗ ಸಮಯದಲ್ಲಿ ಸನ್ನಿಧಾನವು ಆ ಬ್ರಾಹ್ಮಣನನ್ನು ಕಂಡು, "ಹಣ ತೆಗೆದುಕೊಂಡಿರಾ?" ಎಂದು ಕೇಳಿದರು. ಬ್ರಾಹ್ಮಣ ನಡೆದದ್ದನ್ನು ಅರಿಕೆಮಾಡಿದನು. "ಹಾಗಾದರೆ, ಸ್ವಲ್ಪ ಇರಿ. ತೀರ್ಥವಿನಿಯೋಗ ಮುಗಿಯಲಿ" ಎಂದರು ಸನ್ನಿಧಾನ. ಬ್ರಾಹ್ಮಣ ಅದೇ ಪ್ರಕಾರ ಒಂದು ಪಕ್ಕದಲ್ಲಿ ನಿಂತುಕೊಂಡಿದ್ದನು. ಶ್ರೀ ಗುರುಗಳು ಒಬ್ಬೊಬ್ಬ ಶಿಷ್ಯನ ಯೋಗಕ್ಷೇಮವನ್ನೂ ವಿಚಾರಿಸುತ್ತಲೇ ತೀರ್ಥ ಕೊಡುತ್ತಿದ್ದರು. ಶಿಷ್ಯರುಗಳು ಹೆಚ್ಚಾಗಿ ಬಂದಿದ್ದು ಹೆಚ್ಚುಹೆಚ್ಚಾಗಿ ಕಾಣಿಕೆ ಹಾಕುತ್ತಿದ್ದರು. ಒಂದು ತಟ್ಟೆ ಸಾಕಾಗಲಿಲ್ಲ. ಎರಡನೆಯದೊಂದು ತಟ್ಟೆಯನ್ನು ತಂದಿಟ್ಟರು. ಅದೂ ತುಂಬಿಹೋಯಿತು. ಕಾಣಿಕೆಯ ಮೊತ್ತ ೨೦೦೦ ರೂಪಾಯಿಗಿಂತಲೂ ಹೆಚ್ಚಾಗಿದ್ದಿರಬೇಕು. ಸನ್ನಿಧಾನ ಆ ಬ್ರಾಹ್ಮಣನನ್ನು ಕರೆದು, ಆತ ಹೊದ್ದುಕೊಂಡಿದ್ದ ಅಂಗವಸ್ತ್ರವನ್ನು ಅಗಲಿಸಿ ಹಿಡಿದುಕೊಳ್ಳುವಂತೆ ಹೇಳಿದರು. ಆವತ್ತು ಬಂದಿದ್ದ ತೀರ್ಥಕಾಣಿಕೆಯನ್ನೆಲ್ಲಾ (ರೂಪಾಯಿ, ಚಿನ್ನ ಎಲ್ಲವನ್ನೂ) ಎರಡು ಬೆಳ್ಳಿತಟ್ಟೆಗಳ ಸಮೇತ [illegible] ಬಿಟ್ಟರು. ಸರ್ವಾಧಿಕಾರಿ

Sri Vidyabharathi Book Centre, Sringeri.

CC-O. In Public Domain. Digitized by eGangotri

ಗಳಿಗೆ, "ಇವರನ್ನು ನಮ್ಮ ಮಠದಬಂಡಿಯಲ್ಲಿ ಅವರ ಮನೆಗೆ ಕಳಿಸಿಕೊಡಬೇಕು. ಜೊತೆಯಲ್ಲೆ ನಮ್ಮ ಮಠದ ಪೋಲೀಸು ಸಿಪಾಯಿಯನ್ನೂ ಬಂದೋಬಸ್ತಿಗಾಗಿ ಕಳಿಸಬೇಕು. ಮನೆಗೆ ಹೋಗಿ ಸೇರಿದಮೇಲೆ, 'ಕಾಣಿಕೆಯ ಹಣವನ್ನೂ ಎರಡು ಬೆಳ್ಳಿ ತಟ್ಟೆಗಳನ್ನೂ ತೆಗೆದುಕೊಂಡಿದ್ದೇನೆ' ಎಂದು ಆತನಿಂದ ರಶೀತಿಯನ್ನು ತೆಗೆದುಕೊಂಡು ಬರಬೇಕೆಂದೂ ಅವನಿಗೆ ತಿಳಿಸಿ" ಎಂದು ಅಪ್ಪಣೆ ಮಾಡಿದರು. ಅದರಂತೆಯೇ ನಡಸಲಾಯಿತು. ಕನಕಧಾರಾ ಸ್ತೋತ್ರವನ್ನು ಹೇಳಿ ಬಡಬ್ರಾಹ್ಮಣ ಹೆಂಗಸಿಗೆ ಚಿನ್ನದ ನೆಲ್ಲಿಕಾಯಿ ಮಳೆಸುರಿಸಿದ ಆದಿಶಂಕರರ ಪೀಠದಲ್ಲಿ ಬಂದ ಪರಂಪರೆಯವರಲ್ಲವೇ !

ಬಡವರಲ್ಲಿ ಕರುಣೆ

ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳು ಆಂಧ್ರಪ್ರಾಂತದಲ್ಲಿ ಯಾತ್ರೆ ಮಾಡುತ್ತಿದ್ದ ಕಾಲ. ಒಂದೂರಿನಲ್ಲಿ ಉಂಛವೃತ್ತಿ ಮಾಡುತ್ತಿದ್ದ ಬಡಬ್ರಾಹ್ಮಣನೊಬ್ಬನು ದರ್ಶನಕ್ಕೆ ಬಂದನು. ಶ್ರೀ ಮಹಾಸನ್ನಿಧಾನವನ್ನು ಶಿಷ್ಯರು ಪಾದಪೂಜೆ, ಭಿಕ್ಷಾವಂದನೆ ಮಾಡುವುದಕ್ಕಾಗಿ ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗುತ್ತಿದ್ದದ್ದನ್ನು ಆ ಬ್ರಾಹ್ಮಣ ನೋಡಿದನು. ತಮ್ಮ ಮನೆಗೂ ಅದೇ ರೀತಿ ಶ್ರೀ ಮಹಾಸನ್ನಿಧಾನವನ್ನು ಕರೆದುಕೊಂಡು ಹೋಗುವುದಕ್ಕೆ ಸಾಧ್ಯವಾದೀತೇ ಎಂದು ವಿಚಾರಿಸಿದನು. ಮೊದಲೇ ಒಂದು ಗೊತ್ತಾದ ಮೊತ್ತದ ಹಣವನ್ನು ಶ್ರೀಮಠದಲ್ಲಿ ಕಟ್ಟಿ ಅನುಮತಿಪಡೆದುಕೊಳ್ಳಬೇಕೆಂದು ತಿಳಿಯಿತು. ಅದಕ್ಕೆ ಅವನ ಕೈಲಿ ಹಣವಿಲ್ಲ. ಹಾಗಾದರೂ, ಆ ಆಸೆ ಅವನ ಮನಸ್ಸಿನಲ್ಲಿ ನೆಲೆಯಾಗಿ ನಿಂತಿತು. ಒಂದು ದಿನ ಶ್ರೀ ಮಹಾಸನ್ನಿಧಾನದಿಂದ ತೀರ್ಥ ತೆಗೆದುಕೊಳ್ಳುತ್ತಿರುವ ಸಮಯದಲ್ಲಿ, "ನಮ್ಮ ಮನೆಗೆ ಸನ್ನಿಧಾನ ಬಂದು ಅನುಗ್ರಹಿಸಬೇಕೆಂದು ನನಗೆ ಆಸೆಯಿದೆ" ಎಂದು ಬಿನ್ನವಿಸಿದನು. "ಅದಕ್ಕೇನು, ಅಂಬೆಯ ಕೃಪೆಯಾದರೆ ಮಾಡೋಣ." ಎಂದು ಆಚಾರ್ಯರ ವಾಕ್ಕು ಬಂತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀಕಂಠಶಾಸ್ತ್ರಿಗಳೋ ಮಠದಲ್ಲಿನ ಸಂಪ್ರದಾಯವಿಧಿಗಳಿಗೆ ವಿರೋಧವಾಗಿ ಏನೊಂದನ್ನೂ ಮಾಡುವವರಲ್ಲ. ಗೊತ್ತುಪಡಿಸಿರುವ ಕಾಣಿಕೆಯನ್ನು ಕಟ್ಟಿದರೆ ಹೊರತು ಶಿಷ್ಯರ ಮನೆಗೆ ಶ್ರೀ ಸನ್ನಿಧಾನವು ಹೋಗಲಾಗುವುದಿಲ್ಲ — ಎಂಬ ಸ್ಥಿತಿಯಿತ್ತು. ಶ್ರೀಕಂಠಶಾಸ್ತ್ರಿಗಳು ಈ ಸಂಗತಿಯನ್ನು ಮೊದಲೇ ಆ ಬಡ ಬ್ರಾಹ್ಮಣನಿಗೆ ತಿಳಿಸಿದ್ದರು.

ಇದು ನಡೆದ ಎರಡು ದಿನಗಳ ಮೇಲೆ, ಶ್ರೀ ಮಹಾಸನ್ನಿಧಾನವು ಬೆಳಗ್ಗೆ ೯ ಗಂಟೆ ಹೊತ್ತಿನಲ್ಲಿ ಶ್ರೀಮಠದಲ್ಲಿ ಕೆಲಸಮಾಡುವವರನ್ನು ಕರೆದು, ಮಠದ ಮೇನಾವನ್ನು ತೆಗೆದುಕೊಂಡು ಬರುವಂತೆ ಹೇಳಿದರು. ಆ ಮೇನಾದಲ್ಲಿ ತಾವು ಕುಳಿತುಕೊಂಡು, ಮೇಲೆ ಹೇಳಿದ ಉಂಛವೃತ್ತಿಯ ಬಡಬ್ರಾಹ್ಮಣನ ಮನೆಗೆ ಬಂದು ಸೇರಿದರು. ಮನೆಯಲ್ಲಿದ್ದವರು ಅವರೊಬ್ಬರೇ. ಅವರಿಗೆ ಹೆಂಡತಿ ಮಕ್ಕಳು ಯಾರೂ ಇರಲಿಲ್ಲ. ಶ್ರೀ ಮಹಾಸನ್ನಿಧಾನವು ಬಂದದ್ದನ್ನು ಕಂಡು ದಿಗಿಲುಪಟ್ಟು ಹೋಗಿ ನಮಸ್ಕರಿಸಿ ಮನೆಯೊಳಕ್ಕೆ ಕರೆದುಕೊಂಡು ಹೋದನು. ಅವನು ವಾಸವಾಸವಾಗಿದ್ದದ್ದೋ ಒಂದೇ ಕೋಣೆ. ಅದರಲ್ಲಿಯೇ ಅಡಿಗೆ, ಊಟ, ಕೂರುವುದು, ನಿಲ್ಲುವುದು, ಮಲಗುವುದು, ಎಲ್ಲಾ ಆಗಬೇಕು. ಶ್ರೀ ಮಹಾಸನ್ನಿಧಾನ ಅಲ್ಲಿಗೆ ಮೇನಾದಲ್ಲಿ ಹೋಗಿರುವುದನ್ನು ಕೇಳಿ, ಶ್ರೀಕಂಠಶಾಸ್ತ್ರಿಗಳು ಅಲ್ಲಿಗೆ ಧಾವಿಸಿದರು. ಒಂದೇ ಕೋಣೆಯೊಳಗೆ ಇರುವ ಸ್ಥಿತಿಯನ್ನು ಕಂಡು ಮನಸ್ಸಿನಲ್ಲಿ ಒಂದು ಕಡೆ ಕೋಪ, ಒಂದು ಕಡೆ ದಿಗಿಲು; ಸುಮ್ಮನೆ ನಿಂತುಬಿಟ್ಟರು. ಅವರನ್ನು ನೋಡಿ, ಶ್ರೀ ಮಹಾಸನ್ನಿಧಾನವು, "ಶ್ರೀಕಂಠಾ, ಇವತ್ತು ಅಮ್ಮನವರ ಪೂಜೆ ಇಲ್ಲೇ ನಡೆಯಬೇಕು" ಎಂದರು. ಶ್ರೀ ಶಾಸ್ತ್ರಿಗಳು, "ಸನ್ನಿಧಾನವು ಸ್ನಾನವನ್ನು ಎಲ್ಲಿ ಮಾಡುವುದು? ಅನುಷ್ಠಾನವನ್ನೆಲ್ಲಿ ಮಾಡುವುದು? ಇದಕ್ಕೆಲ್ಲಾ ಸ್ಥಳವೆಲ್ಲಿ?" ಎಂದರು. ಶ್ರೀ ಮಹಾಸನ್ನಿಧಾನ ಅದಕ್ಕೆ ಶಾಂತವಾಗಿ, "ನೀನು ಮಠದ ಪರದೆಗಳನ್ನು ತಂದಿದ್ದೀಯಲ್ಲವೇ? ಅವನ್ನು ಈ ಕೋಣೆಯಲ್ಲಿ ಒಂದು ಕಡೆ ಮರೆಯಾಗಿ ಹಿಡಿದುಕೊಂಡಿರುವಂತೆ ಹೇಳು. ಆಗ ನಾನು ಸ್ನಾನ, ಅನುಷ್ಠಾನ ಎಲ್ಲಾ ಮಾಡಿ ಮುಗಿಸುತ್ತೇನೆ" ಎಂದರು. ಅದೇ ಪ್ರಕಾರ ಸ್ನಾನ, ಅನುಷ್ಠಾನ, ಎಲ್ಲಾ ಮುಗಿಯಿತು. ಒಡನೆಯೇ ಶ್ರೀ ಶಾರದಾಮ್ಮನವರ ಪೂಜೆಗೆ ಅವಶ್ಯವಾದ ಮಹಾನೈವೇದ್ಯಗಳು ಬೇಕಲ್ಲಾ —

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಯೋಚನೆ ಶ್ರೀಕಂಠಶಾಸ್ತ್ರಿಗಳಿಗೆ ಬಂತು. ಶ್ರೀಮಠದಿಂದ ಅಡಿಗೆಗೆ ಬೇಕಾದ ಸಾಮಾನುಗಳನ್ನು ತರಿಸಿದರು. ಉಂಛವೃತ್ತಿ ಬ್ರಾಹ್ಮಣನ ಮನೆಯಲ್ಲಿ ಅದಕ್ಕೂ ಸ್ಥಳವಿಲ್ಲ. ಬಂದ ಸಾಮಾನುಗಳನ್ನು ಯಾರು ಪಕ್ವಮಾಡುವುದು? — ಎಂದು ಶ್ರೀಕಂಠಶಾಸ್ತ್ರಿಗಳು ಯೋಚಿಸುತ್ತಲಿದ್ದರು. ಇದನ್ನು ಕಂಡು ಶ್ರೀ ಮಹಾಸನ್ನಿಧಾನ, "ಶ್ರೀಕಂಠಾ, ನಿನಗೆ ಚೆನ್ನಾಗಿ ಅಡಿಗೆ ಮಾಡುವುದಕ್ಕೆ ಬರುತ್ತದೆಯೆಂದು ನನಗೆ ಹೇಳಿದ್ದೆಯಲ್ಲ, ಶ್ರೀ ಅಮ್ಮನವರಿಗೆ ನೈವೇದ್ಯವನ್ನು ನೀನೇ ಸಿದ್ಧಮಾಡು" ಎಂದು ಅಪ್ಪಣೆ ಮಾಡಿದರು. ಅದೇ ಪ್ರಕಾರ ಶ್ರೀಕಂಠಶಾಸ್ತ್ರಿಗಳು ಮಾಡಿದರು. ಪೂಜೆ, ಭಿಕ್ಷೆ ಎಲ್ಲಾ ಅಲ್ಲೇ ನಡೆಯಿತು. ಬಡಬ್ರಾಹ್ಮಣನು ತನ್ನ ಉಂಛವೃತ್ತಿಯಿಂದ ಸಂಪಾದಿಸಿ ಚೆಂಬಿನಲ್ಲಿ ಇಟ್ಟಿದ್ದ ಚಿಲ್ಲರೆಯನ್ನು ಗುರುಗಳಿಗೆ ಪಾದಕಾಣಿಕೆಯಾಗಿ ಅರ್ಪಣೆಮಾಡಿದನು. ಶ್ರೀ ಮಹಾಸನ್ನಿಧಾನವು ಅದನ್ನು ಒಂದುಸಲ ಮುಟ್ಟಿ ಆ ಬ್ರಾಹ್ಮಣನಿಗೆ ಕೊಟ್ಟು, ಮೇನಾ ಹತ್ತಿ ತಮ್ಮ ಬಿಡದಿಗೆ ಹಿಂದಿರುಗಿದರು.

೨

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

(೩೪ನೆಯ ಪೀಠಾಧಿಪತಿಗಳು)

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಕಾಲದಲ್ಲಿ ಒಬ್ಬ ಬಡವ ಶೃಂಗೇರಿಗೆ ಬಂದರು. ಇವರು ನೇಯ್ಗೆ ವೃತ್ತಿಯವರು. ಇವರದು ದೊಡ್ಡ ಕುಟುಂಬ. ಅವರನ್ನೆಲ್ಲಾ ಕಾಪಾಡುವುದಕ್ಕೆ ತಕ್ಕ ವರಮಾನವಿಲ್ಲದೆ ದುಃಖ ಪಡುತ್ತಿದ್ದರು. ಶ್ರೀ ಮಹಾಸನ್ನಿಧಾನವನ್ನು ಅವರೊಬ್ಬರೇ ಇರುವಾಗ ಏಕಾಂತವಾಗಿ ದರ್ಶನಮಾಡುವುದಕ್ಕೆ ಸಂದರ್ಭವೇ ಸಿಕ್ಕದೇ ಅವರು ನರಸಿಂಹವನದಲ್ಲಿ, ಸ್ನಾನಮಾಡುವುದಕ್ಕೆ ಹೋಗುವ ದಾರಿಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂತುಕೊಂಡು, ಶ್ರೀ ಮಹಾಸನ್ನಿಧಾನ ಅಲ್ಲಿ ಬಂದ ಕೂಡಲೆ ನಮಸ್ಕಾರಮಾಡಿ, ಆಗ ತಮ್ಮ ಹತ್ತಿರ ಇದ್ದ ಒಂದೂವರೆ ಆಣೆಯನ್ನು ಕಾಣಿಕೆಯಾಗಿ ಕೆಳಗೆ ಇಟ್ಟರು. ಶ್ರೀ ಸನ್ನಿಧಾನವು ತಮ್ಮ ಶಿಷ್ಯನನ್ನು ಕರೆದು, "ಆ ಒಂದೂವರೆ ಆಣೆಯನ್ನು ತೆಗೆದುಕೊಂಡು ಒಳಗಿಡು. ಇವರಿಗೆ ಒಳಗಿನಿಂದ ಒಂದೂವರೆ ರೂಪಾಯಿ ತೆಗೆದುಕೊಂಡುಬಂದು ಕೊಡು" ಎಂದರು. ಅದೇ ಪ್ರಕಾರ ಆ ಬಡವನಿಗೆ ಒಂದೂವರೆ ರೂಪಾಯಿ ಕೊಡಲಾಯಿತು. ಶ್ರೀ ಸನ್ನಿಧಾನದ ಅನುಗ್ರಹದಿಂದ ಆ ಬಡವ ಈಗ ಲಕ್ಷಾಂತರ ಸಂಪತ್ತಿಗೆ ಅಧಿಪತಿಯಾಗಿದ್ದಾರೆ.

* * * *

ಮೈಸೂರು ಪ್ರದೇಶದ ಶಿವಮೊಗ್ಗೆಯಲ್ಲಿ ಒಬ್ಬ ವಕೀಲರಿದ್ದರು. ಬುದ್ಧಿಶಾಲಿಯಾಗಿದ್ದರೂ ಅವರಿಗೆ ವರಮಾನವೇ ಇರಲಿಲ್ಲ. ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ದರ್ಶನಕ್ಕಾಗಿ ಅವರು ಶೃಂಗೇರಿಗೆ ಬಂದರು. ಆಗ ಶ್ರೀ ಸ್ವಾಮಿಗಳು ಅಂತರ್ಮುಖಿಗಳಾಗಿದ್ದರು. ವಕೀಲರು ಮಠದ ಬಿಡದಿಯಲ್ಲಿ ಮಲಗಿಕೊಂಡಿದ್ದರು. ಬೆಳಗಿನ ಜಾವದಲ್ಲಿ ಆ ವಕೀಲರು ಕನಸುಕಂಡರು.. ಅದರಲ್ಲಿ ಸನ್ನಿಧಾನವು ತಮಗೆ ಗಣಪತಿ ಮಂತ್ರವನ್ನು ಉಪದೇಶಮಾಡಿದ್ದಾಗಿ ಕಂಡರು. ಕಣ್ಬಿಟ್ಟು ಎದ್ದರು. ಮಂತ್ರ ಮರೆತುಹೋಯಿತು. ಬೆಳಗ್ಗೆ ಸನ್ನಿಧಾನದ ಬಳಿ ದರ್ಶನಕ್ಕಾಗಿ ಬಂದರು. "ನಿನಗೆ ಆಗಲೇ ದಾರಿ ತೋರಿಸಿದೆನಲ್ಲಾ" ಎಂದು ಶ್ರೀ ಸನ್ನಿಧಾನ ಹೇಳಿದರು. ಅದಕ್ಕೆ ವಕೀಲರು, "ಹೌದು, ಅದು ಮರೆತುಹೋಯಿತು" ಎಂದರು. ಒಡನೆಯೇ ಸನ್ನಿಧಾನವು ಶ್ರೀ ನರಸಿಂಹಭಟ್ಟರ ತಂದೆಯವರನ್ನು ಕರೆದು, "ಇವರಿಗೆ ಗಣಪತಿ ಮಂತ್ರವನ್ನು ಉಪದೇಶಿಸಿರಿ" ಎಂದರು. ಮಂತ್ರೋಪದೇಶವಾಯಿತು. ಆ ಬಳಿಕ ಆ ವಕೀಲರಿಗೆ ಹೇರಳವಾಗಿ ಸಂಪಾದನೆ ಬರಲಾರಂಭಿಸಿತು; ವೇದಾಂತ ಜ್ಞಾನವೂ ಉಂಟಾಯಿತು. ಕಾಲಕ್ರಮದಲ್ಲಿ ಅವರು ಕೆಲವು ವೇದಾಂತ ಗ್ರಂಥಗಳನ್ನೂ ರಚಿಸಿದರು.

* * * *

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ೧೯೨೪ರಲ್ಲಿ ಯಾತ್ರೆಮಾಡುತ್ತಾ ಕೊಯಮತ್ತೂರು ಜಿಲ್ಲೆಯ ಕೊಡುಮುಡಿಯಲ್ಲಿ ಮುಕ್ಕಾಂ ಮಾಡಿದ್ದ ಕಾಲ. ಹೊರವೂರಿನಿಂದ ಬಂದ ಒಬ್ಬ ಬಡ ಬ್ರಾಹ್ಮಣ ತನ್ನ ಮಗಳ ಮದುವೆಗಾಗಿ ಸಹಾಯಮಾಡಬೇಕೆಂದು ಕೇಳಿಕೊಂಡನು. ಇವರಿಗೆ ಎಷ್ಟೋ ಹಣ ಕೊಡುವಂತೆ ಶ್ರೀಮಠದ ಪೇಷ್ಕಾರರಿಗೆ ಶ್ರೀ ಸನ್ನಿಧಾನ ಅಪ್ಪಣೆ ಮಾಡಿದರು. ಪೇಷ್ಕಾರರು ಅವರಿಗೆ ಸ್ವಲ್ಪವೇ ಸ್ವಲ್ಪ ಹಣಕೊಟ್ಟರು. ಇದನ್ನು ಮರುದಿವಸ ತೀರ್ಥಪ್ರಸಾದದ ಸಮಯದಲ್ಲಿ ತಿಳಿದುಕೊಂಡ ಜಗದ್ಗುರುಗಳು ಆ ಬಡ ಬ್ರಾಹ್ಮಣನಿಗೆ ಆವತ್ತು ಬಂದ ತೀರ್ಥಪ್ರಸಾದ ಕಾಣಿಕೆಯನ್ನೆಲ್ಲಾ ಪೂರ್ತಿಯಾಗಿ ಆಗಲೇ ಕೊಟ್ಟುಬಿಟ್ಟರು. ಬಡಬ್ರಾಹ್ಮಣನಿಗೆ ಸುಮಾರು ೧೦೦೦ (ಒಂದು ಸಾವಿರ) ರೂಪಾಯಿ ದೊರೆಯಿತು.

೩

ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು

(೩೫ನೆಯ ಪೀಠಾಧಿಪತಿಗಳು)

ದಿವ್ಯಜ್ಞಾನ

ಆಂಧ್ರದೇಶ ಯಾತ್ರೆಯ ಒಂದು ಮುಕ್ಕಾಮಿನಲ್ಲಿ, ಶ್ರೀ ಮಹಾಸನ್ನಿಧಾನವು ಒಂದು ರಾತ್ರಿ ಶ್ರೀ ಚಂದ್ರಮೌಳೀಶ್ವರ ಪೂಜೆ ಮಾಡುತ್ತಾ ಇದ್ದರು. ಉಚ್ಛಿಷ್ಟ ಗಣಪತಿ ಉಪಾಸಕರೊಬ್ಬರು ಪೂಜೆಗೆ ಬಂದು ಸನ್ನಿಧಾನಕ್ಕೆ ಕಾಣುವ ಹಾಗೆ ಕೂತುಕೊಂಡರು; ತಮ್ಮ ಒಂದು ಕಾಲಮೇಲೆ ಮತ್ತೊಂದು ಕಾಲುಹಾಕಿಕೊಂಡು ಕೂತರು. ಅವರನ್ನು ಕಂಡು ಶ್ರೀಮಠದ ಪುರೋಹಿತರಾದ ಶ್ರೀ ಗಣಪತಿ ಅವಧಾನಿಗಳು, ಕಾಲನ್ನು ಸರಿಯಾಗಿಟ್ಟುಕೊಂಡು ಕೂರುವಂತೆ ಸಂಜ್ಞೆ ಮಾಡಿದರೂ ಫಲಿಸಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದು ಸಲ ಸಂಜ್ಞೆ ಮಾಡಿ ತೋರಿಸಿದರು. ಗಣಪತಿ ಉಪಾಸಕರು ಈಗ ಅವಧಾನಿಗಳನ್ನು ನೋಡಿದರು. ಆದರೆ ಕಾಲನ್ನು ಸರಿಯಾಗಿ ಇಟ್ಟುಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ಶ್ರೀ ಸನ್ನಿಧಾನವು ಅವಧಾನಿಗಳನ್ನು ನೋಡಿದರು. ಅವಧಾನಿಗಳು ಉಪಾಸಕರನ್ನು ನೋಡಿದರು. ಆಮೇಲೆ ಮತ್ತೊಂದು ಸಲ ಅವಧಾನಿಗಳು ಸಂಜ್ಞೆ ಮಾಡಿ ತೋರಿಸಲಾಗಿ, ಉಪಾಸಕರು ತಮ್ಮ ಕಾಲುಗಳನ್ನು ಸರಿಮಾಡಿಕೊಂಡು ಕುಳಿತರು. ಪೂಜೆ ಮುಗಿದ ಮೇಲೆ ಉಪಾಸಕರು ತಮ್ಮ ಮನೆಗೆ ಹೊರಟುಹೋದರು.

ಮರುದಿನ ಗಣಪತಿ ಉಪಾಸಕರ ಮಕ್ಕಳು ಪ್ರಾತಃಕಾಲ ೬ ಗಂಟೆ ಹೊತ್ತಿಗೆ ಶ್ರೀಮಠದ ಬಿಡದಿಗೆ ಬಂದು ಗಣಪತಿ ಅವಧಾನಿಗಳನ್ನು ಕಂಡು, "ನಮ್ಮ ಮನೆಯಲ್ಲಿ ಪೂಜೆ ಮಂಗಳಾರತಿ ನಡೆಯುತ್ತದೆ. ನಮ್ಮ ತಂದೆಯವರು ನಿಮ್ಮನ್ನು ಕರೆದುಕೊಂಡು ಬರಬೇಕೆಂದು ಹೇಳಿದರು" ಎಂದರು. ಗಣಪತಿ ಅವಧಾನಿಗಳು ಸ್ವಲ್ಪ ಅನುಮಾನಿಸುತ್ತಾ ಇದ್ದು, ಆಮೇಲೆ ಸನ್ನಿಧಾನಕ್ಕೆ ತಿಳಿಯಪಡಿಸಿದರು. "ಹೋಗಿ ಬಾ" ಎಂದರು ಜಗದ್ಗುರುಗಳು. ಶ್ರೀ ಗಣಪತಿ ಅವಧಾನಿಗಳು ಆ ಉಚ್ಛಿಷ್ಟಗಣಪತಿ ಉಪಾಸಕರ ಮನೆಗೆ ಹೋದರು. ಪೂರ್ಣಾಹುತಿ ನಡೆಯುವ ಸಮಯ. ಅವಧಾನಿಗಳನ್ನು ಕುರಿತು ಉಪಾಸಕರು, "ಕೂತುಕೊಳ್ಳಿ. ಗಣಪತಿ ಅಥರ್ವಶೀರ್ಷೋಪನಿಷತ್ ಪಾರಾಯಣ ಮಾಡಿರಿ" ಎಂದರು. ಅವಧಾನಿಗಳೂ ಪಾರಾಯಣಮಾಡಿದರು. ಮತ್ತೆಯೂ ಉಪಾಸಕರು "ಗಣಪತಿ ಜಪವನ್ನು ಹತ್ತು ಸಲ ಮಾಡಿರಿ" ಎಂದರು. ಉಪಾಸಕರನ್ನು ಪರೀಕ್ಷೆ ಮಾಡಬೇಕೆಂಬ ಉದ್ದೇಶದಿಂದ ಅವಧಾನಿಗಳು ಕೈಯನ್ನು ಅಂಗವಸ್ತ್ರದೊಳಗೆ ಮರೆಮಾಡಿಕೊಂಡು, ಸಾಧಾರಣವಾಗಿ ಮಂತ್ರವನ್ನು ಉಚ್ಚರಿಸುವ ಕಾಲಕ್ಕಿಂತಲೂ ಹೆಚ್ಚಾಗಿ ಕಾಲ ಕೊಟ್ಟು ನಿದಾನವಾಗಿ ಹತ್ತು ಸಲ ಶ್ರೀ ಗಣಪತಿ ಮಂತ್ರವನ್ನು ಮನಸ್ಸಿನಲ್ಲೇ ಜಪಮಾಡಿದರು. ಹತ್ತನೆಯ ಸಲದ ಜಪ ಮುಗಿದ ವಿನಾಡಿಯೊಳಗೇ ಉಪಾಸಕರು ಪೂರ್ಣಾಹುತಿಮಾಡಿದರು. 'ನಾನು ಸಾವಕಾಶವಾಗಿ ಮಾಡಿದ ಜಪವನ್ನು ಹೇಗೆ ಲೆಕ್ಕಮಾಡಿಕೊಂಡು ಉಪಾಸಕರು ಪೂರ್ಣಾಹುತಿ ಮಾಡಿದರು?" ಎಂದು ಅವಧಾನಿಗಳಿಗೆ ಆಶ್ಚರ್ಯವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂದಿನ ದಿನ ರಾತ್ರಿ ಪೂಜೆಯಾಗುತ್ತಿದ್ದಾಗ ನಡೆದದ್ದರ ಬಗ್ಗೆ ವಿವರ ತಿಳಿದುಕೊಳ್ಳಬೇಕೆಂದು ಅವಧಾನಿಗಳು ಉಪಾಸಕರನ್ನು ಕೇಳಿದರು. ಅದಕ್ಕೆ ಉಪಾಸಕರು ಹೇಳಿದರು: "ಮೊದಲೆರಡು ಸಲ ನೀವು ಸಂಜ್ಞೆ ಮಾಡಿದಾಗ ನಾನು ಅಲಕ್ಷ್ಯಮಾಡಿದೆ. ಮೂರನೆಯ ಸಲ ನೀವು ಸಂಜ್ಞೆ ಮಾಡಿದಾಗ ನಿಮ್ಮ ಸೊಂಟದಲ್ಲಿ ಕುಳಿತುಕೊಂಡಿದ್ದ ಆನೆ ನನ್ನ ಕಾಲನ್ನು ಎತ್ತಿ ಕೆಳಕ್ಕೆ ಹಾಕಿತು. ಇದೇನು ಎಂಬುದನ್ನು ದಯವಿಟ್ಟು ಶ್ರೀ ಸನ್ನಿಧಾನವನ್ನು ಕೇಳಿಕೊಂಡು ಬಂದು ನನಗೆ ಹೇಳಿರಿ" ಎಂದರು. ಶ್ರೀ ಗಣಪತಿ ಅವಧಾನಿಗಳು, ಶ್ರೀ ಸನ್ನಿಧಾನದ ಬಳಿ ಬಂದು ಈ ವಿಷಯದ ಬಗ್ಗೆ ಕೇಳಿದರು. ಆದಕ್ಕೆ ಸನ್ನಿಧಾನವು, "ಬಂದವರು ಗಣಪತಿ ಉಪಾಸಕರೆಂದು ನನಗೆ ತಿಳಿದು ಹೋಯಿತು. ನೀನು ಎರಡುಸಲ ಸಂಜ್ಞೆ ಮಾಡಿದೆ. ಅವರು ಲಕ್ಷ್ಯಕೊಡಲಿಲ್ಲ. ಆದ್ದರಿಂದ ನಾನು ನಿನ್ನನ್ನು ದೃಷ್ಟಿಸಿ ನೋಡಿದೆ. ಆಮೇಲೆ ನೀನು, ಅವರನ್ನು ನೋಡಿದಾಗ, ಕಾಲಮೇಲಿದ್ದ ಕಾಲನ್ನು ಅವರು ಸರಿಪಡಿಸಿಕೊಂಡರು. ಇದೆಲ್ಲಾ ಗಣಪತಿಯ ಕೆಲಸ"—ಎಂದರು. ದೃಷ್ಟಿಯ ಮೂಲಕ ಶಿಷ್ಯನಿಗೆ ಶಕ್ತಿಯನ್ನು ಕೊಟ್ಟು, ಅವನ ಮೂಲಕ ಕೆಲಸಗಳನ್ನು ಮಾಡಿಸುವಂತಹ ಶಕ್ತಿಯೂ ಈ ರೀತಿಯ ಮಹಾತ್ಮರುಗಳಿಗೆ ಉಂಟು—ಎಂಬುದು ಸ್ಪಷ್ಟವಾಗುತ್ತದೆ.

ಮರುದಿನ ಶ್ರೀ ಸನ್ನಿಧಾನವು ಆ ಉಪಾಸಕರು ವಾಸವಾಗಿರುವ ಬೀದಿಯಲ್ಲಿನ ಒಂದು ಮನೆಗೆ ಪಾದಪೂಜೆ ಸ್ವೀಕರಿಸುವುದಕ್ಕಾಗಿ ಹೋದರು. ಆ ಮನೆಯ ಪಕ್ಕದಲ್ಲಿಯೇ ಉಪಾಸಕರ ಮನೆಯಿದೆಯೆಂದು ತಿಳಿದು, ದಿಢೀರೆಂದು ಅವರ ಮನೆಯೊಳಗೆ ಹೊಕ್ಕು ಉಪಾಸಕರ ಯಾಗಶಾಲೆಗೆ ಹೋಗಿ ಸ್ವಲ್ಪ ಹೊತ್ತು ನಿಂತುಕೊಂಡರು. ಉಪಾಸಕರು ದಿಗಿಲುಬಿದ್ದು ಓಡಿಬಂದು ಶ್ರೀ ಜಗದ್ಗುರುಗಳಿಗೆ ನಮಸ್ಕಾರಮಾಡಿ ನಿಂತರು. ಅವರನ್ನು ಉದ್ದೇಶಿಸಿ ಗುರುಗಳು: "ನಿಮ್ಮ ತಪಸ್ಸನ್ನೇಕೆ ಪರರಿಗೆ ಮಾರುತ್ತೀರಿ? ಸ್ವಂತಕ್ಕಾಗಿ ಮಾಡಿಕೊಳ್ಳಿ" ಎಂದರು. ಉಪಾಸಕರು ಒಡನೆಯೇ "ಹೌದು. ಪರರಿಗಾಗಿ ಜಪಗಳನ್ನು ಮಾಡಿ ದ್ರವ್ಯ ಸಂಪಾದನೆ ಮಾಡುತ್ತಿದ್ದೇನೆ. ಆದರೆ, ಮನಸ್ಸಿಗೆ ನೆಮ್ಮದಿಯಿಲ್ಲ. ಸಿಕ್ಕುವ ಹಣವೂ ಸಾಕಾಗುವುದಿಲ್ಲ. ಇನ್ನು ಮುಂದೆ ಸನ್ನಿಧಾನದ ಅಪ್ಪಣೆಪ್ರಕಾರ ನನ್ನ ಸ್ವಂತಕ್ಕಾಗಿ [illegible]ಡುತ್ತೇನೆ" ಎಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹಂಕಾರಪಟ್ಟುಕೊಂಡು ನಡೆಯುವವರಿಗೆ ಶಾಂತವಾಗಿಯೇ ಉಪದೇಶ ಕೊಡುವ ಗುರುಗಳ ಸ್ವಭಾವ ಇಲ್ಲಿ ಕಂಡುಬರುವುದು.

ಬಡವರಲ್ಲಿ ಕರುಣೆ

ಜಗದ್ಗುರುಗಳು ಆಂಧ್ರಪ್ರದೇಶದಲ್ಲಿ ಯಾತ್ರೆ ಮಾಡುತ್ತಿದ್ದ ಸಮಯ, ಒಂದೂರಿನಲ್ಲಿ ಒಬ್ಬ ಬಡಬ್ರಾಹ್ಮಣ ಪಾದಪೂಜೆಮಾಡುವುದಕ್ಕೆ ಆಸೆಪಟ್ಟು ಮಠಕ್ಕೆ ಬಂದರು. ಕೈಯಲ್ಲಿ ಹಣವಿಲ್ಲ; ಹೂವುಗಳನ್ನು ಮಾತ್ರ ತೆಗೆದುಕೊಂಡು ಬಂದರು. ಪಾದಪೂಜೆಗೆ ೧೩೦ ರೂಪಾಯಿ ಕಾಣಿಕೆ ಕಟ್ಟಬೇಕೆಂದು ಮಠದಲ್ಲಿ ಹೇಳಿದೊಡನೆ ವ್ಯಥೆಪಟ್ಟುಕೊಂಡು ಮನೆಗೆ ಹಿಂದಿರುಗಿದರು. ಮತ್ತೊಂದು ದಿನ ಬಂದು ಸನ್ನಿಧಾನ ತಮ್ಮ ಮನೆಗೆ ಬರಬೇಕೆಂದೂ, ೧೩೦ ರೂಪಾಯಿ ಸಿದ್ಧವಾಗಿದೆಯೆಂದೂ ಹೇಳಿದರು. ಮನೆಗೆ ಬರುವುದಾದರೆ ೨೫೦ ರೂಪಾಯಿ ಕಟ್ಟಬೇಕಾಗಿದೆಯೆಂದು ಮಠದವರು ಅವರಿಗೆ ಹೇಳಿದರು. ಆ ಬ್ರಾಹ್ಮಣ ತಮ್ಮ ಪಕ್ಕದ ಮನೆಯಲ್ಲಿ ಶ್ರೀ ಸನ್ನಿಧಾನ ಬಂದು ಪಾದಪೂಜೆ ನಡೆಯುತ್ತಿರುವಸಮಯದಲ್ಲಿ ಮನಸ್ಸಂಕಟಪಡುತ್ತಾ ಆ ಮನೆಯಲ್ಲಿ ನಿಂತುಕೊಂಡಿದ್ದರು. ಇವರನ್ನು ಕಂಡು ಶ್ರೀ ಸನ್ನಿಧಾನವು ಹತ್ತಿರ ಬರುವಂತೆ ಕರೆದು, ಮುಖದಲ್ಲಿ ಕಾಣುತ್ತಿರುವ ವ್ಯಥೆಗೆ ಕಾರಣವೇನೆಂದು ಕೇಳಿದರು. ಬ್ರಾಹ್ಮಣರು ನಡೆದದ್ದನ್ನು ತಿಳಿಯಪಡಿಸಿದರು. ಶ್ರೀ ಸನ್ನಿಧಾನವು ಶ್ರೀ ಗಣಪತಿ ಅವಧಾನಿಗಳನ್ನು ಕರೆದು ಕೇಳಿದರು. ನಡೆದದ್ದು ವಾಸ್ತವವೇ ಎಂದು ತಿಳಿಯಿತು. ಆ ಬ್ರಾಹ್ಮಣನೇನೋ ತನ್ನ ಮನೆಗೆ ಹೊರಟುಹೋದನು. ಒಡನೆಯೇ ತಮ್ಮ ಆಪ್ತ ಕಾರ್ಯದರ್ಶಿಯನ್ನು ಕರೆದು, ೨೫೦ ರೂಪಾಯನ್ನು ಮಠದ ಹಣದಿಂದ ತೆಗೆದುಕೊಂಡು ಬರುವಂತೆ ಹೇಳಿದರು. ರೂಪಾಯಿ ತಂದರು. ಶ್ರೀ ಗಣಪತಿ ಅವಧಾನಿಗಳನ್ನು ಕರೆದು ಆ ೨೫೦ ರೂಪಾಯನ್ನು ಅವಧಾನಿಗಳ ಕೈಚೀಲದಲ್ಲಿ ಇಟ್ಟುಕೊಳ್ಳುವಂತೆ ಹೇಳಿದರು. ಆ ಬ್ರಾಹ್ಮಣನ ಮನೆಗೆ ಪಾದಪೂಜೆಗಾಗಿ ಕೂಡಲೇ ಸನ್ನಿಧಾನ ಹೊರಟು ನಡೆದರು. ಸನ್ನಿಧಾನವನ್ನು ಅನಿರೀಕ್ಷಿತವಾಗಿ ತಮ್ಮ ಮನೆಯಲ್ಲಿ ಕಂಡ ಬ್ರಾಹ್ಮಣನಿಗೆ ಆಶ್ಚರ್ಯವನ್ನು ತಾಳಲಾಗಲಿಲ್ಲ. [illegible] ಏರ್ಪಾಡಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸನ್ನಿಧಾನವೂ ಪೀಠದಲ್ಲಿ ಮಂಡಿಸಿದರು. ಆತನನ್ನು ಕರೆದು ಪಾದಪೂಜೆಗೆ ಕೂತುಕೊಳ್ಳುವಂತೆ ಹೇಳಿದರು. ಅವರು ಕೂತುಕೊಂಡಮೇಲೆ, ಗಣಪತಿ ಅವಧಾನಿಗಳು ಕೈ ಚೀಲದಿಂದ ೨೫೦ ರೂಪಾಯನ್ನು ತೆಗೆದು ತಟ್ಟೆಯಲ್ಲಿ ಸುರಿದರು. ಆ ಬ್ರಾಹ್ಮಣ ಮನಸ್ತೃಪ್ತಿಯಾಗುವಂತೆ ಪಾದಪೂಜೆ ಮಾಡಿದರು. ಮಂಗಳಾರತಿ ಮಾಡಿ ಮುಗಿಸಿ ಸನ್ನಿಧಾನಕ್ಕೆ ನಮಸ್ಕಾರಮಾಡಿ ಎದ್ದು ನಿಂತರು. ಕೂಡಲೇ ಸನ್ನಿಧಾನವು ಪೂಜಾಕಾಲದಲ್ಲಿ ಪಾದುಕೆಗಳಿಗೆ ಸಮರ್ಪಿತವಾಗಿದ್ದ ೨೫೦ ರೂಪಾಯನ್ನೂ ಎತ್ತಿ ತೆಗೆದುಕೊಂಡು ಆ ಬಾಹ್ಮಣನಿಗೆ ಕೊಟ್ಟು, "ಸೌಖ್ಯವಾಗಿ ಬಾಳಿ" ಎಂದು ಆಶೀರ್ವದಿಸಿ ಹೊರಹೊರಟರು. ಬ್ರಾಹ್ಮಣ ದಿಗ್ಭ್ರಮೆಗೊಂಡು ಕಣ್ಣುಗಳಲ್ಲಿ ನೀರು ಸುರಿಯುತ್ತಿರಲು, ಸನ್ನಿಧಾನವನ್ನೇ ನೋಡುತ್ತ ನಿಂತುಬಿಟ್ಟರು. ಬಡವರಲ್ಲಿ ಕರುಣೆದೋರುವುದರಲ್ಲಿ ಈ ಪೀಠಾಧಿಪತಿಗಳಿಗೆ ಅಧಿಕಾಧಿಕ ಉತ್ಸಾಹವುಂಟು.

* * * *

ಶೃಂಗೇರಿಯಲ್ಲಿ ಜಗದ್ಗುರುಗಳು ನಡೆಸುವ ನವರಾತ್ರಿ ಉತ್ಸವ ಸುವಾಸಿನೀ ಪೂಜಾಸಂಬಂಧವಾಗಿ ಒಬ್ಬ ಸುವಾಸಿನಿಗೆ ಅವಶ್ಯವಾದಷ್ಟು ಹಣವನ್ನು ತಾನು ಶ್ರೀ ಸನ್ನಿಧಾನದಲ್ಲಿ ಸಮರ್ಪಿಸಬೇಕೆಂದು ಒಬ್ಬ ಬಡವೆ ಹೆಂಗಸು ಆಸೆಪಟ್ಟಳು. ಆದರೆ, ಅಷ್ಟು ಹಣ ತನ್ನ ಹತ್ತಿರ ಇಲ್ಲವಲ್ಲಾ ಎಂದು ವ್ಯಥೆಪಡುತ್ತಾ, ಸನ್ನಿಧಾನವನ್ನು ದರ್ಶನಮಾಡಿ ತೀರ್ಥವನ್ನು ಪಡೆದುಕೊಂಡಳು. ಅದೇ ಸಮಯದಲ್ಲಿ, ಆ ಹೆಂಗಸಿನ ಮನೆಯಲ್ಲಿದ್ದ ಮತ್ತೊಬ್ಬ ಸುಮಂಗಲಿ ತೀರ್ಥ ತೆಗೆದುಕೊಳ್ಳುತ್ತಿರುವಾಗ, ಗುರುಗಳು ಮಠದ ಸಿಬ್ಬಂದಿಗೆ "ಈ ತಾಯಿಗೆ ಒಂದು ಸೀರೆಯನ್ನು ತಂದುಕೊಡು" ಎಂದು ಹೇಳಿದರು. ಅವರು "ಲೆಕ್ಕಮಾಡಿ ತೆಗೆದಿಟ್ಟಿದ್ದದ್ದು ಮುಗಿದುಹೋಯಿತು" ಎಂದರು. ಬೇರೊಂದು ಕಡೆ ಸೀರೆ ಇರುವುದಾಗಿ ಹೇಳಿ ಅದನ್ನು ತೆಗೆದುಕೊಂಡು ಬರುವಂತೆ ಶ್ರೀ ಸನ್ನಿಧಾನ ಹೇಳಲಾಗಿ, ಸಿಬ್ಬಂದಿಯವರು ಅದನ್ನು ತಂದು ಆಕೆಗೆ ಕೊಟ್ಟರು. ಮೇಲೆಹೇಳಿದ ಬಡಹೆಂಗಸಿನ ಮನೆಯಲ್ಲಿ ಅವತ್ತು ಆ ಸುವಾಸಿನಿ ಭೋಜನಮಾಡುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಏರ್ಪಾಡು ಮಾಡಲಾಯಿತು. ಹೀಗೆ ಆ ಬಡಹೆಂಗಸಿನ ಕೈಯಲ್ಲಿ ಹಣವಿಲ್ಲದೆ ಇದ್ದರೂ, ಆಕೆ ಬಾಯಿಬಿಟ್ಟು ಗುರುಗಳನ್ನು ಏನನ್ನೂ ಕೇಳದೆ ಇದ್ದರೂ, ಆಕೆಯ ಕೋರಿಕೆಯೇನೋ ನೆರವೇರಿತು.

ಇದೇ ರೀತಿಯಲ್ಲಿ, ಪಾದಪೂಜೆ ಮಾಡುವುದಕ್ಕೆ ಸೌಕರ್ಯವಿಲ್ಲದವರಿಗೆ ಅವರು ಹೇಳದೆಯೇ, ಅವರ ಮನಸ್ಸಿನಲ್ಲಿ ಉದಿಸುವ ಒಳ್ಳೆಯ ಭಾವನೆಗಳನ್ನು ಅರಿತುಕೊಂಡು, ಗುರುಗಳು ಅನುಗ್ರಹಿಸಿದ್ದಾರೆ. ಶೃಂಗೇರಿಗೆ ಬರುವುದಕ್ಕೋ, ಅಲ್ಲದೆ ಅಲ್ಲಿಗೆ ಬಂದ ಮೇಲೆ ಕಾಶಿ ಮೊದಲಾದ ಕ್ಷೇತ್ರಗಳಿಗೆ ಯಾತ್ರೆ ಮಾಡಬೇಕೆಂದೋ ಹಲವರು ಭಕ್ತರುಗಳು, ನೇರವಾಗಿಯೋ ಅಥವಾ ಟಪಾಲು ಮೂಲಕವೋ ಕೇಳಿಕೊಂಡು, ಅವರುಗಳಿಗೆ ಶ್ರೀ ಸನ್ನಿಧಾನದಿಂದ ಅನುಗ್ರಹ ದೊರೆತು; ವಯಸ್ಸಾದವರೂ ಸಹ ಯಾವ ವಿಧವಾದ ಶ್ರಮವೂ ಇಲ್ಲದೆ ಯಾತ್ರೆಯನ್ನು ಪೂರ್ತಿಮಾಡಿದ್ದಾರೆ. ಕೆಲವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಅನುಗ್ರಹಿಸಿರುವುದೂ ಉಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶೇಷ ಮನವಿ

[ಶ್ರೀ ಶೃಂಗೇರೀ ಜಗದ್ಗುರುಗಳವರ ವರ್ಷವರ್ಧಂತ್ಯುತ್ಸವವನ್ನು ಬೆಂಗಳೂರಿನಲ್ಲಿ ತಾ|| ೨-೧೧-೧೯೭೫ರಂದು ಉದ್ಘಾಟಿಸಿದ ಕರ್ಣಾಟಕ ರಾಜ್ಯಪಾಲರಾದ ಮಾನ್ಯ ಶ್ರೀ ಮೋಹನಲಾಲ ಸುಖಾದಿಯ ಅವರು ಈರೋಡಿನ ನ್ಯಾಯವಾದಿ ಶ್ರೀ ಕೆ. ವಿ. ಸುಬ್ಬರತ್ನಂ ಅವರಿಂತ ರಚಿತವಾದ "ಶ್ರೀಮತ್ ಅಭಿನವ ವಿದ್ಯಾತೀರ್ಥ ವಿಜಯಮ್" ಎಂಬ ತಮಿಳು ಪುಸ್ತಕವನ್ನೂ ಪ್ರಕಾಶನಗೊಳಿಸಿದರು. ಬೆಂಗಳೂರಿನ ಶ್ರೀ ಎಸ್. ಜಿ. ನರಸಿಂಹಯ್ಯನವರು ಬರೆದಿರುವ ಈ ಮುಂದಿನ ಅಧ್ಯಾಯವನ್ನು ಆ ಪುಸ್ತಕದ ಕೊನೆಯಲ್ಲಿ ಸೇರಿಸಬೇಕಾಗಿತ್ತು; ಆದರೆ ಮುದ್ರಣಕ್ಕೆ ಸಾಕಷ್ಟು ಕಾಲ ಇರಲಿಲ್ಲವಾದ ಕಾರಣ, ಇದನ್ನು ಓದುಗರು ಆ ಗ್ರಂಥದ ಪೂರಕ (SUPPLEMENT) ವೆಂದು ಭಾವಿಸಬೇಕಾಗಿ ವಿನಂತಿ.

—ಪ್ರಕಾಶಕರು.]

ಶ್ರೀ

ಅದ್ವಿತೀಯ ಚಿತ್ತಸ್ಥೈರ್ಯ

ಸಂದರ್ಭಗಳೆಲ್ಲ ಅನುಕೂಲವಾಗಿರುವಾಗ ಎಲ್ಲರೂ ವೇದಾಂತಿಗಳೇ, ಎಲ್ಲರೂ ಸ್ಥಿರಮತಿಗಳೇ. ಅವೇನಾದರೂ ಅಲ್ಪಸ್ವಲ್ಪ ಹದಗೆಟ್ಟರೆ, ಆಗ ಬಯಲಾಗುವುದು, ಅಂತರ್ಯದ ಬಣ್ಣ. ಹೀಗಿರುವಾಗ. ಯಾರಿಗೇ ಆಗಲಿ, ಹೃದಯವನ್ನೇ ಭೇದಿಸುವಂತಹ ಕಠೋರವಾರ್ತೆ ಹಠಾತ್ತನೆ ಕಿವಿಗೆ ಬಿದ್ದರೆ, ಎಂತಹ ಪರಿಣಾಮವಾಗಬೇಕು, ಮನಸ್ಸಿನಮೇಲೆ ? ಮನಸ್ಸು ಕದಡಿಹೋಗಿ, ಬುದ್ಧಿಯು ವಿಕಲ್ಪವಾಗಿ, ದಿಕ್ಕುತೋರದಂತಾಗುವುದು. ಆದರೆ ಇದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮಾನ್ಯಜನರಿಗೆ ಅನ್ವಯಿಸುವ ಮಾತು ; ಸುಜ್ಞಾನಿಗಳಿಗಲ್ಲ. ಜ್ಞಾನಿಗಳಿಗೆ ಅಂತಹುದೇ ಸಂದರ್ಭಗಳಲ್ಲಿ ಆಗುವ ಪರಿಣಾಮ ಹೇಗಿರಬಹುದು ? ಸಾಧಕರಿಗೆ ಇದು ತಿಳಿದಿರಬೇಕು. ಅದಕ್ಕಾಗಿಯೇ ಇರಬುಹುದು, "ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ। ಸ್ಥಿರಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಮ್ ॥" ಎಂಬುದಾಗಿ ಅರ್ಜುನನು ಕೇಳಿದ್ದು. ಶ್ರೀ ಕೃಷ್ಣನ ಉತ್ತರ ಹೀಗಿತ್ತಲ್ಲವೆ ? "ರಾಗದ್ವೇಷ ವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ । ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥ ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪಜಾಯತೇ। ಪ್ರಸನ್ನ ಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥" ಈ ಉತ್ತರವನ್ನು ನಮ್ಮ ಜಗದ್ಗುರುಗಳಾದ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಪ್ರತಿಕ್ರಿಯೆಯಿಂದ ತಿಳಿಯಬಹುದಾಗಿದೆ. ಅವರ ಅನುಭವದಲ್ಲಿ ಅತ್ಯಂತ ಹೃದಯವಿದ್ರಾವಕ ಘಟನೆಯೊಂದು ನಡೆಯಿತು. ಸಿದ್ಧಪುರುಷರು ಎಂತಹ ಪರಿಸ್ಥಿತಿಯಲ್ಲೂ ವಿಕಲ್ಪಕ್ಕೆ ಅವಕಾಶವೀಯರೆಂಬುದು ಬರೀ ಬಾಯಮಾತಲ್ಲ, ವಾಸ್ತವ ಸಂಗತಿ, ಎಂಬುದು ಆಗ ಅವರ ಬಳಿಯಿದ್ದ ಎಲ್ಲ ಜನರಿಗೂ ಮನದಟ್ಟಾಯಿತು.

ಆನಂದ ಸಂವತ್ಸರದ ಶ್ರಾವಣ ಕೃಷ್ಣ ನವಮೀ ಸೋಮವಾರ (೧೯೭೪ನೇ ಆಗಸ್ಟ್ ೧೨) ಶೃಂಗೇರಿಗೇ ಮಹಾದುರ್ದಿನ. ಮಹಾಸ್ವಾಮಿಗಳವರ ಆಪ್ತ ಕಾರ್ಯದರ್ಶಿಗಳಾಗಿದ್ದ ಗುರುಭಕ್ತ ತಿಲಕ, ವಿದ್ವಾನ್ ಕೆ. ಪದ್ಮನಾಭ ಉಪಾಧ್ಯಾಯರು ಮತ್ತು ಆಸ್ಥಾನವಿದ್ವಾನ್ ಸುಂದರಘನಪಾಠಿಗಳು ಶ್ರೀಮಠದ ಕಾರ್ಯಾರ್ಥಿಗಳಾಗಿ ಅಂದಿನ ಬೆಳಗ್ಗೆ ಡೆಲ್ಲಿಯಿಂದ ಹರಿದ್ವಾರಕ್ಕೆ ಒಂದು ಕಾರಿನಲ್ಲಿ ಪ್ರಯಾಣಮಾಡುತ್ತಿದ್ದರೆಂದೂ, ಕಾರು ಮೀರಠ್‌ನಗರವನ್ನು ಸಮೀಪಿಸುತ್ತಿದ್ದಾಗ ಅಪಘಾತಕ್ಕೆ ಈಡಾಯಿತೆಂದೂ, ಅದರ ಪರಿಣಾಮವಾಗಿ ಇಬ್ಬರೂ ತೀವ್ರವಾಗಿ ಗಾಯಗೊಂಡರೆಂದೂ ಆ ಮಧ್ಯಾಹ್ನದಿಂದ ಸುದ್ದಿಗಳು ಬರುತ್ತಿದ್ದವು. ಬೆಂಗಳೂರಿನಲ್ಲಿ ಶ್ರೀಮಠದ ಕೆಲ ಮುಖ್ಯ ಶಿಷ್ಯರಿಗೆ ಅದೇ ಸಂಜೆ ಇನ್ನೂ ಮುಂದಿನ ದುರ್ವಾರ್ತೆಯೂ ಮುಟ್ಟಿತು, ಆ ಇಬ್ಬರೂ ಮೃತ್ಯುವಶರಾದರೆಂದು. ಶಿಷ್ಯರುಗಳು ತಕ್ಷಣವೇ ಶೃಂಗೇರಿಗೆ ಹೊರಟರು. ಸೂರ್ಯೋದಯಕ್ಕೆ ಮೊದಲೇ ಬಂದು ಸೇರಿದರು. ಸಮಾಚಾರವನ್ನು ವಿಜ್ಞಾಪಿಸುವುದಕ್ಕಾಗಿ ಮಹಾಸನ್ನಿಧಾನದ ಬಳಿ ಹೋಗಿ ನಿಂತರು. ಆದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಂದಾದ ಕಾರ್ಯ ಅಷ್ಟೇ. ಶೋಕವು ಉಕ್ಕಿತು. ಮೈ ನಡುಗಲಾರಂಭಿಸಿತು. ಮಾತು ಸ್ಪಷ್ಟವಾಗಿ ಹೊರಡದಾಯಿತು. ಮಹಾಸನ್ನಿಧಾನಕ್ಕೆ ಅದರಿಂದಲೇ ತಿಳಿದುಹೋಯಿತು, ಏನೋ ಒಂದು ವೈಪರೀತ್ಯ ನಡೆದುಹೋಗಿರಬೇಕು ಎಂದು. ತಾವೇ ಮಾತನಾಡಲಾರಂಭಿಸಿದರು: "ನೀವುಗಳು ರಾತ್ರಿಯ ಕಗ್ಗತ್ತಲೆಯಲ್ಲಿ ಇಷ್ಟು ದೂರ ಪ್ರಯಾಣವನ್ನು ಕೈಗೊಂಡಿರುವುದರಿಂದ ಏನೋ ಒಂದು ಅಸಾಧಾರಣ ವಿಚಾರವನ್ನು ತಿಳಿಸುವುದಕ್ಕಾಗಿ ಬಂದಿರುವಿರಿ ಎಂಬುದಾಗಿ ಅರ್ಥವಾಗುವುದು. ನೀವಿರುವ ಸ್ಥಿತಿಯನ್ನು ನೋಡಿದರೆ, ನಿಮ್ಮ ತೊದಲು ನುಡಿಗಳನ್ನು ಕೇಳಿದರೆ, ಯಾವುದೋ ದೊಡ್ಡ ಅನಾಹುತವೇ ನಡೆದುಹೋಗಿರಬೇಕು ಎನ್ನಿಸುತ್ತಿದೆ. ಹೇಳಿ, ಬೇಗ ಹೇಳಿ. ಅವರಿಬ್ಬರ ಕಥೆಯೂ ಮುಗಿದುಹೋಯಿತೋ? ಧೈರ್ಯವಾಗಿ ಮಾತನಾಡಿ" ಎಂದರು. ಶಿಷ್ಯರು ಧೈರ್ಯತಾಳಿದರು: ಒಬ್ಬರು ಸ್ವಲ್ಪವನ್ನು ಹೇಳುವುದು, ಮತ್ತೊಬ್ಬರು ಸ್ವಲ್ಪ ಸೇರಿಸುವುದು, ಇನ್ನೊಬ್ಬರು ಪೂರ್ಣಗೊಳಿಸಲೆತ್ನಿಸುವುದು— ಹೀಗೆ ಅಂತೂ ಇಂತೂ ದುರ್ಭರ–ಕಠೋರ ವಾರ್ತೆಯನ್ನು ನಿವೇದಿಸಿಬಿಟ್ಟರು.

ಗುರುಗಳ ಮನಸ್ಸಿಗೆ ಮೊದಲೇ ಹೊಳೆಯುತ್ತಿದ್ದ ಸೂಚನೆಗಳು ಆಗ ಸ್ಥಿರಪಟ್ಟವು. ಪರಿಸ್ಥಿತಿಯು ಅವರಿಗೂ ದುರ್ಭರವೆನಿಸಿರಬಹುದು. ಒಂದು ಕ್ಷಣಕಾಲ ಅವರ ಮನಸ್ಸು ಕದಡಿಹೋದಂತೆ ತೋರಿತು. ಅನೇಕ ನೆನಪುಗಳು, ಭಾವನೆಗಳು, ಯೋಚನೆಗಳು, ಅವರಿಗೆ ಉಂಟಾದಂತೆ ಕಾಣಿಸಿತು. ಸಂಪೂರ್ಣ ನಂಬಿಕೆಯನ್ನು ಆರ್ಜಿಸಿದ್ದ ಮಹಾದಕ್ಷರೆನಿಸಿದ್ದ ಇಬ್ಬರು ಕಾರ್ಯಕರ್ತರು, ಸ್ವಾಮಿಭಕ್ತಿಭರಿತರು, ನಿಷ್ಕಳಂಕಹೃದಯರು, ಶಾರದಾ ಚಂದ್ರಮೌಳೀಶ್ವರರ ಪರಮಭಕ್ತರು, ಗುರುಕೃಪೆಗೆ ಪೂರ್ಣಪಾತ್ರರು, ಶಿಷ್ಯಕೋಟಿಯ, ಮೈಸೂರು ಮಹಾರಾಜರ, ಡೆಲ್ಲಿಯ ಉನ್ನತಾಧಿಕಾರಿಗಳ ಪ್ರೀತಿಗೌರವಗಳನ್ನು ಅನುಭವಿಸುತ್ತಿದ್ದವರು, —ಅಂತಹವರು, ಏಕಕಾಲದಲ್ಲಿ—ಅದೂ ದೂರದೇಶದಲ್ಲಿ—ಅಪಘಾತಕ್ಕೀಡಾಗುವುದೆಂದರೇನು, ಅದರಿಂದ ಮೃತ್ಯುವಶರಾಗುವುದು ಎಂದರೇನು? ನಡೆಯಬಹುದೇ ಇಂತಹ ದುರ್ಘಟನೆ? ಅಷ್ಟು ಒಳ್ಳೆಯವರ ಬಾಳು ಹೀಗೆ ಕೊನೆಗೊಂಡಿತೇ? ಅವರ ಸೇವೆ ನಿಸ್ವಾರ್ಥವೂ ಅಕಳಂಕವೂ ಆಗಿತ್ತಲ್ಲವೇ? ಸಂದೇಹವೇನು? ಹಾಗಿರುವಲ್ಲಿ ಅವರಿಗೇಕೆ ಈತೆರನಾದ ಮರಣ?........ಈ ಮೊದಲಾಗಿ ಹರಿದಿರಬಹುದು, ಮಹಾಸ್ವಾಮಿಗಳವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಜನಾತರಂಗಗಳು. ಉಪಾಧ್ಯಾಯರು ತಮ್ಮನ್ನು ಪ್ರಪ್ರಥಮವಾಗಿ ಸಂದರ್ಶಿಸಿ ಮೂವತ್ತುಮೂರು ವರ್ಷಗಳು ಕಳೆದಿದ್ದವು. ಸನ್ನಿಧಾನದ ಸ್ವಂತ ಸಹಾಯಕರಾಗಿ, ತರುವಾಯ ಆಪ್ತಕಾರ್ಯದರ್ಶಿಯಾಗಿ, ಚಿರಸ್ಮರಣೀಯ ಸೇವೆಯನ್ನು ಇಪ್ಪತ್ತುವರ್ಷಕಾಲ ಸಲ್ಲಿಸಿದುದು, ಗುರುಸೇವೆಗಿಂತ ಮಿಗಿಲಾದುದು ಪ್ರಪಂಚದಲ್ಲಿ ಮತ್ತೇನೂ ಇಲ್ಲವೆಂಬುದಾಗಿ ಪದೇಪದೇ ಅವರಾಡುತ್ತಿದ್ದ ಪ್ರತಿಜ್ಞಾ ವಚನಗಳು, ಶ್ರೀಮಠದ ಕಾರ್ಯಗಳು ಯಶಸ್ವಿಯಾಗಿ ನೆರವೇರುವುದಕ್ಕಾಗಿ, ಶ್ರೀಮಠದ ಕೀರ್ತಿ ಇತೋಧಿಕವಾಗಿ ವಿಸ್ತರಿಸುವುದಕ್ಕಾಗಿ ಅವರು ಕೈಗೊಂಡ ಅನೇಕ ಯೋಜನೆಗಳು ಎಷ್ಟು ಜಯಪ್ರದವಾಗುತ್ತಿದ್ದುವೆಂಬ ನೆನಪು– ಇವೆಲ್ಲವೂ ಗುರುಗಳ ಸ್ಮೃತಿಪಥದಲ್ಲಿ ಎದ್ದು ನಿಂತವು. ಹಾಗೆಯೇ ಘನಪಾಠಿಗಳ ಪೂರ್ಣಪಾಂಡಿತ್ಯ, ಗುರುಗಳಿಂದಾದ ಅಖಿಲ ಭಾರತ ವಿಜಯ ಯಾತ್ರೆಯೇ ಅಲ್ಲದೆ ಇನ್ನೂ ಅನೇಕಾನೇಕ ಇತರ ಪ್ರವಾಸಗಳ ಸಂಬಂಧವಾಗಿ ಅವರು ಪೂರ್ವಭಾವಿಯಾಗಿ ಅತ್ಯಂತ ತೃಪ್ತಿಕರವಾಗಿ ಮಾಡುತ್ತಿದ್ದ ಏರ್ಪಾಡುಗಳು, 'ವೇದಾನುವಚನಗಳಷ್ಟೇ ಮಾನ್ಯ ಗುರುಗಳ ಆದೇಶಗಳು' ಎಂಬುದಾಗಿ ನಂಬಿ ಗುರ್ವಾಜ್ಞೆಗಳನ್ನು ಶಿರಸಾವಹಿಸಿ ಅಕ್ಷರಶಃ ಪರಿಪಾಲಿಸುತ್ತಿದ್ದ ಅವರ ವಿಧೇಯತೆ, ಗುರುಗಳು ಆಡಿದ ಮಾತಿನಲ್ಲೇ ಆಗಲಿ, ಮಾಡಿದ ಕಾರ್ಯದಲ್ಲೇ ಆಗಲಿ, ಯೋಚನೆಯಲ್ಲೇ ಆಗಲಿ, ತಪ್ಪು ಎಂಬುದೇ ಇರದೆಂಬ ಗಾಢನಂಬಿಕೆ, ತಮಗೆ ಗುರುಗಳು ವಹಿಸಿದ ಯಾವ ಜವಾಬ್ದಾರಿಯ ನಿರ್ವಹಣೆಯಲ್ಲೇ ಆಗಲಿ ಗುರುಕೃಪೆಯೇ ತಮ್ಮ ವಜ್ರಕವಚವೆಂಬ ಅವ್ಯಭಿಚರಿತ ಹಾಗೂ ದೃಢಭಕ್ತಿ, ಮುಂತಾದ ವಿಶೇಷ ಗುಣಗಳು ಗುರುಗಳ ಮನೋನಯನಗೋಚರವಾಗಿರಬೇಕು. ಬೆಂಗಳೂರಿನಿಂದ ಬಂದಿದ್ದ ಪ್ರಮುಖ ಶಿಷ್ಯರಿಗಂತೂ, ಗುರುವರ್ಯರು ಹಾಗೆ ನಿಶ್ಚಲವಾಗಿ ಕೂತಿದ್ದುದು, ಅವರೂ ಸಹ ಶೋಕಪೀಡಿತರಂತೆ ಕಂಡುಬಂದುದು, ಅದೇ ಪ್ರಪ್ರಥಮ ಅನುಭವ. ಅದೆಲ್ಲವೂ ನಿಜವೆಂದೂ ಸಹಜವೆಂದೂ ಅವರು ಭಾವಿಸಿದರು, ಮೊದಮೊದಲು. "ಸ್ವಾನುಷ್ಠಾನಸಮಯೇ ಮುನಯೋಽಪಿ ನ ಪಂಡಿತಾಃ" ಎಂಬ ಆರ್ಯೋಕ್ತಿ ಅವರ ನೆನಪಿಗೆ ಬಂದಿತು. ಮರುಕ್ಷಣವೇ, ತಮ್ಮ ಭಾವನೆಗಳಲ್ಲಿ ಏನೋ ತಪ್ಪಿರಬೇಕು. ತಮ್ಮ ಗುರುಗಳು ಶೋಕಗ್ರಸ್ತರಾಗುವುದೆಂದರೇನು? ಅದು ಎಂದಿಗೂ ಸಲ್ಲದ ಮಾತು. ಅರಿಷಡ್ವರ್ಗಗಳನ್ನು ಮೀರಿರುವ ಮಹಾತ್ಮರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂತಹ ಆವೇಶಕ್ಕೂ ಎಡೆಗೊಡರು—ಎಂದುಕೊಂಡರು. ಅಲ್ಲಿಗೂ ಅವರನ್ನೊಂದು ಸಂದೇಹವು ಬಾಧಿಸಿತು: ಹಾಗಾದರೆ ಈ ಪರಿಸ್ಥಿತಿಗೆ ಕಾರಣವಾದರೂ ಏನಿರಬಹುದು, ಎಂದು ಆಲೋಚಿಸತೊಡಗಿದರು.

ಅವರ ಸಂದೇಹಕ್ಕೆ ಪರಿಹಾರ ತಡವಿಲ್ಲದೆ ದೊರೆಯಿತು. ಸಂಶಯಾತ್ಮರಿಗೆ ಪಾಪವು ತಪ್ಪಿದ್ದಲ್ಲವೆಂಬ ಅರಿವು ಆಕೂಡಲೆ ಉದಯವಾಯಿತು. ಹೇಗೆಂದರೆ, ಮತ್ತೊಮ್ಮೆ ಗುರುಗಳ ಮುಖವನ್ನು ನೋಡಲಾಗಿ, ಅದರಲ್ಲಿ ಸರ್ವಸಾಮಾನ್ಯವಾಗಿ ಕಾಣುತ್ತಿದ್ದ ಕಾಂತಿ ಮತ್ತೆ ಮೂಡಿತ್ತು. ಗುರುಗಳು ಒಮ್ಮೆ ದೀರ್ಘವಾಗಿ ಉಸಿರಾಡಿದರು; ಶಿಷ್ಯರನ್ನು ನೋಡಿದರು, ಅವರೆಲ್ಲಾ ಚಿಂತಾಕ್ರಾಂತರಾಗಿದ್ದರೆಂಬುದನ್ನು ಕಂಡರು, ಅವರನ್ನುದ್ದೇಶಿಸಿ ಕೇಳಿದರು: "ಆದದ್ದು ಆಯಿತು—ಮುಂದೇನು?" ಎಂದು. "ಮೃತದೇಹಗಳು ಈ ಸಂಜೆ ಇಲ್ಲಿಗೆ ಬಂದು ಸೇರುವುವು." "ಓಹೋ, ಅಷ್ಟಾದರೂ ಆಗುವುದಲ್ಲ! ಬರಲಿ ಆಗಬೇಕಾದ ಸಂಸ್ಕಾರಗಳೆಲ್ಲ ವಿಧಿವತ್ತಾಗಿ ನಡೆಯಲಿ. ನೀವುಗಳು ಈಗಲೇ ಹೊರಡಿರಿ, ಸಂಬಂಧಪಟ್ಟವರನ್ನೆಲ್ಲ ಕಂಡು ಮಾತನಾಡಿರಿ. ಆವಶ್ಯಕ ಏರ್ಪಾಡುಗಳನ್ನು ನೋಡಿಕೊಳ್ಳಿರಿ. ಒಂದು ಮಾತನ್ನು ನಿಮಗೆ ಹೇಳಬಯಸುತ್ತೇನೆ: ದುಃಖಕ್ಕೆ ಇದು ಸಮಯವಲ್ಲ. ತಲೆಯಮೇಲೆ ಕೈಯ್ಯನ್ನಿಟ್ಟುಕೊಂಡು ಕುಳಿತಿರುವುದರಿಂದ ಅಥವಾ ಸುಮ್ಮನೆ ಅಳುವುದರಿಂದ ಏನೂ ಪ್ರಯೋಜನವಿಲ್ಲ; ಮತ್ತಷ್ಟು ಎದೆಗುಂದುವಿರಿ, ಉಳಿದವರಿಗೂ ದಿಕ್ಕುತೋರದಂತಾಗುವುದು. ಆದುದರಿಂದ ಎಲ್ಲರೂ ಕಾರ್ಯೋನ್ಮುಖರಾಗಲಿ............ಋಣಾನುಬಂಧವು ತೀರಿತು. ಜನ್ಮಜನ್ಮಾಂತರಗಳ ಸಂಬಂಧಗಳು ಹೀಗೆ ಮಾಡಿಸುತ್ತವೆ. ಸಮುದ್ರದ ತೀರದಲ್ಲಿ ನೋಡುತ್ತೇವಲ್ಲ, ಅಲ್ಲಲ್ಲಿ ಬಿದ್ದಿರುವ ತರಗೆಲೆಗಳನ್ನೂ ಕಸಕಡ್ಡಿಗಳನ್ನೂ ಅಲೆಗಳು ಒಂದು ನಿಮಿಷದಲ್ಲಿ ಒಟ್ಟುಗೂಡಿಸಿ ಸಾಲಾಗಿ ಸೇರಿಸಿದರೆ, ಮರುನಿಮಿಷದಲ್ಲಿ ಆ ಪದಾರ್ಥಗಳು ಮತ್ತೆ ಹಿಂದಾಗಿ ಒಂದೊಂದೂ ಒಂದೊಂದು ದಿಕ್ಕಿನಲ್ಲಿ ಚೆದರಿಹೋಗುವುವು. ಮಾನವನ ಬಾಳಿಗೂ ಆ ಕಸಕಡ್ಡಿಗಳ ಪಾಡಿಗೂ ಹೆಚ್ಚು ವ್ಯತ್ಯಾಸವಿಲ್ಲ."

ಶಿಷ್ಯರು ಮೇಲೆದ್ದರು, ಹೊರಡಲುದ್ಯುಕ್ತರಾದರು, ಬಲವಂತದಿಂದ ತಮ್ಮ ಕಾಲುಗಳನ್ನು ಎಳೆದುಕೊಂಡು ಹೋಗುವ ರೀತಿಯಲ್ಲಿ ಹೆಜ್ಜೆಯಿಡಲು ಆರಂಭಿಸಿದರು. ಮತ್ತೆ ಹಿಂದಕ್ಕೆ ತಿರುಗಿ ನೋಡುತ್ತಾ, ಭಯಪಡುತ್ತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆಂದು ವಿಜ್ಞಾಪಿಸಿದರು: "ದಿವಂಗತರು ಶ್ರೀಮಠಕ್ಕೆ ಅದ್ವಿತೀಯವೂ ಚಿರಸ್ಮರಣೀಯವೂ ಆದ ಸೇವೆಯನ್ನು ಸಲ್ಲಿಸಿದರೆಂಬುದೇನೋ ನಿಜ. ಅವರು ಕಣ್ಮರೆಯಾದುದರಿಂದ ಆಗಿರುವ ನಷ್ಟವು ಅಷ್ಟಿಷ್ಟಲ್ಲ. ಆದರೂ, ಮಹಾಸ್ವಾಮಿಗಳು ಈ ದುರಂತವನ್ನು ಬಹಳವಾಗಿ ಹಚ್ಚಿಕೊಳ್ಳಬಾರದೆಂದು ಬಿನ್ನೈಸುತ್ತೇವೆ." ಗುರುಗಳು ತಕ್ಷಣದಲ್ಲೇ ಅಪ್ಪಣೆಕೊಡಿಸಿದ ಉತ್ತರ ಹೀಗಿತ್ತು: "ನಿಮಗೇಕೆ ಆ ಭಯ? ನಾನೊಬ್ಬ ಸಂನ್ಯಾಸಿಯಲ್ಲವೇ? ಸಂನ್ಯಾಸಿಗೆ ವ್ಯಾಮೋಹವಿಲ್ಲ, ಅಭಿಮಾನವಿಲ್ಲ, ಆಶಾಪಾಶಗಳಿಲ್ಲ, ಸುಖದುಃಖಗಳಿಲ್ಲ. ದಿವಂಗತರೇನೋ ಶ್ರೀಮಠವೆಂಬ ರಥಕ್ಕೆ ಎರಡು ಚಕ್ರಗಳಂತೆ ಇದ್ದರೆಂಬುದು ದಿಟ. ರಥವು ಸುಗಮವಾಗಿ ಮುಂದುವರಿಯುತ್ತಿತ್ತೆಂಬುದೂ ನಿಜ. ಇಬ್ಬರೂ ದೊಡ್ಡ ದೊಡ್ಡ ಜವಾಬ್ದಾರಿಗಳನ್ನು ಹೊತ್ತು ಭಕ್ತಿಶ್ರದ್ಧೆಗಳಿಂದ, ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಿಸುತ್ತಿದ್ದರು. ಎಂತಹ ಸಮಸ್ಯೆ ಬಂದೊದಗಿದರೂ ತಕ್ಷಣವೇ ಪರಿಹಾರಮಾರ್ಗವನ್ನು ಹುಡುಕುವಷ್ಟು ಸಮರ್ಥನಾಗಿದ್ದ, ಉಪಾಧ್ಯ. ನಾನೇನನ್ನಾದರೂ ಹೇಳಿದೆನೆಂದರೆ ಆ ಕ್ಷಣ, ಪರಮಭಕ್ತಿಯಿಂದ, ಪೂರ್ಣವಿಶ್ವಾಸದಿಂದ, ನೆರವೇರಿಸುತ್ತಿದ್ದ ಘನಪಾಠಿ. ಅಂತಹ ದಕ್ಷರಿಬ್ಬರನ್ನೂ ಶ್ರೀಮಠವು ಕಳೆದುಕೊಂಡಿರುವುದು ಅತ್ಯಂತ ಶೋಚನೀಯ. ಅವರ ಬದಲಾಗಿ ಯಾರೋ ನೇಮಿತರಾಗಬಹುದು. ಆದರೆ ಅವರಂತಹ ಕಾರ್ಯನಿರ್ವಾಹಕರು ಸಿಕ್ಕುವುದು ದುಸ್ಸಾಧ್ಯ. ಯಾರೇನು ಮಾಡಬಲ್ಲರು "ದೈವೀ ವಿಚಿತ್ರಾ ಗತಿಃ. ವಿಧಾತ್ರಾ ವಿಧಿತಂ ಯದ್ಯತ್ ತದಲಂಘ್ಯಂ ಸುರಾಸುರೈಃ" ಅನಿವಾರ್ಯ ಘಟನೆಗಳನ್ನು ಅನುಭವಿಸಿ ತೀರಬೇಕು, ಪ್ರಕೃತ ಕರ್ತವ್ಯವೇನೆಂಬುದನ್ನು ತಿಳಿದು ಕಾರ್ಯೋನ್ಮುಖರಾಗಬೇಕು."

ಊರಿನೊಳಗೆ, ಸಂಬಂಧಪಟ್ಟವರೆಲ್ಲ ಏರ್ಪಾಡುಗಳನ್ನು ಮಾಡತೊಡಗಿದರು. ಅನತಿಕಾಲದಲ್ಲಿ ಅವಶ್ಯಕ ಸಿದ್ಧತೆಗಳು ಪೂರ್ಣವಾಗಿದ್ದವು. ಮಾರತ್ತಿನಿಂದ ಬೆಂಗಳೂರಿಗೆ ವಿಮಾನದಲ್ಲೂ, ಅಲ್ಲಿಂದ ಶೃಂಗೇರಿಗೆ ಮೋಟಾರ್ ವ್ಯಾನಿನಲ್ಲೂ, ಮೃತದೇಹಗಳು ಬಂದುಸೇರಿದವು. ಸಂಸ್ಕಾರಗಳೂ ವಿಧಿವತ್ತಾಗಿ ನಡೆದುಹೋದವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಳೆಯಾಚೆ, ಈ ವರ್ತಮಾನಗಳನ್ನು ಕೇಳಿದ ಕೆಲವುಂದಿ ವೃದ್ಧ ಆಶ್ರಮಿಗಳು ಮಹಾಸನ್ನಿಧಾನವನ್ನು ಸಂದರ್ಶಿಸಿದರು; ತಡೆಯಲಾಗದ ದುಃಖವನ್ನು ಮರೆಮಾಡಿಕೊಳ್ಳುತ್ತಾ ತಮ್ಮ ತಮ್ಮ ಸಮಾಧಾನೋಕ್ತಿಗಳನ್ನು ಬಿನ್ನೈಸಿದರು. ಈ ಪ್ರಕರಣದಿಂದ ಸನ್ನಿಧಾನದ ಚಿತ್ತಕ್ಕೆ ಚಾಂಚಲ್ಯವೇರ್ಪಡ ಬಾರದೆಂದು ವಿಜ್ಞಾಪಿಸಿದರು. (ಅಂದಿನಿಂದೀಚಿನ ಹಲವಾರು ದಿನಗಳಲ್ಲಿ ನಾನಾಕಡೆಗಳಿಂದ ಆಗಮಿಸಿದ ಶಿಷ್ಯನಿವಹಗಳೂ ಈ ಬಗೆಯ ವಿಜ್ಞಾಪನೆಗಳನ್ನು ಮಾಡಿ, ಪ್ರಸಕ್ತ ಆಶ್ರಮಿಗಳಿಗಾದ ಅನುಭವಗಳನ್ನೇ ಪಡೆದರು.) "ನೀವೆಲ್ಲರೂ ಮೊದಲು ಕುಳಿತುಕೊಳ್ಳಿರಿ" ಎಂದರು,ಗುರುಗಳು. ಆಶ್ರಮಿಗಳು ಕುಳಿತರು. ಗುರುಗಳ ಮುಖವನ್ನು ನೋಡಿದರು, ಆಶ್ಚರ್ಯಚಕಿತರಾದರು. ಎಂದಿನಂತೆಯೇ ಶಾಂತಮುಖಾರವಿಂದವನ್ನೂ ಪೂರ್ಣ ನಿರ್ಲಿಪ್ತ ಮನೋವೃತ್ತಿಯನ್ನೂ ನೋಡಿದರು—ಅಷ್ಟರಲ್ಲೇ ಗುರುಗಳಾಡಿದ ಅಮೃತವಾಣಿ ಕೇಳಬರುತ್ತಿತ್ತು: "ಒಬ್ಬರು ಮರಣಹೊಂದಿದರೆ ಉಳಿದವರೆಲ್ಲ ಅಳುವುದೇಕೆಂಬುದು ಅರ್ಥವಾಗದ ವಿಷಯ. ಮರಣದಿಂದ ಯಾರಿಗೆತಾನೆ ವಿನಾಯಿತಿಯುಂಟು? ಒಂದು ದಿನವಲ್ಲ, ಮತ್ತೊಂದುದಿನ ಪ್ರತಿಯೊಬ್ಬರೂ ಮಡಿಯಲೇಬೇಕಲ್ಲವೇ? ಒಂದು ಶಿಶುವಿನ ಜನನವಾಯಿತೆಂದರೆ, ಅದು ಮರ್ತ್ಯಲೋಕದ ಮೃತ್ಯು ಮಹಾದ್ವಾರದತ್ತ ಜರುಗುತ್ತಿರುವ ದೀರ್ಘಪಙ್ತಿಗೆ ಆಕ್ಷಣವೇ ಸೇರಿರುವುದೆಂಬುದು ನಿರ್ವಿವಾದ ವಿಚಾರ. ನಾವೇ ಆಗಲಿ, ನೂರುವರ್ಷ ಬದುಕಿರುವೆವೆಂದು ಅಂದುಕೊಳ್ಳ ಬಹುದು; ಆದರೆ ತಿಳಿದವರಾರು? ಎಂದೋ, ಯಾವ ಕ್ಷಣವೋ, ಕರೆ ಬಂದುಬಿಡಬಹುದು. ಯಕ್ಷಪ್ರಶ್ನೆಗಳ, ಧರ್ಮರಾಜನ ಉತ್ತರಗಳ, ಕಥೆಯನ್ನು ಓದುವುದರಿಂದ, ಅಥವಾ ಕೇಳುವುದರಿಂದ, ಯಾವ ಪಾಠವನ್ನು ಕಲಿತಂತಾಯಿತು? ಭಗವದ್ಗೀತೆಯನ್ನು ಎಲ್ಲರೂ ಓದುತ್ತಾರೆ, ಪಾರಾಯಣ ಮಾಡುತ್ತಾರೆ; ಆದರೂ "ಜಾತಸ್ಯ ಹಿ ಧ್ರುವೋ ಮೃತ್ಯುಃ" ಮೊದಲಾದ ಗೀತಾವಾಕ್ಯಗಳನ್ನು ಮಾತ್ರ ನೆನಪಿನಲ್ಲಿಡುವುದಿಲ್ಲವೇಕೆ? ಈ ಜನ್ಮವೆಂಬುದು ಕ್ಷಣಿಕ "ಜಲಪತ್ರಾಂತ ಲಗ್ನಾಂಬುಬಿಂಬವತ್ ಕ್ಷಣಭಂಗುರಂ"; ಅಂದರೆ, ಅಶ್ವತ್ಥದೆಲೆಯ ಬಾಲದ ಕಟ್ಟಕಡೆಯಲ್ಲಿ ಜಾರಿಬೀಳುತ್ತಿರುವ ಒಂದು ನೀರಿನ ತೊಟ್ಟಿನಷ್ಟು ಕ್ಷಣಿಕ ಎಂದಿದ್ದಾರೆ, ನಮ್ಮ ಹಿರಿಯರು. ಉಪಾಧ್ಯ ಮತ್ತು ಘನಪಾಠಿ, ಅವರುಗಳ ಮಾತನ್ನೇ ಹೇಳೋಣ. ಎಷ್ಟೋ ದೀರ್ಘಕಾಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾರ್ಥವೆಂಬುದೇ ಇಲ್ಲದೆ, ವಿಶ್ವಾಸದಿಂದ ಮಠಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸುವುದರ ಮೂಲಕ ಇಬ್ಬರೂ ಕೀರ್ತಿಕಾಯರಾಗಿ ಚಿರಂಜೀವಿಗಳಾಗಿದ್ದಾರೆ ಅಲ್ಲವೇ? ನನ್ನ ಅಭಿಪ್ರಾಯವಂತೂ ಹಾಗಿದೆ, ಎಂದಿಗೂ ಅದು ಬದಲಾಗದು. ಹೀಗಿರುವಾಗ, ಅವರಿಗಾಗಿ ವ್ಯಥೆಪಡುವುದಾದರೂ ಏಕೆ?."

ಇಂತಹ ಅಭೂತಪೂರ್ವ ಚಿತ್ತಸ್ಥೈರ್ಯವನ್ನು ನೋಡಿ ಆಶ್ರಮಿಗಳು ವಿಸ್ಮಿತರಾದರು. ಥಟ್ಟನೆ ಎಲ್ಲರೂ ಎದ್ದರು, ನಮಸ್ಕರಿಸಿದರು. "ಇದಕ್ಕಿಂತ ಮೇಲಾದ ಉಪದೇಶವನ್ನು ಈ ಜನ್ಮದಲ್ಲಿ ಪಡೆಯಲಾರೆವು" ಎಂಬುದಾಗಿ ಹೇಳಿಕೊಳ್ಳುತ್ತಾ ಮೆಲ್ಲಮೆಲ್ಲನೆ ಹಿಂತಿರುಗಿದರು.

———

ಪ್ರಸ್ತಾಪಿತ ದುರಂತದ್ವಯವು ಸಾಲದೋ ಎಂಬಂತೆ, ಅದೇ ಆಗಸ್ಟ್ ತಿಂಗಳು ೨೩ನೇ ದಿನಾಂಕ, ಮೈಸೂರಿನ ಮಾಜಿ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರೂ ನಿಧನರಾದರೆಂಬ ಸುದ್ದಿ ಬಂದಿತು. ಇದೂ ಮಹಾಸ್ವಾಮಿಗಳವರ ಕಿವಿಗೆ ಬಿದ್ದರೆ ಅವರ ಸಹನೆಗೆ ಮೀರಿದಂತಾಗ ಬಹುದೆಂದು ಸನ್ನಿಧಾನದ ಸಿಬ್ಬಂದಿಯವರು ಭಾವಿಸಿದರು, ಸ್ವಲ್ಪ ಹಿಂಜರಿದರು. ಕಡೆಗೆ ನಿರ್ವಾಹವಿಲ್ಲದೆ ತಿಳಿಸಿಬಿಟ್ಟರು. ಆ ಕ್ಷಣದಲ್ಲಿ ತಮ್ಮ ಸಂದೇಹಗಳು ಸಕಾರಣವಾಗಿದ್ದವು ಎಂಬಂತೆ ಅವರಿಗೆ ತೋರಿತು. ಇನ್ನೂ ಹೆಚ್ಚು ಎಚ್ಚರದಿಂದ ಸಮಯವರಿತು ವಿಜ್ಞಾಪಿಸಬೇಕಾಗಿತ್ತೋ ಏನೋ, ಎಂದುಕೊಂಡರು. ಆದರೆ ಅವರ ಭಾವನೆಯಲ್ಲಿ ಸ್ವಲ್ಪ ತಪ್ಪು ಇತ್ತು. ಸುದ್ದಿಯನ್ನು ತಿಳಿಸಿದ ಸಮಯವೂ ಸರಿಯೇ, ರೀತಿಯೂ ಸರಿಯೇ, ಆದರೆ ಗುರುಗಳಲ್ಲಿ ಅವರು ಕಂಡಿದ್ದು ಶಕ್ತಿಮೀರಿದ ವ್ಯಸನವನ್ನಲ್ಲ, ಆ ನಿಮಿಷದಲ್ಲಿ ಗುರುಗಳ ಮನಸ್ಸಿನಲ್ಲಿ ಹೊಳೆದ ಯೋಚನಾಪರಂಪರೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣಾಮವನ್ನು : ಭರತಮಾತೆಯ ಗಣ್ಯಪುತ್ರರೊಬ್ಬರು ಮೃತರಾದರಲ್ಲಾ, ಪ್ರಜೆಗಳ ಯೋಗಕ್ಷೇಮವನ್ನು ಸದಾ ಕೋರುತ್ತಾ, ಸಾಧಿಸುತ್ತಾ, ಅವರ ಗೌರವ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದ ಆಳರಸರು ಕಣ್ಮರೆಯಾದರಲ್ಲಾ ; ತಮಿಳುನಾಡಿದ ರಾಜ್ಯಪಾಲರಾಗಿದ್ದಾಗ ದಕ್ಷತೆ, ದೂರದರ್ಶಿತ್ವ, ಕರುಣಾಮಯ ಹೃದಯ ಮುಂತಾದ ಸದ್ಗುಣಗಳ ಗಣಿ ಎಂಬ ಖ್ಯಾತಿಯನ್ನಾರ್ಜಿಸಿದ್ದ ಪ್ರಭುಗಳು ಮಡಿದರಲ್ಲಾ ! ಈಚೀಚೆಗೆ ವೇದಾಂತಿಗಳ ಪ್ರಥಮ ಶ್ರೇಣಿಗೆ ಸೇರಿದವರೆಂಬ ಕೀರ್ತಿ ಪಡೆದಿದ್ದರು. ಇನ್ನೂ ಹೆಚ್ಚು ಮುಖ್ಯವಾಗಿ ಶ್ರೀಮಠದ ಅತ್ಯಂತ ಪ್ರಧಾನ ಶಿಷ್ಯರಲ್ಲಿ ಪ್ರಥಮರಾಗಿ, ಕಟ್ಟಕಡೆಯವರೆಗೂ ಈ ಸಂಬಂಧವನ್ನು ಗಮನಾರ್ಹ ರೀತಿಯಲ್ಲಿ ಪರಿಪಾಲಿಸಿಕೊಂಡು ಬಂದು ಧನ್ಯರಾದರು. ಅಂತಹ ಶ್ರೇಷ್ಠಪುರುಷರ ಸಾವಿಗಾಗಿ ವ್ಯಥೆಪಡದವರು ಸುಸಂಸ್ಕೃತವಲಯಗಳಲ್ಲಿ ಯಾರಾದರೂ ಇರುವರೇ ? (ಶಾಸ್ತ್ರ–ಪ್ರವಚನಕ್ಕಾಗಿ ಶ್ರೀಮಠದ ಪಂಡಿತರು ಎಂದಿನಂತೆ ಆ ಸಂಜೆಯೂ ಅವರಲ್ಲಿಗೆ ಹೋದಾಗ ಗುರುಗಳೇ ಈ ವಿವರಗಳನ್ನು ಹೇಳಿದರು.) ಈ ಮೊದಲಾಗಿ ಆಲೋಚಿಸುತ್ತ ಕುಳಿತಿದ್ದವರು ಎದ್ದು 'ಅಂತಹ ಮಹಾವ್ಯಕ್ತಿ ಮೃತ್ಯುವಶರಾದುದು ವಿಷಾದಕರ' ಎಂದು ಹೇಳುತ್ತಾ ಅನಿರೀಕ್ಷಿತವಾಗಿ ಸ್ನಾನಮಾಡುವುದಕ್ಕಾಗಿ ಸತ್ವರನೆ ಒಳಹೋದರು.

ಆ ಸಂಜೆ ಎಂದಿನಂತೆಯೇ ಪಂಡಿತರು ಬಂದರು. ವಂದನೆಯನ್ನರ್ಪಿಸಿ ಪಾಠ–ಪ್ರವಚನಕ್ಕಾಗಿ ಕುಳಿತರು. ಆದರೆ ಗುರುಗಳ ಮನಸ್ಸು ಇನ್ನೂ ಮಹಾರಾಜರ ವಿಷಯದತ್ತಲೇ ಓಡಾಡುತ್ತಿತ್ತು. ಒಂಬತ್ತು ವರ್ಷಗಳ ಹಿಂದೆ ಪ್ರಭುಗಳು ಮದರಾಸ್ ಪ್ರಾಂತದ ರಾಜ್ಯಪಾಲರಾಗಿದ್ದಾಗ ಮಠಸಂಬಂಧವಾದ ಒಂದು ಮಹೋತ್ಸವದಲ್ಲಿ ಅವರು ಪಾಲುಗೊಂಡಿದ್ದರು. ಅವರು ಸಭೆಯಲ್ಲೇ ಗುರುಗಳಿಗೆ ಸಾಷ್ಟಾಂಗಪ್ರಣಾಮಗಳನ್ನರ್ಪಿಸಿದುದೂ, ಅವರು ಲೋಕಕಲ್ಯಾಣ ಸಾಧಕವಾದ ಅನೇಕ ಸತ್ಕಾರ್ಯಗಳನ್ನೆಸಗುತ್ತಿದ್ದ ಸಂಗತಿಯನ್ನು ಗುರುಗಳು ಮುಕ್ತಕಂಠದಿಂದ ಶ್ಲಾಘಿಸಿದುದು, ಹಿಂದೆ ವಿಜಯನಗರ ಸಾಮ್ರಾಜ್ಯದ ಸುವರ್ಣಯುಗದಲ್ಲಿ ಆಳರಸರಾಗಿದ್ದ ಹಕ್ಕ–ಬುಕ್ಕರಿಗೂ ಅಮರರಾದ ಶ್ರೀ ವಿದ್ಯಾರಣ್ಯಸ್ವಾಮಿಗಳವರಿಗೂ ಇದ್ದ ಚಿರಸ್ಮರಣೀಯ ಮಧುರ ಬಾಂಧವ್ಯವು ಪ್ರಸ್ತುತ ಸಭೆಯಲ್ಲಿ ನೆರೆದಿದ್ದವರೆಲ್ಲರ ಕಣ್ಣಿನ ಮುಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರತಿಬಿಂಬಿತವಾಯಿತೆಂಬುದಾಗಿ ಅಂದಿನ ಪ್ರಖ್ಯಾತ ಭಾಷಣಕಾರರು ಆನಂದಪರವಶರಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದುದೂ—ಎಲ್ಲವೂ ಗುರುಗಳಿಗೆ ನೆನಪಾಯಿತು.

ಈಚೀಚೆಗೆ ಪ್ರಭುಗಳು ಶೃಂಗೇರಿಗೆ ಪದೇಪದೇ ಆಗಮಿಸಿ ತಮ್ಮ ಸ್ಥಾನಮಾನಗಳಿಗೆ ಅನುಗುಣವಾಗಿ ಸೇವೆಗಳನ್ನು ನೆರವೇರಿಸುತ್ತಿದ್ದುದನ್ನು ಗುರುಗಳು ಮರೆಯಲಾಗಲಿಲ್ಲ. ತ್ಯಾಗಮಯ ಜೀವನವನ್ನು ನಡೆಸುತ್ತಾ, ಇತರರ ಅನುಕೂಲಕ್ಕಾಗಿ ತಾವು ಅನೇಕ ಸುಖಸೌಕರ್ಯಗಳನ್ನು ದೂರಮಾಡಿದ್ದರೆಂಬುದು ಮುಮ್ಮಾತಿಗೂ ದಿಟ. ಸ್ವತಃ ವೇದಾಂತಿಗಳೂ ಆಲೋಚನಾಪರರೂ ಆಗಿದ್ದುದರಿಂದ ಜೀವನದ ಎಲ್ಲ ಆಗುಹೋಗುಗಳನ್ನೂ ನಿಜವಿವೇಕದಿಂದ ವೀಕ್ಷಿಸುತ್ತಾ, ಎಲ್ಲ ಜನರನ್ನೂ ಯಥಾಗೌರವದಿಂದ ಕಾಣುತ್ತಾ, ದೈನಂದಿನ ಘಟನೆಗಳನ್ನೆಲ್ಲಾ ಮಾಯಾವಿಲಾಸಗಳಲ್ಲದೆ ಮತ್ತೆ ಬೇರೆಯಲ್ಲವೆಂಬುದನ್ನು ಮನಗಾಣುತ್ತಾ ವೈರಾಗ್ಯಭೂಷಿತರಾಗಿ ವರ್ತಿಸುತ್ತಿದ್ದರು. ಪ್ರಜಾಕೋಟಿಗೆ ಅವರಿತ್ತ, ದಾನಧರ್ಮಗಳು ಅಪಾರ ವಾಗಿದ್ದವು; ತಾವು ಇತರರಿಂದ ಪಡೆದದ್ದು ಅತ್ಯಲ್ಪ; ಏನೂ ಇಲ್ಲವೆಂದೇ ಹೇಳಬಹುದು. ಒಂದೇ ಮಾತಿನಲ್ಲಿ ಅಡಗಿಸಬಹುದಾರೆ, ಈ ಸುಂದರ—ಪುರಾತನ ಶ್ಲೋಕಾರ್ಥದಲ್ಲಿ ಅವರು ಮೂರ್ತೀಭವಿಸಿದ್ದರೆನ್ನಬಹುದು :—

"ಪಿಬಂತಿ ನದ್ಯಃ ಸ್ವಯಮೇವನೋಽದಕಂ ।
ಸ್ವಯಂ ನ ಖಾದಂತಿ ಫಲಾನಿ ವೃಕ್ಷಾಃ ॥
ಧಾರಾಧರೋ ವರ್ಷಂತಿ ನಾಽತ್ಮಹೇತವೇ ।
ಪರೋಪಕಾರಾಯ ಸತಾಂ ವಿಭೂತಯಃ ॥"

ತಮ್ಮೆದುರಿಗಿದ್ದ ಪಂಡಿತರನ್ನೂ, ಅವರ ಮೂಲಕ ಎಲ್ಲ ಶಿಷ್ಯವಲಯ ಗಳನ್ನೂ ಉದ್ದೇಶಿಸಿ ಗುರುಗಳು ಕಟ್ಟಕಡೆಯಲ್ಲಿ ಇಂತೆಂದರು "ಮೊದಮೊದಲು ಕಣ್ಣೀರು ಸುರಿಸಿ ತರುವಾಯ ದಿವಂಗತರನ್ನು ಸಂಪೂರ್ಣವಾಗಿ ಮರೆತುಬಿಡುವ ಬದಲು ನೆನಪು ತಮ್ಮ ಹೃದಯದಲ್ಲಿ ನೆಲೆಸುವಂತೆ ಪ್ರಯತ್ನಪಟ್ಟು—

Sri Vidyadharathi Book Centre, Sringeri

CC-O. In Public Domain. Digitized by eGangotri

ಅವರ ಗಾಂಭೀರ್ಯ, ಅವರ ವಿಶಾಲ ದೃಷ್ಟಿ, ದೇಶಪ್ರೇಮ, ಧರ್ಮಶ್ರದ್ಧೆ, ಗುರುದೇವತಾ ಭಕ್ತಿ ಮೊದಲಾದ ಸದ್ಗುಣಗಳನ್ನು ಎಲ್ಲರೂ ಆಚರಿಸುವುದಾದರೆ, ನಿಜವಾಗಿಯೂ ಸಂತೋಷಿಸುತ್ತೇನೆ."

* * * *

ಈ ಲೇಖನದಲ್ಲಿ ಪ್ರಸ್ತಾಪಿತವಾಗಿರುವ ಅತ್ಯಂತ ಕಠಿಣಸನ್ನಿವೇಶಗಳಲ್ಲಿಯೂ ಹೀಗೆ ವರ್ತಿಸಿದ ಜಗದ್ಗುರು ಮಹಾಸ್ವಾಮಿಗಳವರು ಜೀವನ್ಮುಕ್ತರು ಎಂಬುದರಲ್ಲಿ ಸಂದೇಹವಿಲ್ಲ. ಜಗನ್ಮಾತೆಯು ಇವರನ್ನು ಸದಾ ಸಂರಕ್ಷಿಸುತ್ತಿರಲಿ.

ಶ್ರೀಮಚ್ಛಂಕರಭಗವತ್ಪಾದರವರು ತಮ್ಮ "ಜೀವನ್ಮುಕ್ತಾನಂದಲಹರಿ" ಯಲ್ಲಿ ಅಪ್ಪಣೆಕೊಡಿಸಿರುವಂತೆ : "ಮುನಿರ್ನಿರ್ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ"

———

Sri Vidyabharathi Book Centre, Sringeri

CC-O. In Public Domain. Digitized by eGangotri

೨೫

ಭಕ್ತರುಗಳ ಸ್ವಂತ ಅನುಭವಗಳು

ಸ್ವಪ್ನದಲ್ಲಿ ಅನುಗ್ರಹ

೧೯೫೩ರಲ್ಲಿ ಶೃಂಗೇರೀ ಜಗದ್ಗುರುಗಳು ಕಲ್ಕತ್ತೆಯಲ್ಲಿರುವವರೊಬ್ಬರಿಗೆ (ಶ್ರೀ ಎಂ. ವಿ. ಸುಬ್ರಹ್ಮಣ್ಯಂ ಅವರಿಗೆ) ಸ್ವಪ್ನದಲ್ಲಿ ಕಾಣಿಸಿಕೊಂಡು ಶೃಂಗೇರಿಗೆ ನವರಾತ್ರಿಗೆ ಬರುವಂತೆ ಹೇಳಲಾಗಿ, ಆ ಮೊದಲು ಶೃಂಗೇರಿಯನ್ನು ಕಾಣದವರೂ, ಆ ಯೋಚನೆಕೂಡ ಇಲ್ಲದವರೂ ಆಗಿದ್ದ ಅವರಿಗೆ ಆಶ್ಚರ್ಯ ಉಂಟಾಯಿತು. ಆ ವರ್ಷ ಅವರು ಶೃಂಗೇರಿಗೆ ಬಂದರು. ಅದುವರೆಗೆ ಅಂತರ್ಮುಖದಲ್ಲಿದ್ದ ಜಗದ್ಗುರುಗಳು ಅಂದೇ ಅನಿರೀಕ್ಷಿತವಾಗಿ ಬಹಿರ್ಮುಖರಾಗಿ ಇಬ್ಬರು ಸನ್ನಿಧಾನಗಳೂ ಒಟ್ಟಿಗೆ ಸೇರಿ ಶ್ರೀ ಶಾರದಮ್ಮನವರ ದೇವಾಲಯಕ್ಕೆ ದಯಮಾಡಿಸಿದರು. ಕಲ್ಕತ್ತದಿಂದ ಬಂದವರಿಗೆ ಸ್ವಪ್ನದಲ್ಲಿ ಕಂಡಿದ್ದ ಗುರುವಿನ ದರ್ಶನ ಸಾಕ್ಷಾತ್ತಾಗಿ ದೊರೆಯಿತು.

೧೯೬೩ರಲ್ಲಿ ನಡೆದ ಕುಂಭಾಭಿಷೇಕಕ್ಕೆ ಗಂಗೆಯನ್ನು ತೆಗೆದುಕೊಂಡು ಬರುವಂತೆ ಶ್ರೀ ಎಂ. ವಿ. ಸುಬ್ರಹ್ಮಣ್ಯಂ ಅವರಿಗೆ ಶೃಂಗೇರಿಯಿಂದ ಆಜ್ಞೆಯಾಗಿತ್ತು. ಅದಕ್ಕಾಗಿ ಅವರು ಕಾಶಿಗೆ ಹೊರಡುವ ಸಮಯದಲ್ಲಿ ಅವರ ಪತ್ನಿಗೆ ತಡೆಯಲಾರದಂತಹ ಹೊಟ್ಟೆನೋವು ಬಂದು ಶಸ್ತ್ರಚಿಕಿತ್ಸೆ ಯಾಗಬೇಕೆಂದು ಡಾಕ್ಟರ್ ಹೇಳಿದರು. ಹಾಗಿದ್ದರೂ ಆ ಗೃಹಸ್ಥರು ಸದ್ಗುರುವಿನ ಮೇಲೆ ಭಾರಹಾಕಿ ತಮ್ಮ ಪತ್ನಿಯೊಡನೆ ಕಾಶಿಗೆ ಹೋಗಿ, ಗಂಗೆಯನ್ನು ತೆಗೆದುಕೊಂಡು ಶೃಂಗೇರಿಗೆ ಬಂದು ಸನ್ನಿಧಾನವನ್ನು ದರ್ಶನ ಮಾಡಿ ಗಂಗೆಯನ್ನು ಸಮರ್ಪಿಸಿದಾಗ ಗುರುಗಳು ಸಂತೋಷಪಟ್ಟು 'ಆಪರೇಷನ್ ಬೇಕಾಗಿಲ್ಲ' ಎಂದು ಹೇಳಿ ಪ್ರಸಾದವನ್ನು ಕೊಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಭಕ್ತರು ರಾಮೇಶ್ವರ ಯಾತ್ರೆಗೆ ಅಪ್ಪಣೆ ಪಡೆದು, ಅಲ್ಲಿಗೆ ಹೋಗುತ್ತಿರು ವಾಗ ಮಾರ್ಗದಲ್ಲಿ ಆ ಗೃಹಿಣಿ ಹಲವು ಸಲ ವಾಂತಿ ಮಾಡಿದಳು. ರಾಮೇಶ್ವರದಲ್ಲಿ ತಂಗಿದ್ದಾಗ, ಒಂದು ರಾತ್ರೆ ಒಬ್ಬ ಸಂನ್ಯಾಸಿ ಆಕೆಯ ಸ್ವಪ್ನದಲ್ಲಿ ಕಾಣಿಸಿಕೊಂಡು, ಆಕೆಯ ಹೊಟ್ಟೆಯೊಳಗಿನಿಂದ ಯಾವುದೋ ಒಂದು ವಸ್ತುವನ್ನು ಎತ್ತಿ ಎಸೆದದ್ದಾಗಿ ಕನಸುಕಂಡಳು. ಹೊಟ್ಟೆನೋವು ಆಮೇಲೆ ಕಡಮೆಯಾಯಿತು. ಅಲ್ಲಿಂದ ಕಾಶಿ, ಪ್ರಯಾಗ, ಗಯಾ— ಮೊದಲಾದ ಸ್ಥಳಗಳಿಗೆ ಹೋಗಿ, ಕಲ್ಕತ್ತಾಕ್ಕೆ ಹಿಂದಿರುಗಿ ಆ ತಾಯಿಯನ್ನು ಪರೀಕ್ಷೆಗಾಗಿ ಡಾಕ್ಟರ ಬಳಿ ಕರೆದುಕೊಂಡು ಹೋಗಲು, ಅವರೂ ಪರೀಕ್ಷಿಸಿ "ಹೊಟ್ಟೆಯಲ್ಲಿ ಯಾವ ವಿಧವಾದ ದೋಷವೂ ಇಲ್ಲ" ಎಂದು ಹೇಳಿದರು. ಆಪರೇಷನ್ ಆಗಲೇಬೇಕೆಂದು ಹೇಳಿದ್ದ ಡಾಕ್ಟರು ಈಗ 'ಅವಶ್ಯಕವಿಲ್ಲ' ಎಂದು ಹೇಳಿದರು. ಅದು ಮೊದಲು ಆ ಗೃಹಿಣಿ ಯಾವುದೊಂದು ತೊಂದರೆಯೂ ಇಲ್ಲದೆ ಸೌಖ್ಯವಾಗಿ ಇದ್ದಾರೆ.

ಕಡಯಂ ಎಂಬ ಊರಿನ ಶ್ರೀಮತಿ ಸರಸ್ವತಿ ಅಮ್ಮ ಎಂಬಾಕೆಯ ತಂದೆಯವರು ದೊಡ್ಡ ಶಿವಭಕ್ತರು. ಶ್ರೀಚಕ್ರ, ಗುರುಪಾದುಕೆಗಳನ್ನಿಟ್ಟು ಕೊಂಡು ಪೂಜೆಮಾಡುವವರು. ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳನ್ನು ನೇರವಾಗಿ ದರ್ಶಿಸಿ ಅನುಗ್ರಹಪಡೆದವರು. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಸಿದ್ಧಿ ಹೊಂದಿದ ಮೇಲೆ ಒಂದು ದಿನ ನಡೆದ ಸಂಗತಿಯನ್ನು ಇಲ್ಲಿ ಹೇಳಬಹುದಾಗಿದೆ.

ಆ ಊರಿನಲ್ಲಿ ಮಳೆ ಹುಯ್ಯುವುದಕ್ಕೆ ಶ್ರೀ ಶಾಸ್ತ್ರವನ್ನು ಆರಾಧಿಸುವುದುಂಟು. ಅದಕ್ಕೆ ಈ ಹಿರಿಯರೇ ಪ್ರಧಾನ ಋತ್ವಿಕ್ಕುಗಳು. ಒಂದು ಸಲ ಆರಾಧನೆಗೆ ಏರ್ಪಾಟಾಗಿತ್ತು. ಹೇಗೆ ಅನುಗ್ರಹ ದೊರೆಯುವುದೋ ಎಂದು ಹಿರಿಯರು ಚಿಂತೆಪಡುತ್ತಿದ್ದರು. ಅವರ ಸ್ವಪ್ನದಲ್ಲಿ ಈಗಿನ ಋಷಿನೆಯ ಸನ್ನಿಧಾನ ಕಾಣಿಸಿಕೊಂಡು ಅಭಯಹಸ್ತ ತೋರಿಸಿ ತಡವಿ ಅದೃಶ್ಯವಾದರು. ಪೂಜೆ ಮುಗಿಯಿತು. ಮಳೆ ಕೂಡಲೇ ಸಮೃದ್ಧಿಯಾಗಿ ಹುಯ್ಯಿತು.

ಸರಸ್ವತಿ ಅಮ್ಮನಿಗೆ ಪೂಜಾವಿಧಿಯೂ ತಿಳಿಯುವುದು. ತಂದೆಯವರಿಂದ ಹಲವು ವೇದಾಂತ ವಿಷಯಗಳನ್ನು ಕೇಳಿದ್ದಳು. ಆದರೆ ಶ್ರೀ ಶೃಂಗೇರಿ ಜಗದ್ಗುರುಗಳಿಂದ ಉಪದೇಶ ಪಡೆಯಬೇಕೆಂಬ ಆಸೆ ಆಕೆಗುಂಟಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದ್ಗುರುಗಳು ಆ ಊರಿಗೆ ಬಂದ ಕಾಲದಲ್ಲಿ ಆಕೆ ದರ್ಶನಮಾಡಿದಾಗ ಪೂಜೆಯ ಸಮಯ. ಶ್ರೀ ಚಂದ್ರಮೌಳೀಶ್ವರರಿಗೆ ಅಭಿಷೇಕ ಮಾಡಿ ಲಿಂಗವನ್ನು ಒರಸುತ್ತಲೇ ಶ್ರೀ ಸನ್ನಿಧಾನ ಇತ್ತ ತಿರುಗಿದರು. ಅವರ ಕಟಾಕ್ಷ ಸರಸ್ವತೀ ಅಮ್ಮನಮೇಲೆ ಬಿತ್ತು. ಆ ಬಳಿಕ ಕೆಲವು ದಿನಗಳಲ್ಲಿ ಶ್ರೀ ಸನ್ನಿಧಾನವು ಸರಸ್ವತೀ ಅಮ್ಮನ ಸ್ವಪ್ನದಲ್ಲಿ ಕಾಣಿಸಿಕೊಂಡು, "ತತ್ವಮಸಿ, ತ್ವಂ ತದಸಿ, ಇಷ್ಟೇ ತಾನೇ? ಅದೂ ಸರಿಯೆ" ಎಂದರು. ಅದು ಮೊದಲು ಈಕೆಗೆ ಬ್ರಹ್ಮಧ್ಯಾನದಲ್ಲಿ ನೆಲಸುವ ಸ್ಥಿತಿಸಾಧ್ಯವಾಯಿತು.

ಶ್ರೀಮತಿ ನಾರಾಯಣಿ ಲಕ್ಷ್ಮಣನ್ ಎಂಬಾಕೆ ತನ್ನ ಅನುಭವವನ್ನು ಹೀಗೆ ಹೇಳಿದ್ದಾರೆ:—

ನನಗೆ ಚಿಕ್ಕ ವಯಸ್ಸಿನಲ್ಲಿ ದೇಹಸ್ಥಿತಿ ಸರಿಯಿಲ್ಲದೆ ವೈದ್ಯ ಚಿಕಿತ್ಸೆ ಮಾಡಿಸಿದರೂ ಗುಣವಾಗದೆ ಇತ್ತು—೧೯೪೧ರಲ್ಲಿ ನಮ್ಮ ತಂದೆ ಶೃಂಗೇರಿಗೆ ಹೋಗಿ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳನ್ನು ದರ್ಶಿಸಿ ನನ್ನ ದೇಹಸ್ಥಿತಿ ಉತ್ತಮವಾಗುವಂತೆ ರಕ್ಷಿಸಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಸ್ವಾಮಿಗಳು ಸೌಂದರ್ಯಲಹರಿಯಲ್ಲಿ ಒಂದು ಶ್ಲೋಕವನ್ನು ಹೇಳಿ, ಅದನ್ನು ನಾನು ಜಪಿಸುತ್ತಿರಬೇಕೆಂದು ಹೇಳಿ, "ಮೈ ಸ್ವಸ್ಥವಾಗುವುದು. ವಕೀಲಿ ಅಳಿಯ ಬರುತ್ತಾನೆ." (೧೯೩೨ನೆಯ ಜೂನ್) ಆನಿಮಾಸದ ೭ನೆಯ ತೇದಿಯಂದು ವಿವಾಹ ನಡೆಯುತ್ತದೆ" ಎಂದು ಅನುಗ್ರಹಿಸಿದರು. ನಾನು ಜಪಮಾಡಿದೆ. ದೇಹಸ್ಥಿತಿ ಉತ್ತಮವಾಯಿತು, ಅವರು ಹೇಳಿದ ಪ್ರಕಾರದೇ ವಿವಾಹ ನಡೆಯಿತು

೧೯೫೪ರಲ್ಲಿ ಶೃಂಗೇರಿಗೆ ಹೋಗಿ ಎರಡು ಸನ್ನಿಧಾನಗಳನ್ನೂ ದರ್ಶಿಸಿದೆ ಶೃಂಗೇರಿಗೆ ನಾನು ಪದೇ ಪದೇ ಬರುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಯಪಡಿಸಿದೆ. ಅದು ಮೊದಲು ಅನೇಕ ಸಲ ನಮ್ಮ ಗುರುನಾಥರುಗಳು ನನ್ನ ಸ್ವಪ್ನದಲ್ಲಿ ಬಂದು ಅನುಗ್ರಹಿಸುತ್ತಿದ್ದಾರೆ.

ಆ ವರ್ಷ ನಾನು ಕ್ಷಯರೋಗದಿಂದ ಪೀಡಿತಳಾಗಿ ದಿಂಡಿಗಲ್ಲಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ. ಒಂದು ಶುಕ್ರವಾರ ರಾತ್ರಿ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ನನ್ನ ಕನಸಿನಲ್ಲಿ ಕಾಣಿಸಿಕೊಂಡು ಒಂದು ಚಿನ್ನದ ದೀಪಸ್ತಂಭದ ಐದು [illegible] ಹತ್ತಿಸಿ ನನಗೆ ಮಲ್ಲಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೂವನ್ನೂ ವಿಭೂತಿಯನ್ನೂ ಕೊಟ್ಟರು. "ಶರೀರ ಕರ್ಮಫಲವನ್ನನುಭವಿಸುತ್ತಲಿದೆ. ಈಶ್ವರಾರಾಧನೆಯ ಫಲದಿಂದ ಆರು ವರ್ಷಕ್ಕೆ ಬದಲು ಆರು ಮಾಸಗಳ ಕಾಲ ಅನುಭವಿಸಬೇಕು ಎಂದು ನಿರ್ಣಯಿಸಿದೆ. ಕರ್ಮಫಲದ ಅನುಭವದ ಕಾಲವನ್ನು ಕಡಮೆಮಾಡಬಹುದೇ ಹೊರತು ಆ ಅನುಭವೇ ಇಲ್ಲದಂತೆ ಮಾಡಲಾಗುವುದಿಲ್ಲ" ಎಂದರು. ಆಮೇಲೆ ನಾನು ಆಸ್ಪತ್ರೆಯಲ್ಲಿ ಸೇರಿ ಮೂರು ತಿಂಗಳಿದ್ದೆ. ಅವರು ಹೇಳಿದ್ದಂತೆ ಆರು ಮಾಸ ಕಾಲದಲ್ಲಿ ಸಂಪೂರ್ಣವಾಗಿ ಗುಣಹೊಂದಿದೆ—ಔಷಧವನ್ನೂ ನಿಲ್ಲಿಸಿಬಿಟ್ಟೆ, ಅಲ್ಲಿಂದೀಚೆಗೆ ಹತ್ತು ವರ್ಷಗಳಾಗಿವೆ; ನನಗೆ ಈಗ ಆ ತೊಂದರೆ ಇಲ್ಲ.

೧೯೫೭ರಲ್ಲಿ ಕಾಲಟಿಯಲ್ಲಿ ಈಗಿನ ಪೀಠಾಧಿಪತಿಗಳನ್ನು ದರ್ಶಿಸುವ ಭಾಗ್ಯ ದೊರೆಯಿತು. "ಕೃಷ್ಣದೇವಾಲಯದಲ್ಲಿ ಪೂಜೆಗೆ ಬಾ" ಎಂದು ಆಜ್ಞಾಪಿಸಿದರು. ನಾನು ಕೃಷ್ಣನ ದೇವಾಲಯದಲ್ಲಿ ದರ್ಶನಮಾಡಿದಾಗ ಪರಮಗುರುಗಳ ಆಕಾರವೂ ಮನಸ್ಸಿನಲ್ಲಿ ತೋರಲಾಗಿ, "ಕೃಷ್ಣನೂ ಗುರುವೂ ಒಂದೇ" ಎಂಬ ಭಾವನೆ ಉಂಟಾಯಿತು. ಕೃಷ್ಣನ ಮೇಲೆ ಆಗಲೇ ಹೊಸದಾಗಿ ತೋರಿದ ಒಂದು ಹಾಡನ್ನು ಸನ್ನಿಧಾನದ ಪೂಜೆಯ ಕಾಲದಲ್ಲಿ ಹಾಡಿದೆ. ಗುರುಗಳ ಅನುಗ್ರಹ ದೊಡ್ಡದು.

೧೯೫೮ರಲ್ಲಿ ಶ್ರೀ ಸ್ವಾಮಿಗಳು ನನಗೆ ಪೂಜೆಗಾಗಿ ಒಂದು ಬಾಣಲಿಂಗವನ್ನು ಕೊಟ್ಟು ಅನುಗ್ರಹಿಸಿದರು.

೧೯೬೩ರ ಕಾರ್ತೀಕಮಾಸದಲ್ಲಿ ನನಗೆ ಕ್ರೂರವಾದ ಹೊಟ್ಟೆಶೂಲೆಯಿತ್ತು. ಎಂಟು ತಿಂಗಳು ಕಷ್ಟಪಟ್ಟು ವೈದ್ಯಮಾಡಿದರೂ ಪ್ರಯೋಜನವಾಗದೆ ಇದ್ದ ಸ್ಥಿತಿ. ಜಡಿ ಮಳೆಗಾಲ. ಒಂದು ದಿನ ನನಗೆ ಕನಸು.—ನಾನು ಶೃಂಗೇರಿಗೆ ಹೋಗಿ ನರಸಿಂಹವನದಲ್ಲಿ ಆಚಾರ್ಯರ ದರ್ಶನಮಾಡುತ್ತೇನೆ. ಅವರು ನನ್ನನ್ನು ಎದುರಿಗೆ ಕೂರಿಸಿ ಶ್ರೀ ಶಾರದಾಭುಜಂಗ ಶ್ಲೋಕವನ್ನು ಹೇಳುತ್ತಾ ಇದ್ದಾರೆ. ಡಿಢೀರೆಂದು ಶ್ಲೋಕ ಹೇಳಲಾಗದೆ ಅವರು ಹೊಟ್ಟೆ ನೋವಿನಿಂದ ಸಂಕಟಪಡುತ್ತಾರೆ. ಒಡನೆಯೇ ಒಬ್ಬ ಮುದುಕರು ಚಿನ್ನದ ಪಾತ್ರೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಿನಿಂದ ಆಚಾರ್ಯರ ಹೊಟ್ಟೆಯನ್ನು ಸವರಿದರು. ಎರಡು ಪಕ್ಕಗಳಲ್ಲಿಯೂ ಇಬ್ಬರು ಯುವಕರು ನವಿಲುಗರಿ ಬೀಸಣಿಗೆ [illegible] ಬೀಸತೊಡಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವು ನಿಮಿಷಗಳ ಅನಂತರ ಆಚಾರ್ಯರು ಅವರುಗಳಿಗೆ ನಮಸ್ಕಾರ ಮಾಡುವಂತೆ ನನಗೆ ಹೇಳಿದರು. ನಾನು ನಮಸ್ಕಾರ ಮಾಡಿದೆ. ಅವರುಗಳು ಅದೃಶ್ಯರಾದಮೇಲೆ, "ಯಾರು ಇವರು?" ಎಂದು ಕೇಳಿದೆ. ಅದಕ್ಕೆ ಗುರುಗಳು, "ಧನ್ವಂತರಿಯೂ ಅಶ್ವಿನೀದೇವತೆಗಳೂ ಬಂದರು. ನಿನ್ನ ಕರ್ಮವನ್ನು ನಾನು ಕೆಲವು ನಿಮಿಷಗಳವರೆಗೆ ತೆಗೆದುಕೊಂಡದ್ದರಿಂದ ದೇವತೆಗಳು ಮಂತ್ರೌಷಧಿಗಳಿಂದ ನನ್ನನ್ನು ಗುಣಪಡಿಸಿದರು. ನೋವು ತಾಳಿಕೊಳ್ಳುವುದಕ್ಕೆ ನಿನಗೆ ಸಾಧ್ಯವಿಲ್ಲವಾದ್ದರಿಂದ ನಾನು ಅದನ್ನು ತೆಗೆದುಕೊಂಡೆ" ಎಂದು ಹೇಳಿದರು. ಆಮೇಲೆ ಸೌಂದರ್ಯಲಹರಿಯಲ್ಲಿನ ಒಂದು ಶ್ಲೋಕವನ್ನು ಉಪದೇಶಿಸಿ, ಸ್ವಲ್ಪ ಉಪ್ಪನ್ನು ೧೦೮ ಸಲ ಮಂತ್ರಿಸಿ ನಾನು ಅದನ್ನು ಮೂರು ದಿನ ಸೇವಿಸಬೇಕೆಂದು ಹೇಳಿದರು. ಹಾಗೆಯೇ ಮಾಡಿದೆ. ಇದುವರೆಗೂ ಹೊಟ್ಟೆನೋವು ಬಂದಿಲ್ಲ.

೧೯೩೬ರಲ್ಲಿ ನನಗೆ ಮತ್ತೆಯೂ ಗೂರ್ಲುವ್ಯಾಧಿ (ಕಫರೋಗ) ಕಾಣಿಸಿಕೊಂಡಿತು. ಆ ವರ್ಷ ಶ್ರೀ ಸ್ವಾಮಿಗಳು ದಿಂಡಿಗಲ್ಲಿಗೆ ಬಂದಿದ್ದರಾದರೂ ಕೆಲವು ಅಸೌಕರ್ಯಗಳಿಂದ ಅವರನ್ನು ನಮ್ಮ ಮನೆಗೆ ಕರೆಯುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಿದ್ದರೂ ಕರುಣಾಮೂರ್ತಿಯಾದ ಗುರುಗಳು ತಾವಾಗಿಯೇ ನಮ್ಮ ಮನೆಗೆ ಬಂದು ಅನುಗ್ರಹಿಸಿದರು. ಕೆಲವು ದಿನಗಳಾದ ಮೇಲೆ ಒಂದು ದಿನ ನನ್ನ ಕನಸಿನಲ್ಲಿ ಶ್ರೀ ಸ್ವಾಮಿಗಳು ಕಾಣಿಸಿಕೊಂಡರು. "ಕೆಲವು ಕಾರಣಗಳಿಗಾಗಿ ನಿನ್ನ ಶರೀರ ಇರತಕ್ಕದ್ದು ನಾಲ್ಕು ತಿಂಗಳು ೪೦ ದಿನಗಳಿಂದ ಕೊರೆಮಾಡಲಾಗಿದೆ. ವೈದ್ಯರು 'ಟೈಫಾಯ್ಡ್ ಜ್ವರ' ಎನ್ನುತ್ತಾರೆ. ಆದರೆ, 'ಕ್ಷಯದ ಚಿಹ್ನೆ' ಇದೆ" ಎಂದು ಹೇಳಿ, ತಮ್ಮ ಹೃದಯದಲ್ಲಿ ಒಂದು ರೂಪಾಯಿಯಷ್ಟಗಲ ಕತ್ತರಿಸಿಹೋಗಿದ್ದ ಸ್ಥಳವನ್ನು ತೋರಿಸಿದರು. ಮರುದಿನ ನನಗೆ 'ಎಕ್ಸ್‌ರೇ' ತೆಗೆಸಿದ್ದರಲ್ಲಿ ಅದೇ ಸ್ಥಳದಲ್ಲಿ ಅದೇ ರೀತಿ ಕತ್ತರಿಸಿದಂತಿತ್ತು. ೪೧ನೆಯ ದಿನ ಗುಣವಾಗಿಬಿಟ್ಟಿತು. ನನ್ನ ವೈದ್ಯರೂ ಆಶ್ಚರ್ಯಹೊಂದಿದರು. ಅವರೂ ಪರಮ ಆಸ್ತಿಕರಾಗಿ ಬದಲಾಯಿಸಿಬಿಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಎ. ಪಿ. ಎಸ್. ಎಸ್. ನಾಡಾರ್, (ಲಿಥೋ ಪ್ರೆಸ್, ಶಿವಕಾಶಿ)

೧೯೫೪ರಲ್ಲಿ ತಿರುನೆಲ್ವೇಲಿ ಜಿಲ್ಲೆಯ ಕುತ್ತಾಲದಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳು (೩೫ನೆಯ ಪೀಠಾಧಿಪತಿಗಳು) ಮುಕ್ಕಾಂ ಮಾಡಿದ್ದರು. ಜಲಪಾತವನ್ನು ನೋಡಿ ಸಂತೋಷಪಡುವುದಕ್ಕಾಗಿ ನಾನು ಹೋಗಿದ್ದೆ. ಜಗದ್ಗುರುಗಳ ವಿಷಯವಾಗಿ ಕೆಲವರು ಹೇಳುತ್ತಿದ್ದದ್ದನ್ನು ಕೇಳಿ ನಾನೂ ಅವರನ್ನು ದರ್ಶಿಸಬೇಕೆಂದು ಅವರ ಬಿಡದಿಗೆ ಹೋದೆ. ಹಗಲು ೧೨ ಗಂಟೆ. 'ತೀರ್ಥಪ್ರಸಾದ ಇವತ್ತು ಇಲ್ಲವಂತೆ' ಎಂದು ಹೇಳುತ್ತಾ ಹಲವರು ಹಿಂದಿರುಗಿ ಹೋಗುತ್ತಿದ್ದರು. ನನಗೆ ಮನಸ್ಸಿನಲ್ಲಿ ಬಹಳ ಸಂಕಟವಾಯಿತು. ನನ್ನನ್ನು ಮಠಕ್ಕೆ ಕರೆದುಕೊಂಡುಹೋಗಿದ್ದವರು ಒಳಕ್ಕೆ ಹೋಗಿ ತಿರುಗಿ ಬಂದು, "ಸ್ವಾಮಿಗಳು ತೀರ್ಥಕೊಡುತ್ತಾರೆ" ಎಂದರು. ನಾನು ಕಾದಿದ್ದೆ. ಶ್ರೀ ಸ್ವಾಮಿಗಳು ತೀರ್ಥವನ್ನು ಕೊಡತೊಡಗಿದರು. ೧೫೦ ಮಂದಿ ಭಕ್ತರಾದಮೇಲೆ ನನ್ನ ಸರದಿ ಬಂತು. ಅದುವರೆಗೂ ಯಾರೊಡನೆಯೂ ಮಾತಾಡದೆ ತೀರ್ಥಕೊಡುತ್ತಿದ್ದ ಜಗದ್ಗುರುಗಳು ನನ್ನ ಸರದಿ ಬಂದಕೂಡಲೆ, ನನ್ನನ್ನು ದೃಷ್ಟಿಸಿ ನೋಡಿ, "ನೀವು ಯಾರು? ಯಾವ ಊರು? ಏನು ಕೆಲಸ?" ಎಂದು ಕೇಳಿದರು. "ನನ್ನ ಹೆಸರು ನಟರಾಜ. ಊರು ಶಿವಕಾಶಿ. ಉದ್ಯೋಗ ಪ್ರಿಂಟಿಂಗ್ ಪ್ರೆಸ್" ಎಂದೆ. ನನಗೆ ಮೈ ರೋಮಾಂಚವಾಯಿತು: ನನ್ನನ್ನು ಗುರು ಸ್ವೀಕರಿಸಿಬಿಟ್ಟರು.

೧೯೬೫ರಲ್ಲಿ ಶ್ರೀಸ್ವಾಮಿಗಳು ಶಿವಕಾಶಿಗೆ ಬರುವುದಾಗಿ ಏರ್ಪಾಡಾಗಿತ್ತು. ಆಗ ಕೆಲವರು ನಗರಪ್ರಮುಖರು ನನ್ನ ಹತ್ತಿರ, "ಶೃಂಗೇರಿ ಊರು ಋಷ್ಯಶೃಂಗ ಮುನಿ ತಪಸ್ಸುಮಾಡಿದ ಸ್ಥಳವಷ್ಟೆ. ಅಲ್ಲಿರುವ ಶಾರದಾಪೀಠದ ಅಧಿಪತಿ ಸ್ವಾಮಿಗಳು ಈ ನಗರಕ್ಕೆ ಬಂದರೆ ಮಳೆಹುಯ್ಯುತ್ತದೆಯೋ?" ಎಂದು ಕೇಳಿದರು. ನನ್ನ ಅಂತರಂಗದಲ್ಲಿ ಒಂದು ಭಾವನೆ ತೋರಿ, "ಹೌದು ಮಳೆ ಹುಯ್ಯುತ್ತದೆ" ಎಂದುಬಿಟ್ಟೆ. ಅವರಿಗೆ ಆಶ್ಚರ್ಯವೂ ಸಂದೇಹವೂ ಒಟ್ಟೊಟ್ಟಿಗೆ ತಲೆದೋರಿತು. ಗೊತ್ತಾದ ದಿನವೂ ಬಂತು. ಶೃಂಗೇರಿ ಜಗದ್ಗುರುಗಳು ಶಿವಕಾಶಿಗೆ ಬಂದರು. ಜೋರಾದ ಮಳೆ ಧಾರೆಧಾರೆಯಾಗಿ ಸುರಿಯಿತು. "ಮಳೆ ಹುಯ್ಯುತ್ತದೆಯೋ?" ಎಂದು ಕೇಳಿದ್ದವರ ಮನಸ್ಸು

Sri Vidyabharathi Book Centre, Sringeri

CC-O. In Public Domain. Digitized by eGangotri

ತಂಪಾಯಿತು; ಸಂದೇಹ ಪರಿಹಾರವಾಯಿತು. ಸ್ವಾಗತಸಮಾರಂಭ ಮುಗಿದ ಮೇಲೆ ನಾನು ಸ್ವಾಮಿಗಳನ್ನು ನಮಸ್ಕರಿಸಿದಾಗ, "ಈವೂರಿನಲ್ಲಿ ಏನು ವಿಶೇಷ?" ಎಂದು ಕೇಳಲು, ನಾನು ಮೇಲೆ ಹೇಳಿದ ವಿವರವನ್ನು ತಿಳಿಯಪಡಿಸಿದೆ. ಆದಾದ ಮೇಲೆ ನಗರದ ಜನಗಳಿಗೆ ಸ್ವಾಮಿಗಳಲ್ಲಿ ಅಪಾರ ಭಕ್ತಿಯುಂಟಾಯಿತು. ನನಗೆ ಸದ್ಗುರುಗಳಲ್ಲಿ ಮಾನಸಿಕ ಆಸಕ್ತಿ ಅವಲಂಬನೆ ಏರ್ಪಟ್ಟಿತು.

೧೯೩೯ರಲ್ಲಿ ಮದರಾಸಿಗೆ ಹೋದೆ. ಅಲ್ಲಿ ಒಂದು ಹೋಟಲಿನಲ್ಲಿ ತಂಗಿದ್ದೆ. ನನ್ನ ಜೊತೆಯಲ್ಲಿ ಸಹೋದರಿಯ ಮೊಮ್ಮಗನೂ ಬಂದಿದ್ದ. ಅವನನ್ನು ನನ್ನೊಡನೆ ಎರಡು ದಿನ ಇಟ್ಟುಕೊಂಡಿದ್ದು, ಬೇಕಾಗಿದ್ದದ್ದನ್ನು ಕೊಂಡುಕೊಟ್ಟು ಹಳ್ಳಿಗೆ ಕಳಿಸಿಕೊಡುವಂತೆ ನಮ್ಮ ಮನೆಯವರು ಹೇಳಿದ್ದರು.

ಶೃಂಗೇರೀ ಜಗದ್ಗುರುಗಳು ಆಗ ರಾಜಾ ಅಣ್ಣಾಮಲೈಪುರದಲ್ಲಿ ಮುಕ್ಕಾಮು ಮಾಡಿರುವುದಾಗಿ ಕೇಳಿಬಂದು, ಅವರ ದರ್ಶನಮಾಡಬೇಕೆಂದು ಯೋಚಿಸಿದೆ. ಹುಡುಗನನ್ನು ಹೋಟಲಿನ ಕೋಣೆಯಲ್ಲಿ ಇರುವಂತೆ ಹೇಳಿ ನಾನು ಸ್ನಾನಮಾಡಿಕೊಂಡು ಬರುವುದಾಗಿ ಹೇಳಿ ಹೋದೆ. ಹಿಂದಿರುಗಿ ಬಂದು ನೋಡಿದಾಗ ಹುಡುಗ ಕೋಣೆಯಲ್ಲಿ ಕಾಣಲಿಲ್ಲ. ಈ ದೊಡ್ಡ ನಗರದಲ್ಲಿ ಎಲ್ಲಿ ಹುಡುಕುವುದು? ನನ್ನ ವಶಕ್ಕೆ ಒಪ್ಪಿಸಿದವರಿಗೆ ಏನು ಉತ್ತರ ಹೇಳುವುದು? ಹೀಗೆಂದು ನನಗೆ ಬಹಳ ದಿಗಿಲಾಯಿತು. ಅಣ್ಣಾಮಲೈ ಪುರದಲ್ಲಿರುವ ಜಗದ್ಗುರುಗಳ ಬಳಿ ಹೋಗಿ ಈ ಸಂಕಟವನ್ನು ತಿಳಿಸಿ, ಆಶೀರ್ವಾದ ಪಡೆಯೋಣವೆಂದುಕೊಂಡು ತೀರ್ಮಾನಿಸಿದೆ. ಅಲ್ಲಿ ಹೋಗಿ ಅವರಿಗೆ ನಮಸ್ಕಾರ ಮಾಡಿದೆ. ಗುಂಪು ಬಹಳವಾಗಿದ್ದದ್ದರಿಂದ ಅವತ್ತು ಬೆಳಗೆಯಾಗಲಿ ಸಂಜೆಯಾಗಲಿ ಅವರನ್ನು ಕಂಡು ಹೇಳಕೊಳ್ಳಲು ಸಾಧ್ಯವಾಗಲಿಲ್ಲ. ಮರು ದಿನ ಸಂಜೆ ಅಲ್ಲಿಗೆ ಮತ್ತೊಮ್ಮೆ ಹೋದೆ. ನಾನು ಒಳಹೊಕ್ಕ ಕೂಡಲೆ ಸದ್ಗುರುಗಳ ಕಟಾಕ್ಷ ನನ್ನ ಮೇಲೆ ಬಿತ್ತು. "ಬನ್ನಿ, ಬನ್ನಿ" ಎಂದು ವಾತ್ಸಲ್ಯದಿಂದ ನನ್ನನ್ನು ಕರೆದರು. ನಮಸ್ಕರಿಸಿದೆ. ಮನಸ್ಸಿನ ಕಳವಳದಿಂದ, ನನ್ನ ಸಹೋದರಿಯ ೧೨ ವರ್ಷದ ಮೊಮ್ಮಗ ಕಾಣದೆಹೋಗಿರುವ ಕಥೆಯನ್ನು ಹೇಳಿದೆ. ಆ ಸತ್ಯಜ್ಞಾನಮೂರ್ತಿಗಳು ಒಂದೇ ಒಂದು ಕ್ಷಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೌನಸ್ಥಿತಿಯಲ್ಲಿದ್ದರು, ಅಷ್ಟೇ. ನನ್ನನ್ನು ಕುರಿತು, "ಅವನು ಬಂದುಬಿಡುತ್ತಾನೆ" ಎಂದು ಅನುಗ್ರಹಿಸಿದರು. ಆಮೇಲೆ ನನ್ನ ಕುಟುಂಬದ ಕ್ಷೇಮಸಮಾಚಾರ ವಿಚಾರಿಸಿದರು. ನಾನು ಅಪ್ಪಣೆ ಪಡೆದು, ನನ್ನ ದುಗುಡವನ್ನು ಗುರುಗಳ ಬಳಿ ಒಪ್ಪಿಸಿಬಿಟ್ಟೆನೆಂದುಕೊಂಡು ನೆಮ್ಮದಿಯಿಂದ ಹೋಟಲಿಗೆ ಹಿಂದಿರುಗಿದೆ.

ಅದರ ಮುಂದಿನ ದಿನ ಬೆಳಗ್ಗೆ ೬ ಗಂಟೆಗೆ ನನ್ನ ಕೋಣೆಯಲ್ಲಿ ಟೆಲಿಫೋನ್ ಗಂಟೆ ಬಾರಿಸಿತು. ಏನೆಂದು ಕೇಳಲು, "ಹುಡುಗ ಶಿವಕಾಶಿಗೆ ಬಂದುಬಿಟ್ಟ" ಎಂಬ ಸುದ್ದಿ ಅಮೃತದ ಹಾಗೆ ಉಲಿಯಿತು. ಅನುಗ್ರಹಪೂರ್ಣರಾದ ಜ್ಞಾನಿಸಮುನಿಗಳ ಶ್ರೀವಾಕ್ಕು ವೇದವಾಕ್ಯೇ ಅಲ್ಲವೇ?

ಈ ರೀತಿ ತ್ರಿಕಾಲಜ್ಞಾನಿಗಳಾದ ಶೃಂಗೇರೀ ಜಗದ್ಗುರುಗಳ ದಿವ್ಯದರ್ಶನದಿಂದ, ಸಂಬಂಧದಿಂದ, ನೋಟದಿಂದ, ವಾಕ್ಕಿನಿಂದ, ಈ ಎಲ್ಲ ರೀತಿಯಿಂದಲೂ ನಾನು ಪಡೆದ ಮಹಾಭಾಗ್ಯವನ್ನು ಇಲ್ಲಿ ಹೇಳಿ ತಿಳಿಸಲು ಸಾಮರ್ಥ್ಯವಿಲ್ಲದವನಾಗಿದ್ದೇನೆ. "ನನ್ನ ಮಹಾಭಾಗ್ಯವನ್ನು ನೀವೂ ಪಡೆಯಿರಿ; ಓ ಜಗತ್ತಿನವರೇ!" ಎಂದು ಕೂಗಿ ಕೂಗಿ ಕರೆಯುತ್ತೇನೆ.

ಶ್ರೀ ಓ. ಎಂ. ಆರ್. ವೆಂಕಟೇಶಗೌಂಡರ್ (ವಕೀಲರು, ಈರೋಡು) ಅವರ ಅನುಭವ

ಶೃಂಗೇರಿ ಜಗದ್ಗುರುಗಳು (೩೫ನೆಯ ಪೀಠಾಧಿಪತಿಗಳು) ಈರೋಡಿಗೆ ಬಿಜಯಮಾಡಿದ್ದರು. ಅದೇ ಸಮಯ ನನ್ನ ಮಗುವಿಗೆ ಕಿರುನಾಲಿಗೆ ಹೆಚ್ಚಾಗಿ ಬೆಳೆದಿರುವುದಾಗಿಯೂ ಅದಕ್ಕೆ ಮದರಾಸಿನಲ್ಲಿ ಶಸ್ತ್ರಚಿಕಿತ್ಸೆ ಮಾಡಬೇಕೆಂದೂ ನಮ್ಮ ಕುಟುಂಬ ವೈದ್ಯರು ಹೇಳಿದ್ದರಿಂದ ಅವತ್ತು ರಾತ್ರಿ ಮದರಾಸಿಗೆ ಕುಟುಂಬ ಸಮೇತರಾಗಿ ಹೊರಡುವುದಾಗಿ ಏರ್ಪಾಡು ಮಾಡಿಕೊಂಡಿದ್ದೆ. ಶೃಂಗೇರೀ ಜಗದ್ಗುರುಗಳನ್ನು ದರ್ಶಿಸಿ ಪಾದಪೂಜೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡೋಣವೆಂದು ನಮ್ಮ ಸ್ನೇಹಿತರು ಹೇಳಲಾಗಿ, ನಾನು ಅದಕ್ಕೆ ಸಮ್ಮತಿಸಿ, ಅದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದೆ. ಅವತ್ತು ರಾತ್ರಿ ಪೂಜೆ ಸಮಯ. ಗುರುಗಳ ಪಾದಪೂಜೆಯನ್ನು ನಾನು ಮಾಡಿ ಮುಗಿಸಿ ಆಚಾರ್ಯರ ದರ್ಶನಕ್ಕೆ ನನ್ನ ಕುಟುಂಬದೊಡನೆ, (ಮಗುವಿನೊಡನೆಯೂ) ಕಾದುಕೊಂಡಿದ್ದೆ. ರಾತ್ರಿ ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನು ಮುಗಿಸಿಬಿಟ್ಟು ಶ್ರೀ ಸ್ವಾಮಿಗಳು ನಾವುಗಳು ಇದ್ದ ಸ್ಥಳಕ್ಕೆ ಬಂದರು. ಆಗ ವಕೀಲ ಸುಬ್ಬರತ್ನಯ್ಯರ್ ನನ್ನನ್ನು ಶ್ರೀ ಸ್ವಾಮಿಗಳಿಗೆ ಪರಿಚಯಮಾಡಿಸಿ, " ಇವರ ಮಗುವಿಗೆ ಗಂಟಲಿನಲ್ಲಿ ದುರ್ಮಾಂಸ ಬೆಳೆದಿರುವುದರಿಂದ ಆಪರೇಷನ್ ಮಾಡಬೇಕೆಂದು ಸ್ಥಳದ ಡಾಕ್ಟರು ಹೇಳುತ್ತಾರಂತೆ. ಇವತ್ತು ರಾತ್ರಿಯ ರೈಲಿನಲ್ಲಿ ಇವರು ಕುಟುಂಬ ಸಮೇತ ಮ ದ ರಾ ಸಿ ಗೆ ಹೋಗಬೇಕಾಗಿರುವುದರಿಂದ ಪಾದಪೂಜೆಗೆ ಅವಸರವಸರವಾಗಿ ರಾತ್ರಿಯಲ್ಲಿ ಏರ್ಪಡಿಸಿತು. ಸ್ವಾಮಿಗಳು ಮಗುವನ್ನು ಅನುಗ್ರಹಿಸಬೇಕು " ಎಂದರು. ಅದಕ್ಕೆ ಶ್ರೀ ಸ್ವಾಮಿಗಳು ಒಡನೆಯೇ, " ಪಟ್ಟಣಕ್ಕೆ ಹೋದರೆ, ಡಾಕ್ಟರು ಆಪರೇಷನ್ ಬೇಡ ಎನ್ನುತ್ತಾರೆ " ಎಂದು ಹೇಳಿ ಆಶೀರ್ವದಿಸಿ ಒಳಕ್ಕೆ ಹೋಗಿಬಿಟ್ಟರು. ಸುಬ್ಬರತ್ನಮಯ್ಯರೊಡನೆ " ಆಪರೇಷನ್ ಮಾಡಿಯೇ ತೀರಬೇಕೆಂದು ಡಾಕ್ಟರು ತೀರ್ಮಾನಿಸಿದ್ದಾರಲ್ಲಾ " ಎಂದೆ. ಅದಕ್ಕೆ ಅವರು, " ಸ್ವಾಮಿಗಳ ವಾಕ್ಕಿನಲ್ಲಿ ನಮಗೆ ನಂಬಿಕೆಯಿದೆ. ನೀನು ಧೈರ್ಯವಾಗಿ ಹೋಗಿ ಬಾ " ಎಂದರು.

ಅವತ್ತು ರಾತ್ರಿ ಮದರಾಸಿಗೆ ಹೋಗಿ ಶಸ್ತ್ರಚಿಕಿತ್ಸೆಮಾಡುವ ವೈದ್ಯರಿಗೆ ಮಾರನೇ ದಿನ ಮಗುವನ್ನು ತೋರಿಸಿದೆ. " ಯಾರು ಹೇಳಿದರು, ಆಪರೇಷನ್ ಮಾಡಬೇಕು ಎಂದು ? ಆಪರೇಷನ್ ಅವಶ್ಯವಿಲ್ಲ" ಎಂದು ಹೇಳಿ ಚಿಕ್ಕ ಚಿಕಿತ್ಸೆ ಮಾಡಿದರು. ನನಗೆ ಆಶ್ಚರ್ಯವೋ ಆಶ್ಚರ್ಯ ! ಮಗುವಿಗೆ ಆಪರೇಷನ್ ಇಲ್ಲದೆಯೇ ದೇಹಸ್ಥಿತಿ ಸರಿಯಾಗಿಬಿಟ್ಟಿತು. ಊರಿಗೆ ಹಿಂದಿರುಗಿ ಬಂದು ನನ್ನ ಸ್ನೇಹಿತರನ್ನುಕಂಡು, " ಇದು ತುಂಬ ಆಶ್ಚರ್ಯವಾಗಿದೆಯಲ್ಲ ! ಸ್ವಾಮಿಗಳು ಹೇಳಿದ ಹಾಗೆಯೇ ಮದರಾಸಿನ ಡಾಕ್ಟರು ಹೇಳಿದರು " ಎಂದು ಹೇಳಿದೆ. ಅದು ಮೊದಲು ಶೃಂಗೇರೀ ಜಗದ್ಗುರುಗಳಲ್ಲಿ ನನಗೆ ಅಪಾರ ಭಕ್ತಿಯುಂಟಾಯಿತು. ಶೃಂಗೇರಿಯಲ್ಲಿ ನಡೆಯುವ

Sri Vidyabharathi Book Centre, Sringeri

CC-O. In Public Domain. Digitized by eGangotri

ವೈಭವಗಳಿಗೆ ಕಡ್ಡಾಯವಾಗಿ ನಾನು ಕಾಣಿಕೆಗಳನ್ನು ಸ್ವಪ್ರೇರಣೆಯಿಂದ ತಪ್ಪದೆ ಸಲ್ಲಿಸುತ್ತಿದ್ದೇನೆ.

* * * *

೧೯೭೦ರಲ್ಲಿ ಕುಂಭಾಭಿಷೇಕ ನಡೆಯಿತು. ೧೦ ದಿನದ ಉತ್ಸವ. ಶ್ರೀ ಶಂಕರರ ವಿಷಯವಾಗಿ ಅಖಿಲ ಭಾರತ ಚರ್ಚಾಸದಸ್ಸು ಏರ್ಪಡಿಸಲಾಯಿತು. ಸಮಗ್ರ ಭಾರತದ ಎಲ್ಲಾ ಕಡೆಗಳಿಂದಲೂ ಮಹಾ ವಿದ್ವಾನ್‌ಗಳೂ, ಯೂನಿವರ್ಸಿಟಿ ಪ್ರೊಫೆಸರುಗಳೂ ಬಂದಿದ್ದರು. ಉತ್ಸವದ ಆರಂಭವಲ್ಲಿ ಎರಡು ದಿನ ಇದ್ದಕ್ಕಿದ್ದಂತೆ ಮಳೆಹುಯ್ಯಿತು. ಶ್ರೀಮಠದ ಕಾರ್ಯದರ್ಶಿಗೆ ಚಿಂತೆಯಾಯಿತು. ದೊಡ್ಡ ಗುಂಪು ಬರುತ್ತದೆಯಲ್ಲ; ಆಗಬೇಕಾದ ಕಾರ್ಯಗಳು ಅಪಾರವಾಗಿವೆಯಲ್ಲ;—ಎಂದು ಯೋಚಿಸಿ ಶ್ರೀ ಸ್ವಾಮಿಗಳ ಬಳಿ ವಿಜ್ಞಾಪನೆಮಾಡಿದರು. ಅದಕ್ಕೆ ಸ್ವಾಮಿಗಳು, "ಇದು ಅಂಬೆಯ ಕಾರ್ಯ. ಅವಳು ನಡಸಿಕೊಳ್ಳುತ್ತಾಳೆ. ಮಳೆ ಬರುವುದಿಲ್ಲ. ಭಯಪಡಬೇಡಿ" ಎಂದರು. ಅದೇ ಪ್ರಕಾರ ಉಳಿದ ದಿನಗಳಲ್ಲಿ ಮಳೆ ಬರಲಿಲ್ಲ. ಕಡೆಯ ದಿನ ಶ್ರೀ ಸುರೇಶ್ವರರ ಆಲಯದಲ್ಲಿ ಜೀರ್ಣೋದ್ಧಾರಣ ಕುಂಭಾಭಿಷೇಕ ಬಹು ವೈಭವದಿಂದ ನೆರವೇರಿತು. ಒಳ್ಳೆಯ ಬಿಸಿಲು, ಹೇರಳವಾದ ಜನಸಂದಣಿ. ಸಂಜೆ ೫ ಗಂಟೆಗೆ ವಿದ್ವತ್ಸದಸ್ಸು. ಕಾರ್ಯದರ್ಶಿಯನ್ನ ಕರೆದು ಶ್ರೀ ಸ್ವಾಮಿಗಳು, "ಇಲ್ಲಿಯವರೆಗೆ ಮಳೆ ತಡೆದಿತ್ತು—ಇನ್ನು ಕಡ್ಡಾಯವಾಗಿ ಬಂದೇಬರುತ್ತದೆ. ತಡೆಯುವುದಕ್ಕೆ ಸಾಧ್ಯವಿಲ್ಲ. ಸಂಜೆಯ ಕಾರ್ಯಕ್ರಮಗಳನ್ನು ಬೇಗ ಬೇಗ ಮುಗಿಸಿ" ಎಂದರು.

ಸಂಜೆ ೫ ಗಂಟೆಗೆ ವಿದ್ವತ್ಸದಸ್ ನಡೆಯುತ್ತಾ ಇದೆ, ಶ್ರೀ ಸ್ವಾಮಿಗಳು ಅಗ್ರಾಸನವಹಿಸಿದ್ದಾರೆ. ಅವರ ಎದುರಿಗೇ ದಿಢೀರೆಂದು ಕಾರ್ಮೋಡಗಳು ಕವಿದವು. ಸಿಡಿಲು ಹೊಡೆಯಿತು. ಒಂದು ನಿಮಿಷದಲ್ಲಿ ದೊಡ್ಡ ಮಳೆ ಪ್ರಾರಂಭವಾಗಿಬಿಡುತ್ತದೆ ಎನ್ನಿಸಿತು. ಸಿಡಿಲುಹೊಡೆದಕೂಡಲೆ ಶ್ರೀ ಸ್ವಾಮಿಗಳು ಆ ದಿಕ್ಕಿಗೆ ತಮ್ಮ ಕೈಯ್ಯನ್ನೆತ್ತಿ, "ಸ್ವಲ್ಪ ತಡೆಸುಕೊ" ಎಂದು ಹೇಳಿದಹಾಗೆ ತೋರಿತು. ಆಮೇಲೆ ಸುಮಾರು ಒಂದು ಗಂಟೆ ಹೊತ್ತು ಸಭೆ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರ್ಮೋಡಗಳು ಆಕಾಶದಲ್ಲಿಯೇ ಕಾಣಿಸಿಕೊಂಡವೇ ಹೊರತು, ಮಳೆಯು ಮಾತ್ರ ಸುರಿಯಲಿಲ್ಲ. "ಇನ್ನು ನಾವು ದೇವಸ್ಥಾನದೊಳಕ್ಕೆ ಹೋಗಿ, ಸದಸ್ಸಿನ ಮಿಕ್ಕ ಕಾರ್ಯಗಳನ್ನು ಅಲ್ಲೇ ನಡೆಸೋಣ" ಎಂದು ಗುರುಗಳು ಅಪ್ಪಣೆಮಾಡಲಾಗಿ ಎಲ್ಲರೂ ದೇವಸ್ಥಾನಕ್ಕೆ ಹೋದರು. ಸದಸ್ಸು ಅಲ್ಲಿ ನಡೆಯತೊಡಗಿತು. ಒಂದು ಗಂಟೆ ಹೊತ್ತು ಒಳ್ಳೆಯ ಮಳೆ ಹುಯ್ದು ಆಮೇಲೆ ನಿಂತಿತು. ತಮ್ಮ ಕೈ ಸನ್ನೆಯಿಂದ ಮಳೆ ಬಾರದಂತೆ ತಡೆದದ್ದನ್ನು ಕುರಿತು, ಒಬ್ಬ ಶಿಷ್ಯರು ಸ್ವಾಮಿಗಳನ್ನು ಅಂದು ರಾತ್ರೆ ಕೇಳಿದಾಗ. "ಅದು ಅಮ್ಮನವರ ಅನುಗ್ರಹ" ಎಂದು ಹೇಳಿಬಿಟ್ಟರು. ಮತ್ತೊಮ್ಮೆ ಕೇಳಲೂ ಅವಕಾಶಕೊಡಲಿಲ್ಲ. ಮಹಾತ್ಮರು ಸಂಕಲ್ಪಮಾಡಿದರೆ ಪ್ರಕೃತಿಯೂ ಅವರಿಗೆ ವಿಧೇಯವಾಗುವುದು.

ಶ್ರೀ ವಿ. ಎಸ್. ಮಣಿಅಯ್ಯರ್, ಬಿ.ಎ., ಬಿ.ಎಲ್.

(ಮಿಟ್ಟಾದಾರ್, ಕೃಷ್ಣಾಪುರ, ತಿರುನೆಲ್ವೇಲಿ ಜಿಲ್ಲೆ)

ಶ್ರೀವೈಕುಂಠಕ್ಕೆ ಅರುಗಿನಲ್ಲಿರುವ ನಮ್ಮ ಸ್ವಂತ ಗ್ರಾಮವಾದ ವರಕಪ್ಪನೇರಿ ಗ್ರಾಮಕ್ಕೆ ಶ್ರೀ ಶೃಂಗೇರಿ ಜಗದ್ಗುರುಗಳನ್ನು ಕರಸಿಕೊಂಡು ಪೂಜಿಸಬೇಕೆಂದು ನಮ್ಮ ತಂದೆ ಆಸೆಪಟ್ಟರು. ಆದರೆ ಅವರ ಅಪೇಕ್ಷೆ ಈಡೇರುವುದಕ್ಕೆ ಮೊದಲೇ ಅವರು ಕಾಲವಾಗಿಬಿಟ್ಟರು. ನಮ್ಮ ತಂದೆಯುವರ ಆಸೆಯನ್ನು ಪೂರ್ಣಗೊಳಿಸಬೇಕೆಂಬ ಉದ್ದೇಶದಿಂದ ಶ್ರೀ ಜಗದ್ಗುರುಗಳು ತಿರುನೆಲ್ವೇಲಿ ಜಿಲ್ಲೆಯಲ್ಲಿ ಯಾತ್ರೆ ಮಾಡುತ್ತಿದ್ದಾಗ ನಾನು ಜಗದ್ಗುರುಗಳಬಳಿಗೆ ನೇರವಾಗಿ ಹೋಗಿ ನಮ್ಮ ಗ್ರಾಮಕ್ಕೆ ಬಿಜಯಮಾಡಬೇಕೆಂದು ಪ್ರಾರ್ಥಿಸಿದೆ. ಅವರೂ ಅಂಗೀಕರಿಸಿದರು. ಆದರೆ, ಶ್ರೀವೈಕುಂಠದಲ್ಲಿದ್ದವರು ನಮ್ಮ ಗ್ರಾಮಕ್ಕೆ ನೇರವಾಗಿ ಸುಗಮವಾಗಿ ಕಾರಿನಲ್ಲಿ ಹೋಗುವುದಕ್ಕಾಗುವುದಿಲ್ಲ; ರಸ್ತೆ ಸರಿಯಿಲ್ಲ ಎಂದು ಹೇಳಿ ಪ್ರಯಾಣವನ್ನು ತಪ್ಪಿಸಲು ಪ್ರಯತ್ನಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಮಣಿ ಅಯ್ಯರು ತಮ್ಮ ಪಾದಪೂಜೆ, ಭಿಕ್ಷೆ ಇವುಗಳನ್ನು ಶ್ರೀವೈಕುಂಠದಲ್ಲಿಯೇ ನಡಸಬಹುದಲ್ಲ' ಎಂದೂ ಸಹ ಹೇಳಿದರು. ಅದಕ್ಕೆ ಸ್ವಾಮಿಗಳು, "ಅವರ ಆಹ್ವಾನವನ್ನು ಒಪ್ಪಿಕೊಂಡುಬಿಟ್ಟೆ. ಕಾರು ಎಷ್ಟು ದೂರ ಹೋಗುತ್ತದೆಯೋ ಅಷ್ಟು ದೂರ ಹೋಗಲಿ. ಅಲ್ಲಿಂದ ಮುಂದೆ ಪಾದಚಾರಿಯಾಗಿ ಹೋಗುತ್ತೇವೆ" ಎಂದು ಹೇಳಿ, ನಮ್ಮ ಗ್ರಾಮಕ್ಕೆ ಬಂದೇಬಂದರು. ಭಗವತ್ಕೃಪೆಯಿಂದ ಕಾರು ಗ್ರಾಮದವರೆಗೂ, ಗ್ರಾಮದೊಳಕ್ಕೂ ಬಂತು. ಅಲ್ಲಿ ಸರಿಯಾದ ಸ್ಥಳಗಳೆಂದರೆ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ನಮ್ಮ ಮನೆ – ಎರಡೇ ಇರುವುದು. ದೇವಸ್ಥಾನದಲ್ಲಿ ಪಾದಪೂಜೆ, ಭಿಕ್ಷೆ ಎಲ್ಲಾ ನಡೆದ ಮೇಲೆ ಸಾರ್ವಜನಿಕರಿಗೆ ಉಪದೇಶಮಾಡುವ ಸಮಯದಲ್ಲಿ ಶ್ರೀ ಸ್ವಾಮಿಗಳು, "ಈ ವೂರು ಅದ್ವೈತಕ್ಕೆ ಸಾಕ್ಷಿಯಾಗಿದೆ. ಇರುವುದು ಒಂದು ದೇವಸ್ಥಾನ ಅದರಹಾಗೆಯೇ ಇರುವುದು ಒಂದೇ ಒಂದು ದೊಡ್ಡ ಮನೆ. ಆ ಮನೆಯಲ್ಲಿ ಇರುವವರೂ ಒಬ್ಬರೇ ಒಬ್ಬರು" ಎಂದು ಹೇಳಿ ಜನರನ್ನು ಸಂತೋಷಗೊಳಿಸಿದರು.

ಕೃಷ್ಣಾಪುರದ ವೈದ್ಯಶಾಲೆಯ ಪ್ರಾರಂಭೋತ್ಸವಕ್ಕೆ ಬಂದು ಅನುಗ್ರಹಿಸುವಂತೆ ಶ್ರೀ ಸ್ವಾಮಿಗಳನ್ನು ಪ್ರಾರ್ಥಿಸಿದೆ. ಅವರೂ ಒಪ್ಪಿಕೊಂಡರು. ವೈದ್ಯಶಾಲೆಯನ್ನು ತೆರೆದಮೇಲೆ ಭಿಕ್ಷೆಗೆ ಪಾಪಾಂಗುಳಕ್ಕೆ ಪಾದಬೆಳಸುವಂತೆ ಬೇರೆಯವರು ಏರ್ಪಾಡುಮಾಡಿದರು. ಆದರೆ, ವೈದ್ಯಶಾಲೆಯನ್ನು ತೆರೆದ ಮೇಲೆ ನಮ್ಮೂರಿನಲ್ಲಿಯೇ ಭಿಕ್ಷೆಯನ್ನು ಸ್ವೀಕರಿಸಬೇಕು – ಎಂಬುದೇ ನನ್ನ ಪ್ರಾರ್ಥನೆಯಾಗಿತ್ತು. ನಾನು ಆ ಮೊದಲೇ ಪಾದಪೂಜೆ, ಭಿಕ್ಷೆ ಮಾಡಿದ್ದದರಿಂದ, ಮತ್ತೆ ಅದೇಸ್ಥಳದಲ್ಲಿ ಭಿಕ್ಷೆಯಾಗಬೇಕಾದ ಅಗತ್ಯವಿಲ್ಲವೆಂದು ಶ್ರೀಮಠದ ನಿರ್ವಾಹಕರು ಹೇಳಿದರು. ನನ್ನ ಮನಸ್ಸಿಗೇನೋ ಆ ತೀರ್ಮಾನದಿಂದ ಸಮಾಧಾನವಾಗಿರಲಿಲ್ಲ; ನನ್ನ ಆಸೆಯನ್ನು ಮುಟ್ಟಿಗೆ ಶ್ರೀ ಸ್ವಾಮಿಗಳಿಗೆ ತಿಳಿಸಿದ್ದೆ. ಆಮೇಲೆ ಏನು ನಡೆಯಿತೆಂಬುದು ಮಾತ್ರ ತುಂಬ ಆಶ್ಚರ್ಯಕರವಾಗಿದೆ.

ಪಾಪಾಂಗುಳದಲ್ಲಿ ಒಬ್ಬ ಪ್ರಮುಖರು, ವಯಸ್ಸಾದವರು, ಆ ದಿನ ಕಾಲವಾದ್ದರಿಂದ ಆ ಗ್ರಾಮಕ್ಕೆ ಶ್ರೀ ಸ್ವಾಮಿಗಳನ್ನು ಕರೆದುಕೊಂಡುಹೋಗಲು ಆಗಲಿಲ್ಲ. ಇದರಿಂದ, ಗುರುಗಳು ವೈದ್ಯಶಾಲೆಯನ್ನು ಆರಂಭಗೊಳಿಸುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾರ್ಯಕ್ರಮವನ್ನು ರದ್ದುಮಾಡಿ, ಆತ್ತೂರಿನಿಂದ ತಿರುನೆಲ್ವೇಲಿ ಮಾರ್ಗವಾಗಿ ರಾಜಪಾಳಯಕ್ಕೆ ಹೋಗಿಬಿಡುವುದೆಂದು ಮಠದ ನಿರ್ವಾಹಕರೂ ಕೆಲವರು ಸ್ಥಳೀಯ ಪ್ರಮುಖರೂ ಹೇಳಿದರು. ಶ್ರೀ ಸ್ವಾಮಿಗಳು ಅದಕ್ಕೆ ಒಪ್ಪಿಕೊಳ್ಳಲಿಲ್ಲ. "ಸ್ವಾಮಿಗಳು ಬಂದು ಆರಂಭೋತ್ಸವ ನಡಸುವರೆಂದು ನೀವು ಪತ್ರಿಕೆಗಳನ್ನು ಮುದ್ರಿಸಿ ಎಲ್ಲರಿಗೂ ಕಳಿಸಿದ ಮೇಲೆ ನಾವು ಅಲ್ಲಿಗೆ ಹೋಗದೆ ಇರುವುದು ಸರಿಯಲ್ಲ" ಎಂದರು. ಆದಕ್ಕೆ ಕೆಲವರು "ಈರೀತಿಯಾದ ಸಮಾರಂಭಗಳಲ್ಲಿ ಮಾರ್ಪಾಟುಗಳಾಗುವುದು ಸಹಜ. ಬೇರೆ ಯಾರನ್ನಾದರೂ ಕರೆದು ಅವರಿಂದ ಉತ್ಸವವನ್ನು ನಡಸುವುದುಂಟು" ಎಂದರು. ಅದಕ್ಕೂ ಶ್ರೀ ಸ್ವಾಮಿಗಳು ಒಪ್ಪಿಕೊಳ್ಳಲಿಲ್ಲ. ಮೊದಲೇ ನಿರ್ಣಯಿಸಿದ್ದಂತೆ ಶ್ರೀ ಸ್ವಾಮಿಗಳು ದಯಮಾಡಿ ಬಂದರು; ಉತ್ಸವವನ್ನೂ ಅವರೇ ನೆರವೇರಿಸಿದರು. ನನ್ನ ಪ್ರಾರ್ಥನೆಗಣುಗುಣವಾಗಿ ಶ್ರೀ ಸ್ವಾಮಿಗಳು ನನ್ನಿಂದ ಪಾದಪೂಜೆ—ಭಿಕ್ಷೆ ಈ ಅವಸರ ಸೇವೆಗಳನ್ನೂ ಸ್ವೀಕರಿಸಿದರು.

ಉತ್ಸವ ಮುಗಿದ ಮೇಲೆ ನನ್ನನ್ನು ಕುರಿತು. "ಮಣಿ ದತ್ತ ಫಲಾಶನಃ" ಎಂದರು. ನನಗೆ ಅರ್ಥವಾಗಲಿಲ್ಲ. ಆಗ ಸ್ವಾಮಿಗಳು, "ರಾಮನಾಮಗಳಲ್ಲಿ 'ಶಬರೀದತ್ತ ಫಲಾಶನ ರಾಮ' ಎಂದು ಒಂದು ನಾಮವಿದೆ. ಅಂದು ಶಬರಿಯ ಆಶ್ರಮಕ್ಕೆ ಶ್ರೀ ರಾಮ ಹೋದನು. ಶಬರಿ ಅತ್ಯಂತ ಪ್ರೀತಿಯಿಂದ ಕೊಟ್ಟ ಫಲಗಳನ್ನು ಸ್ವೀಕರಿಸಿದನು. ಅದರಂತೆ ಇಂದು ನೀವು ಬಹಳ ಪ್ರೀತಿಯಿಂದ ಕೊಟ್ಟ ಫಲಗಳನ್ನು ನಾವು ಸ್ವೀಕರಿಸಿದ್ದೇವೆ" ಎಂದು ವಿವರಿಸಿದರು.

ಗುರುಗಳ ಉಪದೇಶವನ್ನು ಕುರಿತು ಸ್ವಲ್ಪ ಚಿಂತನಮಾಡಿದೆ. ರಾಮಾಯಣ ಕಥೆ ಜ್ಞಾಪಕಕ್ಕೆ ಬಂತು. ಶ್ರೀ ರಾಮ ಸೀತೆಯನ್ನು ಹುಡುಕಿಕೊಂಡು ಹೋಗುವ ದಾರಿಯಲ್ಲಿ ಕಬಂಧನು ಹೇಳಿದ ಪ್ರಕಾರ ಶಬರಿಯ ಆಶ್ರಮಕ್ಕೆ ಹೋಗಿ ತರುವಾಯ ಸುಗ್ರೀವನನ್ನು ಸಂಧಿಸುವುದಕ್ಕೆ ಹೋದನು. ಸುಗ್ರೀವನನ್ನು ನೋಡುವುದಕ್ಕೆ ಹೋಗುವ ದಾರಿಯಲ್ಲಿ ಶಬರಿಯ ಆಶ್ರಮವಿಲ್ಲ. ಅದು ದಾರಿಯನ್ನು ಬಿಟ್ಟು ಸ್ವಲ್ಪ ಒಳಗಡೆಗೆ ಪಶ್ಚಿಮದ ಕಡೆ ಇದೆ. ಸುಗ್ರೀವನೊಡನೆ ಸ್ನೇಹಮಾಡಿಕೊಳ್ಳುವುದೇ ಮುಖ್ಯ ಉದ್ದೇಶ; ಆದರೆ, ಶಬರಿಗೆ ದರ್ಶನಕೊಡುವುದಕ್ಕೋಸ್ಕರವೇ ಶ್ರೀ ರಾಮ ಶಬರಿಯ ಆಶ್ರಮಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋದನು. ಅದೇ ರೀತಿ, ನನ್ನನ್ನು ಅನುಗ್ರಹಿಸುವುದಕ್ಕಾಗಿಯೇ ಹೀಗೆ ಶ್ರೀ ಸ್ವಾಮಿಗಳು ಬಂದರು ಎಂದು ವಿವರಣೆಯನ್ನು ತಿಳಿದುಕೊಂಡೆ.

ಇದೇ ರೀತಿಯ ಬೇರೆ ಬೇರೆ ಹಲವು ಅನುಭವಗಳು ಗುರುಗಳ ಕರುಣೆಯನ್ನು ವಿವರಿಸುವಂಥವು ಉಂಟು....

* * * *

ಲಕ್ಷ್ಮಣಪುರಿಯಲ್ಲಿ ಮಹಾಸನ್ನಿಧಾನವು ಮುಕ್ಕಾಮು ಮಾಡಿದ್ದಾಗ ಒಬ್ಬರು, ಪಿಳ್ಳೆಗಳ ಹಾಗೆ ಉಡುಪು ಉಟ್ಟುಕೊಂಡು, ಕಾಲಿನಲ್ಲಿ ಬೂಟ್ಸುಸಮೇತ ದರ್ಶನಕ್ಕಾಗಿ ಒಳಗೆ ಪ್ರವೇಶಿಸಲು ಯತ್ನಿಸಿದರು. ಮಠದವರು ಅವರನ್ನು ಸನ್ನಿಧಾನದ ದರ್ಶನಕ್ಕೆ ಬಿಡಲು ಅನುಮತಿಸಲಿಲ್ಲ. ಗಲಾಟೆ ಆಯಿತು. ಶ್ರೀ ಸ್ವಾಮಿಗಳಿಗೆ ಇದು ಗೊತ್ತಾಗಿ ಅವರು ಒಳಗೆ ಬರುವುದಕ್ಕೆ ಅನುಮತಿಸುವಂತೆ ಮಾಡಿದರು. ಅವರು ಒಳಗೆ ಬಂದು, ಭಕ್ತಿಶ್ರದ್ಧೆಗಳನ್ನು ತೋರಿಸದೆ ನಮಸ್ಕಾರವನ್ನೂ ಮಾಡದೆ ಸುಮ್ಮನೆ ನಿಂತುಕೊಂಡಿದ್ದರು. ಪೂಜೆ ಮುಗಿದೊಡನೆ ಶ್ರೀ ಸನ್ನಿಧಾನ ಅವರನ್ನು ಕುರಿತು, "ನಾಳೆ ಬೆಳಗ್ಗೆ ೮ ಗಂಟೆಗೆ ಸಂಧಿಸೋಣ" ಎಂದರು. ಬಂದವರು ಏನೂ ಹೇಳದೆ ಹೊರಕ್ಕೆ ಹೋಗಿಬಿಟ್ಟರು.

ಮರುದಿನ ಪ್ರಾತಃಕಾಲ ೮ ಗಂಟೆಗೆ ಆ ದೊಡ್ಡ ಮನುಷ್ಯ, ಶಾಸ್ತ್ರೀಯವಾಗಿ ಪಂಚಕಚ್ಚೆ, ಅಂಗವಸ್ತ್ರ, ಧರಿಸಿಕೊಂಡು ಕೈಯಲ್ಲಿ ಪಂಚಪಾತ್ರೆ ಹಿಡಿದುಕೊಂಡು ಮುಕ್ಕಾಮಿಗೆ ಬಂದರು. ಒಡನೆಯೇ ಮಠದವರು ಅವರಿಗೆ ದರ್ಶನಕ್ಕೆ ಅನುಮತಿಕೊಟ್ಟರು. ಸನ್ನಿಧಾನವನ್ನು ಅವರು ದರ್ಶಿಸಿದರು. ಬಂದವರು ಏನೂ ಕೇಳಿಕೊಳ್ಳಲಿಲ್ಲ. ಆದರೆ, ಅವರಿಗೆ ಸನ್ನಿಧಾನದಿಂದ ಮಂತ್ರೋಪದೇಶ ದೊರೆಯಿತು. ಅಲ್ಲಿದ್ದವರುಗಳು ಆಶ್ಚರ್ಯಪಟ್ಟು ಬಂದವರನ್ನು, "ನಿನ್ನೆದಿನ ಹಾಗೆ ಬಂದಿರಿ; ಇವತ್ತು ಹೀಗೆ ಬಂದಿರಿ; ಹೇಗೆ ಈ ಮಾರ್ಪಾಟು ಬಂತು?" ಎಂದು ಕೇಳಿದರು. ಬಂದವರು ಉತ್ತರವಾಗಿ ಹೇಳಿದ್ದೇನೆಂದರೆ:

Sri Vidyabharathi Book Centre, Sringeri

CC-O. In Public Domain. Digitized by eGangotri

“ನಾನು ದೊಡ್ಡ ನೂಲು ವ್ಯಾಪಾರಿ. ವ್ಯಾಪಾರದಲ್ಲಿ ಅಪಾರ ನಷ್ಟವಾಯಿತು. ಎಂಟು ದಿನಕ್ಕೆ ಹಿಂದೆ ನನಗೆ ಸ್ವಪ್ನದಲ್ಲಿ ಒಬ್ಬ ಸಂನ್ಯಾಸಿ ಕಾಣಿಸಿಕೊಂಡು, “ನನ್ನನ್ನು ಬಂದು ದರ್ಶನಮಾಡು. ನಿನ್ನ ಕಷ್ಟಗಳು ಪರಿಹಾರವಾಗುವ ದಾರಿ ಸಿಕ್ಕುತ್ತದೆ.” ಎಂದರು. ಆದರೆ, ಆ ಸಂನ್ಯಾಸಿ ಯಾರೆಂದು ತಿಳಿದುಕೊಳ್ಳಲಾಗಲಿಲ್ಲ. ಮರುದಿನ ನಾನು ಅಂಗಡಿಯಲ್ಲಿ ಕೂತುಕೊಂಡಿದ್ದಾಗ, ಬೀದಿಯಲ್ಲಿ ಒಬ್ಬ ಹುಡುಗ ಒಬ್ಬ ಸ್ವಾಮಿಗಳ ಪಟವನ್ನು ಕೈಯಲ್ಲಿಟ್ಟುಕೊಂಡು ಮೇಲೂ ಕೆಳಗೂ ತಿರುಗಿಸಿ ತಿರುಗಿಸಿ ನೋಡುತ್ತ, ನೋಡಿ ನೋಡಿ ಆನಂದಪಡುತ್ತಾ ಇದ್ದದ್ದು ನನ್ನ ಕಣ್ಣಿಗೆಬಿತ್ತು. ಆ ಹುಡುಗನ ಕೈಯಲ್ಲಿದ್ದ ಪಟವನ್ನು ದೃಷ್ಟಿಸಿ ನೋಡಿದ್ದರಲ್ಲಿ ಅದೇ ಸ್ವಾಮಿಗಳ ರೂಪವೇ ನನ್ನ ಸ್ವಪ್ನದಲ್ಲಿ ಕಾಣಿಸಿಕೊಂಡವರ ರೂಪ—ಎಂದು ಅರಿವಾಯಿತು. ಆ ಹುಡಗನ ಜೊತೆ ಇದ್ದ ಅವರ ತಂದೆಯನ್ನು, “ಆ ಸ್ವಾಮಿಗಳ ಹೆಸರು ಅವರಿರುವ ಸ್ಥಳ—ಇವುಗಳ ವಿಷಯವಾಗಿ ಕೇಳಿದೆ. ಅವರು ಶೃಂಗೇರೀ ಸ್ವಾಮಿಗಳೆಂದೂ ಅವರು ಈ ಊರಿನಲ್ಲಿ ಮುಕ್ಕಾಂ ಮಾಡಿದ್ದಾರೆಂದೂ ಹೇಳಿದರು. ನನ್ನ ಸಂತೋಷವನ್ನು ತಾಳಿಕೊಳ್ಳಲಾಗಲಿಲ್ಲ; ಆ ಕ್ಷಣವೇ ಹಾಗೆಯೇ ಅಂಗಡಿಯನ್ನು ಬಿಟ್ಟು, ಮುಕ್ಕಾಮಿಗೆ ಬಂದು ಸೇರಿದೆ ನೀವು ತಡೆದಿರಿ. ಆದರೆ, ಸ್ವಾಮಿಗಳು ನನ್ನನ್ನು ಒಳಕ್ಕೆ ಬರುವಂತೆ ಮಾಡಿ ಅನುಗ್ರಹಿಸಿದರು. ನಾನು ದರ್ಶನಮಾಡಿ ಮನೆಗೆ ಹಿಂದಿರುಗಿದೆ.

ಅವತ್ತು ರಾತ್ರೆ ಅದೇ ಸ್ವಾಮಿಗಳು ಮತ್ತೆ ನನ್ನ ಸ್ವಪ್ನದಲ್ಲಿ ಕಾಣಿಸಿಕೊಂಡು, “ಮತ್ತೆ ದರ್ಶನಮಾಡುವುದಕ್ಕೆ ಬಾ” ಎಂದರು. “ನಿಮ್ಮ ಮಠದವರು ಒಳಕ್ಕೆ ಬಿಡುವುದಿಲ್ಲವಲ್ಲ” ಎಂದೆ. ಅದಕ್ಕೆ ಅವರು “ನಿನ್ನ ಉಡುಪನ್ನು ಬದಲಾಯಿಸಿಕೊಂಡು, ಕಚ್ಚೆಹಾಕಿ ಪಂಚೆ ಉಟ್ಟುಕೊಂಡು ಬಾ. ನಿನಗೆ ಮಂತ್ರೋಪದೇಶ ಮಾಡುತ್ತೇನೆ. ನಿನ್ನ ಕಷ್ಟಗಳು ಪರಿಹಾರವಾಗುತ್ತವೆ” ಎಂದರು. ನಾನು ಹಾಗೆಯೇ ಮಾಡಿದೆ. ನೀವು ನನ್ನನ್ನು ತಡೆಯಲಿಲ್ಲ. ಈ ವಿವರವನ್ನು ನಾನು ಯಾರಿಗೂ ಹೇಳದೆ ಸ್ವಾಮಿಗಳ ಮುಂದೆ ಹೋಗಿ ಸೇರಿದೆ. ಏನನ್ನೂ ಕೇಳಲಿಲ್ಲ. ಮಂತ್ರೋಪದೇಶ ದೊರೆಯಿತು.” ಎಂದರು.

* * * *

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈಸೂರು ಪ್ರದೇಶದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಶೆಟ್ಟರ ಸ್ವಪ್ನದಲ್ಲಿ ಶೃಂಗೇರೀ ಜಗದ್ಗುರುಗಳು ಕಾಣಿಸಿಕೊಂಡು ಅವರನ್ನು ಒಂದು ಗುಹೆಯೊಳಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗಿ, ಅಲ್ಲಿ ಮುಚ್ಚಿಹೋಗಿದ್ದ ಲಕ್ಷ್ಮೀವಿಗ್ರಹವನ್ನು ತೋರಿಸಿದರು. ಶೆಟ್ಟರು ಶೃಂಗೇರೀ ಜಗದ್ಗುರುಗಳನ್ನು ನೋಡಿದ್ದರು; ಆದರೆ ಸಮೀಪದಲ್ಲಿ ಸಂಧಿಸಿರಲಿಲ್ಲ. ಕೆಲವು ದಿನ ಕಳೆಯುವುದರಲ್ಲಿ ಶೆಟ್ಟರು ಶೃಂಗೇರಿಗೆ ಬಂದು ಜಗದ್ಗುರುಗಳ ದರ್ಶನಮಾಡಿದರು. ಏನೂ ಹೇಳಲಿಲ್ಲ. ಆದರೆ, ಜಗದ್ಗುರುಗಳು ಅವರಿಗೆ ಒಂದು ಲಕ್ಷ್ಮೀವಿಗ್ರಹವನ್ನು ಅನುಗ್ರಹಿಸಿದರು.

* * * *

ಶ್ರೀ ಸನ್ನಿಧಾನ ಆಂಧ್ರದೇಶದಲ್ಲಿ ಯಾತ್ರೆಮಾಡುತ್ತಿದ್ದಾಗ ನಡೆದದ್ದು :

ಒಂದು ಮಗುವಿಗೆ ದೇಹಸ್ಥಿತಿ ಸರಿಯಿರಲಿಲ್ಲವಾದ್ದರಿಂದ ಚಿಕಿತ್ಸೆಗೆ ಡಾಕ್ಟರಬಳಿ ಕರೆದುಕೊಂಡುಹೋದರು. ಡಾಕ್ಟರು, ' ಇದು ಕಠಿನವಾದ ವ್ಯಾಧಿ; ಮಗು ಉಳಿಯುವುದಿಲ್ಲ ' ಎಂದರು. ಕೂಡಲೆ ಮಗುವಿನ ತಂದೆ ಮಗುವನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಲಾಗಿ ಅವರೂ ಹಾಗೆಯೇ ಹೇಳಿದರು. ಅಮೂ ಅಲ್ಲದೆ, ಒಂದು ಎರಡು ದಿನ ಮಾತ್ರ ಬದುಕಬಹುದು, ಎಂದರು. ಹಾಗಿದ್ದರೂ, ಹೆತ್ತವರು ಮಗುವನ್ನು ಆಸ್ಪತ್ರೆಗೆ ಸೇರಿಸಿ ತಾವು ಮನೆಗೆ ಹೋದರು. ಅವತ್ತು ರಾತ್ರಿ ಮೊದಲು ಹೇಳಿದ ಡಾಕ್ಟರಿಗೆ ಸ್ವಪ್ನವಾಯಿತು. ಅವರಿಗೆ ಶೃಂಗೇರಿ ಸ್ವಾಮಿಗಳ ಪರಿಚಯವಿಲ್ಲ. ಆದರೆ, ಅವರ ಸ್ವಪ್ನದಲ್ಲಿ ಸ್ವಾಮಿಗಳು ಕಾಣಿಸಿದರು. " ಆ ಮಗುವಿಗೆ ಏಕೆ ಚಿಕಿತ್ಸೆ ಮಾಡುವುದಿಲ್ಲವೆಂದು ಹೇಳಿ ನಿರಾಕರಿಸಿದೆ ? " ಎಂದು ಕೇಳಿದರು. " ಮಗುವಿನ ವ್ಯಾಧಿ ಕಠಿನವಾದದ್ದು. ಅದು ಬದುಕುವುದಿಲ್ಲ " ಎಂದು ಡಾಕ್ಟರು ಹೇಳಲು, ಸ್ವಾಮಿಗಳು, " ನಿನ್ನ ಕರ್ತವ್ಯ ಔಷಧಿಕೊಡುವುದು. ಚಿಕಿತ್ಸೆಮಾಡುವುದಿಲ್ಲ ಎಂದು ನೀನು ಹೇಳಕೂಡದು. ಇಗೋ,

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಔಷಧಿಯನ್ನು ಆ ಮಗುವಿಗೆ ಕೊಡು" ಎಂದು ಹೇಳಿ, ಒಂದು ಕಾಗದವನ್ನು ತೋರಿಸಿದರು. ಅದರಲ್ಲಿ ಒಂದು ಇಂಗ್ಲಿಷ್ ಔಷಧಿಯ ಹೆಸರಿತ್ತು. ಡಾಕ್ಟರು ಕಣ್ಣುಬಿಟ್ಟು ಎಚ್ಚತ್ತಮೇಲೆ, ಆ ಔಷಧಿಯನ್ನು ತೆಗೆದುಕೊಂಡು ಆ ಮಗುವಿದ್ದ ಆಸ್ಪತ್ರೆಗೆ ಹೋಗಿ ಆ ಔಷಧಿಯನ್ನು ಕೊಡಲಾಗಿ, ಮಗು ಸಾವಿನ ಬಾಯಿಯಿಂದ ಬಿಡಿಸಿಕೊಂಡುಬಂದು ಸ್ವಸ್ಥವಾಗಿಬಿಟ್ಟಿತು !

* * * *

ಡಿಲ್ಲಿಯಲ್ಲಿ ನಡೆದದ್ದು

ಉತ್ತರದೇಶಯಾತ್ರೆಯಲ್ಲಿ ಸನ್ನಿಧಾನ ಹರಿದ್ವಾರಕ್ಕೆ ಹೋಗಬೇಕೆಂದು ಉದ್ದೇಶಿಸಿದ್ದರು. ಹರಿದ್ವಾರಕ್ಕೆ ಹೊರಡಬೇಕಾಗಿದ್ದ ದಿನ ಬೆಳಗ್ಗೆ ಹರಿದ್ವಾರದಲ್ಲಿ ಏನೋ ಒಂದು ಕ್ಷೋಭೆ ನಡೆಯುತ್ತಿದ್ದ ಕಾರಣದಿಂದ ಸರ್ಕಾರದವರು, ಎಲ್ಲಾ ಊರಲ್ಲೇ ಇರಬೇಕೆಂದು ಆಜ್ಞೆಯನ್ನು ಹೊರಡಿಸಿದ್ದರು. ಇದರಿಂದ ಯಾತ್ರಾ ಕ್ರಮವನ್ನು ಮಾರ್ಪಡಿಸಬೇಕಾದ ನಿರ್ಬಂಧವುಂಟಾಯಿತು. "ಮೊದಲು ಗಂಗಾಸ್ನಾನ ಮಾಡೋಣ ಎಂದು ನಾನು ಯೋಚಿಸಿದ್ದೆ. ಏನು ಹೀಗೆಲ್ಲಾ ಅದಕ್ಕೆ ಕುಂದಕಮಾಡುತ್ತೀರಿ" ಎಂದು ಕೋಪದಿಂದಲೂ, ವ್ಯಥೆಯಿಂದಲೂ ಹೇಳಿದರು.

ಸ್ವಲ್ಪ ಹೊತ್ತಿಗೆಲ್ಲಾ ಡಿಲ್ಲಿಯಲ್ಲಿರುವ ಶ್ರೀ ಕೆ. ಆರ್. ರಾವ್ ಅವರ ಪತ್ನಿ ಶ್ರೀಮತಿ ಜಯಮ್ಮ ಎಂಬಾಕೆ ಕೈಯಲ್ಲಿ ಒಂದು ಕೊಡ ತೆಗೆದುಕೊಂಡು ಬಂದು, "ಸನ್ನಿಧಾನವನ್ನು ಈಗಲೇ ದರ್ಶನ ಮಾಡಬೇಕು" ಎಂದಳು. ಒಳಗೆ ಹೋಗಲು ಅನುಮತಿ ದೊರೆಯಿತು. ಸನ್ನಿಧಾನವನ್ನು ನಮಸ್ಕರಿಸಿ "ಹರಿದ್ವಾರದಿಂದ ಗಂಗೆಯನ್ನು ತೆಗೆದುಕೊಂಡುಬಂದಿದ್ದೇನೆ, ಸ್ವೀಕರಿಸಬೇಕು" ಎಂದಳು. ಸನ್ನಿಧಾನಕ್ಕೆ ಉಂಟಾದ ಸಂತೋಷಕ್ಕೆ ಎಲ್ಲೆಯೇ ಇಲ್ಲ. ಗಂಗೆಯನ್ನು ತೆಗೆದುಕೊಂಡು, ತಾವು ಕೋರಿದ್ದ ಪ್ರಕಾರ ಗಂಗಾಸ್ನಾನವನ್ನು ಮಾಡಿದರು.

* * * *

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಶ್ಮೀರದಲ್ಲಿ ಒಂದು ಕಡೆ ಶ್ರೀ ಮಹಾಸನ್ನಿಧಾನದ ಉಪನ್ಯಾಸ ಏರ್ಪಡಿಸಲಾಗಿತ್ತು. ಸಭೆಯನ್ನು ಏರ್ಪಡಿಸಿದವರು ಮುಸ್ಲಿಮರು. ಅವರು ರಾಜ್ಯದ ಒಬ್ಬ ಮಂತ್ರಿ. ಸಭೆಯಲ್ಲಿ ಸೇರಿದ್ದವರಲ್ಲಿ ಹಿಂದುಗಳು, ಮುಸ್ಲಿಮರು ಕ್ರಿಶ್ಚಿಯನರು ಮುಂತಾದ ಹಲವರಿದ್ದರು. ಉಪನ್ಯಾಸದಲ್ಲಿ ಯಾರೊಬ್ಬರಿಗೂ ಮನನೋಯದಂತೆ ಹೇಗೆ ಹೇಳುತ್ತಾರೆ—ಎಂದು ಎಲ್ಲರೂ ಎದುರುನೋಡುತ್ತ ಇದ್ದರು. ಮಹಾಸನ್ನಿಧಾನ, "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಎಂಬ ವಾಕ್ಯವನ್ನು ತಿಳಿಯಾಗಿ ತಿಳಿಯುವಂತೆ ವಿವರಿಸಿ ಹೇಳಿ, ದೇವರು 'ರೂಪ ರಸ ಗಂಧವರ್ಜಿತಃ' (ರೂಪ ರಸ ಗಂಧ ಯಾವುದೂ ಇಲ್ಲದವನು) ಎಂದು ತೊಡಗಿ ಈಶ್ವರ ಸ್ವರೂಪವನ್ನು ಸುಲಭಲಾಗಿ ಅರ್ಥವಾಗುವಂತೆ ತಿಳಿಯ ಹೇಳಿದರು. ಎಲ್ಲರೂ ತಮ್ಮ ತಮ್ಮ ಮತದ ಸಿದ್ಧಾಂತಗಳೂ ಹೀಗೆಯೇತಾನೆ ಇರುವುದು—ಎಂದು ಆನಂದಹೊಂದಿದರು.

○ ○ ○ ○

ಯಾತ್ರೆಕಾಲದಲ್ಲಿ ಕೆಲವು ಸ್ಥಳಗಳಲ್ಲಿ ಯುದ್ಧವೀರರ ಸಮೂಹಕ್ಕೆ ಉಪನ್ಯಾಸಮಾಡಬೇಕಾದ ಸಂದರ್ಭವುಂಟಾಯಿತು.

ಹೈದರಾಬಾದಿನಲ್ಲಿ ಮಾತಾಡುತ್ತಿದ್ದಾಗ, "ಯುದ್ಧವೀರರುಗಳು ಸೇನಾಪತಿಯ ಅಪ್ಪಣೆಗೊಳಪಟ್ಟು ದೇಶವನ್ನು ಕಾಪಾಡುವುದಕ್ಕಾಗಿ ಧೈರ್ಯವಾಗಿ ಯುದ್ಧಮಾಡಬೇಕಾದದ್ದು ಅವಶ್ಯ. ಹಾಗೆ ಮಾಡುವುದು ಒಂದು ದೊಡ್ಡ ತಪಸ್ಸೇ ಆಗುವುದು" ಎಂದರು.

"ಚಿತ್ತೋರ್‌ಘರ್" ಎಂಬ ಊರು ವೀರರಮಣಿ ಪದ್ಮಿನಿ ಬಾಳಿದ ಸ್ಥಳ. ಅಲ್ಲಿ ಭಾಷಣಮಾಡುವಾಗ "ನಮ್ಮ ದೇಶವನ್ನು ಕಾಪಾಡುವುದರಲ್ಲಿ ಯುದ್ಧವೀರರುಗಳು ಧೈರ್ಯಸ್ಥೈರ್ಯಗಳಿಂದ ಸೇವೆ ಸಲ್ಲಿಸಬೇಕು. ಅದರಂತೆಯೇ ನಮ್ಮ ಸನಾತನ ಧರ್ಮವನ್ನು ಕಾಪಾಡುವುದರಲ್ಲಿಯೂ ನಾವೂ ಯುದ್ಧವೀರರ ಹಾಗೆಯೇ ಎಚ್ಚರಿಕೆಯಿಂದ ಇರಬೇಕು" ಎಂದರು.

ಹಿಮವತ್ಪರ್ವತದಲ್ಲಿ ಯಾತ್ರೆ ಮಾಡುತ್ತಿದ್ದ ಕಾಲದಲ್ಲಿ ಬದರಿಯ ಪಕ್ಕದಲ್ಲಿರುವ ಮನ[illegible] ಸ್ಥಳದಲ್ಲಿ ಸೈನ್ಯಾಧಿಕಾರಿಗಳನ್ನು ಸಂಧಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತಾಡುತ್ತಿದ್ದಾಗ, ಒಬ್ಬ ಯುದ್ಧವೀರ ಅಡಿಗಡಿಗೆ 'ವೆಂಕಟರಮಣಾ, ವೆಂಕಟರಮಣಾ' ಎಂದು ಹೇಳಿ ಆಜ್ಞೆಕೊಡುತ್ತಿರುವುದಾಗಿ ತಿಳಿಯಬಂತು. ಅದನ್ನು ಕೇಳಿ, ಯುದ್ಧ ಮಾಡುವಾಗ ಈಶ್ವರ ಧ್ಯಾನ ಮಾಡುವುದು ಬಹಳ ಅವಶ್ಯ' ಎಂದು ಒತ್ತಿ ಹೇಳಿದರು.

———

ಶ್ರೀ ಶಾರದಾದಾಸ (ಅಣ್ಣಾವಿ ರಾಮಕೃಷ್ಣಯ್ಯರ್, ಶೆಂಗೋಟ್ಟೈ)

ದಕ್ಷಿಣಾಮ್ನಾಯ ಪೀಠಾಧಿಪತಿ ಶ್ರೀ ಶೃಂಗೇರೀ ಶ್ರೀ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಪೊಳ್ಳಾಚ್ಚಿಯಲ್ಲಿ ತಂಗಿದ್ದ ಕಾಲದಲ್ಲಿ ತಿರುಪ್ಪೂರಿನಲ್ಲಿರುವ ಶಿವಭಕ್ತಿಸಂಪನ್ನರುಗಳು ಕೂಡಿ ನಡಸಿದ ಧರ್ಮಸಮ್ಮೇಳನದಲ್ಲಿ (ಅರುಳ್ ನೆಜಿ ತಿರಕ್ಕೂಟಂ) ಹಲವರು ಮಠಾಧಿಪತಿಗಳೂ ವಿದ್ವಾಂಸರುಗಳೂ ಭಾಗವಹಿಸಿ, ಶೈವವನ್ನೂ ಇತರ ಸಮಯವನ್ನೂ ಕುರಿತು, ಭಾಷಣಮಾಡಿದರು. ಆಗ ನಮ್ಮ ಪೂಜ್ಯ ಆಚಾರ್ಯರ ಬಳಿ ತಿರುಪ್ಪೂರಿನ ಸ್ನೇಹಿತರೊಬ್ಬರು ಮೇಲೆ ಹೇಳಿದ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ವಿದ್ವಾಂಸರೊಬ್ಬರನ್ನು ಕಳಿಸಬೇಕೆಂದು ಪ್ರಾರ್ಥಿಸಿದರು. ಪೊಳ್ಳಾಚ್ಚಿ ಮುಕ್ಕಾಮಿನಿಂದ ದಾಸನಿಗೆ ಒಂದು ಪತ್ರ ಬಂತು. ಅದರಲ್ಲಿ ತಿರುಪ್ಪೂರಿನ ಸಮ್ಮೇಳನದಲ್ಲಿ ಸೇರಿಕೊಂಡು ಸೇವೆ ಸಲ್ಲಿಸಬೇಕೆಂದು ಅಪ್ಪಣೆಯಿತ್ತು.

ಆ ಅಪ್ಪಣೆ ಪ್ರಕಾರ ಈ ದಾಸನು ತಿರುಪ್ಪೂರಿಗೆ ಹೋಗಿ ಸಮ್ಮೇಳನದಲ್ಲಿ ಸೇರಿದ್ದವರನ್ನು ಸಂಧಿಸಿದ್ದರಲ್ಲಿ, ನನಗಿಂತ ಬಲ್ಲವರೂ, ಹಲವಾರು ವೇದಿಕೆಗಳಲ್ಲಿ ಪ್ರಸಿದ್ಧರಾದವರೂ, ಧರ್ಮಾಭಿವೃದ್ಧಿಯಲ್ಲಿ ನಿರತರಾದ ಮಠಾಧಿಪತಿಗಳೂ ಇರುವುದನ್ನು ಕಂಡೆ. ಸಮ್ಮೇಳನ ಪ್ರಾರಂಭವಾಯಿತು. ಮೊದಲ ಸೇವೆ ಈ ದಾಸನಿಗೆ ದೊರೆಯಿತು. ಏನು ಹೇಳುವುದೆಂದು ತಿಳಿಯದೆ, ಸ್ವಲ್ಪ ಅಳುಕಿ ವೇದಿಕೆಯ ಸುತ್ತಮುತ್ತ ನೋಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿ ಗುರುನಾಥರ (ಶ್ರೀ ಅಭಿನವ ವಿದ್ಯಾತೀರ್ಥಸ್ವಾಮಿಗಳ) ಪಟವೊಂದಿತ್ತು. ಅದನ್ನು ಕಂಡು ಮನಸ್ಸಿನಲ್ಲಿ ನಮಸ್ಕಾರ ಮಾಡಿದೆ. ಆಮುಂದೆ ಏನು ಮಾತಾಡಿದೆನೆಂದು ನಾನೇ ತಿಳಿದುಕೊಳ್ಳಲಾರದ ರೀತಿಯಲ್ಲಿ, ಆದರೆ ಸಭೆಯಲ್ಲಿರುವವರು ಮೈಮರೆತು ಕೇಳುತ್ತಿರುವಂತೆ, ಉಪನ್ಯಾಸಮಾಡಿದೆ. ಕೇಳಿದವರೂ, ಅವತ್ತಿನ ಸಭಾಧ್ಯಕ್ಷರೂ ಸೇವೆಯನ್ನು ಹೊಗಳಿ ಮಾತಾಡಿದರು. ಇಷ್ಟುಮಾತ್ರವೇ:ಅಲ್ಲ, ನಾಲ್ಕು ದಿನಗಳೂ ದಾಸನಿಗೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಾಗ್ಯವೂ ದೊರೆಯಿತು. ಅವತ್ತು ಪಟದಲ್ಲಿ ದರ್ಶನ ಕೊಟ್ಟ ಗುರುನಾಥರು ದಾಸನಲ್ಲಿ ಪ್ರವೇಶಮಾಡಿ ಅನುಗ್ರಹಿಸಿದರು.

ಮಾರನೆಯದಿನ ದಾಸನು ಪೊಳ್ಳಾಚಿಗೆ ಬಂದು ದರ್ಶನಮಾಡಿದಾಗ, 'ಶ್ರೀ ಶಾರದಾಂಬೆಯು ಯಾವಾಗಲೂ ಜೊತೆಯಲ್ಲೇ ಇದ್ದು ನಿನಗೆ ಅನುಗ್ರಹಮಾಡುತ್ತಾಳೆ' ಎಂದು ಆಶೀರ್ವದಿಸಿದರು. ಇದನ್ನು 'ಭಕ್ತಹೃದಯ ಪ್ರವೇಶಾನುಗ್ರಹ' ಎಂದು ಹೇಳಬಹುದೆಂದು ಭಾವಿಸುತ್ತೇನೆ. ಇದೇ ರೀತಿ ದಾಸನು ಸೇವೆಸಲ್ಲಿಸುವ ಹಲವು ವೇದಿಕೆಗಳಲ್ಲಿ ನನಗೆ ಅರಿವಾಗದಂತೆಯೇ ಅನುಗ್ರಹಮಾಡುತ್ತ ಬರುತ್ತಿರುವ ಶ್ರೀಪಾದಗಳನ್ನು ಎಂದೆಂದೂ ಮರೆಯುವುದಿಲ್ಲ. ಇದೇ ರೀತಿ ಶ್ಲೋಕಗಳ ನೆನಪನ್ನೂ ತಂದುಕೊಡುತ್ತಾರೆ. ಒಂದು ಸಲ ಹೇಳಿದ ಅಭಿಪ್ರಾಯವನ್ನು ಮತ್ತೆ ಹೇಳದ ಹಾಗೆ ಹೊಸ ಹೊಸ ಅಭಿಪ್ರಾಯಗಳನ್ನು ಹೇಳುವಂತೆ ಮಾಡುತ್ತಾರೆ. ಶಿಷ್ಯರುಗಳ ಹೃದಯಗಳಲ್ಲಿಯೇ ಮೂಡಿಬಂದು ಅನುಗ್ರಹಮಾಡುವ ಸದ್ಗುರುನಾಥರನ್ನು ಈಶ್ವರನೆಂದೇ ಭಾವಿಸುತ್ತೇನೆ.

ಶ್ರೀ ಎ. ಶಂಕರನಾರಾಯಣ, ಬೆಂಗಳೂರು

ಮಹಾಸನ್ನಿಧಾನದ ಶಿಷ್ಯಸ್ವೀಕಾರ ಮಹೋತ್ಸವಕ್ಕಾಗಿ ನಾನೂ, ನನ್ನ ಪತ್ನಿಯೂ ಶೃಂಗೇರಿಗೆ ಹೋಗಿದ್ದೆವು. ೧೦–೧೧-೧೯೭೪ರಂದು ಪೂರ್ವಾಂಗಗಳು ನಡೆದವು. ಆಮೇಲೆ ೧೧–೧೧–೭೪ರಂದು ಬೆಳಗ್ಗೆ ತುಂಗಾನದಿಯ ತೀರದಲ್ಲಿ ಶಿಷ್ಯಸ್ವೀಕಾರಮಾಡಿಕೊಂಡ ಶ್ರೀ ಸ್ವಾಮಿಗಳು ಶಿಷ್ಯಸ್ವಾಮಿಗಳಿಗೆ,

Sri Vidyabharathi Book Centre, Sringeri

CC-O. In Public Domain. Digitized by eGangotri

"ಭಾರತೀ ತೀರ್ಥರು" ಎಂಬ ಯೋಗಪಟ್ಟವನ್ನು ನೀಡಿದರು. ಆ ಸಂಜೆ ಇಬ್ಬರು ಸ್ವಾಮಿಗಳಿಗೂ ಸಾರ್ವಜನಿಕರು ಸ್ವಾಗತ ನೀಡಿ ಪಾದಕಾಣಿಕೆಗಳನ್ನು ಸಲ್ಲಿಸಿದರು. ಮಹಾಸನ್ನಿಧಾನವು ವಿದ್ವಾಂಸರಿಗೆ ಸನ್ಮಾನ ನೀಡಿದರು. ಈ ಉತ್ಸವ ಮುಗಿಯಲು ಸಂಜೆ ೭ ಗಂಟೆ ಆಗಿಬಿಟ್ಟಿತು. ಜನಸಂದಣಿ ಬಹಳವಾಗಿದ್ದದ್ದರಿಂದ ಮಹಾಸನ್ನಿಧಾನವನ್ನು ಒಂಟಿಯಾಗಿರುವಾಗ ಕಾಣುವುದಕ್ಕಾಗಲಿಲ್ಲ. ನಾವು ಮರುದಿವಸ (೧೨ನೆಯ ತಾರೀಖು) ಬೆಳಗ್ಗೆಯೇ ಬೆಂಗಳೂರಿಗೆ ಹೋಗಬೇಕಾಗಿದ್ದದ್ದರಿಂದಲೂ ಮಹಾಸನ್ನಿಧಾನವನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲವೆಂಬಕಾರಣದಿಂದಲೂ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ಅಧಿಷ್ಠಾನಕ್ಕೆ ಹೋಗಿ ದರ್ಶನ ಮಾಡೋಣವೆಂದು ನಾವು ಅಲ್ಲಿ ಬಂದೆವು. ಅಲ್ಲಿ ಯಾರೂ ಇರಲಿಲ್ಲ. "ಮಹಾಸನ್ನಿಧಾನವನ್ನು ನೋಡಲಾಗಲಿಲ್ಲ. ಆದ್ದರಿಂದ ಮಹಾಸನ್ನಿಧಾನಕ್ಕೆ ತಿಳಿಸಿಬಿಡಿ" ಎಂದು ಶ್ರೀ ಚಂದ್ರಶೇಖರಭಾರತೀ ಅಧಿಷ್ಠಾನದಲ್ಲಿ ಧ್ಯಾನಮಾಡಿಬಿಟ್ಟು ಹಿಂದಿರುಗಿದಾಗ, ಮಹಾಸನ್ನಿಧಾನವು ಕಾಲಿನಲ್ಲಿ ಪಾದುಕೆಕೂಡ ಇಲ್ಲದೆ ನಡೆದುಕೊಂಡು ಬಂದರು. ಅವರಿಗೆ ನಮಸ್ಕಾರ ಮಾಡಿಬಿಟ್ಟು, "ಸಂದಣಿ ಹೆಚ್ಚಾಗಿದ್ದದ್ದರಿಂದ ಮಹಾಸನ್ನಿಧಾನವನ್ನು ಕಾಣಲು ಸಾಧ್ಯವಾಗಲಿಲ್ಲವಲ್ಲಾ ಎಂದು ವ್ಯಥೆಪಟ್ಟು, ಈಗಿನ್ನೂ ಧ್ಯಾನಮಾಡಿದೆವು. ಅಷ್ಟರೊಳಗೆ ತಾವು ಬಂದುಬಿಟ್ಟರಿ" ಎಂದೆ. ಆಮೇಲೆ ಮೂರು ನಿಮಿಷದಲ್ಲಿ ನನ್ನ ಕೊರತೆಗಳನ್ನೆಲ್ಲಾ ಹೇಳಿಕೊಂಡೆ. ಅವರೂ ಕೇಳಿಕೊಂಡು ಮಂದಹಾಸ ದೊಡನೆ ಆಶೀರ್ವಾದ ಮಾಡಿ ಒಳಕ್ಕೆ ಹೋದರು.

ಶ್ರೀ ಎಂ. ಪಿ. ಜಯರಾಮನ್, ಕೃಷ್ಣರಾಯಪುರಂ

ಕೃಷ್ಣರಾಯಪುರಂ, ಮಹಾದಾನಪುರಂ, ಕರುಪ್ಪತ್ತೂರು ಮೊದಲಾದ ಊರುಗಳಿಂದ ಹಲವು ಕುಟುಂಬಗಳು ಸೇರಿ ಒಂದು ಪ್ರತ್ಯೇಕ ಬಸ್ಸನ್ನು ೨೫–೯–೬೮ರಿಂದ ೯–೧೦–೬೮ ಪೂರ್ತಾ ಗೊತ್ತುಮಾಡಿಕೊಂಡು ಅದರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹತ್ತಿ ಶ್ರೀ ಜಗದ್ಗುರುಗಳನ್ನು ದರ್ಶಿಸಬೇಕೆಂದು ಶೃಂಗೇರಿಗೆ ಹೋದೆವು. ಆ ಬಸ್ಸು ಒಳ್ಳೆಯ ಸ್ಥಿತಿಯಲ್ಲಿರಲಿಲ್ಲ. ಅನೇಕ ಆಪತ್ತುಗಳು ನಡುವೆ ಸಂಭವಿಸಿದರೂ, ಶ್ರೀ ಜಗದ್ಗುರುಗಳ ಕೃಪೆಯಿಂದ ಕ್ಷೇಮವಾಗಿ ಶೃಂಗೇರಿಗೆ ಹೋಗಿ ಸೇರಿದೆವು. ಅವತ್ತು ಶ್ರೀ ಶಾರದಾಮ್ಮನವರಿಗೆ .ರಥೋತ್ಸವ ಆರಂಭವಾಗುವುದಕ್ಕೆ ಮುಂಚೆ ಯಾವುದೇ ಕ್ಷಣದಲ್ಲೇ ಆದರೂ ಮಳೆ ಸುರಿದುಬಿಡುವುದು ಎಂಬ ಸ್ಥಿತಿಯಲ್ಲಿ ಮೋಡಗಳು ಗರ್ಜಿಸುತ್ತಾ ಇದ್ದವು. ಶ್ರೀ ಜಗದ್ಗುರುಗಳು ಬಂದು ಕೆಲವು ನಿಮಿಷ ಆಕಾಶವನ್ನು ನೋಡಿ ಆಮೇಲೆ ಅಂಬಿಕೆಯನ್ನು ವಂದಿಸಿ. "ರಥೋತ್ಸವ ಆರಂಭವಾಗಲಿ" ಎಂದು ಅಜ್ಞಾಪಿಸಿ ರಥದ ಮುಂದೆ ಚಿನ್ನದ ಪಲ್ಲಕ್ಕಿಯಲ್ಲಿ ಕೂತುಕೊಂಡು, ಕೈಮುಗಿದುಕೊಂಡೇ ಅಂಬಿಕೆಯನ್ನು ನೋಡುತ್ತಲೇ ಮುಂದೆ ಸರಿದರು. ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಮುಸುರಿಕೊಂಡಿದ್ದರು. ರಥೋತ್ಸವ ಮುಗಿಯುವುದರೊಳಗೆ ಮಳೆ ನಿಶ್ಚಯವಾಗಿ ಬಂದುಬಿಡುವುದೆಂದು ಎಲ್ಲರೂ ಬಾವಿಸಿದ್ದರು. ಆದರೆ. ಏನಾಶ್ಚರ್ಯ ! ಆ ದಿವಸವೆಲ್ಲ ಮೋಡಗಳು ಕೆಳಗೆ ಇಳಿಯಲಿಲ್ಲ, ಮಳೆಯು ಬರಲೇ ಇಲ್ಲ.

ಮಾರನೆಯ ದಿನ ಮಳೆಯ ಸೂಚನೆಯೇ ಇಲ್ಲದಿರಲು, ಶ್ರೀ ಜಗದ್ಗುರುಗಳು, 'ನಿನ್ನೆ ಬಂದ ಮಳೆ ಹೋಗಿಬಿಟ್ಟಿತು. ಆದರೆ ಇವತ್ತು ಬರುತ್ತದೆ' ಎಂದು ಹೇಳಿದರು. ಸ್ವಲ್ಪ ಹೊತ್ತಿನಲ್ಲೇ ಮಳೆ ಸುರಿಯತೊಡಗಿತು, ನಾವುಗಳೆಲ್ಲರೂ ಫಲಮಂತ್ರಾಕ್ಷತೆ ತೆಗೆದುಕೊಳ್ಳುವುದಕ್ಕೆಂದು ಹೋದೆವು. ಆಗ ಶ್ರೀ ಜಗದ್ಗುರುಗಳು, "ಯಾತ್ರಾಮಾರ್ಗ ಹೇಗೆ ?" ಎಂದು ವಿಚಾರಿಸಿದರು. 'ಕೊಲ್ಲೂರು, ಉಡುಪಿ, ಗುರುವಾಯೂರು, ಕಾಲಟಿ' ಎಂದು ತಿಳಿಸಿದೆವು. ಒಡನೆಯೇ ಶ್ರೀ ಸನ್ನಿಧಾನವು, "ಕೊಲ್ಲೂರು, ಉಡುಪಿ, ಕಳ್ಳಿಕೋಟೆ—ಸೌಕರ್ಯವಾಗಿ ಇರುತ್ತದೆ" ಎಂದು ಅನುಗ್ರಹಿಸಿದರು. ಅದಕ್ಕೆ ನಾವು "ಗ್ರಹಣಕ್ಕೆ ಮುಂಚೆ ಕಾಲಟಿಗೆ ಸೇರಿಬಿಡುತ್ತೇವೆ" ಎಂದು ಹೇಳಿದರೂ ಅವರು ಮತ್ತೊಮ್ಮೆ "ಕಳ್ಳಿಕೋಟೆಯ ಸಾರ್ವಜನಿಕ ಮಠ ಸೌಕರ್ಯ" ಎಂದು ಹೇಳಿದರು. ನಮ್ಮ ಯಾತ್ರೆಯೂ ಕೊಲ್ಲೂರು—ಉಡುಪಿಯವರೆಗೂ ಸೌಕರ್ಯವಾಗಿತ್ತು. ಆಮೇಲೆ ಗುರುವಾಯೂರಿಗೆ ಬರುವುದರೊಳಗೆ, ಬಸ್ಸಿನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತೊಂದರೆಯುಂಟಾದ್ದರಿಂದ ಕಳ್ಳಿಕೋಟೆಗೆ ಬಂದು ಸೇರುವಂತೆ ಆಯಿತು. ಗ್ರಹಣಕಾಲದಲ್ಲಿ ಕಳ್ಳಿಕೋಟೆಯಲ್ಲೇ ಇದ್ದೆವು. ಆಮೇಲೂ ನಾವು ಗುರುವಾಯೂರಿಗೆ ಹೋಗುವುದಕ್ಕೆ ಪ್ರಯತ್ನಮಾಡಿದರೂ ಸಾಧ್ಯವಾಗದೆ, ಶ್ರೀ ಜಗದ್ಗುರುಗಳ ವಾಕ್ಯದ ಪ್ರಕಾರ ಊರಿಗೆ ಹಿಂದಿರುಗುವಂತಾಯಿತು.

ಶ್ರೀ ಷಣ್ಮುಗನಾಥನ್, ವಕೀಲ, ದಿಂಡುಗಲ್ಲು

೧೯೬೪ರಲ್ಲಿ ಶೃಂಗೇರೀ ಜಗದ್ಗುರು ಮಹಾಸನ್ನಿಧಾನವು ತೆನ್‌ಕಾಶಿಗೆ ಪಕ್ಕದಲ್ಲಿರುವ ಕುತ್ತಾಲದಲ್ಲಿ ಚಾತುರ್ಮಾಸ್ಯವ್ರತ ಅನುಷ್ಠಾನಮಾಡುತ್ತಿದ್ದರು. ನಾನು ಪ್ರತಿವರ್ಷವೂ ಜಲಪಾತವನ್ನು ನೋಡಿ ಸಂತೋಷಪಡುವುದಕ್ಕಾಗಿ ಕುತ್ತಾಲಕ್ಕೆ ಹೋಗುವುದುಂಟು. ಅದರಂತೆ ಈ ವರ್ಷವೂ ಹೋಗಬೇಕೆಂದು ನನ್ನ ಸ್ನೇಹಿತ ಶ್ರೀ ಇಲಂಜಿ ಚಿದಂಬರಂ ಪಿಳ್ಳೆಗೆ ಬರೆದಿದ್ದೆ. ಗೊತ್ತುಮಾಡಿಕೊಂಡಿದ್ದ ದಿನ ನಾನು ತೆನ್‌ಕಾಶಿ ರೈಲ್ವೆ ಸ್ಟೇಷನ್ನಿನಲ್ಲಿ ಇಳಿದೆ. ಶ್ರೀ ಚಿದಂಬರಂಪಿಳ್ಳೆ ತಮ್ಮ ಕಾರಿನಲ್ಲಿ ನನ್ನನ್ನು ಬರಮಾಡಿಕೊಂಡರು. "ಕಾರು ಕಳಿಸಿದ್ದರೆ ಸಾಕಾಗಿತ್ತಲ್ಲ. ನೀವೇಕೆ ಬರಬೇಕು?" ಎಂದೆ. "ಬೇರೆ ಮಾತಾಡದೆ ಕಾರಿನಲ್ಲಿ ಕೂತುಕೊಳ್ಳಿ" ಎಂದರು. ಕಾರು ಹೊರಟಿತು. ಇಲಂಜಿಗೆ ಹೋಗುವ ದಾರಿಯಲ್ಲಿ ತಿರುಗದೆ ಕುತ್ತಾಲದ ದಾರಿಯಲ್ಲಿ ಹೋಯಿತು. "ಇದೇನು ನಿಮ್ಮೂರಿಗೆ ಕಾರು ಹೋಗುವುದಿಲ್ಲವೇ?" ಎಂದೆ. ಉತ್ತರ ಹೇಳಲಿಲ್ಲ. ಕಾರು ಕುತ್ತಾಲದ ಜಲಪಾದದ ಹತ್ತಿರ ಹೋಗಿ ನಿಂತಿತು. ಆಗ ಪಿಳ್ಳೆಯವರು ಜಲಪಾತದಲ್ಲಿ ಸ್ನಾನ ಮಾಡಿ ಬರುವಂತೆ ನನಗೆ ಹೇಳಿದರು. ನಾನು ಸ್ನಾನ ಮುಗಿಸಿಕೊಂಡು ಬಂದೆ. ಒಂದು ಜೊತೆ ರೇಷ್ಮೆವಸ್ತ್ರವನ್ನು ನನಗೆ ಕೊಟ್ಟು ಉಟ್ಟುಕೊಳ್ಳುವಂತೆ ಹೇಳಿದರು. ನನಗೆ ಒಂದೂ ತಿಳಿಯಲಿಲ್ಲ. "ಏನು ವಿಶೇಷ?" ಎಂದು ಅವರನ್ನು ನಾನು ಕೇಳಿದೆ. "ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂ ಅವರು ಕುತ್ತಾಲದಲ್ಲಿ ಮುಕ್ಕಾಂ ಮಾಡಿದ್ದಾರೆ. ನೀವು ಅವರ ದರ್ಶನಮಾಡಬೇಕು" ಎಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಹಿಂದಿನ ಶೃಂಗೇರೀ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ೧೯೩೬ನೆಯ ವರ್ಷ ರಾಮನಾಥಪುರ ಜಿಲ್ಲೆಯಲ್ಲಿ ಯಾತ್ರೆ ಮಾಡುತ್ತಿದ್ದ ಕಾಲದಲ್ಲಿ ಅವರ ದರ್ಶನಮಾಡಿದ್ದೆ. ಆದರೆ, ಅವರಾದ ಮೇಲೆ ಪೀಠಕ್ಕೆ ಬಂದವರನ್ನು ದರ್ಶಿಸಿರಲಿಲ್ಲ. ಪಿಳ್ಳೆಯವರು ಹೇಳಲಾಗಿ ನನಗೆ ಮನಸ್ಸಿನಲ್ಲಿ ಸಂತೋಷವಾಯಿತು. ಒಡನೆಯೇ ಪಟ್ಟುವಸ್ತ್ರಗಳನ್ನುಟ್ಟುಕೊಂಡು ತಟ್ಟೆಯಲ್ಲಿ ತೆಂಗಿನಕಾಯಿ, ಹಣ್ಣು, ಹೂವು ಇವನ್ನೆಲ್ಲಾ ತೆಗೆದುಕೊಂಡು ಶ್ರೀ ಸ್ವಾಮಿಗಳು ತಂಗಿದ್ದ ಶ್ರೀ ರಾಜಪಾಳೆಯಂ ರಾಮಸ್ವಾಮಿರಾಜಾ ಅವರ ಬಂಗ್ಲೆಗೆ ಹೋದೆ. ಶ್ರೀ ಸ್ವಾಮಿಗಳು ಮಹಡಿಯಲ್ಲಿದ್ದರು. ಮಹಡಿಗೆ ಹೋಗುವ ಮೆಟ್ಟಲಿನಲ್ಲಿ ನನ್ನ ಜೊತೆಯಲ್ಲಿ ಓದಿದ್ದ ಸ್ನೇಹಿತರು, ತೆನ್‌ಕಾಶಿ ವಕೀಲರು ಕೃಷ್ಣಸ್ವಾಮಿ ಅಯ್ಯರ್ ನಿಂತುಕೊಂಡಿದ್ದರು. ಅವರು ನನ್ನನ್ನು ನೋಡಿದೊಡನೆ, "ಬಾ, ಷಣ್ಮುಖಾ ; ಸ್ವಲ್ಪ ಹೊತ್ತು ನಿಂತುಕೊ. ಮೇಲೆ ದರ್ಶನಕ್ಕೆ ಹೋಗಿರುವ ಶಿಷ್ಯರುಗಳು ಕೆಳಕ್ಕೆ ಬಂದುಬಿಡುತ್ತಾರೆ" ಎಂದರು. ಸ್ವಲ್ಪ ಹೊತ್ತಿನಲ್ಲಿ ನಾನು, ಇಲಂಜಿಪಿಳ್ಳೆಯವರು, ವಕೀಲ ಕೃಷ್ಣಸ್ವಾಮಿ ಅಯ್ಯರ್ ಮೂವರೂ ಶ್ರೀ ಮಹಾಸನ್ನಿಧಾನದ ಮುಂದೆ ಹೋಗಿ ನಮಸ್ಕಾರ ಮಾಡಿ, ಅವರ ಅಪ್ಪಣೆ ಪ್ರಕಾರ ಕೆಳಗೆ ಕೂತುಕೊಂಡೆವು.

ಶ್ರೀ ಮಹಾಸನ್ನಿಧಾನಕ್ಕೆ ನನ್ನನ್ನು ಇಬ್ಬರು ಸ್ನೇಹಿತರೂ ಪರಿಚಯ ಮಾಡಿಕೊಟ್ಟರು. ಒಡನೆಯೇ ಮಹಾಸನ್ನಿಧಾನ ನನ್ನನ್ನು ಕುರಿತು, "ಶ್ರೀವಿದ್ಯೆಯಲ್ಲಿ ನಿಮಗೆ ಉಪಾಸನೆಯ ಅನುಭವವುಂಟು ಎಂದು ಕೇಳಿದೆ; ಮಂತ್ರಶಾಸ್ತ್ರದಲ್ಲಿ ಎಷ್ಟು ಮಟ್ಟಿನ ಪರಿಚಯ ?" ಎಂದು ಕೇಳಿದರು. "ಏನೋ ಸ್ವಲ್ಪ ಗೊತ್ತು. ಶ್ರೀಚಕ್ರವನ್ನಿಟ್ಟು ಪೂಜೆಮಾಡುತ್ತೇನೆ. ಹೆಚ್ಚು ತಿಳಿಯದು" ಎಂದೆ. ಒಡನೆಯೇ ತೆನ್‌ಕಾಶಿ ವಕೀಲ ಕೃಷ್ಣಸ್ವಾಮಿ ಅಯ್ಯರನ್ನು ಮಹಾಸನ್ನಿಧಾನವು, "ಅಯ್ಯ ಬೇರೆ ಜಾತಿಯವರು ಬಂದು ನಿಮ್ಮ ಮನೆಯಲ್ಲಿ ಶ್ರೀಚಕ್ರಕ್ಕೆ ನವಾವರಣಪೂಜೆಮಾಡುವುದರಲ್ಲಿ ನಿಮಗೆ ಆಕ್ಷೇಪವುಂಟೇ ?" ಎಂದರು.

ವಕೀಲರು : ಏನೂ ಆಕ್ಷೇಪವಿಲ್ಲ.

ಮಹಾಸನ್ನಿಧಾನ : ಹಾಗಾದರೆ, ನಾಳೆ ದಿನ ಶುಕ್ರವಾರ ನಿಮ್ಮ ಮನೆಯಲ್ಲಿ ಶ್ರೀ ಷಣ್ಮುಖನವರು ಶ್ರೀಚಕ್ರಕ್ಕೆ ನವಾವರಣಪೂಜೆಮಾಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಠದಿಂದ ಪೂಜಾದ್ರವ್ಯಗಳನ್ನು ಕಳಿಸಲಾಗುತ್ತದೆ. ನೀವು ನಡಸಿಕೊಡಿ. (ಇಲಂಜಿ ಚಿದಂಬರಂಪಿಳ್ಳೆಯವರನ್ನು ಕುರಿತು) ಆ ಪೂಜೆಯ ಕಾಲದಲ್ಲಿ ಜೊತೆಯಲ್ಲಿದ್ದು ದರ್ಶನಮಾಡಿರಿ.

ಮಾರನೆಯ ದಿನ ಶುಕ್ರವಾರ ತೆನ್‌ಕಾಶಿ ವಕೀಲ ಕೃಷ್ಣಸ್ವಾಮಿ ಅಯ್ಯರ ಮನೆಯಲ್ಲಿ ಪೂಜೆಗೆ ಏರ್ಪಾಡು ನಡೆಯಿತು. ವಕೀಲರ ಪತ್ನಿ ದೇವಿಯ ನೈವೇದ್ಯಗಳನ್ನು ಸಿದ್ಧಮಾಡಿದರು. ನವಾವರಣ ಪೂಜೆ ನಡೆಯಿತು. ಪೂಜೆ ಆರಂಭವಾಗುವ ಸಮಯದಲ್ಲಿ ಒಬ್ಬ ಹಿರಿಯರು ಪೂಜೆ ನಡೆಯುವ ಸ್ಥಳದಲ್ಲಿ ನನ್ನ ಎದುರಿಗೆ ಕೂತುಕೊಂಡರು. ಪೂಜೆ ಮುಗಿಯುವವರೆಗೂ ಎಲ್ಲವನ್ನೂ ಅವರು ಗಮನಿಸುತ್ತಲೇ ಕುಳಿತಿದ್ದರು. ಪೂಜೆ ಮುಗಿಯಿತು. ಯಾರಿಗೆ ವಿಶೇಷ ಪ್ರಸಾದವನ್ನು ಕೊಡಬೇಕೆಂದು ಕೃಷ್ಣಸ್ವಾಮಿ ಅಯ್ಯರನ್ನು ಕೇಳಿದೆ. (ವಿಶೇಷ ಪ್ರಸಾದವನ್ನು ಶ್ರೀವಿದ್ಯಾ ಉಪಾಸಕರುಗಳಿಗೆ ಮಾತ್ರವೇ ಕೊಡಬೇಕು.) ಕೃಷ್ಣಸ್ವಾಮಿ ಅಯ್ಯರು ಆ ಹಿರಿಯರನ್ನು ತೋರಿಸಲಾಗಿ ವಿಶೇಷ ಅರ್ಘ್ಯ ಪ್ರಸಾದವನ್ನು ಅವರಿಗೆ ಕೊಟ್ಟೆ. ಅವರು ಅದನ್ನು ತೆಗೆದುಕೊಂಡು ಏನೂ ಹೇಳದೇ ಅವರು ಹೊರಟುಹೋದರು. ಚಿದಂಬರಂಪಿಳ್ಳೆ ಪೂಜೆ ಮೊದಲಿನಿಂದ ಮುಗಿಯುವವರೆಗೂ ನನ್ನ ಎದುರಿಗೇ ಕೂತುಕೊಂಡಿದ್ದರು.

ಆಮೇಲೆ ಸಂಜೆ ೩ ಗಂಟೆ ಮೇಲೆ ನನ್ನನ್ನು ಶ್ರೀ ಮಹಾಸನ್ನಿಧಾನದ ದರ್ಶನಕ್ಕೆ ಕರಸಿ, ನಾನು ಅಲ್ಲಿ ಹೋದೆ. ಶ್ರೀ ಕೃಷ್ಣಸ್ವಾಮಿ ಅಯ್ಯರೂ ಚಿದಂಬರಂಪಿಳ್ಳೆಯೂ ನನ್ನ ಜೊತೆ ಇದ್ದರು.

ಶ್ರೀ ಮಹಾಸನ್ನಿಧಾನವು (ನನ್ನನ್ನು ಕುರಿತು) ನಿನ್ನ ಪೂಜೆಯನ್ನು ಗಮನಿಸುವುದಕ್ಕೆ ನಮ್ಮ ಮಠದ ಪುರೋಹಿತರನ್ನು ಕಳಿಸಿದ್ದೆವು. ಕ್ರಮ ಪ್ರಕಾರವಾಗಿ ಸರಿಯಾಗಿ ನಡಸಿದೆ ಎಂದು ತಿಳಿದು ಸಂತೋಷಪಟ್ಟೆವು.

(ಚಿದಂಬರಂ ಪಿಳ್ಳೆಗೆ) ಇಲಂಜಿಯಲ್ಲಿ ನಿಮ್ಮ ಮನೆಯಲ್ಲಿ ನಾನು ಶುಕ್ರವಾರ ಶ್ರೀಚಕ್ರ ಪೂಜೆಮಾಡುವಾಗ ನೀನು ನಿನ್ನ ಮನಸ್ಸಿನಲ್ಲಿ ಏನು ಯೋಚಿಸಿದೆ ?

ಚಿದಂಬರಂಪಿಳ್ಳೆ : ಜ್ಞಾಪಕವಿಲ್ಲ ಸ್ವಾಮಿ.

ಶ್ರೀ ಮಹಾಸನ್ನಿಧಾನ: ಯೋಚಿಸಿ ನೋಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿದಂಬರಂಪಿಳ್ಳೆ : ಒಂದೂ ಜ್ಞಾಪಕಬರಲಿಲ್ಲ. ಸ್ವಾಮಿಾ !

ಶ್ರೀ ಮಹಾಸನ್ನಿಧಾನ : ಈರೀತಿಯಾಗಿ ಶ್ರೀಚಕ್ರಕ್ಕೆ ನಾನೂ ಪೂಜೆ ಮಾಡುವುದಕ್ಕೆ ಅನುಮತಿ ಸಿಕ್ಕುತ್ತದೆಯೇ ಎಂದು ಯೋಚಿಸಿದೆ ಯಲ್ಲವೇ ?

ಚಿದಂಬರಂಪಿಳ್ಳೆ : ಹೌದು, ಹೌದು, ಸ್ವಾಮಿಾ. ಅದನ್ನು ನಾನು ಬಹಿರಂಗವಾಗಿ ಹೇಳಲಿಲ್ಲ.

ಶ್ರೀ ಮಹಾಸನ್ನಿಧಾನ:—(ನನ್ನನ್ನು ಕುರಿತು) ಷಣ್ಮುಖನಾಥರೇ, ಚಿದಂಬರಂಪಿಳ್ಳೆಯವರಿಗೆ ಶ್ರೀ ದೇವೀಮಂತ್ರವನ್ನು ನೀವೇ ಉಪದೇಶಮಾಡಿ. ಪೂಜಾಕ್ರಮವನ್ನೂ ಕಲಿಸಿ ನೀವೇ ಅವರಿಂದ ಶ್ರೀಚಕ್ರ ಪೂಜೆಯನ್ನು ಆರಂಭಮಾಡಿಸಿರಿ. ಅವರು ಕ್ರಮ ಪ್ರಕಾರವಾಗಿ ಪೂಜೆಮಾಡಲಿ. ಶ್ರೀಚಕ್ರವನ್ನು ನಿಮ್ಮ ಪೂಜೆಯಲ್ಲಿ ಇಟ್ಟುಕೊಂಡಿರುವುದರ ಹಾಗೆಯೇ ನೀವೇ ಸಿದ್ಧಮಾಡಿ ಅವರಿಗೆ ಕೊಡಿ.

ನನ್ನ ಆಶ್ಚರ್ಯಕ್ಕೆ ಎಲ್ಲೆಯೇ ಇಲ್ಲ. ಚಿದಂಬರಂಪಿಳ್ಳೆಯವರು ತಮ್ಮ ಮನಸ್ಸಿನಲ್ಲಿ ಮಾತ್ರ ಯೋಚಿಸಿ, ಬಹಿರಂಗವಾಗಿ ತಿಳಿಯಪಡಿಸದೆಯೇ ಇದ್ದದ್ದನ್ನು ಗುರುಗಳು ಇಷ್ಟೊಂದು ಸ್ಪಷ್ಟವಾಗಿ ತಿಳಿದುಕೊಂಡು, ಶ್ರೀಚಕ್ರಕ್ಕೆ ಹಿಂದೂ ಮುಂದೂ ಬಳಕೆಯಿಲ್ಲದ ನನಗೆ ಪೂಜೆ ಮಾಡ ಹೇಳಿ, ಅದು ಕ್ರಮಬದ್ಧವಾಗಿರುವುದನ್ನು ಅರಿತುಕೊಂಡು, ಅದನ್ನು ಪಿಳ್ಳೆಯವರಿಗೆ ಉಪದೇಶಮಾಡಿಸಿ, ಶಿಷ್ಯನ ಮನೋಭೀಷ್ಟವನ್ನು ಪೂರ್ತಿಮಾಡಿದ ಅವರ ಅಪರಿಮಿತ ಪ್ರೀತಿಯನ್ನು ನೆನೆದು ನನ್ನ ಸ್ನೇಹಿತರ ಬಳಿ ಹೇಳುತ್ತಲೇ ಇರುತ್ತೇನೆ. ಶ್ರೀ ಮಹಾಸನ್ನಿಧಾನದ ಅಪ್ಪಣೆಯ ಪ್ರಕಾರ ಇಲಂಜಿ ಚಿದಂಬರಂಪಿಳ್ಳೆ ಅವರಿಗೆ ಶ್ರೀವಿದ್ಯಾ ಮಂತ್ರವನ್ನು ಉಪದೇಶಿಸಿ, ಶ್ರೀಚಕ್ರಪೂಜೆಯನ್ನೂ ವಿಧಿಪ್ರಕಾರವಾಗಿ ಹೇಳಿಕೊಟ್ಟೆ. ಅವರು ಸಂತೋಷವಾಗಿ ಪೂಜೆಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ

ಆರನೆಯ ವಿಜಯಯಾತ್ರೆಯ ಕಡೆಯ ಭಾಗ

(೧೪೩ನೆಯ ಪುಟದಿಂದ ಮುಂದುವರೆದದ್ದು)

ಶ್ರೀ ಮಹಾಸನ್ನಿಧಾನಗಳವರು ಶ್ರೀ ಸನ್ನಿಧಾನಗಳವರೊಡನೆ ೧೪-೨.೭೭ ರಂದು ಕಲ್ಕತ್ತವನ್ನು ತಲುಪಿದರು.

ಕಲ್ಕತ್ತದಿಂದ ಖರಗಪುರಕ್ಕೆ ಪ್ರಯಾಣ ಮಾಡಿ ೪-೩-೭೭ರಂದು ಅಲ್ಲಿ ತಂಗಿದ್ದು ೫-೩-೭೭ ರಂದು ಜಮ್‌ಷದ್‌ಪುರಕ್ಕೆ ಹೋಗಿ ಸೇರಿದರು. ಅಲ್ಲಿ ನೆಲಸಿದ್ದ ದಕ್ಷಿಣ ಭಾರತೀಯರು ಐದು ಲಕ್ಷ ರೂಪಾಯಿ ಮುಟ್ಟಿಸಿ ನೂತನವಾಗಿ ನಿರ್ಮಿಸಿದ್ದ "ಧರ್ಮಶಾಸ್ತಾ" ದೇವಾಲಯದ ಪ್ರತಿಷ್ಠಾಪನೋತ್ಸವವನು ಶ್ರೀ ಮಹಾಸನ್ನಿಧಾನ ನೆರವೇರಿಸಿದರು. ೧೩-೩-೭೭ರಂದು ಸನ್ನಿಧಾನಗಳವರು "ಗುಜರಾತು ಸನಾತನ ಸಮಾಜ"ಕ್ಕೆ ಭೇಟಿ ಕೊಟ್ಟರು. ೧೪ನೆಯ ತಾರೀಖು ಜಮ್‌ಷದ್‌ಪುರವನ್ನು ಬಿಟ್ಟು ಖರಗಪುರಕ್ಕೆ ಪ್ರಯಾಣ ಮಾಡಿದರು. ೧೫ ರಂದು ಅಲ್ಲಿ ತಂಗಿದ್ದು ೧೬-೩-೭೭ ರಂದು ಕಲ್ಕತ್ತಕ್ಕೆ ಹಿಂದಿರುಗಿದರು.

೨೦-೩-೭೭ರಂದು ಕಲ್ಕತ್ತ ನಗರದಲ್ಲಿ "ತಮಿಳ್ ಮನ್‌ಜಿಮ್" (ತಮಿಳು ಸಂಘ)ದ ರಜತೋತ್ಸವವನ್ನು ಆರಂಭಗೊಳಿಸಿದರು. ಶ್ರಿ ಸನ್ನಿಧಾನ ಶ್ರೀ ಭಾರತೀ ತೀರ್ಥ ಸ್ವಾಮಿಗಳ ವರ್ಧಂತಿ ಮಹೋತ್ಸವವನ್ನು ೨೬-೩-೭೭ರಂದು ಆಚರಿಸಲಾಯಿತು. ಆ ಸಂದರ್ಭದಲ್ಲಿ ಶ್ರೀ ಗೌರೀನಾಥ ಶಾಸ್ತ್ರಿ, ಶ್ರೀ ಎಸ್. ವೈ. ಕೃಷ್ಣಸ್ವಾಮಿ, ಶ್ರೀ ಎ. ವಿ. ಸುಬ್ರಮನಿಯನ್ ಇವರುಗಳು ಭಾಗವಹಿಸಿ ಶ್ರೀ ಸನ್ನಿಧಾನದ ಮಹತ್ವವನ್ನು ವಿವರಿಸಿ ಭಾಷಣ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸನ್ನಿಧಾನಂಗಳವರು ೩೦-೩-೭೭ರ ಸಂಜೆ ಬದ್ವಾರ್ನಿಗೆ ಆಗಮಿಸಿದರು. ಅಲ್ಲಿಂದ ಹೊರಟು ಸಿಂದ್ರಿ, ಹಜಾರಿಬಾಗ್, ನಳಂದಗಳನ್ನು ಸಂದರ್ಶಿಸಿ ೩-೪-೭೭ ರಂದು ಪಾಟ್ನ ನಗರಕ್ಕೆ ಬಂದು ಸೇರಿದರು. ಪಾಟ್ನದಿಂದ ಹೊರಟು ಶಿವನ್‌ಗೆ (Sivan) ೫-೪-೭೭ರಂದು ತಲುಪಿದರು. ಅಲ್ಲಿಂದ ಗೋರಖ್‌ಪುರದತ್ತ ಪ್ರಯಾಣ ಬೆಳೆಸಿದರು. ಅಲ್ಲಿಂದ ಮುಂದುವರಿದು ಬಸ್ತಿ, ಅಯೋಧ್ಯೆಗಳಿಗೆ ಭೇಟಿ ಕೊಟ್ಟು ೧೦-೪-೭೭ರಂದು ಲಕ್ನೋಗೆ ತಲುಪಿದರು. ಲಕ್ನೋದಿಂದ ನೈಮಿಷಾರಣ್ಯಕ್ಕೆ ಪ್ರಯಾಣ; ೧೨ನೆಯ ತಾರೀಖು ಸಂಜೆ ಅಲ್ಲಿಗೆ ತಲುಪಿದರು. ಅಲ್ಲಿಂದ ಮುಂದೆ ಷಹಜಹನ್‌ಪುರ, ಮುರಾದಾಬಾದ್ ಮತ್ತು ಗುರುಮುಕ್ತೇಶ್ವರಗಳಿಗೆ ಭೇಟಿ.

ಶ್ರೀ ಜಗದ್ಗುರು ಮಹಾಸನ್ನಿಧಾನ ಮತ್ತು ಶ್ರೀ ಸನ್ನಿಧಾನಗಳು ೧೬-೪-೭೭ರಂದು ದೆಹಲಿ ನಗರವನ್ನು ತಲುಪಿದರು. ವಸಂತ ವಿಹಾರದಲ್ಲಿರುವ ಶೃಂಗೇರಿ ಶಂಕರ ಮಠಕ್ಕೆ ಎರಡು ಫರ್ಲಾಂಗು ದೂರವಿರುವಾಗಲೇ ಪಶ್ಚಿಮ ಮಾರ್ಗದ ಸಂಧಿಸ್ಥಾನದಲ್ಲಿ ಪೂರ್ಣಕುಂಭ ಸಮೇತವಾದ ಸಮಸ್ತ ವಿಶೇಷ ಮರ್ಯಾದೆಗಳೊಡನೆ ಶ್ರೀ ಜಗದ್ಗುರುಗಳವರುಗಳನ್ನು ಸ್ವಾಗತಿಸಲಾಯಿತು. ಜ್ಯೋತಿ ಮಠದ ಜಗದ್ಗುರುಗಳು ಸಂಪೂರ್ಣಾನಂದಜಿ ಮಹರಾಜ್ ಅವರೂ ಅವರೊಡನೆ ಸೇರಿದರು. ಶ್ರೀ ಗುರುಗಳು ಇಳಿದುಕೊಳ್ಳುವುದಕ್ಕೆ ಶ್ರೀ ಶಂಕರ ವಿದ್ಯಾ ಕೇಂದ್ರದಲ್ಲಿ ವ್ಯವಸ್ಥೆ ಮಾಡಿತ್ತು. ಬಹು ವೈಭವದ ಸಾರ್ವಜನಿಕ ಸ್ವಾಗತ ಸಮಾರಂಭ ಏರ್ಪಟ್ಟು, ಭಕ್ತಿ ಪೂರ್ವಕವಾದ ಸ್ವಾಗತ ಭಾಷಣಗಳನ್ನು ನಿವೇದಿಸಲಾಯಿತು.

೧೯-೪-೭೭ ರಿಂದ ೨೩-೪-೭೭ರ ವರೆಗೆ ಶ್ರೀ ಶಂಕರ ಜಯಂತಿ ಉತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಿತು. ಆ ದಿನಗಳಲ್ಲಿ ಸಂಜೆ ಹೊತ್ತು ವಿದ್ವತ್‌ಸದಸ್ಸು ನಡೆಸಲು ಏರ್ಪಡಿಸಿತ್ತು. ೧೯-೪-೭೭ ರಂದು ಕೇಂದ್ರ ವಿದ್ಯಾ ಮಂತ್ರಿ ಡಾ|| ಪ್ರತಾಪಚಂದ್ರ ಅವರು ಸದಸ್ಸನ್ನು ಆರಂಭಗೊಳಿಸಿದರು. ನ್ಯಾಯಮೂರ್ತಿ ಶ್ರೀ ಎ. ಆರ್. ಸೋಮನಾಥಯ್ಯರವರು ಸ್ವಾಗತ ಭಾಷಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದರು. 'ಶ್ರೀಮತ್ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿ ವಿದ್ಯಾ ಸಮಿತಿ' ಪ್ರಕಟಿಸಿದ 'ಶ್ರೀ ಭಗವತ್ಪಾದ ಚರಿತಮ್' ಎಂಬ ಪುಸ್ತಕವನ್ನು ಕೇಂದ್ರ ವಿದ್ಯಾ ಮಂತ್ರಿಗಳು ಬಿಡುಗಡೆ ಮಾಡಿದರು.

೨೪-೪-೭೭ ರಂದು ಉಭಯ ಸನ್ನಿಧಾನಗಳವರೂ ವಸಂತ ವಿಹಾರದ ಸಮೀಪದಲ್ಲಿ ಗುಡ್ಡದ ಮೇಲಿರುವ ಶ್ರೀ ಸುಬ್ರಹ್ಮಣ್ಯಸ್ವಾಮಿಯ ದೇವಾಲಯವನ್ನು ಸಂದರ್ಶಿಸಿದರು. ಅಲ್ಲಿ ದೇವಾಲಯದ ಸಕಲ ಮರ್ಯಾದೆಗಳೊಡನೆ ಅವರನ್ನು ಬರಮಾಡಿಕೊಳ್ಳಲಾಯಿತು. ೨೬-೪-೭೭ರಲ್ಲಿ ಕೆಂಪು ಕೋಟೆಯ (**Red Fort**) ಎದುರಿಗೆ ಚೌಕದಲ್ಲಿರುವ ಶ್ರೀ ಗೌರೀಶಂಕರಸ್ವಾಮಿಯ ದೇವಾಲಯಕ್ಕೆ ಜ್ಯೋತಿರ್ಮಠದ ಜಗದ್ಗುರುಗಳನ್ನೂ ಒಡಗೊಂಡು ದಯಮಾಡಿಸಿ ದರ್ಶನ ಮಾಡಿದರು. ೨೭-೪-೭೭ ರಂದು ಉಭಯ ಸನ್ನಿಧಾನಗಳವರೂ ಮೀರತ್ ಮಾರ್ಗವಾಗಿ ಹರಿದ್ವಾರಕ್ಕೆ ಪ್ರಯಾಣ ಬೆಳೆಸಿದರು.

೨೯-೪-೭೭ ರಂದು ಭಕ್ತ ಶ್ರೀ ತಂಡನ್ ಅವರ ಪ್ರಾರ್ಥನೆ ಸಮ್ಮತಿಸಿ ಮುಸಫರ್ ನಗರದಲ್ಲಿ ತಂಗಿದ್ದು, ೩೦-೪ ೭೭ರಂದು ದೆಹಲಿಗೆ ಹಿಂದಿರುಗಿದರು. ಕರೋಲ್ ಬಾಗಿನಲ್ಲಿ ಮೂರು ದಿನ ಬಿಡದಿ ಮಾಡಿದ್ದರು. ಶ್ರೀ ಸನ್ನಿಧಾನಂಗಳವರು ಎಲ್ಲೆಲ್ಲಿ ಹೋಗುತ್ತಿದ್ದರೋ ಅಲ್ಲೆಲ್ಲಾ ಜನರಿಗೆ ಹರ್ಷದ ಸುರಿಮಳೆ ಸುರಿಸುತ್ತಿದ್ದರು.

೧-೫-೭೭ರಂದು ಉಭಯ ಸನ್ನಿಧಾನಂಗಳವರೂ ಅರ್ವಿನ್ ರೋಡಿನಲ್ಲಿರುವ ಶ್ರೀ ಹನುಮಾನ್ ದೇವಾಲಯಕ್ಕೆ ಬಿಜಯ ಮಾಡಿದರು. ಈ ದೇವಸ್ಥಾನ ಅಕ್ಬರ್ ಚಕ್ರವರ್ತಿ ಕಟ್ಟಿಸಿದ್ದು. ಆಮೇಲೆ ಅಲ್ಲೇ ಸಮೀಪದಲ್ಲಿದ್ದ ಗಣೇಶ ಮಂದಿರ ಮತ್ತು ಶಿವಮಂದಿರಗಳನ್ನೂ ದರ್ಶಿಸಿದರು. 'ಡಿ.ಟಿ.ಇ.ಎ.' ಸಂಸ್ಥೆ ನಡೆಸುತ್ತಿರುವ 'ರೀಡಿಂಗ್ ರೋಡಿ'ನಲ್ಲಿರುವ ಮದರಾಸಿ ಸ್ಕೂಲಿಗೂ ಭೇಟಿ ನೀಡಿದರು.

ಶ್ರೀ ರಾಮತೀರ್ಥ ಆಶ್ರಮಕ್ಕೆ ಸನ್ನಿಧಾನಗಳವರನ್ನು ಕರೆಸಿಕೊಂಡು ಉತ್ತರ ಭಾರತದ ಶಿಷ್ಯರುಗಳು ತಮ್ಮ ಹೃತ್ಪೂರ್ವಕವಾದ ಭಕ್ತಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವೇದಿಸಿ ಗುರುಗಳ ಆಶೀರ್ವಾದವನ್ನು ಪಡೆದರು. ೨-೫-೭೭ರಂದು ಶ್ರೀ ನೃಸಿಂಹ ಜಯಂತಿಯನ್ನು ಆಚರಿಸಲಾಯಿತು. ಅಂದು ಶ್ರೀ ಮಹಾಸನ್ನಿಧಾನವು ಮಧ್ಯಾಹ್ನ ೧೨ ರಿಂದ ೨-೩೦ರ ವರೆಗೂ ನಡೆಸಿದ ವಿಶೇಷ ಪೂಜೆಯನ್ನು ಕಂಡು ಅಲ್ಲಿ ನೆರೆದಿದ್ದ ಅಸಂಖ್ಯಾತ ಭಕ್ತರು ಆನಂದ ಹೊಂದಿದರು.

ದೆಹಲಿಯ ಮಹಾಜನಗಳಿಗೆ ೧೯೭೭ರ ಮೇ ೩ನೆಯ ದಿನ ಬಹುಮುಖ್ಯವಾದ ದಿನ. ಅಂದು ನಮ್ಮ ಮಹಾಸನ್ನಿಧಾನ ಶ್ರೀಮತ್ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ವರ್ಧಂತಿ. ಈ ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಸಾವಿರಾರು ಜನ ಉತ್ಸಾಹದಿಂದ ಬಂದು ನೆರೆದಿದ್ದರು. ಆ ದಿನ ಸಂಜೆ ನವದೆಹಲಿಯ (New Delhi) ಪ್ರಖ್ಯಾತ ವಿಜ್ಞಾನ ಭವನದಲ್ಲಿ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಆ ಸಂಜೆ ಶ್ರೀ ಜ್ಯೋತಿರ್ಮಠದ ಜಗದ್ಗುರು ಸ್ವರೂಪಾನಂದಜಿ ಮಹಾರಾಜರೂ ಅಲ್ಲಿ ಉಪಸ್ಥಿತರಾಗಿದ್ದರು. ಶ್ರೀ ಗೋಪಾಲಶಾಸ್ತ್ರಿ, ಶ್ರೀ ಧರ್ಮವೀರ, (ಕರ್ಣಾಟಕದ ಮಾಜಿ ರಾಜ್ಯಪಾಲರು, ಪಂಡಿತ್ ಡಾ|| ಮಂಡನಮಿಶ್ರ ಮತ್ತು ಪಂಡಿತ್ ಶ್ರೀ ಗಿರಿಧರಲಾಲ ಗೋಸ್ವಾಮಿ ಇವರುಗಳು ಶೃಂಗೇರಿ ಮಠದ ಮತ್ತು ಶ್ರೀ ಮಹಾಸನ್ನಿಧಾನಂಗಳವರ ಮಹತ್ವವನ್ನು ಕೊಂಡಾಡಿ ಪ್ರಶಂಸೆಗಳನ್ನರ್ಪಿಸಿದರು ಜಗದ್ಗುರು ಸ್ವರೂಪನಂದಜಿಯವರು ಕೂಡ ಆ ಸಂದರ್ಭದಲ್ಲಿ ಮಾತಾಡಿ ನಮ್ಮ ಮಹಾಸನ್ನಿಧಾನವನ್ನು ಪ್ರಶಂಸಿಸಿದರು. ಸುಮಾರು ೨೫ ಸ್ಥಳೀಯ ಸಂಸ್ಥೆಗಳು ನಮ್ಮ ಜಗದ್ಗುರು ಮಹಾಸನ್ನಿಧಾನಕ್ಕೆ ಭಕ್ತಿವಂದನೆಗಳನ್ನು ಭಿನ್ನವಿಸಿಕೊಂಡರು. ಶ್ರೀ ಸನ್ನಿಧಾನ ಅನುಗ್ರಹ ಭಾಷಣ ಮಾಡಿದ ಬಳಿಕ, ನಮ್ಮ ಮಹಾಸನ್ನಿಧಾನವು ನೆರೆದ ಭಕ್ತವೃಂದಕ್ಕೆಲ್ಲಾ ಶ್ರೇಯಸ್ಸು ಕೋರಿ ಆಶೀರ್ವದಿಸಿದರು.

೫-೫-೭೭ರಂದು ಮ ಹಾ ಸನ್ನಿ ಧಾ ನ, ಶ್ರೀ ಸನ್ನಿಧಾನ ಮತ್ತು ಶ್ರೀ ಸ್ವರೂಪಾನಂದಜಿ ಮಹಾರಾಜರು ಈ ಮೂವರು ವಸಂತ ವಿಹಾರದಲ್ಲಿನ ಶ್ರೀ ಆದಿಶಂಕರ, ಶ್ರೀ ಚಂದ್ರಶೇಖರ ಮತ್ತು ಶ್ರೀ ಶಾರದಾಂಬಾ ದೇವಾಲಯಗಳಿಗೆ ಹೊಸದಾಗಿ ಕಟ್ಟಿದ ಗೋಪುರಗಳಿಗೆ ಕುಂಭಾಭಿಷೇಕ ನೆರವೇರಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಸಂದರ್ಭದಲ್ಲಿ ಶ್ರೀ ಮಹಾಸನ್ನಿಧಾನವು ಅಲ್ಲಿ ಸೇರಿದ್ದ ದೆಹಲಿಯ ಮಹಾಜನ ಗಳಿಗೂ ಭಕ್ತವೃಂದಕ್ಕೂ ಕೃಪಾಪೂರ್ವಕವಾಗಿ ಆಶೀರ್ವಾದ ಮಾಡಿದರು.

ಶ್ರೀ ಜಗದ್ಗುರುಗಳು ದೆಹಲಿಯಲ್ಲಿ ವಸತಿ ಮಾಡಿದ್ದ ಕಾಲದಲ್ಲಿ ಡೆಲ್ಲಿಯ ತಮಿಳು ವಿದ್ಯಾ ಸಂಘ (ತಮಿಳ್ ಎಜುಕೇಷನ್ ಅಸೋಸಿಯೇಷನ್), ದಕ್ಷಿಣ ಭಾರತೀಯ ಸಂಘ, (ಸೌತ್ ಇಂಡಿಯನ್ ಅಸೋಸಿಯೇಷನ್), ಭಜನ ಸಂಘ, ರಾಧಾಗೋವಿಂದ ಮಂದಿರ ಮತ್ತು ಇತರ ಸಂಸ್ಥೆಗಳ ಆಹ್ವಾನ ಆದರ ಗೌರವ ಗಳನ್ನು ಅಂಗೀಕರಿಸಿ, ಲಕ್ಷ್ಮೀಬಾಯಿ ನಗರ, ಸರೋಜಿನೀ ನಗರ, ರಾಮಕೃಷ್ಣ ಪುರ, ರೂಪನಗರ, ಜನಕಪುರಿ ಮತ್ತು ಇತರ ಪ್ರದೇಶಗಳಿಗೆ ದಯಮಾಡಿಸಿ. ಅನುಗ್ರಹಿಸಿದರು.

೨೩-೫-೭೭ ರಿಂದ ೨೮-೬-೭೭ರ ವರೆಗೆ ಶ್ರೀ ಸನ್ನಿಧಾನಂಗಳವರು ಉತ್ತರ ಪ್ರದೇಶ (ಯು.ಪಿ.), ಬಿಹಾರ, ಒರಿಸ್ಸಾ ರಾಜ್ಯಗಳಿಗೆ ಭೇಟಿ ದಯಪಾ ಲಿಸಿದರು. ಮಧುರಾ, ಬೃಂದಾವನ, ಆಗ್ರಾ, ಇಟಾವಾ, ಕಾನ್‌ಪುರ, ಅಲಹಾ ಬಾದ್, ವಾರಣಾಸಿ, ರಾಬರ್ಟ್ಸ್‌ಗಂಜ್, ದುಧಿನಗರ, ಡೌಲತ್‌ಗಂಜ್, ಛಂದೇವ, ರಾಂಚಿಗಳಿಗೆ ಹೋಗಿದ್ದು ೭-೬ ೭೭ರಲ್ಲಿ ಜೆಮ್‌ಷೆದ್‌ಪುರಕ್ಕೆ ತಲ್ಪಿ ದರು. ಅವರು ಜೆಮ್‌ಷೆದ್‌ಪುರದಲ್ಲಿ ಮೂರು ದಿನ ತಂಗಿದ್ದರು, ಅಲ್ಲಿಂದ ಹೊರಟು ಜಮ್‌ದ, ರೂರ್‌ಕೆಲಾ, ಬಾರ್‌ಕೋಟೆ, ಸಂಬಲ್‌ಪುರ, ಲಕಿತ್, ಕಟಕ್, ಭವನೇಶ್ವರ, ಪುರಿ, ಖುರ್ದ ಮತ್ತು ಬರ್‌ಹಾಂಪುರಗಳನ್ನು ಸಂದರ್ಶಿ ಸಿದರು.

ಬರ್‌ಹಾಂಪುರದಲ್ಲಿ ಅಸ್ಕಾ ರೋಡಿಗೆ ಪ್ರವೇಶಿಸುವ ಸ್ಥಳದಲ್ಲಿ ಸ್ಥಳೀಯ ಮಹಾಜನರು ಶ್ರೀ ಸನ್ನಿಧಾನಂಗಳವರಿಗೆ ಸ್ವಾಗತ ನೀಡಿದರು. ಅವರು ಶ್ರೀ ಭಗವಾನ್‌ದಾಸ್ ಚತುರ್ಭುಜದಾಸರವರ ಧರ್ಮಶಾಲೆಯಲ್ಲಿ ಬಿಡಾರ ಮಾಡಿದ್ದರು. ಅವರು ಅಲ್ಲಿ ತಂಗಿದ್ದ ಕಾಲದಲ್ಲಿ ಶ್ರೀ ಕನ್ಯಾಕಾಪರಮೇಶ್ವರೀ ದೇವಸ್ಥಾನ ಮತ್ತು ಜಗನ್ನಾಥ ದೇವಸ್ಥಾನಗಳನ್ನು ಸಂದರ್ಶಿಸಿದರು. ಕನ್ಯಾಕಾ ಪರಮೇಶ್ವರೀ ದೇವಸ್ಥಾನದಲ್ಲಿ ಶ್ರೀ ಗುರುಗಳಿಗೆ ಸಂಸ್ಕೃತದಲ್ಲಿ ಸ್ವಾಗತ ಪತ್ರಿಕೆ

Sri Vidyadhiraja Book Centre, Sringeri

CC-O. In Public Domain. Digitized by eGangotri

ಗಳನ್ನು ಸಮರ್ಪಿಸಲಾಯಿತು. ಜಗನ್ನಾಥ ದೇವಾಲವನ್ನು ಶ್ರೀ ಚೌಧರಿ ಎಂಬುವರು ಪುರಿಯ ಸುಪ್ರಸಿದ್ಧ ಜಗನ್ನಾಥ ದೇವಾಲಯದ ಮಾದರಿಯಲ್ಲಿ ಸುಂದರವಾಗಿ ಕಟ್ಟಿಸಿದರು.

ಶ್ರೀ ಸನ್ನಿಧಾನಂಗಳವರು ೨೯–೬–೭೭ ರಂದು ಬಹ್ಮಾಂಪುರ, (ಬ್ರಹ್ಮಾಪುರ)ವನ್ನು ಬಿಟ್ಟು ಹೊರಟು ಶ್ರೀಕಾಕುಳವನ್ನು ತಲುಪಿದರು. ಅಲ್ಲಿಂದ ಮುಂದೆ ವಿಜಯನಗರ, ವಿಶಾಖಪಟ್ಟಣ, ಅನಕಪಲ್ಲಿ, ತುನಿ, ಸೋಮಾವರ, ಪೀಠಾಪುರ, ಕಾಕಿನಾಡ, ರಾಮಚಂದ್ರಪುರ ಮತ್ತು ಕೋಟಿಪಲ್ಲಿಗಳನ್ನು ಸಂದರ್ಶಿಸಿ, ೧೧–೭–೭೭ರಂದು ಅಮಲಾಪುರಕ್ಕೆ ಬಂದು ಸೇರಿದರು. ಅಮಲಾಪುರದಿಂದ ಪ್ರಯಾಣ ಮಾಡಿ ಶ್ರೀ ಜಗದ್ಗುರುಗಳು ಕೊತ್ತಪೇಟೆ, ಅಶ್ವರಾವ್ ಪೇಟೆ, ಭದ್ರಾಚಲ, ಖಮ್ಮ ಮತ್ತು ಸೂರ್ಯಪೇಟೆಗಳ ಮಾರ್ಗವಾಗಿ ೨೭–೭–೭೭ ರಂದು ಹೈದರಾಬಾದನ್ನು ತಲುಪಿದರು.

೧೯೭೭ನೆಯ ವರ್ಷದ ಚಾತುರ್ಮಾಸ್ಯವನ್ನು ಹೈದರಾಬಾದಿನಲ್ಲಿ ನೆರವೇರಿಸಿದರು. 'ನ್ಯೂ' (ಹೊಸ) ನಲ್ಲಕೊಂಟ ರೋಡಿನಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ನಮ್ಮ ಜಗದ್ಗುರುಗಳು ಬಿಡಾರ ಮಾಡಿದರು. ಅಲ್ಲಿ ೩೦–೭–೭೭ ರಂದು ಶ್ರೀ ಜಗದ್ಗುರುಗಳು ನಡೆಸಿದ ವ್ಯಾಸಪೂಜೆ ಮತ್ತು ಚಾತುರ್ಮಾಸ್ಯ ಸಂಕಲ್ಪಗಳನ್ನು ದರ್ಶಿಸಲು ದೇಶದ ನಾನಾ ಭಾಗಗಳಿಂದ ಬಹುಮಂದಿ ಭಕ್ತರು ಬಂದು ಸೇರಿದ್ದರು. ಆ ದಿನ ಸಂಜೆ ಒಂದು ವಿಶೇಷ ಸಮಾರಂಭದಲ್ಲಿ ಶ್ರೀ ಮಹಾಸನ್ನಿಧಾನ ಮತ್ತು ಶ್ರೀ ಸನ್ನಿಧಾನಗಳಿಬ್ಬರೂ ಅನುಗ್ರಹ ಭಾಷಣ ಮಾಡಿ ಭಕ್ತ ಸಮೂಹವನ್ನು ಆಶೀರ್ವದಿಸಿದರು.

ಆ ವರ್ಷದ ಗಣೇಶ ಚತುರ್ಥಿ ಮತ್ತು ಆ ಸಂದರ್ಭದಲ್ಲಿ ಗಣೇಶ ಚತುರ್ಥಿ ಮಹೋತ್ಸವದ ಅಂಗವಾಗಿ ನಡೆಸುವ ವಿದ್ವತ್ಸದಸ್ಸುಗಳನ್ನು ಹೈದರಾಬಾದಿನಲ್ಲೇ ನಡೆಸಲಾಯಿತು.

ಚಾತುರ್ಮಾಸ್ಯ ವ್ರತವನ್ನು ನೆರವೇರಿಸಿದ ಮೇಲೆ ಶ್ರೀ ಜಗದ್ಗುರು ಸನ್ನಿಧಾನಂಗಳವರು ಹೈದರಾಬಾದಿನಿಂದ ಹೊರಟು, ೨೯–೯–೭೭ ರಂದು ಸಂಜೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಜಯವಾಡಕ್ಕೆ ಬಂದು ಸೇರಿದರು. ಮಾರ್ಗದಲ್ಲಿ ಕೋಡಡ (Kodada) ವನ್ನು ಭೇಟಿ ಮಾಡಿದರು. ವಿಜಯವಾಡದಿಂದ ಪ್ರಯಾಣ ಬೆಳಸಿ, ಮಚಲಿ ಪಟ್ಟಣ, ಗುಡಿವಾಡ, ತೆನಾಲಿ, ರೂಪಲ್ಲೆಗಳನ್ನು ಸಂದರ್ಶಿಸಿ ೧೦-೧೦-೭೭ರ ಸಂಜೆ ಗುಂಟೂರನ್ನು ತಲುಪಿದರು.

ಆ ವರ್ಷದ ನವರಾತ್ರಿಯ ಮಹೋತ್ಸವವನ್ನು ಜಗದ್ಗುರುಗಳವರು ಗುಂಟೂರಿನ ಪಾರ್ವತಿಪುರದಲ್ಲಿರುವ ಶ್ರೀ ಶೃಂಗೇರಿ ಮಠದಲ್ಲಿ ಬಹು ವೈಭವದಿಂದ ನೆರವೇರಿಸಿದರು. ನವರಾತ್ರಿ ಮಹೋತ್ಸವ ನೆರವೇರಿದ ಬಳಿಕ ಅಲ್ಲಿಂದ ಪ್ರಯಾಣ ಹೊರಟು ಮಾರ್ಗದಲ್ಲಿ ಹಲವು ಕಡೆಗಳಲ್ಲಿ ತಂಗಿದ್ದು ೨೯-೧೦-೭೭ ರಲ್ಲಿ ಮದರಾಸಿಗೆ ತಲುಪಿದರು.

* * *

ಶ್ರೀ ಶ್ರೀ ಮಹಾಸನ್ನಿಧಾನಂಗಳವರ ವರ್ಧಂತಿ ಮಹೋತ್ಸವ

(ಶ್ರೀ ಪಿ. ಹರಿಹರನ್)

ಷಷ್ಟ್ಯಬ್ದ ಪೂರ್ತಿ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಲು ಒಂದು ಕಾರ್ಯಕಾರಿ ಸಮಿತಿಯು ನಿಯಾಮಕವಾಯಿತು. ಸಮಿತಿಗೆ ರಾಜಾ ಸರ್ ಎಂ. ಎ. ಮುತ್ತಯ್ಯ ಚೆಟ್ಟಿಯಾರ್ ಅವರು ಅಧ್ಯಕ್ಷರಾಗಿಯೂ, ಗುರುಭಕ್ತ ಶಿರೋಮಣಿ ಧರ್ಮಾತ್ಮಾ ಪದ್ಮಶ್ರೀ ವಿ. ವೈದ್ಯ ಸುಬ್ರಮಣ್ಯ ಅಯ್ಯರವರು ಕಾರ್ಯದರ್ಶಿಗಳಾಗಿಯೂ, ದೇಶಾದ್ಯಂತ ಕೈಗಾರಿಕೋದ್ಯಮಿಗಳೂ ಮತ್ತು ಮಠದ ಶಿಷ್ಯರನೇಕರೂ ಸದಸ್ಯರಾಗಿ ನಿಯಮಿತರಾದರು. ಉಭಯ ಜಗದ್ಗುರುಗಳವರನ್ನೂ ೨೯-೧೦-೭೭ ರಂದು ಸ್ವಾಗತಿಸಲಾಯಿತು. ೩೦-೧೦-೭೭ ರಿಂದ ೧೦-೧೧-೭೭ರವರೆಗೆ ಉತ್ಸವವು ಬಹಳ ವಿಜೃಂಭಣೆಯಿಂದ ನರವೇರಿತು.

೨೯-೧೦-೭೭ ರಂದು ಸಾಯಂಕಾಲ ೬ ಗಂಟೆಗೆ ಮದರಾಸಿನ ಮೈಲಾಪುರದಲ್ಲಿರುವ ಶ್ರೀ ಕಪಾಲೀಶ್ವರಸ್ವಾಮಿ ದೇವಾಲಯದ ಬಳಿ ಶ್ರೀ ಶ್ರೀ ಜಗದ್ಗುರು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳವರನ್ನು ಪೂರ್ಣಕುಂಭದೊಡನೆ ಸ್ವಾಗತಿಸಿ, ಮಹಾಸನ್ನಿಧಾನಂಗಳವರು ಮತ್ತು ಸನ್ನಿಧಾನಂಗಳವರನ್ನು ಪಲ್ಲಕ್ಕಿಗಳಲ್ಲಿ ದೇವಸ್ಥಾನದಿಂದ ಮೈಲಾಪುರದ ಬೀದಿಗಳ ಮೂಲಕ ರಾಜಾ ಅಣ್ಣಾ ಮಲೈಪುರದಲ್ಲಿರುವ 'ನವಸುಜ' ನಿವಾಸಕ್ಕೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ದೇವಾಲಯದಲ್ಲಿ ನೆರೆದಿದ್ದ ಭಕ್ತರ ಸಂಖ್ಯೆ ಹತ್ತು ಸಾವಿರಕ್ಕೂ ಮೀರಿತ್ತು. ದಾರಿಯುದ್ದಕ್ಕೂ ಎರಡು ಕಡೆಯೂ ರಸ್ತೆಯ ಬದಿಯಲ್ಲೂ ಮನೆಗಳ ಮಹಡಿಗಳಲ್ಲೂ ಜಗದ್ಗುರುಗಳ ದರ್ಶನಕ್ಕಾಗಿ ಜನಸಮೂಹವು ನೆರೆದಿತ್ತು. ಜಗದ್ಗುರುಗಳ ನಿವಾಸ ಮತ್ತು ಷಷ್ಟ್ಯಬ್ದ ಪೂರ್ತಿ ಮಹೋತ್ಸವವು ಏರ್ಪಾಡಾಗಿದ್ದ 'ನವಸುಜ'ದಲ್ಲಿ ಅತಿ ಸುಂದರವಾಗಿ ನಿರ್ಮಾಣವಾಗಿದ್ದ ಪೂಜಾ ಮಂಟಪದಲ್ಲಿ ಶ್ರೀ ವೈದ್ಯ ಸುಬ್ರಹ್ಮಣ್ಯಂ ಅವರು ಧೂಳೀಪಾದ ಪೂಜೆ ನೆರವೇರಿಸಿದರು. ಸ್ವಾಗತ ಸಮಿತಿಯ ಪರವಾಗಿ ಸಂಸ್ಕೃತದಲ್ಲೂ ತಮಿಳು ಭಾಷೆಯಲ್ಲೂ ಸ್ವಾಗತ ಪತ್ರಗಳು ಸಮರ್ಪಿಸಲ್ಪಟ್ಟವು.

ಮುಂದಿನ ಹನ್ನೆರಡು ದಿನಗಳಲ್ಲಿ ಅತಿ ವಿಸ್ತಾರವಾದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಮದರಾಸಿನ ಜನ ಸಮೂಹವಲ್ಲದೆ ದೇಶಾದ್ಯಂತ ಎಲ್ಲಾ ಕಡೆಗಳಿಂದಲೂ ಶ್ರೀ ಮಠದ ಶಿಷ್ಯರು ಆಗಮಿಸಿದರು. ಸಹಸ್ರ ಚಂಡೀಯಾಗ, ಅತಿರುದ್ರಮಹಾಯಾಗ, ಯಜುಸ್ಸಂಹಿತಾ ಹೋಮ, ಸುದರ್ಶನಹೋಮ ಮತ್ತು ಇತರ ಹೋಮಗಳೂ ನೆರವೇರಿಸಲ್ಪಟ್ಟವು. ಎಲ್ಲಾ ಪ್ರಾಂತಗಳಿಂದಲೂ ಆಗಮಿಸಿದ್ದ ೨೬೦ ಋತ್ವಿಜರು ಈ ಯಜ್ಞ ಕಾರ್ಯಗಳಲ್ಲಿ ಭಾಗವಹಿಸಿದ್ದರು. ಯಾಗಶಾಲೆಯನ್ನು 'ನವಸುಜ' ಗೃಹದ ಎದುರಿನಲ್ಲಿರುವ ಶ್ರೀ ಶೃಂಗೇರಿ ಪ್ರವಚನ ಮಂದಿರದ ಪಕ್ಕದಲ್ಲಿ ನಿರ್ಮಿಸಲಾಗಿತ್ತು. ಯಾಗಶಾಲೆ ಮತ್ತು ಪ್ರವಚನ ಮಂದಿರಗಳಲ್ಲಿ ಸುಮಾರು ೫೦೦೦ ಜನರು ನಿಂತು ಯಜ್ಞ ಕಾರ್ಯಗಳನ್ನು ವೀಕ್ಷಿಸಲು ಅವಕಾಶವಿತ್ತು. ಮೇಲೆ ಹೇಳಿದ ಋತ್ವಿಕರಲ್ಲದೆ ನಾಲ್ಕು ವೇದಗಳ ಪಾರಾಯಣಕ್ಕಾಗಿ ಸುಮಾರು ೧೫೦ ಮಂದಿ ಪಂಡಿತರುಗಳು ಆಗಮಿಸಿದರು. ಎಲ್ಲೆಲ್ಲೂ ವೇದಘೋಷವೇ ಕೇಳುತ್ತಿತ್ತು. ವೇದಪರೀಕ್ಷೆಗಳೂ ಸಹ ಏರ್ಪಾಡಾಗಿದ್ದು ವೇದ, ಕ್ರಮ ಮತ್ತು ಘನದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರಿಗೆ ಪ್ರಶಸ್ತಿ ಪತ್ರಗಳನ್ನೂ ಸಂಭಾವನೆಯನ್ನೂ ಕೊಡಲಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ನವೆಂಬರ್ ೫ ರಿಂದ ೭ರ ವರೆಗೆ ಪ್ರತಿದಿನವೂ ಮಧ್ಯಾಹ್ನ ಮೂರು ಗಂಟೆಗೆ ವಿದ್ವತ್ ಸದಸ್ಸು ಏರ್ಪಾಡಾಗಿ ಶ್ರೀ ಶ್ರೀ ಮಹಾಸನ್ನಿಧಾನಂಗಳವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಸನ್ನಿಧಾನಂಗಳವರೂ ಉಪಸ್ಥಿತರಾಗಿದ್ದರು. ದೇಶದಾದ್ಯಂತ ಎಲ್ಲಾ ಕಡೆಗಳಿಂದಲೂ ಪಂಡಿತರುಗಳು ಭಾಗವಹಿಸಿದ್ದರು. ಪ್ರತಿದಿನವೂ ಹತ್ತು ಮಂದಿ ಪಂಡಿತರಿಗೆ ಕಡಮೆ ಇಲ್ಲದೆ ವಾಕ್ಯಾರ್ಥ ನಡೆಸಿದರು. ಉಭಯ ಜಗದ್ಗುರುಗಳವರೂ ಉಪದೇಶ ಮಾಡಿ ಚರ್ಚೆಯನ್ನು ಮುಕ್ತಾಯಗೊಳಿಸುತ್ತಿದ್ದರು. ಪಂಡಿತರಿಗೆ ಶಾಲುಗಳು ಮತ್ತು ಸಂಭಾವನೆ (ಪ್ರಯಾಣ ವೆಚ್ಚ ಸಮೇತ) ಕೊಟ್ಟು ಗೌರವಿಸಲಾಯಿತು.

ಹನ್ನೆರಡು ದಿನಗಳ ಕಾರ್ಯಕ್ರಮಗಳು ಚೆನ್ನಾಗಿ ಏರ್ಪಾಡಾಗಿದ್ದು ಒಂದೊಂದು ದಿನ ತಮಿಳುನಾಡಿನ ಒಂದೊಂದು ಜಿಲ್ಲೆಯ ಅಥವಾ ಒಂದೊಂದು ಇತರ ಪ್ರಾಂತ್ಯದ ಅಥವಾ ನಗರದ ಶಿಷ್ಯರ ಪರವಾಗಿ ಶ್ರೀ ಶ್ರೀ ಗುರುಗಳವರಿಗೆ ಭಿಕ್ಷಾವಂದನೆ ಮತ್ತು ಪಾದಪೂಜೆಗಳು ನೆರವೇರಿಸಲ್ಪಡುತ್ತಿದ್ದವು.

೩೦-೧೦-೧೯೭೭ ರಂದು ಮಧುರೆ ರಾಮನಾಥಪುರಂ ಮಹಾಜನಗಳು, ೩೧-೧೦-೭೭ ರಂದು ತಂಜಾವೂರು ಜಿಲ್ಲೆಯ ಮಹಾಜನಗಳು, ೧-೧೧-೭೭ ರಂದು ಕೊಯಮುತ್ತೂರು ಮಹಾಜನಗಳು, ೨-೧೧-೭೭ ರಂದು ತಿರುನೆಲ್ವೇಲಿ ಮಹಾಜನಗಳು, ೩-೧೧-೭೭ ರಂದು ರಾಜಾ ಅಣ್ಣಾಮಲೈಪುರಂ ಮಹಾಜನಗಳು, ೪-೧೧-೭೭ ರಂದು ಸುವಾಸಿನಿಯರು, ೫-೧೧-೭೭ ರಂದು ಬೊಂಬಾಯಿ ಮಹಾಜನಗಳು, ೬.೧೧-೭೭ ರಂದು ಆಂಧ್ರ ಪ್ರದೇಶದ ಮಹಾಜನಗಳು, ೭-೧೧-೭೭ ರಂದು ತಮಿಳುನಾಡು ಮಹಾಜನಗಳು, ೮-೧೧-೭೭ ರಂದು ಕೇರಳ, ಡೆಲ್ಲಿ ಮತ್ತು ಕಲ್ಕತ್ತಾ ಮಹಾಜನಗಳು, ೯-೧೧-೭೭ ರಂದು ಕರ್ನಾಟಕದ ಮಹಾಜನಗಳು, ೧೦-೧೧-೮೮ ರಂದು ಒಟ್ಟನಲ್ಲಿ ಮಠದ ಎಲ್ಲಾ ಶಿಷ್ಯರು—ಇವರುಗಳಿಂದ ಭಿಕ್ಷಾವಂದನೆ ಪಾದಪೂಜೆಗಳು ನೆರವೇರಿದವು.

ಕಾಣಿಕೆ ಸಮರ್ಪಣೆಯನ್ನು ಮೊದಲು ತಿರುವಾಂಕೂರ್ ಮಹಾರಾಜರು, ಅಲ್ಲಿಯ ಎಳೆಯ ರಾಜರು ಮತ್ತು ಅವರ ತಾಯಿಯವರೂ ಸಹ ನೆರವೇರಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ವಂಶಪರಂಪರ್ಯವಾಗಿ ಬಂದಿರುವ ಗುರುಪೀಠದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ನಮಸ್ಕಾರಗಳನ್ನು ಸಲ್ಲಿಸಿ, ಶ್ರೀ ಗುರುಗಳವರ ಆಶೀರ್ವಾದವನ್ನು ಪಡೆದರು. ಅನಂತರ ತಮಿಳುನಾಡಿನ ಧರ್ಮಪುರಂ ಮತ್ತು ತಿರುಪ್ಪನಾಂಡಾಳ್ ಮಠಗಳ ಮತ್ತು ಶೃಂಗೇರಿ ಶಿವಗಂಗಾ ಮಠದ ಪರವಾಗಿ ಕಾಣಿಕೆ ಸಲ್ಲಿಸಲ್ಪಟ್ಟಿತು. ಅನಂತರ ಶ್ರೀ ವೈದ್ಯ ಸುಬ್ರಹ್ಮಣ್ಯ ಅಯ್ಯರವರು ೬೧ ನಾಮಲಿಖಿತ ಪದಕಗಳುಳ್ಳ ಸುವರ್ಣ ಹಾರವನ್ನು ಶ್ರೀ ಶ್ರೀ ಮಹಾಸನ್ನಿಧಾನಂಗಳವರಿಗೆ ಸಮರ್ಪಿಸಿದರು. ಅನಂತರ ಶ್ರೀ ವೈದ್ಯ ಸುಬ್ರಹ್ಮಣ್ಯಂ ಅವರು ಕನಕವರ್ಷ ಸಮರ್ಪಣೆಯಾಗಿ ೩೫ ಸುವರ್ಣ ಪದಕಗಳನ್ನು ಶ್ರೀ ಮಹಾಸನ್ನಿಧಾನಂಗಳವರ ಪಾದಾರವಿಂದಗಳಲ್ಲಿ ಸಮರ್ಪಿಸಿದ್ದಲ್ಲದೆ, ಸ್ವಾಗತ ಸಮಿತಿಯ ಪರವಾಗಿ ೧,೫೦,೦೦೦-೦೦ ರೂ.ಗಳನ್ನು ಪಾದಕಾಣಿಕೆಯಾಗಿ ಸಮರ್ಪಿಸಿದರು. ಈ ಸಂದರ್ಭದಲ್ಲಿ ಪೂನಾ ನಗರದ ಶಾರದಾ ಸಂಸ್ಕೃತ ಪತ್ರಿಕೆಯ ಸಂಪಾದಕರಾದ ಶ್ರೀ ವಿ. ವಿ. ಗಾಡ್ಗಿಲ್ ಅವರು ಸಂಸ್ಕೃತದಲ್ಲೂ, ವಾರಣಾಸಿಯ ರಾಜರೋಹಿತ್ ಶ್ರೀ ಚೆಲ್ಲಾ ಲಕ್ಷ್ಮಣಶಾಸ್ತ್ರಿಗಳವರು ಹಿಂದಿಯಲ್ಲೂ, ಮದರಾಸಿನ ಕವಿ ಶ್ರೀ ಶುದ್ಧಾನಂದ ಭಾರತಿಯವರು ತಮಿಳು ಭಾಷೆಯಲ್ಲೂ, ಗೋವಾದ ಶ್ರೀಮತಿ ಶಶಿಕಲಾ ಕಾಕೋಡ್‌ಕರ್ ಅವರು, ಶ್ರೀ ಗುರುಸೇವಾನಿರತ ಎಸ್. ವೈ. ಕೃಷ್ಣಸ್ವಾಮಿಯವರು ಮತ್ತು ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳವರು ಆಂಗ್ಲ ಭಾಷೆಯಲ್ಲೂ ಭಾಷಣ ಮಾಡಿದರು. ಅನಂತರ ಅಧ್ಯಕ್ಷರಾದ ಶ್ರೀ ರಾಜಾ ಮುತ್ತಯ್ಯ ಚೆಟ್ಟಿಯಾರ್ ಅವರು ಸುದೀರ್ಘ ಭಾಷಣ ಮಾಡಿ, ಅವರ ಮತ್ತು ನಾಗರತ್ ಚೆಟ್ಟಿಯಾರ್ ಸಂಗಡದವರು ಭಕ್ತಿ ಶ್ರದ್ಧೆಗಳಿಂದ ನಡಸಿದ ಧರ್ಮಕಾರ್ಯಗಳ ವಿವರಗಳನ್ನು ಕೊಟ್ಟು, ಹಿಂದಿನಿಂದಲೂ ಶೃಂಗೇರಿ ಪೀಠವೇ ಅವರ ಕುಟುಂಬದ ಗುರುಪೀಠವೆಂದು ತಿಳಿಸಿದರು. ಅನಂತರ ಶ್ರೀ ಚೆನ್ನಾರೆಡ್ಡಿಯವರು ಆವೇಶದಿಂದ ಮಾತಾಡಿ, ಈಗಿನ ಕಾಲದಲ್ಲಿ ರಾಜ್ಯದಲ್ಲಿರುವ ಬಿಕ್ಕಟ್ಟು ಮತ್ತು ಸಮಸ್ಯೆಗಳ ಪರಿಹಾರಕ್ಕೆ ಮಠಾಧಿಪತಿಗಳು ರಾಜಕೀಯ ಮುಖಂಡರುಗಳಿಗೆ ದಾರಿ ತೋರಿಸಿ ಸಹಾಯ ಮಾಡಬೇಕೆಂದು ಕೋರಿದರು. ಈಗಿನ ಯುವಜನಾಂಗದಲ್ಲಿ ಶೀಲ ಮತ್ತು ನಡತೆಗಳಲ್ಲಿ ಕುಂದುಕೊರತೆಗಳುಂಟಾಗಿ, ತಲ್ಲಣಿಸುತ್ತಿರುವ ಯುವಜನಾಂಗಕ್ಕೆ ಮಠಾಚಾರ್ಯರುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ದಾರಿ ತೋರಿಸಬೇಕಾಗಿದೆಯೆಂದರು. ಸತ್ಯ ಧರ್ಮ ನೀತಿಗಳ ಪ್ರಚಾರಕ್ಕೆ ಮಠಾಧಿಪತಿಗಳು ಮತ್ತು ಧರ್ಮಸಂಸ್ಥೆಗಳು ಸೇವಾದಳಗಳನ್ನು ನಿರ್ಮಿಸಬೇಕೆಂದೂ, ರಾಷ್ಟ್ರದ ಉನ್ನತಿಗಾಗಿ ಒಂದು ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದೂ ಸೂಚಿಸಿದರು. ಶ್ರೀಮತಿ ಶಶಿಕಲಾ ಕಾಕೋಡ್‌ಕರ್ ಅವರು ಮಾತಾಡುತ್ತಾ ಜಗದ್ಗುರುಗಳಂಥ ಮಹಾಪುರುಷರುಗಳ ಸಂದರ್ಶನದಿಂದ ಮನಶ್ಶಾಂತಿಯನ್ನು ಪಡೆಯಲಾಗುವುದಲ್ಲವೆ ಶ್ರೀಗಳವರ ಆಶೀರ್ವಾದ ಬಲದಿಂದ ಈಗಿನ ಜೀವನದಲ್ಲುಂಟಾಗುವ ಸಮಸ್ಯೆಗಳು ಪರಿಹಾರವಾಗುವುದೆಂದರು.

ಅನಂತರ ಶೃಂಗೇರಿ ಶಾರದಾ ಪೀಠದ ೩೫ನೆಯ ಜಗದ್ಗುರುಗಳಾದ ಮಹಾಸನ್ನಿಧಾನಂಗಳವರು ಉಪದೇಶ ಭಾಷಣ ಮಾಡಿ ಅಲ್ಲಿ ನೆರೆದಿದ್ದ ಶಿಷ್ಯವೃಂದವನ್ನು, ಈ ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶ ದೊರಕದ ಇತರ ಶಿಷ್ಯರುಗಳನ್ನೂ ಆಶೀರ್ವದಿಸಿದರು. ಭಾರತ ಜನಾಂಗವು ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡಬೇಕೆಂದೂ, ಮಠಗಳು ಮತ್ತು ಧರ್ಮ ಸಂಸ್ಥೆಗಳು ವಿದ್ಯಾಸಂಸ್ಥೆಗಳನ್ನು ಆರಂಭಿಸಿ ಚಿಕ್ಕವಯಸ್ಸಿನಿಂದಲೇ ಮಕ್ಕಳಿಗೆ ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಅಭಿರುಚಿಯುಂಟಾಗುವಂತೆ ಮಾಡಬೇಕಾಗಿದೆಯೆಂದೂ ಸೂಚಿಸಿದರು. ಈಗಿನ ಕಾಲದಲ್ಲಿ ಯುವಜನಾಂಗವು ದಾರಿತಪ್ಪಿ ನಡೆಯುತ್ತಾರೆಂಬುದಕ್ಕೆ ಅವರಿಗೆ ಈಗ ಸಲ್ಲುತ್ತಿರುವ ಪಾಶ್ಚಾತ್ಯಾ ರೀತಿಯ, ನಮ್ಮ ಸಂಸ್ಕೃತಿಗೆ ವಿರೋಧವಾದ ವಿದ್ಯಾಭ್ಯಾಸವೇ ಕಾರಣವಾಗುವುದರಿಂದ ಅವರನ್ನು ದೂಷಿಸಿ ಪ್ರಯೋಜನವಿಲ್ಲ; ನಮ್ಮ ಸಂಸ್ಕೃತಿಗನುಗುಣವಾದ ವಿದ್ಯಾ ಸಂಸ್ಥೆಗಳನ್ನು ಆರಂಭಿಸಿದಲ್ಲಿ ಜನಾಂಗದ ಏಳಿಗೆಗೆ ಅವಕಾಶವಾಗುತ್ತದೆಯೆಂದೂ ಶ್ರೀಗಳವರು ಸೂಚಿಸಿದರು.

೧೧-೧೧-೭೭ ರಂದು ಶೃಂಗೇರಿ ಜಗದ್ಗುರುಗಳವರು ಪ್ರವಚನ ಮಂದಿರದಲ್ಲಿ 'ವೇದಭಗವಾನ್' ಪ್ರತಿಷ್ಠೆಯನ್ನು ನೆರವೇರಿಸಿದರು. ತಮಿಳುನಾಡಿನ ಮತ್ತು ಕರ್ಣಾಟಕದ ಗವರ್ನರುಗಳು ಮಾತನಾಡಿದರು. ಶ್ರೀ ಗುರುಸೇವಾ ನಿರತ ಎಸ್. ವೈ. ಕೃಷ್ಣಸ್ವಾಮಿಯವರು ಸ್ವಾಗತ ನೀಡಿದರು. ಭಾರತದ ಮಾಜಿ ರಾಷ್ಟ್ರಾಧ್ಯಕ್ಷರಾದ ಶ್ರೀ ವಿ. ವಿ. ಗಿರಿಯವರು ಅಧ್ಯಕ್ಷತೆ ವಹಿಸಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಸನ್ನಿಧಾನಂಗಳವರು ಹಿಂದಿ ಭಾಷೆಯಲ್ಲಿ ಉಪದೇಶ ಭಾಷಣ ಮಾಡಿ ಆಶೀರ್ವದಿಸಿದರು. ಪಂಡಿತೋತ್ತಮರಿಂದ ವೇದಘೋಷವು ನಡೆದು ಶ್ರೀ ವಿ. ವಿ. ಗಿರಿಯವರಿಗೂ ಉಭಯ ಗವರ್ನರುಗಳಿಗೂ ಶಾಲುಗಳನ್ನು ಹೊದಿಸಲಾಯಿತು.

ಪ್ರತಿದಿನವೂ ಸಾಯಂಕಾಲ ೫ ಗಂಟೆಯಿಂದ ೮ ಗಂಟೆಯವರೆಗೆ ಶಿಷ್ಯರ ಮತ್ತು ಸಾರ್ವಜನಿಕರ ಸಭೆಯು ವಿಶಾಲವಾದ ಚಪ್ಪರದಲ್ಲಿ ಸೇರಿತ್ತು. ಶ್ರೀ ಸನ್ನಿಧಾನದ ಅಧ್ಯಕ್ಷತೆಯಲ್ಲಿ ಅನೇಕ ಶಿಷ್ಯರುಗಳು ಶ್ರದ್ಧಾಭಕ್ತಿಗಳಿಂದ ವಾಕ್ಸೇವೆ ಸಮರ್ಪಿಸಿದರು. ತಾವು ಗುರುಕರುಣೆಗೆ ಪಾತ್ರರಾಗಿ ಸುಖಶಾಂತಿಗಳನ್ನನುಭವಿಸಿರುವ ದೃಷ್ಟಾಂತಗಳನ್ನು ಉದಾಹರಿಸಿ, ಗುರುಕೃಪೆಯು ನಮ್ಮೆಲ್ಲರಿಗೂ ಯಾವಾಗಲೂ ಇರಲೆಂದು ಭಾವುಕತೆಯಿಂದ ಭಾಷಣ ಮಾಡಿದರು. ಭಾಷಣಗಳು ತಮಿಳು, ತೆಲುಗು, ಕನ್ನಡ, ಮಲೆಯಾಳಿ, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ನಡೆದವು. ಈ ಸಭೆಗಳಲ್ಲಿ ರಾಷ್ಟ್ರದ ಅನೇಕ ಗಣ್ಯವ್ಯಕ್ತಿಗಳು, ತಮಿಳುನಾಡಿನ ಹೈಕೋರ್ಟಿನ ನ್ಯಾಯಾಧೀಶರುಗಳು ಮುಖ್ಯ ನ್ಯಾಯಾಧೀಶರೂ, ನಿವೃತ್ತ ನ್ಯಾಯಾಧೀಶರೂ ಸಹ ಭಾಗವಹಿಸಿದರು. ಈ ಸಭೆಗಳಿಗೆ ಮದರಾಸು ನಗರ ನಿವಾಸಿಗಳು, ನಾನಾ ಪ್ರಾಂತ್ಯಗಳಿಂದ ಬಂದಿದ್ದ ಶಿಷ್ಯವೃಂದವೂ ತುಂಬಿ ತುಳುಕುತ್ತಿತ್ತು. ಅಧ್ಯಕ್ಷರು, ಭಾಷಣಕಾರರು ಮತ್ತು ಮುಖ್ಯ ಅತಿಥಿಗಳಿಗೆ ಮಹಾಸನ್ನಿಧಾನಂಗಳವರು ಸುಮಾರು ನೂರಕ್ಕಿಂತಲೂ ಹೆಚ್ಚು ಜನಕ್ಕೆ ಜರತಾರಿ ಮುಗುಟಗಳನ್ನು ಆಶೀರ್ವದಿಸಿ ಹೊದಿಸಿ ಅನುಗ್ರಹಿಸಿದರು.

ರಾತ್ರಿ ಪ್ರತಿದಿನವೂ ಭಕ್ತಿರಸದಿಂದ ಕೂಡಿದ ಸಂಗೀತ ಕಾರ್ಯಕ್ರಮಗಳು ಏರ್ಪಾಡಾಗಿದ್ದವು. ಶ್ರೀ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಶ್ರೀ ಕೆ. ವಿ. ನಾರಾಯಣಸ್ವಾಮಿ ಅಯ್ಯರ್, ಶ್ರೀ ಡಿ. ಕೆ. ಜಯರಾಮನ್, ಶ್ರೀ ಎಸ್. ರಮಣಿ (ಕೊಳಲು), ಡಾಕ್ಟರ್ ಎಂ. ಬಾಲಮುರಳಿಕೃಷ್ಣ, ಮಹಾರಾಜಪುರಂ ಸಂತಾನಂ, ಶ್ರೀಮತಿ ಎಂ. ಎಸ್. ಶೀಲ, ಶ್ರೀ ವಿ. ರಾಮಚಂದ್ರನ್, ಶ್ರೀ ವಿ. ಸುಬ್ರಹ್ಮಣ್ಯನ್, ಶ್ರೀ ಶೀರ್ಕಾಳಿ ಗೋವಿಂದರಾಜನ್ ಮತ್ತು ಶ್ರೀಮತಿ [illegible] ರುಗಳಿಂದ ಅಮೋಘ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗೀತ ಸೇವೆ ನಡೆಯಿತು. ಸಂಗೀತ ಸೇವೆಯೊಂದಿಗೆ ರಾತ್ರಿಯ ಶ್ರೀ ಚಂದ್ರಮೌಳೀಶ್ವರ ಅಭಿಷೇಕ ಮತ್ತು ಪೂಜೆಯು ಭಕ್ತಾದಿಗಳಿಂದ ಬಂದ ಹೇರಳವಾದ ಹಾಲು ಪುಷ್ಪ ಮುಂತಾದ ದ್ರವ್ಯಗಳಿಂದ ಶ್ರೀ ಶ್ರೀಗಳವರಿಂದ ನಡಸಲ್ಪಡುತ್ತಿತ್ತು. ಶಿಷ್ಯಕೋಟಿಯು ಆನಂದ ಸಾಗರದಲ್ಲಿ ಮುಳುಗಿತ್ತು.

ಗುರುವಾರ ನವೆಂಬರ್ ೧೦ನೆಯ ತಾರೀಖು ಮಹಾಸನ್ನಿಧಾನಂಗಳವರ ವರ್ಧಂತಿ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಮಠದ ಶಿಷ್ಯರು ಭಾಗವಹಿಸಿದ್ದರು. ಸಹಸ್ರ ಚರಡಿ, ಅತಿರುದ್ರ ಮತ್ತು ಯಜುಸ್ಸಂಹಿತಾ ಹೋಮಗಳ ಪೂರ್ಣಾಹುತಿಯು ಮಹಾಸನ್ನಿಧಾನಂಗಳವರ ದಿವ್ಯ ಸಮ್ಮುಖದಲ್ಲಿ ನೆರವೇರಿದ ಅಪೂರ್ವ ದೃಶ್ಯವನ್ನು ದಶ ಸಹಸ್ರಕ್ಕೂ ಮೇಲ್ಪಟ್ಟ ಭಕ್ತ ಸಮೂಹವು ಯಾಗಶಾಲೆ ಮತ್ತು ಸುತ್ತಮುತ್ತ ನಿಂತು ವೀಕ್ಷಿಸಿ ಧನ್ಯರಾದರು. ಆ ದೃಶ್ಯವು ಮದರಾಸಿನ ನಿವಾಸಿಗಳಿಗೂ ಮತ್ತು ಹೊರಗಿನಿಂದ ಬಂದ ಮಠದ ಶಿಷ್ಯರಿಗೂ ದೊರಕಿದ್ದು ಅವರ ಪುಣ್ಯ ವಿಶೇಷವೇ ಎಂದು ಹೇಳಬಹುದು. ಪೂರ್ಣಾಹುತಿಯಾದ ಕೂಡಲೆ ಋತ್ವಿಜರಿಗೆಲ್ಲ ಸಂಭಾವನೆ ಮತ್ತು ಪ್ರಯಾಣದ ವೆಚ್ಚ ಯಾಗಶಾಲೆಯಲ್ಲಿ ಶ್ರೀ ಶ್ರೀಗಳವರಿಂದ ಆಶೀರ್ವಾದ ಪೂರ್ವಕವಾಗಿ ನೀಡಲಾಯಿತು. ಋತ್ವಿಜರ ಸಂಭಾವನೆ, ವಸ್ತ್ರಗಳು ಮುಂತಾದ್ದಕ್ಕೆ ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟು ವಿನಿಯೋಗವಾಗಿದೆ.

ಸಾಯಂಕಾಲ ೬ ಗಂಟೆಗೆ 'ನವಸುಜ'ದಲ್ಲಿನ ಸಂಭಾಗಣದಲ್ಲಿ ಶ್ರೀ ರಾಜಾ ಸರ್ ಎಂ. ವಿ. ಮುತ್ತಯ್ಯ ಚೆಟ್ಟಿಯಾರವರ ಅಧ್ಯಕ್ಷತೆಯಲ್ಲಿ ಮಹಾಜನಗಳು ಮಹಾಸನ್ನಿಧಾನಂಗಳವರಿಗೆ ಅವರ ಪೂರ್ಣಾನುಗ್ರಹವನ್ನು ಸ್ಮರಿಸಿ ಶ್ರದ್ಧಾಭಕ್ತಿಯುಕ್ತವಾದ ಕೃತಜ್ಞತೆಯನ್ನು ಸಮರ್ಪಿಸಲು ಸಭೆ ಸೇರಿತು. ಪೂಜಾ ಮಂಟಪದಲ್ಲಿ ಮಹಾಸನ್ನಿಧಾನಂಗಳವರೂ ಮತ್ತು ಸನ್ನಿಧಾನಂಗಳವರೂ ಅಲ್ಲದೆ ಹರಿಹರಪುರದ ಮಠದ ಸ್ವಾಮಿಗಳು ಮತ್ತು ಕುತ್ತಾಲದ ಶ್ರೀ ಮೌನಸ್ವಾಮಿಗಳ ಮಠದ ಸ್ವಾಮಿಗಳವರೂ ಸಹ ವಿರಾಜಿಸಿದ್ದರು. ಶ್ರೀ ಶೃಂಗೇರಿಯ ಮಹಾಸನ್ನಿಧಾನಂಗಳವರು ರಜತ ಪೀಠದಲ್ಲಿ ಮಂಡಿಸಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ದಿವಸ ಬೆಳಗ್ಗೆ ಶಿಷ್ಯರು ಸಮರ್ಪಿಸಿದ ಯಾವ ಆಡಂಬರವೂ ಇಲ್ಲದ ಸಾಧಾರಣ ಕಾಷಾಯ ವಸ್ತ್ರವನ್ನು ಧರಿಸಿದ್ದರೂ ತೇಜೋಮಯವಾಗಿ ಎಲ್ಲರನ್ನೂ ಆಕರ್ಷಿಸುತ್ತಿದ್ದರು. ಸಭೆಯ ಅಧ್ಯಕ್ಷರ ಜೊತೆಗೆ ಗಣ್ಯವ್ಯಕ್ತಿಗಳಾದ ಉತ್ತರ ಪ್ರದೇಶದ ಮಾಜಿ ಗವರ್ನರ್ ಶ್ರೀ ಚೆನ್ನಾರೆಡ್ಡಿ ಮತ್ತು ಅವರ ಸಹ ಧರ್ಮಿಣಿ, ಆಂಧ್ರ ಪ್ರದೇಶದ ಮಂತ್ರಿಗಳಾದ ಶ್ರೀ ಚೊಕ್ಕಾರೆಡ್ಡಿಯವರು, ಗೋವಾದ ಮುಖ್ಯ ಮಂತ್ರಿಗಳಾದ ಶ್ರೀಮತಿ ಶಶಿಕಲಾ ಕಾಕೋಡ್‌ಕರ್ ಮತ್ತು ಶ್ರೀ ಪಿ. ಆರ್. ಪಟ್ಟಾಭಿರಾಮನ್ ಮುಂತಾದವರು ಹಾಜರಿದ್ದರು.

ಶೃಂಗೇರೀ ಶ್ರೀ ಶಾರದಾ ಪೀಠದಿಂದ ಸತ್ಕೃತರಾದ ವೈದಿಕೋತ್ತಮರು

ಮದರಾಸಿನಲ್ಲಿ ನಡೆದ ಶೃಂಗೇರೀ ಶಾರದಾ ಪೀಠಾಧಿಪತಿಗಳಾದ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಷಷ್ಟ್ಯಬ್ದ ಪೂರ್ತಿ ಮಹೋತ್ಸವದ ಸಂದರ್ಭದಲ್ಲಿ ದೀಪಾವಳಿಯ ಪವಿತ್ರ ದಿನದಂದು ಶ್ರೀ ಶ್ರೀಗಳವರಿಂದ ಸನ್ಮಾನಿಸಲ್ಪಟ್ಟ ವಿದ್ವಾಂಸರು :

ಋಗ್ವೇದ

೧. ವೇ। ಬ್ರಹ್ಮ ಶ್ರೀ ಗೋಡವರ್ತಿ ವೆಂಕಟನರಸಾವಧಾನಿ (ಆಂಧ್ರ)
೨. ವೇ। ಬ್ರಹ್ಮ ಶ್ರೀ ವೆಂಕಟಕೃಷ್ಣ ಭಟ್ಟ (ಕರ್ಣಾಟಕ)

ಕೃಷ್ಣ ಯಜುರ್ವೇದ

೧. ವೇ। ಬ್ರಹ್ಮ ಶ್ರೀ ರಾಮಚಂದ್ರ ಘನಪಾಠಿ ಕೊಡಲ್ಕೆರೆ (ಕರ್ಣಾಟಕ)
೨. ವೇ। ಬ್ರಹ್ಮ ಶ್ರೀ ಚಿಟ್ಟೇ ಸುಬ್ರಹ್ಮಣ್ಯ ಘನಪಾಠಿ (ಆಂಧ್ರ)
೩. ವೇ। ಬ್ರಹ್ಮ ಶ್ರೀ ಶಿವರಾಮ ಗಣಪತಿ ಘನಪಾಠಿ (ತಮಿಳುನಾಡು)
೪. ವೇ। ಬ್ರಹ್ಮ ಶ್ರೀ ಕಾಲ್ಲಟಿ ಸುಬ್ರಹ್ಮಣ್ಯ ಶಾಸ್ತ್ರಿ ಸಲಕ್ಷಣ ಘನಪಾಠಿ (ಕೇರಳ)

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾ ಮ ವೇ ದ

೧. ವೇ. ಬ್ರಹ್ಮ ಶ್ರೀ ರಾಜಾರಾಮ ಶಾಸ್ತ್ರೀ (ತಮಿಳುನಾಡು)
೨. ವೇ. ಬ್ರಹ್ಮ ಶ್ರೀ ಸುಬ್ರಹ್ಮಣ್ಯ ಶಾಸ್ತ್ರೀ (ಕರ್ನಾಟಕ)

ಇದಲ್ಲದೆ ಒಂಬತ್ತು ಜನ ವಿದ್ಯಾರ್ಥಿಗಳಿಗೆ ತಲಾ ಇನ್ನೂರು ಐವತ್ತು ರೂಪಾಯಿಗಳಂತೆ ವಿತರಣೆ ಮಾಡಲಾಯಿತು.

* * * * * *

ವರ್ಧಂತಿಗೆ ಸಂಬಂಧಿಸಿದ ಮಹೋತ್ಸವಗಳು ಮುಗಿದವು. ಆಮೇಲೆ ನಗರದ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿದ್ದ ಶಿಷ್ಯರೂ, ಭಕ್ತವೃಂದವೂ ತಮ್ಮ ತಮ್ಮ ಭಾಗಗಳಿಗೆ ಶ್ರೀಜಗದ್ಗುರುಗಳು ದಯಮಾಡಿ ಭೇಟಿಕೊಟ್ಟು ಅನುಗ್ರಹಿಸ ಬೇಕೆಂದು ಪ್ರಾರ್ಥಿಸಿಕೊಂಡದ್ದರಿಂದ ಶ್ರೀಗಳವರು ತಮ್ಮ ಮೊಕ್ಕಾಮನ್ನು ಡಿಸೆಂಬರ್ ೨೫ರ ವರೆಗೂ ಮುಂದುವರಿಸಿದರು.

೨೫-೧೨-೭೭ರಂದು ಶ್ರೀ ಮಹಾಸನ್ನಿಧಾನಂಗಳವರೂ ಶ್ರೀ ಸನ್ನಿಧಾನಂ ಗಳವರೂ ಮದರಾಸು ನಗರವನ್ನು ಬಿಟ್ಟು ರಾಣಿಪೇಟೆ ಮಾರ್ಗವಾಗಿ ಶೃಂಗೇರಿಗೆ ಪ್ರಯಾಣ ಬೆಳಸಿದರು. ಸುಮಾರು ಎರಡು ತಿಂಗಳ ಕಾಲ ಶ್ರೀ ಮಜ್ಜಗದ್ಗುರು ಗಳವರ ಸಾನ್ನಿಧ್ಯದ ಮಹಾ ಭಾಗ್ಯವನ್ನು ಪಡೆದದ್ದಲ್ಲದೆ ಶ್ರೀ ಮಹಾಸನ್ನಿಧಾನಂ ಗಳವರ ಅರುವತ್ತೊಂದನೆಯ ವರ್ಧಂತಿ ಮಹೋತ್ಸವವನ್ನು ನಡಸುವ ಅಪೂರ್ವ ಅವಕಾಶವನ್ನು ಪಡೆದಿದ್ದ ಮದರಾಸು ನಗರದ ನಿವಾಸಿಗಳು ಶ್ರೀ ಗುರುಗಳ ಅಗಲಿಕೆಯಿಂದ ಸಹಜವಾಗಿಯೇ ಕಳವಳಕ್ಕೀಡಾದರು. ಭಾವಪರವಶರಾಗಿ "ಸ್ಮರ್ತವ್ಯಾ ವಯಂ ಆದರೇಣ ಭವತಾ ಯಾವತ್ಪುನರ್ದರ್ಶನಂ" (ಮತ್ತೊಮ್ಮೆ ದರ್ಶನ ಲಭಿಸುವವರೆಗೂ ತಾವು ನಮ್ಮನ್ನು ಆದರದಿಂದ ನೆನೆಯುತ್ತಿರಬೇಕು) ಎಂದು ಅಪರಿಮಿತ ಭಕ್ತಿಯಿಂದ ಪ್ರಾರ್ಥಿಸುತ್ತಾ ಬೀಳ್ಕೊಟ್ಟರು.

ಮದರಾಸು ನಗರದಿಂದ ಹೊರಟವರು ೨೫-೧೨-೧೯೭೭ರಂದು ಸಂಜೆ ರಾಣಿಪೇಟೆಯನ್ನು ತಲುಪಿದರು. ಅಲ್ಲಿ ವೇದ ವಿದ್ಯೆಯನ್ನು ಪ್ರೋತ್ಸಾಹಿಸಲು ಊರಿನ ಪ್ರಮುಖರು ಸೇರಿ ಒಂದು ಜಾಗವನ್ನು ಖರೀದಿಸಿ ಅಲ್ಲಿ ಕಟ್ಟಡವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಟ್ಟುತ್ತಿರುವ ಬಗ್ಗೆ ಶ್ರೀ ಶ್ರೀಗಳವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಶ್ರೀ ಶಾರದಾ ಪ್ರಸಾದ ರೂಪವಾಗಿ ಒಂದು ಸಾವಿರದ ಒಂದು ರೂಪಾಯಿಗಳನ್ನು ಅಲ್ಲಿನ ಕಾರ್ಯಕರ್ತರಿಗಿತ್ತರು. ಮರುದಿನ ಅಲ್ಲಿಂದ ಕೋಲಾರಕ್ಕೆ ದಯಮಾಡಿ (ಕೋಲಾರ ಚಿನ್ನದ ಗಣಿ ಅಲ್ಲ) ಮಾರನೇ ದಿನ ಬೆಂಗಳೂರಿಗೆ ಚಿತ್ತೈಸಿದರು. ಬೆಂಗಳೂರಿನಲ್ಲಿ ಶ್ರೀಶ್ರೀ ಮಹಾಸ್ವಾಮಿಗಳವರ ಷಷ್ಟ್ಯಬ್ದಪೂರ್ತಿ ವರ್ಧಂತ್ಯುತ್ಸವದ ಅಂಗವಾಗಿ ಮಲ್ಲೇಶ್ವರ ಪ್ರದೇಶದ 'ಆಸ್ತಿಕ ಸಮಾಜದ' ನೇತೃತ್ವದಲ್ಲಿ ಶಿಷ್ಯಜನರು ತಮ್ಮ ಭಕ್ತಿ ಗೌರವಗಳನ್ನು ವ್ಯಕ್ತಪಡಿಸಿದರು. ಆ ಸಂದರ್ಭದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಮುಖ್ಯ ನಿರ್ವಹಣಾಧಿಕಾರಿಗಳಾದ ಶ್ರೀ ದೇಶಮುಖ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀ ಶ್ರೀ ಮಹಾಸ್ವಾಮಿಗಳವರು ಮಾಡಿರುವ, ಮಾಡಿಸಿರುವ, ಭಾರತೀಯ ಸಂಸ್ಕೃತಿಯ ಉಳಿವಿಗೆ ಏಳಿಗೆಗೆ ಕಾರಣವಾದ ಅನೇಕ ಕಾರ್ಯಗಳ ಪ್ರಸ್ತಾಪವನ್ನು ಆಸ್ತಿಕ ಸಮಾಜದ ಅಧ್ಯಕ್ಷರಾದ ಶ್ರೀ ಪಿ. ಆರ್. ಸುಬ್ರಹ್ಮಣ್ಯಂ ಅವರು ಮಾಡಿದರು. ನೆರೆದಿದ್ದ ಭಕ್ತಜನರನ್ನು ಶ್ರೀ ಶ್ರೀಗಳವರು ತಮ್ಮ ಅಮೃತವಾಣಿಯಿಂದ ಉಪದೇಶಿಸಿ ಹರಸಿದರು. ಇದೇ ಸಂದರ್ಭದ ನಿಮಿತ್ತವಾಗಿ ಶಂಕರಪುರದ ಶಂಕರಮಠದಲ್ಲಿ ಏರ್ಪಾಡಾಗಿದ್ದ ಸಭೆಗೆ ಶ್ರೀ ಶೃಂಗೇರಿ–ಶಿವಗಂಗಾ ಮಠಾಧೀಶರಾದ ಶ್ರೀ ವಿಶ್ವೇಶ್ವರಾನಂದಭಾರತೀ ಸ್ವಾಮಿಗಳವರು, ಖ್ಯಾತ ನ್ಯಾಯಾಧೀಶರಾದ ಶ್ರೀ ಇ.ಎಸ್. ವೆಂಕಟರಾಮಯ್ಯನವರು, ವಿಖ್ಯಾತ ವಿದ್ವಾಂಸರಾದ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ಇವರೆಲ್ಲ ಬಂದಿದ್ದು ಶ್ರೀಶ್ರೀಗಳವರು ಜನಸಾಮಾನ್ಯಕ್ಕೆ ನೀಡುತ್ತಿರುವ ಮಾರ್ಗದರ್ಶನಕ್ಕೆ, ಶ್ರೀ ಶಾಂಕರಾದ್ವೈತ ಸಿದ್ಧಾಂತವನ್ನು ಬೆಳೆಸಿ, ಅದರ ಸಾರವು ಹರಡುವಂತೆ ಮಾಡುತ್ತಿರುವುದಕ್ಕೆ, ಸಂಸ್ಕೃತ ಭಾಷೆಯ, ವೇದಗಳ, ಶಾಸ್ತ್ರಗಳ ಉಳಿವಿಗೆ ಮಾಡುತ್ತಿರುವ ಕೃಷಿಗೆ ಸಕಲರ ಪರವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಧರ್ಮಾಚರಣೆಯಲ್ಲಿರುವ ಇಹಪರ ಶ್ರೇಯಸ್ಸಾಧಕ ಗುಣವನ್ನೂ, ಅದು ಪ್ರತಿಯೊಬ್ಬ ಮಾನವನಿಗೂ ಹೇಗೆ ಆವಶ್ಯಕವೂ, ಕರ್ತವ್ಯವೂ ಆಗಿದೆಯೆಂಬುದನ್ನೂ ದೃಷ್ಟಾಂತಗಳೊಡನೆ ಶ್ರೀಶ್ರೀ ಮಹಾಸ್ವಾಮಿಗಳವರು ವಿವರಿಸಿ, ನೆರೆದ ಭಕ್ತರಿಗೆ ಅನುಗ್ರಹ ಮಾಡಿದರು. ಶ್ರೀ ಶ್ರೀ ಮಹಾಸ್ವಾಮಿಗಳು ತಂಗಿದ್ದ ಮೂರು ದಿನಗಳಲ್ಲಿ ಬೆಂಗಳೂರಿನ ಶ್ರೀಮಠವು ಅಸಂಖ್ಯಾತ ಭಕ್ತಜನರಿಂದ ತುಂಬಿ ತುಳುಕುತ್ತಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

೩೧-೧೨-೧೯೭೭ ರಂದು ಸಂಜೆ ಬೆಂಗಳೂರಿನಿಂದ ಹೊರಟು, ಶ್ರೀಶ್ರೀಗಳವರು ತಿಪಟೂರನ್ನು ಸೇರಿದರು. ದಾರಿಯಲ್ಲಿ ಕ್ಯಾತ್ಸಂದ್ರದ ಶ್ರೀ ಚಂದ್ರಮೌಳೀಶ್ವರ ದೇವಾಲಯದಲ್ಲೂ, ತುಮಕೂರಿನ ಶ್ರೀ ಶೃಂಗೇರಿ ಶಂಕರಮಠದಲ್ಲೂ ಶ್ರೀ ಶ್ರೀಗಳವರ ದರ್ಶನಕ್ಕಾಗಿ ಕಾತುರತೆಯಿಂದ ಕಾಯುತ್ತಿದ್ದ ಅಭೂತಪೂರ್ವ ಜನಸಂದಣಿಗೆ ದರ್ಶನವಿತ್ತು ಶ್ರೀಶ್ರೀಗಳವರು ಆ ದೇವಸ್ಥಾನಗಳ ದೇವರ ದರ್ಶನ ಪಡೆದರು.

೧-೧-೧೯೭೮ರಂದು ತಿಪಟೂರಿನಿಂದ ಹಾಸನಕ್ಕೆ ಪ್ರಯಾಣ ಬೆಳೆಸಿ, ಅಲ್ಲಿ ಮೂರು ದಿನಗಳಕಾಲ ತಂಗಿದ್ದು, ಅಲ್ಲಿನ ಮಹಾಜನಗಳನ್ನು ಅನುಗ್ರಹಿಸಿ, ಶ್ರೀ ಶೃಂಗೇರಿ ಮಠದಲ್ಲಿ ಆಗಬೇಕಾಗಿರುವ ಬದಲಾವಣೆಗಳ, ಬಡಾವಣೆಗಳ ಬಗ್ಗೆ ಸೂಕ್ತ ನಿರ್ದೇಶಗಳನ್ನು ನೀಡಿದರು.

೪-೧-೧೯೭೮ರಂದು ಹಾಸನದಿಂದ ಚಿಕ್ಕಮಗಳೂರಿಗೆ ಚಿತ್ತೈಸಿ, ಅಲ್ಲಿ ಪುರಸಭೆಯವರು, ಭಕ್ತಜನರು ಪ್ರತ್ಯೇಕವಾಗಿ ಏರ್ಪಡಿಸಿದ್ದ ಸಭೆಗಳಲ್ಲಿ ಅನುಗ್ರಹವಚನವನ್ನ ನೀಡಿದರು. ಜಿಲ್ಲೆಯ ಮುಖ್ಯಾಧಿಕಾರಿಗಳು ಶ್ರೀಶ್ರೀಗಳವರಿಗೆ ಶ್ರದ್ಧಾ ಗೌರವಗಳನ್ನರ್ಪಿಸಿದರು.

೬-೧-೧೯೭೮ ರಂದು ಚಿಕ್ಕಮಗಳೂರಿನಿಂದ ಹೊರಟು ಶೃಂಗೇರಿಗೆ ಸುಮಾರು ಹನ್ನೆರಡು ಮೈಲಿ ದೂರವಿರುವ ಹರಿಹರಪುರಕ್ಕೆ ದಯಮಾಡಿಸಿದರು. ಮದರಾಸಿನಲ್ಲಿ ನಡೆದ ಶ್ರೀಶ್ರೀ ಮಹಾಸನ್ನಿಧಾನದವರ ಷಷ್ಟ್ಯಬ್ದಪೂರ್ತಿ ಉತ್ಸವ ಸಮಾರಂಭಕ್ಕೆ ದಯಮಾಡಿಸಿದ್ದ ಹರಿಹರಪುರದ ಮಠಾಧೀಶರಾದ ಶ್ರೀ ಅಭಿನವ ರಾಮಾನಂದ ಸರಸ್ವತೀ ಸ್ವಾಮಿಗಳವರು ಅಲ್ಲಿಯೇ ಹರಿಹರಪುರಕ್ಕೆ ದಯಮಾಡಿಸಬೇಕೆಂದು ಶ್ರೀಶ್ರೀಗಳವರಲ್ಲಿ ವಿಜ್ಞಾಪಿಸಿಕೊಂಡಿದ್ದು, ಶಿವಮೊಗ್ಗೆಗೆ ದಯಮಾಡಿಸಬೇಕಾಗಿದ್ದ ಕಾರ್ಯಕ್ರಮವು ಮುಂದೂಡಲ್ಪಟ್ಟು ಹರಿಹರಪುರದ ಪ್ರಯಾಣ ನಿಶ್ಚಿತವಾಯಿತು. ಅಲ್ಲಿ 'ನಭೂತೋ ನಭವಿಷ್ಯತಿ' ಎಂಬ ರೀತಿಯಲ್ಲಿ ಶ್ರೀಶ್ರೀ ಉಭಯ ಸನ್ನಿಧಾನದವರ ಎರಡು ಮೈಲು ದೂರದ ಪಲ್ಲಕ್ಕಿ ಉತ್ಸವ ನಡೆಯಿತು. ಸುತ್ತಮುತ್ತಲ ಗ್ರಾಮಗಳಿಂದ, ಊರುಗಳಿಂದ ಊಹಿಸದಿದ್ದಷ್ಟು ಸಂಖ್ಯೆಯಲ್ಲಿ ಜನಗಳು ಬಂದು ಸೇರಿದ್ದರು. ೭-೧-೧೯೭೮ ರಂದು ಪ್ರಾತಃ ಆಯುಷ್ಯ ಹೋಮಾದಿಗಳೂ, ಶ್ರೀಶ್ರೀಗಳವರ ಸನ್ನಿಧಿಯಲ್ಲಿ ಹರಿಹರಪುರ ಮಠಾಧೀಷರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಸ್ರನಾಮ ಪಾದಪೂಜೆಯೂ, ಭಿಕ್ಷಾವಂದನೆಯೂ ನೆರವೇರಿದನಂತರ ಸುಮಾರು ಮೂರು ಸಾವಿರಜನಕ್ಕೂ ಮಿಕ್ಕಿ ಸಂತರ್ಪಣೆ ಆಯಿತು. ಸಂಜೆ ಮೂರು ಗಂಟೆಗೆ ಪ್ರೌಢಶಾಲೆಯ ಬಹಿರಾವರಣದಲ್ಲಿ ನಡೆದ ಸಭೆಯಲ್ಲಿ ಶ್ರೀ ಶ್ರೀ ಮಹಾಸನ್ನಿಧಾನದವರೂ, ಶ್ರೀ ಶ್ರೀ ಸನ್ನಿಧಾನದವರೂ, ಶ್ರೀ ಶ್ರೀ ಹರಿಹರಪುರ ಮಠಾಧೀಶರೂ ಅನುಗ್ರಹ ವಚನಗಳನ್ನಾಡಿ ನೆರೆದ ಜನವೃಂದಕ್ಕೆ ಅಮಿತಾನಂದವನ್ನುಂಟುಮಾಡಿದರು. ಈ ಸಮಾರಂಭಗಳಿಗೆ ತೀರ್ಥಮುತ್ತೂರಿನ ಮಠಾಧೀಶರೂ ದಯಮಾಡಿಸಿದ್ದರು.

ಹರಿಹರಪುರದಿಂದ ಶೃಂಗೇರಿಯವರೆಗಿನ ಪ್ರತಿ ಗ್ರಾಮದ ಬಳಿಯಲ್ಲೂ ರಸ್ತೆಗೆ ಚಪ್ಪರ ತೋರಣಗಳನ್ನು ಹಾಕಿ ಜನರು ಶ್ರೀಶ್ರೀಗಳವರ ಬರುವಿಗಾಗಿ ಕಾಯುತ್ತಿದ್ದರು. ಅಲ್ಲಲ್ಲಿ ವಾಹನವನ್ನು ನಿಲ್ಲಿಸಿ, ಜನರಿತ್ತ ಫಲಾದಿಗಳನ್ನು ಸ್ಪರ್ಶಿಸಿ ಅನುಗ್ರಹಿಸುತ್ತ ಶ್ರೀ ಶ್ರೀಗಳವರು ಶೃಂಗೇರಿಯ ಹೊರವಲಯವನ್ನು ತಲುಪಿದರು.

ಅಂದು ಶೃಂಗೇರಿಯ ಜನತೆಗೆ ಮಹೋತ್ಸಾಹದ, ವೈಭವದ ದಿನ. ಅದರೆ ಕೊರತೆಯ ದಿನವೂ ಹೌದು. ಶ್ರೀಶ್ರೀಗಳವರ ಷಷ್ಟ್ಯಬ್ದಪೂರ್ತ್ಯುತ್ಸವವನ್ನು ಶೃಂಗೇರಿಯಲ್ಲಿ ಆಚರಿಸಲಾಗದಿದ್ದ ಬಗ್ಗೆ ಪ್ರತಿಯೊಬ್ಬರಿಗೂ ನಿರಾಶೆಯ, ಕೊರತೆಯ ಭಾವ. ಆದರೆ ಸುದೀರ್ಘವಾದ, ಯಶಸ್ವಿಯಾದ ಉತ್ತರ ಭಾರತದ ಯಾತ್ರೆಯನ್ನು ಮುಗಿಸಿಕೊಂಡು ಶ್ರೀಶ್ರೀಗಳವರು ಹಿಂದಿರುಗುತ್ತಿದ್ದಾರೆ; ಶಿಷ್ಯಜನರೆಲ್ಲರೂ ಸೇರಿ ಶ್ರೀಶ್ರೀಗಳವರ ಷಷ್ಟ್ಯಬ್ದಪೂರ್ತ್ಯುತ್ಸವವನ್ನು ಮದರಾಸಿನಲ್ಲಿ ಬಹಳ ವೈಭವದಿಂದ ನೆರವೇರಿಸಿದ್ದಾರೆ; ಹೀಗಿರುವ ಪರಿಸ್ಥಿತಿಯಲ್ಲಿ ಶ್ರೀಶ್ರೀಗಳವರನ್ನು ತಕ್ಕ ವೈಭವದಿಂದ, ಗೌರವದಿಂದ, ಶ್ರದ್ಧಾ ಭಕ್ತಿಗಳಿಂದ ಬರಮಾಡಿಕೊಳ್ಳಬೇಕು-ಎಂದು ನಿಶ್ಚಯಿಸಿಕೊಂಡು ಅದಕ್ಕೆ ತಕ್ಕ ಏರ್ಪಾಡು ಮಾಡಿಕೊಂಡಿದ್ದರು. ಶ್ರೀ ಕಾಳಿಕಾಂಬಾ ದೇವಾಲಯದ ಬಳಿ ನಿಂತು ನೋಡಿದರೆ ನಿಚ್ಚಳವಾಗಿ ಕಾಣುತ್ತಿದ್ದ ಊರಿಗೆ ಇಂದು ಹಸುರುಡುಗೆ. ರಸ್ತೆಯೆಲ್ಲವೂ ಸ್ವಲ್ಪವೂ ಜಾಗವಿಲ್ಲದೆ ಚಪ್ಪರ, ತಳಿರು ತೋರಣಗಳಿಂದ ತುಂಬಿದೆ. ನೆಲವೆಲ್ಲವೂ ಶುಭ್ರವಾಗಿ ತೊಳೆಯಲ್ಪಟ್ಟು ವಿಧವಿಧವಾದ ರಂಗೋಲಿಗಳಿಂದ ಶೋಭಿಸುತ್ತಿದೆ. ಜನರೆಲ್ಲರೂ ನೂತನ ವಸ್ತ್ರಗಳನ್ನು ಧರಿಸಿಕೊಂಡು ಕಾಯುತ್ತಿದ್ದಾರೆ. ಅಂದು ಶಾಲಾಕಾಲೇಜುಗಳಿಗೆ ರಜೆ ಇದ್ದುದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೂ ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ಸವದಲ್ಲಿ ಭಾಗವಹಿಸಲು ಉತ್ಸುಕರಾಗಿ ನಿಂತಿದ್ದಾರೆ. ಶೃಂಗೇರಿ ಅಪೂರ್ವವಾಗಿತ್ತು. ಸಂದರ್ಭ ಅಪೂರ್ವವಾಗಿತ್ತು. ಜನರ ಉತ್ಸಾಹ ಅಪೂರ್ವವಾಗಿತ್ತು! ಪ್ರಪ್ರಥಮ ಬಾರಿಗೆ ಶ್ರೀ ಕಾಳಿಕಾಂಬಾ ದೇವಾಲಯದಿಂದ ಪಲ್ಲಕ್ಕಿ ಉತ್ಸವವು ಹೊರಟಿತು. ಉತ್ಸವದಲ್ಲಿ ವಿಶೇಷ ದೀಪ ವ್ಯವಸ್ಥೆ, ವಿವಿಧ ವಾದ್ಯಗೋಷ್ಠಿಗಳು, ನೃತ್ಯಗಳು, ಕೀಲು ಕುದುರೆ, ಭಜನಾಗೋಷ್ಠಿಗಳು, ಆನೆ ಮುಂತಾದ ಮಠದ ಮರ್ಯಾದೆಗಳು, ನಿರಂತರ ಜನಸ್ತೋಮ ಎಲ್ಲವೂ ಇದ್ದು 'ನ ಭೂತೋ ನ ಭವಿಷ್ಯತಿ' ಎಂದೆನಿಸಿತು. ಊರ ಹಿರಿಯರು ಮುಮ್ಮಡಿ, ಕೃಷ್ಣರಾಜ ಪ್ರಭುಗಳೂ ಶ್ರೀಶ್ರೀಗಳವರೂ ಸೇರಿದಾಗ ನಡೆದಿದ್ದ ಉತ್ಸವವೂ ಈ ಉತ್ಸವದ ಮುಂದೆ ಸಪ್ಪೆಯಾಗಿ ತೋರುತ್ತಿದೆ ಎನ್ನುತ್ತಿದ್ದರು. ಊರಿನ ಎಲ್ಲ ಬೀದಿಗಳಲ್ಲಿ ಉತ್ಸವ ಬಂದು ಮಠವನ್ನು ಮುಟ್ಟಿತು. ಅಲ್ಲಿ ಧೂಳಿ ಪಾದಪೂಜೆಯನಂತರ, ಪುರಸಭಾ ಭವನದ ಎದುರಿಗೆ ಕಾರ್ಯಕ್ರಮವು ನೆರವೇರಿತು. ಶೃಂಗೇರಿಯ ೬೧ ವಿವಿಧ ಸಂಸ್ಥೆಗಳಿಂದ ಶ್ರೀಶ್ರೀಗಳವರಿಗೆ ಪುಷ್ಪಮಾಲೆ, ಫಲಗಳು ಸಮರ್ಪಿತವಾದನಂತರ ಊರ ಜನರ ಪರವಾಗಿ ಪುರಸಭಾಧ್ಯಕ್ಷರು ಸಹಸ್ರನಾಮ ಪಾದ ಪೂಜೆಯನ್ನು ನೆರವೇರಿಸಿದರು. ಶ್ರೀ ಶ್ರೀಗಳವರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದನಂತರ ಅನುಗ್ರಹ ಭಾಷಣ ಮಾಡುತ್ತಾ ಶ್ರೀಶ್ರೀಗಳವರು ಶೃಂಗೇರೀ ಜನತೆಯ ಶ್ರದ್ಧಾ ಭಕ್ತಿ ಉತ್ಸಾಹಗಳಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ, ಇಡೀ ಭಾರತವನ್ನು ಸಂದರ್ಶಿಸಿ ಬಂದರೂ ಶೃಂಗೇರಿಯಂತಹ ರಮಣೀಯವಾದ, ಪ್ರಶಾಂತವಾದ, ಪವಿತ್ರವಾದ ಸ್ಥಳವನ್ನು ಕಾಣಲಾಗಲಿಲ್ಲವೆಂದು ಹೇಳಿದರು. ಈ ಊರಿನ ಅಭಿವೃದ್ಧಿಗೆ ಜನರು ಗಮನ ನೀಡಬೇಕೆಂದು ತಿಳಿಸಿ, ತಾವು ಇಲ್ಲಿ ಸರ್ವಜನೋಪಯುಕ್ತವಾದ ಒಂದು ಕಲ್ಯಾಣ ಮಂದಿರವನ್ನು ನಿರ್ಮಿಸುವ ನಿಶ್ಚಯವನ್ನು ಮಾಡಿರುವುದಾಗಿ ತಿಳಿಯಪಡಿಸಿದರು. ಈ ಎಲ್ಲ ಕಾರ್ಯಕ್ರಮಗಳಿಗೆ ಸೇರಿದ್ದ ಜನಸಂದಣಿ ಎಂದೂ, ಯಾವತ್ತೂ ನೆರೆದಿರಲಿಲ್ಲವೆಂಬುದು ಅತಿಶಯೋಕ್ತಿಯಾಗಲಾರದು.

ಈ ಬಾರಿಯ ಯಾತ್ರೆ ಉತ್ಸಾಹಪೂರಿತವೂ, ಬಹುಯಶಸ್ವಿಯೂ ಆಗಲು ಬಹುಮುಖ್ಯ ಕಾರಣಗಳು ಎರಡು: ೧) ಕಾಶಿಯಲ್ಲಿ ಶ್ರೀ ಅನ್ನಪೂರ್ಣಾಮಾತೆಯ ಪ್ರತಿಷ್ಠಾಪನೆ; ೨) ಶ್ರೀಶ್ರೀ ಮಹಾಸನ್ನಿಧಾನದವರ ಷಷ್ಟ್ಯಬ್ದಪೂರ್ತಿ ಉತ್ಸವ. ಇವೆರಡರಲ್ಲಿ ಮೊದಲನೆಯದು ಯಾತ್ರೆಯ ಪೂರ್ವಾರ್ಧದಲ್ಲೂ, ಎರಡನೆಯದು

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿತೀಯಾರ್ಧದಲ್ಲೂ ಬಹು ಮುಖ್ಯ ಪಾತ್ರ ವಹಿಸಿವೆ. ಜನರಿಗೆ, ಶ್ರೀಮಠದ ನೌಕರರಿಗೆ ಪ್ರತಿಕ್ಷಣವೂ ಈ ಕಾರ್ಯಗಳ ನೆನಪಿನಿಂದ ಸ್ಫೂರ್ತಿ, ಉತ್ಸಾಹಗಳು ಹೆಚ್ಚುತ್ತಿದ್ದವು. ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ವೈಶಿಷ್ಟ್ಯದ, ಪ್ರತಿಷ್ಠೆಯ, ಗೌರವದ ದೃಷ್ಟಿಯಿಂದ ಈ ಯಾತ್ರೆ ಬಹಳ ಪರಿಣಾಮಕಾರಿ ಯಾಯಿತು. ಇದರ ಪ್ರಭಾವವನ್ನು ಅನೇಕ ವಿಧಗಳಿಂದ ಇಂದು ನಾವು ನೋಡಬಹುದು.

ಮದರಾಸಿನಿಂದ ಬರುವಾಗಲೇ ಶಿವಮೊಗ್ಗೆಗೆ ಬರಬೇಕಿತ್ತು. ಆದರೆ ಕಾರಣಾಂತರದಿಂದ ಸಾಧ್ಯವಾಗಲಿಲ್ಲವಾಗಿ ಶೀಘ್ರದಲ್ಲೇ ಶಿವಮೊಗ್ಗೆಗೆ ಕಾರ್ಯಕ್ರಮ ನಿಶ್ಚಯಿಸಬೇಕಿತ್ತು. ಈ ಸಂದರ್ಭದೊಡನೆ ಕಾರವಾರದಲ್ಲಿ ನಿರ್ಮಿತವಾಗಿ ಸಿದ್ಧ ವಾಗಿದ್ದ ಶೃಂಗೇರಿ ಶಂಕರ ಮಠದ ಉದ್ಘಾಟನೆಯೂ ಆಗಬೇಕಿತ್ತು. ಇವೆರಡೂ ಸೇರಿರುವಂತೆ ೧೧-೩-೧೯೭೮ ರಿಂದ ೨೩-೩-೧೯೭೮ರವರೆಗೆ ಪ್ರವಾಸ ನಿರ್ಧಾರಿತ ವಾಯಿತು. ೧೧-೩-೧೯೭೮ ರಂದು ಶೃಂಗೇರಿಯಿಂದ ಹೊರಟು ಸಂಜೆಗೆ ಶಿವಮೊಗ್ಗೆಗೆ ಸೇರಿದರು. ೧೨-೩-೧೯೭೮ ರಂದು ಶಿವಮೊಗ್ಗೆಯಿಂದ ಹೊರಟು ಬನವಾಸಿಯನ್ನು ತಲುಪಿದರು. ೧೩-೩-೧೯೭೮ ರಂದು ಪ್ರಾತಃ ಬನವಾಸಿಯ ಶ್ರೀ ಮಧುಕರೇಶ್ವರ ದೇವಸ್ಥಾನದಲ್ಲೂ, ಶ್ರೀ ನರಸಿಂಹಸ್ವಾಮಿ ಸನ್ನಿಧಿಯಲ್ಲೂ ಸ್ವಯಂ ವಿಶೇಷ ಪೂಜೆಗಳನ್ನು ನೆರವೇರಿಸಿ, ಅಂದು ಸಂಜೆ ಅಲ್ಲಿಂದ ಹೊರಟು ಯಲ್ಲಾಪುರಕ್ಕೆ ದಯಮಾಡಿಸಿದರು. ಯಲ್ಲಾಪುರದಿಂದ ೧೪-೩-೧೯೭೮ರಂದು ಹೊರಟು ಅಂಕೋಲೆಯನ್ನು ತಲುಪಿ ೧೫-೩-೧೯೭೮ ರಂದು ಅಲ್ಲಿಂದ ಹೊರಟು ಕಾರವಾರವನ್ನು ತಲುಪಿದರು. ಕಾರವಾರದಲ್ಲಿ ಎಲ್ಲಾ ದೇವಾಲಯಗಳಿಗೂ (ಸುಮಾರು ಎಂಟು) ೧೬-೩-೧೯೭೮ ರಂದು ಸಂದರ್ಶನವಿತ್ತರು. ೧೭ನೆಯ ತಾರೀಖಿನಂದು ಶ್ರೀ ರಾಮಚಂದ್ರ ಶೆಟ್ಟರ ನೇತೃತ್ವದಲ್ಲಿ ಶಿಷ್ಯಜನರು ಕಟ್ಟಿಸಿದ್ದ ನೂತನ ಶೃಂಗೇರಿ ಶಂಕರ ಮಠದಲ್ಲಿ ಶ್ರೀ ಶಾರದಾ, ಶ್ರೀ ಶಂಕರ ಮತ್ತು ಶ್ರೀ ಗಣಪತಿಯ ಪ್ರತಿಷ್ಠಾಪನೆಯನ್ನು ಮಾಡಿ, ಅಲ್ಲಿನ ಜನಗಳನ್ನು ಅನುಗ್ರಹಿಸಿದರು. ಮಾರನೆಯ ದಿನ ಗೋಕರ್ಣಕ್ಕೆ ದಯಮಾಡಿಸಿದರು. ೨೦ನೇ ತಾರೀಖಿನಂದು ಪ್ರಾತಃ ಸಮುದ್ರ ಸ್ನಾನ ಮಾಡಿ, ಶ್ರೀ ಗಣಪತಿಯ ಸನ್ನಿಧಿಯಲ್ಲೂ, ಶ್ರೀ ಮಹಾಬಲೇಶ್ವರ ಸನ್ನಿಧಿಯಲ್ಲೂ ಸ್ವಹಸ್ತಗಳಿಂದ ಅರ್ಚಿಸಿದರು. ಗೋಕರ್ಣದಲ್ಲಿ ಇರುವ ಪುರಾತನವಾದ ಶಂಕರ ಮಠದ ಪುನರ್ನಿರ್ಮಾಣಕ್ಕೂ ಶಿಲಾನ್ಯಾಸವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ನೆರವೇರಿಸಿದರು. ಅಂದು ಸಂಜೆ ಗಂಧದ ಬೀಡು ಸಾಗರಕ್ಕೂ, ೨೧-೩-೧೯೭೪ ರಂದು ಸಂಜೆಗೆ ಶಿವಮೊಗ್ಗೆಗೂ ಶ್ರೀಶ್ರೀಗಳು ದಯಮಾಡಿಸಿದರು. ೨೨ನೇ ದಿನಾಂಕ ಸಂಜೆ ನೆರೆದಿದ್ದ ಸಭೆಯಲ್ಲಿ ಕರ್ನಾಟಕ ರಾಜ್ಯದ ಯುವಜನ ಮತ್ತು ವಾರ್ತಾ ಸಚಿವರಾದ ಶ್ರೀ ಕೆ ಎಚ್. ಶ್ರೀನಿವಾಸ್ ಅವರು ಶ್ರೀ ಶ್ರೀಗಳವರಿಗೆ ಶಿವಮೊಗ್ಗೆಯ ಜನತೆಯ ಪರವಾಗಿ ಶ್ರೀ ದಕ್ಷಿಣಾಮೂರ್ತಿಯ ಬೃಹತ್ ಚಿತ್ರವನ್ನು ಸಮರ್ಪಿಸಿದರು. ಕರ್ನಾಟಕ ಬ್ಯಾಂಕಿನ ಜನರಲ್ ಮೇನೇಜರ್ ಶ್ರೀ ಕೆ.ಎಸ್. ಭಾಸ್ಕರಯವರು ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿಯವರು ರಚಿಸಿರುವ "ಗುರುದೇವ ವಿದ್ಯಾತೀರ್ಥ" ಪುಸ್ತಕದ ಬಿಡುಗಡೆ ಮಾಡಿದರು. ಅಂದು ಸಂಜೆ ಶ್ರೀಶ್ರೀಗಳವರ ಅನುಗ್ರಹ ಭಾಷಣ ಚೇತೋಹಾರಿಯೂ, ಉದ್ಬೋಧಕವೂ ಆಗಿದ್ದು ಅಪರಿಮಿತ ಸಂಖ್ಯೆಯಲ್ಲಿ ನೆರೆದಿದ್ದ ಜನವೃಂದ ನಿಬ್ಬೆರಗಿನಿಂದ ಆಲೈಸಿದರು. ೨೩-೩-೧೯೭೪ರಂದು ಸಂಜೆ ಶ್ರೀಶ್ರೀಗಳವರು ಶೃಂಗೇರಿಗೆ ಹಿಂದಿರುಗಿದರು.

೧೩-೪-೧೯೭೪ ಚೈತ್ರ ಶುದ್ಧ ಷಷ್ಠಿ ಶ್ರೀಶ್ರೀ ಜಗದ್ಗುರು ಮಹಾಸನ್ನಿಧಾನದವರ ಕರಕಮಲ ಸಂಜಾತರಾದ ಶ್ರೀ ಭಾರತೀ ತೀರ್ಥ ಸನ್ನಿಧಾನದವರ ವರ್ಧಂತ್ಯುತ್ಸವದ ದಿನ. ಶೃಂಗೇರಿಯಲ್ಲಿ ಪ್ರತಿವರ್ಷವೂ ನಡೆಯುವ ಶ್ರೀರಾಮ ವಸಂತ ನವರಾತ್ರಿಯ ಕಾರ್ಯಕ್ರಮಗಳ ಜೊತೆಗೆ ಇಂದು ವಿಶೇಷ ಕಾರ್ಯಕ್ರಮ. "ಶೃಂಗೇರಿ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ವಿದ್ಯಾ ನಿಧಿ"ಯ (Sri Abhinava Vidyteertha Educational Trust) ಆಶ್ರಯದಲ್ಲಿ ಪ್ರಕಟವಾಗುವ ಇಂಗ್ಲಿಷ್ ದ್ವೈಮಾಸಿಕ '**ತತ್ತ್ವಾಲೋಕ**'ದ ಪ್ರಥಮ ಸಂಚಿಕೆಯ ಬಿಡುಗಡೆ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರು ಬಿಡುಗಡೆ ಮಾಡಿ, ಈ ರೀತಿಯ ಪತ್ರಿಕೆಗಳ ಆವಶ್ಯಕತೆಯನ್ನು ಒತ್ತಿ ಹೇಳಿದರು. ಸಮಾರಂಭದಲ್ಲಿ ಕರ್ನಾಟಕದ ಆರೋಗ್ಯ ಮಂತ್ರಿ ಶ್ರೀ ಮಾರ್ಗದ ಮಲ್ಲಪ್ಪ, ವಾರ್ತಾ ಮತ್ತು ಯುವಜನ ಸೇವಾ ಮಂತ್ರಿ ಶ್ರೀ ಕೆ. ಎಚ್. ಶ್ರೀನಿವಾಸ್ ಅವರೂ ಉಪಸ್ಥಿತರಾಗಿದ್ದರು.

ತುಂಗಾ ತಟದಲ್ಲಿ ನೂತನವಾಗಿ ನಿರ್ಮಿಸಿದ್ದ ಆಲಯದಲ್ಲಿ ಶ್ರೀ ಬಾಲಸುಬ್ರಹ್ಮಣ್ಯಸ್ವಾಮಿಯವರ ಪ್ರತಿಷ್ಠೆಯನ್ನು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

೧೭-೪-೧೯೭೪ರಂದು ನೆರವೇರಿಸಿದರು. ಆ ಸಮಾರಂಭಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತಜನರು ಸೇರಿದ್ದರು. ಇದೇ ಸಂದರ್ಭದಲ್ಲಿ ಕಲ್ಕತ್ತೆಯಲ್ಲಿ ಇರುವ, ಶ್ರೀಮಠದ ಅವಿಚ್ಛಿನ್ನಭಕ್ತರಾದ, ಅನೇಕ ವಿಧಗಳಲ್ಲಿ ಶ್ರೀಮಠಕ್ಕೆ ಸೇವೆ ಸಲ್ಲಿಸಿರುವ ಶ್ರೀ ಪಿ. ಸುಬ್ರಹ್ಮಣ್ಯಂ ಅವರಿಗೆ 'ಗುರುಭಕ್ತಮಣಿ' ಎಂಬ ಉಪಾಧಿಯನ್ನು ಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರು ಅನುಗ್ರಹಿಸಿದರು.

ದಿನಾಂಕ ೨-೬-೧೯೭೪ ಶುಕ್ರವಾರದಂದು ಶ್ರೀ ಶಾರದಾ ದೇವಾಲಯದ ಹೆಬ್ಬಾಗಿಲಿಗೆ ಹಿತ್ತಾಳೆಯ ತಗಡನ್ನು ಹೊದ್ದಿಸಿದ ಆಂಧ್ರಪ್ರದೇಶದ ಮಂತ್ರಿಗಳು ಶ್ರೀ ಕೆ. ಬಿ. ನರಸಪ್ಪನವರು ಶ್ರೀ ಶ್ರೀ ಉಭಯ ಸನ್ನಿಧಾನದವರ ಸಮ್ಮುಖದಲ್ಲಿ ದ್ವಾರವನ್ನು ಉದ್ಘಾಟಿಸಿದರು.

ಜೂನ್ ೧೬, ೧೯೭೪ರಂದು ಕರ್ನಾಟಕದ ರಾಜ್ಯಪಾಲ ಶ್ರೀ ಗೋವಿಂದ ನಾರಾಯಣರ ಉಪಸ್ಥಿತಿಯಲ್ಲಿ, ತಿರುವನಂತಪುರದ ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದ, ಇತ್ತೀಚೆಗೆ ದಿವಂಗತರಾದ, ಶ್ರೀಮಠದ ಪ್ರಮುಖ ಶಿಷ್ಯರಾದ ಶ್ರೀ ಎಸ್. ವೈದ್ಯನಾಥ ಅಯ್ಯರ್ ಅವರು ಇತರ ಶಿಷ್ಯರೊಡಗೂಡಿ ಸಿದ್ಧಮಾಡಿಸಿದ ಶ್ರೀ ಶಾರದಾ ತ್ರಿಶತಿ ನಾಮ (ಸುವರ್ಣ) ಮಾಲೆಯನ್ನು ಶ್ರೀಯುತರ ಮಗ ಶ್ರೀಸುಬ್ರಹ್ಮಣ್ಯಂ ಅವರು ಶ್ರೀಶಾರದಾಂಬೆಗೆ ಧಾರಣೆಮಾಡಲು ಶ್ರೀಶ್ರೀಗಳವರಲ್ಲಿ ಸಮರ್ಪಿಸಿದರು. ಅದನ್ನ ಅಸಂಖ್ಯ ಜನಸಮ್ಮರ್ದದ ಎದುರಿಗೆ ಶ್ರೀ ಶಾರದಾಂಬೆಗೆ ಧಾರಣೆಮಾಡಿಸಲಾಯಿತು.

ಹೀಗೆ, ಶ್ರೀ ಮಹಾಸನ್ನಿಧಾನ ಶ್ರೀಮಜ್ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು, ಶ್ರೀ ಸನ್ನಿಧಾನ ಶ್ರೀ ಭಾರತೀ ತೀರ್ಥ ಸ್ವಾಮಿಗಳೊಡನೆ ಆರನೆಯ ಯಾತ್ರೆಯನ್ನು ಸಮಗ್ರವಾಗಿ ನೆರವೇರಿಸಿ, ಈಗ ಶೃಂಗೇರಿ ಶ್ರೀಕ್ಷೇತ್ರದಲ್ಲಿ ಲೋಕಾನುಗ್ರಹಾರ್ಥವಾಗಿ ಶ್ರೀ ಶಾರದಾ ಚಂದ್ರಮೌಳೀಶ್ವರರ ಆರಾಧನೆ ಮಾಡುತ್ತ ತಪೋನಿರತರಾಗಿ ವಿರಾಜಿಸುತ್ತಿದ್ದಾರೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri